ಬಾಗಲಕೋಟಿ ಜಿಲ್ಲೆಯ ದೇಸಗತಿಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ






ಸಂಶೋಧಕರು
ಸಂಗಪ್ಪ. ಚ. ಕಲ್ಯಾಣಿ



ಮಾರ್ಗದರ್ಶಕರು
ಡಾ.ವಿ.ಎಸ್.ಬಡಿಗೇರ
ಪ್ರವಾಚಕರು
ಹಸ್ತಪ್ರತಿಶಾಸ್ತ್ರ ವಿಭಾಗ



ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩ ೨೭೬
೨೦೦೬



ಬಾಗಲಕೋಟೆ ಜಿಲ್ಲೆಯ ದೇಸಗತಿಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ





ಸಂಶೋಧಕರು
ಸಂಗಪ್ಪ. ಚ. ಕಲ್ಯಾಣಿ



ಮಾರ್ಗದರ್ಶಕರು
ಡಾ.ವಿ.ಎಸ್.ಬಡಿಗೇರ
ಪ್ರವಾಚಕರು
ಹಸ್ತಪ್ರತಿಶಾಸ್ತ್ರ ವಿಭಾಗ





ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩ ೨೭೬
೨೦೦೬

ಮಾರ್ಗದರ್ಶಕರ ಪ್ರಮಾಣ ಪತ್ರ

ಸಂಗಪ್ಪ ಚ.ಕಲ್ಯಾಣಿ ಅವರು ಬಾಗಲಕೋಟಿ ಜಿಲ್ಲೆಯ ದೇಸಗತಿಗಳು ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ವೀರೇಶ ಬಡಿಗೇರ
ಮಾರ್ಗದರ್ಶಕರು ಮತ್ತು ಪ್ರವಾಚಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ :
ಸ್ಥಳ : ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

ಬಾಗಲಕೋಟಿ ಜಿಲ್ಲೆಯ ದೇಸಗತಿಗಳು ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ.ಪದವಿಗಾಗಿ ಡಾ.ವೀರೇಶ ಬಡಿಗೇರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ :
ಸ್ಥಳ : ವಿದ್ಯಾರಣ್ಯ

ಸಂಗಪ್ಪ ಚ.ಕಲ್ಯಾಣಿ
ಸಂಶೋಧಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

8

ಸೃಜನಶೀಲರನ್ನು ನೆನೆಯುವೆನು

ನಾನು ಸಂಶೋದನೆ ಮಾಡಲು ಬಂದಾಗ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಅಧ್ಯಯನಕ್ಕೆ ಅನುವು ಮಾಡಿಕೊಟ್ಟ ಹಿಂದಿನ ಕುಲಪತಿಗಳಾದ ಡಾ.ಎಚ್.ಜೆ.ಲಕ್ಕಪ್ಪಗೌಡರಿಗೂ ಇಂದಿನ ಕುಲಪತಿಗಳಾದ ಡಾ.ಬಿ.ಎ.ವಿವೇಕ ರೈ ಹಾಗೂ ಕುಲಸಚಿವರಾದ ಕರೀಗೌಡ ಬೀಚನಹಳ್ಳಿ, ಅಧ್ಯಯನಾಂಗದ ನಿರ್ದೇಶಕರಾದ ಡಾ.ಟಿ.ಆರ್.ಚಂದ್ರಶೇಖರ ಅವರಿಗೂ,

ಶಿಕ್ಷಣವೆಂಬುದು ನಿಂತ ನೀರಲ್ಲ; ಅದು ನಿರಂತರ ಹರಿದು ಮುಂದೆ ಸಾಗುವ ಜ್ಞಾನದ ಆಗರ. ಶಿಕ್ಷಕ ವೃತ್ತಿಯನ್ನು ನಾನು ಅಳವಡಿಸಿಕೊಂಡಿದ್ದರೂ ಓದು ಪ್ರವೃತ್ತಿಯಾಗಿ ಬೆಳೆದು ಬಂದಿತ್ತು. ಹಾಗಾಗಿ ವೃತ್ತಿ ಜೊತೆಗೆ ಬಾಹ್ಯವಾಗಿ ಎಂ.ಎ.ಪದವಿಯನ್ನು ~~ಬಾಹ್ಯವಾಗಿ~~ ಅಭ್ಯಾಸ ಮಾಡಿದೆನು. ಮುಧೋಳ ಘೋರ್ಪಡೆ ಸ್ಥಾನಿಕ ಸಂಸ್ಥಾನಿಕರ ಮನೆತನದ ಮೇಲೆ ಏನಾದರೊಂದು ಕೆಲಸ ಮಾಡಬೇಕೆಂಬುದು ಮನಸ್ಸಿನಲ್ಲಿ ಚಿಗುರೊಡೆಯುತ್ತಿತ್ತು. ಕೆಲವು ಬಿಡಿ ಲೇಖನಗಳು ಕೂಡ ಹೊರಬಂದವು.

ಎರಡನೆಯದಾಗಿ ನಾವೂ ಮೂಲತಃ ಕಲಬುರ್ಗಿ ಕಲ್ಯಾಣದ ಗೌಡ ಕುಲಗಳು. ಅಲ್ಲಿ ಲಡಾಯಿ ಮಾಡಿ ಆಸ್ತಿ-ಪಾಸ್ತಿಯನ್ನು ಮಠ ಮಂದಿರಗಳಿಗೆ ದಾನ ಮಾಡಿ ಈ ಭಾಗದ ಕಡೆಗೆ ಬಂದರೆಂದು ಹೆಳವರಿಂದ ತಿಳಿದುಬರುತ್ತದೆ. ಈ ಬಗ್ಗೆ ವರ್ಷಕ್ಕೊಮ್ಮೆ ಹೆಳವನು ಬಂದಾಗ ಸ್ಥಾನಿಕ ವಡೆಯರೆಂದು, ಬಹುದೊಡ್ಡ ಗೌರವ ಕುರಿತು ಹೇಳಿಹೋಗುತ್ತಿದುದರಿಂದ ಅಲ್ಲಿನ ಹೆಚ್ಚಿನ ಮಾಹಿತಿಗಾಗಿ ತಲೆ ಕೆಡಿಸಿಕೊಳ್ಳುವ ಪ್ರಮೇಯವು ವಾರಂತುವಾರ ಕಾಡುತ್ತಿತ್ತು. ಇವೆಲ್ಲ ಅಂಶಗಳನ್ನು ಕ್ರೊಢೀಕರಿಸಿಕೊಂಡು ನಾಡಿನ ಖ್ಯಾತ ವಿದ್ವಾಂಸರಲ್ಲಿ ಒಬ್ಬರಾದ ಡಾ.ಬಿ.ಆರ್.ಹಿರೇಮಠರಲ್ಲಿ ವಿವರಿಸಿದೆನು. ಅವರು ಕೂಡ ಸಲಹೆ ಸೂಚನೆ ನೀಡಿದ್ದಲ್ಲದೇ ಸಮೀಪದ ಗಲಗಲಿ, ಯಡಹಳ್ಳಿ, ಪರಗಣ ದೇಸಗತಿ ಕುರಿತು ಪ್ರಸ್ತಾಪಿಸಿದರು. ಕೆಲವು ವೈಯಕ್ತಿಕ ತೊಡಕಿನಿಂದ ಅದು ತಪ್ಪಿ ಹೋಯಿತು.

ಎರಡನೆಯ ಬಾರಿಗೆ ಡಾ.ಬಿ.ಆರ್.ಹಿರೇಮಠ ಅವರೇ ಹಂಪಿ ಕನ್ನಡ ವಿಶ್ವವಿದ್ಯಾಲಯದತ್ತ ಬೆರಳು ಮಾಡಿ ತೋರಿಸಿದರು. ಅದು ಡಾ.ವೀರೇಶ ಬಡಿಗೇರ ಅವರನ್ನು. ಇವರನ್ನು ಭೇಟಿಯಾಗಲು ಬಂದಾಗ ನನಗೆ ಎಲ್ಲಿಲ್ಲದ ಹರ್ಷವಾಯಿತು. ಅದು ಅಷ್ಟೇ ಕುಸಿಯಿತು. ಏಕೆಂದರೆ ಅವರ ಮಾತಿನಲ್ಲಿರುವ ಗಂಭೀರತೆಯಿತ್ತು. ಅಷ್ಟೇ ಕಠೋರವು ಇತ್ತು.

ಇದು ಕಾಗಿ, ಗುಬ್ಬಿ ಕತೆ ಅಲ್ಲ; ಒಂದು ಸಂಕಥನವು ಇಡೀ ನಾಡಿನ ತುಂಬೆಲ್ಲ ಗಮನ ಸೆಳೆಯುವುದಾಗಿದೆ. ನಿಮ್ಮಲ್ಲಿ ಅಂಥ ಎದೆಗಾರಿಕೆ ಇದ್ದರೆ ಬನ್ನಿ; ಇಲ್ಲದಿದ್ದರೆ ಬರಬೇಡಿ ಎಂದು ನಿಷ್ಠುರವಾಗಿ ಹೇಳಿಬಿಟ್ಟರು.

ಇವರ ನಿಷ್ಠುರ ನುಡಿ ನನಗೆ ಸ್ಫೂರ್ತಿ ತುಂಬಿ ಸವಾಲಾಗಿ ಸ್ವೀಕರಿಸುವಂತೆ ಮಾಡಿತು. ಎರಡು, ಮೂರು ವಿಷಯ ಚರ್ಚಿಸುತ್ತ ನಮ್ಮ ಭಾಗದ ದೇಸಗತಿ ಸುಳಿವು ನೀಡಿದರು. ಕೆಲವು ದೇಸಗತಿ ಮನೆತನಗಳಿಗೆ ಭೇಟಿಕೊಟ್ಟು ವಿಷಯ ಸಂಗ್ರಹಿಸಿದೆನು.

ದೇಸಗತಿ ಮನೆತನಗಳ ಬಗ್ಗೆ ಹದಗೊಂಡ ಆಲೋಚನೆಗಳೊಂದಿಗೆ ಪಿಎಚ್.ಡಿ.ಪದವಿಗೆ ನೋಂದಾಯಿಸಿಕೊಂಡು ಕ್ಷೇತ್ರಕಾರ್ಯ ಕೈಗೊಂಡು ಆಕರಗಳನ್ನು ಸಂಗ್ರಹಿಸಲಾಯಿತು. ಅಲ್ಲಿ ಸಿಕ್ಕಂತವುಗಳೆಂದರೆ ಪರ್ಶಿಯನ್, ಮೋಡಿ ದಾಖಲೆಗಳು ಅಧ್ಯಯನಕ್ಕೆ ಬೇಕಾದ ವಿಷಯವನ್ನು ಹೊಂದಿದ್ದವು. ಅವೆಲ್ಲವುಗಳನ್ನು ತಂದು ಆಗಾಗ ತೋರಿಸುತ್ತಿದ್ದೆನು. ನನ್ನ ಆಸಕ್ತಿಯನ್ನು ಮೆಚ್ಚಿ ಸೂಕ್ತ ಸಲಹೆಗಳನ್ನು ನೀಡಿ, ತಿದ್ದಿ, ತೀಡಿ ಕೆಲವು ಸೈದ್ಧಾಂತಿಕ ಚರ್ಚೆಗಳನ್ನು ಪ್ರೀತಿಯಿಂದ ಸ್ವೀಕರಿಸಿದರು. ಕೆಲವು ಸಲ ನನ್ನ ಪ್ರತಿಕ್ರಿಯೇ ಬರದೇ ಇದ್ದಾಗ ತಾಳ್ಮೆ ತಪ್ಪಿಸಿದ್ದರೂ ಕೂಡ ಸಿಟ್ಟಿನಿಂದಲೇ ನನ್ನನ್ನು ಹುರುದುಂಬಿಸಿ ಸಂತೋಷದಿಂದ ಮಾರ್ಗದರ್ಶನ ಮಾಡಿದವರು ಡಾ.ವೀರೇಶ ಬಡಿಗೇರ ಅವರು. ಅವರನ್ನು ಡಾ.ಬಿ.ಆರ್.ಹಿರೇಮಠ ಅವರಿಗೂ,

ಇಲ್ಲಿಯವರೆಗೆ ಅಲಕ್ಷಿತವಾದ ಈ ದೇಸಗತಿ ಮನೆತನಗಳು ಅನೇಕ ಓರೆ ಕೋರೆಗಳನ್ನು ಹೊಂದಿದ್ದರೂ ಅಂದು ರಾಜ ಸಂಸ್ಕೃತಿಯನ್ನು ಅಳವಡಿಸಿಕೊಂಡು ಬಹುದೊಡ್ಡ ವಾರಸುದಾರರಾಗಿ ಮೆರೆದವರು. ಅವರ ಕುರಿತಾಗಿ ಈವರೆಗೂ ಸಮಗ್ರವಾಗಿ ಅಧ್ಯಯನವಾಗದೇ ಉಳಿದಿದೆ ಎಂದರು. ಅದಕ್ಕೆ ಪ್ರತಿಕ್ರಿಯಿಸಿದಾಗ ವೀರಶೈವ ಹಾಗೂ ವೀರಶೈವೇತರ ಎಂದು ಗುರ್ತಿಸದೇ ಸಮಗ್ರವಾಗಿ ಈ ಮನೆತನಗಳ ಚರಿತ್ರೆಯನ್ನು ಕಟ್ಟಿಕೊಡಬೇಕು. ವ್ಯಾಪ್ತಿ ಹೆಚ್ಚಾದರೂ ಕೂಡ ಒಂದೆಡೆ ಸಂಗ್ರಹವಾಗುವುದು. ಇದೊಂದು ದೊಡ್ಡ ಕೆಲಸವನ್ನು ಸಂಪೂರ್ಣ ಮಾಡಿ ಮುಗಿಸೆಂದು ಶುಭ ಹಾರೈಸಿದವರೇ ನಾಡಿನ ಖ್ಯಾತ ಸಂಶೋಧಕರಾದ ಡಾ.ಎಂ.ಎಂ.ಕಲಬುರ್ಗಿ ಅವರಿಗೂ,

ಶೈಕ್ಷಣಿಕ ರಂಗದಲ್ಲಿ ವಿಶೇಷ ಪ್ರಚೋದನೆ ನೀಡುತ್ತಿರುವ ಹೊಸ ಹೊಸ ಆಯಾಮಗಳನ್ನು ಹುಟ್ಟಿಸಿ ಹೊಸ ಚೈತನ್ಯ ತುಂಬುತ್ತಿರುವ ನನ್ನ ನೆಚ್ಚಿನ ಉಪನಿರ್ದೇಶಕರಾದ ಎ.ಎ.ಪಾರ್ಶಿ, ವೈ.ಎಚ್.ಕಾತರಕಿ, ಕೆ.ಎಲ್.ಪೂಜಾರ, ಎ.ಎಂ.ಮಡಿವಾಳರ, ಮಿತ್ರರಾದ ಎಂ.ಜಿ.ದಾಸರ, ಸಾಹಿತಿ ಆನಂದ ಝುಂಜರವಾಡ, ಡಾ.ಬಿ.ಎಫ್.ಪಾಟೀಲ, ಡಾ.ಶಂಕರ ಮಾದರ, ಕತೆಗಾರ ಅಬ್ಬಾಸ ಮೇಲಿನಮನಿ; ಸುದೀರ ಕೋಲ್ಹಾರ ಕೊಳ್ಳಪ್ಪನವರ, ಡಾ.ವ್ಹಿ.ಎ.ಬೆನಕನಾಳ, ಶಂಕರ ಬಸುಪಟ್ಟದ ಮುಂತಾದವರು ನನ್ನ ಬೆನ್ನು ತಟ್ಟಿ ಬರೆಯುವ ಆಸಕ್ತಿಯನ್ನು ಹೆಚ್ಚಿಸಿದ್ದಾರೆ ಇವರುಗಳಿಗೂ

ಕೆಲವು ವಿದ್ವಾಂಸರ ಜೊತೆಗೆ ವಿಶೇಷ ಚರ್ಚೆಗೆ ಹೋದಾಗ ಪ್ರೀತಿಯಿಂದಲೇ ಸೂಕ್ತ ಸಲಹೆಗಳನ್ನು ನೀಡಿದ್ದಾರೆ. ಡಾ.ಈರಣ್ಣ ಪತ್ತಾರ, ಪ್ರೊ.ಲಕ್ಷ್ಮಣ ತೆಲಗಾವಿ, ಡಾ.ಕೆ.ವಿ.ನಾರಾಯಣ, ಡಾ.ರಹಮತ್ ತರೀಕೆರೆ, ನಮ್ಮ ಹಸ್ತಪ್ರತಿಶಾಸ್ತ್ರದ ಅಧ್ಯಾಪಕರುಗಳಾದ ಪ್ರೊ.ಎ.ವಿ.ನಾವಡ, ಡಾ.ಎಫ್.ಟಿ.ಹಳ್ಳಿಕೇರಿ (ಮುಖ್ಯಸ್ಥರು), ಡಾ.ರವೀಂದ್ರನಾಥ, ಡಾ.ಎಸ್.ಎಸ್.ಅಂಗಡಿ, ಡಾ.ಚನ್ನವೀರಪ್ಪ ಇವರೆಲ್ಲರೂ ನನ್ನ ಅರಿವನ್ನು ಹೆಚ್ಚಿಸಿದ್ದಾರೆ ಇವರಿಗೂ,

ಡಾ.ಮಲ್ಲಿಕಾ ಘಂಟಿ, ಡಾ.ಪಿ.ಎಂ.ಹುಗ್ಗಿ, ಡಾ.ಕೃಷ್ಣಕೋಲ್ಹಾರ ಕುಲಕರ್ಣಿ, ಪ್ರೊ.ಜಿ.ಜಿ.ಕೋಟಿ, ಪ್ರೊ.ಕೊಕಟನೂರ ಹಾಗೂ ದೇಸಗತಿ ಮನೆತನಗಳ ಹಿರಿಯ ಜೀವಗಳಾದ ಸಿ.ಎಸ್.ದೇಸಾಯಿ,

ಎಂ.ಆರ್.ದೇಸಾಯಿ, ವಾಸಣ್ಣ ದೇಸಾಯಿ, ಆರ್.ಎಂ.ದೇಸಾಯಿ, ಬಿ.ಕೆ.ದೇಸಾಯಿ, ಸಂಗಪ್ಪ ದೇಸಾಯಿ, ಶಿರಗುಪ್ಪಿ ಜಿ.ಎಸ್.ದೇಸಾಯಿ, ಬಿ.ಎಚ್.ದೇಸಾಯಿ, ಬಿ.ಎ.ದೇಸಾಯಿ, ಶ್ರೀಮತಿ ಸರೋಜಮ್ಮ, ಶ್ರೀಮತಿ ಗಂಗಮ್ಮ, ಶ್ರೀಮತಿ ಲಕ್ಷ್ಮೀಬಾಯಿ ಹೊಸೂರ, ತೇರದಾಳ ನಾಡಗೌಡ, ವಿಧಾನಸಭಾ ಸದಸ್ಯರಾದ ಎಂ.ಪಿ.ನಾಡಗೌಡ, ಎಸ್.ಆರ್.ಪಾಟೀಲ ಅವರುಗಳಿಗೂ,

ಮರಾಠಿ ಮೋಡಿ ದಾಖಲೆಗಳನ್ನು ಒದಗಿಸಿಕೊಟ್ಟ ಭಾರತ ಇತಿಹಾಸ ಮಂಡಳಿ ಪುಣಾ, ಹಾಗೇ ಮೋಡಿ ದಾಖಲೆಗಳನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟ ತೊಂಬತ್ತರ ಪ್ರಾಯದ ಹಿರಿಯ ಜೀವ ಲಕ್ಷ್ಮಪ್ಪ ಡಂಗಿ ಕಾಕಾರವರಿಗೂ ಅವರ ಮನೆಯ ಎಲ್ಲ ಬಳಗಕ್ಕೂ,

ನನ್ನ ಶಿಕ್ಷಣ ಸಂಸ್ಥೆಯ ನೇತಾರರಾದ ದಿವಂಗತ ಎಸ್.ಬಿ.ಹಿರೇಮಠ, ಶ್ರೀಮತಿ ನಾಗಮ್ಮ ಹಿರೇಮಠ, ಬಸವರಾಜ ಹಿರೇಮಠ, ಆ.ಅಧ್ಯಕ್ಷರಾದ ಶಿವಾನಂದ ಎಂ.ಕತ್ತಿ, ಶಿವಕುಮಾರ ಮಲಘಾನ, ಎಲ್.ಕೆ. ಬಳಗಾನೂರ, ರಾಜೇಂದ್ರ ಶಹಾ, ಬಿ.ಸಿ.ಹಿರೇಮಠ, ಡಿ.ಆರ್.ರಾಮತೀರ್ಥ ಹಾಗೂ ಶ್ರೀಕಾಂತ ಕೊಲ್ಹಾರ ಇವರೆಲ್ಲರಿಗೂ ಕೃತಜ್ಞತೆಗಳು.

ನನ್ನ ಸಹದ್ಯೋಗಿಗಳಾದ ಅಭಿಮಾನಿ ಗೆಳೆಯರಾದ ಎನ್.ಎಸ್.ಡಂಬಳ, ವ್ಹಿ.ಪಿ.ಹಿರೇಮಠ, ಆಯ್.ಎಂ.ತಂಬಾಕದ, ಬಿ.ಎಸ್.ಕಳಸಗೊಂಡ, ಕೆ.ಆರ್.ಭಜಂತ್ರಿ, ಎಸ್.ಎ.ನಡಕಟ್ಟಿ ಇತರರಿಗೂ,

ಅಲಕ್ಷಿತ ಮನೆತನಗಳ ಕುರಿತು ಸಂಪೂರ್ಣವಾಗಿ ತೊಡಗಿಸಿಕೊಂಡಾಗ ನನ್ನ ಕುಟುಂಬವನ್ನೇ ಅಲಕ್ಷಿತವನ್ನಾಗಿ ಮಾಡಿ ಬಿಟ್ಟಿದ್ದಾಗಿತ್ತು. ಹೆಂಡರು, ಮಕ್ಕಳು, ಬಂಧುಗಳು ಕೂಡ ಇದರಿಂದ ಸಾಕಷ್ಟು ತೊಂದರೆ ಪಟ್ಟುಕೊಂಡರು. ಆದರೂ ಕೂಡ ನನ್ನ ಸತಿಯಾದ ಶ್ರೀಮತಿ ಕಾಳಮ್ಮ ಕಲ್ಯಾಣಿ ತಾಳ್ಮೆ ತಂದುಕೊಂಡು ಶುಭ ಹಾರೈಸಿದಳು. ಮಕ್ಕಳಾದ ತ್ರಿವೇಣಿ, ಭಾರತಿ, ಕೆ.ಎಸ್.ನೆಹರು(ವಿನಾಯಕ) ಸಹೋದರ ಬಸವರಾಜ, ಶ್ರೀಮತಿ ಸಾವಿತ್ರಿ ಬಸವರಾಜ, ಚೇತನ, ಮುದ್ದುಮರಿ ಗುರುಶ್ರೀ, ತಾಯಿ ಸ್ವರೂಪದಂತಿರುವ ಅಕ್ಕ ದಾನಮ್ಮ, ಸಂಗನಬಸಪ್ಪ ಮಾಮಾ ಇವರೆಲ್ಲರಿಗೂ ವಿಶೇಷ ಕೃತಜ್ಞತೆಗಳು.

ಈ ಅಧ್ಯಯನದ ವಿಶೇಷ ಸಾಧನೆಗಳೊಂದಾದ ಒಡೆದ ಮನಸ್ಸುಗಳನ್ನು ಸಂದರ್ಶನದ ಮೂಲಕ ಬೆಸೆದುಕೊಳ್ಳುವಂತೆ ಮಾಡಿದ್ದೇನೆ. ಅವರೆಲ್ಲರೂ ಏಕತ್ರದಿಂದ ಬಾಳಿ ಬದುಕಲಿ. ಪೂಜ್ಯ ಉತ್ತೂರ ಬಸಯ್ಯ ಅಜ್ಜನವರ ಆಶೀರ್ವಾದ ಸದಾ ಇರಲೆಂದು,

ತಾಳ್ಮೆಯಿಂದ ಅಕ್ಷರ ಜೋಡಣೆ ಮಾಡಿಕೊಟ್ಟ ಶ್ರೀಮತಿ ಬಿ.ರಶ್ಮಿಕೃಪಾಶಂಕರ ಮತ್ತು ಎ.ಎಂ.ಕೃಪಾಶಂಕರ ಹಾಗೂ ಕರಡು ತಿದ್ದುವಲ್ಲಿ ಸಹಕಾರ ತೋರಿದ ಹಂದ್ರಾಳ ಗವಿಸಿದ್ದಪ್ಪ, ಮಾರ್ಕಂಡೆಯ, ಚಂದ್ರಪ್ಪ, ಓಬಿಸಿ ಹಾಸ್ಟೆಲ್‌ನ ಎಲ್ಲ ಗೆಳೆಯರಿಗೂ,

ನನ್ನ ಅನಂತ ಕೃತಜ್ಞತೆಗಳು

ಮುಧೋಳ ಸಂಗಪ್ಪ ಚ.ಕಲ್ಯಾಣಿ

ದಿನಾಂಕ ೨೨.೦೨.೨೦೦೬

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವಿಧಾನ ಮತ್ತು ಆಕರ ಸಾಮಗ್ರಿ

೧.೩. ಅಧ್ಯಯನದ ವ್ಯಾಪ್ತಿ

೧.೪. ಈ ಕ್ಷೇತ್ರದಲ್ಲಿ ಇದುವರೆಗೆ ನಡೆದ ಅಧ್ಯಯನದ ಸಮೀಕ್ಷೆ

೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧. ಅಧ್ಯಯನದ ಉದ್ದೇಶ

ಜಾಗತೀಕರಣ ಮತ್ತು ದೇಶೀವಾದದ ಪ್ರಜ್ಞೆಗಳು ಬಲಗೊಳ್ಳುತ್ತಿರುವ ಕಾಲದಲ್ಲಿ ನಾವು ಬದುಕುತ್ತಿದ್ದೇವೆ. ಈ ಎರಡೂ ಪ್ರಜ್ಞೆಗಳಿಗೆ ತನ್ನದೇ ಆದ ರಾಜಕೀಯ ಹಾಗೂ ಸಾಂಸ್ಕೃತಿಕವಾದ ತಾತ್ವಿಕ ಸ್ವರೂಪಗಳಿವೆ. ಪ್ರಜಾಪ್ರಭುತ್ವದ ಕಾಲದಲ್ಲಿ ಬದುಕುತ್ತಿದ್ದರೂ ಪ್ರಭುತ್ವದ ಸೆಳಕುಗಳಿಂದ ಇನ್ನೂ ಬಿಡಿಸಿಕೊಳ್ಳಲಾಗದಿರುವ ಸ್ಥಿತಿಯಲ್ಲಿ ಬದುಕುತ್ತಿದ್ದೇವೆ. ಇಂದು ಪ್ರಭುತ್ವ ಮೇಲ್ವರ್ಗದವರ ಹಿಡಿತದಿಂದ ವಿಕೇಂದ್ರೀಕರಣದ ನೆಪದಲ್ಲಿ ತಳವರ್ಗಗಳವರೆಗೂ ಜಾರಿದರೂ ಪ್ರಭುತ್ವ ಮತ್ತು ಅದರ ಸನಾತನ ಸ್ವರೂಪದ ಸಂಗತಿಗಳು ಹಾಗೆ ಉಳಿದು ಬರುತ್ತಿವೆ. ದೇಶೀಯ ಪ್ರಜ್ಞೆ ಎನ್ನುವುದು ಇಂಥ ಧಾರೆಗಳಿಗೆ ತಾತ್ವಿಕವಾಗಿ ಪ್ರತಿಕ್ರಿಯಿಸುತ್ತದೆ. ಜನ ಸಾಮಾನ್ಯರನ್ನು ಒಳಗೊಳ್ಳದ ಮೊದಲಿನ ಧಾರೆಗಳು ಚರಿತ್ರೆಯನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ಬದಲಿಸಿಕೊಳ್ಳುತ್ತವೆ. ವಸಾಹತು ಮತ್ತು ಜಾಗತೀಕರಣಗಳು ಒಂದು ಜನವರ್ಗವನ್ನು ತುಳಿದು ಆಳುವ ರಾಜಕೀಯ ಪ್ರಭುತ್ವಗಳಾದ್ದರಿಂದ ಅವುಗಳ ತತ್ವ ನಿಲ್ಲುವುದೇ ಬಲಪ್ರಯೋಗದ ಮೇಲೆ. ದೇಶಿಪ್ರಜ್ಞೆ ಜನಮುಖಿ ಸಂವೇದನೆಯಾದ ಕಾರಣ ಅದು ಸಮಾಜ ಮುಖಿಯಾಗಿ ಪ್ರವಹಿಸುತ್ತದೆ. ವಸಾಹತುಶಾಹಿ ಮತ್ತು ಜಾಗತೀಕರಣದ ಕುಹಕಗಳು ಬೇಕಂತಲೇ ಬಿಟ್ಟುಹೋದ ಚರಿತ್ರೆಯ ವಾಸ್ತವಗಳನ್ನು ತುಂಬಿಕೊಳ್ಳಲು ಹೆಣಗುತ್ತದೆ.

ಒಂದು ಕಡೆಗೆ ಇಂಥ ವಸಾಹತುಶಾಹಿ, ಜಾಗತೀಕರಣ ಮತ್ತು ಸ್ಥಳೀಯ ಚರಿತ್ರೆ ಎನ್ನುವ ಪರಿಕಲ್ಪನೆಗಳೆ, ಸಂಸ್ಕೃತಿ ಗ್ರಹಿಕೆಯಲ್ಲಿನ ತೊಡಕುಗಳೂ ಆಗಿವೆ. ಸಮಾಜ ಮತ್ತು ಸಂಸ್ಕೃತಿಯೊಳಗಡೆ ಏರ್ಪಡುವ ಸಂಕೀರ್ಣ ಸಂಬಂಧಗಳೂ ಇದಕ್ಕೆ ಕಾರಣವಾಗಿವೆ. ಅಂದರೆ ಒಂದು ಕಡೆ ಅನ್ಯ ಪ್ರಭಾವದಿಂದ ಬಿಡಿಸಿಕೊಳ್ಳಬೇಕೆನ್ನುವ ತವಕದೊಳಗಡೆಯೇ ದೇಶೀ ಅಥವಾ ಸ್ಥಳೀಯ ಚರಿತ್ರೆ ಎನ್ನುವ ಪದ್ಧತಿಗಳಿಂದ ದೂರವಿರಬೇಕೆನ್ನುವ ಒತ್ತಾಸೆಯೂ ಇದೆ. ಈ ಸಮಸ್ಯೆ ಕೇವಲ ವಿಷಯ ವಸ್ತುಗಳಿಗೆ, ವಿಧಾನಗಳಿಗೆ ಗ್ರಹಿಕೆಗೆ ಸೀಮಿತವಾದುದಲ್ಲ. ಬದಲಿಗೆ ಅದು ನಮ್ಮ ಅಧ್ಯಯನ ಶಿಸ್ತಿನ ಸ್ವರೂಪದಲ್ಲೂ ಅಡಗಿದೆ. ಈ ಗೊಂದಲಗಳನ್ನು ಮೀರಿ ಪರ್ಯಾಯಗಳನ್ನು ಕಂಡುಕೊಳ್ಳುವುದು ಹೇಗೆಂಬುದು ನಮ್ಮ ಮುಂದಿರುವ ಸವಾಲು. ಈ ಬಗೆಯ ಅನೇಕ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಬಾಗಲಕೋಟೆ ಜಿಲ್ಲೆಯ ದೇಸಗತಿಗಳನ್ನು

ಅಧ್ಯಯನ ಮಾಡುವುದು ಈ ನಿಬಂಧದ ಪ್ರಮುಖ ಉದ್ದೇಶವಾಗಿದೆ. ಅಂದರೆ ಪ್ರಭುತ್ವದ ನೆರಳಲ್ಲಿ ರೂಪಗೊಂಡ, ಅದೇ ಕಾಲಕ್ಕೆ ಜನಹಿತಕ್ಕಾಗಿ ಹಂಬಲಿಸಿದ ದೇಸಗತಿಗಳ ಮೂಲಕ ಕನ್ನಡ ಸಂಸ್ಕೃತಿಯೊಂದರ ಅಸ್ತಿತ್ವವನ್ನು ಕಂಡುಕೊಳ್ಳುವುದು ಮತ್ತು ಸಾಂಸ್ಕೃತಿಕ ವಾಗ್ವಾದಗಳನ್ನು ಮಂಡಿಸುವುದು ಈ ಅಧ್ಯಯನದ ಪ್ರಧಾನ ಉದ್ದೇಶಗಳಲ್ಲೊಂದಾಗಿದೆ.

ಇಂದು ಸ್ಥಳೀಯ ಇತಿಹಾಸದ ಪುನರ್ ರಚನೆಗೆ ಒತ್ತು ಬೀಳುತ್ತಿದೆ. ಚರಿತ್ರೆ ಎಂದರೆ ಆಳರಸರ ವೈಭೋವೋಪೇತ, ರಂಗು ರಂಗಿನ ಜೀವನ ವಿಧಾನಗಳೆಂದೇ ಪರಿಭಾವಿಸಿದ ಕಾಲವಿತ್ತು. ಬದಲಾದ ಸಾಂಸ್ಕೃತಿಕ ಸಂದರ್ಭದಲ್ಲಿ ಸ್ಥಳೀಯ ಚರಿತ್ರೆ ಮತ್ತು ಅದರ ಉಪಯುಕ್ತ ಮತ್ತು ಉಪೇಕ್ಷಿತ ನೆಲೆಗಳಿಗೆ ಹೆಚ್ಚು ಮಹತ್ವವೂ ದೊರಕುತ್ತಿದೆ. ಹಾಗಾಗಿ ಸ್ಥಳೀಯ ಚರಿತ್ರೆ ಪುನರ್ ರಚನೆ ಮೂಲಕ ನಮಗೆ ಹೊಸಬಗೆಯ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತಿದೆ. ಇದರಿಂದಾಗಿ ಇದುವರೆಗೂ ನಮ್ಮ ಅನುಭವಕ್ಕೆ ಬಾರದೆ ಇದ್ದ ಬಹುಮುಖಿಯಾದ ಸಂವೇದನೆಯ ನೆಲೆಗಳನ್ನು ಹುಡುಕಿಕೊಂಡಂತಾಗುತ್ತದೆ. ಈ ರೀತಿಯ ಜನಮುಖಿಯಾದ ಸಾಂಸ್ಕೃತಿಕ ಚರಿತ್ರೆಯ ಪುನರ್ ರಚನೆಯಿಂದ ಈ ನೆಲದ ಮೌಲಿಕ ಸತ್ಯಗಳನ್ನು ಸಾಮಾಜಿಕ ವಿನ್ಯಾಸಗಳನ್ನು ಅರಿಯಲು ಅನುಕೂಲವಾಗುತ್ತದೆ.

ರಾಜ ಪ್ರಭುತ್ವದಲ್ಲಿ ವಿಕೇಂದ್ರೀಕರಣಗೊಂಡ ಹಲವಾರು ಆಡಳಿತದ (ವಿನ್ಯಾಸಗಳು) ಘಟಕಗಳು ಇದ್ದ ಬಗ್ಗೆ ಚರಿತ್ರೆ ತಿಳಿಸುತ್ತದೆ. ಇವು ಸ್ಥಳೀಯ ಸರಕಾರದ ಮಾದರಿಯಲ್ಲಿ ಪ್ರಜಾಹಿತದೊಂದಿಗೆ ಪ್ರಭುತ್ವದ ಆರ್ಥಿಕ ಮತ್ತು ಆಡಳಿತಾತ್ಮಕವಾದ ನಿರ್ವಹಣೆಗೆ ಪೂರಕವಾಗಿ ಕೆಲಸ ಮಾಡುತ್ತಿದ್ದವು.

ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯ ನಂತರದಲ್ಲಿ ಈ ರೀತಿ ಸ್ಥಳೀಯ ಸಾಂಸ್ಕೃತಿಕ ವಾರಸುದಾರರಾಗಿ, ಆಡಳಿತ ನಿರ್ವಹಣೆಕಾರರಾಗಿ, ಗಮನಾರ್ಹ ಸೇವೆ ಸಲ್ಲಿಸಿದವರಲ್ಲಿ ದೇಸಗತಿಗಳ ಪಾತ್ರ ತುಂಬ ಪ್ರಮುಖವಾದುದು. ಈ ದೇಸಗತಿಗಳ ಅಧ್ಯಯನವೆಂದರೆ ಸ್ಥಳೀಯ ಜನ ಬದುಕಿನ ಅಧ್ಯಯನವೆ ಆಗಿದೆ. ಸಮಾಜ ಸುಧಾರಕರಾಗಿ, ಉದಾರವಾದಿಗಳಾಗಿ, ಊಳಿಗಮಾನ್ಯ ವ್ಯವಸ್ಥೆ ನೇತಾರರಾಗಿ, ಶೋಷಿತರಾಗಿ, ವಿಲಾಸಿಗಳಾಗಿ, ಬದುಕಿ ಬಾಳಿದ ದೇಸಾಯಿಗಳು ಕುತೂಹಲಕರ ಅಧ್ಯಯನಕ್ಕೆ ಆಕರವಾಗಿದ್ದಾರೆ. ಬಾಗಲಕೋಟೆ ಜಿಲ್ಲೆಯ ಒಟ್ಟು ೨೦ ದೇಸಗತಿ ಮನೆತನಗಳನ್ನು ಕುರಿತು ಅಂತರ್ ಶಿಸ್ತೀಯ ಹಿನ್ನೆಲೆಯಲ್ಲಿ ಅಧ್ಯಯನಿಸುವುದು ಈ ನಿಬಂಧದ ಆಶಯವಾಗಿದೆ. ಇಲ್ಲಿಯವರೆಗೆ ಹಲವಾರು ಸಾಮ್ರಾಟರ ಸಾಮ್ರಾಜ್ಯದ ಬಗ್ಗೆ, ಯುದ್ಧ, ಶೌರ್ಯ, ಸಾಹಸ ಕುರಿತು ಅಧ್ಯಯನ ನಡೆದಿದೆ. ಆದರೆ ಜನರ ಸಮೀಪದ ದೇಸಗತಿಗಳ ಇತಿಹಾಸದ ಅಧ್ಯಯನವು ನಡೆದಿರುವುದಿಲ್ಲ.

ಹಿಂದಿನ ಕಾಲದಲ್ಲಿ ರಾಜ, ಪುರೋಹಿತರಿಗೆ ಒಳ್ಳೆಯ ಗೌರವವಿತ್ತು. ಇವರನ್ನು ಜನ ದೈವ ಸಮಾನರೆಂದು ಭಾವಸಿದ್ದರು. ರಾಜರು ಸಹ ಎಲ್ಲರನ್ನು ಸಮಾನ ದೃಷ್ಟಿಯಲ್ಲಿ ಕಾಣುತ್ತಿದ್ದರು

ಮಾತ್ರವಲ್ಲದೆ ಸಾಮಾಜಿಕ ಮೌಲ್ಯಗಳಿಗೆ ಕುಂದುಬರದ ರೀತಿಯಲ್ಲಿ ಆಡಳಿತ ನಿರ್ವಹಣೆ ಮಾಡುತ್ತಿದ್ದರು. ಪ್ರಜಾಕ್ಷೇಮ ಸಾಮಾಜಿಕ ಸ್ಥಿರತೆ ಮತ್ತು ರಕ್ಷಣೆ, ತಪ್ಪಿತಸ್ಥರಿಗೆ ಶಿಕ್ಷೆಗಳಂತಹ ಸಾಮಾಜಿಕ ಮೌಲ್ಯಗಳನ್ನು ಚಾಚೂ ತಪ್ಪದೆ ಪಾಲಿಸುವುದು ಇವರ ಕರ್ತವ್ಯವಾಗಿತ್ತು. ಇಂತಹ ಆದರ್ಶಮಯ ಆಡಳಿತ ಮತ್ತು ಸಾಮಾಜಿಕ ಮೌಲ್ಯಗಳನ್ನು ದೇಸಗತಿ ಮನೆತನಗಳಲ್ಲೂ ಕಾಣಬರುತ್ತದೆ. ಈ ದೇಸಗತಿ ಮನೆತನಗಳ, ಪರಸ್ಪರ ವೈವಿಧ್ಯಮಯವಾದ ಸಾಂಸ್ಕೃತಿಕ ಅಂಶಗಳು ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತವೆ. ಆ ಕಾರಣಕ್ಕಾಗಿ ಈ ಮನೆತನಗಳು ತನ್ನದೇ ಆದ ಅನನ್ಯತೆಯನ್ನು ಪಡೆದುಕೊಂಡಿವೆ. ಈ ಹಿನ್ನೆಲೆಯಲ್ಲಿ ದೇಸಗತಿಗಳ ಕುರಿತು ಅಧ್ಯಯನ ಮಾಡುವುದು ಅವಶ್ಯಕವಾಗಿದೆ.

'ದೇಸಗತಿ' ಎಂಬ ಈ ಪದ ದೇಸ್+ಸಾಯಿ ಎಂಬ ಎರಡು ಪದಗಳಿಂದ ರಚನೆಯಾಗಿದೆ. 'ದೇಸ್' ಎಂಬುದು ಸಂಸ್ಕೃತ ಪದವಾಗಿದ್ದು. 'ಸ್ಥಳೀಯ' ಎಂಬರ್ಥವನ್ನು ಸೂಚಿಸುತ್ತದೆ. ಹಾಗೆಯೇ 'ಸಾಯಿ' ಎಂಬುದು ಮರಾಠಿ ಪದವಾಗಿದ್ದು, ಒಡೆಯ, ಯಜಮಾನ, ಮಾಲೀಕ ಎಂಬರ್ಥಗಳನ್ನು ಸೂಚಿಸುತ್ತದೆ. ಅಂದರೆ ಭೂಮಿಯ ಒಡೆಯನಾದವನಿಗೆ 'ದೇಸಾಯಿ' ಎಂದು ಕರೆಯುತ್ತಿದ್ದರು ಎಂಬುದು ಇದರಿಂದ ವೇದ್ಯವಾಗುತ್ತದೆ. 'ದೇಸ್' 'ಗತಿ' ಎಂಬ ಈ ಎರಡೂ ಪದಗಳು ಸಮಾಸ ಪದವಾಗಿ ಬಳಕೆಯಾಗುವಾಗ 'ದೇಸ್' ಪದದಲ್ಲಿನ 'ಸ' ಕಾರ ದೀರ್ಘವಾಗಿ, 'ಗತಿ' ಎಂಬ ಪದದ ಆದ್ಯಕ್ಷರ ಲೋಪವಾಗಿ 'ದೇಸಾಯಿ' ಎಂಬ ರೂಪವನ್ನು ಪಡೆದಿದೆ. ನಾಡಗೌಡ, ಸರನಾಡಗೌಡ ಇವುಗಳನ್ನೂ ಸಹ ವಿಭಜಿಸಿದಾಗ ಗಾಂ+ವುಂಡ = ಗೌಂಡ ನಂತರ ಗೌಡ ಎಂಬುದಾಯಿತು. ಇದು ಮರಾಠಿ ಮೂಲದಿಂದ ಹುಟ್ಟಿದ್ದು ಎಂಬುದಾಗಿ ತಿಳಿದರೂ ಈ ಪದಗಳು ವಿಶಿಷ್ಟವಾಗಿವೆ. ರಾಜರೂ ಸಾಮ್ರಾಟರೂ ಸಾಮ್ರಾಜ್ಯ ನಡೆಯಿಸುವಾಗ ಸ್ಥಳೀಯ ಆಡಳಿತವಿತ್ತು. ಆ ದಿನಮಾನಗಳಲ್ಲಿ ಜನಸಂಖ್ಯೆ ಮಿತವಾಗಿದ್ದು, ಅಧಿಕಾರ ಮೊಟಕುಗೊಂಡಿದ್ದವು ಎನ್ನಬಹುದು.

ಕಾಲ ಗತಿಸಿದಂತೆ ಜನಸಂಖ್ಯೆ ಹೆಚ್ಚಿದಂತೆ ಸ್ಥಳೀಯ ಆಡಳಿತ ರೂವಾರಿಗಳಾಗಿ ಗೌಡ, ಕುಲಕರ್ಣಿಗಳು ಹಳ್ಳಿಗಳಲ್ಲಿ ಪ್ರಮುಖ ಸಭೆ ಸೇರಿ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು. ಮುಂದೆ ಬಂದ ರಾಜರು ಸುಭೇದಾರ, ತರಫ್‌ದಾರರು ಸರಕಾರಗಳೆಂದು ನೇಮಿಸಿ ಆ ಸರಕಾರಗಳಿಗೆ ''ಪರಗಣ'' ಎಂದು ಹೆಸರಿಸಿ ದೇಶಮುಖ, ಸರದೇಶಮುಖ ದೇಸಾಯಿ ಎಂದು ನೇಮಿಸಿದರು.

ಸ್ಥಳೀಯ ಆಡಳಿತದ ವ್ಯವಸ್ಥೆಯಲ್ಲಿ ದೇಸಾಯಿಗಳವರನ್ನು ಗುರುತಿಸಿ ಉಂಬಳಿಯಾಗಿ ಜಮೀನು ಕೊಟ್ಟರು. ದೇಸಾಯಿಗೆ ಪರಗಣ ಅಧಿಕಾರ ನೀಡಿ ಸರಕಾರವೆಂದು ಸನದು ಕೊಟ್ಟದ್ದು ಕಂಡುಬರುತ್ತದೆ. ಈ ಉಂಬಳಿಯನ್ನು ಕೊಡಲು ಕಾರಣವೇನೆಂದರೆ, ದೇಸಗತಿಗಳವರ ಸಾಹಸ ಸಹಾಯಕ್ಕೆ ಮೆಚ್ಚಿ ನೀಡಿದ ಸನದು ಆಗಿರುತ್ತದೆ. ಈ ಎಲ್ಲ ಸತ್ಯಾ ಸತ್ಯತೆಗಳು ಆ ಸನದುಗಳಲ್ಲಿ ನಮೂದಾಗಿವೆ.

ಇನಾಂಕೊಟ್ಟ ಜಮೀನು ಇದು ಉಂಬಳಿಯಂತೆ ಬಂದದ್ದೆ ಆಗಿದೆ. ಇಲ್ಲಿ ಲಿಂಗತಾರತಮ್ಯವಿಲ್ಲದೆ ಜನರ ಶೌರ್ಯ, ಸಾಹಸಗಳು, ರಾಜಮಹಾರಾಜರ ಎದುರಿನಲ್ಲಿ, ಜನರಿಗೆ ತಿಳಿದುಬಂದಲ್ಲಿ ದೇಸಾಯಿಗೆ ಹೆಚ್ಚಿನ ನೆರವು ಒದಗಿಸಿ, ಮೇಲ್ಮಟ್ಟಕ್ಕೆ ಏರಿಸಿ ಅವನಿಗೆ ಪದವಿ ನೀಡಿ, ಅವನ ಆಡಳಿತದ ಹದ್ದಿನಲ್ಲಿರುವ ಆ ಊರಿಗೆ 'ಇನಾಂ' ಎಂದು ಹೆಸರಿಸಿದ್ದು ಕಂಡುಬರುವುದು.

ದೇಸಗತಿಗಳ ಮುಖ್ಯ ಕರ್ತವ್ಯಗಳು

೧. ಕಂದಾಯ ವಸೂಲಿ ಮಾಡುವುದು

೨. ಸ್ಥಳೀಯ ಜನರು ರಾಜರವಿರುದ್ಧ ಬಂಡೇಳದಂತೆ ನೋಡಿಕೊಳ್ಳುವುದು.

೩. ಸ್ಥಳೀಯ ವ್ಯಾಜ್ಯಗಳನ್ನು ಬಗೆಹರಿಸುವುದು ಅವು ಮುಂದೆ ಹೋಗದಂತೆ ನೋಡಿಕೊಳ್ಳುವುದು.

೪. ದಂಡ-ಶಿಕ್ಷೆ ಕೊಡುವ ಅಧಿಕಾರವಿರುವುದರಿಂದ ಸಮಾನ ದೃಷ್ಟಿಯಲ್ಲಿ ನ್ಯಾಯ ತೀರ್ಮಾನಿಸಿ ತೀರ್ಪು ನೀಡುವುದು.

೫. ಸ್ಥಳೀಯ ಸಾಂಸ್ಕೃತಿಕ ಹಾಗೂ ಇತರೆ ಕಾರ್ಯಕ್ರಮಗಳಿಗೆ ಅನುಮತಿ ಪಡೆದು ನಡೆಯಿಸುವುದು

ಹೀಗೆ ಅನೇಕ ನೀತಿ ನಿಯಮಗಳ ಚೌಕಟ್ಟನ್ನು ಹಾಕಿ ಸ್ಥಳೀಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ನೆಲೆಗಳ ನಿರ್ವಹಣೆ ಮಾಡುತ್ತಿದ್ದರು.

ದೇಸಗತಿಯವರು ಸಾಮಾಜಿಕ ಜೀವನದಲ್ಲಿ ತಮ್ಮ ಪಾತ್ರವನ್ನು ಹಿರಿದಾಗಿಸಿಕೊಂಡಿದ್ದಾರೆ. ೨೦ಕ್ಕಿಂತ ಹೆಚ್ಚು ದೇಸಗತಿಗಳು ಸಾಮಾಜಿಕ ಕೊಡುಗೆಯಾಗಿ ಕೆರೆ, ಬಾವಿಗಳನ್ನು, ಮಂದಿರಗಳನ್ನು, ವಾಡೆಗಳನ್ನು ಕಟ್ಟಿಸಿದ್ದಾರೆ. ಈಗಲೂ ಸಹ ದೇಸಗತಿಗಳಲ್ಲಿ ಧರ್ಮಾಂಥರ ಬಾವಿಗಳು, ದೊಡ್ಡ ಬಾವಿಗಳು ಕಂಡುಬರುವುದು ಈ ಮಾತಿಗೆ ನಿದರ್ಶನಗಳಾಗಿದೆ.

ಧರ್ಮಾರ್ಥ ಬಾವಿಗಳು ಜನರಿಗಾಗಿ, ಪ್ರಾಣಿಗಳಿಗಾಗಿ ಕಟ್ಟಿಸಿದಂಥವು. ಊರಿನ ಎಲ್ಲ ಜಾನುವಾರುಗಳಿಗೆ ನೀರು ಕುಡಿಯಲು ಕಲ್ಲು ದೋಣಿ ಇಡಿಸಿ, ಮಟ್ಟೆ ಹೊಡೆದು, ನೀರು ತುಂಬಿಸುತ್ತಿದ್ದರು. ಈ ಧರ್ಮಾರ್ಥ ಬಾವಿಗಳು ದೇಸಗತಿಗಳ ಪರಿಸರದಲ್ಲಿ ಇಂದಿಗೂ ಸಹ ಕಾಣುತ್ತವೆ. ಅವುಗಳು ಇಂದು ಸರಿಯಾದ ನಿರ್ವಹಣೆಯಿಲ್ಲದೆ ಬಿದ್ದು ಹಾಳಾಗಿ ಪ್ರಾಣಿ ಪಕ್ಷಿಗಳ ತವರು ಮನೆಯಾಗಿವೆ. ನೀರು ಮಲಿತು ಉಪಯೋಗಕ್ಕೆ ಬಾರದ್ದಾಗಿದೆ. ದೇಸಗತಿಗಳವರ ಇಂಥ ಕೆಲಸಗಳು ಸಕಲ ಜೀವಿಗಳಿಗೂ ಉಪಯೋಗವಾಗಲಿ ಎನ್ನುವ ಧೋರಣೆಯಿಂದ ಕೂಡಿದ್ದವು. ದೇಸಗತಿಗಳವರ ಆಡಳಿತವು ಜನಪರವಾಗಿತ್ತು. ದೇಸಾಯಿ ರಾಜನಂತೆ ರಾಜವಾಡೆಯಂತೆ ವಾಡೆಯನ್ನು ಕಟ್ಟಿಸಿ ವೈಭವೋಪೇತವಾಗಿ ಆಡಳಿತ ನಡೆಸಿದ್ದು ಗಮನಾರ್ಹವಾಗಿದೆ.

ದೇಸಗತಿಗಳವರ ಕೈಯಲ್ಲಿ ಕುಲಕರ್ಣಿಗಳು, ತಳವಾರರು, ಆಯಗಾರರು, ಲೆಕ್ಕಿಗರು ಹೀಗೆ ಬೇರೆ ಬೇರೆ ವರ್ಗದ ಜನರು ಅವರಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ತಪ್ಪಿತಸ್ಥರಿಗೆ ಸದರಿನಲ್ಲಿ ನೇರ ಶಿಕ್ಷೆ ಮತ್ತು ಕ್ಷಮಾದಾನವಿತ್ತು. ಬಿಕ್ಕಟ್ಟಾದ ಆಡಳಿತವಿರುವುದರಿಂದ ಜನರು ದೇಸಾಯಿಗಳವರ ಮಾತಿಗೆ ಮನ್ನಣೆ ನೀಡುತ್ತಿದ್ದರು. ದೇಸಾಯಿಯು ತೀರ್ಮಾನ ನೀಡಿದ ಮೇಲೆ ಮತ್ತಾವ ನಿರ್ಣಯವನ್ನು ಕೊಡುತ್ತಿರಲಿಲ್ಲ. ಬದಲಾದ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರಗಳು, ದೇಸಗತಿಗಳ ಮತ್ತು ಅವುಗಳ ವಾರಸುದಾರರ ಪ್ರಭಾವವನ್ನು ಕಡಿಮೆಗೊಳಿಸಿವೆ. ಅವರು ತಮ್ಮ ಹಳೆಯ ವೈಭವವನ್ನು ಕಳೆದುಕೊಂಡು ಕೇವಲ ಸಾಮಾನ್ಯರಂತೆ ಬದುಕುವಂತಾಗಿದೆ. ಇದಕ್ಕೆ ಅವರ ಸ್ವಯಂಕೃತ ಅಪರಾದಗಳೂ ಕಾರಣವಾಗಿವೆ. ಈಗ ಮೊದಲಿನ ಯಾವುದೇ ಅಧಿಕಾರಗಳಿಲ್ಲ.

ಗ್ರಾಮಪಂಚಾಯಿತಿ, ಮಂಡಲ ಪಂಚಾಯಿತಿ ಆಡಳಿತ ಬಂದ ಮೇಲೆ ಸಕ್ರೀಯ ರಾಜಕಾರಣದಲ್ಲಿ ಇವರು ಮುಖ್ಯಸ್ಥರಾಗಿ ಚೇರಮನ್ನರಾಗಿದ್ದು ತಮ್ಮ ತಮ್ಮ ಮಂಡಲಗಳಲ್ಲಿ ಅಧಿಕಾರ ಮಾಡಿಕೊಂಡಿರುತ್ತಾರೆ. ಈ ಮೊದಲಿನ ದೇಸಗತಿ ಅಧಿಕಾರಕ್ಕೂ ಇಂದಿನ ಅಧಿಕಾರಕ್ಕೂ ತೌಲನಿಕವಾಗಿ ನೋಡಿದರೆ ಕೇವಲ ಕಾನೂನುಗಳ ಚೌಕಟ್ಟಿನಲ್ಲಿ ಇಂದಿನ ಆಡಳಿತ ನಡೆಯುತ್ತಿದೆ. ಭೂತಕಾಲದ ಆಡಳಿತವು ಸ್ವತಂತ್ರವಾಗಿತ್ತು. ಸತ್ಯಾಸತ್ಯತೆಯಲ್ಲಿ ನಡೆಯುತ್ತಿತ್ತು ಎಂಬುದು ಸ್ಪಷ್ಟವಾದ ಮಾತಾಗಿದೆ.

ಆಡಳಿತದ ಅನುಕೂಲಕ್ಕಾಗಿ ಪರಗಣ ಬಹುಮುಖ್ಯ ಪಾತ್ರವಹಿಸುತ್ತಿತ್ತು. 'ಪರಗಣ' ಮಾಡಿಕೊಂಡ ದೇಸಾಯಿಗಳು ಕಂದಾಯವನ್ನು ಗುಡ್ಡಗಳಿಂದ 'ಹುಲಬನ್ನಿ' ವಸೂಲ ಮಾಡಿ ಬಂದಂತ ರಕಮಿನಲ್ಲಿ ೧/೪ ತಮ್ಮಲ್ಲಿಟ್ಟುಕೊಂಡು ೩/೪ ರಾಜನಿಗೆ ಭರಿಸುತ್ತಿದ್ದರು. ಅಂದರೆ (೧/೪ (ಚೌತಾ) ಎಂದರ್ಥ) ಇದರಿಂದ ಖಜಾನೆ ಭರ್ತಿ ಆಗುತ್ತಿತ್ತು. ೧/೧೦ ಹಪ್ತಾ, ಚೌತಾ ವಸೂಲಾಗಿ ದೇಸಗತಿಗಳ ಆರ್ಥಿಕ ಭದ್ರತೆ ಸ್ಥಿತಿವಂತವಾಗಿತ್ತು.

ಈ ಎಲ್ಲ ಅಂಶಗಳನ್ನು ಒಂದೊಂದಾಗಿ ನೋಡಿಕೊಂಡಾಗ ಈ ದೇಸಗತಿಗಳವರು ರಾಜರ, ಸಾಮ್ರಾಟರ ಕೈಯಲ್ಲಿ ಅವರ ಸಾಮಂತರಾಗಿ ಆಡಳಿತ ನಡೆಸುತ್ತಿದ್ದರು. ಇನ್ನಾವುದೆ ವಿಷಯಗಳಲ್ಲಿ ಹಸ್ತಕ್ಷೇಪ ರಾಜರಿಂದ ಆಗುತ್ತಿರಲಿಲ್ಲ. ಕೇವಲ ಕಂದಾಯ ಮಾತ್ರ ವೇಳೆಗೆ ಸರಿಯಾಗಿ ತಲುಪುವಂತೆ ಕಟ್ಟಾಜ್ಞೆ ಇತ್ತು. ದೇಸಗತಿಗಳವರ ಮುಖ್ಯ ಕರ್ತವ್ಯವೂ ಇದಾಗಿತ್ತು.

ಈ ದೇಸಗತಿಗಳ ಚರಿತ್ರೆಯು ಆದಿಲ್‌ಶಾಹಿಗಳ ಕಾಲದಿಂದ ಹಿಡಿದು ಸ್ವತಂತ್ರಪೂರ್ವ ಸ್ವತಂತ್ರ ನಂತರದ ಇಲ್ಲಿಯವರೆಗೂ ವ್ಯಾಪಿಸಿಕೊಂಡಿದೆ. ಮುಸ್ಲಿಂ ಆಳರಸರು, ಮರಾಠಾ ಆಳರಸರು, ಪೇಶ್ವೆಗಳು, ಬ್ರಿಟಿಷರು ಈ ಎಲ್ಲ ಆಳರಸರ ಕೈಕೆಳಗೆ ಅವರು ವಿಧಿಸಿದ್ದ ಕಾನೂನಿನಂತೆಯೇ ದೇಸಗತಿಗಳು ಆಡಳಿತ ಮಾಡಿಕೊಂಡು ಬಂದಿದೆ.

ದೇಸಗತಿಗಳಿಗೆ ಹೆಚ್ಚು ಪಾಲು ಕೊಡುಗೆ ಕೊಟ್ಟಿದ್ದು ಮುಸ್ಲಿಂ ಆಳರಸರೆ. ಬಹಮನಿ ಸುಲ್ತಾನ ರಾಜ್ಯ ಇಬ್ಭಾಗವಾಗಿ ೫ ಸುಭಾಗಗಳಾದವು. ರಾಜ್ಯ ವಿಸ್ತಾರವು ಹೆಚ್ಚಾದ ಕಾರಣ, ಆಡಳಿತ ನಿರ್ವಹಣೆ ದೃಷ್ಟಿಯಿಂದ ಈ ದೇಸಗತಿ ಆಡಳಿತಕ್ಕೆ ಪೀಠಿಕೆ ಹಾಕಿದವರೆ ಇವರೆಂದು ಹೇಳಬಹುದು.

ನಂತರ ಪೇಶ್ವೆಗಳ ಆಡಳಿತದಲ್ಲಿ ಬೇರೆ ಬೇರೆ ಮಾರ್ಗ ಹಿಡಿದು ಅಧಃಪತನಕ್ಕೆ ದಾರಿ ಮಾಡಿಕೊಂಡವು. ಇಂಥ ಅವಕಾಶಕ್ಕೆ ಕಾಯುತ್ತಿದ್ದ ಬ್ರಿಟೀಶರು ಒಳನುಗ್ಗಿ ದೇಸಗತಿಗಳ ಕಾನೂನುಗಳನ್ನು ಬದಲಾಯಿಸಿದರು ಹಕ್ಕುಗಳನ್ನು ಮೊಟಕುಗೊಳಿಸಿದರು. ಹೀಗಾಗಿ ಬರುಬರುತ್ತ ದೇಸಗತಿಯು ಅವನತಿ ಹಾದಿ ಹಿಡಿದು ಸಂಪೂರ್ಣ ತನ್ನ ಸ್ವಾಮಿತ್ವವನ್ನು ಕಳೆದುಕೊಂಡಿತು. ಈ ಅವನತಿಗೆ ದೇಸಗತಿಯವರ ವೈಯಕ್ತಿಕ ಕಾರಣಗಳೂ ಹೊರತಾಗಿಲ್ಲ.

ಸ್ವಾತಂತ್ರ್ಯದ ಕಹಳೆ ಊದಲು ಶುರು ಮಾಡಿದಂದಿನಿಂದ ಇವರೆಲ್ಲರೂ ಬ್ರಿಟೀಷರ ಕೈಗೊಂಬೆಗಳಾಗಿ ಸ್ವತಂತ್ರ ಹೋರಾಟದಲ್ಲಿ ಭಾಗಿಗಳಾದರು. ತದನಂತರ ಇದರ ಅಧಿಕಾರ ಮೊಟಕುಗೊಳಿಸಿದ ಮೇಲೆ, ಕಾನೂನು ಅರಿತ ಮೇಲೆ, ಅಸಮಧಾನದಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ಎಲೆ ಮರೆಯ ಕಾಯಿಯಂತೆ ಭಾಗಿಗಳಾದರು.

ಸ್ವಾತಂತ್ರ್ಯ ಸಿಕ್ಕ ತಕ್ಷಣ ಭಾರತೀಯ ಇತಿಹಾಸದ ರೂಪುರೇಷೆಗಳು ಬೇರೆಯಾಗಿ ಪರಿಣಾಮಕಾರಿಯಾದ ಬದಲಾವಣೆಗಳು ಆದವು. ಸಂಸ್ಥಾನಗಳ ವಿಲೀನಿಕರಣ, ನಿಶಸ್ತ್ರೀಕರಣ ದತ್ತು ಪುತ್ರರ ನಿಷೇಧದಂತಹ ಬ್ರಿಟಿಷ್ ಕಾನೂನುಗಳಿಂದಾಗಿ ದೇಸಗತಿಗಳ ಅಸ್ತಿತ್ವವೇ ಕುಸಿಯುವಂತಾಯಿತು.

೧.೨. ಅಧ್ಯಯನದ ವಿಧಾನ ಮತ್ತು ಆಕರ ಸಾಮಗ್ರಿ

ಪ್ರಸ್ತುತ ಅಧ್ಯಯನವನ್ನು ಎಂಟು ಮುಖ್ಯ ವಿಭಾಗಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಈ ಎಂಟು ವಿಭಾಗಗಳಲ್ಲಿ ದೇಸಗತಿ ಮನೆತನಗಳ ಕುರಿತು ಸಾಂಸ್ಕೃತಿಕವಾಗಿ, ಆಡಳಿತಾತ್ಮಕವಾಗಿ, ರಾಜಕೀಯವಾಗಿ, ರಚನಾತ್ಮಕವಾಗಿ ಹಾಗೂ ಜನಮುಖಿ ಕಾರ್ಯಗಳ ಹಿನ್ನಲೆಯಲ್ಲಿ ಸವಿಸ್ತಾರವಾಗಿ ವಿಶ್ಲೇಷಣೆ ಮಾಡಲಾಗಿದೆ.

ಈ ಅಧ್ಯಯನಕ್ಕೆ ಸಹಾಯಕವಾಗುವಂತೆ ವ್ಯಾಪಕ ಕ್ಷೇತ್ರಕಾರ್ಯ ಕೈಗೊಳ್ಳಲಾಗಿದೆ. ದೇಸಗತಿಗಳ ದೇಸಾಯಿ ದೇಸಾಯಿಣಿಯರು, ತಳವಾರರು, ದೇಸಗತಿ ಮುಖ್ತ್ಯಾರರು; ಹೆಳವರು ಮತ್ತು ಇತರೆ ಸಾರ್ವಜನಿಕರನ್ನು ಸಂದರ್ಶಿಸಿ, ವಿವರ ಮಾಹಿತಿ ಪಡೆಯಲಾಗಿದೆ. ಅವರಿಂದ ಪಡೆದ ಮಾಹಿತಿಯನ್ನು ವ್ಯವಸ್ಥಿತವಾಗಿ ಬಳಸಿಕೊಂಡಿದ್ದೇನೆ. ಇದೂ ಅಲ್ಲದೆ ದೇಸಗತಿಗಳಿಗೆ ಆದಿಲ್‌ಶಾಹಿಯಂಥ ಆಳರಸರು ನೀಡಿದ ದಾಖಲೆಗಳನ್ನು ಅಲ್ಲಿರುವ ಹಸ್ತಪ್ರತಿ ದಾಖಲೆಗಳನ್ನು, ದೇಸಗತಿ ಮೊಹರು, ಸಿಖೆಗಳನ್ನು ನನ್ನ ಚರ್ಚೆಗೆ ಆಧಾರಗಳನ್ನಾಗಿ ಬಳಸಿಕೊಂಡಿದ್ದೇನೆ.. ಸನದುಗಳು ಪರ್ಶಿಯನ್, ಅರಬ್ಬಿ ಲಿಪಿಯಲ್ಲಿದ್ದು,

ಕೆಲವು ದಾಖಲೆ (ಬರೆದಿರಿಸಿದಂತವು)ಗಳು ಮೋಡಿ ಲಿಪಿಯಲ್ಲಿದ್ದು ಅವನ್ನು ಕನ್ನಡಕ್ಕೆ ಅನುವಾದಿಸಿ ಕೊಳ್ಳಲಾಗಿದೆ. ಇದುವರೆಗೆ ದೇಸಗತಿ ಕುರಿತು ಬಂದಿರುವಂಥ ವಾಗ್ವಾದಗಳು, ಸಾಹಿತ್ಯಿಕ ದಾಖಲೆಗಳನ್ನು ಅರಸುಗಳ ಇತಿಹಾಸವನ್ನು ಗಮನದಲ್ಲಿರಿಸಿಕೊಂಡು ಅಧ್ಯಯನಿಸಲಾಗಿದೆ. ಲಾವಣಿಗಳು, ಹೆಳವರ ಹೇಳಿಕೆಗಳು, ಅಧಿಕಾರಿಗಳು ನೀಡಿದ ಅಲಿನೇಷನ್ (ಕಂದಾಯದ ದಾಖಲೆಗಳು) ರೀಕಾರ್ಡ ಇನಾಂ ಕಮೀಷನ್‌ರವರು ನೀಡಿದ ಹಸ್ತಪ್ರತಿಗಳನ್ನೂ ಪ್ರಧಾನವಾಗಿ ಬಳಸಿಕೊಂಡು ಅಧ್ಯಯನಿಸಲಾಗಿದೆ.

ಆಕರ ಸಾಮಗ್ರಿಗಳು

ಪ್ರಸ್ತುತ ಅಧ್ಯಯನಕ್ಕೆ ಈ ಕೆಳಗಿನಂತೆ ಆಕರ ಸಾಮಗ್ರಿಗಳನ್ನು ಕಲೆ ಹಾಕಿ ಕೊಳ್ಳಲಾಗಿದೆ.

೧. ದೇಸಗತಿ ಮನೆತನಗಳಲ್ಲಿ ದೊರೆತ ಪರ್ಶಿಯನ್ ಹಸ್ತಪ್ರತಿ ಮತ್ತು ಸನದುಗಳು.

೨. ದೇಸಗತಿಯವರು ಬರೆದಿಟ್ಟಂತಹ ಮೋಡಿದಾಖಲೆಯ ರೀಕಾರ್ಡಗಳು.(ಹಸ್ತಪ್ರತಿಯಲ್ಲಿವೆ)

೩. ಮುಂಬೈ ಇನಾಂ ಕಮೀಷನ್‌ದಿಂದ ಬಂದಂತಹ ಹಸ್ತಪ್ರತಿ ಮೋಡಿ ದಾಖಲೆಗಳು.

೪. ದೇಸಗತಿ ಮನೆತನಗಳ ಮೊಹರು ಹಾಗೂ ಸಿಖೇದ ಉಂಗುರಗಳು.

೫. ಸ್ಥಳೀಯ ಆಡಳಿತ ಕುರಿತು ಸಂಗ್ರಹಿಸಿದ ಟೋಕಿಯೊ ವಿಶ್ವವಿದ್ಯಾಲಯದ ಮಾಹಿತಿ.

೬. ಅಲಿನೇಷನ್ ರೀಕಾರ್ಡ್‌ಗಳು

೭. ೧೮೨೪ರಲ್ಲಿ ಪತ್ರಿಸಿದ ಬ್ರಿಟೀಷ್ ಅಧಿಕಾರಿಗಳು ನೀಡಿದ ಸನದುಗಳು. (ಹಸ್ತಪ್ರತಿಯಲ್ಲಿದೆ)

೮. ಹೆಳವರು ನೀಡಿದ ಮಾಹಿತಿಗಳು.

೯. ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ.

೧೦. ಲಾವಣಿಗಳು

೧೧. ಕಬೂಲಾಯಿತ್ ಪತ್ರಿಕೆಗಳು

೧೨. ಪರಗಣ(ಗ್ರಾಮೀಣ) ಜನರ ಸಂದರ್ಶನಗಳು

೧೩. ದೇಸಗತಿಯವರ ಸಂದರ್ಶನಗಳು.

೧೪. ದೇಸಗತಿಗಳ ಬಗ್ಗೆ ಇದುವರೆಗೂ ಬಂದ ಪುಸ್ತಕಗಳ ಪರಿವೀಕ್ಷಣೆ.

೧೫. ಲೇಖನಗಳು

ಹೀಗೆ ವಿವಿಧ ಮೂಲಗಳಿಂದ ಅಧ್ಯಯನಕ್ಕೆ ಬೇಕಾದ ಆಕರ ಸಾಮಗ್ರಿಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ. ಅವುಗಳ ನೆರವಿನಿಂದ ಸಾಧ್ಯವಾದಷ್ಟು ವಸ್ತುನಿಷ್ಟವಾಗಿ ಈ ಜಿಲ್ಲೆಯ ದೇಸಗತಿಗಳ ಮೇಲೆ ಹೊಸ ಬೆಳಕು ಚೆಲ್ಲುವ ಪ್ರಯತ್ನವನ್ನು ಮಾಡಲಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನಕ್ಕೆ ಬಾಗಲಕೋಟೆ ಜಿಲ್ಲೆಯನ್ನು ಆಯ್ದುಕೊಂಡಿದ್ದೇನೆ. ಈ ಜಿಲ್ಲೆಯ ಆರು ತಾಲೂಕುಗಳ ವ್ಯಾಪ್ತಿಗೆ ಬರುವ ಒಟ್ಟು ೨೦ ದೇಸಗತಿಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಈ ದೇಸಗತಿಗಳ ವ್ಯಾಪ್ತಿಯು ಬದಲಾದ ರಾಜಕೀಯ ಸಂದರ್ಭದಲ್ಲಿ ಹಲವು ಕಡೆಗೆ ಹರವಿಕೊಂಡಿರುವುದರಿಂದ ಕೆಲವು ಕಡೆ ಅನಿವಾರ್ಯವಾಗಿ ನಿಗದಿತ ವಲಯವನ್ನು ಮೀರಿ ಅಧ್ಯಯನವನ್ನು ಸಾಗಿಸಲಾಗಿದೆ.

'ಬಾಗಲಕೋಟೆ ಜಿಲ್ಲೆಯ ದೇಸಗತಿಗಳು' ಎಂಬ ಅಧ್ಯಯನದ ಅಡಿಯಲ್ಲಿ ಒಟ್ಟು ಇಪ್ಪತ್ತು ದೇಸಗತಿಗಳು ಕಂಡುಬರುತ್ತವೆ. ಮೂಲ ದೇಸಗತಿಗಳೂ ಇಪ್ಪತ್ತು. ಆದರೆ ವಿಭಕ್ತ ಕುಟುಂಬ ಪದ್ಧತಿ ಮತ್ತು ಇತರೆ ಕಾರಣಗಳಿಗಾಗಿ ಇವುಗಳಿಂದಲೆ ಒಡೆದು ಹೋದ ಅಥವಾ ಅಡಳಿತ ಘಟಕವಾಗಿ ಸ್ವತಂತ್ರವಾಗಿ ಮೆರೆದ 'ಸಮತ್' 'ಪರಗಣ' ಮೂಲ ದೇಸಗತಿಯನ್ನು ಮರೆಸುವಷ್ಟು ಪ್ರಭಾವಿಯಾದಂಥವು. ಒಂದು ರೀತಿಯಲ್ಲಿ ಇವು ಉಪ-ದೇಸಗತಿಯಾಗಿರುವುದರಿಂದ ಅದನ್ನು ಎಣಿಕೆಗೆ ಹಿಡಿಯದೆ ಮೂಲವಾಗಿರುವುಗಳನ್ನೆ ಇಪ್ಪತ್ತು ಎಂದು ಗುರ್ತಿಸಲಾಗಿದೆ. ಹಂಚಿ ಹೋದ ದೇಸಗತಿಗಳನ್ನು ಕಡೆಗಣಿಸಿದೆ. ಮೂಲ ದೇಸಗತಿಯೊಂದಿಗೇ ಸೇರಿಸಿಕೊಂಡು ಅಧ್ಯಯನಿಸಲಾಗಿದೆ.

ಒಟ್ಟಾರೆಯಾಗಿ ಅಖಂಡ ವಿಜಾಪೂರ ಜಿಲ್ಲೆಯಿಂದ ವಿಭಾಗೀಕರಣಗೊಂಡ ಬಾಗಲಕೋಟೆ ಜಿಲ್ಲೆಯು ಈ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಒಟ್ಟು ಅಧ್ಯಯನದ ಸ್ವರೂಪ

ಪ್ರಸ್ತುತ ಪ್ರಬಂಧದ ಮೊದಲ ಅಧ್ಯಾಯವು ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ. ಅಧ್ಯಯನದ ಮೂಲ ಉದ್ದೇಶವನ್ನು ವಿವರಿಸುವುದಾಗಿದೆ.

ಎರಡನೇ ಅಧ್ಯಾಯದಲ್ಲಿ 'ದೇಸಗತಿ ಅರ್ಥ ಮತ್ತು ವ್ಯಾಪ್ತಿ'ಯನ್ನು ವಿವೇಚಿಸಲಾಗಿದೆ. ಇದರಲ್ಲಿ ಉಪ ಅಧ್ಯಾಯವನ್ನು ಮಾಡಿಕೊಂಡು ದೇಸಗತಿಗಳ ಉಗಮ, ವಿಸ್ತಾರ ಮತ್ತು ಬಗೆಗಳನ್ನು ಗುರ್ತಿಸಿಕೊಳ್ಳಲಾಗಿದೆ. ದೇಸಗತಿಯ ಅರ್ಥವನ್ನು ವಿವಿಧ ನೆಲೆಗಳಲ್ಲಿ ನಿರ್ವಚಿಸಿಕೊಳ್ಳಲಾಗಿದೆ. ದೇಸಗತಿ ಮನೆತನಗಳ ಸಂಕ್ಷಿಪ್ತ ಚರಿತ್ರೆಯನ್ನು ಈ ಅಧ್ಯಾಯದಲ್ಲಿ ಕಟ್ಟಿಕೊಡಲಾಗಿದೆ.

ಮೂರನೇ ಅಧ್ಯಾಯವು ದೇಸಗತಿಗಳ ಸಾಂಸ್ಕೃತಿಕ ಸ್ವರೂಪವನ್ನು ಕುರಿತು ಚರ್ಚಿಸುತ್ತದೆ. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಸಾಹಿತ್ಯ, ಸಂಗೀತ, ಕಲೆ (ಗುರ್ತಿಸಿಕೊಂಡು) ಇವುಗಳ ಸಂಬಂಧದಲ್ಲಿ ದೇಸಗತಿಗಳು ರೂಪಿಸಿದ ಸಾಂಸ್ಕೃತಿಕ ಪರಂಪರೆ, ಕುರಿತಾಗಿ ಸಂಶೋಧನಾತ್ಮಕವಾಗಿ ವಿಶ್ಲೇಷಿಸಲಾಗಿದೆ. ದೇಸಗತಿ ಮನೆತನಗಳ ಆಡಳಿತಾತ್ಮಕ ಅಸ್ತಿತ್ವವೇ ಕಂದಾಯದ ಸಲುವಾಗಿಯೇ ಇರುವಾಗ ಅಲ್ಲಿನ ಭೂ ಗುಣ, ಹವಾಮಾನ, ಬೆಳೆಗಳು ಕಂದಾಯ(TAX) ಮುಂತಾದ ವಿಚಾರಗಳನ್ನು ಕೇಂದ್ರವಾಗಿಟ್ಟುಕೊಂಡು ವಿಶ್ಲೇಷಿಸಲಾಗಿದೆ.

ದೇಸಗತಿಯವರ ಸಾಂಸ್ಕೃತಿಕ ಕೊಡುಗೆಗಳನ್ನು ಇಲ್ಲಿ ವಿಶೇಷವಾಗಿ ಗುರ್ತಿಸಲಾಗಿದೆ. ಅವರ ಧಾರ್ಮಿಕ ನಂಬಿಕೆಯನ್ನೂ ಗುರ್ತಿಸುವುದರೊಂದಿಗೆ ಮುಸ್ಲಿಂ ಧರ್ಮ ಆಚರಣೆ ಅನುಸರಣೆ ಕುರಿತು ದೇಸಗತಿಗಳಿಗಿದ್ದ ಧೋರಣೆಗಳನ್ನು ವಿವೇಚಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ದೇಸಗತಿಗಳ ಆಡಳಿತ ಸ್ವರೂಪ ಕುರಿತು ಅವಲೋಕನ ಮಾಡಿದೆ. ಆಡಳಿತಕ್ಕೆ ಸಂಬಂಧಿಸಿದ ಎಲ್ಲ ಆಡಳಿತದ ವಿಧಗಳು, ಅಧಿಕಾರಿಗಳು, ವಿವಿಧ ಇಲಾಖೆಗಳು, ಆಡಳಿತ ಹೆಗ್ಗುರುತಾಗಿರುವ 'ಸಿಖೆ'ಗಳನ್ನು ಸ್ಥೂಲವಾಗಿ ವಿವರಿಸಿ ಚರ್ಚಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ದೇಸಗತಿಗಳ 'ವಾಸ್ತು ಶಿಲ್ಪದ ಸ್ವರೂಪ'ವನ್ನು ಕುರಿತು ಚರ್ಚಿಸುತ್ತದೆ. ದೇಸಗತಿ, ವಾಡೆ(ಅರಮನೆ) ಕುರಿತು ಅದರ ಒಳ ಹೊರಗಿನ ಎಲ್ಲ ಅಂಶಗಳನ್ನು ಚರ್ಚಿಸಿ ಸ್ಥೂಲವಾಗಿ ವಿವರಿಸಲಾಗಿದೆ. ಗಡಗಳು ಮತ್ತು ಚೌಸಪ್ಪಿ ಕುರಿತು ವಿಶೇಷವಾಗಿ ಗುರ್ತಿಸಲಾಗಿದೆ. ದೇಸಗತಿಗಳನ್ನು ಕಟ್ಟುವಾಗಿನ ಸ್ಥಳ ಆಯ್ಕೆ, ದಿಕ್ಕು, ನಿವೇಶನ ಕುರಿತು ಹೇಳಿಕೊಂಡಿದೆ. ವಾಡೆದ ಸುತ್ತಲಿನ ಪರಿಸರ ಕುರಿತು ಮಾಹಿತಿ ನೀಡಿದೆ.

ಆರನೇ ಅಧ್ಯಾಯದಲ್ಲಿ 'ಸ್ಥಳನಾಮ, ಕುಲನಾಮ ಹಾಗೂ ವ್ಯಕ್ತಿನಾಮಗಳನ್ನು' ಕುರಿತು ವಿಶೇಷ ಅಧ್ಯಯನ ಮಾಡಲಾಗಿದೆ. ದೇಸಗತಿಗೆ ಸಂಬಂಧಿಸಿದ ಸ್ಥಳನಾಮಗಳನ್ನೇ ಅಧ್ಯಯನಿಸಿದೆ. ಕುಲನಾಮಗಳು ಅಧಿಕಾರವಾಚಕವಾಗಿದ್ದುದು ಅವುಗಳನ್ನು ವಿಶೇಷವಾಗಿ ಗುರ್ತಿಸಲಾಗಿದೆ. ವ್ಯಕ್ತಿನಾಮ ಕುರಿತು ಕೂಡ ವಿಶೇಷವಾಗಿ ಚರ್ಚಿಸಲಾಗಿದೆ.

ಏಳನೇ ಅಧ್ಯಾಯದಲ್ಲಿ ದೇಸಗತಿಗಳ ಸಮಕಾಲೀನ-ಸ್ಥಿತಿ-ಗತಿ ಮತ್ತು ಸ್ಥಿತ್ಯಂತರಗಳ ಕುರಿತು ಚರ್ಚಿಸಿದೆ, ಇದಕ್ಕಾಗಿ ರಾಜಕೀಯ ಸಾಂಸ್ಕೃತಿಕ ಆರ್ಥಿಕ ಮತ್ತು ಚಾರಿತ್ರಿಕ ಕಾರಣಗಳನ್ನು ಗುರ್ತಿಸಿ ಅಧ್ಯಯನಿಸಲಾಗಿದೆ.

ಎಂಟನೇ ಅಧ್ಯಾಯ ಅಧ್ಯಯನದ ಫಲಿತಗಳ ಭಾಗವಾಗಿದೆ. ಒಟ್ಟು ಅಧ್ಯಯನದ ಫಲಿತಗಳನ್ನು ಇಲ್ಲಿ ಕಂಡುಕೊಳ್ಳಲಾಗಿದೆ.

ಹೀಗೆ ಬಾಗಲಕೋಟಿ ಜಿಲ್ಲೆಯ ದೇಸಗತಿ ಮನೆತನಗಳನ್ನು ಸಾಂಸ್ಕೃತಿಕವಾಗಿ, ಆಡಳಿತಾತ್ಮಕವಾಗಿ ಅವರ ಚಾರಿತ್ರಿಕ ದಾಖಲೆಗಳನ್ನು ಆಧರಿಸಿ ಅಧ್ಯಯನವನ್ನು ನಡೆಸಲಾಗಿದೆ. ದೇಸಗತಿಗಳ ಉಗಮವನ್ನು ಬೆಳವಣಿಗೆಯನ್ನು ಅಧಃಪತನವನ್ನು ಸಂಶೋಧನಾತ್ಮಕವಾಗಿ ವಿಶ್ಲೇಷಿಸಲಾಗಿದೆ. ಪ್ರತಿಯೊಂದು ಅಧ್ಯಾಯಗಳಲ್ಲಿ ಸಂಬಂಧಿಸಿದ ವಿವಿಧ ವಿಷಯವನ್ನು ಜೋಡಿಸಿಕೊಂಡು ಅಧ್ಯಯನಿಸಲಾಗಿದೆ. ಆ ಮೂಲಕ ಧನಾತ್ಮಕ ಮತ್ತು ಋಣಾತ್ಮಕ ಬೆಳವಣಿಗೆಯನ್ನು ಅವುಗಳ ಸಾಮಾಜಿಕ ಹಾಗೂ ಸಾಂಸ್ಕೃತಿಕ, ರಾಜಕೀಯ ಉಪಯುಕ್ತತೆಗಳನ್ನು ಕುರಿತು ಚರ್ಚಿಸಲಾಗಿದೆ. ಮುಂದೆ ಉಳಿಸಿ ಬೆಳೆಸಿಕೊಳ್ಳಲು ಬೇಕಾದ ಅಭಿಪ್ರಾಯವನ್ನು ಮಂಡಿಸಲಾಗಿದೆ.

೧.೪. ಈ ಕ್ಷೇತ್ರದಲ್ಲಿ ಇದುವರೆಗೆ ನಡೆದ ಅಧ್ಯಯನದ ಸಮೀಕ್ಷೆ

ಉತ್ತರ ಕರ್ನಾಟಕದ ದೇಸಗತಿಗಳ ಬಗ್ಗೆ ಇದುವರೆಗೆ ವ್ಯವಸ್ಥಿತವಾದ ಅಧ್ಯಯನ ನಡೆದಿಲ್ಲ. ಇದೇ ಮಾದರಿಯಲ್ಲಿ ಹುಟ್ಟಿಕೊಂಡ ಪಾಳೆಗಾರರ ಕುರಿತು ಸಾಕಷ್ಟು ಅಧ್ಯಯನ ನಡೆದಿದೆ. ಆದರೆ ದೇಸಗತಿಗಳು ಅಧ್ಯಯನದ ದೃಷ್ಟಿಯಿಂದ ತುಂಬ ಅಲಕ್ಷಿತವಾಗಿವೆ. ಅಲ್ಲಲ್ಲಿ ಕೆಲವು ಬಿಡಿ ಚಿಂತನೆಗಳು ಲೇಖನಗಳು ನಡೆದದ್ದು ಮಾತ್ರ ಕಾಣುತ್ತದೆ.

ದಕ್ಷಿಣ ಮಹಾರಾಷ್ಟ್ರ ಹಾಗೂ ಉತ್ತರ ಕರ್ನಾಟಕದಲ್ಲಿ ಈ ಸ್ಥಳೀಯ ಆಡಳಿತದ ಪರಗಣ(ಜಿಲ್ಲೆ) ಮಾದರಿಯಲ್ಲಿಯೇ ದೇಸಗತಿಗಳು ಹುಟ್ಟಿಕೊಂಡವು. ದಕ್ಷಿಣ ಮಹಾರಾಷ್ಟ್ರದಲ್ಲಿ ಅವನ್ನು ಚೌಗುಲೆ, ಚೌದರಿ, ಪಟೇಲ, ಪಾಟೀಲ ಎಂದೂ ಉತ್ತರ ಕರ್ನಾಟಕದಲ್ಲಿ ದೇಸಾಯಿ, ದೇಸಮುಖ ಎಂದೂ ಕರೆಯುತ್ತಾರೆ.

ಇತ್ತೀಚಿಗೆ ಈ ಕುರಿತಾಗಿ ಕೆಲವು ವಿದ್ವಾಂಸರು ಯೋಚಿಸಿದ್ದು ತಿಳಿದುಬರುತ್ತದೆ. ಅಂಥವರಲ್ಲಿ ಡಾ.ಎಂ.ಎಂ.ಕಲುಬುರ್ಗಿಯವರು ಒಬ್ಬರು. ಪ್ರಥಮವಾಗಿ 'ದೇಸಗತಿ' ಎಂಬ ಶಬ್ದವನ್ನು ಇವರೆ ಬಳಸಿದಂತೆ ಕಾಣುತ್ತದೆ. ೧೯೮೫ರಲ್ಲಿ ಬಿಜಾಪುರದ ಸಿದ್ದೇಶ್ವರ ಸಂಸ್ಥೆಯಿಂದ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಈ ಪದವನ್ನು ಚಾಲನೆಗೊಳಿಸಿದರು. ಮರುವರ್ಷವೆ ೧೯೮೬ರಲ್ಲಿ ಬೆಳಗಾವಿ ಜಿಲ್ಲೆ ದೇಸಗತಿಗಳ ಕುರಿತು ವಿಚಾರ ಸಂಕಿರಣ ಕೂಡ ನಡೆಯಿತು. ಹಾಗೆ ಅದು ಗದುಗಿನ ವೀರಶೈವ ಅಧ್ಯಯನ ಸಂಸ್ಥೆಯಿಂದ ಪ್ರಕಟಣೆ ಕೂಡ ಆಯಿತು. ತದನಂತರದಲ್ಲಿ ಈ ಕುರಿತು ಗಂಭೀರವಾದ ಚಿಂತನೆಗಳು ನಡೆಯದೆ ಇರುವುದು ಕಂಡುಬರುತ್ತದೆ.

ಇತ್ತೀಚಿಗೆ ಧಾರವಾಡ ಜಿಲ್ಲೆ ದೇಸಗತಿಗಳ ಕುರಿತು ಡಾ.ಎ.ಸಿ.ನಾಗಭೂಷಣ ಮೂರ್ತಿಯವರು ಅಧ್ಯಯನ ಮಾಡಿದ್ದು ಕಂಡುಬರುತ್ತದೆ. ಹಾಗೆ ಕೆಲವು ವೀರಶೈವ ಅರಸು ಮನೆತನಗಳ ಕುರಿತು ಲೇಖನಗಳು ಬಂದಿದ್ದು ಅವೂ ಸಿಂದಗಿ ಸಾರಂಗಮಠದಿಂದ ಡಾ.ಎಂ.ಎಂ.ಕಲಬುರ್ಗಿಯವರ

ಸಂಪಾದಕತ್ವದಲ್ಲಿ ಪ್ರಕಟಣೆಗೊಂಡಿವೆ. ಅದರಲ್ಲಿ ಕೋಲ್ಹಾರ ದೇಸಗತಿ ಕುರಿತು ಪ್ರಮುಖ ಲೇಖನವಿರುವುದು ಕಾಣುತ್ತದೆ. ಇವೆಲ್ಲವನ್ನು ಅವಲೋಕಿಸಿದಾಗ ಎಲ್ಲ ದೇಸಗತಿಗಳ ಗೊತ್ತು ಗುರಿಗಳು ಒಂದೇ ಎನಿಸಿದರೂ ವಿಭಿನ್ನತೆ ಕಂಡುಬರುತ್ತದೆ. ಉತ್ತರ ಕರ್ನಾಟಕದಲ್ಲಿ ದೇಸಗತಿಯೆಂದೇ ಹೆಚ್ಚು ಪ್ರಚಲಿತದಲ್ಲಿರುವ ಇವೆಲ್ಲವುಗಳು ಸ್ಥಳೀಯ ಆಡಳಿತದ ಕೇಂದ್ರಗಳಾಗಿವೆ ಎಂಬುದು ಸ್ಪಷ್ಟ.

ಈ ಹಿನ್ನೆಲೆಯಲ್ಲಿ ಕೆಲವು ವಿದ್ವಾಂಸರು ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ರಾಜಕೀಯ ಹಿನ್ನೆಲೆಯಲ್ಲಿ ದೇಸಗತಿಗಳ ಕುರಿತು ಚರ್ಚಿಸಿದ್ದು ಇದೆ. ಹಾಗೆ ಕೆಲವು ಸಾಹಿತಿಗಳು ನಾಟಕಕಾರರು, ಕಾದಂಬರಿಕಾರರು ಕೂಡ ಈ ಮನೆತನಗಳ ಮೇಲೆ ಸಾಹಿತ್ಯ ರಚನೆ ಮಾಡಿದ್ದಾರೆ.

ಕು. ವೀರಭದ್ರಪ್ಪ, ಚಂದ್ರಶೇಖರ ಕಂಬಾರ, ಕುವೆಂಪು, ಬರಗೂರ ರಾಮಚಂದ್ರಪ್ಪ, ಡಾ. ರಂಗರಾಜ ವನದುರ್ಗ ಅವರೂ ಕೂಡ ದೇಸಗತಿಗಳ ಬಗ್ಗೆ ತಮ್ಮ ಕೃತಿಗಳಲ್ಲಿ ವಿಶ್ಲೇಷಣೆ ನೀಡಿದ್ದಾರೆ. ಬಾಗಲಕೋಟೆ ಕ್ಷೇತ್ರವನ್ನು ಪ್ರತಿನಿಧಿಸಿರುವ ಕಾದಂಬರಿಗಳಲ್ಲಿ ದು.ನಿಂ.ಬೆಳಗಲಿ ಶ್ರೀ. ಶ್ರೀನಿವಾಸ ವೈದ್ಯ, ದೇಸಗತಿ ಕಾದಂಬರಿಯ ರಾಘವೇಂದ್ರ ಪಾಟೀಲ, ಕೆ.ಎ.ಬನ್ನಟ್ಟಿ, ಮಲ್ಲಿಕಾರ್ಜುನ ಹಿರೇಮಠರವರು ಮುಖ್ಯರೆನಿಸಿದ್ದಾರೆ.

ಕೆಳಕಂಡ ಪ್ರತಿಯೊಬ್ಬ ವಿದ್ವಾಂಸರು ತಮ್ಮ ತಮ್ಮ ಸಂಶೋಧನ ಉಪನ್ಯಾಸ ಪ್ರಬಂಧದಲ್ಲಿ ವಿಭಿನ್ನವಾದ ವಿಚಾರಗಳನ್ನು ಚರ್ಚಿಸಿದ್ದಾರೆ. ಅಂಥವುಗಳ ಕೆಲವು ಅಂಶಗಳನ್ನು ಇಲ್ಲಿ ಗಮನಿಸಲಾಗಿದೆ.

ಎಸ್.ಎಸ್.ಒಡೆಯರ (೧೯೮೯ : ೦೧) ಎಂ.ಬಿ.ನೇಗಿನಹಾಳ (೧೯೮೯-೧೯) ವಿರುಪಾಕ್ಷ ಬಡಿಗೇರ (೧೯೮೯-೨೫) ಅಶೋಕ ಶೆಟ್ಟರ (೧೯೮೯ : ೪೨) ಮುಂತಾದವರು ದೇಸಗತಿಗಳ ಕುರಿತು ಅಧ್ಯಯನ ನಡೆಸಿದ್ದು ಕಾಣುತ್ತದೆ. ಗದುಗಿನ ತೋಂಟದಾರ್ಯ ಮಠದಿಂದ ಹೊರತಂದ ಬೆಳಗಾವಿ ಜಿಲ್ಲೆಯ ವೀರಶೈವ ದೇಸಗತಿಗಳು ಸಂಪುಟ ೧ ಇದು ಪ್ರಮುಖವಾದದ್ದು.

ಈ ಗ್ರಂಥದಲ್ಲಿ ಎಸ್.ಎಸ್. ಒಡೆಯರ ಅವರು ಕಿತ್ತೂರ ಚನ್ನಮ್ಮನ ಕುರಿತು ದೇಸಗತಿ ವಿಷಯವಾಗಿ ಚರ್ಚಿಸಿದ್ದಾರೆ. ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಸಮರವನ್ನು ಪ್ರಪ್ರಥಮವಾಗಿ ಸಾರಿದ ಕೀರ್ತಿ ಕರ್ನಾಟಕ ಚಿಕ್ಕಸಂಸ್ಥಾನವಾಗಿದ್ದ ಕಿತ್ತೂರಿಗೆ ಸಲ್ಲುತ್ತದೆ. ಅವರ ವಿಚಾರದಂತೆ ಕಿತ್ತೂರ ದೇಸಗತಿ ಎನ್ನದೆ ಸಂಸ್ಥಾನವೆಂದು ಬಳಸಿದ್ದಾರೆ. ಅದಕ್ಕೆ ಉದಾಹರಣೆಯಾಗಿ ಇತಿಹಾಸದ ಸಾಲಿನಲ್ಲಿ ಸೇರಿರುವ ಝಾನ್ಸಿ ರಾಣಿ ಲಕ್ಷ್ಮೀಬಾಯಿಯನ್ನು ಉದಾಹರಿಸಿದ್ದಾರೆ. ಹಾಗೆ ಚೆನ್ನಮ್ಮ ಶ್ರೇಷ್ಠ ಆಡಳಿತಗಾರಳಾಗಿ ಸೈನ್ಯದ ವೀರ ಮುಖಂಡಳಾಗಿ, ಚತುರ ರಾಜಕಾರಣಿಯಾಗಿ, ಮೆರೆದ ಬಗ್ಗೆ ಹೇಳುತ್ತಾರೆ. ಇದರಿಂದ ದೇಸಾಯಿಗಳು ತಮ್ಮ ಉಳುವಿಕೆಗಾಗಿ ಧ್ವನಿ ಎತ್ತಿದ್ದು ಎಂಬ ಅಂಶವನ್ನು ಸ್ಪಷ್ಟಪಡಿಸುತ್ತಾರೆ. ಹಾಗೆ ಆದಿಲ್‌ಶಾಹಿಯಿಂದ ಈ ನಾಡನ್ನು ಬಳುವಳಿಯಾಗಿ ಪಡೆದರು ಅವರ ಶೌರ್ಯ, ಸಾಹಸ ಹಾಗೂ ಸೇವೆಗೆ

ಪ್ರತಿಫಲವಾಗಿ ಅವರಿಗೆ ಕ್ರಿ.ಶ.೧೫೮೫ರಲ್ಲಿ ಹೋಬಳಿ ಪರಗಣಾ ಎಂದು ಕರೆಯುತ್ತಿದ್ದ ಹುಬ್ಬಳ್ಳಿ ಪ್ರಾಂತದ ಸರದೇಸಮುಖ ದಾನವಾಗಿ ದೊರೆಯಿತು. ಹಾಗೆ ಅವರಿಂದಲೇ ಅನೇಕ ಬಿರುದುಗಳು ಸಿಕ್ಕ ಬಗ್ಗೆ ಕೂಡ ಹೇಳುತ್ತಾರೆ. ಮುಖ್ಯವಾಗಿ ಸ್ಥಾನಿಕ ನಾಯಕರಿಗೆ ಅವರ ಪರಾಕ್ರಮಗಳ ಫಲವಾಗಿ ಇಂಥ ಸ್ಥಳೀಯ ಆಡಳಿತ ದೊರೆತಿದ್ದು ಎಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ.

ಎಂ.ಬಿ.ನೇಗಿನಹಾಳ : ಕಾಕತಿ ಗ್ರಾಮವು ಮೂಲ ಸಾಂಗಲಿ ಪಟವರ್ಧನರ ಸಂಸ್ಥಾನಕ್ಕೆ ಸೇರಿತ್ತು. ನಂತರದಲ್ಲಿ ಅದು ದೇಸಗತಿ ಮನೆತನಕ್ಕೆ ಒಳಪಟ್ಟಿದ್ದೆಂದು ಹೇಳುತ್ತಾರೆ. ಅವರೆ ಹೇಳುವಂತೆ ೧೭೭೫ರ ಸುಮಾರಿಗೆ ಬಿಜಾಪುರದ ಕಡೆಗೆ ವಲಸೆ ಬಂದು ತನ್ನ ಸ್ವಸಾಮರ್ಥ್ಯದಿಂದ ಈ ಭಾಗದ ದೇಸಗತಿ ಸಂಪಾದನೆ ಮಾಡಿದ ಬಗ್ಗೆ ವಿವರ ನೀಡುತ್ತಾರೆ. ಈ ಮನೆತನದ ದೇಸಾಯಿ ನಿರುಪದ್ರವಿಯೆಂದು ತಿಳಿದು. ಅವನನ್ನು ಸೆರೆಮನೆಗೆ ಹಾಕಿದರು. ಅವನ ವ್ಯಕ್ತಿತ್ವವನ್ನು ಕೆಚ್ಚನ್ನು ಮನಗಂಡು ಪಟ್ಟವರ್ಧನರು ತಮ್ಮ ಅಂಗರಕ್ಷನೆಂದು ನೇಮಿಸಿಕೊಂಡು ಗೌರವಿಸಿದರು. ಇವರ ವಂಶದ ಕುಡಿಯೇ ಕಿತ್ತೂರರಾಣಿ ಚೆನ್ನಮ್ಮ ಎಂಬ ಅಂಶವನ್ನು ಸ್ಪಷ್ಟಪಡಿಸುತ್ತಾರೆ. ಇದರಲ್ಲಿ ದೇಸಗತಿಯು ಹುಟ್ಟಿ ಬೆಳೆದ ಕುರಿತು ಸ್ಪಷ್ಟತೆ ಇರುತ್ತದೆ.

ವಿರುಪಾಕ್ಷ ಬಡಿಗೇರ ಅವರು ಸಿರಸಂಗಿ ದೇಸಗತಿಯನ್ನು ಅದರ ಪೂರ್ವಾರ್ಧ, ಉತ್ತರಾರ್ಧ ನೆಲೆಯಲ್ಲಿ ಕಟ್ಟಿಕೊಡುತ್ತಾರೆ. ಕ್ರಿ.ಶ.೧೩೩೬ರಲ್ಲಿ ಅಸ್ತಿತ್ವಕ್ಕೆ ಬಂದ ವಿಜಯನಗರ ಅರಸುಮನೆತನದ ರಾಜಕೀಯ ಸಂಘಟನೆಗೆ ವೀರಶೈವದ ಆಸರೆ ಅನಿವಾರ್ಯವಾಗಿತ್ತು. ಇದೇ ಸಮಯದಲ್ಲಿ ಹಲವು ಪಾಳೇಗಾರರು ಕಟ್ಟಿದ ಚಿಕ್ಕಪುಟ್ಟ ರಾಜ್ಯಗಳೂ ಕರ್ನಾಟಕದಲ್ಲಿ ಆಳಿಕೆ ನಡೆಸಿದವು. ವಿಜಯನಗರ ಪತನದ ನಂತರ ಸುಮಾರು ೨೫೦ ವರ್ಷಗಳ ಅವಧಿಯಲ್ಲಿ ಉತ್ತರ ಕರ್ನಾಟಕದಲ್ಲಿ ಅನೇಕ ದೇಸಗತಿಗಳು ಹುಟ್ಟಿಕೊಂಡವು. ವಿಜಾಪುರದ ಅದಿಲ್‌ಶಾಹಿ ಮನೆತನದವರು ಈ ಭಾಗದಲ್ಲಿಯ ಹಿಂದೂ ಜನರಿಗೆ ಮಹತ್ವದ ಅಧಿಕಾರ ಸ್ಥಾನಗಳನ್ನು, ಜಹಗೀರುಗಳನ್ನು ಕೊಟ್ಟು, ಅವರಿಗೆ ದೇಸಮುಖ, ದೇಸಾಯಿ, ನಾಡಗೌಡ ಇತ್ಯಾದಿ ಹೆಸರುಗಳನ್ನು ಕೊಟ್ಟರು. ಹಾಗೆ ಇನಾಮದಾರ ಮನೆತನಗಳಿಗೂ ರಾಜ್ಯದ ಮುಖ್ಯ ಅಧಿಕಾರಿಗಳ ನಿಕಟ ಸಂಬಂಧವಿದ್ದುದನ್ನು ಹೇಳುತ್ತಾರೆ. ಮುಖ್ಯವಾಗಿ ವಿಜಯನಗರ ಕಾಲದಲ್ಲಿ ಹುಟ್ಟಿ ಬೆಳೆದುದರ ಬಗ್ಗೆ ಹೇಳುವುದರೊಂದಿಗೆ, ಅದೇ ಮಾದರಿಯ ಪಾಳೇಗಾರರು ಇದ್ದರೆನ್ನುತ್ತಾರೆ. ಒಟ್ಟಾರೆಯಾಗಿ ೨೫೦ ವರ್ಷಗಳ ಅವಧಿಯಲ್ಲಿ ಉತ್ತರ ಕರ್ನಾಟಕದಲ್ಲೆ ಅನೇಕ ದೇಸಗತಿಗಳು ಹುಟ್ಟಿಕೊಂಡವೆಂದು ಅಭಿಪ್ರಾಯ ಪಡುತ್ತಾರೆ. ಮತ್ತು ಅದಿಲ್‌ಶಾಹಿಗಳಿಂದಲೆ ಈ ಭಾಗದ ಜನರಿಗೆ ಅಂದರೆ ಹಿಂದುಗಳಿಗೆ ಜಹಗೀರ ನೀಡಿ ದೇಸಮುಖ, ದೇಸಾಯಿ, ನಾಡಗೌಡ ಎಂದು ಹೆಸರಿಸಿದ್ದರ ಕುರಿತು ಹೇಳುತ್ತಾರೆ.

ಅಶೋಕ ಶೆಟ್ಟರ ಅವರು ತಲ್ಲೂರ ದೇಸಗತಿಯು ವಿಜಯನಗರದ ಸಾಮ್ರಾಜ್ಯ ಪತನ ಹೊಂದಿದ ನಂತರ ಹುಟ್ಟಿಕೊಂಡ ಬಗ್ಗೆ ಹೇಳುತ್ತಾರೆ. ದಕ್ಷಿಣ ಮಹಾರಾಷ್ಟ್ರ ಹಾಗೂ ಉತ್ತರ ಕರ್ನಾಟದಲ್ಲಿ

ರಾಜಕೀಯವಾಗಿ ಪ್ರಾಮುಖ್ಯ ಪಡೆದವರೆಂದರೆ ದೇಸಾಯಿಗಳೇ ಎಂಬುದು ಅವರ ಅಭಿಪ್ರಾಯವಾಗಿದೆ. ೧೫೬೫ರ ತಾಳಿಕೋಟೆ ಕದನದಲ್ಲಿ ಭಾಗಿಯಾದ ಮೇಲೆ ಬಹುವ್ಯಾಪ್ತಿ ಹೊಂದಿದನು. ೧೫೬೭ರಲ್ಲಿ ತೊರಗಲ್ಲಿನ ಸರದೇಸಾಯಿ ಎಂದು ಅವನಿಗೆ ಹಲವು ಉಪಾದಿಗಳನ್ನಿತ್ತು ಗೌರವಿಸಿದನೆಂದು ಹೇಳುತ್ತಾರೆ.

ಸಿ.ಕೆ.ನಾವಲಗಿ ಅವರು 'ಚಚಡಿ ದೇಸಗತಿ' ಅವಲೋಕನ ಮಾಡಿ, ಇಂಗಳಗಿ ತಲ್ಲೂರ ರುದ್ರಾಪೂರ ಚಚಡಿ ದೇಸಗತಿಗಳು ಮೂಲದಲ್ಲಿ ಒಂದೆ ಆಗಿದ್ದವು. ಅಣ್ಣ ತಮ್ಮಂದಿರಲ್ಲಿ ಆಸ್ತಿಯನ್ನು ಹಂಚಿಕೊಂಡು ಬೇರೆ ಬೇರೆಯಾದಾಗ ಸ್ವಾಭಾವಿಕವಾಗಿ ದೇಸಗತಿಗಳು ಒಡೆದವು ಎಂಬುದು ಇವರ ಅಭಿಪ್ರಾಯವಾಗಿದೆ. ನಂತರ ಚಿಕ್ಕ ಒಡೆತನ ಹೊಂದಿ ದೇಸಗತಿಯನ್ನು ಪರಿವರ್ತಿಸಿಕೊಂಡವೆಂದು ಹೇಳುತ್ತಾರೆ.

ಒಟ್ಟಾರೆಯಾಗಿ ಎಲ್ಲ ದೇಸಗತಿಗಳು ಅದಿಲ್‌ಶಾಹಿಯ ಕಾಲದಲ್ಲಿ ಹುಟ್ಟಿ ಬೆಳೆದು ಬಂದವೆಬುಂದು ಇಲ್ಲಿನ ಎಲ್ಲ ವಿದ್ವಾಂಸರ ಅಭಿಪ್ರಾಯವಾಗಿದೆ. ಆಡಳಿತಾತ್ಮಕವಾಗಿ ಸಾಂಸ್ಕೃತಿಕವಾಗಿ ಕರ್ನಾಟಕದ ಜನತೆಯನ್ನು ನಾನಾ ವಿಧದಿಂದ ಪೋಷಿಸಿ, ರಕ್ಷಿಸಿದ್ದ ಸಂಗತಿಗಳನ್ನು ಸ್ಪಷ್ಟವಾಗಿ ಹೇಳುತ್ತಾರೆ. ಇಂಥ ದೇಸಗತಿಗಳ ವಿಷಯ ಸಂಗ್ರಹಿಸಿ ಅದರ ನಿಜಸ್ವರೂಪವನ್ನು ಐತಿಹಾಸಿಕ ದೃಷ್ಟಿಯಿಂದ ಅರಿತುಕೊಳ್ಳುವುದು ಸಂಸ್ಕೃತಿಯ ದೃಷ್ಟಿಯಿಂದ ಮಹತ್ವದ್ದಾಗಿದೆ ಎಂಬುದು ಇಲ್ಲಿನ ಧ್ವನಿಯಾಗಿ ಕಂಡುಬರುತ್ತದೆ.

೨೦ನೇ ಶತಮಾನದಲ್ಲಿ ಅಂದರೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಥೆ, ಕಾದಂಬರಿ ಸಿನಿಮಾ ನಾಟಕಗಳ ಮೂಲಕ ದೇಸಗತಿಗಳನ್ನು ಮರು ರಚಿಸಿಕೊಳ್ಳುವ ಮೂಲಕ ಪ್ರಯತ್ನಗಳು ನಡೆದಿದ್ದು ಗಮನಾರ್ಹ ಸಂಗತಿಯಾಗಿದೆ. ಉತ್ತರ ಕರ್ನಾಟಕದಲ್ಲಿ ಇಂಥ ಕಾದಂಬರಿಗಳು ಹೆಚ್ಚು ಕಾಣಸಿಗುತ್ತವೆ. ಅವರಲ್ಲಿ ಕೆಲವೇ ಕೆಲವು ಪ್ರಮುಖ ಲೇಖಕರ ಕಾದಂಬರಿಗಳನ್ನು ಇಲ್ಲಿ ಬಳಸಿಕೊಂಡಿದ್ದೇನೆ.

ಮೊದಲನೆಯದಾಗಿ ಕನ್ನಡದಲ್ಲಿ ಪದ್ಯಕ್ಕಿಂತ ಗದ್ಯದಲ್ಲಿ ಈ ಬಗೆಯ ಸಾಮಾಜಿಕ ಸಾಹಿತ್ಯ ವಾಸ್ತವವಾಗಿ ಬಳಕೆಯಾಗಿದೆ. ಎರಡನೆಯದಾಗಿ ನವೋದಯ ಮತ್ತು ನವ್ಯಕ್ಕಿಂತ ತದನಂತರ ಕಾಲದಲ್ಲಿ ಬಂದ ಕಥೆ ಕಾದಂಬರಿಗಳಲ್ಲಿ ಈ ವಿಷಯ ಹೆಚ್ಚು ಆಯಾಮದೊಂದಿಗೆ ದಾಖಲಿತವಾಗಿದೆ. ಮೂರನೆಯದಾಗಿ ಕನ್ನಡ ಸಾಹಿತ್ಯದ ನವ್ಯೋತ್ತರದ ಮೌಲ್ಯ ವಿಘಟನೆಯ ಕಾರಣದಿಂದಾಗಿ ದೇಸಗತಿಗಳ ಚಿತ್ರಣವೂ ಕೂಡ ದರ್ಶನದ ನೆಲೆಯಲ್ಲಿ ಮಾತ್ರ ವಿಘಟಿತಗೊಳ್ಳದೆ ಆಂತರಿಕ ಜಗತ್ತಿನ ಅನಾವರಣದವರೆಗೂ ಆ ವಿಘಟನೆ ಹರಡಿಕೊಂಡಿದೆ. ನಾಲ್ಕನೆಯದಾಗಿ ಬಹುಪಾಲು ಚಿತ್ರಣಗಳು ಒಂದು ಗಾಢ ದೇಸಗತಿ ಪರಂಪರೆಯನ್ನು ಚಿತ್ರಿಸುವುದರ ಜೊತೆಗೆ ಆ ಪರಂಪರೆಗಳು ವಿಭಿನ್ನ ಘಾತಗಳಿಂದ ವಿಕೇಂದ್ರಿಕೃತಗೊಂಡು, ವಿಘಟಿತಗೊಂಡು, ವಿರೂಪಗೊಂಡು ಮುಂದುವರಿದುದರ ಚಿತ್ರಗಳೂ ಇವೆ. ಐದನೆಯದಾಗಿ ಈ ಬಗೆಯ ಪಲ್ಲಟಗಳು ಒಟ್ಟು ಪರಿಣಾಮವನ್ನು ಸಂಸ್ಕೃತಿಯ ಅವನತಿಯೆಂದು ಪರಿಭಾವಿಸುವ ಒಂದು ವರ್ಗವಿದ್ದರೆ ಆಧುನಿಕ ಶಿಕ್ಷಣ, ರಾಜಕೀಯ, ಸಾಮಾಜಿಕ ಪ್ರಜ್ಞೆ ಇವುಗಳಿಗೆ ಎಲ್ಲ ಕತ್ತಲ ಖಂಡಗಳಿಗೂ ಬಾಗಿಲು ತೆರೆದ

ಸದಾವಕಾಶವೆಂದು ಪರಿಭಾವಿಸುವ ಒಂದು ಬಗೆಯೂ ಇದೆ. ಹೀಗೆ ಎಲ್ಲ ಅಂಶಗಳು ಆಧುನಿಕ ಸಾಹಿತ್ಯದಲ್ಲಿ ಅಡಗಿಕೊಂಡಿದ್ದರಿಂದ ಅವೆಲ್ಲವುಗಳ ವಿವೇಚನೆಯಲ್ಲಿ ದೇಸಗತಿಗಳ ಚಿತ್ರಣವನ್ನು ಕಾಣಬಹುದಾಗಿದೆ.

ಅಕ್ಷರಸ್ತ ಸಮಾಜವು ಜನನುಡಿಯಲ್ಲಿ ಕಥೆ ಹೆಣೆಯಲಿಕ್ಕೆ ಪ್ರಾರಂಭಿಸಿದ್ದರ ಪ್ರಯುಕ್ತ ಮುಂದೆ ಬಂದ ಸೃಜನಶೀಲ ಕಾದಂಬರಿಕಾರರು ತಮ್ಮ ಕಾದಂಬರಿಗಳಲ್ಲಿ ಕಥಾವಸ್ತುವನ್ನಾಗಿ ಬಳಸಿಕೊಂಡಿದ್ದಾರೆ. ಕಾಲಕ್ರಮೇಣ ಇದು ಪ್ರಜಾಮುಖಿಯಾಗಿ ಹೊರ ಬಂದಿದ್ದು ವಿಶಿಷ್ಟವಾಗಿದೆ.

ನವೋದಯ, ನವ್ಯ, ನವೋತ್ತರ ಕಾವ್ಯಗಳಲ್ಲಿ ಸಹ ಭೂ ಮಾಲಿಕ ವ್ಯವಸ್ಥೆಯನ್ನು ಪ್ರತಿಭಟಿಸಿದ್ದು ಇದೆ. ಪುರುಷ ಪ್ರಧಾನವಾದ ಕಾದಂಬರಿಗಳಲ್ಲಿ ಪ್ರಧಾನವಾಗಿ ಅತ್ಯಾಚಾರ, ಕೊಲೆ, ದೌರ್ಜನ್ಯ, ಸೇಡು ಮತ್ತು ಲೈಂಗಿಕ ಶೋಷಣೆಗಳಿಗೆ ಸ್ತ್ರೀಯರನ್ನು ಬಳಸಿಕೊಂಡಿದ್ದನ್ನು ಚಿತ್ರಿಸಿದ್ದಾರೆ. ಜೊತೆಗೆ ವ್ಯಭಿಚಾರ, ಪ್ರತಿಭಟನೆ, ಸಮಾನತೆ, ಕೌಟುಂಬಿಕ ಜವಾಬ್ದಾರಿ, ಆರ್ಥಿಕ ಅವಲಂಬನೆ, ಅವಮಾನ ಮೊದಲಾದ ಅಂಶಗಳನ್ನು ಕೊಡುತ್ತಾರೆ. ಇವೆಲ್ಲ ಅಂಶಗಳು ನಡೆದುದು ಭೂ ಮಾಲಿಕರಿಂದ, ಶ್ರೀಮಂತ ವರ್ಗದಿಂದ, ಅದಕ್ಕೆ ಪ್ರತಿರೋಧವಾಗಿ ನಡೆದುದು ಕೆಳವರ್ಗದಿಂದ ಎಂಬುದು ಸಹಜವಾಗಿದೆ. ಬಲಾಢ್ಯರನ್ನು ನುಂಗದೆ ಬಲಹೀನರನ್ನು ನುಂಗಿದ್ದು ವಿಧಿತವಾಗುತ್ತದೆ. ಅವರೆ ಇವರ ಜೀತದಾಳಾಗಿರುವುದರಿಂದ ಸರಳವಾಗಿ ಶೋಷಣೆಗೆ ಒಳಗಾಗಿದ್ದು ಕಂಡುಬರುತ್ತದೆ. ಪ್ರಚಲಿತವಿದ್ದ ಮೌಖಿಕ ಕಥನಗಳನ್ನು ಶಿಸ್ತು ಬದ್ಧ ನೆಲೆಯಲ್ಲಿ ಕಾದಂಬರಿಗಳು ಕಟ್ಟಿಕೊಂಡು ಸ್ಥಾನಿಕ ಚರಿತ್ರೆಯನ್ನು ಬಿಂಬಿಸಿದವು. ಹೀಗೆ ಹಲವು ಬಗೆಯ ಸಂಕಥನಗಳು ಆಯಾ ಭಾಗದ ಕಥೆ ಕಾದಂಬರಿ ನಾಟಕಗಳಲ್ಲಿ ಚಿತ್ರಿತವಾದುದನ್ನು ಕಾಣುತ್ತೇವೆ.

ಪ್ರತಿಯೊಂದು ಸಂಸ್ಕೃತಿಗೂ ಭೌಗೋಳಿಕ ಚೌಕಟ್ಟಿನ ಜೊತೆಗೆ ಸಾಮೂಹಿಕ ಸಮಾನತೆ ಕೂಡ ಇರುತ್ತದೆ. ಪ್ರಬಂಧದಲ್ಲಿ ಪ್ರಸ್ತಾಪಿತಗೊಂಡ ಬೇರೆ ಬೇರೆ ದೇಸಗತಿಗಳ ನೇರವಾದ ಸಂಕಥನಗಳು ಇರಲಿಕ್ಕಿಲ್ಲ. ಇದ್ದರೂ ಕೂಡ ನನ್ನ ನಜರಿಗೆ ಬಾರದೆ ಉಳಿದಿರಬಹುದು. ಆದರೆ ಅಂಥ ಕಾದಂಬರಿಗಳ ನಿದರ್ಶನಕ್ಕೆ ರಂ.ಶಾ ಅವರ 'ತಾಯಿ ಸಾಹೇಬ', 'ಸರಕಾರ' ಇವು ಪೇಶ್ವೆಗಳಂಥ ಭೌಗೋಳಿಕ ಒಡನಾಟದಲ್ಲಿ ಬೆಳೆದುಬಂದಿದ್ದರಿಂದ ತೇರದಾಳದ ಪಕ್ಕದ ಸಂಕೇಶ್ವರ ಅಥಣಿ, ಹುಕ್ಕೇರಿಗಳಿದ್ದರೂ ಪರೋಕ್ಷವಾಗಿ ಅದು ಈ ಭಾಗದ ತೇರದಾಳ ಭೂಪ್ರದೇಶವನ್ನು ಸಮ ಸಮನಾಗಿ ಆವರಿಸಿಕೊಂಡಿದೆ. ಹಾಗೆ ರಾವ್‌ಬಹದ್ದೂರ ಅವರ 'ಗೌಡರ ಕೋಣ', ರಾಘುವೇಂದ್ರ ಪಾಟೀಲರ 'ದೇಸಗತಿ' ಇವು ದೇಸಗತಿಗಳನ್ನು ಮರು ರಚಿಸಿದ ಕೃತಿಗಳಾಗಿವೆ. ದೀಪಹತ್ತಿತ್ತು, ಹವನ, ಕೆ.ಎ.ಬನ್ನಟ್ಟಿಯವರ ಒಂದು ವಾಡೆ ಕಥೆ. ಶ್ರೀನಿವಾಸ ವೈದ್ಯರವರ 'ಹಳ್ಳ ಬಂತು ಹಳ್ಳ' ಇವು ಬಾಗಲಕೋಟಿ ಜಿಲ್ಲೆಯ ದೇಸಗತಿಗಳ ಹೊರ ಒಳಗಿನ ಚಿತ್ರಣಗಳು ವಿಭಿನ್ನ ನೆಲೆಗಳಲ್ಲಿ ಅಭಿವ್ಯಕ್ತಗೊಳಿಸುತ್ತವೆ.

ಒಟ್ಟಾರೆಯಾಗಿ ಸಾರ ಸಂಗ್ರಹವಾಗಿ ಕ್ರೋಢೀಕರಿಸುವುದಾದರೆ ದೇಸಗತಿಗಳ ಸ್ವರೂಪ ತಾತ್ವಿಕ ಬಗೆಗಳ ಕುರಿತ ಚರ್ಚೆಯನ್ನು ಆಧುನಿಕ ಸಾಹಿತ್ಯ ಪ್ರಕಾರಗಳಾದ ಕಥೆ, ಕಾದಂಬರಿ, ನಾಟಕಗಳಲ್ಲಿ ಕಾಣಬಹುದಾಗಿದೆ.

ದೇಸಗತಿಗಳು ಇಂದು ಹಾಳಾಗಿ ಮುಳ್ಳು ಕೊಂಪೆ ಬೆಳೆದು, ವಾಡೆಗಳು ಬಿದ್ದು ಹೋಗಿ, ಗೂಬೆ ಕೂರುವ, ಮಂಗಗಳು ವಾಸಿಸುವ, ಹಾಳುಬಿದ್ದವಾಡೆಗಳಾವೆ. 'ಗೌ' ಎನ್ನುವಂತೆ ಭಯಾನಕ ರೀತಿಯಲ್ಲಿ ಒಂಟಿ ಸಲಗದಂತೆ ನಿಂತಿವೆ. ಇದರ ವ್ಯವಸ್ಥೆಗೆ ಇಂದು ಯಾರೂ ನಿಂತಿಲ್ಲ. ಅಧಿಕಾರ ಅಳಿದ ಮೇಲೆ ಕೆಲಸಕಾರ್ಯಗಳನ್ನು ನಿರ್ವಹಿಸಲು, ತಳವಾರರು, ಆಯಗಾರರು ಇರುವುದಿಲ್ಲ. ಸಮಕಾಲೀನ ಸ್ಥಿತಿ ನೋಡಿದರೆ ಪೂಜಾರಿ ಇಲ್ಲದ ಗುಡಿಯಂತೆ ದೇಸಗತಿಗಳು ಕಂಡುಬರುತ್ತವೆ.

ಬಾಗಲಕೋಟೆ ಕ್ಷೇತ್ರವು ಆಲಮಟ್ಟಿ ಹಿನ್ನೀರಿನಲ್ಲಿ ಮುಳುಗಿದೆ. ದೇಸಗತಿಗೆ ಸಂಬಂಧಿಸಿದಂತಹ ಬಿಜಾಪುರದ ೨ ಹಳ್ಳಿಗಳು, ಬಾಗಲಕೋಟದ ೧೨ ಹಳ್ಳಿಗಳು, ಬೀಳಗಿಯ ೧೨ ಹಳ್ಳಿಗಳು, ಬಸವನ ಬಾಗೇವಾಡಿಯ ೨ ಹಳ್ಳಿಗಳು ಒಟ್ಟು ೨೮ ಹಳ್ಳಿಗಳು ನೀರು ಪಾಲಾಗಿವೆ. ಸದ್ಯದ ಪರಿಸ್ಥಿತಿ ನೀರಿನ ಮಟ್ಟ ೫೧೭.೮ ಮೀ. ಆಗಿವೆ. ೫೨೧ ಮೀ. ನೀರು ವಿಸ್ತರಿಸಿದರೆ ಇನ್ನೂ ಸುಮಾರು ಹಳ್ಳಿಗಳು ಮುಳುಗಿ ಹೋಗುತ್ತವೆ. ಇಲ್ಲಿನ ಸಾರ್ವಜನಿಕ ಬದುಕು ಚಿಂತಾಜನಕವಾಗಿದೆ. ಹೀಗೆ ರಾಜಕೀಯವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಮೌಲಿಕವಾದ ಅಧ್ಯಯನದ ಮೂಲಕ ದೇಸಗತಿಗಳ ಸಾಂಸ್ಕೃತಿಕ ಚರಿತ್ರೆಯ ಪುನಾರಚಿಸಿಕೊಳ್ಳುವ ಹಂಬಲ ನನ್ನದಾಗಿದೆ.

ಅಧ್ಯಾಯ ೨

ದೇಸಗತಿ ಅರ್ಥ ಮತ್ತು ವ್ಯಾಪ್ತಿ

೨

ದೇಸಗತಿ ಅರ್ಥ ಮತ್ತು ವ್ಯಾಪ್ತಿ

ದೇಸಗತಿ ಅರ್ಥ

ದೇಸಗತಿ ಶಬ್ದದ ರೂಪ ನಿಷ್ಪತ್ತಿಯಲ್ಲಿ ಎರಡು ಪದಗಳಿವೆ. 'ದೇಶ್ಯ' ಮತ್ತು 'ಗತಿ' ಎಂಬ ಈ ಎರಡು ಪದಗಳು ನಮಗೆ ಸ್ವತಂತ್ರವಾಗಿ ಕಾಣಸುತ್ತವೆ. 'ದೇಶ್ಯ' ಎಂಬುದು ದ್ರಾವಿಡ ಭಾಷೆಯ ಮೂಲ ಪದವಾಗಿದೆ. ಇದರ ಅರ್ಥವೆಂದರೆ ದೇಶದಲ್ಲಿ ಹುಟ್ಟಿದ, ದೇಶದಲ್ಲಿ ವಾಸಿಸುವ, ದೇಶದಲ್ಲಿ ಇರುವವ ಎಂಬುದು.' ದೇಶ ಅಂದರೆ ಸ್ಥಳ, ನಾಡು, ಪ್ರದೇಶ, ಸೀಮೆ ಎಂದಾಗುವುದು. 'ಗತ್ತು' ಅಥವಾ 'ಗತಿ' ಅಂದರೆ ಹೊಂದಿರುವುದು ಎಂದರ್ಥ. ನಾಡನ್ನು ಸೀಮೆಯನ್ನು ಅಥವಾ ಪ್ರದೇಶವನ್ನು ಹೊಂದಿರುವಂತಹದ್ದು ಎನ್ನುವ ಅರ್ಥ ಸ್ಪುರಿಸುತ್ತದೆ.

'ದೇಶ' ಸಂಸ್ಕೃತ ಪದ ದೇಸ ಎಂಬುದು ಅದರ ತದ್ಭವ' ಪದವೆನಿಸಿದೆ. ದೇಶ ಪದದೊಡನೆ ಸೇರಿದ ಪದ 'ಗತಿ' ಇವೆರಡೂ ಸೇರಿ ದೇಸಗತಿ ಎಂಬ ಪದವಾಗಿ ರೂಪಗೊಂಡಿದೆ.

ದೇಸಗತ್ತು ಅಥವಾ ದೇಸಗತಿ ಎಂಬ ಪದವನ್ನು ದೇಶ, ದೇಶಿಯ ದೇಶೋದ್ಧಾರ, ದೇಶ್ಯ, ದೇಶಿ, ದೇಸ, ದೇಸಿಗ ಎಂಬಿತ್ಯಾದಿ ಪದಗಳ ನೆಲೆಯಲ್ಲಿ ಗುರುತಿಸಬಹುದಾಗಿದೆ. ಈ ದೇಸಗತಿ ಪದ ಕುರಿತು ನಿಘಂಟು, ಸಮಾಜಶಾಸ್ತ್ರ ಮತ್ತು ಜನಸಾಮಾನ್ಯರ ಅವರ ಅಭಿಪ್ರಾಯಗಳು ಭಿನ್ನವಾಗಿವೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

ಆದಿಲ್‌ಶಾಹಿಗಳು ನೀಡಿದ ಫರ್ಮಾನ್‌ಗಳಲ್ಲಿ 'ದೇಶ' ಎನ್ನುವ ಉಲ್ಲೇಖ ದೊರೆಯುತ್ತದೆ.

ಪ್ರೊ.ಜಿ.ವೆಂಕಟಸುಬ್ಬಯ್ಯ ಅವರ ಕನ್ನಡ ಶಬ್ದಕೋಶದಲ್ಲಿ ಹೀಗೆ ಹೇಳಿದ್ದಾರೆ.

"ದೇಶ = (ನಾಮಪದ) ಜಾಗ; ಸ್ಥಳ, ಪ್ರದೇಶ, Place region ಆಡಳಿತ ಸಪ್ತಾಂಗಗಳಲ್ಲಿ ಒಂದು. ನಾಡು, ಸೀಮೆ country, Land.

ದೇಸಿಯ = ನಾಡಿನಲ್ಲಿಯೇ ಹುಟ್ಟಿದ ದೇಶಕ್ಕೆ ಸಂಬಂಧಪಟ್ಟದು. anything native, something indigenous national.

ದೇಶಕ್ಕೆ ಸಂಬಂಧಪಟ್ಟ; ನಾಡಿಗೆ ಸಂಬಂಧಿಸಿದ (ಗುಣವಾಚಕ) native indigienous.

ದೇಶೋದ್ಧಾರ = ದೇಶದ ಜನಕಷ್ಟಗಳನ್ನು ಪರಿಹರಿಸಿ ನೆಮ್ಮದಿಯನ್ನುಂಟು ಮಾಡುವುದು; ದೇಶಕ್ಕೆ ಒದಗಿದ ಆಪತ್ತನ್ನು ಪರಿಹರಿಸುವುದು. ದೇಶದ ರಕ್ಷಣೆ ಅದರ ಅಭಿವೃದ್ಧಿ saving a country from misery denger ete a miloration of a nation.

ದೇಶ್ಯ = (ನಾಮಪದ) ದ್ರಾವಿಡ ಭಾಷೆಯ ಮೂಲಪದ a word of dravidian origin (ಗುಣವಾಚಕ) ದೇಶದಲ್ಲಿ ಹುಟ್ಟಿದ, ದೇಶದಲ್ಲಿ ವಾಸಿಸುವ ದೇಶದಲ್ಲಿರುವ.

ದೇಸಿಗ = (ನಾಮಪದ) ಪರಸ್ಥಳದವನು; ಬೇರೆ ಕಡೆಯಿಂದ ಬಂದವನು, ಯಾತ್ರಿಕ a foreigner a travellar an alien, ದಿಕ್ಕಿಲ್ಲದವನು, ಗತಿಗೆಟ್ಟವನು, ಪರದೇಶಿ, ನಿರ್ಗತಿಕ a destiute a peaper a mendicant a stravelong. ಪರದೇಶಿತನದ, ನಿರ್ಗತಿಕತನದ (ಗುಣವಾಚಕ) very poor destitue, indigent, impecunious. ಇದು ಜನಪದ (ಆಡು) ಭಾಷೆಯಾಗಿದೆ. ಸ್ಥಳೀಯ ಸ್ಥಳೀಕ ನಾಡಿನವ ಎಂದರ್ಥ."[೧]

ಶಿವರಾಮಕಾರಂತರು ಸಿರಿಗನ್ನಡ ಅರ್ಥಕೋಶದಲ್ಲಿ ಹೀಗೆ ಹೇಳಿದ್ದಾರೆ.

> "ದೇಶಿ : ಮಾರ್ಗವಲ್ಲ; ನಾಡಿನ/ಜನಪದ.
>
> ದೇಸ : ಜನಪದ, ಸ್ಥಳೀಕ"[೨]
>
> ಕಿಟೆಲ್ ರ ಕನ್ನಡ-ಇಂಗ್ಲೀಷ ಶಬ್ದಕೋಶದಲ್ಲಿ ಈ ಕೆಳಗಿನಂತೆ ಇದೆ.
>
> "ದೇಸಿಯ = Local provincial nativ
>
> ದೇಸಗತಿ, ದೇಸಗತ್ತು : The office ofer desayi the head"[೩]

ಹೀಗೆ ಅನೇಕ ವಿದ್ವಾಂಸರು ದೇಸಗತಿ ಪದ ಕುರಿತು ತಮ್ಮ ಶಬ್ದಕೋಶದಲ್ಲಿ ಉಲ್ಲೇಖಿಸಿದ್ದಾರೆ. ದೇಸಗತಿ ಮನೆತನದವರನ್ನು ಸಂದರ್ಶಿಸಿದಾಗ ಅವರು ಮಾತಿನಲ್ಲೆ ಈ ರೀತಿ ಉಚ್ಚರಿಸುತ್ತಾರೆ. "ನಮ್ಮದು ನಾಡಗೌಡ ಮನೆತನರಿs ನಾಡಗೌಡ ಅಂತ ಬಿರುದು ಇದೆ. ನಮ್ಮದು ದೇಸಗತಿ ಆಡಳಿತವೆಂದೇ ಕರೆಯುತ್ತಾರೆ. ದೇಸಗತಿ ಅಂದರೆ ಸ್ಥಳೀಯ ಆಡಳಿತ ಕೇಂದ್ರದ ಹೆಸರು. ಜನಪದರ ಬಾಯಲ್ಲಿ ದೇಸಗತಿ ಅಂತ ಬರುವುದಿಲ್ಲರಿ. ದೇಸಾಯರು, ಅಥವಾ ಧನ್ಯಾರು, ಸಂಸ್ಥಾನೀಕರು ಅಂತ ಕರೀತಾರ್ರೀ. ದೇಸಾಯರ ಸ್ತ್ರೀಯರನ್ನು ಅವ್ವಾರು, ದೊರೆಸಾನಿಯವರು ಎಂದು ಕರೆದಾರ್ರೀ."[೪]

"ಈಗೀಗ ನಾವು ದೇಸಾಯರು ಅಂತ ಹೇಳತೀವ್ರಿ. ದೇಸಗತಿ ಎಂಬುದು ತಿಳಿದೇ ಇಲ್ಲರಿ, ಇವರ ಹೆಸರ ಎತ್ತಿ ಮಾತಾಡೂದ ಅಂದ್ರ ದೊಡ್ಡ ಅಪವಾದ ಇತ್ತರಿ. ನಮ್ಮ ಹಿರೇರು ಸಂಸ್ಥಾನೀಕರು ಆಗಿದ್ದರು

ಅಂತ ಹೇಳತಿದ್ದರ್ರಿ. ಈ ಭೂಮಿ ಸೀಮೆ ಎಲ್ಲಾ ಇವರದು, ಅವರು ಹೇಳ್ದಂಗ ಕೇಳಬೇಕು. ದೊಡ್ಡ ಮನುಷ್ಯರು ಕಷ್ಟ ಕಾಲದಾಗ ಆಗುವವರು, ಮೂರೂನೂರಾ ಮೂವತ್ತ ಹಳ್ಳ್ಯಾಗ ದೊಡ್ಡವರು ಅಂತ ಹೇಳತಿದ್ದರು ನಮ್ಮ ಹಿರೇರು. ಈಗ ಅದೆಲ್ಲಾ ಕಳಕೊಂಡು ಶ್ರೀಮಂತರಾಗಿ ಉಳಿದಾರ್ರಿ. ಈಗ ವಾಡೇದವರು, ದೊಡಮನಿಯವರು ಅಂತ ಕರಿತಾರ್ರಿ. ದೇಸಗತಿಯವರು ಅಂತ ಕೇಳಿಲ್ಲರಿ, ಕರೆದಿಲ್ಲರಿ''[೫]

''ನಾವು ನಾಡಗೌಡ್ರ ಬಾಗಲಕೋಟದ ಸರನಾಡಗೌಡ್ರ ಆಗಿವಿರಿ. ದೇಸಗತಿ ಅನ್ನುದು ನಮ್ಮ ಸಂಸ್ಥಾನದ ಹೆಸರು. ನಮ್ಮದು ದೊಡ್ಡ ಸಂಸ್ಥಾನ. ಈಗ ನಿವೇನು ಬೆಟ್ಟಿಕೊಟ್ಟ ಬಂದಿರೆಲ್ಲ ಅವೆಲ್ಲಕ್ಕೂ ದೇಸಗತಿ ಅಂತ ಹೆಸರು ಅದಾವರ್ರಿ. ನಾನು ಹುಟ್ಟಿ ೮೫ ವರ್ಷ ಆತು. ನಮ್ಮದು ಅದೃಶ್ಯ ಕವಿ ರಕ್ತ ಸಂಬಂಧ, ಅಂದ್ರ ಕೊಲ್ಹಾರ ದೇಸಗತಿಯವರು. ನನ್ನ ತವರ ಮನೆ ಹೆಸರು 'ದೇಸಾಯಿ' ಅಂತಾರ್ರಿ. ಅದು ಕೂಡ ದೇಸಗತಿ ಆಗಿದೆ. ನಾನು ಬಾಳಾ ಓದಿಕೊಂಡಾಕಿ ಅಲ್ಲ, ನಮ್ಮ ಧನ್ಯಾರು ಹೋದಮ್ಯಾಲ ಇಡೀ ದೇಸಗತಿ ನಾನss ನಡೆಸೀನಿ. ಈಗಲೂ ಪ್ರಜೆಗಳನ್ನ ನನ್ನ ಮಕ್ಕಳಂಗ ನೋಡಕೋತಿನಿ, ನ್ಯಾಯ ಹರಿತೀನಿ, ನನ್ನ ಮಾತಿಗೆ ಬಾಳಾ ಬೆಲೆ ಕೊಡತಾರ. ನನ್ನ ತೀರ್ಮಾನನ ಕೊನೆದು. ನನ್ನ ಪ್ರಜೆಗಳಿಗೆ ತ್ರಾಸಾದಾಗ ಬಾ ನಾ ಅದೀನಿ ಅಂತ ಹೇಳತಿನಿ''[೬] ಎಂದು ಗಂಗಮ್ಮ ಗೌಡಶ್ಯಾನಿ ಹೇಳುತ್ತಾರೆ.

ಈ ಎಲ್ಲ ಮಾತುಗಳನ್ನು ಗಮನಿಸಿದಾಗ ದೇಸಗತಿ ಪದ ಬಳಕೆಯಾಗದೇ ಸಂಸ್ಥಾನೀಕರಣದೆ ಹೆಚ್ಚು ಬಳಕೆಯಾಗಿದ್ದು ತಿಳಿದುಬರುತ್ತದೆ. ಒಟ್ಟಾರೆ ದೇಸಗತಿ ಎಂಬುದು ಆಡಳಿತ ಕಛೇರಿ, ಅಥವಾ ಆಫೀಸ್ ಎಂದರ್ಥವಾಗುತ್ತದೆ. ಇಲ್ಲಿಯವರೆಗೆ ದೇಸಗತಿ ಪದದ ಕುರಿತು ಹಲವಾರು ನೆಲೆಗಳನ್ನು ಅವಲೋಕಿಸಿದಾಗ ತಕ್ಕಮಟ್ಟಿಗೆ ಉತ್ತರ ಸಿಕ್ಕರೂ ಪರಿಪೂರ್ಣವಾಗಲಿಲ್ಲವೆನಿಸುತ್ತದೆ. ಆದರೂ ತಕ್ಕಮಟ್ಟಿಗೆ ಸಮಾಧಾನ ಸಿಕ್ಕಿದೆ. ಇನ್ನೂ ಮುಂದುವರಿದಂತೆ ದೇಸಗತಿ ಎಂದರೇನು? ಎಂಬ ಪ್ರಶ್ನೆಗೆ ಉತ್ತರ ಹುಡುಕುವಾಗ ಇನ್ನಷ್ಟು ಆಧಾರಗಳು ನಮಗೆ ಲಭ್ಯವಾಗುತ್ತವೆ. ಮತ್ತು ಅದರ ವ್ಯಾಪ್ತಿ ಕೂಡ ಇಲ್ಲಿ ಸ್ಪಷ್ಟವಾಗುತ್ತದೆ.

ಒಂದು ನಿರ್ದಿಷ್ಟ ಪ್ರದೇಶವನ್ನು ಹೊಂದಿ ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವದವರೆಗೆ ಆಡಳಿತ ವಿಕೇಂದ್ರಿಕರಣಗೊಂಡ ಜನಪದರ ಸರ್ಕಾರದ ಪ್ರಮುಖ ಸ್ಥಾನವೇ ದೇಸಗತಿ ಎನ್ನಬಹುದು. ಊಳಿಗಮಾನ್ಯ ಪದ್ಧತಿಯಂತೆ ಆಡಳಿತ ನಡೆಸಿರುವುದೇ ದೇಸಗತಿ. ರಾಜಮಹಾರಾಜರಿಂದ ಉಂಬಳಿ ಪಡೆದುಕೊಂಡು ಸಾಮ್ರಾಜ್ಯದಲ್ಲಿ ಭಾಗಶಃ ಸ್ವಾತಂತ್ರ್ಯವನ್ನು ಹೊಂದಿದ ಸಾಮಂತರ ಆಡಳಿತವೇ ದೇಸಗತಿ. ಸ್ಥಳೀಯ ಆಡಳಿತದ ನೇತೃತ್ವವಹಿಸಿದ್ದು ದೇಸಗತಿ. ರಾಜ್ಯ-ಪ್ರಾಂತ-ಸರ್ಕಾರ-ಪರಗಣ ಹೀಗೆ ಆಡಳಿತದ ಕೊನೆ ಘಟ್ಟವೇ ದೇಸಗತಿ. ಜನರನ್ನು ನಂಬಿದ, ನಂಬಿಸಿದ, ವಿಶ್ವಾಸಪಡೆದ ಅಲ್ಲದೆ ಜನರ ಒಪ್ಪಿಗೆಯು, ಅಧಿಕಾರ ಪಡೆದುದೇ ದೇಸಗತಿ. ಅರಸರಿಂದ ಪ್ರಭುತ್ವ ಪಡೆದು ಅಧಿಕಾರ ನಡೆಸುವುದೇ ದೇಸಗತಿ, ಪ್ರಭುತ್ವಕ್ಕಿಂತ ಜನರ ಹಿತಕ್ಕಾಗಿ ಇರುವ ಜನತೆಯ ಸಮೀಪವಿರುವ ಸಂಸ್ಥಾನೀಕರ ಆಡಳಿತವೇ ದೇಸಗತಿ.

ಹೀಗೆ ಮಧ್ಯಕಾಲೀನ ರಾಜಕೀಯ ಕಾಲಾವಧಿಯಲ್ಲಿದ್ದ ವಿಕೇಂದ್ರೀಕರಣ ವ್ಯವಸ್ಥೆಯನ್ನು ದೇಸಗತಿ ಆಳಿದ ಅಧಿಕಾರ ಭಾಗವೆಂದು ಗುರ್ತಿಸಲಾಗಿದೆ. ಪ್ರಜಾ ಜನರಿಗೆ ಸ್ಪಂದಿಸುತ್ತ ನಡೆಸಿದ ಗ್ರಾಮ ಸಮುದಾಯದ ಆಡಳಿತದ ಭಾಗವೇ ದೇಸಗತಿಯಾಗಿದೆ. ಹೀಗೆ ದೇಸಗತಿ ವ್ಯಾಖ್ಯೆಯನ್ನು ಬಹುನೆಲೆಯಲ್ಲಿ ಗುರ್ತಿಸಿಕೊಳ್ಳಲಾಗಿದೆ. ಅದರ ಹಕ್ಕು ಬಾಧ್ಯತೆಗಳೂ ಕೂಡ ಮಹತ್ವವಾಗಿವೆ. ಇದು ಪ್ರಜಾಪಾಲಕರ ಹಾಗೂ ಅರಸುಗಳವರ ನಡುವೆ ಸೇತುವೆಯಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ದೇಸಗತಿಯ ವಿಶಾಲ ಅರ್ಥವು ಕಂಡುಬರುತ್ತದೆ.

''ರಾಜನು ಒಬ್ಬ ನಾಯಕನಿಗೆ ಸೈನಿಕ ಸೇವೆ ಹಾಗೂ ಇತರೆ ಕೆಲವು ಷರತ್ತಿನ ಮೇಲೆ ಭೂಮಿಯನ್ನು ಕೊಡುತ್ತಿದ್ದುದೇ 'ನಾಯಂಕರ ಪದ್ಧತಿ'.''[೨] ಇದು ವಿಜಯನಗರ ಸ್ಥಳೀಯ ಸರಕಾರದಲ್ಲಿತ್ತು. ಇದೇ ಮಾದರಿಯಲ್ಲಿ ಮುಂದುವರಿದ ಆಡಳಿತವು ಆದಿಲ್‌ಶಾಹಿಗಳ ಆಡಳಿತದಲ್ಲಿ ವಿಜಯನಗರ ಪತನದ ನಂತರ 'ದೇಶಕ್' > ದೇಸಗತಿ ಎಂಬ ಹೆಸರಿನಿಂದ ಆಡಳಿತ ವ್ಯವಸ್ಥೆಯಾಗಿ ಮೂಡಿ ಬಂದಿತು. ಇಂಥ ವ್ಯವಸ್ಥೆಯಲ್ಲಿ ಕಪ್ಪಕಾಣಿಕೆ ಕೊಟ್ಟು ಕಂದಾಯ ವ್ಯವಸ್ಥೆಗಾಗಿ ಪರಬಾರೆ ಮಾಡಿದ ವ್ಯವಸ್ಥೆಯೇ ದೇಸಗತಿಯಾಗಿದೆ. ''ಒಂದು ನಿಗದಿಯಾದ ಆದಾಯವನ್ನು ತರುತ್ತಿದ್ದ ಪ್ರದೇಶದ ಆಡಳಿತದ ಹೆಸರೇ ದೇಸಗತಿ''[೩] ಹೀಗೆ ಸುಮಾರು ಗ್ರಾಮಗಳನ್ನು ಪರಗಣದಲ್ಲಿ ಸೇರಿಸಿಕೊಂಡು ಅದರ ಮುಖಾಂತರ ಆಡಳಿತ ನಡೆಸುತ್ತಿದ್ದುದು ಕಂಡುಬರುತ್ತದೆ. ಪರಗಣ ಎಂದರೇನು? ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ವಿಶ್ಲೇಷಿಸಿದೆ. ಅರಸುಗಳ ಸಾಮಂತರಾಗಿ ಗ್ರಾಮೀಣ ಭಾಗದಲ್ಲಿಯೇ ಆಡಳಿತ ನಡೆಸುತ್ತಿದ್ದರು. ಇವರಿಗಿದ್ದ ಅಧಿಕಾರಗಳು ಅರಸರಿಂದ ದತ್ತವಾಗಿ ಬಂದವುಗಳೇ ಆಗಿವೆ. ಅಂಥವುಗಳನ್ನು ಅಳವಡಿಸಿಕೊಂಡು ಆಡಳಿತದ ಕಾರ್ಯಬಾಹುಳ್ಯಗಳನ್ನು ಹೆಣೆದುಕೊಂಡು ದೇಸಗತಿ ಎಂಬ ಹೆಸರಿನಿಂದ ಸ್ಥಳೀಯ ಆಡಳಿತ ಹೊಂದಿದ್ದಾಗಿದೆ. ಹೀಗೆ ದೇಸಗತಿ ವಿಶಾಲ ನೆಲೆಯನ್ನು ಹೊಂದಿ ಆಯಾ ಭಾಗದಲ್ಲಿ ಜನಸಂಸ್ಕೃತಿಗೆ ನೀಡಿದ ಕಾಣಿಕೆಯನ್ನು ಬಹಳ ಮಹತ್ವದ್ದೆಂದು ತಿಳಿಯಲು ಮೇಲಿನ ಆಧಾರಗಳು ಸಾಕ್ಷಿಯೊದಗಿಸುತ್ತವೆ.

ದೇಸಗತಿಗಳ ವ್ಯಾಪ್ತಿ

ಉತ್ತರ ಕರ್ನಾಟಕದಲ್ಲಿ ದೇಸಗತ್ತು, ದೇಸಗತಿ ಎಂದು ಪ್ರಸಿದ್ಧವೆನಿಸಿದ ಮನೆತನಗಳ ಕುರಿತು ಇದುವರೆಗೂ ಅಂಥ ಗಂಭೀರವಾದ ಸಂಶೋಧನೆಯಾಗಲಿ ಅಥವಾ ಅಧ್ಯಯನವಾಗಲಿ ನಡೆದಿಲ್ಲ. ೧೯೮೬ರಲ್ಲಿ ಡಾ.ಎಂ.ಎಂ. ಕಲಬುರ್ಗಿಯವರ ಪ್ರಯತ್ನದ ಪ್ರಯುಕ್ತ ಐದಾರು ದೇಸಗತಿ ಮನೆತನಗಳ ಕುರಿತು ಬಿಜಾಪೂರದಲ್ಲಿ ಉಪನ್ಯಾಸವೇರ್ಪಟ್ಟಿತು. ಮರು ವರುಷವೇ ಅಂದರೆ ೧೯೮೭ರಲ್ಲಿ ಮತ್ತೆ ಬೆಳಗಾವಿ ಜಿಲ್ಲೆಯ ದೇಸಗತಿ ಕುರಿತು ಉಪನ್ಯಾಸ ನಡೆದುಕೊಂಡುಬಂದಿತು. ಮುಂದೆ ಈ ಕುರಿತಾದ ಚಿಂತನೆ ನಡೆಯದೇ ತಟಸ್ಥವಾಯಿತು. ಅವರೇ ಹೇಳುವಂತೆ ''ಚಾರಿತ್ರಿಕವಾಗಿ ಈ ಮನೆತನಗಳು

ಒರೆಕೋರೆಗಳನ್ನು ಹೊಂದಿದ್ದರೂ ಪ್ರಜಾವ್ಯವಸ್ಥೆಯಲ್ಲಿ ಅವುಗಳ ಪಾತ್ರ ಪ್ರಮುಖವಾದುದಾಗಿದೆ. ಈ ದೆಸೆಯಿಂದ ಮರೆಮಾಚಿ ಹೋಗಿರುವ ಅವುಗಳ ಉತ್ತಮಾಂಶಗಳನ್ನು ಬಯಲು ಮಾಡುವುದು ತೀರ ಅಗತ್ಯದ ಸಂಗತಿಯೆನಿಸುತ್ತದೆ. ಈ ವಿಷಯವನ್ನು ಅಧ್ಯಯನಕ್ಕೊಳಪಡಿಸಿ ಒಂದು ಚೌಕಟ್ಟನ್ನು ಹಾಕಿಕೊಂಡು ಅದರ ಒಳಗಡೆ ಬರುವಂತೆ ಕೆಲವು ದೇಸಗತಿಗಳನ್ನು ಆಯ್ದುಕೊಂಡು ಅಧ್ಯಯನಿಸಲಾಗಿದೆ. ಅಖಂಡ ವಿಜಾಪೂರ ಜಿಲ್ಲೆ ಆಡಳಿತಾತ್ಮಕವಾಗಿ ವಿಜಾಪೂರ ಮತ್ತು ಬಾಗಲಕೋಟೆ ಎಂದು ವಿಭಾಗಿಸಲ್ಪಟ್ಟಿದೆ. ಪ್ರಸ್ತುತ ಅಧ್ಯಯನವು ಬಾಗಲಕೋಟೆ ಜಿಲ್ಲೆಯ ಪರಿಧಿಗೆ ಮಾತ್ರ ಸೀಮಿತವಾಗಿದ್ದು ಅಲ್ಲಿ ಬರುವ ಇಪ್ಪತ್ತು ದೇಸಗತಿಗಳು ಈ ಪರಿಧಿಯನ್ನೊಳಗೊಂಡಿವೆ. ಅವುಗಳಲ್ಲಿ ದೇಸಾಯಿಗಳು, ನಾಡಗೌಡರು ಸೇರಿರುವುದು ಪ್ರಮುಖವಾಗಿದೆ.

ಪ್ರಾಚೀನ ಮತ್ತು ಮಧ್ಯಯುಗದ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಗ್ರಾಮಾಡಳಿತ ಅಥವಾ ಸ್ಥಳೀಯ ಸರಕಾರಗಳು ಹುಟ್ಟಲು ಕಾರಣವಾದ ಅಂಶಗಳನ್ನು ಅಧ್ಯಯನಕ್ಕೊಳಪಡಿಸುತ್ತಲೆ ಪ್ರಜಾಪ್ರಭುತ್ವದ ಹಂತದವರೆಗಿನ ಆಡಳಿತ ಹಾಗೂ ಅದರ ಏಳು-ಬೀಳುಗಳನ್ನು ನಾನಿಲ್ಲಿ ಗಮನಿಸಿದ್ದೇನೆ. ಅಧ್ಯಯನಕ್ಕೆ ಸ್ವೀಕರಿಸಿದ ದೇಸಗತಿ ಮನೆತನಗಳು ಒಂದೇ ಮನೆತನಕ್ಕೆ ಸೇರಿದವುಗಳಲ್ಲ. ವೀರಶೈವ (ಲಿಂಗಾಯತ) ವೀರಶೈವೇತರ ಮತಗಳಿಗೆ ಸೇರಿದ ಮನೆತನಗಳ ಪರಂಪರೆಯನ್ನು ಉಗಮ, ವಿಕಾಸಗಳ ಹಿನ್ನೆಲೆಯಿಂದ ವಿಶ್ಲೇಷಿಸುವುದು ಇಲ್ಲಿನ ಮುಖ್ಯ ಉದ್ದೇಶವಾಗಿದೆ.

ಪ್ರತಿಯೊಂದು ದೇಸಗತಿ ಮನೆತನಗಳು ತನ್ನದೇ ಆದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಹಿತ್ಯಿಕ ಹಿನ್ನೆಲೆಗಳಿರುವುದು ಸ್ಪಷ್ಟ. ಅವುಗಳನ್ನು ನನಗೆ ಲಭ್ಯವಾಗಿರುವ ಆಧಾರ, ಪ್ರಮುಖ ದಾಖಲೆಗಳಿಂದ ಪರಿಶೀಲಿಸಿದ್ದೇನೆ. ಈಗಲೂ ಬದುಕಿರುವ ದೇಸಗತಿ ವಂಶಸ್ಥರು ನನ್ನ ಅಧ್ಯಯನಕ್ಕೆ ವಾಸ್ತವದ ಮೆರೆಗು ನೀಡುವಲ್ಲಿ ಸಹಕರಿಸಿದ್ದಾರೆ.

ಇಪ್ಪತ್ತರಿಂದ ಮೂವತ್ತರವರೆಗೆ ಇಂಥ ದೇಸಗತಿ ಮಾಲೀಕರು ನನಗೆ ಸಿಕ್ಕಿದ್ದಾರೆ. ಅವರಲ್ಲಿ ಕೆಲವರು ತಮ್ಮ ಪ್ರಚಾರ ಸಾಮಾಜಿಕ ಕಾರ್ಯ, ಜನರ ಬಗ್ಗೆ ಹೊಂದಿದ್ದ ಕಾಳಜಿ ಚಿಂತನೆಗಳಿಂದ ಚರಿತ್ರಾರ್ಹ ಒಡೆಯರೆನಿಸಿದ್ದಾರೆ. ದೊರೆಗಳೆಂದು ಪ್ರಜೆಗಳಿಂದ ಕರೆಯಿಸಿಕೊಂಡಿದ್ದಾರೆ. ಅವರ ಚಾರಿತ್ರಿಕ ಹಿನ್ನೆಲೆ, ಮುದ್ರೆಗಳು, ಖಡ್ಗ, ಕಠಾರಿ, ಅವರ ಬಗೆಗಿನ ಜನರಿಂದ ವ್ಯಕ್ತವಾದ ಮಾಹಿತಿಗಳು ದೇಸಗತಿ ಮನೆತನಗಳ ಸಮಗ್ರ ತಿಳುವಳಿಕೆಗೆ ಹೆಚ್ಚಿನ ಪುಷ್ಠಿ ನೀಡುತ್ತವೆ.

ಈ ದೇಸಗತಿ ಮನೆತನಗಳು ತಮ್ಮ ಸುತ್ತಮುತ್ತಲಿನ ಗ್ರಾಮಗಳನ್ನು ಭೌಗೋಳಿಕ ಪ್ರದೇಶಗಳನ್ನು ತಮ್ಮ ಅಧೀನದಲ್ಲಿಟ್ಟಕೊಂಡಿದ್ದವು. ಇವುಗಳ ಮೇಲಿಂದ ಆಯಾ ಮನೆತನಗಳಿಗೆ ಬಿರುದು ಬಾವಲಿಗಳು ಪ್ರಾಪ್ತವಾಗಿದ್ದವು. ದೇಸಗತಿಗಳ ಒಳಾಡಳಿತವನ್ನು ಅವುಗಳು ಸೃಜಿಸಿದ ಸಾಂಸ್ಕೃತಿಕ ನೆಲೆಯನ್ನು ಸಮಗ್ರವಾಗಿ ತಿಳಿಯಲು ಈ ಅಧ್ಯಯನವು ತನ್ನ ವ್ಯಾಪ್ತಿಯನ್ನು ಹೊಂದಿದೆ.

ಉಳಿದ ಮನೆತನಗಳಿಂದ ಲಭ್ಯವಾಗುವ ಸಂಗತಿಗಳನ್ನು ಅವುಗಳ ಭೌಗೋಳಿಕ ಪ್ರದೇಶಗಳನ್ನು ಆಧರಿಸಿ ಅಧ್ಯಯನಕ್ಕೆ ಒಂದು ಶಿಸ್ತು ಜೋಡಿಸಲಾಗಿದೆ. ಹೀಗೆ ಸದ್ಯ ಉಕ್ತವಾಗಿರುವ ಪ್ರದೇಶವನ್ನು ಗುರ್ತಿಸಿಕೊಂಡು ನಿರೂಪಿಸಿಕೊಳ್ಳಲಾಗಿದೆ. ಜಿಲ್ಲೆಯ ದೇಸಗತಿಗಳ ವ್ಯಾಪ್ತಿ ಈ ಕೆಳಗಿನಂತಿದೆ

೧. ಬಾಗಲಕೋಟಿ ಜಿಲ್ಲೆಯ ಪೂರ್ವದಲ್ಲಿ ಕಂದಗಲ್ಲ, ಕರಡಿ, ಐಹೊಳೆ, ರಕ್ಕಸಗಿ ದೇಸಗತಿಗಳಿವೆ.

೨. ಪಶ್ಚಿಮದಲ್ಲಿ ಲೋಕಾಪುರ, ಮುದ್ದಾಪೂರ ಕುಳಲಿ, ಜಮಖಂಡಿ (ಕೋಣೆಗನೂರ) ತೇರದಾಳ ದೇಸಗತಿಗಳಿವೆ.

೩. ಉತ್ತರದಲ್ಲಿ ಕೃಷ್ಣಾನದಿಯ ದೋ ಅಬ್ ಪ್ರದೇಶದಲ್ಲಿ ಗಿರಿಸಾಗರ, ಸಿರಗುಪ್ಪಿ, ಗಲಗಲಿ ಯಡಹಳ್ಳಿ, ಸೊನ್ನ, ಬಿದರಿ ದೇಸಗತಿಗಳಿವೆ.

೪. ದಕ್ಷಿಣ ಭಾಗದಲ್ಲಿ ಜಾಲಿಹಾಳ (ಬೇಲುಗಿರಿ), ಕೆರಕಲಮಟ್ಟಿ, ಯಂಡಿಗೇರಿ (ನೀರಬೂದಿಹಾಳ), ಕೋಟೆಕಲ್ಲ ದೇಸಗತಿಗಳಿವೆ.

೫. ಕೇಂದ್ರಸ್ಥಾನವಾದ ಬಾಗಲಕೋಟಿ ಜಿಲ್ಲೆಯ ಸುತ್ತಮುತ್ತ ಮನ್ನಿಕೇರಿ, ಹೊನ್ನಿಹಾಳ ಹಾಗೂ ಮಲ್ಲಗ್ರಾಮವನ್ನು ತನ್ನ ಒಡೆತನದಲ್ಲಿರಿಸಿಕೊಂಡು ಕೇಂದ್ರಸ್ಥಾನದಿಂದ ಆಡಳಿತ ನೀಡಿದೆ.

"ಬಾಗಲಕೋಟಿ ಜಿಲ್ಲೆಯೂ ಅಂದೂ ಕೂಡ ಪಟ್ಟಣವಾಗಿತ್ತೆಂದು ಈ ಪಟ್ಟಣದ ಪಟ್ಟಣಶೆಟ್ಟಿಯೇ 'ಮಲ್ಲ' ಗ್ರಾಮದಲ್ಲಿದ್ದು ಅವನ ಮಧ್ಯಸ್ಥಗಾರಿಕೆಯಲ್ಲಿ ನಡೆದಿತ್ತೆಂದು ತಿಳಿದುಬರುತ್ತದೆ."

ಹೀಗೆ ಒಟ್ಟು ದೇಸಗತಿಗಳು ಸುತ್ತೆಲ್ಲವೂ ವ್ಯಾಪ್ತಿ ಹೊಂದಿದ್ದು ಕಂಡುಬರುತ್ತದೆ. ಅವುಗಳನ್ನು ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಅಧ್ಯಯನಿಸುವುದು ಇದಕ್ಕೆ ವಿಭಿನ್ನ ಶಿಸ್ತುಗಳ ಸಹಾಯ ಪಡೆದುಕೊಂಡು ಒಂದು ಸ್ಥಳೀಯ ಚಾರಿತ್ರಿಕ ಸಂಕಥನವನ್ನು ಕಟ್ಟಿಕೊಡುವುದು ಇಲ್ಲಿನ ಅಧ್ಯಯನದ ಬಹುಮುಖ್ಯ ಉದ್ದೇಶವಾಗಿದೆ.

೨.೧. ಉಗಮ, ವಿಸ್ತಾರ

ದೇಸಗತಿ ಉಗಮ

ದೇಸಗತಿಗಳ ಉಗಮದ ಕುರಿತು ಯಾವುದೇ ರೀತಿಯ ಸ್ಥಿರ ದಾಖಲೆಗಳು ಇಲ್ಲ. ದೇಸಗತಿಯವರು ಬರೆದಿಟ್ಟ ಡೈರಿಗಳು, ಕೋರ್ಟ ಕಛೇರಿಗೆ ಸಲ್ಲಿಸಿದ ದಾಖಲೆಗಳೇ ಆಕರಗಳಾಗಿವೆ. ಇವುಗಳ ಮುಖೇನ ದೇಸಗತಿ ಉಗಮ ವಿಸ್ತಾರದ ಸಂಗತಿಗಳ ಕುರಿತು ವಿವರಿಸಲಾಗಿದೆ.

ಈಗಿನ ಬಾಗಲಕೋಟಿ ಜಿಲ್ಲೆಯು ಕೃಷ್ಣಾನದಿಯ ದಕ್ಷಿಣ ಭಾಗದಲ್ಲಿದೆ. ವಿಜಯನಗರ ಸಾಮ್ರಾಜ್ಯದ ಪೂರ್ವದಲ್ಲಿಯೇ ಆನೆಗುಂದಿ ಸಾಮ್ರಾಜ್ಯವು ಕೃಷ್ಣಾನದಿಯವರೆಗೆ ಹಬ್ಬಿತ್ತು. ಇದು ಪತನವಾದ ನಂತರ

ಬದುಕಿ ಉಳಿದ ಕೆಲವು ಒಡೆಯರು ಜೀವನೋಪಾಯಕ್ಕಾಗಿ ಕೃಷ್ಣಾನದಿಯ ಸರಹದ್ದಿಗೆ ವಲಸೆ ಬಂದು 'ನಾಯಕ', 'ಒಡೆಯ' ಎನಿಸಿಕೊಂಡರು.

ವಿಜಯನಗರ ಸಾಮ್ರಾಜ್ಯದ ಪತನ (ಕ್ರಿ.ಶ.೧೫೬೫)ದ ನಂತರ ಸುಮಾರು ೨೫೦ ವರ್ಷಗಳವರೆಗೆ ಇಡೀ ಉತ್ತರ ಕರ್ನಾಟಕವು ವಿವಿಧ ರಾಜರ ಪುಂಡರ ದಾಳಿಗಳಿಗೆ ಪದೇ ಪದೇ ತುತ್ತಾಯಿತು. ವಿಜಯನಗರ ಸಾಮ್ರಾಜ್ಯ ಪ್ರಾಂತಕ್ಕೆ ಸಂಬಂಧಿಸಿದ ಕೆಲವು ಪ್ರಮುಖರು ಜೀವನ್ಮರಣದ ತೂಗುಯ್ಯಾಲೆಯಲ್ಲಿದ್ದರು. ಇಂಥವರೆಲ್ಲ ಬಹಮನಿ ಸುಲ್ತಾನರ ಸೆರೆಯಲ್ಲಿ ಸಿಕ್ಕು ಅವರ ಅಧೀನಕ್ಕೆ ಒಳಗಾದರು. ಅಂಥವರಿಗೇನೇ ಭೂಮಿ ಸೀಮೆ ನೀಡಿದರು. ತಮ್ಮ ಸಾಮ್ರಾಜ್ಯದ ವಿಸ್ತಾರವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಸುಸಜ್ಜಿತ ಆಡಳಿತದ ಸೂತ್ರವನ್ನು ಕಂಡುಕೊಂಡರು. ಸ್ಥಳೀಯ ಮಟ್ಟದ ನಾಯಕ, ಒಡೆಯರ ಪ್ರಮುಖರೆನ್ನುವವರಿಗೆ ಆಡಳಿತದ ಅಧಿಕಾರವನ್ನು ವಹಿಸಿಕೊಟ್ಟರು. ಇದರ ಹಿನ್ನೆಲೆಯಲ್ಲಿ ಬಹಮನಿಸುಲ್ತಾನರ ಕಾಲವೇ ದೇಸಗತಿ ಉಗಮದ ಕಾಲವೆಂದೇ ಹೇಳಬಹುದು. ಬಹಮನಿಸುಲ್ತಾನರ ಬಿಗಿ ಭದ್ರತೆಯಲ್ಲಿ ಸಾಗಿಬಂದ ಈ ಆಡಳಿತ ವ್ಯವಸ್ಥೆಯ ನೇತಾರರಾದ ನಾಯಕ, ಒಡೆಯರು, 'ದೇಸಾಯಿ' ಎಂಬ ನಾಮ ಹೊತ್ತವರೆಂದು ತಿಳಿದುಬರುತ್ತದೆ. ಪ್ರಮುಖ ವತನದಾರರಾಗಿ ಆಳರಸರಿಗೆ ನಿಷ್ಠೆತೋರಿ ವಿಶ್ವಾಸಗಳಿಸಿ ಉಪಯುಕ್ತ ಆಡಳಿತ ನಡೆಸಿ ಅವರಿಂದ ಪ್ರೋತ್ಸಾಹ ಪಡೆದು, ಕಾಲಕಾಲಕ್ಕೆ ಇನಾಂ ಗಳಿಸಿ ದೇಸಖ್ (ದೇಸಗತಿ) ಎಂಬ ಆಡಳಿತದ ಕೇಂದ್ರ ಸ್ಥಾಪಿಸಿಕೊಂಡು ಪ್ರವರ್ಧಮಾನಕ್ಕೆ ಬಂದರು.

ಹಾಗೇ ಮರಾಠರ ಕಾಲದಲ್ಲಿ 'ದೇಸಾಯಿ' ಎಂಬ ನಾಮಹೊತ್ತು ಆಡಳಿತ ನಡೆಸಿದ್ದೂ ತಿಳಿದು ಬರುತ್ತದೆ. ಒಟ್ಟಿನಲ್ಲಿ ದೇಸಗತಿ ಪಟ್ಟವು ಒಮ್ಮೆಲೆ ದೊರೆತುದಲ್ಲ. ಆಳರಸರಿಗೆ ಒಮ್ಮತ ತೋರಿದ್ದರಿಂದ, ಗಡಿ ರಕ್ಷಣೆ ಹೊತ್ತಿದ್ದರಿಂದ, ಅಧಿಕಾರಿಗಳಿಂದ ಕರೆಬಂದಾಗ ಸಹಾಯ ಸಲ್ಲಿಸಿ, ಅನಿವಾರ್ಯತೆಯ ಸಂದರ್ಭದಲ್ಲಿ ಸ್ವತಃ ರಣರಂಗದಲ್ಲಿ ರಣಕಲಿಗಳಾಗಿ ಹೊರಾಡಿದ್ದು ಉಂಟು. ಅಂದರೆ ಆಳರಸರ ಅರಸುತನಕ್ಕೆ ರಾಜ್ಯವಿಸ್ತರಣೆಯ ಸಂರಕ್ಷಣೆಗೆ, ಆಡಳಿತದ ಹೊಣೆಗಾರಿಕೆಗೆ ಇವರು ಸಹಕರಿಸುತ್ತಿದ್ದರು. ಹಾಗಾಗಿ ರಾಜರಿಂದ ನೇಮಕಗೊಂಡ ಅಧಿಕಾರಿಗಳಾದರು, ರಾಜರ ಸಾಮಂತರಾಗಿದ್ದುಕೊಂಡು ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ನಿಭಾಯಿಸುತ್ತಿದ್ದರು. ಹೀಗೆ ದೇಸಗತಿ ನಾಮ ಹೊತ್ತು ಪ್ರಾಂತೀಯ ಸರಕಾರದ ಮಾದರಿಯಲ್ಲಿರುವ ಚಿಕ್ಕ ಪುಟ್ಟ ಆಡಳಿತದ ವಿಭಾಗವಾಗಿದ್ದುದು ಕಂಡುಬರುತ್ತದೆ. ಸ್ಥಳೀಯ ಆಡಳಿತದ ಈ ವಿಭಾಗವನ್ನು ದೇಸಗತಿ ಎಂದು ಕರೆಯಲಾಗಿದೆ.

ವಿಸ್ತಾರ

"ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿ ಸುಮಾರು ಐದನೂರಾ ಅರವತ್ತೆಂಟು (೫೬೮) ದೇಸಗತಿಗಳಿದ್ದವು. ಇಂಥ ಒಂದು ಸಂದರ್ಭದಲ್ಲಿ ಕರ್ನಾಟಕದಲ್ಲಿಯೂ ಚಿಕ್ಕಪುಟ್ಟ ದೇಸಗತಿಗಳು ತಮ್ಮ ಅಸ್ತಿತ್ವವನ್ನು

ಉಳಿಸಿಕೊಂಡಿದ್ದವು.[೧೧] ದೇಸಗತಿಯ ದೊರೆಗಳೆನಿಸಿಕೊಂಡ ದೇಸಾಯಿ, ದೇಸಮುಖಿ ಹಾಗೂ ನಾಡಗೌಡರು ಈ ಹೆಸರುಗಳು ಮುಂಬೈ ಕರ್ನಾಟಕ, ನಿಜಾಂ ಕರ್ನಾಟಕದ ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದವು. ಹಳೆ ಮೈಸೂರ ಭಾಗಗಳಲ್ಲಿ ಇವುಗಳು ಕಂಡುಬರುವುದಿಲ್ಲ. ತಮ್ಮ ಅಸ್ತಿತ್ವವನ್ನು ನಿರಂತರ ಕಾಯ್ದುಕೊಳ್ಳುವುದಕ್ಕಾಗಿ ಸಂಘರ್ಷಾತ್ಮಕ ಹೋರಾಟವನ್ನು ಮಾಡಿದ ದೇಸಗತಿಗಳು ಕೆಲವು ಕಂಡುಬರುತ್ತವೆ. ರಾಜರೆನಿಸಿಕೊಂಡ ಕೆಲವು ಸಂಸ್ಥಾನಗಳು ಸರ್ಕಾರವೆನಿಸಿಕೊಂಡಿವೆ. ಇವು ಸಹ ಹೋರಾಟ ಮಾಡಿವೆ. ಅಂಥವುಗಳಲ್ಲಿ ಮುಧೋಳ, ಜಮಖಂಡಿ, ರಾಮದುರ್ಗ, ಸೊಂಡೂರ, ನರಗುಂದ, ಕಿತ್ತೂರ ಮುಂತಾದವುಗಳನ್ನು ಹೆಸರಿಸಬಹುದು. ಈ ದೇಸಗತಿಗಳಲ್ಲಿ ಕೆಲವು ವೀರಶೈವ ಮನೆತನಗಳು ಕಂಡುಬಂದರೆ ಇನ್ನೂ ಕೆಲವು ವೀರಶೈವೇತರ ಮನೆತನಗಳು ಕಂಡುಬರುತ್ತವೆ.

ಬಹಮನಿ ಸುಲ್ತಾನರ ಸಾಮ್ರಾಜ್ಯ ವಿಸ್ತರಣೆಯ ವ್ಯಾಪ್ತಿಗೆ ಒಳಪಟ್ಟ ಬಾಗಲಕೋಟೆ ಜಿಲ್ಲೆ ತನ್ನ ಎಲ್ಲೆ ಮೀರಿ ಬೆಳೆಯಲು ಈ ಭಾಗದಲ್ಲಿ ಚಿಕ್ಕ ಪುಟ್ಟ ಸಂಸ್ಥಾನಗಳಿಗೆ ಪ್ರೋತ್ಸಾಹಪಿತ್ತರು. ವಿಜಯನಗರ ಸಾಮ್ರಾಜ್ಯದ ಸರಹದ್ದಾದ ಕೃಷ್ಣಾನದಿಯ ದಕ್ಷಿಣ ಭಾಗ ಸಂಪೂರ್ಣವಾಗಿ ಬಹಮನಿ ಸುಲ್ತಾನರ ವಶವಾಯಿತು. ಕ್ರಿ.ಶ.೧೫೬೫ರ ನಂತರ ಆದಿಲ್‌ಶಾಹಿಗಳು ತಾಳಿಕೋಟೆ ಕದನದ ನಂತರ ಕೃಷ್ಣಾನದಿಯ ದಕ್ಷಿಣ ಭಾಗಕ್ಕೆ ಊರಿನ ನಾಯಕರೆನಿಸಿಕೊಂಡವರಿಗೆ ಇನಾಂ ನೀಡಿ, ಆ ಭಾಗದ ಹಕ್ಕನ್ನು ಕೊಟ್ಟು, ಗೌರವದಿಂದ ವರ್ತಿಸಲು ಒಪ್ಪಂದ ಮಾಡಿಕೊಂಡರು. ಅದೇನೆಂದರೆ "ಈ ಭಾಗದ 'ಸರ್ವ ಇನಾಂ' ಎಂದು ಇನಾಂ ನೀಡಿದ್ದಾರೆ."[೧೨] "ಇದರ ಸರನಾಡ ಚೌದರಿ ಎಂದು ಕರೆದಿದ್ದಾರೆ. ಸೈನಿಕ ಸೇವೆ ಹಾಗೂ ರಕ್ಷಣೆಯಂತ ಜವಾಬ್ದಾರಿ ನೀಡಲಾಗಿದೆ ಎಂದು ಉಲ್ಲೇಖಿಸಿದ್ದಾರೆ.

ಇವೆಲ್ಲವನ್ನು ಪಾಲಿಸುತ್ತ ವಿಧೇಯರಾಗಿರಬೇಕು. ಇದು ಅಲ್ಲಾನ ರಾಜ್ಯವಿದೆ ದ್ರೋಹ ಬಗೆಯದೆ ಏಕನಿಷ್ಠೆ ತೋರಬೇಕು ಎಂದು ಫರ್ಮಾನದಲ್ಲಿ ಉಲ್ಲೇಖಿಸಿದ್ದು ತಿಳಿದುಬರುತ್ತದೆ."[೧೩] ಹಾಗೇ ಮುಂದುವರಿದಂತೆ ಎರಡನೇ ಫರ್ಮಾನಲ್ಲಿ 'ಇದು ಅಲ್ಲಾನ ರಾಜ್ಯವಿದೆ. ಇದಕ್ಕೆ ಅಲ್ಲಾನೇ ಮುಖ್ಯಸ್ಥನಿದ್ದಾನೆ.' ಅವನ ಆಜ್ಞೆಯಂತೆ ಫರ್ಮಾನನ್ನು ನೀಡುತ್ತೇನೆ.

"ಪ|| ಮಜಕೂರ ಇನಾಮ, ಠಾಣೆ ಮತ್ತು ದೆಹಾ (ಮೌಜೆ) ಇವೆಲ್ಲದರ ಉತ್ಪನ್ನ ಬಳಸಲು ಸಹಾಯದ ಖರ್ಚು ಮಾಡಲು ನಮಗೆ ಇನಾಮು ನೀಡಿದೆ. ಊರಿನ ಕುಲಬಾಬ, ಕುಲಕಾನೂನು ಮರಾಮತಿ ಮಾಡಿ ಖರ್ದಬತ್ ಸದರ ಮಾಡುತ್ತವೆ. ಊರಲ್ಲಿ ಒಂದೇ ತರಹದ ಕಾಯ್ದೆ ಮಾಡಬೇಕು ಊರಲ್ಲಿ ಬಾಬು, ಸಾಹೇಬರ ಅನುಮತಿ ಪಡೆದು ನಡೆಸಬೇಕೆಂದು ಉಲ್ಲೇಖಿಸಿದ್ದಾರೆ."[೧೪]

ಹೀಗೆ ಆದಿಲ್‌ಶಾಹಿಯಿಂದ ಹಿಡಿದು ಔರಂಗಜೇಬನ ಕಾಲದವರೆಗೆ ಫರ್ಮಾನುಗಳನ್ನು ನೀಡುತ್ತ ಬಂದಿದ್ದರಿಂದ ನಾಯಕ ಒಡೆಯರೆನಿಸಿಕೊಂಡು ಇವರು ದೇಸಾಯಿಗಳಾಗಿ ಮೆರೆದಿದ್ದಾರೆ. ತಮ್ಮ

ಭೌಗೋಳಿಕ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದಾರೆ. ಕಾಲಕಾಲಕ್ಕೆ ಸೈನಿಕಸೇವೆ ನೀಡಿ ಗೌರವಕ್ಕೆ ಪಾತ್ರರಾಗಿದ್ದಾರೆ.

ಔರಂಗಜೇಬನು ನೀಡಿದ ಸನದುಗಳು ದೇಸಗತಿಗಳಿಗೆ ಇನ್ನಷ್ಟು ಶಕ್ತಿ ಒದಗಿಸುತ್ತವೆ. ಅದೆಂದರೆ "ನೀವು ಅಲ್ಲಾನ ರಾಜ್ಯಕ್ಕೆ ನಿಷ್ಠೆ ತೋರಿಸಿದ್ದೀರಿ ಜೀವ ಕೊಡಲು ಸಿದ್ಧರಿದ್ದೀರಿ ಎಂಬುದು ತಿಳಿದುಬಂದಿದೆ. ಅದಕ್ಕಾಗಿ ನಿಮಗೆ 'ಪಾಲಕಿ ಸೇವೆ', 'ನಿಶಾನೆ' ಎಂಬ ಗೌರವ ಪ್ರಶಸ್ತಿ ನೀಡಿದ್ದೇವೆ. ಬಾದಾಮಿ ತಾಲೂಕಿನ ಈ ಗ್ರಾಮವನ್ನು ನಿಮ್ಮ ಖರ್ಚಿಗಾಗಿ ಬಳಸಿಕೊಳ್ಳಲು 'ಸರ್ವ ಇನಾಂ' ನೀಡಲಾಗಿದೆ ಎಂದು ಸನದುವಿನಲ್ಲಿ ಉಲ್ಲೇಖಿಸಿದ್ದಾರೆ."[೧೫] ಇಂಥ ಅನೇಕ ಸನದುಗಳು ದೇಸಗತಿಯ ವಿಸ್ತಾರಕ್ಕೆ ಕಾರಣೀಭೂತವಾಗಿವೆ. ಕ್ರಿ.ಶ.೧೫೬೫ ರಿಂದ ೧೭೦೭ರವರೆಗೆ ಈ ಭಾಗದ ದೇಸಾಯಿಗಳು ಸುಮಾರು ಇನಾಂ ಪಡೆದವರಾಗಿದ್ದಾರೆ. ಬಹುತೇಕ ಇವರ ಸೇವೆ, ನಿಷ್ಠೆ, ಸಹಾಯ ಸಹಕಾರದಿಂದ ದೇಸಗತಿ ತನ್ನ ವಿಸ್ತಾರವನ್ನು ಹೆಚ್ಚಿಸಿಕೊಂಡಿದೆ.

ದೇಸಗತಿ ವಿಸ್ತಾರದ ಜೊತೆಗೆ ವೈಯಕ್ತಿಕ ಬೆಳವಣಿಗೆ ಹಾಗೂ ಪ್ರಜಾಜನರಿಗೆ ಸರ್ವಧರ್ಮಿಯರೊಂದಿಗೆ ಸಮನ್ವಯತೆಯನ್ನು ಕಾಯ್ದುಕೊಂಡು ಬರಲು ಸೂಚಿಸಿದ್ದು ಮಹತ್ವಪೂರ್ಣ ಅಂಶವಾಗಿದೆ. ಇದರಿಂದ ಸಾಮಾಜಿಕ ಸ್ಥಿರತೆಯನ್ನು ಕಾಯ್ದುಕೊಂಡು ಸ್ವಾಮಿನಿಷ್ಠರಾಗಿ ಬದುಕಿ ಬಾಳಿ, ಮಹಾಪ್ರಭುಗಳಿಂದ ಹೊಗಳಿಸಿಕೊಂಡು ತಮ್ಮ ಅಧಿಕಾರದ ಛಾಪನ್ನು ವಿಸ್ತರಿಸಿಕೊಂಡಿದ್ದಾರೆ. ಅರಸರು ಬಂದಾಗ ಅತಿಥಿ ಸತ್ಕಾರ ನೀಡಿ, ಅವರಿಂದ ಸೈ ಎನಿಸಿಕೊಂಡಿದ್ದಾರೆ. ಹೆಚ್ಚಿನ ಉಂಬಳಿ ಪಡೆದುಕೊಂಡಿದ್ದಾರೆ. ಕೆಲವು ದೇಸಗತಿಗಳವರು ರತ್ನಗಂಬಳಿಯ ಮೇಲೆ ಸ್ವರ್ಗಸುಖ ಅನುಭವಿಸಿದ್ದಾರೆ. ಅಂಥವರೆಂದರೆ ಮನ್ನಿಕೇರಿ ದೇಸಾಯಿ, ಸೊನ್ನ, ರಕ್ಕಸಗಿ, ಐಹೊಳೆ, ನೀರಬೂದಿಹಾಳ, ಕೋಣೆಗನೂರ ತೇರದಾಳ ಹಾಗೂ ಯಡಹಳ್ಳಿ ದೇಸಾಯಿ. ಇವರೆಲ್ಲರಿಗೂ ವಿಶೇಷ ಬಿರುದಾವಳಿಗಳು ಇರುವುದರಿಂದ ಅವೆಲ್ಲವುಗಳೂ ಅವರ ದಕ್ಷ ಆಡಳಿತ ಮತ್ತು ರಾಜ್ಯ ವಿಸ್ತಾರದ ಕುರುಹುಗಳಾಗಿವೆ.

ಬಾಗಲಕೋಟೆ ಜಿಲ್ಲೆಯಲ್ಲಿರುವ ಇಪ್ಪತ್ತು ದೇಸಗತಿಗಳು ತಕ್ಕಮಟ್ಟಿಗೆ ಆಡಳಿತ ನಡೆಸಿವೆ. ಇವುಗಳಲ್ಲಿ ಕೆಲವು ದೇಸಗತಿಗಳು ವೈಭವಯುತ ಆಡಳಿತ ನಡೆಸಿದ್ದು ಕಾಣುತ್ತದೆ. ಅಂಥವುಗಳ ಸಾಧನೆಯ ವಿಸ್ತಾರವನ್ನು ಪ್ರಸ್ತುತ ಪ್ರಬಂಧವು ಒಳಗೊಂಡಿದೆ. ರಾಜ್ಯಸಾಮ್ರಾಜ್ಯಗಳ ಉದಯ ಅಸ್ತಂಗತದ ನೆರಳಿನಾಟದಲ್ಲಿ ದೇಸಗತಿಯಂತಹ ಮನೆತನಗಳು ತನ್ನದೇ ಆದ ರಾಜಕೀಯ ಸಾಮಾಜಿಕ ಹಾಗೂ ಧಾರ್ಮಿಕ ಛಾಪನ್ನು ಉಳಿಸಿ ಬೆಳೆಸಿಕೊಂಡು ಬಂದಿವೆ. ದೇಸಗತಿಗಳು ಜನ ಸಂಸ್ಕೃತಿಯನ್ನು, ಸ್ಥಾನಿಕ ಆಡಳಿತವನ್ನು, ಜನರ ನಂಬಿಕೆಯನ್ನು, ಉಳಿಸಿ, ಬೆಳೆಸಿಕೊಂಡು ಬಂದಿರುವುದು ಇಂದಿಗೂ ನಮ್ಮ ಕಣ್ಮುಂದೆ ಕನ್ನಡಿಯಂತಿದೆ.

ಒಟ್ಟಿನಲ್ಲಿ ಆದಿಲ್‌ಶಾಹಿಗಳಿಂದ ಶಾಶ್ವತವಾಗಿ ಭೂಮಿಯನ್ನು ಪಡೆದುಕೊಂಡು ದಕ್ಷತೆಯಿಂದ ದೇಸಗತಿಯ ಚುಕ್ಕಾಣಿ ಹಿಡಿದ ದೇಸಾಯಿಗಳು ವಂಶಪಾರಂಪರ್ಯವಾಗಿ ಆಡಳಿತ ಸೂತ್ರವನ್ನು ಹಿಡಿದುಕೊಂಡರು, ಆಡಳಿತವನ್ನು ವಿಸ್ತರಿಸುತ್ತ ಮುನ್ನಡೆದರು. ತಮ್ಮ ವೈಯುಕ್ತಿಕ ಪ್ರಭಾವ ಮತ್ತು ಪ್ರಾಬಲ್ಯದಿಂದ ಸ್ಥಳೀಯ ಸರಕಾರದ ನಿಯಮಾವಳಿಗಳನ್ನು ನಿರಂತರವಾಗಿ ಉಳಿಸಿ ಬೆಳೆಸಿಕೊಂಡುಬಂದರು. ಹೀಗೆ ಕುಂಟುತ್ತ ಒಂದು ನಿರ್ದಿಷ್ಟ ಸ್ವರೂಪವನ್ನು ಪಡೆದು ದೇಸಗತಿಗಳು ಉಗಮ ವಿಸ್ತಾರವನ್ನು ಪಡೆದುಕೊಂಡು ಸಾಗಿದ್ದುದು ಕಾಣುತ್ತದೆ. ಹೀಗೆ ಸ್ಥಳೀಯ ಸರ್ಕಾರವನ್ನು ಸ್ವಯಂ ಪೂರ್ಣವಾಗಿ ಹೊಂದಿದ ದೇಸಗತಿಗಳು ಬೆಳೆದು ಬಂದುದು ಗಮನಾರ್ಹವೆನಿಸಿವೆ.

ದೇಸಗತಿ ಮನೆತನಗಳು ಕರ್ನಾಟಕವಲ್ಲದೆ ಬೇರೆ ಬೇರೆ ಕಡೆಗೂ ಇದ್ದವು. ಇತ್ತೀಚೆಗೆ ದೇಸಗತಿ ಕುರಿತು ಚರ್ಚೆ ನಡೆದಿರುವುದರಿಂದ ಇದರ ವ್ಯಾಪ್ತಿಯನ್ನು ವಿದ್ವಾಂಸರು ಗುರುತಿಸುವಲ್ಲಿ ಆಸಕ್ತರಾಗಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ, ನಿಜಾಂ ಕರ್ನಾಟಕದಲ್ಲಿ ಮಾತ್ರ ಕಂಡರು "ಶ್ರೀಲಂಕಾದಲ್ಲಿಯೂ ದೇಸಾಯಿಗಳಿದ್ದರೆಂದು ಬ್ರಿಗ್ಸರವರು ಸಮರ್ಥನೆ ನೀಡುತ್ತಾರೆ."[೧೬] ರಾಜಮಹಾರಾಜರ ಚರಿತ್ರೆಯ ನೆರಳಿನಲ್ಲಿ ದೇಸಗತಿಗಳು ಮರೆಯಾಗುತ್ತ ನಡೆದಿವೆ. ಹಾಗಾಗಿ ಈ ಕುರಿತು ಇನ್ನೂ ಸುದೀರ್ಘ ಸಂಶೋಧನೆ ನಡೆಯಬೇಕಾಗಿದೆ.

ಕರ್ನಾಟಕದಲ್ಲಿ ಅದರಲ್ಲೂ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕವೆಂದು ವಿಭಾಗಿಸಿದಾಗ, ಉತ್ತರ ಕರ್ನಾಟಕದಲ್ಲಿ ದೇಸಗತಿಯವರೆಂದು ಅಥವಾ ಸಂಸ್ಥಾನಿಕರೆಂದು ಕರೆಸಿಕೊಂಡಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ ಪಾಳೆಗಾರರೆಂದು, ಮಾಂಡಲೀಕರೆಂದು ಕರೆಸಿಕೊಂಡಿದ್ದಾರೆ. ಮಹಾರಾಷ್ಟ್ರದಲ್ಲಿ ಚೌದರಿ, ಚೌಗುಲೆ ಎಂದೆನಿಸಿಕೊಂಡಿದ್ದಾರೆ.

ದೇಸಗತಿಯವರಿಗೂ ಪಾಳೆಗಾರರಿಗೂ ಇರುವ ವ್ಯತ್ಯಾಸವನ್ನು ಈ ಕೆಳಗಿನಂತೆ ಗುರ್ತಿಸಿಕೊಂಡಿದೆ.

ಪಾಳೆಯಗಾರರು	ದೇಸಗತಿಗಳು
೧. ಅರಸರಿಗೆ ಸಹಾಯ ಮಾಡಿದ ಶಕ್ತಿಶಾಲಿ ನಾಯಕರೇ ಪಾಳೇಗಾರರಾದರು.	೧. ಅರಸನ ಗಡಿನಾಡ ಭಾಗದಲ್ಲಿದ್ದು ರಾಜ್ಯ ರಕ್ಷಣೆಯಂತಹ ಜವಾಬ್ದಾರಿ ಹೊತ್ತವರೇ ದೇಸಗತಿಯವರು.
೨. ಅರಸರಿಂದ ಸಿಡಿದು ಬಂದವರೇ ಪಾಳೇಗಾರರು.	೨. ಅರಸನಿಗೆ ಅವಶ್ಯವಿದ್ದಾಗ ಗೊತ್ತಾದ ಸೈನ್ಯ ಕಳಿಸುತ್ತಿದ್ದರು. ಕಪ್ಪಕಾಣಿಕೆ ಕೊಡುತ್ತಿದ್ದರು. ಕಂದಾಯ ವಸೂಲಿ ಮಾಡಿ, ಅದರ ಕೆಲಭಾಗವನ್ನು ಅರಸನಿಗೆ ಕೊಡುತ್ತಿದ್ದರು.
೩. ಸ್ವತಂತ್ರವಾಗಿದ್ದು ಸದಾ ಯುದ್ಧ ಮಾಡುತ್ತ ರಕ್ಷಣೆ ಹೊಂದಿದವರೇ ಪಾಳೆಗಾರರು.	೩. ಅರಸನ ಸಾಮಂತರಾಗಿದ್ದವರೇ ದೇಸಗತಿಗಳವರು.
೪. ತಮ್ಮದಾದ ಭೌಗೋಳಿಕ ಪ್ರದೇಶವನ್ನು ಹೊಂದಿರುವವರೆ ಪಾಳೇಗಾರರು.	೪. ಚಿಕ್ಕದಾದ ಸೈನ್ಯ ಹೊಂದಿದವರೇ ದೇಸಗತಿಯರು.
೫. ತಮ್ಮದಾದ ಆಡಳಿತ ರಚಿಸಿಕೊಂಡವರೇ ಪಾಳೆಗಾರರು.	
೬. ಮಾಂಡಲೀಕರಾಗಿ ಕಪ್ಪ ಕಾಣಿಕೆ ಕೊಡುತ್ತ ಸ್ವತಂತ್ರರಾದವರೇ ಪಾಳೆಗಾರರು.	

೭. ಅರಸರಂತೆ ಮೆರೆದವರೇ ಪಾಳೆಗಾರರು.

೮. ಪಾಳೆಪಟ್ಟು ಹೊಂದಿದವರೆಂದು ಕರೆಸಿಕೊಂಡಿದ್ದಾರೆ.

೫. ಅರಸನಿಂದ ಆಗಾಗ ಇನಾಂ ಪಡೆಯುತ್ತ ದೇಸಗತಿ ವಿಸ್ತಾರ ಮಾಡಿದವರೇ ದೇಸಗತಿಯವರು

೬. ರಾಜನಾಗಿರದೇ ರಾಜಸಂಸ್ಕೃತಿಯನ್ನು ಪಾಲಿಸುತ್ತ ಬಾಳಿದವರು.

೭. ಗೊತ್ತಾದ ಸೈನ್ಯವನ್ನು ಯುದ್ಧಕ್ಕೆ ಕಳಿಸಿದರು. ಯುದ್ಧ ಮಾಡಿದವರಲ್ಲ; ಕೆಲವು ವೇಳೆ ಯುದ್ಧಕ್ಕೆ ಅರಸನ ಅಪ್ಪಣೆ ಮೇರೆಗೆ ಹೋದುದೂ ಕಂಡುಬರುತ್ತದೆ.

೮. ದೇಸಗತಿಗಳು ಸಂಸ್ಥಾನೀಕರೆಂದು ಇನಾಮದಾರರೆಂದು ಕರೆಸಿಕೊಂಡಿದ್ದಾರೆ.

ಹೀಗೆ ಹತ್ತಾರು ಅಂಶಗಳು ಪಾಳೆಗಾರರಿಗೂ ದೇಸಗತಿಗಳವರಿಗೂ ಇದ್ದ ವ್ಯತ್ಯಾಸ ಕಂಡುಬರುತ್ತದೆ.

ಉತ್ತರ ಕರ್ನಾಟಕದಲ್ಲೇ ಹುಟ್ಟಿಕೊಂಡ ದೇಸಗತಿಗಳು ಬಿಜಾಪೂರ ಜಿಲ್ಲೆಯಲ್ಲಿ ಸುಮಾರಾಗಿ ಐವತ್ತಕ್ಕಿಂತ ಹೆಚ್ಚಾಗಿವೆ. ಈ ಮೊದಲು ನಾಯಕ, ಒಡೆಯರೆನಿಸಿಕೊಂಡ ಇವರು ರಕ್ಷಣೆಯಂತಹ ಜವಾಬ್ದಾರಿ ಹೊತ್ತವರಾಗಿದ್ದರು. ವಿಕಸನಗೊಳ್ಳುತ್ತ ಹೋದಂತೆ ಆದಿಲ್‌ಶಾಹಿಯ ಆಡಳಿತದ ವಿಕೇಂದ್ರಿಕರಣ ನೀತಿಯಿಂದ ಅಲ್ಲಲ್ಲಿ ತನ್ನಪರವಾಗಿ ಒಬ್ಬ "ಮಹಾಲದಾರ ಹಾಗೂ ಕಾರಕೂನನ್ನು"[೧೭] ನೇಮಿಸಿ ಆಡಳಿತ ನಡೆಸಲು 'ದೇಸಕ' ಅಧಿಕಾರಿಯಾದ, ಸ್ಥಳೀಯನಾದ ದೇಸ್‌ಖಾನ್‌ನನಿಗೆ ಸೂತ್ರವಹಿಸಿದ್ದು ಕಂಡುಬರುತ್ತದೆ. ಈ ನಾಯಕನೇ ಪರಗಣದ ಒಡೆಯನಾಗಿ ದೇಸ್‌ಖಾನ್>ದೇಸಾಯಿ ನಾಮ ಹೊತ್ತವನಾಗಿದ್ದಾನೆ. ಹೀಗೆ ದೇಸಾಯಿಗೆ ಕಾಲಕಾಲಕ್ಕೆ ಅವನ ಉದಾರ ಗುಣಗಳಿಂದ, ನಿಷ್ಠೆಯಿಂದ 'ಇನಾಂ' ಸಿಗುತ್ತ ಹೋಗುತ್ತದೆ. ಬಹುವ್ಯಾಪ್ತಿ ಹೊಂದಿದ ದೇಸಗತಿಗಳು ಮೂರನೂರಾ ಮೂವತ್ತು ಗ್ರಾಮಗಳವರೆಗೂ ಹಬ್ಬುತ್ತದೆ. ಅಲ್ಲದೆ ದೇಸಗತಿಗಳ ವಿಕಸನಕ್ಕೆ ಅವರಿಗಿದ್ದ ಬಿರುದಾವಳಿಗಳೂ ಕಾಣಸಿಗುತ್ತವೆ. ಸರನಾಡ ಚೌದರಿ, ಸರದೇಸಾಯಿ, ಸರಪ್ರಾಂತಾಧಿಕಾರಿ, ಎಂಬಿತ್ಯಾದಿಗಳು ದೇಸಗತಿಯ ವಿಸ್ತಾರವನ್ನು ಗುರ್ತಿಸುವಲ್ಲಿ ಸಹಕಾರಿಯಾಗಿವೆ.

ಗಿರಿಸಾಗರ ದೇಸಗತಿ : ಮುದ್ದೇಬಿಹಾಳ, ಬಸವನಬಗೇವಾಡಿ, ಬಿಜಾಪೂರ, ಜಮಖಂಡಿ ಹಾಗೂ ಬಾಗಲಕೋಟಿ ಬೀಳಗಿಯ ಕೆಲವು ಗ್ರಾಮಗಳನ್ನು ಒಳಗೊಂಡಿರುತ್ತವೆ.

ಹೊನ್ನಿಹಾಳ : ಬೀಳಗಿ, ಹುನಗುಂದ ತಾಲೂಕಿನಿಂದ ಹಿಡಿದು ಖುಷ್ಟಗಿ ತಾಲೂಕಿನ ಹನುಮಸಾಗರದವರೆಗೆ.

ರಕ್ಕಸಗಿ : ಹುನಗುಂದ ತಾಲೂಕಿನಿಂದ ಹಿಡಿದು ಮುದಗಲ್ಲ ಮೂರನೂರಾ ಮೂವತ್ತು ಗ್ರಾಮಗಳಿದ್ದವು.

ಕುಳಲಿ : ಮುಧೋಳ ತಾಲೂಕಿನಿಂದ ಹಿಡಿದು ಶ್ರೀಶೈಲದ ಕಡೆ ಬಾಗಿಲವರೆಗೆ ಹಾಗೂ ಈಗಿನ ರಾಮದುರ್ಗ ತಾಲೂಕಿನ ಮುದಕವಿ ೨೦ ಹಳ್ಳಿಗಳನ್ನು ಒಳಗೊಂಡಿದ್ದು ತಿಳಿದುಬರುತ್ತದೆ.

ಜಾಲಿಹಾಳ : ಬದಾಮಿ, ಬಾಗಲಕೋಟಿ ತಾಲೂಕದಿಂದ ಹಿಡಿದು ಈಗಿನ ಕೊಪ್ಪಳ ತಾಲೂಕಿನ ಯಲಬುರ್ಗಾದವರೆಗೆ ಹಬ್ಬಿದ್ದು ತಿಳಿದು ಬರುತ್ತದೆ.

ನೀರಬೂದಿಹಾಳ : ಕೆರೂರದಿಂದ ಹಿಡಿದು ಮಲಪ್ರಭಾ, ಕೃಷ್ಣಾ, ಘಟಪ್ರಭಾ ನದಿ ದಂಡೆ ಮೇಲಿರುವ ಗ್ರಾಮಗಳನ್ನು ಹೊಂದಿದ್ದು ತಿಳಿದು ಬರುತ್ತದೆ.

ಐಹೊಳೆ : ಬೈರಹಕ್ಕಿ ಹಾರಿ ಕುಳಿತು ದೊರೆಗಳು ಓಡಾಡಿದ ನೆಲೆವೆಲ್ಲಾ ಇವರದಾಗಿರುತ್ತದೆ.

ತೇರದಾಳ : ಚಿಕ್ಕೋಡಿ, ರಾಯಭಾಗ, ಅಥಣಿ, ಬಿಜಾಪುರ, ಜಮಖಂಡಿಯವರೆಗೆ ಇರುತ್ತದೆ.

ಕೋಟೆಕಲ್ಲ : ಬಾದಾಮಿ ಭಾಗದ ಹದಿನಾಲ್ಕು ಹಳ್ಳಿ ಇವರದಾಗಿತ್ತು. ಮುದ್ದೇಬಿಹಾಳ ಕೂಡ ಇವರ ಸರಹದ್ದಿನಲ್ಲಿರುತ್ತದೆ.

ಕರಡಿ : ೧೨ ಗ್ರಾಮಗಳ ಒಂದು ಚಿಕ್ಕ ಪರಗಣೆ.

ಕಂದಗಲ್ಲ : ೧೨ ಗ್ರಾಮಗಳ ಒಂದು ಚಿಕ್ಕ ಪರಗಣೆ.

ಮನ್ನಿಕೇರಿ : ೧೧೦ ಗ್ರಾಮಗಳ ಒಂದು ಚಿಕ್ಕ ಪರಗಣೆ. ಬಾಗಲಕೋಟಿ ಮನ್ನಿಕೇರಿ ಇವುಗಳಲ್ಲಿ ಪ್ರಮುಖವಾಗಿರುತ್ತವೆ.

ಶಿರಗುಪ್ಪಿ : ಎಂಟು ಗ್ರಾಮಗಳ ಒಂದು ಚಿಕ್ಕ ಪರಗಣೆ.

ಮುದ್ದಾಪುರ : ಎಂಟು ಗ್ರಾಮಗಳ ಒಂದು ಚಿಕ್ಕ ಪರಗಣೆ. ಇದು ಮುಧೋಳ ಸರ್ಕಾರದ ಅಧೀನದಲ್ಲಿತ್ತು.

ಸೊನ್ನ : ೧೪ ಗ್ರಾಮಗಳ ಒಂದು ಚಿಕ್ಕ ಪರಗಣೆ ಇದ್ದು ಮುಧೋಳ ಸಂಸ್ಥಾನದ ಆದಿಪತ್ಯದಲ್ಲಿತ್ತು.

ಗಲಿಗಲಿ ಯಡಹಳ್ಳಿ : ೮ ಗ್ರಾಮಗಳ ಒಂದು ಚಿಕ್ಕ ಪರಗಣೆ. ಮುಧೋಳ ಸಂಸ್ಥಾನದ ಆದಿಪತ್ಯದಲ್ಲಿದ್ದುದು ತಿಳಿದುಬರುತ್ತದೆ.

ಕೊಣ್ಣೂರ : ಮೂಲತಃ ಜಮಖಂಡಿ ದೇಸಗತಿಯಾಗಿದ್ದು ಇದು ಒಂದು ಪರಗಣೆಯಾಗಿತ್ತು. ನಂತರದಲ್ಲಿ ಕೊಣ್ಣೂರ ದೇಸಗತಿ ಆಯಿತು. ಪೇಶ್ವಗಳ ಅಧಿಕಾರದಲ್ಲಿ ಜಮಖಂಡಿ ಸಂಸ್ಥಾನದಲ್ಲಿ ವಿಲೀನವಾಯಿತು. ಪ್ರಸ್ತುತ ಇದಕ್ಕೆ ೬ ಗ್ರಾಮಗಳಿದ್ದುದು ತಿಳಿದುಬರುತ್ತದೆ.

ಲೋಕಾಪೂರ : ಇಪ್ಪತ್ಮೂರು ಗ್ರಾಮಗಳಿದ್ದು ಮುಧೋಳ ಘೋರ್ಪಡೆ ಅರಸರ ಅಧೀನದಲ್ಲಿರುತ್ತದೆ.

ಹೀಗೆ ಕೇವಲ 'ಸರ್ವ ಇನಾಂ' ಪಡೆದ ಈ ದೇಸಗತಿ ಮನೆತನಗಳು ಅರಸರಿಗೆ ವಿಧೇಯಕರಾಗಿ 'ಕಾಲು' ಭಾಗ ಜಮೀನಿನಿಂದ ೧ ಚಾವರ, ೧ ಕೇರಾ ಜಮೀನದವರೆಗೆ ಇನಾಂ ಪಡೆದು ಆಡಳಿತ ನಡೆಸಿದ್ದು ಇದೆ.

ಇಲ್ಲಿಯವರೆಗೆ ದೇಸಗತಿ ಮನೆತನಗಳ ಚರಿತ್ರೆ ಕುರಿತಾಗಿ ಅವಲೋಕಿಸಿದಾಗ ಆದಿಲ್‌ಶಾಹಿಯಿಂದ ಹಿಡಿದು ಪೇಶ್ವೆಗಳ ಕಾಲದ ಅಂತ್ಯದವರೆಗೆ (ಕ್ರಿ.ಶ.೧೫೬೫ ರಿಂದ ೧೮೧೮ರವರೆಗೆ) ಅನೇಕ ಏಳು ಬೀಳುಗಳನ್ನು ಕಾಣುತ್ತಾ ತಿಳಿದುಬಂದಿರುವುದು ಸ್ಪಷ್ಟವಾಗುತ್ತದೆ. ಇದಕ್ಕೆ ಕಾರಣಗಳು ಕಂಡುಬರುತ್ತವೆ. ಅಷ್ಟೇ ಅಲ್ಲದೆ ನಾನಾ ಕಾರಣಗಳಿಂದ ಅವು ಮೂಲ ದೇಸಗತಿಯಿಂದ ಪಂಗಡಗಳಾಗುತ್ತಲೂ ಬಂದಿವೆ. ಉದಾಹರಣೆಗೆ

ದೇಸಗತಿಗಳ ವಿಭಾಗೀಕರಣ, ಅಣ್ಣ ತಮ್ಮಂದಿರ ನಡುವಿನ ಭಿನ್ನಾಭಿಪ್ರಾಯ, ದೇಸಾಯಿಗಳ ಆಡಳಿತ ಕ್ರಮದಲ್ಲಿ ಅರಾಜಕತೆ, ಬ್ರಿಟೀಷರ ಆಡಳಿತದ ಅನೇಕ ಪರಿಣಾಮಗಳಿಗೀಡಾಗಿ ಕರ್ನಾಟಕದ ಇನ್ನಿತರ ಅನೇಕ ಸಂಸ್ಥಾನ ಚಿಕ್ಕ ಪುಟ್ಟ ವ್ಯವಸ್ಥೆಗಳಂತೆ ಇವು ವಿಘಟನೆ ಹೊಂದಿವೆ.

ಹೀಗೆ ಮೇಲೆ ಕಾಣಿಸಿಕೊಂಡ ಅಂಶಗಳು ವಿಘಟನೆಗೆ ಕಾರಣೀಭೂತವಾಗುತ್ತವೆ. ಒಂದು ಮೂಲ ದೇಸಗತಿ ಮನೆತನವು ದೇಸಾಯಿ ಮನೆತನವಾಗಿ, ನಾಡಗೌಡ ಮನೆತನವಾಗಿ ಆದಿಲ್‌ಶಾಹಿ ಕಾಲದಿಂದ ಹಿಡಿದು ಪೇಶ್ವೆಗಳ ಕಾಲದ ಅವಧಿಯವರೆಗೆ ವಿವಿಧ ವಿಭಾಗಗಳಾಗಿ ಒಡೆದದ್ದು ಈ ಕೆಳಗಿನಂತೆ ಕಾಣಸಿಗುತ್ತದೆ.

ಜಾಲಿಹಾಳ : ಜಾಲಿಹಾಳ, ಹೊಸೂರ ಎರಡು ಭಾಗವಾಗಿವೆ.

ಮನ್ನಿಕೇರಿ : ಮನ್ನಿಕೇರಿ, ಬಾಗಲಕೋಟೆ ಎರಡು ಭಾಗವಾಗಿವೆ.

ತೇರದಾಳ : ತೇರದಾಳ, ಹನಗಂಡಿ, ಹಳಿಂಗಳಿ - ಮೂರು ಭಾಗವಾಗಿವೆ.

ಗಿರಿಸಾಗರ : ಕೋಲಾರ, ಗಿರಿಸಾಗರ, ಬಿದರಿ - ಮೂರು ಭಾಗವಾಗಿವೆ.

ಕ್ರಿ.ಶ.೧೮೮೬ರಲ್ಲಿ ಪಟ್ಟಿಮಾಡಿದ ವತನದಾರ ಯಾದಿಯಿಂದ ಇಪ್ಪತ್ತು ದೇಸಗತಿಗಳು ಐವತ್ತು ದೇಸಗತಿಗಳಾಗಿ ಹಂಚಿ ಹೋದ ಸಂಗತಿ ತಿಳಿದುಬರುತ್ತದೆ.

ದೇಸಗತಿಗಳನ್ನು ಈ ಎರಡು ಮುಖಗಳಿಂದ ವರ್ಗೀಕರಿಸಿಕೊಳ್ಳುವ ಮೂಲಕ ದೇಸಾಯಿ, ದೇಸಮುಖ ಹಾಗೂ ನಾಡಗೌಡರ ಆಡಳಿತಾತ್ಮಕ ವೈಖರಿಯ ವಿಭಿನ್ನತೆಯನ್ನು ಗುರುತಿಸಿಕೊಳ್ಳಲಾಗಿದೆ.

೨.೨. ದೇಸಾಯಿ-ದೇಸಮುಖ-ನಾಡಗೌಡ

ಮಧ್ಯಕಾಲೀನ ಅವಧಿಯಲ್ಲಿ ಸ್ಥಳೀಯ ಆಡಳಿತದ ನೇತೃತ್ವ ವಹಿಸಿದ ಇವರಿಗೆ ದೇಸಾಯಿ, ದೇಸಮುಖ, ನಾಡಗೌಡ ಎಂದು ಕರೆಯಲಾಗುತ್ತಿತ್ತು. ಅಲ್ಲದೆ ನಾಯಕ, ಒಡೆಯರ ಎಂದೂ ಕರೆಯುತ್ತಿದ್ದರು. ಪ್ರಸ್ತುತ ಬಾಗಲಕೋಟೆ ಜಿಲ್ಲೆಯಲ್ಲಿ ದೇಸಾಯಿ, ನಾಡಗೌಡ ಹಾಗೂ ದೇಸಮುಖ, ನಾಯಕ ಎಂದು ಕರೆಯುವುದು ವಾಡಿಕೆ. ಮೈಸೂರ ಭಾಗದ ಕಡೆಗೆ ಇವರನ್ನು ಒಡೆಯ, ಒಡೆಯರ ಎಂದು ಕರೆಯುತ್ತಾರೆ. ''ವಿಜಯನಗರ ಸಾಮ್ರಾಜ್ಯದಲ್ಲಿ ಭಾಗಶಃ ಸ್ವಾತಂತ್ರ್ಯವನ್ನು ಹೊಂದಿದ

ಸಾಮಂತರಿಗೆ ನಾಯಕ, ಒಡೆಯ, ದಂಡನಾಯಕ, ಒಡೆಯರ್ ಮುಂತಾದ ಹೆಸರುಗಳಿದ್ದವು.[೭೮] ಇವರಿಗೆ ಅಧಿಕಾರ ಪ್ರಾಪ್ತವಾದ ಮೇಲೆ ಅಧಿಕಾರದ ಪದವೇ ಮುಂದುವರೆದು ರೂಢಿಯಲ್ಲಿ ಬಂದಿದೆ. ಈ ಹಿನ್ನೆಲೆಯಲ್ಲಿ ಇಂಥ ಪದಗಳು ಅರ್ಥ ಚಿಂತನೆಗೆ ತೊಡಗಿಸಿವೆ. ಅವುಗಳೆಂದರೆ

ದೇಸಾಯಿ : ಪ್ರಸ್ತುತ ಈ ಪದವು ದೇಸಗತಿಯನ್ನ ಸಾಗಿಸುವವ ಎನ್ನುವ ಅರ್ಥದಲ್ಲಿ ಬಳಕೆಯಲ್ಲಿದೆ. ಈ ಪದದ ರೂಪ ನಿಸ್ಪತ್ತಿ ವಿಷಯದಲ್ಲೂ ಅರ್ಥ ವಿಶಾಲವಾದುದಾಗಿದೆ. ದೇಶ + ಆಯ=ದೇಶಾಯ>ದೇಸಾಯ>ದೇಸಾಯಿ ಎಂಬುದಾಗಿದೆ. 'ದೇಶ' ಮತ್ತು 'ಸಾಯಿ' ಈ ಎರಡು ಪದಗಳ ಜೋಡನೆಯಿಂದ ದೇಸಾಯಿ ಪದ ರೂಪಗೊಂಡಿದೆ. ದೇಸ್, ದೇಶ್, ಅಂದರೆ ಸ್ಥಾನಿಕ, ಸ್ಥಳೀಯ ಎಂದರ್ಥ. ಇನ್ನು 'ಸಾಯಿ' ಎಂದರೆ ನಾಯಕ ಎಂದರ್ಥ. ಸಾಯಿ = ಒಡೆಯ, ಪ್ರಮುಖ, ನಾಯಕ (Leader) ಸ್ವಾಮಿ ಎಂಬುದು ಗೌರವಾರ್ಥವಾಗಿ ಸೇರಿಸುವ ಶಬ್ದ. ಸಾಯಿ ಎಂಬುದು ಮರಾಠಿ ಪದವಾಗಿದೆ. ಹಾಗಾಗಿ ದೇಸ್+ಸಾಯಿ ಈ ಎರಡು ಪದ ಸಂಯುಕ್ತವಾಗಿ ದೇಸಾಯಿ ಎಂಬುದಾಗಿರುತ್ತದೆ.

ಸಾನಿ = ಒಡತಿ, ಸ್ವಾಮಿನಿ, 'ವೇಶ್ಯೆ ವೇಶ್ಯ ಹೆಸರಿನ ಕೊನೆಗೆ ಸೇರಿಸುವ ಪದ' ಅರಮನೆಯ ಸ್ತ್ರೀಯರಿಗೂ ಕೂಡ ದೇಸಾನಿ>ದೇಸಾಯಿಣಿ ಎಂಬುದಾಗಿ ಕರೆದಿರುವುದು ಕಂಡುಬರುತ್ತದೆ.

ಒಡೆಯ, ನಾಯಕ, ಹಾಗೆ ಒಡತಿ, ಸ್ವಾಮಿನಿ ಒಟ್ಟಾರೆಯಾಗಿ ಸಾಯಿ ಮತ್ತು ಸಾನಿ ಪದಗಳ ಬಳಕೆ ಮರಾಠ ಕಾಲದಲ್ಲಿ ಬಳಕೆಗೆ ಬಂದುದು ವಿಧಿತವಾಗುತ್ತದೆ.

ಆದಿಲ್‌ಶಾಹಿಗಳು ದೇಸಾಯಿಗಳನ್ನು "ದೇಸಾಖಾನ್" ಎಂದು[೭೯] ಸಂಬೋಧಿಸಿದ್ದು ಇದೆ.'' ದೇಸ್ +ಖಾನ್ = ದೇಸಾಖಾನ್. ದೇಸ್ ನಿರ್ದಿಷ್ಟವಾದ ಪದವಾಗಿದೆ. ಖಾನ್ ಎಂಬುದು ವಾರ್ಗಿಕವಾಗಿದೆ. 'ಖಾನ್' ಎಂದರೆ ಸರದಾರ ಎಂದು ಅರ್ಥಸಿಗುತ್ತದೆ. ಮುಸ್ಲಿಂ ಅರಸುಗಳು ತಮ್ಮ ಆಡಳಿತದ ದೃಷ್ಟಿಯಿಂದ ಸರಕಾರದ ಎಲ್ಲ ನೌಕರರಿಗೂ ಖಾನ್ ಹೆಸರಿಸಿದ್ದು ಕಂಡುಬರುತ್ತದೆ. ಹಾಗೇ ಸ್ಥಳೀಯರಾದ ಇವರಿಗೆ ಆಡಳಿತದ ಹುದ್ದೇ ನೀಡಿದ್ದರಿಂದ 'ಸ್ಥಳೀಯ ಸರದಾರ' > ದೇಸ್ ಖಾನ್ ಎಂಬರ್ಥದಲ್ಲಿ ಉಲ್ಲೇಖಿಸಿದ್ದಾರೆ.

ಒಟ್ಟಾರೆ ಸಾಯಿ, ಸರದಾರ, ಒಡೆಯ, ಪ್ರಮುಖ ಇವೆಲ್ಲವೂ ಒಂದೇ ಅರ್ಥವನ್ನು ಸೂಚಿಸುತ್ತವೆ. ಖಾನ್ ಮತ್ತು ಸಾಯಿ ಪದಗಳು ನಿರ್ದಿಷ್ಟವಾಗಿ ಆಡಳಿತದ ಪದ ಸೂಚಕಗಳೇ ಆಗಿವೆ.

ಖಾನ್ : ಪರ್ಶಿಯನ್ ಪದವಾದರೆ **ಸಾಯಿ :** ಮರಾಠಿ ಆಗಿರುವುದು ಅವರ ಆಡಳಿತದ ಪ್ರಭಾವವದಿಂದಲೇ ಎಂಬುದು ಕಂಡುಬರುತ್ತದೆ.

ದೇಸಾಖಾನ್ ಎಂಬ ಪದವು ಮರಾಠರ ಕಾಲದಲ್ಲಿ ಬದಲಾವಣೆ ಹೊಂದಿ 'ಖಾನ್' ಪದದ ಸ್ಥಳದಲ್ಲಿ 'ಸಾಯಿ' ಸೇರಿರುತ್ತದೆ. ಸಂಸ್ಕೃತ + ಮರಾಠಿ ಪದ ಸೇರಿದ್ದರಿಂದ ಅವೆರಡರ ವಿಸ್ತೃತ ರೂಪವೇ ದೇಸಾಯಿ

ಎಂಬುದಾಗಿದೆ. ಹೀಗೆ ಒಂದು ಪದ ಅರ್ಥವು ಬಹು ನೆಲೆಯಲ್ಲಿ ಅರ್ಥೈಸಿಕೊಳ್ಳುವುದರಿಂದ ನಿಜವಾದ ಪದದ ಅರ್ಥವನ್ನು ಗುರುತಿಸಲು, ನಿರ್ಧಿಷ್ಟಪಡಿಸಲು ಸಹಕಾರಿಯಾಗುತ್ತದೆ.

ದೇಸಮುಖಿ : ದೇಸಾಯಿಗೆ 'ದೇಸಮುಖಿ' ಎಂದು ಕರೆಯುವುದು ರೂಢಿಯಲ್ಲಿದೆ. ಈ ಪದದ ಉಗಮ ಕೂಡ ಎಲ್ಲಿ ಹುಟ್ಟಿತೆಂಬುದು ಜಿಜ್ಞಾಸೆ ಮೂಡಿಸುತ್ತದೆ. ಈ ಕುರಿತು ಹಲವು ವಿದ್ವಾಂಸರು ಚರ್ಚಿಸಿದ್ದಾರೆ. "ಈ ಪದವು ಮುಸ್ಲಿಂರ ಆಗಮನದಿಂದ ಹುಟ್ಟಿಕೊಂಡಿದೆ ಹೊರತು ಹಿಂದೂ ಮೂಲದಿಂದಲ್ಲ ಎಂದು ಗ್ರ್ಯಾಂಡ ಢಫ್ ಅವರ ಹೇಳಿಕೆಯಾಗಿದೆ."[೨೦] ಮತ್ತೊಂದೆಡೆಗೆ "ಈ ದೇಶದಲ್ಲಿ ಕೆಲವು ಶಕ್ತಿಯುತ ನಾಯಕರಿದ್ದರು. ಅವರು ತಮ್ಮ ದೇಶಕ್ಕೆ ನುಸುಳಿ ಬಂದ ಮುಸ್ಲಿಂ ಸರದಾರರೊಂದಿಗೆ ಕೂಡಿಕೊಂಡರು ಮತ್ತು ಇವರ ಸೇವೆಯನ್ನು ಖಾತ್ರಿಪಡಿಸಲು ಈ ವ್ಯವಸ್ಥೆ ಮೊದಮೊದಲು ಮಾಡಲಾಯಿತು. ಮರಾಠರಲ್ಲಿ ಒಡಕು ಹುಟ್ಟಿಸುವ ಸಲುವಾಗಿ ಮಹಮ್ಮದಿಯರು ಕೈಕೊಂಡ ರಾಜಕೀಯ ನೀತಿಯಾಗಿದ್ದರಿಂದ ಇವರಿಗೆ ಸಹಾಯ ಮಾಡಿದ ಶಕ್ತಿಶಾಲಿ ನಾಯಕರೇ ಮೂಲತಃ ದೇಶಮುಖಿರು."[೨೧] ದೇಶಮುಖಿ ಎನ್ನುವ ಶಬ್ದ ಬಹಮನಿ ಸಾಮ್ರಾಜ್ಯಕ್ಕಿಂತ ಮೊದಲಿನದಲ್ಲದಿದ್ದರೂ ಅದೇ ಸಮಯದಲ್ಲಿ ಮಹಾರಾಷ್ಟ್ರದಲ್ಲಿ ಇದ್ದಿರಬಹುದು. ದೇಶಮುಖಿ ಮೂಲದ ಬಗ್ಗೆ "ಯಾಜ್ಞವಲ್ಕನ ವಿದ್ಯಾವಿದುರ ಮತ್ತು ದೇಶಮುಖಿರು ಒಂದೇ ರೀತಿಯ ಅಧಿಕಾರಿಗಳೆಂದು"[೨೨] ಹೇಳುವ ಉಲ್ಲೇಖ ಸಿಗುತ್ತದೆ. ಇವರು ಖಾಯಂ ಆದ ಅಧಿಕಾರಿಗಳಾಗಿದ್ದು ಅವರು ಆಡಳಿತ ವಂಶಪಾರಂಪರಾಗತವಾಗಿದ್ದು ಮುಸ್ಲಿಂ ಆಡಳಿತದಲ್ಲಿ ಅವರ ಸ್ವಲ್ಪ ಭೂಮಿ ಮತ್ತು ವಿನಾಯತಿಯನ್ನು ಪಡೆದಿದ್ದರು.

ಮುಸ್ಲಿಂಮರ ಆಳ್ವಿಕೆಗಿಂತ ಮೊದಲು ಈ ಪದ ಪ್ರಚಲಿತದಲ್ಲಿತ್ತು ಮತ್ತು ಇದೊಂದು ಮರಾಠಿ ಮೂಲದ ಪದ ಎಂಬುದು ಸ್ಪಷ್ಟ.

ನಾಡಗೌಡ : "ರಾಷ್ಟ್ರಕೂಟರ ಆಡಳಿತದಲ್ಲಿ ಮಹಾರಾಷ್ಟ್ರದಲ್ಲಿ ಗ್ರಾಮನಿ ಎನ್ನುವ ಅಧಿಕಾರಿ ಇರುತ್ತಿದ್ದನು. ಅವನು ಹಳ್ಳಿಗಳ ಸಮೂಹದ ಅಧಿಕಾರವನ್ನು ನೋಡಿಕೊಳ್ಳುತ್ತಿದ್ದನು. ಇಂಥ ಹಳ್ಳಿಯ ಅಧಿಕಾರವನ್ನು 'ಗ್ರಾಮಕೂಟ' ಎಂದೇ ಕರೆಯುತ್ತಿದ್ದರು. ಅದೇ ರೀತಿ 'ದಶಗ್ರಾಮಕೂಟ' ಎನ್ನುವವನು ಹಳ್ಳಿಯ ಮುಖ್ಯಸ್ಥನಾಗಿದ್ದು ಅವನ ಅಧಿಕಾರ ವಂಶಪಾರಂಪಾರಿಕವಾಗಿರುತ್ತಿತ್ತು."[೨೩] ೧೦ ರಿಂದ ೪೦ ಹಳ್ಳಿಗಳ ಗುಂಪಿಗೆ ಹೋಬಳಿ ಎಂದು ಕರೆಯುತ್ತಿದ್ದರು. ಇದು ತರಾಫ ಎನ್ನುವ ಪದಕ್ಕೆ ಸಮಾನವಾಗಿದೆ. ಈ ಹೋಬಳಿ ಅಧಿಕಾರಿಯನ್ನು ನಾಡಿಗ ಅಥವಾ ನಾಡಗೌಡ ಎನ್ನುವ ಪದನಾಮದಿಂದ ಕರೆಯುತ್ತಿದ್ದರೆಂದು ತಿಳಿದುಬರುತ್ತದೆ.

"ಯಾದವರ ಉಗಮಕ್ಕಿಂತ ಮೊದಲು ದಕ್ಷಿಣದಲ್ಲಿ ಆಡಳಿತ ವ್ಯವಸ್ಥೆಯನ್ನು ರಾಷ್ಟ್ರ, ವಿಶ್ವ, ಮಂಡಲ, ಬುಕ್ತಿ ಎಂದು ಗುರುತಿಸಿದ್ದರು. ಗಂಪರಾ, ಗಾಂಪರ ಎನ್ನುವ ಪದಗಳು ಪ್ರಚಲಿದಲ್ಲಿದ್ದು

ಅವು ವಿಶ್ವ ಮತ್ತು ಬುಕ್ತಿ ಪದಕ್ಕೆ ಸಮಾನ ಪದಗಳಾಗಿವೆ. ಕಂಪನ ಎನ್ನುವುದು ದೇಶ್ ಅಧೀನದಲ್ಲಿರುತ್ತಿತ್ತು.''[೨೪] ಅದೇ ರೀತಿ ಮುಸಲ್ಮಾನರ ಅವಧಿಯಲ್ಲಿ 'ತರಾಫ' 'ಕರಿಯಾತ' ಎನ್ನುವ ಪದಗಳು ಪ್ರಚಲಿತದಲ್ಲಿದ್ದವು. ''ದೇಶ್ ಇದರ ಮುಖ್ಯಸ್ಥಳ 'ದಶಗ್ರಾಮ ಕೂಟ' ಕರ್ನಾಟಕದಲ್ಲಿ ಇತ್ತು'' ''ಕಂಪನ ಎಂದರೆ ನಾಡು''[೨೫] ಮತ್ತು ದೇಶ್ ಇದರ ಅಧಿಕಾರಿಗಳನ್ನು ನಾಡಗೌಡ ಎಂದು ಗುರುತಿಸುತ್ತಿದ್ದರು. ಮೊದಮೊದಲು ನಾಡಗೌಡನ ಅಧಿಕಾರ ಕಂದಾಯ ವಸೂಲಿಗೆ ಮಾತ್ರ ಸೀಮಿತವಾಗಿತ್ತು. ಆದರೆ ಕಂದಾಯವನ್ನು ವಸೂಲಿ ಮಾಡುವುದರ ಜೊತೆಗೆ ವಾಜ್ಯಗಳನ್ನು ಬಗೆಹರಿಸುವ ಗುರುತರ ಜವಾಬ್ದಾರಿಗಳನ್ನು ಮಾಡುತ್ತಿದ್ದರು. ಕರ್ನಾಟಕದಲ್ಲಿದ್ದ ನಾಡಗೌಡ ಮಹಾರಾಷ್ಟ್ರದಲ್ಲಿ ಪ್ರಚಲಿತದಲ್ಲಿದ್ದ ದೇಶಮುಖ ಇಬ್ಬರೂ ಒಂದೇ ಬಗೆಯ ಕಾರ್ಯನಿರ್ವಹಿಸುತ್ತಿದ್ದರು. ದೇಸಮುಖ್ ಇದು ಸಂಸ್ಕೃತ ಪದವಾಗಿದ್ದು ಇದರ ಅರ್ಥ ಮುಖಂಡ್, ಕಾಲಾಂತರದಲ್ಲಿ ಈ ಪದಗಳು ಬದಲಾವಣೆ ಹೊಂದುತ್ತ ಬಂದರೂ ಅವುಗಳ ಅರ್ಥ ಮಾತ್ರ ಒಂದೇ ಆಗಿದೆ.

ಒಟ್ಟಾರೆ, ದೇಸಮುಖ್ ಎಂಬುದರ ನಿರ್ಣಯವು ಈ ರೀತಿಯಾಗಿದೆ. ದೇಸ್ ಎಂದರೆ ಹತ್ತು ಮತ್ತು ಹತ್ತರ ಒಂದು ಭಾಗದ ಕಂದಾಯ ವಸೂಲಿ ಮಾಡುವ ವಂಶಪಾರಂಪರಿಕ ಅಧಿಕಾರ ಹೊಂದಿದವನೇ ದೇಸಮುಖ್. ಮರಾಠರು ದೇಶಮುಖನನ್ನು ಜಿಲ್ಲೆಯ ಮುಖವಾಸಿ ಎಂದು ಪರಿಗಣಿಸಿದಂತೆ ಕಾಣುತ್ತದೆ.

ಮರಾಠರ ಕಾಲದಿಂದ ಬ್ರಿಟೀಷರ ಇನಾಂ ಕಮೀಷನ್‌ಗಳ ದಾಖಲೆಗಳಲ್ಲಿ (Record) ಅಲಿನೇಷನ್ ದಾಖಲೆಗಳಲ್ಲಿ ಇವರ ಕುಲನಾಮ ದೇಸಾಯಿ ಎಂದು ಎಲ್ಲಿ ದಾಖಲಾಗಿಲ್ಲ. ದೇಸಮುಖಿ ಎಂದೇ ದಾಖಲಾಗಿದೆ. ಕಾರಣ ಮರಾಠ ಕಾಲದಲ್ಲಿ ದಾಖಲೆಗಳನ್ನು ಸಿದ್ದಪಡಿಸಿದ್ದರಿಂದ (ಇಷ್ಟಿಸನ್ ೧೮೮೬ರಲ್ಲಿ) ಅದರಲ್ಲಿ ಈ ಕುರಿತು ಮಾಹಿತಿ ಕಂಡು ಬರುತ್ತದೆ.

ಈ ಮೇಲಿನ ವಿವೇಚನೆಯಿಂದ ದೇಸಾಯಿ ಪದದ ಅರ್ಥವ್ಯಾಪ್ತಿ ವಿಶಾಲಾರ್ಥವನ್ನು ಪಡೆದುಕೊಂಡಿದೆ. ಜೊತೆಗೆ ಕಾಲಾಂತರದಲ್ಲಿ ಬದಲಾದ ದೇಶಮುಖಿ, ನಾಡಗೌಡರ ಕಾರ್ಯಬಾಹುಳ್ಯಗಳನ್ನು ವಿವೇಚಿಸಿಕೊಂಡು ಅಧ್ಯಯಿನಿಸಬೇಕಾಗಿದೆ. ಒಂದರ್ಥದಲ್ಲಿ ಸ್ಥಳೀಯ ಆಡಳಿತದ ಒಡೆಯರೆಂದು ''An herediatry offiecr the head of a District''[೨೬] ಎಂದು ಅರ್ಥ ಸಿಗುತ್ತದೆ. ಇವರು ಗ್ರಾಮದ ಹಾಗೂ ರಾಜನ ಮಧ್ಯವರ್ತಿಯಾಗಿ ಕಂಡುಬರುತ್ತಾರೆ. ಗ್ರಾಮಮಟ್ಟದ ಪರಗಣದ ಸರ್ಕಾರದ ಅಧಿಕೃತ ಪ್ರತಿನಿಧಿಯಾಗಿ, ವಂಶಪಾರಂಪರಿಕವಾದ ಅಧಿಕಾರಿಯಾಗಿ ಕಂಡುಬಂದವರೇ ಇವರಾಗಿದ್ದಾರೆ. ದೇಸಾಯಿ ಎಂಬುವನು ಒಟ್ಟು ಆದಾಯದ ನಾಲ್ಕರ ಒಂದು ಭಾಗ ಪಡೆಯುವ ಅಧಿಕಾರಿಯಾಗಿದ್ದಾನೆ. ಹೀಗೆ ದೇಸಾಯಿಗಳ ಕುರಿತು ವಾಖ್ಯೆಗಳು ಕಂಡುಬರುತ್ತವೆ. ಒಟ್ಟಾರೆಯಾಗಿ ಸ್ಥಳೀಯ ಆಡಳಿತ ನಿರ್ವಹಿಸುವ ಪ್ರತಿನಿಧಿಯಾಗಿರುವುದು ಇವರ ವ್ಯಕ್ತಿತ್ವದಿಂದ ತಿಳಿದುಬರುತ್ತದೆ.

ಇವರ ಅಧೀನದಲ್ಲಿರುವ ಪ್ರತಿಯೊಂದು ಗ್ರಾಮಗಳು ಒಂದು ಸಾಮಾನ್ಯ ಅಂಗವಾಗಿ ತನ್ನ ಕಾರ್ಯ ನಿರ್ವಹಿಸುತ್ತಿದ್ದವು. ಗ್ರಾಮದ ಮಾಹಿತಿ, ಸಂಗ್ರಹಿಸುವುದರೊಂದಿಗೆ ಅಧಿಕಾರ ಹಂಚಿಕೊಂಡು ಸ್ಥಳೀಯವಾಗಿ ಕೇಂದ್ರಿಕೃತವಾದ ಗ್ರಾಮದ ವಿವಿಧ ವ್ಯವಹಾರಗಳನ್ನು ಗಮನಿಸುತ್ತಿದ್ದುದಲ್ಲದೆ ರಾಜಾಜ್ಞೆ ಬಂದಾಗ ಅದರ ಪಾಲನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದನೆಂಬುದು ವಿಶೇಷವಾಗಿದೆ.

ಹಾಗೇ ಪ್ರತಿಗ್ರಾಮದ ಮುಖ್ಯಾಧಿಕಾರಿಯಾದ ಪಟೇಲ, ಗೌಡರು, ಪೋಲಿಸ ಪಾಟೀಲ, ಜಿರಾದಾರ ಪಾಟೀಲ, ಮುಲ್ಕಿ ಪಾಟೀಲರು ದೇಸಗತಿ ಆಡಳಿತದಲ್ಲಿ ಪ್ರಮುಖರಾಗಿದ್ದರು. ಆದಿಲ್‌ಶಾಹಿಯಿಂದ ಬೆಳವಣಿಗೆ ಕಂಡ ದೇಸಗತಿಗಳ ಆಡಳಿತ ಮೂರು ನೂರು ವರ್ಷಗಳವರೆಗೆ ಅನೇಕ ಏಳು ಬೀಳುಗಳನ್ನು ಕಂಡದ್ದು ದೇಸಗತಿಯ ಅಧ್ಯಯನದಿಂದ ತಿಳಿದುಬರುತ್ತದೆ.

೨.೩. ದೇಸಗತಿ ಬಗೆಗಳು

ಅಧ್ಯಯನವ ದೃಷ್ಟಿಯಿಂದ ದೇಸಗತಿಗಳ ಸ್ವರೂಪವನ್ನು ತಿಳಿಯಲು ಅವುಗಳ ವರ್ಗೀಕರಣ ಅತೀ ಅವಶ್ಯವಾಗಿದೆ. ಸಮಗ್ರವಾಗಿ ಅಧ್ಯಯಿನಿಸಲು ಹಾಗೂ ಅವುಗಳ ನಿಜದ ನೆಲೆಯ ಸ್ವರೂಪ ತಿಳಿಯಲು ಪ್ರಯತ್ನಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ದೇಸಗತಿಗಳ ಕಾರ್ಯದಕ್ಷತೆ, ಜಾತಿ ವರ್ಣಗಳ ಆಧಾರದಂಥ ಹಲವು ನಿಟ್ಟಿನಿಂದ ಗಮನಿಸಿ ಕೆಳಗಿನಂತೆ ವರ್ಗೀಕರಿಸಲಾಗಿದೆ.

೧. ಜಾತಿ ವರ್ಣ ಆಧಾರಿತ ಬಗೆ

೨. ಪ್ರಭುತ್ವ ಆಧಾರಿತ ಬಗೆ

೧. ಜಾತಿ ವರ್ಣ ಆಧಾರಿತ ಬಗೆ

- ಬ್ರಾಹ್ಮಣ ದೇಸಗತಿ
- ಜೈನ ದೇಸಗತಿ
- ಕ್ಷತ್ರೀಯ ದೇಸಗತಿ
  - ಕ್ಷತ್ರೀಯ
  - ವೀರಶೈವ ಕ್ಷತ್ರೀಯ
- ವೀರಶೈವ(ಲಿಂಗಾಯತ)ದೇಸಗತಿ
  - ಗಾಣಿಗ ಮತದ ದೇಸಗತಿ
  - ಪಂಚಮಸಾಲಿ ಮತದ ದೇಸಗತಿ
  - ರಡ್ಡಿಮತದ ದೇಸಗತಿ
    - ರಡ್ಡಿದೇಸಗತಿ ಲಿಂಗಾಯತ
    - ರಡ್ಡಿದೇಸಗತಿ

೨. ಪ್ರಭುತ್ವ ಆಧಾರಿತ ಬಗೆ

- ದೇಸಾಯಿ
- ನಾಡಗೌಡರು

೨.೩.೧. ಕ್ಷತ್ರೀಯ ದೇಸಗತಿಗಳು

ಬಾಗಲಕೋಟೆ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು ಏಳು ದೇಸಗತಿಗಳಿವೆ. ಅವರೆಲ್ಲರು ಕ್ಷತ್ರೀಯರೆಂದು ಹೇಳಿಕೊಳ್ಳುತ್ತಾರೆ. ಇವರಲ್ಲಿಯೆ ಮತ್ತೆ ಭಿನ್ನತೆ ಇದೆ. ಕೆಲವರು ವೀರಶೈವ ಕ್ಷತ್ರೀಯರೆಂದು ಇನ್ನೂ

ಕೆಲವರು ಕ್ಷತ್ರೀಯರೆಂದು ಹೇಳಿಕೊಳ್ಳುತ್ತಾರೆ. ಇವರೆಲ್ಲರ ಆಚರಣೆಗಳು ಬೇರೆ ಬೇರೆಯಾಗಿವೆ. ಮೂಲ ಕ್ಷತ್ರೀಯರೆನಿಸಿಕೊಳ್ಳುವವರು ಬ್ರಾಹ್ಮಣರಿಂದ ತಮ್ಮ ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸಿಕೊಳ್ಳುತ್ತಾರೆ. ವೀರಶೈವ ಕ್ಷತ್ರೀಯರೆನ್ನುವವರು ಹಿರೇಮಠದ ಸ್ವಾಮಿಗಳಿಂದ ತಮ್ಮ ಧಾರ್ಮಿಕ ವಿಧಿ ವಿಧಾನಗಳನ್ನು ಆಚರಿಸಿಕೊಳ್ಳುವುದು ಕಂಡುಬರುತ್ತದೆ.

ಕ್ಷತ್ರೀಯ ದೇಸಗತಿ ಮನೆತನದ ದೇವರುಗಳೆಂದರೆ ತಿರುಪತಿ ವೆಂಕಟರಮಣನಾಗಿದ್ದಾನೆ. ತಿರುಪತಿ ವೆಂಕಟರಮಣನ ಪ್ರತಿರೂಪವೆಂಬಂತೆ ಮಾರುತಿ ದೇವರನ್ನೆ ಪೂಜಿಸುತ್ತಾರೆ. ಈ ಮಾರುತಿ ದೇವನಿಗೆ ಹಣೆಯ ಮೇಲೆ ಮೂರು ನಾಮವಿರುತ್ತವೆ. ಇಂಥ ಹನುಮಂತ ದೇವರು ಬಾಗಲಕೋಟಿ ತಾಲೂಕಿನ ತುಳಸಿಗಿರಿಯಲ್ಲಿ. ಹಾಗೆ ಯಲಗೂರದಲ್ಲಿಯೂ ಕಂಡು ಬರುತ್ತದೆ. ಈ ದೇವರಿಗೆ ಬಹುಪಾಲು ಕ್ಷತ್ರೀಯರೇ ನಡೆದುಕೊಳ್ಳುತ್ತಾರೆ. ಕೆಲವರು ಶ್ರೀವೆಂಕಟೇಶ್ವರನನ್ನು ಬಾಲಗೋಪಾಲ ಕೃಷ್ಣನನ್ನು ಪೂಜಿಸುತ್ತಾರೆ. ದೇಸಗತಿಗಳವರು ದೀಪಾವಳಿ ಎರಡು ದಿನ ಮುಂಚೆ ಗೋಪಾಳ ಆಡುವ ಸಂಪ್ರದಾಯವಿದೆ.

ಕ್ಷತ್ರೀಯ ಮನೆತನದ ದೇಸಾಯಿಗಳಿಗೆ ಗುರುಗಳು ನಿರ್ದಿಷ್ಟವಾಗಿ ಇವರೆ ಎಂದು ಇಲ್ಲ. ತಮ್ಮ ಮನೆತನದ ಧಾರ್ಮಿಕ ವಿಧಿ ವಿಧಾನಗಳಿಗೆ ಮದುವೆ, ಮುಂಜುವೆಗಳಿಗೆ ಬ್ರಾಹ್ಮಣರನ್ನು, ಹಿರೇಮಠದ ಅಯ್ಯನವರನ್ನು ಬರಮಾಡಿಕೊಂಡು ಅವರಿಂದ ಕಾರ್ಯಗಳನ್ನು ನೆರವೇರಿಸುತ್ತಾರೆ. ಇತ್ತಿಚೀನ ಮಾಹಿತಿ ಪ್ರಕಾರ ಆನೆಗುಂದಿ ಅರಸರು ತಮ್ಮ ಗುರುಗಳೆಂದು ಅವರ ವಂಶಜರಾದ ಅಚ್ಚುತ ದೇವರಾಯ ಅವರನ್ನು ವೈಭವದಿಂದ ಕರೆತರುವುದಲ್ಲದೆ ಪಾದಪೂಜೆ ಮಾಡುವುದು ಪ್ರಚಲಿತದಲ್ಲಿದೆ. ಆದರೆ ಇವರ ಮೂಲ ಗುರುಗಳು ಯಾರೆಂದು ತಿಳಿದುಬರುವುದಿಲ್ಲ.

ಈ ಭಾಗದ ಕ್ಷತ್ರೀಯ ದೇಸಾಯಿಗಳು "ಕ್ರಿ.ಶ.೧೫೦೦ರಲ್ಲಿ ವೀರಶೈವ ಶರಣರಿಂದ ವೀರಶೈವ ದೀಕ್ಷೆ ಪಡೆದರು".[೨೭] ಹಾಗೇ ದೇಸಗತಿ ಪ್ರಜೆಗಳೂ ಕೂಡ ತಮ್ಮ ದೊರೆಯಂತೆ ಧೀಕ್ಷೆ ಪಡೆದರು. ಆಗ ವೀರಶೈವ ಕ್ಷತ್ರೀಯರಾದವರು ವಿಭೂತಿ, ರುದ್ರಾಕ್ಷಿ ಕೊರಳಲ್ಲಿ ಲಿಂಗಧಾರಣ ಮಾಡುತ್ತ ನಡೆದಿದ್ದಾರೆ. ದೀಕ್ಷೆ ನೀಡಿದ ಗುರುಗಳಿಗೆ ಮಠಗಳನ್ನು ಕಟ್ಟಿಸಿ ಭೂಮಿಯನ್ನು ಉಂಬಳಿಯಾಗಿ ನೀಡಿದ್ದಾರೆ.

೨.೩.೨. ಜೈನ ದೇಸಗತಿ

ಈ ದೇಸಗತಿಯು ಮೂಲತಃ ಸಾತಾರಕ್ಕೆ ಅಂದರೆ ಮಹಾರಾಷ್ಟ್ರಕ್ಕೆ ಸೇರಿತ್ತು. ನಂತರ ಜಿಲ್ಲಾವಾರು ವಿಭಜನೆಗೊಂಡಾಗ ತೇರದಾಳವು ಜಮಖಂಡಿ ತಾಲೂಕಿಗೆ ಒಳಪಟ್ಟಿತು. ಜಮಖಂಡಿ ಸಂಸ್ಥಾನವು ಇಸ್ವಿಸನ್ ೧೭೩೭ಕ್ಕೆ ಅಧಿಕಾರ ಹೊಂದಿದಾಗ ಇದರಡಿಯಲ್ಲಿ ಸೇರ್ಪಡೆಯಾಯಿತು. ಆದರೆ ಇದರ ಕಂದಾಯ ಆಡಳಿತದ ಹಕ್ಕು ಬಾಧ್ಯತೆಗಳು ಸಾತಾರ ಪಟವರ್ಧನರ ಆಡಳಿತದಲ್ಲಿ ಸೇರ್ಪಡೆಯಾಗಿದ್ದವು.

ಬಾಗಲಕೋಟಿ ಜಿಲ್ಲೆಯಲ್ಲೇ ಇದು ಏಕೈಕ ಜೈನಧರ್ಮದ ದೇಸಗತಿಯಾಗಿದೆ. ಇದರ ಕೇಂದ್ರಸ್ಥಾನವೆ ತೇರದಾಳ ಆಗಿದ್ದು ಇದರ ಇನ್ನೇರಡು ಕವಲುಗಳು ಹಂಚಿಹೋಗಿವೆ. ಅದು ಹೀಗಿದೆ.

ತೇರದಾಳ

ಹನಗಂಡಿ ಹಳಿಂಗಳಿ

ಪ್ರಮುಖವಾಗಿ ತೇರದಾಳವೇ ನಾಡಗೌಡಕಿ ಪಡೆದುಕೊಂಡ ದೇಸಗತಿಯಾಗಿದೆ. ಈ ನಾಡಗೌಡಕಿಯಿಂದಲೇ ಹನಗಂಡಿ ದೇಸಗತಿ, ಹಳಿಂಗಳಿ ದೇಸಗತಿ ಒಡೆದು ಹೋಗಿವೆ. ಮೂಲದಲ್ಲಿ ಇವು ಒಂದೇ ಆಗಿದ್ದವು. ಈ ಮೂರು ದೇಸಗತಿಗಳು ಜೈನ ಪರಂಪರೆಯಿಂದಲೆ ಹುಟ್ಟಿ ಕೊಂಡಿವೆ. ಇದರ ಮೂಲ ಪುರುಷನು ಜಿನಗಿ ಬಾವಾ. ಇವನ ಪ್ರೇರಣೆಯಿಂದಲೆ ಜಿನ ಸಂಪ್ರದಾಯವನ್ನು ಒಪ್ಪಿಕೊಂಡರು. ಆದರೆ ಇವರು ಮೂಲ ಜಿನರಾಗಿದ್ದ ಬಗ್ಗೆ ತಿಳಿದುಬರುವುದಿಲ್ಲ. ಪ್ರಸ್ತುತದಲ್ಲಿ 'ಜಿನ' ಧರ್ಮಕ್ಕೆ ಅನುಯಾಯಿಗಳಾಗಿ ಜಿನ ಸಂಪ್ರದಾಯವನ್ನೆ ಅನುಸರಿಸುತ್ತಾರೆ.

ಇವರ ಕುಲ ದೇವತೆ ಜಿನ ಮೂರ್ತಿಯಾಗಿದೆ. ಇವರಲ್ಲಿ ಎರಡು ಬಗೆಗಳಿವೆ. ಇವೆರಡರ ಆಚರಣೆಗಳು ಬೇರೆ ಬೇರೆಯಾಗಿವೆ. ಇದರಲ್ಲಿ ಮತ್ತೆ ಎರಡು ಬಗೆಗಳನ್ನು ಮಾಡಿಕೊಂಡು ಬಸ್ತಿ ಎಂದು ಕರೆದುಕೊಳ್ಳುತ್ತಾರೆ. ಬಸ್ತಿ ಎಂದರೆ ಬಸದಿ ಎಂದರ್ಥ. ಆಚರಣೆಯ ದೃಷ್ಠಿಯಿಂದ ತಮ್ಮ ತಮ್ಮಲ್ಲಿ ನಾವು ಶ್ರೇಷ್ಠ ನಮ್ಮದು ಶ್ರೇಷ್ಠ ಎಂದು ಹೇಳಿಕೊಳ್ಳುತ್ತಾರೆ.

ಇವರಿಗೂ ಕೂಡ ವೀರಶೈವ ಮತದ ತೇರದಾಳ ಪ್ರಭುದೇವರಿಂದ ವೀರಶೈವ ದೀಕ್ಷೆಯಾಗಿದೆ. ಇವರಾದರೂ ಕೂಡ ಜೈನ ಮತ ಸಂಪ್ರದಾಯದ ಜೊತೆಗೆ ವೀರಶೈವ ಆಚರಣೆಗಳನ್ನು ಕೂಡ ಆಚರಿಸುತ್ತಿದ್ದಾರೆ. ಪ್ರಸ್ತುತ ಜೈನ ಮತ ಸಂಪ್ರದಾಯವನ್ನು ಸಹ ಆಚರಿಸುತ್ತಾರೆ. ಇವರ ಮನೆಗಳಲ್ಲಿ ಪ್ರತ್ಯೇಕ ದೇವರ ಜಗುಲಿ ಇದ್ದು ಜಗುಲಿಯ ಮೇಲೆ ಜಿನ ಮೂರ್ತಿಗಳನ್ನು ಇಟ್ಟು ಪೂಜಿಸುತ್ತಾರೆ. ಹಾಗೆ ಜಿನ ದೇವಾಲಯವನ್ನು ಕಟ್ಟಿ ಜೀರ್ಣೋದ್ಧಾರ ಮಾಡಿದ್ದಾರೆ. ವೀರಶೈವ ಮತದ ಗುಡಿಗಳನ್ನು ಕಟ್ಟಿಸಿ ಜೀರ್ಣೋದ್ಧಾರ ಮಾಡಿದ್ದು ಇದೆ. ಈ ಕುರಿತಾದ ಶಾಸನ ಕೂಡ ಬರೆಸಿದ್ದು ಇದೆ.

೨.೩.೩. ಬ್ರಾಹ್ಮಣ ದೇಸಗತಿ

ಇದೂ ಕೂಡ ಬಾಗಲಕೋಟಿ ಜಿಲ್ಲೆಯ ಏಕೈಕ ದೇಸಗತಿಯಾಗಿದೆ. ಗ್ರಾಮೀಣ ಪ್ರದೇಶವಾದ ಮನ್ನಿಕೇರಿ ಗ್ರಾಮದಲ್ಲಿದ್ದು ಪರಗಣ ಬಾಗಲಕೋಟಿಯನ್ನು ಕೇಂದ್ರಸ್ಥಾನವನ್ನಾಗಿಸಿಕೊಂಡು ಆಳಿಕೆ ಮಾಡಿದೆ. ಬ್ರಾಹ್ಮಣ ಮತದಲ್ಲಿ ಎರಡು ಬೇಧಗಳಿವೆ. ೧. ವೈಷ್ಣವರು ೨. ಸ್ಮಾರ್ತರು. ಇವರು ಆಚಾರ್ಯ ಪಂತದವರಾಗಿರುವುದರಿಂದ ವಿಧಿ ವಿಧಾನಗಳನ್ನು ಕಟ್ಟುನಿಟ್ಟಿನಿಂದ ಆಚರಿಸುತ್ತಾರೆ. ವೈಷ್ಣವ ಪಂಥಕ್ಕೆ ಸೇರಿದ ಇವರು ತಮ್ಮ ಅನುಸರಣೆಯ ವಿಧಿ ವಿಧಾನಗಳನ್ನು ಮತ್ತೊಬ್ಬ ವೈಷ್ಣವ ಆಚಾರ್ಯರಿಂದಲೆ ಆಚರಿಸುತ್ತ ಬಂದಿದ್ದಾರೆ. ಇವರ ಕುಲದೇವರಾಗಿ ರಾಘವೇಂದ್ರಸ್ವಾಮಿ, ದತ್ತಾತ್ರೇಯನನ್ನು

ಆರಾಧಿಸುತ್ತಾರೆ. ಇನ್ನೂ ವಿಶೇಷವಾದ ಅಂಶವೆಂದರೆ ಕೊತ್ತಲ ಮಾರುತೇಶನನ್ನು ಅನನ್ಯ ಭಕ್ತಿಯಿಂದ ಆಚರಿಸುವುದು ರೂಢಿಯಲ್ಲಿದೆ.

ಇವರಾದರೂ ಕೂಡ ತಮ್ಮ ಗುರುಗಳ ಬಗ್ಗೆ ನಿರ್ಧಿಷ್ಟವಾಗಿ ಹೇಳಿಕೊಳ್ಳುವುದಿಲ್ಲ. ಲೋಕಾರೂಢಿ ಪ್ರಕಾರ ರಾಘವೇಂದ್ರ ಸ್ವಾಮಿಗಳೆ ಗುರುಗಳೆಂದು ಹೇಳುತ್ತಾರೆ.

೨.೩.೪. ವೀರಶೈವ ಮತದ ದೇಸಗತಿಗಳು

ರಡ್ಡಿ ಮತದ ದೇಸಗತಿ

ರಡ್ಡಿಮತ ದೇಸಗತಿಗಳು ಬಾಗಲಕೋಟಿ ಜಿಲ್ಲೆಯ ಮೂರು ತಾಲೂಕುಗಳಲ್ಲಿ ಕಾಣಸಿಗುತ್ತಾರೆ. ೧.ಬೀಳಗಿ ೨. ಹುನಗುಂದ ೩. ಬದಾಮಿ. ಒಟ್ಟು ದೇಸಗತಿಗಳು ೫ ಇವೆ. ಇವುಗಳಲ್ಲಿಯೆ ಅನೇಕ ಪ್ರಭೇದಗಳಿವೆ. ಅವುಗಳೆಂದರೆ, ನಾಮದ ರಡ್ಡಿ, ವಿಭೂತಿ ರಡ್ಡಿ, ಚಿಟಮುಟರಡ್ಡಿ, ಪಾಕನಾಕರಡ್ಡಿ, ಬರಮರಡ್ಡಿ ಇತ್ಯಾದಿ.

ಮೂಲತಃ ಇವರು ಕರ್ನಾಟಕದವರು ಅಲ್ಲ. ''ಆಂಧ್ರಪ್ರದೇಶದಲ್ಲಿ ಪಾಟೀಲರಾಗಿದ್ದು ಗ್ರಾಮಾಧಿಕಾರಿಗಳಾಗಿದ್ದು ಅಲ್ಲಿಂದ ದೇಸಿಗರಾಗಿ ಅಲೆಯುತ್ತ ಕರ್ನಾಟಕದಲ್ಲಿ ನೆಲೆಸಿದ್ದು ತಿಳಿದುಬರುತ್ತದೆ.''[೨೮] ಇವರನ್ನು ಅಲ್ಲಿಯೂ ಕೂಡ ರೆಡ್ಡಿ ಅಥವಾ ರಡ್ಡಿ ಎಂದು ಕರೆಯುತ್ತಿದ್ದರು. ರಡ್ಡಿ ಎಂಬುದು ಸಂಸ್ಕೃತದ ರಾಷ್ಟ್ರೀಕ ಎಂದಾಗುತ್ತದೆ. ಒಂದು ನಾಡು ಅಥವಾ ಚಿಕ್ಕ ಪ್ರದೇಶವೊಂದರ ಅಧಿಕಾರಿ ಎಂದಾಗುತ್ತದೆ.

ಈ ಭಾಗದ ದೇಸಾಯಿಗಳು ನಾಯಕರು, ವಿಭೂತಿ ರಡ್ಡಿ ಎಂದು ಹೇಳಿಕೊಳ್ಳುತ್ತಾರೆ. ಇವರ ಮನೆತನದ ಕುಲದೇವರೆಂದರೆ ಶ್ರೀವೆಂಕಟರಮಣ, ತಿರುಪತಿ ವೆಂಕಟೇಶ್ವರನಾಗಿದ್ದಾನೆ. ಹಾಗೆ ಆಯಾ ಭಾಗದ ಪ್ರಮುಖ ದೇವರನ್ನೂ ಕೂಡ ತಮ್ಮ ತಮ್ಮ ಮನೆ ದೇವರೆಂದು ಹೇಳುತ್ತಾರೆ. ಸಿದ್ದೇಶ್ವರ, ಶ್ರೀಶೈಲ ಮಲ್ಲಿಕಾರ್ಜುನ, ವಾರಿ ಮಲ್ಲಿಕಾರ್ಜುನ ಇತ್ಯಾದಿ.

ರಡ್ಡಿ ಮತದ ದೇಸಾಯಿಗಳೂ ಕೂಡ ವೀರಶೈವ ಮತದ ಗುರುಗಳಿಂದ ವೀರಶೈವ ದೀಕ್ಷೆ ಪಡೆದಿದ್ದಾರೆ. ಅಲ್ಲಿಂದಲೇ ಇವರು ವೀರಶೈವ ರಡ್ಡಿ ಎಂದು ಹೇಳಿಕೊಳ್ಳುತ್ತಾರೆ.

ಇವರ ಗುರುಗಳು ಒಬ್ಬರಾಗಿರುವುದಿಲ್ಲ ಪ್ರತಿಯೊಬ್ಬರು ಬೇರೆ ಬೇರೆ ಹೇಳಿಕೊಳ್ಳುತ್ತಾರೆ. ಆಯಾ ಗುರುಗಳಿಗೆ ಹೊಲ, ಮನೆ, ಮಠ ಕಟ್ಟಿಸಿಕೊಟ್ಟಿದ್ದಾರೆ.

೨.೪. ಪ್ರಮುಖ ದೇಸಗತಿಗಳು

೨.೪.೧. ಜಾಲಿಹಾಳ ದೇಸಗತಿ

ಜಾಲಿಹಾಳ ದೇಸಗತಿಯವರು ಕ್ಷತ್ರೀಯರಾಗಿದ್ದು ಆನೆಗುಂದಿ ಅರಸರ ರಾಜ್ಯಭಾರದಲ್ಲಿಯೇ ಈಗಿನ ಬಾಗಲಕೋಟಿ ಜಿಲ್ಲೆಯ ಬಾದಾಮಿ ತಾಲೂಕಿನ ಬೇಲೂಗಿರಿ, ಜಾಲಿಹಾಳಗಳಲ್ಲಿ ಆಳ್ವಿಕೆ ನಡೆಸಿದರೆಂದು

ತಿಳಿದುಬರುತ್ತದೆ. ನೀರಬೂದಿಹಾಳ, ಐಹೊಳೆ ಪಟ್ಟದಕಲ್ಲು(ಅಕ್ಕರಗಲ್ಲ) ದೇಸಾಯಿಗಳಿಗೆ ಬೈರಪಕ್ಕಿ ಬಹದ್ದೂರ ಎಂಬ ಬಿರುದುಗಳಿವೆ. ಇವರೆಲ್ಲರೂ ಸುರಪುರ ಸಂಸ್ಥಾನದ ಕಡೆಯಿಂದ ಬಂದವರೆಂದು ಒಂದು ಕಡೆ ದೊರೆತರೆ ಮತ್ತೊಂದು ಮಾಹಿತಿ ಪ್ರಕಾರ ಆನೆಗುಂದಿ ಅರಸರ ಕಡೆಯಿಂದ ಈ ಭಾಗದ ಉಂಬಳಿ ಪಡೆದು ದೊರೆತನ ಗಳಿಸಿಕೊಂಡರೆಂದು ತಿಳಿದುಬರುತ್ತದೆ. ಇವೆರಡು ಅಂಶಗಳು ಕ್ಷತ್ರೀಯ ಮನೆತನದ ದೇಸಗತಿಗಳಿಗೆ ಪುಷ್ಠಿ ನೀಡುತ್ತವೆ.

ಪ್ರತಿವರ್ಷವೂ ಕೂಡಾ ಆನೆಗುಂದಿ ಅರಸರಿಗೆ ವಾರ್ಷಿಕ ಹಮ್ಮಿಣಿ (ನಜರಾಣಿ) ಕೊಟ್ಟು ಬರುತ್ತಿದ್ದರೆಂದು, ತಿಳಿದುಬರುತ್ತದೆ. ಅರಸರ ಅಧೀನರಾಗಿದ್ದು ಆನೆಗುಂದಿ ಅರಸೊತ್ತಿಗೆಗೆ ಸುಮಾರು ವರ್ಷಗಳವರೆಗೂ ನಡೆದುಕೊಂಡೆ ಹೋಗುತ್ತಿದ್ದರು. ಮರಳಿ ಬರುವಾಗ ನದಿ ದಡದಲ್ಲಿ ವೆಂಕಟೇಶ್ವರ ಮೂರ್ತಿ ಸಿಕ್ಕಿತೆಂದು ಅದನ್ನು ತಂದು ಪ್ರತಿಷ್ಠಾಪಿಸಿದರೆಂದು ಮಾಹಿತಿ ಸಿಗುತ್ತದೆ.

ಆನೆಗುಂದಿಯ ನಂತರ ವಿಜಯನಗರದ ಅರಸರಿಗೆ ಅಧೀನರಾಗಿದ್ದು ನಂತರ ಪ್ರಾಂತದ ಅಧಿಕಾರಿಗಳಾಗಿ ರಾಜ್ಯಭಾರ ನಡೆಸಿದ್ದು ಆಗಿದೆ. ಕ್ರಿ.ಶ.೧೪೦೦ರಲ್ಲಿ ಈ ಮನೆತನದ ದೊರೆಗಳ ಬಗ್ಗೆ ಅಲ್ಪಸ್ವಲ್ಪ ಮಾಹಿತಿ ಸಿಗುತ್ತದೆ.

ಈ ಮನೆತನದಲ್ಲಿ ಮೊದಲಿಗೆ ಕಾಣಿಸಿಕೊಂಡವನು ನಾರಾಯಣ ಒಡೆಯರ ರಾಮರಾವ ಒಡೆಯರ, ಕೃಷ್ಣಪ್ಪ ಒಡೆಯರ. ಈ ಮೂವರು ಬಲ ಬಾಹುವುಳ್ಳರಾಗಿದ್ದು ಜಾಲಿಹಾಳ ಕೆರೂರಗಳಲ್ಲಿ ನಿಂತು ಆಳಿಕೆ ಮಾಡಿದರೆಂದು, ಮತ್ತೊಬ್ಬರು ಅಕ್ಕರಗಲ್ಲ ಐಹೊಳೆ ಕಡೆಗೆ ಹೋದರೆಂದು ತಿಳಿದುಬರುತ್ತದೆ. ಒಟ್ಟು ೧೦೪ ವರ್ಷ ದೌಲತ ಮಾಡಿದ ಬಗ್ಗೆ ಬರೆದಿಟ್ಟ ವಂಶಾವಳಿಯಿಂದ ತಿಳಿದುಬರುತ್ತದೆ. ಆಗಲೇ ಬೇಲುಗಿರಿ ಪರಗಣ ಇನಾಂ ಸಿಕ್ಕಿದ್ದಾಗಿದೆ. ಇದರಲ್ಲಿ ಅಚ್ಚಪ್ಪ, ತಿಮ್ಮಪ್ಪ ಅರವತ್ತೊಂಬತ್ತು ವರ್ಷ ಆಳಿಕೆ ಮಾಡಿದರು. ಅನ್ನದಾನ ಕೃಷ್ಣಪ್ಪ ದೇಸಮುಖ, ಗುಡ್ಡದ ತಿಮ್ಮಪ್ಪನಾಯಕ, ಐವತ್ತೊಂದು, ಮೂವತ್ತಾರು ವರ್ಷ ಆಳಿಕೆ ಮಾಡಿದರು. ಹೀಗೆ ೨೦ ಜನರು ಆಳಿಕೆ ಮಾಡಿದ್ದಾರೆ. ಹಾಗೆ ದೊರೆಸಾನಿಯರೂ ಕೂಡ ಆಳಿಕೆ ಮಾಡಿದ್ದು ವಿಶೇಷವೆನಿಸಿದೆ. ಇವರ ಮನೆತನದಲ್ಲಿ ಪೇಶ್ವೆಗಳ ಕಾಲದಲ್ಲಿ ದೇಸಗತಿ ವಿಭಾಗ ಆಗಿದ್ದರಿಂದ ಹೊಸೂರ ಹಾಗೂ ಜಾಲಿಹಾಳ ಎರಡು ಸಂಸ್ಥಾನಗಳಾದವು. ಅವೆರಡು ರಾಜಕೀಯ ವಹಿವಾಟ ಹಿಡಿದುಕೊಂಡು ದೇಸಗತಿಯನ್ನು ಸಮೃದ್ಧವಾಗಿರಿಸಿ ಆಳಿದ್ದು ಕಂಡುಬರುತ್ತದೆ.

"ಆನೆಗುಂದಿ ಅರಸರ ಕಾಲದಿಂದ ಹಿಡಿದು ಬಿಜಾಪೂರ ಬಾದಶರ ಕಾಲದವರೆಗೆ ದೌಲತ ಮಾಡಿದ ವರ್ಷ ಒಂದನೂರಾ ಎಪತ್ತೂ್ಮರು ವರ್ಷ".[೨೯] ಕೆರೂರ, ಬಾಗಲಕೋಟಿ ನಾಯ್ಕ ಸರ್ವ ಇನಾಂ, ಊರ ಎಲ್ಲಾ ಭಾಗ ಕುಲಾಚಾರ, ಪಾಟೀಲ ಮತ್ತು ಕುಲಕರ್ಣಿ ಎಲ್ಲಾ ತರದ ಬಾಬ ವತನದಾರ, ಎಲ್ಲಾ ನಾಯ್ಕ ಉಪಭೋಗ ಮಾಡಿಕೊಂಡು ದೇಸಗತ ಆಳಿದ ಕುರಿತು ದಾಖಲೆಗಳು ನಿರ್ದೇಶಿಸುತ್ತವೆ.

ಜಾಲಿಹಾಳ, ಹೊಸೂರ, ದೇಸಗತಿಗಳು ಒಂದೇ ಆಗಿದ್ದವು. ಸುಮಾರು ವರ್ಷಗಳ ನಂತರ ಅಣ್ಣ ತಮ್ಮಂದಿರು ಆಸ್ತಿಯನ್ನು ಹಂಚಿಕೊಂಡು ಬೇರೆ ಬೇರೆಯಾದಾಗ ಸ್ವಾಭಾವಿಕವಾಗಿ ದೇಸಗತಿ ಒಡೆದವು. ಈ ಮೊದಲು ಎಲ್ಲರೂ ಒಟ್ಟಾಗಿ ಇರುವಾಗಲೇ ಜಾಲಿಹಾಳ ದೇಸಗತಿಯನ್ನು ಕಟ್ಟಿದರು. ಜಾಲಿಹಾಳ, ಹೊಸೂರಗಳಲ್ಲಿ ಕೋಟೆಯನ್ನು ಕಟ್ಟಿದ್ದು ಇವರೆಲ್ಲರ ದುಡಿಮೆಯ ಫಲ. ಅಂದಿನ ಸ್ಥಿತಿ ಇಂದು ಇಲ್ಲ. ಇವರಿಬ್ಬರು ತಮ್ಮ ಪಾಲಿಗೆ ಬಂದ ಆಸ್ತಿಯನ್ನು ತೆಗೆದುಕೊಂಡು ಬೇರೆಯಾದ ಸಂದರ್ಭದಲ್ಲಿ ಎರಡೂ ದೇಸಗತಿಗೆ ಹತ್ತರಿಂದ ಹದಿನೈದು ಗ್ರಾಮಗಳು ಬಂದವು.

ಚಾವರಾತ ಹಳ್ಳಿಗಳು

"ದೇಸಗತಿಗೆ ಅಧೀನಕ್ಕೆ ಒಳಪಟ್ಟ ಗ್ರಾಮಗಳನ್ನು ಚಾವರಾತ ಹಳ್ಳಿಗಳು (ಗ್ರಾಮಗಳು) ಎಂದು ಕರೆಯುತ್ತಾರೆ."[೩೦] ಈ ದೇಸಗತಿಗೆ ಮೂಲದಲ್ಲಿದ್ದ ಒಟ್ಟು ಗ್ರಾಮಗಳೆಂದರೆ ಮುಖ್ಯ ಕಸಬಾ ೭(ಏಳು) ನಾಲವತ್ತ ಮೂರು ಚಾವರಾತ ಹಳ್ಳಿಗಳು ಮೂವತ್ತೆಂಟು ಖಾಲಸಾತ ಒಟ್ಟು ೮೧. ೨ನೇ ಸೀಮೆ ಇನಾಂದಲ್ಲಿ ೪ ಕಸಬಾ ರೋಣ ಪರಗಣಕ್ಕೆ ೧೦ ಹಳ್ಳಿಗಳು ಇರುತ್ತವೆ.

೨.೪.೨. ಮನ್ನಿಕೇರಿ ದೇಸಗತಿ(ಬಾಗಲಕೋಟಿ ಘರಾಣಾ)

ಅಖಂಡ ಬಿಜಾಪೂರ ಜಿಲ್ಲೆಯ ಬಾಗಲಕೋಟಿ ತಾಲೂಕಿನ ಒಂದು ಚಿಕ್ಕ ಗ್ರಾಮ ಮನ್ನಿಕೇರಿ. ಇದು ಬ್ರಾಹ್ಮಣ ದೇಸಗತಿಯಾಗಿದೆ. ಕ್ರಿ.ಶ.೧೬೦೦ನೇ ಇಸ್ವಿಯಲ್ಲಿ ದೇಸಗತಿ ಸಿಕ್ಕಿರುತ್ತದೆ. ಈ ಮನೆತನದ ಮೂಲಪುರುಷನ ಬಗ್ಗೆ ಮಾಹಿತಿಗಳು ಲಭ್ಯವಾದರೂ ಯಾವುದೇ ಇಸ್ವಿಯನ್ನು ದಾಖಲಿಸಿಲ್ಲ. ಹಾಗಾಗಿ ಖಚಿತವಾಗಿ ದೇಸಗತಿ ಹುಟ್ಟನ್ನು ನಿರ್ಧರಿಸಲು ಅಸಾಧ್ಯವಾಗುತ್ತದೆ.

ಈ ದೇಸಗತಿ ಮೂಲಪುರುಷರು ಮೂರು ಜನರು. ಮೂಲ ಪುರುಷನಿಗೆ ೨ ಗಂಡು ಮಕ್ಕಳು ಒಂದು ಹೆಣ್ಣು ಮಗು ಇರುತ್ತದೆ.

ಲಕ್ಕಸದನಯ್ಯಾನೇ ಮೂಲಪುರುಷ ಇವನ ಹಿರೇಮಗಾ ಶ್ರೀಸದಯ್ಯಾ ಎರಡನೇ ಮಗ ಅದೃಶ್ಯಪ್ಪಾ ಮೂರನೆಯವಳು ಹೆಣ್ಣು ಮಗಳು.

ಇಲ್ಲಿ ಮೂರನೇ ಮಗಳ ಹೆಸರು ತಿಳಿದುಬರುವುದಿಲ್ಲ. ಇವಳೇ ಆದಿಲ್‌ಶಾಹಿಗಳಿಗೆ ಸಹಾಯ ನೀಡಿದ್ದರಿಂದ 'ಸರ್ವ ಇನಾಂ' ಸಿಕ್ಕಿದ್ದು ಇದೆ. ಆ ಜಮೀನನ್ನು ಪಡೆದುಕೊಂಡು ದೇಸಗತಿ ಆಳಿದ್ದು ಕಂಡುಬರುತ್ತದೆ. (ಅವರ ಮುಂದಿನ ವಂಶಾವಳಿಯನ್ನು ಅನುಬಂಧದಲ್ಲಿ ಕೊಡಲಾಗಿದೆ) ಇವರ ಮುಂದಿನ ದೇಸಾಯಿಗಳು ತಮ್ಮ ವಂಶವನ್ನು ಬೆಳೆಸಿದ್ದರಿಂದ ಮೂಲದೇಸಾಯಿಗೆ ೨, ೩ ಜನ ಮಕ್ಕಳು ಹುಟ್ಟಿದ್ದರಿಂದ ಅವರೆಲ್ಲರಿಗೂ ಆಯಾ ಭಾಗದ ಗೌಡಕಿ ನೀಡಿದ್ದು ಕಂಡುಬರುತ್ತದೆ. ಬಾನದೇಯಪ್ಪ, ಗೋವಿಂದಪ್ಪ, ಗಿರಿಯಪ್ಪಾ ಹಿರೇ ತಿಮ್ಮಪ್ಪನೆಂಬುವನು ಸರದೇಸಗತಿ ಸ್ಥಾಪಿಸಿದ್ದು ಆಗಿದೆ.

ಇವನ ನಂತರ ಬಂದಂತಹ ಬಿರಾದಾರನು ಮುಂಗೈ ಚೊರ ಮಾಡಿ ಫಸಲಿ ೧೧೩೬ನೇ ಸಾಲಿನಲ್ಲಿ ಸರಕಾರ ವತಿಯಿಂದ ಸಂಸ್ಥಾನ ಮುಂದುವರಿಸಿದ್ದಾನೆ. (ಇಸ್ವಿಸನ್ ೧೭೪೬) ಇವನಿಗೆ ೨ ಮಕ್ಕಳು ಹುಟ್ಟಿದ್ದರಿಂದ ಮೊದಲಿನ ವಂಶಸ್ಥನ ಹೆಂಡತಿ ದತ್ತಕ ಪಡೆದಳು. ಬಿರಾದಾರನೂ ತೀರಿಕೊಂಡ ಕಾರಣ ವ್ಯಾಜ್ಯ ನಡೆದು ಇಡೀ ಸಂಸ್ಥಾನಕ್ಕೆ ಬಲವಾದ ಪೆಟ್ಟು ಬಿದ್ದಿತು. ದೇಸಗತಿ ಉಂಗುರವನ್ನು ಕಳ್ಳತನ ಮಾಡಿದರು ಸುಮಾರು ೫ರಿಂದ ೬ ವರ್ಷ ದೇಸಗತಿ ಪೇಶ್ವೆಗಳ ಅಮಲಿನಲ್ಲಿ ನಡೆಯಿತು. ಸವನೂರ ನಾವಾಬನು ಶಕೆ ೧೬೭೦ (ಇಸ್ವಿಸನ್ ೧೭೪೮) ರಲ್ಲಿ ಒಪ್ಪಂದ ಮಾಡಿಸಿ ಸನದ ಪತ್ರ ಮಾಡಿಸಿ ಅವರ ಕಾರಸ್ಥಾನಲ್ಲಿ ನಡೆಸಿದರು. ತದನಂತರ ಭಗವಂತ ಗೋಪಾಳ ಬಿರಾದಾರ ತಮ್ಮ ತಂದೆ ಸತ್ತ ಮೇಲೆ ೧೦ ವರ್ಷ ಅನುಭವ ಮಾಡಿದರು. ದತ್ತಕ ಮಗ ಜಾನರಾವ ಇವರು ಮಾಲಕಿ ಸನದ ಪತ್ರ ತೊಗೊಂಡು ೧೭೬೧ನೇ ಇಸ್ವಿಯಲ್ಲಿ ಅಧಿಕಾರ ವಹಿಸಲು ಯೋಜನೆ ಮಾಡಿದರು. ಅದು ಸುಳ್ಳಾಯಿತು. ದತ್ತಕ ಮಗ ಜಾನರಾವ ಊರಿಗೆ ಬರುವುದನ್ನು ಬಿಟ್ಟು ಶ್ರೀಮಂತರ (ಪೇಶ್ವೆ) ಕಡೆಗೆ ಪೂಣೆಕ್ಕೆ ಹೋದನು. ಅಲ್ಲಿಯೇ ಇದ್ದು ತೀರಿಕೊಂಡನು. ಇದನ್ನು ಗಮನಿಸಿದ ಶ್ರೀಮಂತರು ಸಿದ್ದೇಶ ಇಚ್ಛಾ ಅಮಲ ಮಾಡಿದರು. ಇಡೀ ಸಂಸ್ಥಾನವನ್ನೇ ಪೇಶ್ವೆಗಳು ಕೈವಶ ಮಾಡಿಕೊಂಡಿದ್ದರು.

ಮನ್ನಿಕೇರಿ, ಬಾಗಲಕೋಟಿ, ಗದ್ದನಕೇರಿ ಮತ್ತು ಹಳ್ಳೂರ ದೇಸಗತಿಗಳು ಮೂಲದಲ್ಲಿ ಒಂದೇ ಆಗಿದ್ದವು. ದೇಸಾಯಿಗಳ ವಂಶವು ಹಬ್ಬಿದ್ದರಿಂದ ಮಕ್ಕಳಿಗೆ ಒಂದೊಂದು ಗ್ರಾಮದ ಅಥವಾ ಎರಡು ಮೂರು ಹಳ್ಳಿಗಳ ದೇಸಪಾಂಡೆ ಹಾಗೂ ಕುಲಕರ್ಣಿಕಿ ನೀಡಿ ಸ್ವಾಭಾವಿಕವಾಗಿ ಒಡೆದುಕೊಟ್ಟಿದ್ದಾಗಿದೆ. ಮೂಲದೇಸಗತಿ ಮನ್ನಿಕೇರಿ ಆಗಿರುವಾಗಲೇ ಕೋಟೆಯನ್ನು ಕಟ್ಟಿದರು. ಬ್ರಿಟೀಷರು ಕಾಲಾವಧಿಯಲ್ಲಿ ವಿಭಾಗವಾಗಿ ಮನ್ನಿಕೇರಿಗೆ ಒಂದು ವಂಶ ನಿಂತಿತು, ಬಾಗಲಕೋಟಿಗೆ ಮೂಲ ದೇಸಾಯಿ ವಂಶ ಸ್ಥಳೀಕವಾಗಿ ನಿಂತು ಆಳಿಕೆ ನೀಡಿದ್ದು ಕಂಡುಬರುತ್ತದೆ.

ಚಾವರಾತ ಹಳ್ಳಿಗಳು

ಬಾಗಲಕೋಟಿ ಪರಗಣಕ್ಕೆ ಸಂಬಂಧಿಸಿದ ಕೆಲವೇ ಕೆಲವು ಗ್ರಾಮಗಳನ್ನು ಇಲ್ಲಿ ಹೆಸರಿಸಲಾಗಿದೆ. ಇವುಗಳಲ್ಲಿ ಕಸಬೆ ಹಾಗೂ ಮೌಜೆಗಳಿವೆ. ಅವು ಹೀಗಿವೆ.

೧. ಬಾಗಲಕೋಟಿ ೨. ಕಲಾದಗಿ ೩. ಮೂರಮಟ್ಟಿ ೪. ಗದ್ದನಕೇರಿ ೫. ಅಚನೂರ ೬. ಸಂಗಮ ೭. ಮಂಕನಿ ೮. ಮುಚಖಂಡಿ ೯. ಮುರನಾಳ ೧೦. ಯಡಹಳ್ಳಿ ೧೧. ಸಿಮೀಕೇರಿ ೧೨. ಮನ್ನಿಕೇರಿ ೧೩. ಮುಗಳಖೋಡ ೧೪. ಸುತಗುಂಡಾರ ೧೫. ಮುಗಳೊಳ್ಳಿ ೧೬. ರಾಂಪೂರ ೧೭. ಸಿಂದಗಿ ೧೮. ದಾಸನಕೊಪ್ಪ

೨.೪.೩. ಸೊನ್ನ-ದೇಸಗತಿ

ಚಿಕ್ಕದೇಸಗತಿ ಎನಿಸಿದರೂ ಬಹುದೊಡ್ಡ ಹೆಸರು ಮಾಡಿರುವ ದೇಸಗತಿ ಎಂದರೆ ಬೀಳಗಿ ತಾಲೂಕಿನ ಸೊನ್ನ ಆಗಿದೆ. ಇವರದು ಬೀಳಗಿ ಪರಗಣವೇ ಆಗಿದ್ದು ಸೊನ್ನದ ಗ್ರಾಮದಲ್ಲಿ ನಿಂತು ಆಳಿಕೆ ಮಾಡಿದ್ದಾರೆ. ಬೀಳಗಿಯ ಒಂದು ಭಾಗ ನೀರಬೂದಿಹಾಳ ದೇಸಗತಿಗೆ ಒಂದು ಭಾಗ ಗಲಗಲಿ ಯಡಹಳ್ಳಿಗೆ ಒಂದು ಭಾಗ ಸ್ಥಾನಿಕ ಸೊನ್ನದೇಸಗತಿಗೆ ಸೇರಿತ್ತು. ಬೀಳಿಗಿಯಲ್ಲಿ ಮೂರು ಅಗಸಿ ಬಾಗಿಲುಗಳಿವೆ, ಮೂರು ಮಸೀದೆಗಳಿವೆ. ಆದರೂ ಈ ದೇಸಗತಿಯನ್ನು ಸೊನ್ನದ ದೇಸಗತಿಯೆಂದು ಬೀಳಗಿಕರ್ ಎಂದು ಕರೆಯುತ್ತಾರೆ.

ಇವರು ರಡ್ಡಿ ಮತದವರು. ಮೂಲ ಆಂಧ್ರದಿಂದ ವಲಸೆ ಬಂದು ಗಡಿನಾಡ ಸರಹದ್ದಿನ ಸರದಾರರೆಂದು ಕರೆಸಿಕೊಂಡಿದ್ದಾರೆ. ತಮ್ಮದೇ ಆದ ನೀತಿ ನಿಯಮಗಳನ್ನು ಆಚರಿಸುತ್ತ ಶೂರರಾಗಿ ಗಡಿ ನಾಡಿನಲ್ಲಿ ಸೇವೆ ಸಲ್ಲಿಸುತ್ತ ಬಾಳಿದ ಬದುಕಿದ ಇವರು ಜಗ್ಗರಣಿಯೆಂದೇ ಹೆಸರು ಪಡೆದಿದ್ದಾರೆ. ಜಗ್ಗರಣಿ ಎಂದರೆ ಶೂರರು. ನ್ಯಾಯ ನಿಬಾದಿಗಳನ್ನು ಬಗೆ ಹರಿಸುವವರೆಂದು ತಿಳಿದುಬರುತ್ತದೆ. ಬಾದಶಾನ ಕಾಲದಲ್ಲಿ ಸಮೀಪದ ದೊಡ್ಡಹಾಳ ಗ್ರಾಮದಲ್ಲಿದ್ದು ದೇಸಗತಿ ಗಳಿಸಿ ಸಾರ್ವಜನಿಕ ಹಿತಾಸಕ್ತಿ ಬಯಸಿದ ಇವರು ಬೀಳಗಿ ದೊರೆಗಳೆಂದು ಹೆಸರು ಗಳಿಸಿದವರಾಗಿದ್ದಾರೆ.

ಕ್ರಿ.ಶ.೧೫೬೫ರಲ್ಲಿ ವಿಜಯನಗರ ಹಾಗೂ ಬಿಜಾಪೂರ ಅದಿಲ್ ಶಾಹಿಗಳಿಗೆ ನಡೆದ ರಕ್ಕಸಗಿ ತಂಗಡಗಿ ಯುದ್ಧದಲ್ಲಿ ಭಾಗವಹಿಸಿದ ಇವರು ಬಾಗಲಕೋಟೆಯಲ್ಲಿ ನೆಲೆನಿಂತರು. ವಿಜಯಿಯಾದ ನಂತರ ಆ ಭಾಗದಲ್ಲಿ ಜಗ್ಗರಣಿ, ಜಂಗಿ ಸಾವಕಾರ ಎಂಬ ಹೆಸರು ಪಡೆದರು. ಸಮೀಪದ ಅದರ ಸುತ್ತಮುತ್ತಲಿನ ಗೌಡಕಿ ಪಡೆದುಕೊಂಡರು. ಮೂಲಪುರುಷನು ಬಾಗಿಲಕೋಟೆಯಲ್ಲಿದ್ದು ಅಲ್ಲಿ ಕೋಟೆ ಕಟ್ಟಿಕೊಂಡು ಆಳುತ್ತಾನೆ. ಆದರೆ ಅವನ ಕೊಲೆಯಾಗುತ್ತದೆ. ಕೊಲೆಯಾರು ಮಾಡಿದರು, ಏಕೆ ಎಂಬುದು ತಿಳಿದುಬರುವುದಿಲ್ಲ. ಅಲ್ಲಿಂದ ವಲಸೆ ಬಂದು ಸೊನ್ನಕ್ಕೆ ನಿಲ್ಲುತ್ತಾರೆ.

ಸೊನ್ನ ದೇಸಗತಿಯವರು ಆದಿಲ್‌ಶಾಹಿಯಿಂದ ವತನ ಸಂಪಾದಿಸಿದ್ದರ ಕುರಿತು ಒಂದು ವಿಶೇಷ ಮಾಹಿತಿ ಸಿಗುತ್ತದೆ. ಅದೆನೆಂದರೆ "ಆಂಧ್ರದ ರಾಜಮಹೇಂದ್ರಿ(ರಾಜಮುಂಡ್ರಿ)ಯಲ್ಲಿ ಸ್ಥಾನಿಕ ಅಧಿಕಾರಿಗಳಾಗಿದ್ದರು ಅಲ್ಲಿ ವ್ಯಾಜ್ಯ ನಡೆದುದರಿಂದ ಬಿಟ್ಟು ಅಲೆದಾಡುತ್ತ ಈ ಕಡೆಗೆ ಬಂದರೆಂದು ಹೇಳುತ್ತಾರೆ." ದೇವರ ಹಬ್ಬಗುಡಿ ಎಲ್ಲವ್ವಾ ತುಡಗ ಮಾರ್ಯೋಳು ಮನ್ಯ್ ಇವರು ಕೂಡಿ ರಂದವತಿ ಪಟ್ಟಣ(ರಾಜಮಹಾದಿಯಲ್ಲಿದೆ) ಬಿಟ್ಟು ಬಂದರು. ಜಹಗೀರದಾರರಾದ ಇವರು ಹುಲಬನ್ನಿಕೊಡಲಾರದ ಕಾರಣ ಅದನ್ನು ಬಿಟ್ಟು ದೇಸಿಗರಾಗಿ ಅಲೆದಾಡಿದರು. ತಮ್ಮ ಜೊತೆಗೆ ಅನೇಕ ನಾಯಕರನ್ನು, ದನಕರುಗಳನ್ನು ಕರೆತಂದರು. ಕೃಷಿಯನ್ನೇ ಅವಲಂಬಿಸಿರುವುದರಿಂದ ಅಲ್ಲಲ್ಲಿ ಲಡಾಯಿ ಮಾಡಿ

ಜಮೀನನ್ನು ಪಡೆದುಕೊಂಡರು. ಸೊಲ್ಲಾಪುರಕ್ಕೆ ಬಂದು ಸೊಲ್ಲಾಪುರ ಸಿದ್ದರಾಮೇಶ್ವರರನ್ನು ಒಲಿಸಿಕೊಂಡರು. ಅಲ್ಲಿನ ದೇಸಗತಿ ಗಳಿಸಿದರು. ಅಲ್ಲಿಂದ ಲಡಾಯಿ ಮಾಡುತ್ತ ಮೂರ ನೂರ ಕೂರಿಗೆ ಜಮೀನ ಸಂಬಂಧ ಅಲ್ಲಿನ ಗೌಡರ ಜೊತೆಗೆ ಲಡಾಯಿ ಮಾಡಿ ಏಳು ಜನರನ್ನು ಹತ್ಯಾ ಮಾಡಿ ಹೆಣ್ಮಗಳನ್ನು ಕರೆದುಕೊಂಡು ಭೀಮಾನದಿ ದಾಟಿ ಬಂದರು. ಅವರ ಪೈಕಿ ಒಂದೊಂದು ಬಡ್ಡಿ ಬೇರೆ ಬೇರೆ ಕಡೆಗೆ ಹಂಚಿಹೋಗುತ್ತದೆ. ಅದು ಹೀಗಿದೆ

ಗಂಗಾಪೂರ ಜೈನಾಪುರ ಮುತ್ತತ್ತಿ ಕೊರ್ತಿ ಬೀಳಾಗಿ ಕಣಬೂರ

(ನವಲಗುಂದ ಕಡೆಗೆ)

ಇವರಲ್ಲಿ ಇಬ್ಬರು ಮಾತ್ರ ಜೈನಾಪುರ ಹಾಗೂ ಬೀಳಗಿ ದೇಸಗತಿ ಮಾಡಿಕೊಂಡು ಆಳಿದ್ದಾರೆ. ಉಳಿದವರು ಗೌಡರಾಗಿ ಮುಂದುವರಿದಿರಬೇಕೆನಿಸುತ್ತದೆ. ಮುಂದೆ ದತ್ತಕ ಬಂದವರು ಕೊರ್ತಿಯಿಂದಲೇ ಎಂಬುದು ತಿಳಿದುಬರುತ್ತದೆ.

ಭೀಮಾನದಿ ದಾಟಿದ ಮೇಲೆ ಮುಡಪಲದಿನ್ನಿಗೆ ಬಂದು ಮಧ್ಯಾಹ್ನದ ಗೌಡಕಿ ಪಡೆದುಕೊಂಡರು. ಅಲ್ಲಿಂದ ಬಾಗಲಕೋಟೆಯಲ್ಲಿ ನಿಂತು ಕೋಟೆ ಕಟ್ಟಿಸಿದರು. ಕೋಟೆ ಕಟ್ಟಿಸುವಾಗ ಅದು ರಾತ್ರಿ ಹೊತ್ತು ಬೀಳುತ್ತಿತ್ತು. ಎಷ್ಟು ಶ್ರಮವಹಿಸಿದರೂ ನಿಲ್ಲುತ್ತಿರಲಿಲ್ಲ. ರಮಲಶಾಸ್ತ್ರದ ಪ್ರಕಾರ ಬಸುರಿ ಹೆಂಗಸ್ಸನ್ನು ಬಲಿಕೊಟ್ಟು ಕಟ್ಟಿದರು ಎಂದು ಬರೆದಿಟ್ಟ ದಾಖಲೆಯಿಂದ ತಿಳಿದುಬರುತ್ತದೆ.

ಕ್ರಿ.ಶ. ೧೫೪೩ ರಿಂದ ೧೫೬೫ರ ಅವಧಿಯಲ್ಲಿ ನಡೆದ ಅನೇಕ ಕದನಗಳು ಏರ್ಪಟ್ಟವು. ದಖನ್ನಿನ ಸುಲ್ತಾನರು ಆಂಧ್ರದ ಕಡೆಯಿಂದ ಬಂದವರನ್ನು ವಿಶೇಷ ಗುರುತಿಸಿ ಪುರಸ್ಕಾರ ನೀಡಿ ವಿಜಯನಗರದ ವಿರುದ್ಧ ಹೋರಾಡಲು ಪ್ರಚೋದಿಸಿದರು. ಉಂಬಳಿ ನೀಡಿದರು. ಅಂಥವರಲ್ಲಿ ಸೊನ್ನದ ದೇಸಾಯಿಗಳು ಒಬ್ಬರಾಗಿದ್ದಾರೆ. ಘೋರ್ಪಡೆ ಅರಸರ ಪಂಗಡದಲ್ಲಿದ್ದು ಹೋರಾಟ ಮಾಡಿದರು. ಮುಖಂಡನಾದ ಘೋರ್ಪಡೆ ಅರಸನು ಅಸುನೀಗಿದನು. ಅವನ ಎರಡು ಮಕ್ಕಳನ್ನು ರಕ್ಷಿಸಿ ಜೋಪಾನ ಮಾಡಿದರು. ಘೋರ್ಪಡೆ ಅರಸರಿಂದ ಹಂಚಿನಾಳ ಗ್ರಾಮ ಇನಾಂ ಆಗಿ ದೊರಕಿತು. ಒಂದು ಮನೆತನಕ್ಕೆ ದೋಸಿ ಮಾನೆ ಎಂತಲೂ ಇದೆ. ಹಾಗೇ ಸೊನ್ನದೇಸಾಯರಿಗೆ ಕರೀಯ ಕುಬೇರ ಎಂತಲೂ ಬಿರುದು ಇದೆ. ಹೀಗೆ ರಾಜಕೀಯ ಅಂಶಗಳು ಕಂಡುಬರುವುದರಿಂದ, ಜೀವಕ್ಕೆ ಜೀವಕೊಡುವ ಶೂರರಾಗಿರುವುದರಿಂದ 'ಪಾಲಕಿ ಸೇವೆ' ಗೌರವ ಸಿಕ್ಕಿದೆ. ಚಿಕ್ಕದೇಸಗತಿಯಾದರೂ ಅವರ ಅಸಾಧಾರಣ ಶಕ್ತಿ ಸಾಮರ್ಥ್ಯಕ್ಕೆ ಸಿಕ್ಕ ಗೌರವ ದೊಡ್ಡದಾಗಿ ಕಂಡುಬರುತ್ತದೆ.

ಆದಿಲ್‌ಶಾಹಿ ದರ್ಬಾರದಲ್ಲಿ ಇವರಿಗೆ ವಿಶೇಷ ಗೌರವವಿತ್ತೆಂದು ತಿಳಿದುಬರುತ್ತದೆ. ಅದಿಲ್ ಶಾಹಿ ದರ್ಬಾರದಲ್ಲಿ ಕರಿಯ ಪಟ್ಟೆಯ ಆಸನವಿತ್ತೆಂದು ಹೇಳುತ್ತಾರೆ. ಪ್ರತಿವರ್ಷ ನಜರಾಣವನ್ನು ಇವರು

ನೇರವಾಗಿ ಭರಣ ಮಾಡುತ್ತಿದ್ದರು. ಅರಮನೆಯಲ್ಲಿ ಸಭೆ ನಡೆದಾಗ ಸಲಾಮ ಮಾಡುವ ಅಧಿಕಾರವಿರಲಿಲ್ಲ ಕಾರಣವೆಂದರೆ ಮೊಗಲರ ವಿರುದ್ಧ ದಿಟ್ಟತನದಿಂದ ಎದುರಿಸಿದ ದೇಸಾಯಿಗಳಲ್ಲಿ ಒಬ್ಬರಾಗಿರುವುದರಿಂದ ಇವರಿಗೆ ವಿಶೇಷ ಗೌರವ ಸಿಕ್ಕಂತೆ ಕಾಣುತ್ತದೆ. "೫೦೦ ಕುದುರೆ ಕಾಲಾಳು ಹಾಗೂ ಜಹಾಗೀರ ಸಿಕ್ಕಿತೆಂದು ಅವರ ಪ್ರತೀಕವಾಗಿ ಸಲಾಮ ಮಾಡುವ ಬದಲು ಒರೆಯಲ್ಲಿಯ ಖಡ್ಗವನ್ನು ಹಿರಿದು ಮತ್ತೆ ಒರೆಯಲ್ಲಿಡಗಿಸಿದರೆ ಅದೇ ಗೌರವವೆಂತಲೂ ಇತ್ತೆಂದು ಚಂದ್ರಶೇಖರ ದೇಸಾಯಿ ಹೇಳುತ್ತಾರೆ".[೩೨]

ಈ ದೇಸಗತಿಯ ಮೂಲ ಪುರುಷನೆಂದರೆ ಬೊಮ್ಮಿರಡ್ಡಿ ಇವರು ೮ ಜನರಿದ್ದು ಅಲ್ಲಲ್ಲಿ ವಲಸೆ ಹೋಗುತ್ತಾರೆ. ಯಂಕರಡ್ಡಿಯಿಂದಲೇ ಇವರ ವಂಶಾವಳಿ ಸಿಗುತ್ತದೆ.

ಯಂಕರಡ್ಡಿ
|
ರಾಮಪ್ಪ
|
ಯಂಕಪ್ಪ
|
ಭೀಮಪ್ಪ ಅಪ್ಪಣ್ಣ
|
ಹಣಮಪ್ಪ ಇವನೇ ಜೈನಾಪುರಕ್ಕೆ ಹೋಗಿದ್ದಾನೆ
|
ರಾಮಪ್ಪ ನಿಂಗಪ್ಪ ಯಂಕಪ್ಪ
|
ಬೊಮ್ಮಿರಡ್ಡಿ ಗಂಗರಡ್ಡಿ
(೧೦ನೇ ಯವನೇ ಬಮ್ಮರಡ್ಡಿ ಇವನೇ ವತನ ಸಂಪಾದಕ)

(ಮುಂದಿನ ವಂಶಾವಳಿಯನ್ನು ಅನುಬಂಧದಲ್ಲಿ ಕೊಡಲಾಗಿದೆ)

ಪೇಶ್ವೆಗಳ ಅಧಿಕಾರದಲ್ಲಿ ಗದಿಗೆಪ್ಪ ದೇಸಾಯಿ. ಸಿದ್ದಪ್ಪ ದೇಸಾಯಿ ಗಂಗಪ್ಪ ದೇಸಾಯಿ ಪ್ರಮುಖರಾಗಿ ಕಂಡುಬರುತ್ತಾರೆ.

ಇವರಿಗೆ ಸಿಕ್ಕ ಜಮೀನಿನ ಕೆಲವು ವಿವರ ಹೀಗಿದೆ.

"ಕೋರ್ತಿಗ್ರಾಮದ ೧% (ಪೋಣೆ) ಜಮೀನ ಶ್ರೀಮಂತರಿಂದ ಸಿಕ್ಕಿದೆ ಕ್ರಿ.ಶ.೧೭೪೯.

ಗಡದಿನ್ನಿ ಗ್ರಾಮದ : ೬ - (ಪೋಣೆಚಾವರ ನವುಟಾಕ ಜಮೀನ ಸರ್ವ ಇನಾಂ ಖುಷ್ಕಿ ಇರತ್ತದೆ.)

೧೧ ಮಾರು ೬ ಚಾವರ ಪೇಶ್ವೆ ರಾಜ್ಯದಲ್ಲಿ ಸಿಕ್ಕಿದೆ.

೧ ಮಾರು ಆದಿಲ್‌ಶಾಹಿಯಿಂದ ಸಿಕ್ಕಿದೆ. ಅದು ದೋಸೆಮಾನೆ ಎಂದು ತಿಳಿದುಬರುತ್ತದೆ.

೧೦ ಮಾರು ಕ್ರಿ.ಶ. ೧೭೪೯ರಲ್ಲಿ ಸಾತಾರೆ ಕರಮರಕ ಇವರಿಂದ ಸಿಕ್ಕಿರುತ್ತದೆ.

೧ ಮಾರು ೯ ಚಾವರ ಸನ್ ೧೧೯೦ ಫಸಲಿಯನ್ನು ರಾಜಿ ರಾಮಚಂದ್ರ ಘೊರಡೆಯವರಿಂದ ಶಿದ್ಧಲಿಂಗಪ್ಪದೇಸಾಯಿಗೆ ಸಿಕ್ಕಿದೆ. ಇವರ ಒಟ್ಟು ಗ್ರಾಮಗಳೆಂದರೆ ೧೪ ಗ್ರಾಮಗಳಿವೆ".[೩೩]

ಚಾವರಾತ ಗ್ರಾಮಗಳು

ಆದಿಲ್‌ಶಾಹಿಯಿಂದ ಹಿಡಿದು ಘೋರ್ಪಡೆ ಸರಕಾರದವರೂ ನೀಡಿದ ಒಟ್ಟು ದೇಸಗತಿ ಗ್ರಾಮಗಳು ೧೪ ಆಗಿವೆ

೧. ಮೌಜೆಸೊಂನ ೨. ಮೌಜೆ ಬಳ್ಳೂರ ೩. ಯಿನಾಂಗಾಂ ಗಿರಿಗಾಂ ೪. ಮೌಜೆ ಗುಡದಿಂನಿ ೫. ಮಾಜೆದೊಡಿಹಾಳ ೬. ಮೌಜೆ ಕೊಂತಿಕಲ್ಲ ೭. ಕಸಬಾ-ಬೀಳಗಿ ೮. ಮೌಜೆ ಬಾಡಗಂಡಿ ೯. ಕೊರ್ತಿ ೧೦. ಗರಡದಿಂನಿ ೧೧. ಮೌಜೆ ಥವಳೇಶ್ವರ ೧೨. ಹಂಚಿನಾಳ ೧೩. ತೆಗ್ಗಿ ೧೪ನೇ ಗ್ರಾಮ ಯಾವುದೆಂದು ತಿಳಿದುಬರುವುದಿಲ್ಲ. ಇವೆಲ್ಲವನ್ನು ಇನಾಂ ಕಮೀಷನ್ ದಾಖಲೆಗಳಿಂದಲೇ ಗುರ್ತಿಸಿದೆ.

೨.೪.೪. ಹೊನ್ನಿಹಾಳ ದೇಸಗತಿ

ಹೊನ್ನಿಹಾಳ ದೇಸಗತಿ ಮೂಲತಃ ನಾಡಗೌಡಕಿ ಪಡೆದ ಮನೆತನವಾಗಿದೆ. ಇವರು ಕೂಡಾ ಅದಿಲ್ ಶಾಹಿಯಿಂದ ನಾಡಗೌಡಕಿ ಪಡೆದು ಮೂರನೂರಾ ಮೂವತ್ತು ಹಳ್ಳಿ ದೊರೆತನ ಗಳಿಸಿದವರಾಗಿದ್ದಾರೆ. ಇವರ ಕುರಿತು ದಾಖಲೆಗಳ ಕೊರತೆ ಇದೆ. ಆದರೂ ಸಾದ್ಯಂತವಾಗಿ ಸಂಗ್ರಹಿಸಿಕೊಂಡು ಇಲ್ಲಿ ಕಟ್ಟಿಕೊಡಲಾಗಿದೆ.

ಹೊನ್ನಿಹಾಳ ದೇಸಗತಿ ಮೂಲ ಪುರುಷ ಬಸವಪ್ರಭು. ಇವನು ಗಾಣಿಗ ಮತಸ್ಥನಾಗಿದ್ದು ಹೊನ್ನಾತೇಲಿ ಭಾಗಮನ್ನೆನವರು ಬೆಡಗ ಹೊಂದಿದವರಾಗಿದ್ದಾರೆ. 'ತೇಲಿ' ಎಂಬುದೇ ಗಾಣಿಗ ಎಂಬ ವೃತ್ತಿಯನ್ನು ಸೂಚಿಸುತ್ತದೆ. ಇವರ ಪೂರ್ವಿಸ್ಥಳ ಬಿದರಿ ಕೋಟೆ. ಆಂಧ್ರದ ನನ್ನಿ ಮುನ್ನಿಯಿಂದ ಬಂದವರು ಅಲ್ಲಿಂದ ಪತ್ರಿಬಾಳಾಪುರಕ್ಕೆ ಬಂದು ಅಲ್ಲಿ ವತನ ಸಂಪಾದಿಸಿದರು. ಹಾಗೆ ಭೀಮಾನದಿಗೆ ಬಂದು ನೀಲಗಂಗವ್ವ ಶಿವಲಿಂಗವ್ವ ಎಂಬ ಹೆಣ್ಣು ಮಕ್ಕಳ ಪವಾಡದಿಂದ ಹೊಳೆ ಅಳಿದರು. ಲಿಂಗಸೂರಕ್ಕೆ ಬಂದು ಲಿಂಗಸೂರ ಗೌಡಕಿಗಳಿಸಿದರು. ಹಾಗೇ ಸಂಗಮಕ್ಕೆ ಬಂದು ಅಲ್ಲಿನ ಗೌಡಕಿ ಪಡೆದರು. ಮುಗಳೊಳ್ಳಿಗೆ ಬಂದು ಅಲ್ಲಿಯೂ ಕೂಡಾ ಗೌಡಕಿ ಪಡೆದು. ಅಲ್ಲಿಂದ ಹೊನ್ನಿಹಾಳಕ್ಕೆ ಬಂದರು.

ಈ ಮೇಲಿನ ವಿವೇಚನೆಯಿಂದ ತಿಳಿಯುವುದೆನೆಂದರೆ ದೇಶಾಟನೆ ಮಾಡುತ್ತ ದೌಲತ್ತ ಮಾಡುತ್ತ ಬಂದುದು ರಾಜಕೀಯತೆಯ ಒಂದಂಶವಾಗಿದೆ. ಅಲ್ಲದೇ ಆಯಾ ಗ್ರಾಮಗಳಲ್ಲಿ ಆಳಿಕೆ ಮಾಡಿದ್ದು

ಹಿರಿತನಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಮುಂದೆ ಬಂದ ದೇಸಗತಿ ನಾಡಗೌಡರು ಪೇಶ್ವೆಗಳ ಕಾಲದವರೆಗೆ ಉತ್ತಮ ಆಳಿಕೆ ಮಾಡಿದ್ದಾರೆ. ಬಾಬಾಗೌಡ, ದುಬ್ಬನಗೌಡ, ಬಸನಗೌಡ, ಸಂಗನಗೌಡ, ಅಪ್ಪಾಸಾಬ, ಸಂಗಪ್ಪ, ಹಣಮಂತಗೌಡ, ಬಾಬಾಸಾಹೇಬ ಕಂಡು ಬರುತ್ತಾರೆ. ಇಸ್ವಿ ಸನ್ ೧೮೬೮ರಲ್ಲಿ ಹಣಮಂತಗೌಡ ಪರತಗೌಡ ಮುತಾಲಿಕದೇಸಾಯಿ ಬಾಗಲಕೋಟಿ ಇವರ ಆಳಿಕೆ ಮಹತ್ವಪೂರ್ಣವಾಗಿದೆ. ಸರನಾಡಗೌಡರಾದ ಇವರಿಗೆ ವಿಶೇಷ ನಕ್ತ ನೇಮ್ನೂಕ ಸಿಕ್ಕಿದೆ. ಅದು ಮನ್ನಿಕೇರಿ ಹಾಗೂ ಐಹೊಳೆ ದೇಸಗತಿಯಲ್ಲಿ. ಆದರೆ "ಯಾರದೊ ಕೈಚಳಕದಿಂದ ಮುಗ್ದದೇಸಾಯರು (ನಾಡಗೌಡರು) ಒಳಗಾಗಿ ಇಡೀ ದೇಸಗತಿ ಕುಟುಂಬವೇ 'ಸಾಲದೆಲೆ' ನಾಶವಾಗುತ್ತದೆ."[೩೪] ಇಂಥ ದುರ್ದೆಶೆಗೆ ಒಳಗಾದ ಈ ನಾಡಗೌಡರ ಮನೆತನದ ಸ್ತ್ರೀಯೊಬ್ಬಳು ವೇಷ ಬದಲಿಸಿಕೊಂಡು ಹವೇಲಿಯಲ್ಲಿ ನಿಂತು ತಮ್ಮ ವಂಶದ ಕುಡಿಯನ್ನು ಚಿಗುರಿಸಿದಳು. "ಹವೇಲಿಯ ಮುಸ್ಲಿಂ ಕುದುರೆ ದಳದವರ ಯತ್ನದಿಂದ ಮತ್ತೆ ಅಧಿಕಾರ ಪಡೆದುಕೊಂಡದ್ದು ವಿಶೇಷವಾಗಿದೆ."[೩೫] ಇಂದಿಗೂ ಈ ಕುರಿತು ಸರನಾಡಗೌಡ ಮನೆತನದವರು ಆ ದಿನದ ಇತಿಹಾಸವನ್ನು ಮೆಲುಕಾಡಿಸುತ್ತಾರೆ. ಮೂರನೂರ ಮೂವತ್ತು ಹಳ್ಳಿ ಒಡೆತನದ ಗ್ರಾಮಗಳು ಖಾಲಸಾತ ಆಗಿ ಮತ್ತೆ ಮರಳಿ ಸಿಕ್ಕಿದ್ದು ಕೇವಲ ೫ ಗ್ರಾಮಗಳು ಮಾತ್ರ. ಈ ಐದು ಗ್ರಾಮಗಳ ಹೆಸರು ಅಲಿನೇಷನ್ ರಿಕಾರ್ಡ್ ಹಾಗೂ ಇನಾಂ ಕಮೀಶನ್ ದಾಖಲೆಗಳಲ್ಲಿ ಕಂಡುಬರುತ್ತದೆ. ಈ ೫ ಗ್ರಾಮಗಳು "ಬ್ರಿಟೀಷ ಕಾಲದ ತಹಶೀಲದಾರ ರೊಬ್ಬರ ನೆರವಿನಿಂದ ಮತ್ತೆ ಬಾಗಲಕೋಟಿಯ ಗೌಡಿಕೆಯು ದೊರೆಯಿತು."[೩೬] ಕ್ರಿ.ಶ. ೧೮೬೮-೬೯ರಲ್ಲಿ ನೀಡಿದ ಸನದುಗಳು ಹೊನ್ನಿಹಾಳ ದೇಸಗತಿಗೊಂದು ಬಲವಾದ ದಾಖಲೆಯನ್ನು ಒದಗಿಸುತ್ತವೆ. ಹಾಗೇ ಇವರಿಗೆ "ಹೊಸ ವತನ ನೀಡಿದ್ದು ಸೂಚಿಸುತ್ತದೆ."[೩೭] ಹೀಗೆ ಸರನಾಡ ಗೌಡರ ಆಡಳಿತವು ಸಾಕಷ್ಟು ಸಬಲತೆ ಹೊಂದಿದ್ದು ವಿಧಿತವಾಗುತ್ತದೆ.

ಹೊನ್ನಿಹಾಳ, ಚೌಡಾಪೂರ ಹಾಗೂ ಇತರೆ ಗ್ರಾಮಗಳು ದೇಸಗತಿಯ ಮೂಲದಲ್ಲಿ ಒಂದೇ ಆಗಿದ್ದವು. ರಾಜಕೀಯ ರಂಗದಲ್ಲಿ ತಮ್ಮನ್ನು ತೊಡಗಿಸಿಕೊಂಡು ದೇಸಗತಿ ಆಳಿಕೆ ಮಾಡಿದ್ದು ಮಹತ್ವಪೂರ್ಣವಾಗಿದೆ. ಬಾಗಲಕೋಟಿ ಜಿಲ್ಲೆಯ ನಾಡಗೌಡ ಮನೆತನಗಳಲ್ಲಿಯೇ ಪ್ರತಿಷ್ಠಿತ ಅಧಿಕಾರ ವಹಿಸಿಕೊಂಡದ್ದು ಉತ್ಕೃಷ್ಟವಾದ ಆಡಳಿತವಾಗಿದೆ. ಆದಿಲ್‌ಶಾಹಿಗಳ ಆಡಳಿತದಲ್ಲಿ ಈಗಿನ ಕುಷ್ಟಗಿ ತಾಲೂಕಿನ ಹನಮಸಾಗರದವರೆಗೆ ಹಬ್ಬಿದ್ದು ಬಹುವ್ಯಾಪ್ತಿಯನ್ನು ತೋರಿಸುತ್ತದೆ.

ದೇಸಗತಿ ಚಾವರಾತ ಗ್ರಾಮಗಳು

ಮೂಲ ದೇಸಗತಿಯ ಐದು ಗ್ರಾಮಗಳೆಂದರೆ ಶಿಕ್ಕೇರಿ, ಚೌಡಾಪೂರ, ಹೊನ್ನಿಹಾಳ, ಬಾಗಲಕೋಟಿ, ಹವೇಲಿ, ಮುದುವಿನ ಕೊಪ್ಪ ಇದ್ದವು. ಬ್ರಿಟೀಷರು ಕೂಡ ಈ ಹಿಂದೆ ಇದ್ದ ಮೂಲ ವತನಕ್ಕೆ ಸೇರಿಸಿ ಇನಾಂ ನೀಡಿದ್ದು ವಿಶೇಷವಾಗಿದೆ. ಅವು ಹೀಗಿವೆ

೧. ಹವೇಲಿ ೨. ಮೌಜೆ ಚವಡಾಪೂರ ೩. ಮೌಜೆ ಮದುವಿನಕೊಪ್ಪ ೪. ಬಾಗಲಕೋಟೆ ೫. ಹೊನ್ನಿಹಾಳ.

೨.೪.೫. ಹಾಲಿಗೇರಿ(ಎಂಡಿಗೇರಿ ನೀರಬೂದಿಹಾಳ)ದೇಸಗತಿ

ಉತ್ತರ ಕರ್ನಾಟಕದ ಎಲ್ಲ ದೇಸಗತಿಗಳಲ್ಲೆ ಅತೀ ದೊಡ್ಡ ದೇಸಗತಿ ಎಂದರೆ ಹಾಲಿಗೇರಿ ದೇಸಗತಿ. ಅದಿಲ್ ಶಾಹಿಯ ವಿಶ್ವಾಸಿಕರಾಗಿ, ಅರಸನ ಕೋರಿಕೆಯಂತೆ ಸ್ವತಃ ಪಾಲ್ಗೊಂಡು ಹೋರಾಡಿದ್ದಾಗಿದೆ. ಈ ಕಾರಣದಿಂದಲೇ ಮೂರ ಹೊಳಿ ಮಂಡಿಪಚ್ಚಾ ಎಂಬ ಬಿರುದನ್ನು ಗಳಿಸಿದ್ದಾರೆ. ಹೀಗಾಗಿ ಅವರ ನಿಜಸ್ವರೂಪವನ್ನು ಐತಿಹಾಸಿಕ ದೃಷ್ಟಿಯಿಂದ ಅರಿತುಕೊಳ್ಳುವುದು, ಸಂಸ್ಕೃತಿಯ ದೃಷ್ಟಿಯಿಂದಲೂ ಮಹತ್ವದ್ದಾಗಿದೆ.

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಒಂದು ಚಿಕ್ಕ ಗ್ರಾಮವೇ ಹಾಲಿಗೇರಿ. ಅದಿಲ್ ಶಾಹಿಯ ಕಾಲಾವಧಿಯಲ್ಲಿ ಹೆಚ್ಚಿನ ಇನಾಂ ಗಳಿಸಿದ್ದರಿಂದ ದೇಸಗತಿ ಬೆಳವಣಿಗೆ ಆಯಿತೆನ್ನಬಹುದು. ಅವರ ಮೂಲಪುರುಷರ ಬಗ್ಗೆ ತದನಂತರ ಬಂದ ಒಡೆಯರುಗಳ ವಿಷಯ ಸಂಗತಿಗಳನ್ನಾಗಲಿ ನಿಖರವಾಗಿ ತಿಳಿಸಲು ಯಾವುದೇ ಮಾಹಿತಿಗಳು ದೊರೆಯುವುದಿಲ್ಲ. ಸಿಕ್ಕಂತ ಆಧಾರಗಳ ಮೇಲಿಂದ ಸಾದ್ಯಂತವಾಗಿ ಅವರ ಕುರಿತು ಇಲ್ಲಿ ಇತಿಹಾಸ ಕಟ್ಟಿಕೊಡಲಾಗಿದೆ.

ಈಗ ಸಿಕ್ಕ ಸಂಗತಿಗಳ ಆಧಾರದಿಂದ ಹಾಲಿಗೇರಿ (ನೀರಬೂದಿಹಾಳ) ದೇಸಗತಿಯ ಮೂಲ ಪುರುಷರು ನಾಲ್ಕು ಜನರು.

೧. ಬಸವಪ್ರಭು, ಒಡೆಯರ ಇನ್ನೂ ಮೂರು ಜನರು ಜಾಲಿಹಾಳ ಪಟ್ಟದಕಲ್ಲು ಹಾಗೂ ಐಹೊಳೆಗಳಲ್ಲಿ ನಿಲ್ಲುತ್ತಾರೆ. ತದನಂತರದಲ್ಲಿ ಹತ್ತು ಜನರ ವಂಶಾವಳಿ ಸಿಗುತ್ತದೆ. ಶ್ರೀಕೃಷ್ಣರಾಯ, ಬಾಲಪ್ಪ ಹಣಮಪ್ಪ, ಅಣ್ಣಾರಾವ, ದೊಡ್ಡಹಣಮಂತರಾಯ, ಸಣ್ಣ ಹಣಮಂತರಾಯ, ತಿಮ್ಮಾಸಾಬ ದೇಸಾಯಿ ಬಸಪ್ಪ, ದತ್ತಕ ಕೊಟ್ರಪ್ಪ, ಕಾಣಪ್ಪ. ಅಣ್ಣಪ್ಪ, ಕೊಟ್ರಪ್ಪ. ಇವರೆಲ್ಲರೂ ಕೆರೂರ ಪರಗಣೆ, ಬೀಳಗಿ ಪರಗಣೆ ವತನದಲ್ಲಿ ಆಳ್ವಿಕೆ ಮಾಡಿದ್ದಾರೆ. ಹಣಮವ್ವಳೂ ಒಬ್ಬಳಾಗಿದ್ದಾಳೆ. ಇವರ ನಂತರದ (ವಂಶಾವಳಿಯನ್ನು ಅನುಬಂಧದಲ್ಲಿ ಕೊಡಲಾಗಿದೆ) ದೇಸಾಯಿಗಳು ಉತ್ತಮ ಆಡಳಿತ ನಡೆಸಿದ್ದಾರೆ.

ಆನೆಗುಂದಿ ಅರಸೊತ್ತಿಗೆಯಿಂದಲೇ ಬಂದ ಈ ಕ್ಷತ್ರೀಯರ ವಂಶಸ್ಥರು ವಿಜಯನಗರದ ಪರವಾಗಿ ಪ್ರಮುಖ ಪಾತ್ರವಹಿಸಿ, ಅದರ ವೈಭವ ಉನ್ನತಿಗೆ ಕಾರಣರಾದವರಲ್ಲಿ ಬಹುಮನಿ ವಿಜಯನಗರ ಮಧ್ಯೆ ನಡೆದ ಅನೇಕ ಕಾಳಗಗಳಿಗೆ ತತ್ತರಿಸಿ ಹೋದ ಈ ಪ್ರದೇಶದಲ್ಲಿ ಧೀರ, ಧೈರ್ಯ ತೋರಬೇಕಾದ ಸಂದರ್ಭದಲ್ಲಿ ಇವರೂ ಒಬ್ಬರಾಗಿದ್ದಾರೆ. ಐಹೊಳೆ, ನೀರಬೂದಿಹಾಳ, ದೇಸಗತಿಗಳು ಭಾಗವಹಿಸಿದೆ.

ಹಾಗೇ ಸೊನ್ನ ಜೈನಾಪೂರ ಕೂಡ ಭಾಗವಹಿಸಿದ್ದರ ಕುರಿತು ಮಾಹಿತಿಸಿಗುತ್ತದೆ. ವಿಜಾಪೂರ ರಾಯಚೂರ, ಗುಲಬರ್ಗಾ, ಸಗರನಾಡು ಬೇಡಪಡೆಗಳು ಪ್ರತ್ಯಕ್ಷ ಪಾಲ್ಗೊಂಡವು. ಅಲ್ಲದೆ ರಂಕ್ಕಸಗಿ ತಂಗಡಗಿ ಯುದ್ಧದಲ್ಲಿ ಪ್ರತ್ಯಕ್ಷವಾಗಿ ಚಿಕ್ಕಪುಟ್ಟ ಸಂಸ್ಥಾನಗಳು ೭೨ ರಿಂದ ೭೩ ಎಂದು ತಿಳಿದುಬರುತ್ತದೆ.''[೩೫] ಬಾಗಲಕೋಟಿ ಸಂಸ್ಥಾನೀಕರ ಪೈಕಿ; ಆನೆಗುಂದಿ ಬೇಲೂರ ಬಾದಾಮಿ ಸುತ್ತೆಲ್ಲ ಭಾಗ ಅಂದರೆ ಕೃಷ್ಣನದಿಯ ಭಾಗದವರು ಎಂದು ತಿಳಿದುಬರುತ್ತದೆ. ಮೇಲಿನ ಕೆಲವು ಹೇಳಿಕೆಗಳಿಗೆ ಇದು ಆಧಾರವಾಗಿ ನಿಲ್ಲುತ್ತದೆ. ಈ ಭಾಗದ ಕ್ಷತ್ರೀಯರು ನೀರಬೂದಿಹಾಳ ದೇಸಾಯಿಗಳ ನೇತೃತ್ವದಲ್ಲಿ ಭಾಗವಹಿಸಿದ್ದರೆಂದು ಗುರುತಿಸಬಹುದಾಗಿದೆ.

ಬ್ರಿಟೀಷರ ಕಾಲಾವಧಿಯಲ್ಲಿ ಇವರಿಗೂ ಕೂಡ 'ಲ್ಯಾಂಡ ಲಾರ್ಡ' (Land Lord) ಬಹದ್ದೂರ, ರಾವ ಬಹದ್ದೂರ ಬಿರುದು ಸಿಕ್ಕಿದೆ. ರಾಮರಾವ ದೇಸಾಯಿಯು ರಾಜಕೀಯದಲ್ಲಿ ಬಹುದೊಡ್ಡ ಹೆಸರುಗಳಿಸಿ ಬಾದಾಮಿ ಹುಲಿಯೆಂದು ಜನಮನದಲ್ಲಿ ಉಳಿದಿದ್ದಾರೆ.

ನೀರಬೂದಿಹಾಳ, ಯಂಡಿಗೇರಿ ಹಾಗೂ ಹಾಲಿಗೇರಿ ದೇಸಗತಿಗಳು ಮೂಲದಲ್ಲಿ ಒಂದೇ ಆಗಿದ್ದವು. ಕಾಲಾಂತರದಲ್ಲಿ ಹಾಲಿಗೇರಿಯಿಂದ ಯಂಡಿಗೇರಿಗೆ ಸ್ಥಳಾಂತರಗೊಂಡರು. ಯಂಡಿಗೇರಿಯಲ್ಲಿ ಊರಿನ ಒಬ್ಬ ತಳವಾರನು ಪರದೇ ಮೀರಿ ಸ್ತ್ರೀಯರನ್ನು ಮಾತನಾಡಿಸಿದ್ದರ ಪ್ರಯುಕ್ತ ಆ ವ್ಯಕ್ತಿಯ ಕೊಲೆ ಆಗುತ್ತದೆ. ಅದು ದೇಸಗತಿಯ ಮೇಲೆಯೇ ಅಪಾದನೆ ಆದ ಕಾರಣ ಎಂಡಿಗೇರಿ ಬಿಟ್ಟು ನೀರಬೂದಿಹಾಳಕ್ಕೆ ಸ್ಥಳಾಂತರಗೊಂಡ ಬಗ್ಗೆ ದೇಸಗತಿ ವಂಶಸ್ಥರಾದ ಬಿ.ಕೆ.ದೇಸಾಯಿ ಹೇಳುತ್ತಾರೆ. ಇವರಿಗೆ ಈಗಲೂ ಹಾಲಿಗೇರಿ ದೇಸಾಯಿಗಳೆಂದು ಕರೆಯುವುದು ಪ್ರಚಲಿತದಲ್ಲಿದೆ.

ನಂತರ ಅಣ್ಣ ತಮ್ಮಂದಿರರು ಆಸ್ತಿಯನ್ನು ಹಂಚಿಕೊಂಡು ಬೇರೆಯಾದಾಗ ಸ್ವಾಭಾವಿಕವಾಗಿ ದೇಸಗತಿ ಒಡೆದರೂ ಏಕತೆಯಿಂದಲೇ ಇದ್ದರು. ಆಗಲೇ ಹಾಲಿಗೇರಿ, ಯಂಡಿಗೇರಿ ಹಾಗೂ ನೀರಬೂದಿಹಾಳ ವಾಡೆಗಳನ್ನು ಕಟ್ಟಿದರು. ಇವರ ಆಡಳಿತದ ಪರಗಣಗಳು ಎರಡು ೧. ಕೆರೂರ ೨. ಬೀಳಗಿ

ಮೂಲತಃ ಬೀಳಗಿ ಪರಗಣ ಸೊನ್ನದ ದೇಸಗತಿಯದಾದರೂ ಕೆಲವು ಗ್ರಾಮಗಳು ನೀರಬೂದಿಹಾಳ ದೇಸಗತಿ ಸಂಬಂದಿಸಿದ್ದವು. ಮೂರು ಅಗಸಿ ಬಾಗಿಲು, ಮೂರು ದೇವರು, ಮೂರು ದರ್ಗಾಗಳು ಈಗಲೂ ಇವೆ. ಅಂದಿಂದು ಉಳಿದಿಲ್ಲ.

ದೇಸಗತಿ ಚಾವರಾತ ಹಳ್ಳಿಗಳು

"ಕ್ರಿ.ಶ.೧೭೭೮ರಲ್ಲಿ ಹೈದರಾಲಿಯು ಜಾಲಿಹಾಳ, ಬಾದಾಮಿ ಕೆರೂರ ಪರಗಣಿಗಳಿಗೆ ನಿರ್ವಹಣೆಯನ್ನು ಸ್ಥಳೀಯ ದೇಸಾಯಿಗಳಿಗೆ ವಹಿಸಿಕೊಟ್ಟನು. ೨ ಪಟ್ಟು ಕಪ್ಪಕಾಣಿಕೆಯನ್ನು ನಿಗದಿಪಡಿಸಿದನು.''[೩೬] ಅದು ನೀರಬೂದಿಹಾಳ ದೇಸಗತಿಗೂ ಸಂಬಂಧಿಸಿತು.

ಕಂಪನಿ ಸರಕಾರ ಆಡಳಿತ ವಹಿಸಿಕೊಂಡಾಗ ಪೇಶ್ವೆಗಳ ನಂತರದಲ್ಲಿ ಸಂಪೂರ್ಣ ಆದಿಪತ್ಯ ಪಡೆದ ಮೇಲೆ ಬಾಂಬೆಯಲ್ಲಿ ನಿಂತುಕೊಂಡು ಕೆಲವು ದೇಸಗತಿಗಳನ್ನು ಗುರ್ತಿಸಿಕೊಂಡು ಅವರಿಗೆ ಹೆಚ್ಚಿನ ದೊರೆತನ ನೀಡಿದ್ದು ಆಗಿದೆ. ಅದರಲ್ಲಿ ಈ ದೇಸಗತಿಗೆ ಸಿಕ್ಕಿದ್ದು ಈ ರೀತಿ ಇದೆ.

''ಹಾಲಿಗೇರಿ ದೇಸಗತಿ ಮಹಾಲ ಜಮೀನದಾರ ವತನದ ಬದ್ದಲ ಕುಂಪಣಿ ಇಲಾಖೆಯಲ್ಲಿ ಜಮೀನ್ ಮತ್ತು ಇನಾಮ ಊರ ಎಷ್ಟು ಎಂಬುದು ಹಾಗೂ ಜನರೂ ಅಲ್ಲದೆ ಸಮಗ್ರ ತಕ್ತಾ ಇವರಿಗೆ ಸಿಕ್ಕಿರುತ್ತವೆ.''[೪೦] ಈ ಉಲ್ಲೇಖ ವಿವರಣೆ ಜೊತೆಗೆ ದೊಡ್ಡ ನಾಲ್ಕು ಪರಗಣೆ ಕೆಲಸವನ್ನು ಮಾಡಲು ಸರಕಾರ ನೀಡಿದೆ. ತಕ್ತೇದಲ್ಲಿ ಉಲ್ಲೇಖಿಸಿದಂತೆ ಈ ಕೆಳಗೆ ನಮೂದಿಸಿದೆ.

''೧. ಪರಗಣೆ ಕೆರೂರ : ಪವಾಡೆಪ್ಪ ಬಿನ್ ಬಸಪ್ಪ ವಡೇರ(ದೇಸಮುಖ) ಇವರಿಗೆ ವಹಿಸಲಾಗಿದೆ.

೨. ಪರಗಣೆ ಅನವಾಲನ್ನು ಕೂಡ ವಹಿಸಿಕೊಡಲಾಗಿದೆ.

೩. ಪರಗಣೆ ಬೀಳಗಿ : ಹುಚ್ಚಪ್ಪಕೊಟ್ರಪ್ಪ ವಡೇರ (ದೇಸಮುಖ) ಇವರಿಗೆ

೪. ಪರಗಣೆ ಕಲಾದಗಿಯನ್ನು ಕೂಡ ಮುಂದೆಬಂದವರಿಗೆ ವಹಿಸಲು ಸೂಚಿಸಿದೆ.

ಹಾಗೇ ಈ ವತನಗಳಲ್ಲಿ ಮುತಾಲೀಕರನ್ನು ನೇಮಿಸಿದ್ದು ಇದೆ. ಕಂಪನಿ ಸರಕಾರಕ್ಕೆ ವತನ ಪಡೆದ ಬಗ್ಗೆ ಮರಳಿ ಪತ್ರಿಸಿದ್ದಾರೆ. ಅದೆಂದರೆ ಏನೇ ಬಂದರೂ ಎಂಥಾ ಪ್ರಸಂಗ ಬಂದರೂ ತಾವೇ ಸ್ವತಃ ಮಾಡುತ್ತೇವೆ ಎಂದು ಜವಾಬ ಬರೆದಿರುತ್ತಾರೆ.''[೪೧] ಈ ಉಲ್ಲೇಖದ ಮೇರೆಗೆ ದೇಸಗತಿಯ ಕೀರ್ತಿ, ವೈಯಕ್ತಿಕ ಕೀರ್ತಿ, ಜವಾಬ್ದಾರಿಯುತ ಬೆಳವಣಿಗೆಯನ್ನು ಸೂಚಿಸುತ್ತದೆ.

೨. ಮತ್ತೊಂದು ಸವಾಲ ಜವಾಬ ಈ ರೀತಿ ಇದೆ. ಭೌಗೋಳಿಕ ಪರಿಸರ ಕುರಿತು ಗತಿಸಿದ ಕಾಲಮಾನವನ್ನು ಕಲ್ಪಿಸಿಕೊಂಡು ಉಲ್ಲೇಖಿಸಿದ್ದು ವಿಧಿತವಾಗುತ್ತದೆ. ತನ್ನ ವ್ಯಾಪ್ತಿಯಲ್ಲಿದ್ದ, ವ್ಯಾಪ್ತಿಯಲ್ಲಿರದ ''ಪರಗಣೆಗಳು ಬೇರೆ ಬೇರೆಯವರ ಕೈಯಲ್ಲಿದ್ದರೂ ಏಕತೆಯಿಂದ ಭೌಗೋಳಿಕ ಪ್ರಕೃರ್ತಿ ವಿಕೋಪ, ಬರ ಇತ್ಯಾದಿ ಕುರಿತು ಅದರ ಹಪ್ತೆ ಕೊಡುವ ಕುರಿತು ವಿವರಣೆ ನೀಡಿದ್ದು''[೪೨] ವಿಶೇಷವಾಗಿದೆ.

ಒಟ್ಟಾರೆ ದೇಸಗತಿಯು ರಾಜಕೀಯ ವಹಿವಾಟಿನಲ್ಲಿ ತಮ್ಮದೇ ಆದ ಸ್ಥಾನ ಗುರ್ತಿಸಿಕೊಂಡು ಚಾವರಾತ ಗ್ರಾಮಗಳ ಆಡಳಿತವನ್ನು ಆಳಿಕೆ ಮಾಡಿದ್ದಾರೆ. ಇಲ್ಲಿ ೧೨೦ ಗ್ರಾಮಗಳ ಪಟ್ಟಿ ಇರುವುದರಿಂದ ಪರಗಣೆಯನ್ನು ಮಾತ್ರ ಉಲ್ಲೇಖಿಸಲಾಗಿದೆ.

೨.೫. ಇತರೆ ದೇಸಗತಿಗಳು

೨.೫.೧. ಕುಳಲಿ ದೇಸಗತಿ

ಬಾಗಲಕೋಟಿ ಜಿಲ್ಲೆಯ ಮುಧೋಳ ತಾಲೂಕಿನ ಅತೀ ಚಿಕ್ಕ ಗ್ರಾಮವೇ ಕುಳಲಿ. ಈ ದೇಸಗತಿಯ ವ್ಯಾಪ್ತಿಯು ಕುಳಲಿಯಿಂದ ಹಿಡಿದು ಶ್ರೀಶೈಲದ ಕಡೆ ಬಾಗಿಲವರೆಗೆ ಎಂದು ಜನಪದರಿಂದ ಕೇಳಿಬರುತ್ತದೆ. ಈ ಕುರಿತಾಗಿ ಯಾವ ಆಧಾರಗಳು ಇರುವುದಿಲ್ಲ. ಮೂಲದೇಸಗತಿ ಹಾಳಾಗಿದ್ದರಿಂದ ಅಲ್ಲಿನ ವಾಡೇ ಎಲ್ಲವೂ ಖಾಸಗತಿಯವರ ಸ್ವತ್ತಾಗಿದೆ.

ದೇಸಗತಿ ಮೂಲ ಪುರುಷರಿಂದ ಹಿಡಿದು ಇಲ್ಲಿಯವರೆಗೂ ಯಾವುದೇ ವಂಶಾವಳಿ ಸಿಕ್ಕಿಲ್ಲ. ಅವರು ಬರೆದಿಟ್ಟ ಕೆಲವು ದಾಖಲೆಗಳ ಮುಖಾಂತರ ಮತ್ತು ಹಿರಿಯ ತಲೆಮಾರಿನ ಅರಮನೆ ಕಾರಬಾರಿಯಿಂದ ಕೇಳಿ ತಿಳಿಯಲಾಗಿದೆ.

ಈ ಮನೆತನದ ಮೂಲ ಪುರುಷನೆಂದರೆ "ಬಾಲಪ್ಪ ದೇಸಾಯಿ. ಇವನು ಹದಿನೈದನೆ ತಲೆಮಾರಿನ ಹಿಂದಿನವನಾಗಿದ್ದು ಅತ್ಯಂತ ಪರಾಕ್ರಮಿ, ಸಂಯಮಿಯಾಗಿದ್ದನು. ಅವನಂತೆಯೇ ಉಳಿದವರೂ ಕೂಡ ಸಂಯಮಿಯಾಗಿದ್ದರೆನ್ನುತ್ತಾರೆ."[೬೩] ಈ ಮನೆತನದ ಹಿರಿಯರಲ್ಲಿ ಬಸಪ್ಪ, ಬಾಲಪ್ಪ ಎಂಬುವರೆ ಇದ್ದರು. ಒಂದೇ ಹೆಸರಿನವರು ಕಂಡುಬರುವುದರಿಂದ ಚಿಕ್ಕಬಾಲಪ್ಪ ದೊಡ್ಡ ಬಾಲಪ್ಪ ಇಮ್ಮಡಿ ಆನೆಖಾನ ದೇಸಾಯಿ ಎಂದು ತಿಳಿದುಬರುತ್ತದೆ. ಎರಡು ಮೂರು ತಲೆಮಾರಿನ ಹಿಂದುಗಡೆ ದೇಸಾಯಿಗಳು ಸ್ತ್ರೀ ವ್ಯಾಮೋಹಿಗಳಾಗಿದ್ದರು. ಅಷ್ಟೇ ಗುಣವಂತರೂ ಆಗಿದ್ದರು. ಈ ನಾಡಿನ ಅಂದರೆ ಈ ಭಾಗದ 'ದಾನಶೂರ ಕರ್ಣ' ಎಂದೇ ಹೆಸರು ಪಡೆದಿದ್ದಾರೆ. ಕೇಳಿದವರಿಗೆ ಕೊಟ್ಟಿದ್ದೆ ಹೆಚ್ಚು ಮರಳಿ ಪಡೆದುದು ಕಡಿಮೆ ಎನ್ನುತ್ತಾರೆ. ಅದರ ಲೆಕ್ಕ ಪತ್ರ ಇಡಲು ನೂರಾರು ಕಾರಬಾರಿಗಳಿದ್ದು ಮನದಿಚ್ಛೆಯಂತೆ ತಿಂದು ತೇಗಿದರು. ಇವರ ವಿಲಾಸಿ ಜೀವನವೇ ದೇಸಗತಿ ಹಾಳಾಗಲು ಕಾರಣವಾಗಿದೆ.

ಘೋರ್ಪಡೆ ಅರಸನಿಗಿಂತ ಹೆಚ್ಚುಪಾಲು ಆಸ್ತಿ ಕುಳಲಿ ದೇಸಗತಿಯದಾಗಿತ್ತು. ಘೋರ್ಪಡೆ ಅರಸನಿಗೆ ಆನೆ ನಡೆದಾಡಿದ ಜಾಗವನ್ನು ಉಂಬಳಿ ಹಾಕಿ ಕೊಟ್ಟಿದ್ದಾನೆ. ಈಗಲೂ ಈ ಜಮೀನಿಗೆ ಆನೇಕಾರ ಮಡಿ ಎಂದೇ ಹೆಸರು.

ಕುಳಲಿ ದೇಸಾಯರಿಗೆ 'ಆನೆ' ಸಾಕುವ ಯೋಗ್ಯತೆ ಇದ್ದರೂ, ಸಾಕುವುದಿಲ್ಲ. ಕಾರಣವಿಷ್ಟೆ ಆದಿಲ್‌ಶಾಹಿಗಳು ಇವನ ಶೂರತನಕ್ಕೆ ಜೋಡು ಆನೆಯನ್ನು ಬಳುವಳಿಯಾಗಿ ಕೊಟ್ಟರು. ಅದರ ಜೊತೆಗೆ ಮಾವುತರನ್ನು ಕಳಿಸಿದರು. ಆನೆಗಳು ಅರಮನೆಯಲ್ಲಿ ರಕ್ತಕಾರಿ ಸತ್ತವು. ಅಂದಿನಿಂದ ಆನೆಗಳನ್ನು ಕಟ್ಟಲಿಲ್ಲ. ಆನೆ ಮೇಲೆ ಹತ್ತಿ ಮೆರೆಯಲಿಲ್ಲ.

ಕುಳಲಿ ದೇಸಗತಿ ಪೂರ್ವನೆಲೆ ಗೊರವನ ಕೊಳ್ಳವಾಗಿತ್ತು. ಅಂದು ಆದಿಲ್‌ಶಾಹಿಯ ಕೋರಿಕೆಯ ಮೇರೆಗೆ ಮಧಿಸಿದ ಆನೆಯನ್ನು ಸೋಲಿಸಲು ಇಳೆ ಹಿಡಿದ ಪ್ರಯುಕ್ತ ಗೆದ್ದು ಬಂದು 'ಆನೆ ಖಾನ್' ಎಂಬ ಬಿರುದನ್ನು ಪಡೆದನು. ಆಗಲೇ ನೂರಾರು ಗ್ರಾಮಗಳು ಸರ್ವಇನಾಂ ಆಗಿದೊರಕಿದವು.ಮುಂದೆ ಪೇಶ್ವೆಗಳ ಆಡಳಿತದಲ್ಲಿ ಈಗಿನ ಮುದಕವಿ ೧೦ ಹಳ್ಳಿಗಳೂ ಕೂಡ ದೊರಕಿದವು. ಆಗ ಕುಳಲಿ ದೇಸಾಯಿಯು ವೈಸಂಪಾಯನ ಪದ್ಧತಿ ಪ್ರಕಾರ ಎರಡೂ ಕಡೆಗೆ ಒಬ್ಬನೇ ಅಧಿಕಾರ ವಹಿಸಿಕೊಂಡು ಇಮ್ಮಡಿ ಆನೆಖಾನ್ ದೇಸಾಯಿ ಬಿರುದು ಹೊಂದಿದನು. ಹಾಗೇ ಪೇಶ್ವೆಗಳ ದಾಖಲೆಗಳ ಪ್ರಕಾರ 'ಗಹನದುರ್ಗ ಇಮ್ಮಡಿ ಆನೆ ಖಾನ್ ದೇಸಾಯಿ' ಎಂಬ ಬಿರುದು ಇದ್ದುದಾಗಿ ತಿಳಿದುಬರುತ್ತದೆ. ಅವರು ಬರೆದಿಟ್ಟ ದಾಖಲೆಗಳಲ್ಲಿ ಮೇಲಿನಂತೆ ಮೊಹರು ಇದ್ದುದು ಕೂಡ ನಿರ್ದೇಶಿಸುತ್ತದೆ.(ಇದಕ್ಕೆ ಸಂಬಂಧಿಸಿದ ಭಾವಚಿತ್ರವನ್ನು ಲಗತ್ತಿಸಲಾಗಿದೆ.)

ಒಂಟಿಗಳೂ, ಕುದುರೆಗಳು, ನೂರಾರು ಕಾಲಾಳು, ಸೈನಿಕರು ಹೀಗೆ ಒಂದು ದೊಡ್ಡ ಪಟ್ಟಿ ಇದೆ. ಬಹುದೊಡ್ಡ ವತನದಾರರಾಗಿ ಆಳಿದ ದೇಸಗತಿ ಇದಾಗಿದೆ.

ಕುಳಲಿಯಲ್ಲಿ ವಾಡೆಯನ್ನು ಕಟ್ಟಿಕೊಂಡು ಮುಧೋಳ ಪರಗಣದಲ್ಲಿ ಕೂಡ ವಾಡೇ ಕಟ್ಟಿಕೊಂಡು ಆಡಳಿತ ನಡೆಸಿದನು. ಈಗ ಸದ್ಯ ವಾಡೆದೊಳಗೆ ಗೋಪಾಲಕೃಷ್ಣ ಮಂದಿರ ಒಂದಿದೆ. ವಾಡೇ ಕೆಡವಿ ಖಾಸಗಿಯವರು ಮನೆ ಕಟ್ಟಿಕೊಂಡಿದ್ದಾರೆ. ಈ ದೇಸಗತಿಯ ಬಾಹು ಬಂದರು ಬಟಕುರ್ಕಿ, ಗೊರವನಕೊಳ್ಳ, ಸಿಂದಿಕುರಬೆಟ್ಟ, ಸಾಲಾಪೂರ, ಯರಗಟ್ಟಿ ಕಳ್ಳಿಗುದ್ದಿಯಲ್ಲಿ ಇದ್ದಾರೆ. ಅವರೆಲ್ಲರೂ ಕುಳಲಿ ದೇಸಗತಿಯ ಸಂಬಂಧ ಹೊಂದಿದ್ದಾರೆ. ಚಾವರಾತ ಹಳ್ಳಿಗಳು ೧. ಕುಳಲಿ ೨. ಮಳಲಿ ೩. ಬುದ್ನಿ ೪. ಶಿರೋಳ ೫. ಮುಗಳಖೋಡ ೬. ಢವಳೇಶ್ವರ ೭. ಮುಧೋಳ ೮. ಅಕ್ಕಿಮರಡಿ ೯. ಸಂಗಾನಟ್ಟಿ ೧೦. ಬಿಸನಾಳ ೧೧. ಕೆಸರಗೊಪ್ಪ ೧೨. ಸೋರಗಾಂವಿ ೧೩. ನಂದಗಾಂವ ೧೪. ಮಲ್ಲಾಪೂರ ೧೫. ಜುಂಜರಕೊಪ್ಪ

ಮುದಕವಿ ಪರಗಣ

೧. ಬಟಕುರ್ಕಿ ೨. ಕಲ್ಮಡ ೩. ಹಣಮಾಪೂರ ೪. ತಿಮ್ಮಾಪೂರ.ಎಂ ೫. ಕಲ್ಲಾಪೂರ ಎಂ ೬. ಚಿಕ್ಕತಡಸಿ ೭. ಆನೆಗುದ್ದಿ ೮. ನಾಗನೂರ ೯. ರಾಜನಾಳ ೧೦. ಚನ್ನಾಪೂರ ೧೧. ನಂದ್ಯಾಳ ೧೨. ಮುದಕವಿ ೧೩. ಉಮತಾರ ೧೪. ಕಾಣಾಪೂರ ಎಂ.

ಈ ಪರಗಣಕ್ಕೆ ೩೨ ಗ್ರಾಮಗಳಿವೆ. ಹೀಗೆ ಎರಡು ಕಡೆ ಅಧಿಕಾರ ವಹಿಸಿಕೊಂಡು ವತನದಾರರಾಗಿ ಮೆರೆದು 'ಶ್ರೀಮಂತ' ಎಂಬ ಬಿರುದನ್ನು ಜನತೆಯು ಹೇಳುತ್ತಿರುವುದು ಕೇಳಿಬರುತ್ತದೆ. ಅಧಿಕಾರ ಅಳಿದರೂ ಅವರ ಹೆಸರು ಇನ್ನೂ ಅಜರಾಮರವಾಗಿ ಜನತೆಯ ಬಾಯಲ್ಲಿ ಬರುತ್ತಿರುವುದೇ ನಿದರ್ಶನವಾಗಿದೆ.

೨.೫.೨. ತೇರದಾಳ ದೇಸಗತಿ

ತೇರದಾಳ ಮೂಲತಃ ಇದು ಸಾಂಗಲಿ ಪಟವರ್ಧನರ ಸಂಸ್ಥಾನಕ್ಕೆ ಸಂಬಂಧಿಸಿದ ಸಾತಾರ ತಾಲೂಕಿನ ಭಾಗವಾಗಿತ್ತು. ಈ ಹಿನ್ನೆಲೆಯಲ್ಲಿ ಮುಂಚಿನ ಇತಿಹಾಸ ತಿಳಿದುಬರುವುದು ತೀರ ಅಲ್ಪ. ತೇರದಾಳ ಹಳಿಂಗಲಿ ಹನಗಂಡಿ ಒಂದೇ ಆಗಿವೆ. ತೇರದಾಳವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಪ್ರಮುಖ ಜೈನ ಕೇಂದ್ರವಾಗಿತ್ತು. ಅಲ್ಲದೆ ಅಲ್ಲಮಪ್ರಭುದೇವರ ದೇವಾಲಯವೂ ಕೂಡ ಬಹಳ ಹಳೆಯಕಾಲದ ದೇವಾಲಯವಾಗಿದೆ. ದೇವಾಲಯದ ಜೀರ್ಣೋದ್ಧಾರ ಇಂತಹ ಕೆಲವು ಅಂಶಗಳನ್ನು ಗಮನಿಸಿದಾಗ ದೇಸಗತಿಯವರ ಕೊಡುಗೆ ಸಾಕಷ್ಟು ಪ್ರಾಚೀನವಾದುದೆಂದು ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ಸಿಕ್ಕಂತ ಲಭ್ಯವಾದ ಆಕರಗಳನ್ನು ತಾಳೆ ನೋಡಿ ತೇರದಾಳ ದೇಸಗತಿಯ ಸಂಕ್ಷಿಪ್ತ ವಿವರಣೆಯನ್ನು ನಿರೂಪಿಸಿಕೊಳ್ಳಲಾಗಿದೆ.

ಈ ಮನೆತನದ ಮೂಲ ಪುರುಷನೆಂದರೆ ಕೃಷ್ಣಪ್ಪ ಹಾಗೂ ಇತರರು. ಇವರು ಆದಿಲ್ ಶಹನಿಗೆ ಶೂರತನ ತೋರಿಸಿದ್ದರಿಂದ ಇನಾಂ ಗಳಿಸಿದ್ದು ವಿಶೇಷವಾಗಿದೆ. ಪಾಯಪ್ಪ, ಜಕ್ಕಪ್ಪ, ಕೃಷ್ಣಪ್ಪ, ಸತ್ಯಪ್ಪ, ರುಕ್ಮಾಬಾಯಿ ಬಾಲವಿಧವೆಯಾಗಿ ಎಪ್ಪತ್ತು ವರ್ಷದವರೆಗೆ ದೇಸಗತಿ ನಡೆಸಿದಳು.

ಮುಂದೆ ಬಂದ ದೇಸಾಯಿಗಳು ಒಂದೇ ಬಡ್ಡಿಗೆ ಸಂಬಂಧಿಸಿದವರಾಗಿದ್ದರು. ಲನೇ ತಲಿಗೆ ಜೈನ ಚತುರ್ಥರಾಗಿ ೧೧ನೇ ತಲಿನಂತರ ಸಪ್ತಸಾಗರದಿಂದ ದತ್ತಕಬಂದರು. ಅವರೇ ಅಲ್ಲಪ್ಪ ದೇಸಾಯಿ ಇವರ ನಂತರ ಈ ವಂಶ ಬೆಳೆದು ಬಂದಿದ್ದು ವಿಧಿತವಾಗುತ್ತದ.

ಕೃಷ್ಣಪ್ಪ ಒಬ್ಬನ ಹೆಸರನ್ನು ಬಿಟ್ಟರೆ ಉಳಿದವರ ಹೆಸರು ತಿಳಿದುಬರುವುದಿಲ್ಲ. ಕೃಷ್ಣಪ್ಪ ಆದಿಲ್‌ಶಾಹಿಯ ಹುಚ್ಚ ಕುದುರೆ ಏರಿ ಎರಡು ದಿನಗಳವರೆಗೆ ಬರುವುದಿಲ್ಲ. ಮೂರನೇ ದಿನ ಅದೇ ವೇಗದಲ್ಲಿ ಹಾಜರಾದಾಗ ಅಲಿ ಆದಿಲ್ ಶಹನು ಕೃಷ್ಣಪ್ಪನನ್ನು ನೋಡಿ ಹರ್ಷಿತನಾಗಿ 'ಬಹುತ್ ಖುಷ್ ಹೋ' ''ತುಮ್ ಪಾಗಲ್ ಗೋಡಾ ಖಾನ್''[೪೪] ಎಂದು ಬಿರುದು ನೀಡಿ ಗೌರವಿಸಿದನು. ಆ ಭಾಗದ ಸರ್ವಇನಾಂ ಪಡೆದನು. ಆಗಲೇ ದೇಸಗತಿ ಹುಟ್ಟಿಗೆ ಕಾರಣೀಭೂತವಾಯಿತು.

ಇಲ್ಲಿ ಒಂದು ದರಗಾ ಇದೆ. ಅಲ್ಲಿ 'ರೂಶನಾಯಿಚೆ ಊದ ಕರಿತಾ' ಹೂವು ಮತ್ತು ಊದ ಹಾಕಿದರೆ ಸೇವೆ ಮಾಡಿದರೆ ನಿಮಗೆ ಇನ್ನಷ್ಟು ಜಮೀನ ಕೊಡುತ್ತೇನೆ ಎಂದು ಉಲ್ಲೇಖಿಸಿದ್ದಾರೆ. ಇವೆಲ್ಲ ಅಂಶಗಳು ಅವರ ದೇಸಗತಿ ಬೆಳವಣಿಗೆಗೆ ಭದ್ರಬುನಾದಿ ಒದಗಿಸುತ್ತವೆ.

ತೇರದಾಳ ಹನಗಂಡಿ, ಹಳಿಂಗಳಿ ದೇಸಗತಿಗಳು ಮೂಲದಲ್ಲಿ ಒಂದೇ ಆಗಿದ್ದವು. ಇವರಲ್ಲಿ ಅಣ್ಣ ತಮ್ಮಂದಿರರಲ್ಲಿ ಆಸ್ತಿಯ ಕುರಿತು ವ್ಯಾಜ್ಯ ಹುಟ್ಟಿದಾಗ ಹಂಚಿಕೆ ಮಾಡಿಕೊಂಡು ಬೇರೆಯಾದಾಗ ಸ್ವಾಭಾವಿಕವಾಗಿ ದೇಸಗತಿಗಳು ಒಡೆದವು. ಎಲ್ಲರೂ ಒಟ್ಟಾಗಿ ಇರುವಾಗಲೇ ದೇಸಗತಿಯನ್ನು ಕಟ್ಟಿದರು.

ಸುತ್ತಲೂ ಕೋಟೆ ಕಟ್ಟಿಕೊಂಡರು ಇವರೆಲ್ಲರ ಒಟ್ಟು ದುಡಿಮೆಯ ಫಲ ಈ ದೇಸಗತಿಗಳು ತಮ್ಮ ಪಾಲಿಗೆ ಬಂದ ಆಸ್ತಿಯನ್ನು ತೆಗೆದುಕೊಂಡು ಬೇರೆಯಾದವು. ಒಂದೊಂದು ದೇಸಗತಿಗಳಿಗೆ ಹತ್ತಿಪ್ಪತ್ತು ಹಳ್ಳಿಗಳು ಬಂದವು.

ದೇಸಗತಿ ಚಾವರಾತ ಹಳ್ಳಿಗಳು

''ತೇರದಾಳ ಹಾಗೂ ಹನಗಂಡಿ ದೇಸಗತಿಗೆ ಮೂವತ್ತ ಮೂರು(೩೩) ಹಳ್ಳಿ ಅಧಿಕಾರವಿತ್ತು. ಆಗಲೇ ದೇಸಗತಿ ಪರಗಣಾ ವತನದಾರ ಎಂದು ಹೇಳುತ್ತಾರೆ.''[೪೫] ಅದರಲ್ಲಿ ೪ ಗ್ರಾಮಗಳು ಇನಾಮ ಇದ್ದು ಉಳಿದ ಇಪ್ಪತ್ತೊಂಬತ್ತು ಹಳ್ಳಿಗಳು ಅವರ ಒಡೆತನದಲ್ಲಿದ್ದವು.

ಛತ್ರಪತಿ ಶಿವಾಜಿ ವಿರುದ್ಧ ಹೋರಾಡಿದ್ದರಿಂದ ಶೂರತನಕ್ಕೂ ಸಹ ಇನಾಮು ಸಿಕ್ಕಿದೆ. ಇದೇ ಕಾರಣವನ್ನು ಒಡ್ಡಿ ಅಣ್ಣ ತಮ್ಮಂದಿರಲ್ಲಿ ಕಲಹ ಬೆಳೆಸಿ ದೇಸಗತಿ ಒಡೆಯಲು ಕಾರಣವಾಗುವಂತೆ ಸೃಷ್ಟಿಸುತ್ತಾರೆ. ಈ ಕುರಿತಾದ ಹೆಚ್ಚಿನ ಮಾಹಿತಿ ಸಿಗುವುದಿಲ್ಲ. ಆಗ ವಿಭಜನೆಗೊಂಡ ಚಾವರಾತ ಗ್ರಾಮಗಳು ಈ ರೀತಿ ಕಂಡುಬರುತ್ತವೆ.

''೧. ಮುಗಳಖೋಡ ೨. ಹನಗಂಡಿ

೩. ತಮದಡ್ಡಿ ೪. ಹಳಿಂಗಳಿ

೫. ಮದನಮಟ್ಟಿ ೬. ತೇರದಾಳ

೭. ಇಂಗಳಗಾಂವಿ ೮. ಹಳ್ಳೂರ

೯. ಖೇಮಲಾಪೂರ ೧೦. ಸೇಗುಣಸಿ

೧೧. ಕವಟಕೊಪ್ಪ ೧೨. ಯರಗಟ್ಟಿ

೧೩. ಹಿಡಕಲ್ಲ ೧೪. ಮುಡಗಿನಾಳ

೧೫. ಗುಂಡವಾಡ ೧೬. ದರೂರ

೧೭. ಸಿರೂರ ೧೮. ಹಾರೊಗೇರಿ

೧೯. ಗೋಲಭಾವಿ ೨೦. ಸುಲತಾನಪುರ

೨೧. ಕಾಲತಿಪ್ಪಿ ೨೨. ಇಟಗಿನಹಾಳ

೨೩. ಮೂಡಲಗಿ ೨೪. ಕೋಳಿಗುಡ್ಡ

೨೫. ಮದಲಮಟ್ಟಿ	೨೬. ಹಂದಿಗುಂದ
೨೭. ಯೇಬರಟ್ಟಿ	೨೮. ಇಂಗಳಗಿ
೨೯. ಬಡಬ್ಯಾಕೊಡ	೩೦. ರಬಕವಿ
೩೧. ಗುರ್ಲಾಪೂರ	೩೨. ಬಡದಾಳ''[೪೬]

೨.೫.೩. ಐಹೊಳೆ ದೇಸಗತಿ

ಹುನಗುಂದ ತಾಲೂಕಿನ ಐಹೊಳೆ ದೇಸಗತವು ಬಹುದೊಡ್ಡ ವತನ ಸಂಪಾದನೆ ಮಾಡಿದ್ದು ಇದೆ. ಮೂಲ ಪುರುಷನ ಬಗ್ಗೆ ಈಗಾಗಲೇ ಜಾಲಿಹಾಳ ದೇಸಗತಿ ಕುರಿತು ಚರ್ಚಿಸುವಾಗ ಗುರ್ತಿಸಲಾಗಿದೆ. ಆದರೂ ಒಂದೊಂದು ಭಾಗದ ಕಡೆಗೆ ಹಂಚಿಕೊಂಡು ದೇಸಗತ ಆಡಳಿತ ನಡೆಸಿದ್ದರಿಂದ ಅಲ್ಲಿ ತಮ್ಮ ವಿಶೇಷ ಶೂರತನ ತೋರಿಸಿದ್ದು ಕಂಡುಬರುತ್ತದೆ. ಈ ಮನೆತನದ ಸಹೋದರರು ಒಬ್ಬರೊಬ್ಬರು ಅರಿತು ಒಟ್ಟಿಗೆ ಸೇರಿ ವತನ ಸಂಪಾದನೆ ಮಾಡಿದ್ದಾರೆ. ಈ ಕುರಿತಾದ ಕೆಲವು ದಾಖಲೆಗಳ ಮುಖಾಂತರ ಇಲ್ಲಿ ಗುರ್ತಿಸಿಕೊಂಡು ಕಟ್ಟಿಕೊಡಲಾಗಿದೆ.

ಐಹೊಳೆ ದೇಸಗತಿಯು ಹೇಗೆ ನಡೆತ್ತಿಂಬುದನ್ನು ಅರಿಯುವುದು ಮಹತ್ವದ್ದಾಗಿದೆ. ಇದರ ಮೂಲಪುರುಷರ ಹೆಸರುಗಳು ಮೋಡಿ ದಾಖಲೆಗಳಲ್ಲಿ ಗೋಸಲ ಎಂದಿದೆ. ಮತ್ತೊಂದೆಡೆಗೆ 'ಗೋಸಲಬೈರಿ ನಾಯಕ'ರೆಂದು ದಾಖಲಾಗಿದೆ. ಇವರಾದರೂ ಕೂಡ ಒಂದೇ ಸ್ಥಳದಲ್ಲಿ ನಿಲ್ಲದೆ ಅತ್ತಿತ್ತ ಅಲೆದಾಡಿ ದೇಸಗತಿ ಗಳಿಸಿದ್ದಾರೆ. ಮೂಲತಃ ಗೋಸಲ ಕೋಟೆಯಲ್ಲಿದ್ದು ಇನಾಮ ಗಳಿಸಿದ್ದರು. ಆದ್ದರಿಂದಲೆ ಗೋಸಲ ಬೈರಿ ನಾಯಕರೆಂದು ಕರೆದಿದ್ದು ವಿಧಿತವಾಗುತ್ತದೆ.

ಮೂಲ ಪುರುಷನೆಂದರೆ ಬಸುಶಂಕರ ಬಹದ್ದೂರ, ಬೈರನಾಯಕ, ಚಿತ್ರನಾಯಕ, ಧರ್ಮನಾಯಕ, ಹೆಣ್ಣು ಮಗಳಾದ ಸೂರಮ್ಮ, ಚಂದ್ರಮ್ಮ ಇವರಿಂದ ದೇಸಗತಿ ಹುಟ್ಟಿಕೊಂಡ ನಂತರ ಭೀಮನಾಯಕ, ಯಲಗುರದ ನಾಯಕ ಹಿರೇಸೋಮನಾಯಕ ಚಿಕ್ಕ ಸೋಮನಾಯಕ ಎಂಬುವರು ಕಾಣಸಿಗುತ್ತಾರೆ.

ಭೀಮನಾಯಕನೆಂಬುವನು ಬಲಾಢ್ಯ ಬಾಹುಲ್ಯನಾಗಿದ್ದು ಅಜಾನುಬಾಹು ಉಳ್ಳವನಾಗಿದ್ದನು. ಅದಿಲ್ ಶಾಹಿಯ ಸೈನ್ಯದೊಡನೆ ಭೀಮನಾಯಕನು ಅಂದು ಮುದಗಲ್ಲ ಕೋಟೆಗೆ ಬಂದಿಳಿದಾಗ ಗುರು ಸೈಯದರ ಆಜ್ಞೆಯಂತೆ ಅವರ ಮಗಳನ್ನು ಬಿಡಿಸಿಕೊಂಡು ಬಂದನು. ಇದರಿಂದ ಗುರು ಸೈಯದರ ಆಜ್ಞೆಯಂತೆ ಮುದಗಲ್ಲವರೆಗೆ ಇನಾಂ ಪಡೆದುದು ವಿಶೇಷವಾಗಿದೆ.

ಹಿರೇಸೊಮನಾಯಕನು ಭಕ್ತ ಸಂಪನ್ನನಾಗಿದ್ದು ಗುರು ಸಾರಂಗದೇವರನ್ನು ಬರಮಾಡಿಕೊಂಡು ಧೀಕ್ಷಾ ಪಡೆದು, ತಮ್ಮ ಬೇಡ ಪಡೆಯವರಿಗೂ ಲಿಂಗ ದೀಕ್ಷೆ ಮಾಡಿಸಿದನು. ಸಮನ್ವತೆಯನ್ನು ಸಾರಿದನು. ಎಲ್ಲರಲ್ಲೂ ಭಕ್ತಿ ಮೂಡುವಂತೆ ಮಾಡಿದ್ದು ಇವನ ವಿಶೇಷ ಸಾಧನೆಯಾಗಿದೆ.

ಇವನ ನಂತರ ಬಂದ ನಾಯಕ, ದೇಸಾಯಿಗಳು ಪಟ್ಟದಕಲ್ಲಿನಲ್ಲಿದ್ದು ಅಲ್ಲಲ್ಲಿ ಚದುರಿ ಹೋದರು. ಮಂಗಳಗುಡ್ಡ, ಅಕ್ಕರಗಲ್ಲದಲ್ಲಿ ವಾಸಮಾಡಿದರು. ಅವರ ಕುರಿತು ಮಾಹಿತಿ ಸಿಗುವುದಿಲ್ಲ. ಮೂಲದೇಸಗತಿ ವಾರಸುದಾರರಾಗಿ ಕೆಲವರು ಮಾತ್ರ ಆಳಿದರು. ನಂತರ ದತ್ತಕ ಬಂದುದರಿಂದ ದೇಸಗತಿ ಅಷ್ಟೊಂದು ಬಲವಾಗಿ ಬೆಳೆಯಲಿಲ್ಲವೆನ್ನುತ್ತಾರೆ.

ಐಹೊಳೆ, ಕೆಲೂರ, ದೇಸಗತಿಗಳು ಮೂಲದಲ್ಲಿ ಒಂದೇ ಆಗಿದ್ದವು. ಕೆಲೂರ ಐಹೊಳೆಯ ಒಂದು ಭಾಗವಾಗಿತ್ತು. ಆದಿಲ್‌ಶಾಹಿ ಆಡಳಿತದಲ್ಲೇ ಕೆಲೂರ ಅಲ್ಲಿನ ನಾಡಗೌಡರಿಗೆ ಇನಾಂ ಆಗಿ ಹೋಯಿತು. ಆಗ ಮುದಗಲ್ಲವರೆಗೆ ಹಬ್ಬಿದ ದೇಸಗತಿ ಮೂರನೂರಾ ಮೂವತ್ತು ಹಳ್ಳಿ ಹೊಂದಿತ್ತೆಂದು ಹೇಳುತ್ತಾರೆ. ಆಗಲೇ ರಾಮಲಿಂಗನ ಗುಡಿಯ ಮೇಲ್ಗಡೆ ಎತ್ತರದಲ್ಲಿ ಸುತ್ತುವರಿದು ಕೋಟೆ ಕಟ್ಟಿಕೊಂಡು ಆಳಿಕೆ ಮಾಡಿದ್ದಾರೆ. ತಮಗೆ ಅಧೀನದಲ್ಲಿದ್ದ ಗ್ರಾಮಗಳನ್ನು ಒಟ್ಟು ಕೂಡಿಕೊಂಡು ಆಳಿಕೆ ಮಾಡಿದರು.

ಬಿಜಾಪೂರದಲ್ಲಿ ಪಾನಶೆಟ್ಟಿಯ ಮೂವತ್ತು ಕೂರಿಗೆ ಜಮೀನ ಸಲುವಾಗಿ ಲಡಾಯಿ ಮಾಡಿದರು. ಅಂದೇ ಬಿಜಾಪೂರ ಅದಿಲ್ ಶಾಹಿಯ ಅರಮನೆಯಿಂದ ಒಂದು ಜಾಹೀರ ಆಗಿತ್ತು. ಹಕ್ಕಿಗಳು ಕುದುರೆ ಕಣ್ಣು, ತೇಜದ ಕಣ್ಣು ಕುಕ್ಕಿ ತಿನ್ನುತ್ತಿವೆ. ಅದನ್ನು ಪತ್ತೆ ಹಚ್ಚಿ ಹೊಡೆಯಲು ಆಹ್ವಾನವಿತ್ತನು. ಪಾನ ಶೆಟ್ಟಿಯಲ್ಲಿ ಲಡಾಯಾಡಿ ಗೆದ್ದಿದ್ದರಿಂದ ಅಂದೇ ಇಳೆ ಹಿಡಿದರು. ಹತ್ತಾರು ಕುದುರೆಗಳು ಒಂಟಿ ತೆಗೆದುಕೊಂಡು ಒಂದು ತಿಂಗಳ ಪರ್ಯಂತ ಸುತ್ತಾಡಿ ಬಂದರು ಬೆಳದಿಂಗಳಲ್ಲೆ ಹಾರಿಬಂದು ಕಣ್ಣು ಕುಕ್ಕಿ ತಿನ್ನುವ ಬೈರಹಕ್ಕಿಯೆಂದು ಗುರ್ತಿಸಿ, ಅದರ ಪ್ರಾಣ ಹತ್ಯೆ ಮಾಡಿದರು. ಇದನ್ನು ತಿಳಿದ ಅದಿಲ್ ಶಾಹಿಯು 'ಬೈರಹಕ್ಕಿ ಬಹದ್ದೂರ' ಎಂಬ ಬಿರುದು ನೀಡಿ ಇನಾಂ ಕೊಟ್ಟನು. ಅಂದಿನಿಂದಲೇ ದೇಸಗತಿ ಸ್ಥಾಪನೆಗೆ ಹುಟ್ಟು ಹಾಕಿದರೆನ್ನಬಹುದಾಗಿದೆ. ಮುಂದೆ ಕಾಲಕಾಲಕ್ಕೆ ತಮ್ಮ ಶೂರತನ ತೋರಿಸುತ್ತ, ದೇಸಗತಿ ಕಟ್ಟಿ ಬೆಳೆಸಿದರೆಂದು ವಿದಿತವಾಗುತ್ತದೆ.

ಚಾವರಾತ ಹಳ್ಳಿಗಳು

ದೇಸಗತಿ ಒಟ್ಟು ಮೂರನೂರಾ ಮೂವತ್ತು ಹಳ್ಳಿಗಳಿದ್ದರೂ ಅವರ ಅಲಿನೇಷನ್ ರೀಕಾರ್ಡ್‌ನಲ್ಲಿ ಎಂಟು ಸಿಕ್ಕಿವೆ. ಅವೆಂದರೆ

೧. ಹುನ್ನಳ್ಳೀ ೨. ನಿಂಬಲಗುಂದಿ ೩. ಮುಳ್ಳೂರ ೪. ಕಳಿಗುಡ್ಡ ೫. ಐಹೊಳೆ ೬. ಕುಣಿಬೆಂಚಿ ೭. ಕ್ಯಾದಿಗೇರಿ ೮. ಚಿಲಾಪೂರ

೨.೫.೪. ಶಿರಗುಪ್ಪಿ ದೇಸಗತಿ

ಶಿರಗುಪ್ಪಿ ಬಾಗಲಕೋಟಿ ಜಿಲ್ಲೆಯ ಬೀಳಗಿ ತಾಲೂಕಿನ ಹೋಬಳಿ ಕೇಂದ್ರಗಳಲ್ಲಿ ಒಂದು. ಇದು ಬೀಳಗಿಯ ಉತ್ತರಕ್ಕೆ ಇದೆ. ಇದರ ಬಲಭಾಗಕ್ಕೆ ನದಿ ಹರಿದು ಹೋಗಿರುವುದರಿಂದ ಇದರ

ಸಮೀಪದಲ್ಲಿಯೇ ಚಿಕ್ಕಲಗುಂಡಿ ಮತ್ತು ಬೂದಿಹಾಳ (ಸಮ್ಮತ ಅನಗವಾಡಿ) ಹಳ್ಳಿಗಳು ಸಿಗುತ್ತವೆ. ಹಾಗೆಯೇ ಪೆರ್ದೊರೆ, ಹಿರಿಹೊಳೆಯೆಂದು ಪುರಾಣ ಪ್ರಸಿದ್ಧವಾಗಿರುವ ಕೃಷ್ಣಾನದಿಯು ಈ ತಾಲೂಕಿನ ಇನ್ನೊಂದು ನದಿ. ಇದು ನದಿಯ ಪ್ರದೇಶವಾಗಿರುವುದರಿಂದ ಯಾವಾಗಲೂ ಸಮೃದ್ಧಿಯನ್ನು ಹೊಂದಿರುವಂಥದ್ದು ಈ ಭಾಗದ ಪ್ರದೇಶಕ್ಕೆ ಕುಂದರಿನಾಡು ಎಂದು ಕರೆಯುತ್ತಿದ್ದರೆಂದು ಜಾನಪದ ಹೇಳಿಕೆಗಳಿವೆ. ಮಹ್ಮದ ಆದಿಲ್‌ಶಾಹಿನ ಕಾಲದಲ್ಲಿ ಕ್ರಿ.ಶ.೧೬೪೬ ರಿಂದ ಕ್ರಿ.ಶ.೧೬೭೬ರ ಅವಧಿಯಲ್ಲಿ ಈ ಭಾಗವನ್ನು ಮನ್ನಿಕೇರಿ ದೇಸಾಯಿ ಹದ್ದು ಬಸ್ತಿನಲ್ಲಿಟ್ಟು ಅಲ್ಲಿರುವ ಮುಸ್ಲಿಂ ಸರದಾರರಿಗೆ ಬಿಟ್ಟುಕೊಟ್ಟದ್ದು ತಿಳಿದುಬರುತ್ತದೆ. ಈ ಭಾಗದ ಕೇಂದ್ರಸ್ಥಳವೇ ಕುಂದರಗಿ ಆಗಿತ್ತು. ನಂತರದಲ್ಲಿ ಈ ಕುಂದರಗಿ ಪರಗಣದ ಅಧಿಕಾರಿಯಾಗಿ ದೊರೆಯಾಗಿ ಆಳಿದವರೇ ಶಿರಗುಪ್ಪಿ ದೇಸಾಯರು. ಈ ಮನೆತನಕ್ಕೆ ದತ್ತಕ ಬಂದಿರುವುದರಿಂದ ಹಿಂದಿನ ಯಾವುದೇ ಕಾಗದ ಪತ್ರಗಳ ಬಗ್ಗೆ ಅಲಕ್ಷಿತ ತೋರುತ್ತಿದ್ದಂತೆ ಕಂಡುಬರುತ್ತದೆ. ದತ್ತಕ ಪಡೆದ ಮಗನು ಸುಮಾರು ೨೦ ವರ್ಷಗಳವರೆಗೆ ವ್ಯಾಜ್ಯದಲ್ಲಿದುದರಿಂದ ಇಂಥ ಪ್ರಮೇಯ ಬಂದಂತೆ ತೋರುತ್ತದೆ. ಈ ಮನೆತನದ ಚರಿತ್ರೆಯನ್ನು ಹೇಳುವ ಆಕರಗಳು ಅತ್ಯಲ್ಪ ಪ್ರಾಮಾಣದಲ್ಲಿ ದೊರೆತಿರುವುದರಿಂದ ಮತ್ತು ಅವುಗಳಲ್ಲಿ ಪರಸ್ಪರ ತೊಡಕು ಅಸ್ಪಷ್ಟತೆ ತುಂಬಿರುವುದು. ಹೀಗಿದ್ದರೂ ಸದ್ಯಕ್ಕೆ ಲಭ್ಯವಿರುವ ಎಲ್ಲ ಆಕರಗಳನ್ನು ಪರಸ್ಪರ ತಾಳೆ ನೋಡಿ ಈವರೆಗೆ ಜನನುಡಿಯಲ್ಲಿ ಬಳಕೆಗೆ ಇರುವ ಮಾಹಿತಿ ಮೇಲೆ ಇಲ್ಲಿ ಚರಿತ್ರೆಯನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ಶಿರಗುಪ್ಪಿ ದೇಸಗತಿಯನ್ನು ಸಂಪಾದಿಸಿದವನು ಕ್ಷತ್ರೀಯ ಜನಾಂಗದವನಾದ ವೀರಬಸಪ್ಪ ನಾಯಕ ಮಹ್ಮದ ಆದಿಲ್‌ಶಾಹಿII ಇವನ ಕಾಲದಲ್ಲಿ ಇಲ್ಲಿನ ಮುಸ್ಲಿಂ ಖಾನ್ ರಿಗೆ ವಹಿಸಿದ್ದರಿಂದ ಬರುಬರುತ್ತ ಇಲ್ಲಿನ ಒಬ್ಬ ಧರ್ಮವಂತ ನೀತಿವಂತ ವ್ಯಕ್ತಿಗೆ ಖಾಜಿ ಪಟ್ಟಕೊಟ್ಟಿದ್ದರಿಂದ ಧೀರನಾದ ನ್ಯಾಯ ಸಮ್ಮತ ವ್ಯಕ್ತಿಯಾದ ಇವನಿಗೆ ದೇಸಗತಿ ಬಂದಂತೆ ತೋರುತ್ತದೆ. ಮೂಲಪುರುಷನು ಒಳ್ಳೆಯ ಬೇಟೆಗಾರನೂ ಆಗಿದ್ದನು. ತನ್ನದೇ ಆದ ಒಂದು ಪಡೆಯನ್ನು ಹೊಂದಿ ಈ ಭಾಗದ ಕ್ರೂರ ಕರ್ವಿಯರಾದ ಕೆಲವು ಬೇಡರನ್ನು ಸೋಲಿಸಿದ್ದರಿಂದ ಮಹ್ಮದ ಅಲಿ ಆದಿಲ್‌ಶಾಹಿಯಿಂದ ಇನಾಂ ಸಿಕ್ಕಿದ್ದು ತಿಳಿದುಬರುತ್ತದೆ. ಕುಂದರಗಿ ಪರಗಣ ಕೆಲವು ಹಳ್ಳಿಗಳನ್ನು ಇವರಿಗೆ ಕೊಟ್ಟಿದ್ದು ತಿಳಿದುಬರುತ್ತದೆ. ಈ ಕುರಿತಾದ ಯಾವುದೇ ಸ್ಪಷ್ಟ ದಾಖಲೆಗಳಿಲ್ಲ. ಆದರೂ ಉತ್ತಮ ಆಡಳಿತ ಹೊರೆ ಹೊತ್ತಿದ್ದರಿಂದ ಶಿಖೆದ ಮನೆತನವೆಂದು ಗರ್ತಿಸುವುದರೊಂದಿಗೆ ಬೆಳೆದು ಬಂದಿರುತ್ತದೆ.

ಈ ಮನೆತನದಲ್ಲಿ ಬುದ್ದಿನಾಯಕ ದೇಸಾಯಿ, ರೇವಪ್ಪ ದೇಸಾಯಿ, ಚೌಡಿನಾಯಕ ದೇಸಾಯಿ, ನಂಜಪ್ಪದೇಸಾಯಿ ಮಾರುತು ನಾಯಕ ದೇಸಾಯಿ ಕಂಡುಬರುತ್ತಾರೆ. ಎಲ್ಲರೂ ಪರಾಕ್ರಮಿಗಳಾಗಿ ಆಳಿಕೆ ಮಾಡಿದ್ದಾರೆ. ಇವರು ಮುಧೋಳ ಘೋರ್ಪಡೆ ಸರಕಾರ ಅಧೀನತೆಯಲ್ಲಿಯೇ ಅವರ ಸಾಮಂತರಾಗಿದ್ದರು ಈ ಮನೆತನ ಜಂಗಮಪ್ಪ ದೇಸಾಯಿ ಆದರ್ಶವಾದಿಯಾಗಿದ್ದು ದೊಡ್ಡಸ್ಥಿಗೆ ಹೇಳಿ ಮಾಡಿಸಿದ

ವ್ಯಕ್ತಿಯಾಗಿದ್ದನು. ಮುಧೋಳ ಘೋರ್ಪಡೆ ಸರಕಾರವು ಜಂಗಪ್ಪನ ಮಧ್ಯಸ್ಥಿಕೆಯಲ್ಲಿ ನ್ಯಾಯ ನಿವಾಡಿಗಳನ್ನು ಒಪ್ಪಂದಗಳನ್ನು ಬಗೆಹರಿಸುತ್ತಿದ್ದರು. ಮುಧೋಳ ಸಂಸ್ಥಾನದಲ್ಲಿ ಎಡ ಸಲಹೇಗಾರರಾದ ಜಂಗಮಪ್ಪ ದೇಸಾಯಿ ವಿಶ್ವಾಸಿಕ ವ್ಯಕ್ತಿಯಾಗಿ ಕಂಡುಬರುತ್ತಾರೆ. ಹೀಗೆ ಶಿರಗುಪ್ಪಿ ದೇಸಾಯಿಗಳು ಚಿಕ್ಕ ಒಡೆತನ ಹೊಂದಿದ್ದರೂ ಬಹುದೊಡ್ಡ ಜವಾಬ್ದಾರಿಯುತ ಕೆಲಸ ನಿರ್ವಹಿಸುತ್ತಿದ್ದರೆಂದು ತಿಳಿದುಬರುತ್ತದೆ.

೨.೫.೫. ಮನಹಳ್ಳಿ-ದೇಸಗತಿ

ಮನಹಳ್ಳಿ ಬಾಗಲಕೋಟೆ ತಾಲೂಕಿನ ಕಡೆಯದಾದ ಒಂದು ಚಿಕ್ಕ ಗ್ರಾಮ. ಪ್ರಸ್ತುತ ಐವತ್ತು ಅರವತ್ತು ಮನೆಗಳನ್ನು ಹೊಂದಿದೆ. ಈ ಗ್ರಾಮದ ನಾಯಕರೇ ಮನಹಳ್ಳಿ ದೇಸಾಯಿಗಳು. ಈ ಕುರಿತು ಇತಿಹಾಸ ಬರೆಯಲು ಕೆಲವು ಆಕರಗಳ ಕೊರತೆ ಇದೆ. ಸದ್ಯಕ್ಕೆ ಸಿಕ್ಕ ದಾಖಲೆಗಳನ್ನು ಬಳಸಿಕೊಂಡು ಈ ಮನೆತನದ ಕುರಿತು ಚರಿತ್ರೆಯನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ಮನಹಳ್ಳಿ ದೇಸಾಯಿಗಳು ಗಾಣಿಗ ಮತಸ್ಥರು. ಮನಹಳ್ಳಿ ಇವರ ಕೆಲವು ಗ್ರಾಮಗಳಲ್ಲಿ ಒಂದು ಚಿಕ್ಕ ಭಾಗವಾಗಿತ್ತು ಮೂಲತಃ ಇವರ ಇನಾಂ ಗ್ರಾಮ 'ಮಲ್ಲ' ಆಗಿತ್ತು. ಅಂದರೆ ಈಗಿನ ಮುಲ್ಲಾಪೂರ. (೨೦೦೩-೦೪ರಲ್ಲಿ ಮುಳುಗಡೆಯಾಗಿ ಪುನರ್ವಸತಿ ಕೇಂದ್ರದಲ್ಲಿ ಸ್ಥಳಾಂತರಗೊಂಡಿದೆ) ಈ ಗ್ರಾಮದ ನಾಯಕ ಮೂಲಪುರುಷನೇ 'ಶಿವಲಿಂಗ ಸರ್ಜ' ದೇಸಾಯಿ ಮೂಲ ಹೆಸರು ಶಿವಲಿಂಗಪ್ಪ ಎಂಬುದಾಗಿತ್ತು. ಇವರ ಬೆಡಗ ಹೊನ್ನ ಅವಗಡ ಸರ್ಜನ ಇದೆ. ಹೀಗಾಗಿ ಶಿವಲಿಂಗಪ್ಪನಿಗೆ ಶಿವಲಿಂಗ ಸರ್ಜ ಎಂದು ಹೆಸರು ಬಂದಿರಬೇಕೆನಿಸುತ್ತದೆ. ಫಸಲಿ ಸನ್ ೮೦೯ರಲ್ಲಿ ಗೌಡಕಿ ಪಡೆದುಕೊಂಡಿದ್ದಾಗಿರುತ್ತದೆ. ಅಂದರೆ ಇಸ್ವಿಸನ್ ೧೫೦೯ ಆಗಿದೆ. ಕ್ರಿ.ಶ.೧೪೨೨ರಲ್ಲಿ ಈ ಮಲ್ಲಗ್ರಾಮ ಪೋಟ ಇನಾಮ ನಡೆಯುತ್ತಿತ್ತು. ಆಗಲೇ ಇವರು ವಹಿಸಿಕೊಂಡು ಊರ ಗೌಡಕಿ ಸರನಾಡಗೌಡಕಿ ಪಡೆದುದಾಗಿದ್ದು ವಿಧಿತವಾಗುತ್ತದೆ.

ಈ ಗ್ರಾಮದಲ್ಲಿ ಕ್ಷತ್ರೀಯ ದೇಸಾಯಿ ಮನೆತನದವರೂ ವಾಸವಾಗಿದ್ದಾರೆ. ಅವರಿಗೂ ಕೂಡ ದೇಸಾಯಿಗಳೆಂದೆ ಕರೆಯುತ್ತಾರೆ. ಇವರು ಸಮೀಪದ ಆಲಮಟ್ಟಿಪರಗಣದ ವತನದಾರ ಗಣಿ ದೇಸಾಯಿಗಳ ಕುಲ ಸಂಬಂಧಿಕರಗಾಗಿರುವುದರಿಂದ ಅವರೂ ಕೂಡ ಈ ದೇಸಗತಿ ಬಲಗೈ ಬಂಟರಾಗಿ ದುಡಿದ ಬಗ್ಗೆ ಸ್ಥಳೀಕರ ಹೇಳಿಕೆ ಇದೆ. ವೀರಪ್ಪ, ಹಣಮಪ್ಪ ದೊಡ್ಡ ವೀರಪ್ಪ, ಎಂಬುವರೇ ಈ ದೇಸಗತಿ ಮನೆತನದಲ್ಲಿ ಕಾಣಿಸಿಕೊಳ್ಳುತ್ತಾರೆ.

ಬ್ರಿಟೀಷರ ಆಡಳಿತದಲ್ಲಿ ಈ ಮನೆತನದ ಮೇಲೆ ದರೋಬಸ್ತ ಹಕ್ಕು ವತನ ನಡೆದುದರಿಂದ ಇನಾಮದಾರ ಪಟ್ಟಣಶೆಟ್ಟಿ ವತನ ಕಡಿಮೆ ಮಾಡಿದ್ದು ತಿಳಿದುಬರುತ್ತದೆ. ಬ್ರಿಟೀಷರ ಜೊತೆಗೆ ವಾದಿಸಿದಾಗ ದೇಸಾಯಿಗೆ ಜಬರದಸ್ತ ಮಾಡಿ ಎಳೆದೊಯ್ಯುತ್ತಾರೆ. ದೇಸಾಯಿ ಅವರ ಪೈಕಿ ಒಬ್ಬನನ್ನು ಕೊಲೆ ಮಾಡುತ್ತಾನೆ."[೪೭] ಅಂದಿನಿಂದ ಇಡೀ ವತನ ಖಾಲಸಾತ ಆಗುತ್ತದೆ.

ಇನಾಮ ಊರ ಮತ್ತು ಇನಾಮ ಊರ ಪರಗಣೆ ಬಾಗಲಕೋಟೆಯ ನಾಡಪಟ್ಟಣಶೆಟ್ಟಿ ಕೆಲಸಮಾಡು ವಾಗಲೇ ಏಳು ಊರಗಳ ದೊರೆತನ ಬಂದಿರುತ್ತದೆ. ಬ್ರಿಟೀಷ್ ಮಹಾರಾಣಿಯ ವಿಕೇಂದ್ರಿಕರಣ ನೀತಿಯಿಂದ ಈ ದೇಸಗತಿಯ ಕೆಲವು ಗ್ರಾಮಗಳು ಮುತಾಲಿಕ ದೇಸಾಯಿಗಳಿಗೆ ಹೋಗುತ್ತವೆ. ಈ ಮನೆತನದವರು ಬಾಗಲಕೋಟೆಯಲ್ಲಿ ಕುಲಕರ್ಣಿ (ಮುತಾಲೀಕ) ಎಂದು ಕರೆಸಿಕೊಳ್ಳುತ್ತಾರೆ. ಇವರಲ್ಲಿ ಕೂಡ ಬ್ರಿಟೀಷ ಮಹಾರಾಣಿ ಸನದು ಇರುತ್ತದೆ.

ಕ್ರಿ.ಶ.೧೭೫೬ರಲ್ಲಿ ಈ ಮನೆತನವನ್ನು ದರೊಬಸ್ತ ವತನ ಜಪ್ತ ಮಾಡಿ ಕ್ರಿ.ಶ.೧೭೬೪ರಲ್ಲಿ ಕೃಷ್ಣಾಜಿ ವಿಶ್ವನಾಥ ಮಾಮಲೇದಾರ ರಾಸ್ತೆ ಇವರು ಸದರಿ ವತನದಲ್ಲೆ ಪೂಟಗಿ ಪೂರ್ತೆ ವತನಕೊಟ್ಟು ಸರಕಾರಿ ಚೌಕರಿ ಮಾಫ ಮಾಡಿದ್ದಾರೆ. ಅಲ್ಲಿಂದಲೇ ಈ ದೇಸಗತಿ ಮನೆತನವು ಪೋಟಗಿ ಬಾಬತ ವತನವನ್ನು ಊಟ ಮಾಡುತ್ತಿದ್ದಾರೆ.

೧೧೬೫ನೇ ಫಸಲಿ ಅಂದರೆ ಇಸ್ವಿಸನ್ ೧೭೭೫ಕ್ಕೆ ಬಾದಶಹಾನೂ ನವಾಬ ಇವರ ಅಮಲಿನಿಂದ ನಡೆತಾ ಇತ್ತು. ಆಗ ಆನಂದರಾವ ಬಿಕ್ಕಾಜಿ ರಾಸ್ತೆ ಮತ್ತು ಮಾಮಲೆದಾರ ಕೃಷ್ಣಾಜಿ. ವಿಶ್ವನಾಥ ಇವರಿಗೆ ವಿರಪ್ಪ ಪಟ್ಟಣ ಶೆಟ್ಟಿಯವರಿಗೆ ಮಾತಿನ ಚಕಮುಖಿ ನಡೆದುದರಿಂದ ಊರ ಬಿಟ್ಟು ಹೋದರು. ೧೧೭೪ರ ಫಸಲಿವರೆಗೆ ಅಂದರೆ ಒಂಬತ್ತು ವರ್ಷಗಳೂ ಒಟ್ಟು ಜಪ್ತ ಮಾಡಿ ಸರಕಾರಕ್ಕೆ ದುಡ್ಡು ಪರಭಾರೆ ವಸೂಲ ಮಾಡಿದರು. ನಂತರ ವೀರಪ್ಪ ನಾಯಕನಿಗೆ ಕರೆಯಿಸಿ ಕೆಲವು ನಿಯಮ ರೂಪಿಸಿ ವತನ ಮೌಜೆ ಮನಿಹಳ್ಳಿ ಇನಾಮ ಊರ. ಬಾಗಲಕೋಟೆ, ಮಲ್ಲಪೂರ, ಹೊಸೂರ, ಊರಗಳಲ್ಲಿ ಜಮೀನ ಕೊಟ್ಟು ಜೂಡಿ ಠರಾವು ಮಾಡಿ, ಹಾಗೇ ಪೊಟಗಿ ಮೊಕಳಿಕೆ ಮಾಡಿ ಕೊಟ್ಟಿದ್ದಾಗಿರುತ್ತದೆ.

ಈ ಎಲ್ಲ ಮಾಹಿತಿಯು ಕೃಷ್ಣಾಜಿ ಮಾಮಲೇದಾರ ಬರೆದ ಕೌಲಪತ್ರದ ನಕಲಿನಲ್ಲಿ ಇರುತ್ತದೆ.

ದೇಸಗತಿ ಚಾಮರಾತ ಹಳ್ಳಿಗಳು

೧. ಬಾಗಲಕೋಟೆ ಕೆಲವು ಭಾಗ ೨. ಮಲ್ಲಾಪೂರ ೩. ರಾಂಪೂರ ೪. ಬನ್ನಾಲದಿನ್ನ ೫. ಮನಹಳ್ಳಿ ೬. ಹೊಸೂರ ಬ್ರಿಟೀಷರಿಂದ ವಿಭಾಗೀಕರಣಗೊಂಡಿದೆ.

೧. ಬಾಗಲಕೋಟೆ, ಮಲ್ಲಾಪೂರ, ರಾಂಪೂರ ಗ್ರಾಮಗಳು ಮುತಾಲೀಕ ದೇಸಾಯರಿಗೆ ಸೇರಿದವು. ಹಾಗೂ ಆ ಊರಿನ ಗೌಡಕಿ ಕೂಡ ಮುತಾಲೀಕರಿಗೆ ಸೇರಿದ್ದು ತಿಳಿದು ಬರುತ್ತದೆ.

೨.೫.೬. ಕಂದಗಲ್ಲ ದೇಸಗತಿ

ಮೂಲತಃ ಕಂದಗಲ್ಲ ಈಗಿನ ಹುನಗುಂದ ತಾಲೂಕಿನ ಕೊನೆಯ ಹದ್ದಾಗಿದ್ದು ರಾಯಚೂರ ಜಿಲ್ಲೆಯ ಕುಷ್ಟಗಿ ತಾಲೂಕಿನ ಗಡಿಅಂಚಿನಲ್ಲಿದೆ. ಈ ಗಡಿನಾಡಭಾಗವು ಮೊಗಲಾಯಿ ಆಗಿರುತ್ತದೆ. ಪೇಶ್ವೆಗಳ

ಆಳ್ವಿಕೆಯವರೆಗೆ ಹೈದ್ರಾಬಾದ ನಿಜಾಮರ ಆಳ್ವಿಕೆ ಒಳಪಟ್ಟಂತೆ ಕಂಡುಬರುತ್ತದೆ. ಈ ಭಾಗದಲ್ಲಿ ನಾಡಗೌಡ ಮನೆತನವಿದ್ದು ಸ್ಥಳೀಯ ಆಡಳಿತದ ಉಸ್ತುವಾರಿ ವಹಿಸಿದ್ದುದನ್ನು ಕಾಣಬಹುದಾಗಿದೆ.

ಈ ದೇಸಗತಿಯವರು ಮೂಲತಃ ಲಿಂಗಸೂರ ದೇಸಾಯರು, ನಿಜಾಮರು ಆಡಳಿತದಲ್ಲಿ ಕಂದಗಲ್ಲು ಸೀಮೆಯನ್ನು ಹೊಂದಿರುವುದರಿಂದ, ಈ ಸೀಮೆಯ ಹೆಣ್ಣಾಸ್ತಿಗೆ ಬಂದು ನಿಂತದ್ದು ಕಂಡುಬರುತ್ತದೆ. ಈಗಲೂ ಈ ನಾಡಗೌಡರಿಗೆ ಲಿಂಗಸೂರ ದೇಸಾಯರೆಂದು ಕರೆಯುವರು. ಅಲ್ಲದೆ ಗುಂತಕೋಳ ದೇಸಾಯರೆಂದು ಕರೆಯುವುದು ಕಂಡುಬರುತ್ತದೆ.

ಹೆಳವರ ವಂಶಾವಳಿಯ ಮೇಲಿಂದ ತಿಳಿದುಬರುವುದೆನೆಂದರೆ ಮೂಲ ಪುರುಷ ಸಿಂಗಾರಡ್ಡಿ ದೇಸಾಯಿ, ಯೆಂಕಾರೆಡ್ಡಿದೇಸಾಯಿ, ಇವರು ನೃಪರಾಜ ಜೋಳರಾಯನ ದಂಡಿನ ಕೂಡ ಮೂರು ತಿಂಗಳ ಲಡಾಯಿ ಮಾಡಿ ಈ ಲಡಾಯಿಯಲ್ಲಿ ೧೬ (ಹದಿನಾರು) ಜನರನ್ನು ಕೊಂದು ಗುಂತಕೋಳಕ್ಕೆ ಬಂದರು ಅಂದರೆ ಈಗಿನ ಲಿಂಗಸೂರ ತಾಲೂಕಿಗೆ ಬಂದರು. ಅಲ್ಲಿ ಗೌಡಕಿ ಗಳಿಸಿ ದೌಲತ ಆಳಿದರು. ಅಮಲದಾರಕೆ ಮಾಡಿ ಬಾಹುಬಲದಿಂದ (ದರ್ಪದಿಂದ) ಆಳ್ವಿಕೆ ಮಾಡಿದರು. ಅವರ ಹೆಣ್ಣು ಮಗಳು ಕಂದಗಲ್ಲ ನಾಡಿನಲ್ಲಿದ್ದು ಅಮಲದಾರಕೆ ಗಳಿಸಿದ್ದಳು. ಅವರ ಬಾಹುಬಂದರಾದ ಯೆಂಕಾರೆಡ್ಡಿ ದೇಸಾಯಿ ಮತ್ತು ಬಾಪುಸಾಬ ಆಗ ಮೊಗಲಾಯಿ ಕಾಲದಲ್ಲಿ ಲಡಾಯಿ ಮಾಡಿ ಸರ್ವಮಾನ್ಯ ಜಮೀನ ಪಡೆದು ಗೌಡಕಿ ಆಳಿದರು. ಗುಂತಗೋಳದಿಂದ ಹುನಗುಂದ ಸೀಮೆಗೆ ಅಂದರೆ ಈಗಿನ ಕಂದಗಲ್ಲ ಗ್ರಾಮಕ್ಕೆ ಬಂದು ಗೌಡಕಿ ಪಡೆದರು ಅಲ್ಲಿಂದ ನಾಡಗೌಡರೆಂದು ಆಳ್ವಿಕೆ ನಡೆಸಿದ್ದು ಕಂಡುಬರುತ್ತದೆ.

ಈ ಮನೆತನದ ಮೂಲ ಪುರುಷರು ದಾಂಡಿಗರಾಗಿ ಬಾಹುಬಲವುಳ್ಳವರಾಗಿದ್ದರು. ದರೋಡೆ ಲೂಟಿಗಳು ಸಾಮಾನ್ಯವಾಗಿದ್ದರೂ ಅವುಗಳನ್ನು ಎದುರಿಸಿ, ಜನರ ಯೋಗಕ್ಷೇಮ ಅನುಕಂಪ ಕುರಿತು ಇವರ ಧೋರಣೆಯಾಗಿದ್ದವು. ಈ ದೇಸಗತಿ ಗಳಿಸುವ ಪೂರ್ವದಲ್ಲಿ ದೇಸಾಯಿ ಸ್ಥಾನ ಅಲಂಕರಿಸಿದ ಈ ಮನೆತನವು ನೃಪರಾಜ ಚೋಳನ ಜೊತೆಗೆ ಸಾರ್ವಜನಿಕರ ಪರವಾಗಿ ಕಂದಾಯ, ಲೂಟಿ, ದರೋಡೆ ವಿರುದ್ಧ ತಲೆ ಎತ್ತಿದು ಕಂಡುಬರುತ್ತದೆ. ಸಿಂಗಾರಡ್ಡಿಯು (ಸಂಗಾರಡ್ಡಿ) ಮಾನವತೆಯ ಕುರುಹು ಆಗಿದದ್ದು ಕಂಡುಬರುತ್ತದೆ ಮುದಗಲ್ಲ ಸೀಮೆಯು ವಿಜಯನಗರದ ಅರಸರ ಹದ್ದಾಗಿದ್ದರೂ ಕೆಲವು ವೇಳೆ ವಿರೋಧ ಕಟ್ಟಿಕೊಂಡು ಲಡಾಯಿ ಮಾಡಿದರು ಕೆಲವು ಬಾಹುಬಂದರು ಬಲಿಯಾದದ್ದು ಇರುತ್ತದೆ. ಈ ಬಗ್ಗೆ ಲಿಂಗಸೂರಲ್ಲಿ ಹೇಳುತ್ತಿರುವುದು ಕೇಳಿಬರುತ್ತದೆ. ಹೈದ್ರಾಬಾದ ನಿಜಾಮರ ವಿಶ್ವಾಸಿಕರಾಗಿ ಬಾಳಿದರು. ಹುನಗುಂದ ಸೀಮೆಯನ್ನು ಬಾದಶಾನು ತನ್ನ ಸ್ವಾಧೀನಕ್ಕೆ ಪಡೆದುಕೊಂಡ ಮೇಲೆ ಗುಂತಕೋಳದ ದೇಸಾಯಿಗೆ ಅನೇಕ ಗ್ರಾಮಗಳನ್ನು ಉಂಬಳಿ ನೀಡಿ ಇನಾಂ ಹಾಕಿ ಗೌಡಕಿ ವತನ ನೀಡಿದ್ದು ತಿಳಿದುಬರುತ್ತದೆ.

ಈ ದೇಸಗತಿ ಗಳಿಸಿದವರೆ ೫ನೇ ತಲೆಮಾರಿನ ಮಾನಾಸಾಬ, ದೇಸಾಯಿ ಪೂರ್ವಜರಿಗೆ ಈ ಮೊದಲು ಜಾಹಾಗೀರ ಅಂತ ಇದ್ದು ಮಾನಾಸಾಹೇಬರು ಅಲಿ ಅದಿಲ್ ಶಾಹಾನಿಂದ ಗೌಡಗೌಡಕಿ ಪಡೆದುಕೊಂಡಿದ್ದು ತಿಳಿದುಬರುತ್ತದೆ.

ದೇಸಗತಿ ಚಾವರಾತ ಗ್ರಾಮಗಳು

೧. ಕಂದಗಲ್ಲ ೨. ಗೋನಾಳ ೩. ಸೋಮಲಾಪೂರ ೪. ಮೆಂಟಿಗೇರಿ ೫. ಕೃಷ್ಣಾಪೂರ

೨.೫.೭. ಕೋಟೆಕಲ್ಲ ದೇಸಗತಿ

ಬಾದಾಮಿ ತಾಲೂಕಿನ ಈಗಿನ ಕೋಟೆಕಲ್ಲ ಗ್ರಾಮವು ಅತಿ ಚಿಕ್ಕ ಗ್ರಾಮ. ಇದನ್ನು ಗುಳೇದಗುಡ್ಡ ಕೋಟೆಕಲ್ಲ ಎಂದೇ ಕರೆಯುತ್ತಾರೆ. ಈ ಕುರಿತು ದೇಸಗತಿ ಬಗ್ಗೆ ಅಧ್ಯಯಿಸಲು ಆಧಾರಗಳ ಕೊರತೆ ಇದೆ. ಮೂಲತಃ ದೇಸಗತಿ ಮುದ್ದೇಬಿಹಾಳ ತಾಲೂಕಿನ ವಡವಡಗಿ ಆಗಿದ್ದು ಹೆಣ್ಣಾಸ್ತಿಗೆ ಬಂದು ದೇಸಗತಿ ನಡೆಸಿದ್ದಾರೆ. ವಡವಡಗಿ ಸಮತ್ ಪರಗಣ ಪರ್ವತಿ ಎಂದು ದಾಖಲೆಗಳಲ್ಲಿ ಉಲ್ಲೇಖಿಸಿದೆ. ಮೂಲ ದೇಸಗತಿಯ ಶಾಖೆಯು ವಡವಡಗಿ ಗ್ರಾಮದಲ್ಲಿದ್ದು ಪರಗಣ ನಿಡಗುಂದಿ ಇರುತ್ತದೆ.

ಈ ದೇಸಗತಿಯು 'ಅಣುಗ ಜೀವಿತ'ದದ್ದಾಗಿದೆ. ಮಗಳಿಗೆ ಪ್ರೀತಿಯ ಕೊಡುಗೆಯಾಗಿ ನೀಡಿದ್ದರಿಂದ ಅದನ್ನು ಉಪಭೋಗ ಮಾಡುತ್ತ ಬಂದಿದ್ದಾರೆ. ಮುಂದೆ ಆದಿಲ್‌ಶಾಹಿಗಳಿಗೆ ವಿಧೇಯಕರಾಗಿ ಆಳಿಕೆ ಮಾಡಿ ಉಪ ಪರಗಣವೆಂದು ಅದಿಲ್‌ಶಾಹಿಯಿಂದ ಸನದು ಪಡೆದು ಪ್ರತ್ಯೇಕ ಆಡಳಿತ ನಡೆಸಿದ್ದು ಕಂಡುಬರುತ್ತದೆ.

ಸಮ್ಮತ್ ಪರ್ವತಿ ಪರಗಣೆ ನಿಡಗುಂದಿ ಯೀ ವತನದ ಸಂಪಾದನೆ ಮಾಡಿದವನು ಗೋಸಲ ಭೈರಿ ದೇಸಮುಖನು. ದೇಸಾಯಿ ಹೆಸರು ತಿಳಿದುಬರುವುದಿಲ್ಲ. ವಂಶಾವಳಿ ಪ್ರಕಾರ ಯಲಗುರದಪ್ಪ, ಬುಜಂಗಪ್ಪ, ಪಾದಪ್ಪ, ಸೋಮಪ್ಪ, ಚನಸಂಗಪ್ಪ, ಗೋಪಾಲಪ್ಪ, ಗುರುಸೋಮಪ್ಪ, ಅಪ್ಪಾ ಗೋಪಾಲಪ್ಪ ಹೀಗೆ ಹಿರಿಯರ ಹೆಸರನ್ನೆ ಇಟ್ಟುಕೊಂಡವರು ಕಾಣಸಿಗುತ್ತಾರೆ. (ಇವರ ಮುಂದಿನ ವಂಶಾವಳಿಯನ್ನು ಅನುಬಂಧದಲ್ಲಿ ಕೊಡಲಾಗಿದೆ) ಆಸ್ತಿ ವಿಭಜನೆಯ ಸ್ವರೂಪದಲ್ಲಿ ಮೂಲ ದೇಸಗತ್ ಗ್ರಾಮಗಳು ಸೋದರರಲ್ಲಿ ಹಂಚಿಕೊಳ್ಳಲ್ಪಟ್ಟು ಕ್ರಮೇಣ ಅವರು ಆಯಾಯ ಪ್ರದೇಶದಲ್ಲಿ ನಿಂತು ದೇಸಾಯಿಗಳಾದಂತೆ ತೋರುತ್ತದೆ. ಈಗಲೂ ಕೂಡ ಕೋಟೆಕಲ್ಲ ದೇಸಾಯಿ ಮನೆತನಗಳು ವಡವಡಗಿ ದೇಸಗತದ ಮೂಲದವು ಎಂದು ಗ್ರಾಮಸ್ಥರೇ ಹೇಳುತ್ತಾರೆ.

ಈಗಲೂ ಕೂಡ ವಡವಡಗಿ, ನಿಡಗುಂದಿ ಸಂಬಂಧ ಇಟ್ಟುಕೊಂಡು ಅಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಕೆಲವು ಬಾಬುಗಳನ್ನು ಪಡೆಯುತ್ತಿದ್ದ ಬಗ್ಗೆ ಅವರ ವಂಶಸ್ಥರಿಂದ ತಿಳಿದುಬರುತ್ತದೆ.

ಈಗಿನ ಕೋಟೆಕಲ್ಲಗ್ರಾಮವು ಮೂರು ಕಡೆಗೆ ಸ್ಥಳಾಂತರಗೊಂಡು ಪ್ರಸ್ತುತ ಬೆಟ್ಟದ ಕೆಳಗಡೆಗೆ ಸ್ಥಿರವಾಗಿರುವುದು. ಮೂಲ ದೇಸಗತಿ ಹೆಸರು 'ಕಲ್ಲಿ' ಎಂದಿದೆ. ಇದು ಜಾಲಿಹಾಳ ದೇಸಾಯಿಯ ಒಂದು ಭಾಗವಾಗಿತ್ತು. ಅವರ ಬಾಹುಬಂದರಾದ ಹಾಲಿಗೇರಿ ದೇಸಗತಿಯ ವಡೇತನದಲ್ಲಿತ್ತು. ನಿಡಗುಂದಿ ದೇಸಾಯಿ ಈ ಭಾಗದ ಕಡೆಗೆ ಅಂದರೆ ಮಹಾಕೂಟ ಬೆಟ್ಟಕ್ಕೆ ಬೇಟೆಗೆ ಬಂದಿದ್ದನು. ಅಂದು ಕಾರಹುಣ್ಣಿಮೆಯಾಗಿತ್ತು. ಆ ದಿನ ಹಾಲಿಗೇರಿ ದೇಸಾಯರ ಮಗಳು ಮಹಾಕೂಟೇಶನ ದರ್ಶನಕ್ಕೆ ಮೇಣೆಯಲ್ಲಿ ನಡೆದಿದ್ದಳು. ಬೇಟೆಗಾರರು ಬಂದಿದ್ದನ್ನು ನೋಡಿ ಅವರನ್ನು ವಿಚಾರಿಸಲು ಸೇವಕರಿಗೆ ಸಲಹೆ ಮಾಡಿದಳು. ಕೇಳಿ ತಿಳಿದ ಅವಳು ಆ ದೊರೆಯನ್ನು ಬೇಟಿ ಮಾಡಲು ಹೇಳಿ, ಈ ಸೈನಿಕರಿಗೆ ಉಪಹಾರ ಕೂಟ ಏರ್ಪಡಿಸಿದಳು. ಇಂಥ ಉಪಚಾರ ಸ್ವೀಕರಿಸಿದ ದೇಸಾಯಿ ಅವಳ ಪ್ರೀತಿ ಪ್ರೀತ್ಯಾದರಗಳಿಗೆ ಮಾರು ಹೋಗಿ ಅವಳಲ್ಲಿ ಮೋಹಿತನಾಗಿ ವಡವಡಗಿಗೆ ಕರೆದುಕೊಂಡು ಹೋದನು. ಮೇಣೆಯು ಖಾಲಿಯಾಗಿ ಅರಮನೆಗೆ ಹಿಂತಿರುಗಿತು..... ಮನಸೋತ ಅವಳು ವಡವಡಗಿ ದೇಸಾಯಿಯನ್ನು ಮದುವೆಯಾದಳು ಮಗಳಿಗೆ ಏಳು ಗ್ರಾಮಗಳನ್ನು ಉಡುಗೊರೆಯಾಗಿ ನೀಡಿದರು. ವಿಜಾಪುರದ ಬಾದಶಾಯಿಯು ಫಸಲಿಸನ್ ೯೦೩ನೇ ವರ್ಷದಲ್ಲಿ ಜಹಾಗೀರ ಸನದು ಮಾಡಿಕೊಟ್ಟನು.

ಮುಂದೆ ಕಾಳವ್ವ ಕೊಂ ಬುಜಂಗರಾವ ದೇಸಮುಖ ಅವರಿಗೆ ೧೫ನೇ ತಲಿಯ ಮನುಷ್ಯ ವತನ ಸಿಕ್ಕಿದ್ದು ಪೇಸವಾಯಿ ಅಮಲಿನೊಳಗೆ ಫಸಲಿ ೧೧೬೪ ಅಂದರೆ ಇಸ್ವಿಸನ್ ೧೭೭೪ರಲ್ಲಿ ಶ್ರೀಮಂತ ರಾಸ್ತೆ ಸಾಹೇಬರು ಜಪ್ತ ಮಾಡಿ ಫಸಲಿ ೧೧೭೧ಕ್ಕೆ ಮೊಕಳಿಕೆ ಮಾಡಿ ಗೋಪಾಳ ಭುಜಂಗ ಗೋಸಲ ಭೈರಿಯವರಿಗೆ ಬಿಕ್ಕಾಜಿ ಇವರ ಪರವಾಗಿ ಕೃಷ್ಣಾಜಿ ವಿಶ್ವನಾಥ ಇವರು ಜುಲೈ ೨೦ ಮಾಹೆ ಇಸ್ವಿಸನ್ "೧೭೮೧ರಲ್ಲಿ ಸನದು"[೪೮] ಕೊಟ್ಟದ್ದು ಇದೆ. ಮುಂದೆ ಬ್ರಿಟೀಷ್ ಸರಕಾರದ ಅಮಲ ಆಗಿದ್ದರಿಂದ ಅವರಿಗೆ ದಾಖಲೆಗಳನ್ನು ತೋರಿಸದೇ ಇದರ ಕಾರಣ ಆಗಲೂ ಕೂಡ ಜಪ್ತ ಆಗಿ ಇಸ್ವಿಸನ್ ೧೮೬೫ಕ್ಕೆ ಹುಕುಂ ಬಂದುದರಿಂದ ಮುಂದೆ ಜಹಾಗೀರ ನಡೆಯುವುದು ತಿಳಿದುಬರುತ್ತದೆ.

ಹೀಗೆ ಇಡೀ ಸಂಸ್ಥಾನದ ಮಾಹಿತಿ ಸಿಗದೇ ಇದ್ದರೂ ಅವಶ್ಯಕ ಕೆಲವು ಅಂಶಗಳನ್ನು ಇಲ್ಲಿ ಗುರ್ತಿಸಿಕೊಂಡು ನಿರೂಪಿಸಿಕೊಂಡಿದೆ.

ದೇಸಗತಿ ಚಾವರಾತ ಗ್ರಾಮಗಳು

ವಡವಡಗಿ ದೇಸಗತಿಯ ಹೊರಗಡೆ ಇರುವ ಗ್ರಾಮಗಳೇ 'ಸಮತ್' ಎನಿಸುತ್ತವೆ. ಆದ್ದರಿಂದ ನಿಡಗುಂದಿ ಪರಗಣೆ ಎಂದು ಹೇಳುವುದರೊಂದಿಗೆ ಸಮತ್ ಪರ್ವತಿ ಎಂದು ಅವರ ಮುದ್ರೆಗಳಲ್ಲಿ ಕಂಡುಬರುತ್ತದೆ. (ಇದಕ್ಕೆ ಸಂಬಂಧಿಸಿದ ಮೋಹರನ ಭಾವಚಿತ್ರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ) ಕಲ್ಲಿಗ್ರಾಮಕ್ಕೆ ಒಬ್ಬರು ವಲಸೆ ಬಂದು ನಿಡಗುಂದಿ ಪರಗಣದ ಜೊತೆಗೆ ಸೇರಿಸಿ ದೇಸಗತಿ ಆಳಿದ್ದು ಕಂಡುಬರುತ್ತದೆ.

ಚಾವರಾತ ಹಳ್ಳಿಗಳು

೧. ಕಸಬಾ ಪರ್ವತಿ ೨. ಮೌಜೆ, ಕಾನಾಪೂರ ೩. ಮೌಜೆ ಹರದೊಳ್ಳಿ ೪. ಮುರಡಿ ೫. ಹಾನಾಪೂರ ೬. ತೊಗುಣಸಿ ೭. ಲಾಯದ ಗುಂದಿ ೮. ಕೊಟ್ನಳ್ಳಿ ೯. ಆಸಂಗಿ, ೧೦. ಅಲ್ಲೂರ ೧೧. ಪರಕಟ್ಟಿ (ಈಗಿನ ಪಾದನಕಟ್ಟಿ) ೧೨. ಇಂಜಿನವಾರಿ ೧೩. ಬೂದಿನಗಡ ೧೪. ತಿಮ್ಮಸಾಗರ ೧೫. ಹುಲ್ಲಿಕೇರಿ

೨.೫.೮. ಗಿರಿಸಾಗರ ದೇಸಗತಿ

ಗಿರಿಸಾಗರವು ಬೀಳಗಿ ತಾಲೂಕಿನಲ್ಲಿ ೧೫ ಕಿ.ಮೀ ದೂರದಲ್ಲಿರುವ ಚಿಕ್ಕ ಗ್ರಾಮವಾಗಿದೆ. ಈ ಗ್ರಾಮವನ್ನೆ ಕ್ಷೇತ್ರವನ್ನಾಗಿಸಿಕೊಂಡು ಆಳಿಕೆ ಮಾಡಿದ್ದರಿಂದ ಗಿರಿಸಾಗರ ದೇಸಗತಿ ಎಂದು ಕಂಡುಬರುತ್ತದೆ. ಈ ಮನೆತನದ ಕುರಿತು ಸಾಕಷ್ಟು ಆಕರಗಳ ಕೊರತೆ ಇದೆ. ಮೂಲಗ್ರಾಮದಿಂದ ಸ್ಥಳಾಂತರಗೊಂಡು ಬೇರೆ ಬೇರೆ ಭಾಗದಲ್ಲಿದ್ದಾರೆ. ಅಲ್ಲಿರುವ ದಾಖಲೆಗಳೆಲ್ಲವನ್ನು ಬಾಗಲಕೋಟಿಯ ''ಮುಖ್ತ್ಯಾರ ಬಡಿಗೇರರ ಮನೆಯಲ್ಲಿ ಇಟ್ಟು ಅಲ್ಲಿಯೇ ಕೊನೆಯುಸಿರೆಳೆದುದರಿಂದ ಸಿಗಬೇಕಾದ ದಾಖಲೆಗಳು ಮತ್ತೊಬ್ಬರ ಅಧೀನವಾಗಿ ಹಾಳಾಗಿವೆಯೆನ್ನುತ್ತಾರೆ.''[೪೯] ಅಲ್ಲಿರುವ ಗೌಡರು ದೇಸಾಯಿಗೆ ಇಲ್ಲಸಲ್ಲದ ಆರೋಪ ಮಾಡಿ, ಜಮೀನನ್ನು ತಮ್ಮ ವಶ ಮಾಡಿಕೊಂಡು ನ್ಯಾಯಾಲಯಕ್ಕೆ ಹೋದುದರಿಂದಲೂ ಆಕರಗಳು ದೊರಕುವುದಿಲ್ಲ. ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು ದೊರೆತ ಆಕರಗಳ ಮುಖಾಂತರ ಐತಿಹ್ಯಗಳ ಮುಖಾಂತರ ಅವರ ವಂಶಸ್ತರ ಹೇಳಿಕೆ ಮುಖಾಂತರ ಅವರ ಇತಿಹಾಸವನ್ನು ಇಲ್ಲಿ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ಈ ದೇಸಗತಿಯ ಮನೆತನದಲ್ಲಿ ಸಿದ್ಧಪಡಿಸಿಲಾದ ವಂಶಾವಳಿಯೊಂದು ಲಭ್ಯವಿದೆ. ಈ ವಂಶಾವಳಿಯನ್ನು ಅವಲೋಕಿಸಿದಾಗ ಪ್ರಾಚೀನವಾಗಿದ್ದರೂ ಇಲ್ಲಿಯ ಗಿರಿಸಾಗರ ದೇಸಾಯರ ಮನೆತನ ಅಷ್ಟೊಂದು ಪ್ರಾಚೀನವಾಗಿದ್ದಂತೆ ಕಂಡುಬರುವುದಿಲ್ಲ. ಈ ಮನೆತನದ ಮೂಲ ಪುರುಷ ದಂಡಪ್ಪದೇಸಾಯಿ. ಇವನಿಗಿಂತ ಹಿಂದಿನವರ ಮಾಹಿತಿ ಅಷ್ಟೊಂದು ಸಿಗುತ್ತಿಲ್ಲ. ಇವರ ವಂಶಾವಳಿ ಪ್ರಕಾರ ಶಕೆ ೧೧೨೬ನೇ ರಾಕ್ಷಸನಾಮ ಸಂವತ್ಸರ ಪ್ರಕಾರ ಇವರು ಕ್ಷತ್ರೀಯ ಮನೆತನಕ್ಕೆ ಸಂಬಂಧಿಸಿದ್ದು ಇದೆ. ಇವರೂ ಕೂಡ ''ಆನೆಗುಂದಿ ನರಪತಿಯಿಂದ ಉಂಬಳಿ ಪಡೆದು ಈ ಭಾಗದಲ್ಲಿ ದೇಸಗತಿ ಕಟ್ಟಿದ್ದರ ಕುರಿತು ಹೇಳುತ್ತಾರೆ''[೫೦] ಈ ಮನೆತನದ ಒಂದು ತಲೆಯು ಈಗಿನ ಕೊಲ್ಹಾರದಲ್ಲಿ ಉಳಿದು ಅಲ್ಲಿ ಆಳಿಕೆ ಮಾಡುತ್ತಿದ್ದನು ಅವನೇ ಭೋಜರಾಜ ನಾಯಕ. ಅವನಿಗೆ ಬೋಧಪ್ಪನಾಯಕನೆಂತಲೂ ಕರೆಯುತ್ತಿದ್ದರು.

ಈ ಮನೆತನದಲ್ಲಿ ತಿಮ್ಮಪ್ಪ, ರಾಘಪ್ಪ, ತಿಮ್ಮಪ್ಪ, ಭೀಮರಾವ, ಬಾಯವ್ವ ದೇಸಾಯಿ ಎಂದು ಕಾಣಸಿಗುತ್ತಾರೆ. ಕೊಲ್ಹಾರ ದೇಸಗತಿ : ಬೋದಪ್ಪ ದೇಸಾಯಿಯಿಂದಲೇ ಅಂತ್ಯಗೊಳ್ಳುತ್ತದೆ.

ಕೊಲ್ಹಾರ ದೇಸಗತಿ(ಭೋದಪ್ಪ ನಾಯಕ ಅಂದರೆ ಬೋಜನಾಯಕ ದೇಸಾಯಿ)

- ಶಂಕ್ರಪ್ಪ ದೇಸಾಯಿ
  - ಜಂಬಗಿ ವೆಂಕಟರಾಯ ದೇಸಾಯಿ
    - ತಿಮ್ಮಸಾಬ
      - ದತ್ತಕ ಭೀಮರಾವ್
        - ಜಯಸಿಂಗರಾವ ದೇಸಾಯಿ
          ರಾಘುಪ್ಪದೇಸಾಯಿ
          - ದಂಢಪ್ಪ ದೇಸಾಯಿ
            - ಅಪ್ಪರಾವ್
              - ರಾಘುಪ್ಪ ಬಿದರಿ
                - ಮುಂದೆ ಬೆಳೆಯುತ್ತದೆ
            - ಶಿವಪುತ್ರರಾವ
              - ಅಪ್ಪರಾವ
                - ಮುಂದೆ ಬೆಳೆಯುತ್ತದೆ
              - ಶೇಷಗಿರಿರಾವ
                ಇವನಿಂದಲೇ ಗಿರಿಸಾಗರದ ದೇಸಗತಿ ಬೆಳೆಯುತ್ತ ಹೋಗುತ್ತದೆ.
- ಲಕ್ಷ್ಮಣ ದೇಸಾಯಿ

ಗಿರಿಸಾಗರ ದೇಸಗತಿ ಮೂಲವನ್ನು ತಿಳಿಯುವುದು ಅವಶ್ಯವೆನಿಸುತ್ತದೆ. ಆದರೆ ಅವರ ವಂಶಾವಳಿಯಲ್ಲಿ ಹಲವಾರು ದೇಸಾಯಿಗಳಿದ್ದರೂ ಕಾಲವಧಿ ನಿರ್ದೇಶಕಗಳೇನೂ ಇಲ್ಲ. ಕೊಲ್ಹಾರ ದೇಸಗತಿಗೆ ಜಂಬಗಿ ದೇಸಗತಿಗೆ ಬಿದರಿ ದೇಸಗತಿ ಹೋದರೆಂದು ಮಾತ್ರ ಉಲ್ಲೇಖಿಸಿದ್ದು ಇದೆ. ಉಳಿದ ಬಡ್ಡಿ ನೇರವಾಗಿ ಗಿರಿಸಾಗರ ದೇಸಗತಿ ಉಳಿದುದು ತಿಳಿಯುತ್ತದೆ. ಈ ಎಲ್ಲ ಬಡ್ಡಿಯು ಆಯಾ ಭಾಗವಲ್ಲಿ ದೇಸಾಯಿಗಳೆಂದೇ ಕರೆಸಿಕೊಳ್ಳುತ್ತಾರೆ.

ಈ ದೇಸಗತಿ ಮನೆತನದ ಪೂರ್ವಿಸ್ಥಳ ಅಂಕಲಕೋಟ ಇದು ಸೋಲಾಪೂರದ ಹತ್ತಿರವಿದೆ. ಅಲ್ಲಿ ದೇಸಗತಿ ಗಳಿಸಿ ವ್ಯಾಜ್ಯಮಾಡಿ ವಲಕಂದಿನ್ನಿಗೆ ಬಂದು ಲಡಾಯಿ ಮಾಡಿ(ಜಮಖಂಡಿ) ಬಿದರಿ ದೇಸಗತಿ ಗಳಿಸಿದರು. ಜಂಬಗಿ, ಗಿರಿಸಾಗರ, ಕಣಬೂರ, ಕೊಲ್ಹಾರ ಮರಾಚಿಕ್ಕಲಕಿ ದೇಸಗತಿ ಗಳಿಸಿದರು. ಒಂದೊಂದು ಭಾಗದ ಕಡೆಗೆ ಒಬ್ಬರು ನಿಂತು ಆಳಿಕೆ ಮಾಡಿದರು. ದೇಸಗತಿ ಕಟ್ಟಿ ಬೆಳೆಸಿದರು.

ಕೃಷ್ಣನದಿಯ ದಂಡೆಯ ಮೇಲೆ ದೊಅಬ್ ಪ್ರದೇಶವನ್ನು ವಶಪಡಿಸಿಕೊಂಡು ಗಿರಿಸಾಗರ, ಕೊಲ್ಹಾರ ದೇಸಗತಿಗಳಿಸಿದ್ದು ವಿಶೇಷವಾಗಿದೆ. ಕೊಲ್ಹಾರದ ಬೋಜರಾಜ ನಾಯಕನು ವಿಜಯನಗರದ ಅರಸರಿಗೆ

ಮಾನಪಾನ ನೀಡದಿದ್ದಕ್ಕಾಗಿ ಅವನನ್ನು ಹಿಡಿದು ತರಲು ವಿಜಯನಗರ ಸೈನ್ಯ ಈ ಭಾಗಕ್ಕೆ ಆಗಮಿಸುತ್ತವೆ. ಆಗಲೇ ಅವನು ತಲೆತಪ್ಪಿಸಿಕೊಂಡು ಹೋಗುತ್ತಾನೆ. ಆಗ ದೇಸಗತಿ ವಿಜಯನಗರದ ಅಧೀನದಲ್ಲಿ ಬರುತ್ತದೆ. ಮುಂದೆ ಗಾಣಿಗ ವಂಶಸ್ಥನಾದ ಅಣ್ಣೆಂದ್ರನು ಬೋಜನಾಯಕನೇ ಇವನೆಂದು ತಿಳಿದು ಅವನನ್ನೇ ಕೊಂದು ಬಿಡುತ್ತಾರೆ. ಆಗ ಕೊಲ್ಹಾರ ದೇಸಗತಿ ಮತ್ತೊಬ್ಬರಿಗೆ ವಶವಾಗುತ್ತದೆ.

ಗಿರಿಸಾಗರ ದೇಸಾಯಿ ಮನೆತನದಲ್ಲಿ ಬಾಯವ್ವರು ಎಂಬ ಸ್ತ್ರೀ ಇದ್ದು ಅವಳು ಅದಿಲ್ ಶಾಹಿ ಸೈನ್ಯಕ್ಕೆ ಬೇಸಿಗೆ ಕಾಲದಲ್ಲಿ ನೀರುಹಣಿಸಿದ್ದರಿಂದ ಹೆಚ್ಚಿನ ವತನವನ್ನು ನಾಡಗೌಡಕಿ ಸರನಾಡಗೌಡಕಿಯನ್ನು ಕೊಟ್ಟರು. ಈ ಕುರಿತು ಯಾವುದೇ ಆಧಾರಗಳಿಲ್ಲ. ಅದಿಲ್ ಶಾಹಿ ಸರದಾರನಾದ ಅಂಕುಶಖಾನನಿಗೆ ರಾಯಚೂರ ಕಡೆಗೆ ಯುದ್ಧಕ್ಕೆ ಹೊರಟಾಗ ಬಿದರಿ ದೇಸಗತಿ ಹತ್ತಿರ ಇಳಿದಿದ್ದರಿಂದ ತನ್ನ ಎಲ್ಲ ಬಾಹುಬಂದರನ್ನು ಕೂಡಿಸಿಕೊಂಡು ಸಹಾಯ ಸಲ್ಲಿಸಿದರು. ಆರತಿ ಎತ್ತಿ ಹರಿಸಿದರು. ಅದರಂಗವಾಗಿ ಕೃಷ್ಣಾನದಿಯ ಕಡೆಗೆ ಹೆಚ್ಚಿನ ಜಹಗೀರನ್ನು ನೀಡಿದ್ದು ಅವರ ವಂಶಸ್ಥರಿಂದ ತಿಳಿದುಬರುತ್ತದೆ. ಬೀಳಗಿ ಬ.ಬಾಗೇವಾಡಿ, ಬಾಗಲಕೋಟೆ ಬಿಜಾಪೂರ ಭಾಗಗಳಲ್ಲಿ ದೇಸಗತಿ ಬೆಳೆದುಬರುತ್ತದೆ.

ಪೇಶ್ವೆಗಳ ಕಾಲದಲ್ಲಿ ಮರಾಠರ ವಂಶದವನಾದ ಬಳೂತಿ ಬಾವಾ ಹಾಗೂ ಬಾಲಪ್ಪ ದೇಸಾಯಿಗೂ ಮೂರು ಸಲ ವ್ಯಾಜ್ಯ ನಡೆಯಿತು. ಬಾಲಪ್ಪನು ಬಳೂತಿ ಬಾವಾನ ಉಪಟಳಕ್ಕೆ ಬೇಸತ್ತಿದ್ದನು. ನೂರಾರು ಜನರೊಡನೆ ಹೋರಾಟ ಮಾಡಿದನು. ಅಲ್ಲಿ ರಕ್ತದ ಓಕಳಿಯೇ ನಡೆಯಿತು. ಆ ಪ್ರದೇಶಕ್ಕೆ ಈಗಲೂ 'ರಕ್ತಮನಿ' ಎಂದು ಹೆಸರಿದೆ. ೨ನೇ ಸಲ ಬಾಲಪ್ಪನೇ ತುಪಾಕಿ ಹಾರಿಸಿದ್ದರಿಂದ ಖಾಲಸಾತ ಆಯಿತು. ಬಾಲಪ್ಪ ಎಂಬುವನು ನೀತಿವಂತನೂ ಶೂರನೂ ಸಜ್ಜನರ ಸಂಗದಲ್ಲಿ ಬೆರೆತಿರುವವನಾಗಿದ್ದನು. ಅದರಿಂದ ಮತ್ತೆ ದೇಸಗತಿ ವೃದ್ಧಿಸುತ್ತ ಬಂದಿತ್ತು.

ಚಾವರಾತ ಗ್ರಾಮಗಳು ೧೪.

೧. ಮಟ್ಯಾಳೆ ೨. ಹಣಮಾಪೂರ ೩. ಸಿದ್ದನಾಥ ೪. ಹಳೆರೊಳ್ಳಿ ೫. ಸುಳಕೊಡ ೬. ತೆಲಗಿ ೭. ಚಿರಲದಿನ್ನಿ ೮. ತಡಲಗಿ ೯. ಬಾಗಾನಗರ ೧೦. ಬಳೂತಿ ೧೧. ಚಿಕ್ಕಆಸಂಗಿ ೧೨. ಹಿರೇ ಆಸಂಗಿ ೧೩. ಕುರಬರದಿನ್ನಿ ೧೪. ದಿನ್ನಿ

ಮೂರಹಳ್ಳಿ ಗೌಡಕಿ : ಬೀರಕಬ್ಬಿ, ಬಾಗಾನಗರ ಗಿರಿಸಾಗರ ಇನಾಂ ಗ್ರಾಮಗಳು

ಉಳಿದಿದ್ದು ಚಾಮರಾತ ಗ್ರಾಮಗಳು

೭ ಹಳ್ಳಿ ಕುಲಕರ್ಣಿಗಳು

ಬೀಳಗಿ ತಾಲೂಕಿನ ೧೪ ಹಳ್ಳಿಗಳು

೧. ಗಿರಿಸಾಗರ ೨. ಮುತ್ತಲದಿನ್ನ ೩. ಹದಿರಾಳ ೪. ಕೊಪ್ಪ ೫. ಬೀರಕಬ್ಬಿ ೬. ಚಿಕ್ಕಸಂಗಮ ೭. ಮನಗೂರ ೮. ಗೊಡ್ಯಾಳ ೯. ಚಿನಿವಾಲಕೊಪ್ಪ ೧೦. ಹೆಗ್ಗೂರ ೧೧. ಗುಂಡನಪಲ್ಲೆ ೧೨. ಸಿಂಗಾಪೂರ ೧೩. ಕಮದಾಳ ೧೪. ಹಳೆರೊಳ್ಳಿ

ಕೋಲ್ಹಾರ ದೇಸಗತಿಗೆ ಅದರ ಸುತ್ತಮುತ್ತಲಿನ ನಾಲ್ಕು ಗ್ರಾಮಗಳನ್ನು ನಂದಾದೀಪ ಸಲುವಾಗಿ ಉಂಬಳಿ ನೀಡಿದ್ದನ್ನು ಹೇಳುತ್ತಾರೆ. ಈ ಕುರಿತು ಯಾವುದೇ ದಾಖಲೆಗಳಿಲ್ಲ. ''ಡಾ. ಅಬ್ದುಲಗಣಿ ಇಮಾರತ ವಾಲೆಯವಾರು ಬಿಜಾಪೂರ ಸುಭಾದಲ್ಲಿ ಕೊಲ್ಹಾರ ದೇಸಗತಿಗೆ ನಾಲ್ಕು ಗ್ರಾಮಗಳಿದ್ದ ಬಗ್ಗೆ ಹೇಳುತ್ತಾರೆ.'' ಗಿರಿಸಾಗರ ದೇಸಗತಿಯವರ ೪ ಗ್ರಾಮ ಸೇರಿಸಿದರೆ ಒಟ್ಟು ೮ ಗ್ರಾಮಗಳು ಅದಕ್ಕೆ ಇದ್ದಬಗ್ಗೆ ತಿಳಿದುಬರುತ್ತದೆ.

೨.೫.೯. ಲೋಕಾಪೂರ ದೇಸಗತಿ

ಬಾಗಲಕೋಟೆ ಜಿಲ್ಲೆಯ ಪಶ್ಚಿಮಕ್ಕೆ ಮೂವತ್ತು ಕಿ.ಮೀ ದೂರದಲ್ಲಿರುವ ಗ್ರಾಮ ಇದಾಗಿದೆ. ಇದನ್ನು ಪ್ರಸ್ತುತ ಲೋಕಾಪೂರವೆಂದೇ ಕರೆಯುವುದು ರೂಢಿಗತವಾಗಿದೆ. ಲೋಕಾಪುರವು ಚಾಲುಕ್ಯರ ಅಗ್ರಹಾರವಾಗಿದ್ದು, ಲೋಕಟೆಯಿಂದ ಈ ಊರ ನಿರ್ಮಾಣವಾಯಿತೆಂದು ಈಗಾಗಲೇ ವಿದ್ವಾಂಸರು ಗುರ್ತಿಸಿದ್ದಾರೆ. ಕ್ರಿ.ಶ.೧೪ನೇ ಶತಮಾನದಲ್ಲಿ ಆನೆಗುಂದಿಯಲ್ಲಿ ಆಳುತಿದ್ದ ಅರಸು ಮನೆತನ ಗಡಿ ಕೂಡ ಕೃಷ್ಣನದಿಯವರೆಗೆ ಇತ್ತೆಂದು ಅದರಲ್ಲಿ ಲೋಕಾಪೂರ ಗ್ರಾಮವು ಒಳಗೊಂಡಿತೆಂದು ಹೇಳಬಹುದು.

ಲೋಕಾಪೂರ ದೇಸಗತಿಯ ಇತಿಹಾಸವನ್ನು ಸಾದ್ಯಂತವಾಗಿ ನಿರೂಪಿಸುವಲ್ಲಿರುವ ಅಡೆತಡೆಗಳಲ್ಲಿ ಮುಖ್ಯವಾದದ್ದೂ ನಂಬಲರ್ಹವಾದ ಪ್ರಾಥಮಿಕ ಆಕರಗಳ ಕೊರತೆಯಿದೆ. ಘೋರ್ಪಡೆ ಅರಸರಿಗೂ ಲೋಕಾಪೂರ ದೇಸಗತಿಯವರಿಗೂ ವ್ಯಾಜ್ಯ ನಡೆದುದರಿಂದ ಸಾಕಷ್ಟು ಕಾಗದ ಪತ್ರಗಳನ್ನು ವಶಪಡಿಸಿಕೊಂಡು ನಾಶಮಾಡಿದ್ದುದರಿಂದ ಸ್ತ್ರೀ ಆಡಳಿತ ನಡೆದು ಕೋರ್ಟ ಕಛೇರಿಗೆ ನಡೆದಾಡಿ, ೧೫ ವರ್ಷಗಳ ಸಂಸ್ಥಾನದ ಪರಿಳಿತಗಳಿಂದ ಸಂಪೂರ್ಣ ದಾಖಲೆಗಳು ಕೋರ್ಟಿನಲ್ಲಿವೆ ಎನ್ನುತ್ತಾರೆ. ಯಾವುದೇ ಲಿಖಿತ ದಾಖಲೆಗಳು ಇಲ್ಲ. ಹೀಗಾಗಿ ದೇಸಗತಿಯ ಇತಿಹಾಸದ ಬೇರೆ ಬೇರೆ ಆಯಾಮಗಳನ್ನು ವಿವರವಾಗಿ ಅರ್ಥಮಾಡಿಕೊಳ್ಳುವ ಸಾಧ್ಯತೆ ಇಂದು ಇಲ್ಲವಾಗಿದೆ. ಆದರೂ ಕೆಲವು ಹಳೇ ದಾಖಲೆ ಪತ್ರಗಳನ್ನು ಪರಿಶೀಲಿಸಿದಾಗ ಕೋರ್ಟಗೆ ಸಂಬಂಧಿಸಿದ ಒಂದು ದಾಖಲೆಕಟ್ಟು ಸಿಕ್ಕಿದ್ದರಿಂದ ಅದರ ಮುಖೇನ ಇಲ್ಲಿ ದೇಸಗತಿಯ ಇತಿಹಾಸವನ್ನು ಕಟ್ಟಲು ಪ್ರಯತ್ನಿಸಲಾಗಿದೆ.

ಲೋಕಾಪೂರ ದೇಸಗತಿಯು ಕ್ಷತ್ರೀಯ ಮನೆತನವಾಗಿದ್ದು ಮೂಲತಃ ಆನೆಗುಂದಿ ಅರಸೊತ್ತಿಯಲ್ಲಿ ಸೈನಿಕ ವ್ಯವಸ್ಥೆಯ ಪ್ರಮುಖ ರಾಯಭಾರಿಯಾಗಿ ಇದ್ದರು. ಈ ಭಾಗದ ರಕ್ಷಣೆಗೆ ರಾಯಭಾರಿಯಾದ ಇವರಿಗೆ ಲೋಕಾಪೂರ ಗ್ರಾಮವನ್ನು ಜಹಗೀರ ಹಾಕಿಕೊಟ್ಟಿದ್ದಾರೆ. ಇವು ಸರ್ವಮಾನ್ಯ ಇನಾಂ ಎಂದೇ

ದೊರೆತುದರಿಂದ ಎಲ್ಲ ಹಳ್ಳಿಗಳ ಮುಕ್ತ ಒಡೆತನ ಇವರದಾಗಿತ್ತೆಂದು ಹಿರಿಯರಾದ ನಾನಾಸಾಹೇಬ ದೇಸಾಯಿಯವರು ಹೇಳುತ್ತಾರೆ. "ಆನೆಗುಂದಿ ಅರಸೊತ್ತಿಗೆಯ ಅರಸನಾದ ನರಪತಿಯಿಂದಲೇ ಇನಾಂ ದೊರೆತದ್ದು" ಎಂದು ತಿಳಿದುಬರುತ್ತದೆ.

ಆದಿಲ್‌ಶಾಹಿಗಳು ಮುಧೋಳವನ್ನು ಘೋರ್ಪಡೆ ಅರಸನಿಗೆ ಜಾಗೀರ ಕೊಟ್ಟರು ಅವರ ಅಧೀನತೆಯಲ್ಲಿ ಚಿಕ್ಕಪುಟ್ಟ ಸಂಸ್ಥಾನೀಕರನ್ನು ಒಳಗೊಂಡು ಆಡಳಿತ ನಡೆಸಲು ಸೂಚಿಸಿದ್ದು ತಿಳಿದು ಬರುತ್ತದೆ. ಇವರ ಮುಖಾಂತರವಾಗಿ ಲೋಕಾಪೂರ ದೇಸಾಯಿಗಳು ಆಡಳಿತ ನಡೆಸಿದರು.

ಲೋಕಾಪುರ ದೇಸಗತಿಯು ಯರಗಟ್ಟಿ, ಸಿಂಧಿ ಕುರಬೆಟ್ಟ ಕೌಜಲಗಿ ಇನ್ನಿತರ ಕಡೆಗೆ ಸಂಬಂಧ ಹೊಂದಿವೆ. ಕೌಜಲಗಿ ದೇಸಗತಿ ಹಾಗು ಲೋಕಾಪೂರ ದೇಸಗತಿ ಎರಡು ಕೂಡಿಕೊಂಡು ಒಂದಕ್ಕೊಂದು ಸಹಕಾರ ಪಡೆದು ಆಡಳಿತ ನಡೆಸಿವೆ. ಕೌಜಲಗಿ ಬೆಳಗಾವಿ ಜಿಲ್ಲೆಯಲ್ಲಿ ಬಹುದೊಡ್ಡ ದೇಸಗತಿಯಾಗಿದ್ದರಿಂದ ಅವರ ಸಹಾಯದಿಂದಲೇ ಇದು ಆಡಳಿತ ನಡೆಸುತ್ತಿತ್ತೆಂದು ಅವರ ವಂಶಸ್ಥರಿಂದ ತಿಳಿದುಬರುತ್ತದೆ. ದೇಸಗತಿಗೆ ಒಟ್ಟು ೨೩೧/೨ ಗ್ರಾಮಗಳು ಮಾತ್ರ ಇರುತ್ತವೆ.

೨.೫.೧೦. ಪಟ್ಟದಕಲ್ಲ ದೇಸಗತಿ

ಮೂಲದೇಸಗತಿಯು 'ಅಕ್ಕರಗಲ್ಲ' ಎಂದು ತಿಳಿದುಬರುತ್ತದೆ. ಐಹೊಳೆ ಪಟ್ಟದಕಲ್ಲ, ನೀರಬೂದಿಹಾಳ ಇವು ಮೂರು ಒಂದೇ ಬಡ್ಡಿಯವರೇ ಇರುವರು. ಅಕ್ಕರಗಲ್ಲ ಗ್ರಾಮವು ಕೂಡ ಐಹೊಳೆ ಸಮೀಪದಲ್ಲಿದ್ದು ಲಾಯದಗುಂದಿ, ನಾಗರಾಳದ ಸಮೀಪ ಬೆಟ್ಟದ ಮೇಲಿದೆ. ಸದ್ಯ ಅಕ್ಕರಗಲ್ಲ ಬೇಜರಾಕ ಆಗಿದೆ. ಅಂದರೆ ಬೆಳಕು ಇರದ ಪ್ರದೇಶವಾಗಿದೆ. ಇಲ್ಲಿಯ ಜನರು ಸದ್ಯದ ನಾಗರಾಳ ಗ್ರಾಮದಲ್ಲಿ ಹೊಂದಿಕೊಂಡು ಇರುವುದರಿಂದ ಅಕ್ಕರಗಲ್ಲ ಓಣಿಯೆಂದೇ ಪ್ರಸ್ತುತ ಪ್ರಚಲಿತದಲ್ಲಿದೆ. ಇದರ ಪರಗಣದ ಹೆಸರೇ ಪಟ್ಟದಕಲ್ಲು. ಅಕ್ಕರಗಲ್ಲ ಗ್ರಾಮದಲ್ಲೂ ಕೋಟೆ, ವಾಡೇ ಜನವಸತಿ ಮನೆಗಳ ಕುರುಹಗಳಿವೆ. ಹಾಗೇ ಪಟ್ಟದಕಲ್ಲಿನಲ್ಲೂ ಕೂಡ ನದಿದಂಡೆಯ ಮೇಲೆ ವಾಡೇ, ಹಾಗೂ ಹುಡೆಗಳಿವೆ. ವಾಡೇದಲ್ಲಿ ಅಣ್ಣ ತಮ್ಮಂದಿರರು ಭಾಗಮಾಡಿಕೊಂಡು ಮೂಲ ಸ್ವರೂಪ ಇಲ್ಲದಂತೆ ಮಾಡಿದ್ದಾರೆ.

ಅಕ್ಕರಗಲ್ಲ ದೇಸಗತಿ ಏಳು ಗ್ರಾಮಗಳ ಪರಗಣವಾಗಿದ್ದು ಅತೀ ಚಿಕ್ಕ ದೇಸಗತಿಯೆನಿಸಿದೆ. ಇದರ ಮೂಲ ಪುರುಷನ ಹೆಸರು ಗೋಸಲಮಾಣಿ ಎಂದಿದೆ. ಇವನಿಗೆ 'ಗೋಸಲ ಮಾಣಿ' ನಾಯಕನೆಂದೆ ಕರೆಯುವುದು. ಅವರ ದಾಖಲೆಯಲ್ಲಿ ಉಲ್ಲೇಖವಿದೆ. ಮತ್ತೊಂದು ದಾಖಲೆಯ ಪ್ರಕಾರ 'ಗೋಸಲ ಬೈರಿ' ನಾಯಕರೆಂದು ಕರೆಯುವುದು ಇದೆ. ಐಹೊಳೆ, ನೀರಬೂದಿಹಾಳ ಇವರಿಗೂ ಕೂಡ ಗೋಲ ಬೈರಿಯೆಂದು ಕರೆಯುವುದರಿಂದ ಇದು ತಾಳೆ ಹೋಗುತ್ತದೆ.

ಪಟ್ಟದಕಲ್ಲ ದೇಸಗತಿಯವರು ಕೂಡ ಕ್ಷತ್ರೀಯರಾಗಿದ್ದಾರೆ. ಇವರು ಬೇಡರ ಪಡೆಯವರ ಮುಖ್ಯಸ್ಥರಾಗಿದ್ದುಕೊಂಡೆ ಆಡಳಿತ ನಡೆಸಿದ್ದಾರೆ. ಅಕ್ಕರಗಲ್ಲದಿಂದ ವಲಸೆ ಬಂದು ಪಟ್ಟದಕಲ್ಲಿನಲ್ಲಿ ನೆಲೆಸಿದವನೇ ವೀರಪ್ಪನಾಯಕ. ಇವನು ನಾಲ್ಕನೇ ತಲೆಮಾರಿನವನು ಆಗಿದ್ದಾನೆ. ಇವನಿಂದಲೇ ಈ ಮನೆತನದ ಬೆಳವಣಿಗೆ ಕಂಡುಬರುತ್ತದೆ. "ಅದಿಲ್ ಶಾಹಿಯಿಂದ ವಿಶೇಷ ಸನದು ಪಡೆದುಕೊಂಡಿದ್ದು ಇದೆ".[೫೨] ಯುದ್ಧಗಳಿಗೆ ಕೂಡ ೨೫೦ ಸ್ವಾರಿಗಳನ್ನು ಕಳಿಸಲು ಜಾಲಿಹಾಳ ದೇಸಾಯರ ಜೊತೆಗೆ ಕೂಡಿಕೊಳ್ಳಲೂ ಉಲ್ಲೇಖಿಸಿದ್ದು ಇರುತ್ತದೆ.

ಅಕ್ಕರಗಲ್ಲ, ಮಂಗಳಗುಡ್ಡ ನಾಗರಾಳ ಹಾಗೂ ಪಟ್ಟದಕಲ್ಲುಗಳು ಮೂಲದಲ್ಲಿ ಒಂದೇ ಆಗಿದ್ದವು. ನಂತರ ಇವರ ಅಣ್ಣ ತಮ್ಮಂದಿರರು ಆಸ್ತಿಯನ್ನು ಹಂಚಿಕೊಂಡು ಬೇರೆಯಾದಾಗ ಸ್ವಾಭಾವಿಕವಾಗಿ ದೇಸಗತಿ ಒಡೆಯಿತು. ಮಂಗಳಗುಡ್ಡದಲ್ಲಿಯೇ ಈ ದೇಸಗತಿಯವರು ಇದ್ದಾರೆ. ಪಟ್ಟದಕಲ್ಲ ದೇಸಗತಿಯವರು ಸುಮಾರು ೨೦ ವರ್ಷದವರೆಗೆ ಇಲ್ಲಿಂದ ಕಾಲ್ತೆಗೆದು ಹೋಗಿದ್ದರು. ಪ್ರಸ್ತುತ ೫ ವರ್ಷಗಳ ಹಿಂದೆ ಮತ್ತೆ ನೆಲೆ ನಿಂತಿದ್ದಾರೆ. ಎಲ್ಲರೂ ಒಟ್ಟಾಗಿ ಇರುವಾಗಲೇ ಪಟ್ಟದಕಲ್ಲು ದೇಸಗತಿಯನ್ನು ಕಟ್ಟಿದರು.

ಪ್ರಸ್ತುತ ಪಟ್ಟದಕಲ್ಲ ದೇಸಗತಿಗೆ ಕುಂದರಗಿ ಸಮೀಪದ ಕೋವಳ್ಳಿ ನಾಯಕರ ಮನೆತನದಿಂದಲೇ ದತ್ತಕ ಬಂದಿದ್ದಾರೆ. ಹಾಗೇ ಬಿದರಿ ಸುನಗ, ಕಣಬೂರಕ್ಕೂ ಕೂಡ ಕೋವಳ್ಳಿ ನಾಯಕ ಮನೆತನದಿಂದಲೇ ದತ್ತಕ ಹೋಗಿದ್ದು ತಿಳಿದುಬರುತ್ತದೆ. (ಹಿಂದಿನ ವಂಶಜರ ವಂಶಾವಳಿಯನ್ನು ಅನುಬಂಧದಲ್ಲಿ ಕೊಡಲಾಗಿದೆ.)

ದೇಸಗತಿ ಚಾವರಾತ ಹಳ್ಳಿಗಳು

೧. ಚಿರಮಲಗಿ, ೨. ಪಟ್ಟದಕಲ್ಲ, ೩. ಅಕ್ಕರಗಲ್ಲ, ೪. ಸಿದ್ದನಕೊಳ್ಳ ೫. ಉಪನಾಳ, ೬. ನಾಗರಾಳ, ೭. ಮಂಗಳಗುಡ್ಡ.

೨.೫.೧೧. ಕೆರಕಲಮಟ್ಟಿ ದೇಸಗತಿ

ಈ ದೇಸಗತಿ ಕುರಿತು ಚರಿತ್ರೆ ಕಟ್ಟಲು ಕೆಲವು ಆಕರಗಳ ಕೊರತೆ ಇದೆ. ಮೂಲತಃ ದೇಸಗತಿ ಕೆರೂರ ಪರಗಣದಲ್ಲಿ ಇತ್ತು. ಇವರಿಗೆ ಕೆರೂರ ಪರಗಣ ವತನದಾರರೆಂದೆ ಕರೆಯುತ್ತಿರುವುದು ಬಳಕೆಯಲ್ಲಿತ್ತು. ಈಗಲೂ ಕೂಡ ಅರಮನೆ ಬಾಗಿಲು ಮೇಲೆ ಕೆರೂರ ಪರಗಣ ವತನದಾರ ಎಂದೇ ಕೆತ್ತಿಸಿದ್ದು ಇದೆ. ಈ ಮನೆತನದ ಮೂಲಪುರುಷನ ಬಗ್ಗೆ ತಿಳಿದುಬರುವುದಿಲ್ಲ. ಹಳವರ ಹೇಳಿಕೆ ಪ್ರಕಾರ ಇವರ ಪೂರ್ವಿಸ್ಥಳ. ಚುಜಲಕೋಟಿ ದೇಸಗತಿ ಮಾಡುತ್ತಿದ್ದರು. ಪೇಶ್ವೆಗಳ ಕಾಲದಲ್ಲಿ ೨೦೦ ಕೂರಿಗೆ ಜಮೀನ, ೨೪ ವರ್ಷದ ಪಾಳೆ ಸಲುವಾಗಿ ಲಡಾಯಿ ಮಾಡಿ ಬಿಟ್ಟುಕೊಟ್ಟು ಕೆರಕಲಮಟ್ಟಿಗೆ ಬಂದರು. ಪ್ರಸ್ತುತ ಕೆರಕಲ

ಮಟ್ಟಿ ಇದು ಆಗಿರುವುದಿಲ್ಲ. ಈಗಿನ ಕೆರಕಲಮಟ್ಟಿಯಿಂದ ಎಂಟು ಕಿಲೋ ಮೀಟರ ದೂರದಲ್ಲಿದೆ. ಅಲ್ಲಿ ಕೂಡ ಅಲ್ಲಲ್ಲಿ ಬಿದ್ದು ಅಳಿದುಳಿದ ಕುರುಹುಗಳು ಇವೆ. ಆ ಭಾಗದಲ್ಲಿ ೨ ಗ್ರಾಮಗಳ ಗೌಡಕಿ ಗಳಿಸಿದರು.

ಈ ಗ್ರಾಮದ ನಾಡಗೌಡಕಿ, ಇಲ್ಲಿನ ಹಕ್ಕುಗಳು ಮೂಲತಃ ಮುದ್ದಾಪೂರ ದೇಸಾಯರಿಗೆ ಇದ್ದವು ಅವರು ಇಲ್ಲಿಂದ ವಲಸೆ ಹೋದರು. ಪೇಶ್ವೆಗಳ ಕಾಲದಲ್ಲಿ ಇವರಿಗೆ ಹಕ್ಕು ಸಿಕ್ಕಂತೆ ಕಂಡುಬರುತ್ತದೆ. ಇವರು ಮೂರು ಜನರಿದ್ದು ಮೂವರೂ ಒಂದೊಂದು ಭಾಗದಲ್ಲಿ ಆಳ್ವಿಕೆ ಮಾಡಿದ್ದಾರೆ. ಯರಗೊಪ್ಪ, ಜಲಗೇರಿ ಹಾಗೂ ಕೆರಕಲಮಟ್ಟಿ. ಪ್ರಸ್ತುತ ಕೆರಕಲಮಟ್ಟಿಯೇ ಮೂಲ ದೇಸಗತಿಯೆಂದು ಪ್ರಚಲಿತದಲ್ಲಿದುದ್ದು ತಿಳಿದುಬರುತ್ತದೆ.

ಪೇಶ್ವೆಗಳಿಗೂ ಸವನೂರ ನವಾಬರಿಗೂ ಆಗಾಗ ಕದನ ನಡದೇ ಇತ್ತು. ಹೆಚ್ಚಿನ ಜವಾಬ್ದಾರಿತನವನ್ನು ಈ ಭಾಗದ ಅಧಿಕಾರವನ್ನು ಇವರಿಗೆ ಕೊಟ್ಟಿದ್ದರಿಂದ ಇವರಿಗೆ ದೇಸಗತಿ ಹಕ್ಕು ಸಿಕ್ಕಿತ್ತೆಂದು ಮಹೇಶ ದೇಸಾಯಿಂದ ತಿಳಿದುಬರುತ್ತದೆ. ೧೭೫೮ರಲ್ಲಿ ಪೇಶ್ವೆಗಳಿಗೂ ನವಾಬರಿಗೂ ಒಪ್ಪಂದವಾದಾಗ ಕೆರೂರ ಪರಗಣ ಸಿಕ್ಕಿದ್ದರಿಂದ ಅಲ್ಲಿಂದಲೇ ಗ್ರಾಮಗಳ ಒಡೆತನದ ಹಕ್ಕನ್ನು ಇವರು ಪಡೆದುದು ಕಂಡುಬರುತ್ತದೆ.

ಕೆರಕಲಮಟ್ಟಿ ದೇಸಗತಿಯ ಕೆಲವೇ ನಾಡಗೌಡರ ಹೆಸರುಗಳು ಸಿಗುತ್ತಿವೆ. ಇವರಲ್ಲಿ ವೆಂಕಟಪ್ಪಗೌಡ ವೆಂಕನಗೌಡ, ರಂಗನಗೌಡ ಕೃಷ್ಣಪ್ಪಗೌಡ ಎಂಬುವರಾಗಿದ್ದಾರೆ. ವೆಂಕನಗೌಡನಿಗೆ ಯರಗೊಪ್ಪ ಸಿಕ್ಕಿದ್ದರಿಂದ ಇನಾಂ ಯರಗೊಪ್ಪ ಎಂದೇ ಕರೆಯುತ್ತಾರೆ.

ಬಾದಾಮಿಯಲ್ಲಿದ್ದ ಮಾಧವರಾವ್ ಪೇಶ್ವೆಯವರ ಹತೋಟಿಯಲ್ಲೆ ಇವರು ವಾರ್ಷಿಕ ನಜರಾಣಾ ನೀಡುತ್ತಾ ಬಂದಿದ್ದಾರೆ. ಆದರೆ ವಾರ್ಷಿಕ ಬಾಬತ್ತು ಎಷ್ಟೆಂದು ತಿಳಿದುಬರುವುದಿಲ್ಲ.

ದೇಸಗತಿ ಚಾವರಾತ ಗ್ರಾಮಗಳು

ಪರಗಣ-ಕೆರೂರ, ಹುಲ್ಲೂರ

೧. ಕೆರಕಲಮಟ್ಟಿ ೨. ಜಲಗೇರಿ ೩. ಹೂಲಿಗೇರಿ, ೪. ಚಿಂಚಲಕಟ್ಟಿ ೫. ಹೊಸೂರ ೬. ತಿಮ್ಮಾಪೂರ ೭. ಇನಾಂ ಯರಗೊಪ್ಪ

'ಹೂಲಗೇರಿ' ನೀರಬೂದಿಹಾಳ ದೇಸಗತಿಗೆ ಸೇರಿದ್ದರಿಂದ ಪೇಶ್ವೆಗಳ ಕಾಲಕ್ಕೆ ಇದು ಕೆರಕಲ ಮಟ್ಟಿಗೆ ಸೇರಿದ್ದು ತಿಳಿದುಬರುತ್ತದೆ. ಹೂಲಗೇರಿ ಕೆಲವು ಭಾಗಗಳು ಮಾತ್ರ ಕೆರಕಲಮಟ್ಟಿಗೆ ಸೇರಿದ್ದ ಇರುತ್ತವೆ. ಪ್ರಸ್ತುತ ರಂಗನಗೌಡ ನಾಡಗೌಡನು ಅವನ ನಂತರದವರು ಹೊಸ ಕೆರಕಲಮಟ್ಟಿಯಲ್ಲಿದ್ದು ವಾಡೇ ಕಟ್ಟಿಕೊಂಡದ್ದು ಕಂಡುಬರುತ್ತದೆ.

೨.೫.೧೨. ಕೆಲೂರ

ನಾಡಗೌಡರ ಮೂಲ ಪುರುಷರು ಕಂಚಿ ಕಾಮಕೋಟಿಯಿಂದ ಅಲ್ಲಿಯ ಭಯೋತ್ಪಾದಕರಿಗೆ ಬೇಸತ್ತು ವಿಜಾಪೂರ ಸೀಮೆಗೆ ವಲಸೆ ಬಂದವರೆಂದು ಗೊತ್ತಾಗುತ್ತದೆ. ಹುನಗುಂದ ತಾಲೂಕಿನ ಕೆಲೂರ ಗ್ರಾಮಕ್ಕೆ ಆರಂಭದಲ್ಲಿ ತಳ ಊರಿದರು. ಯೋಗಾಯೋಗಾವೆಂಬಂತೆ ಅದೇ ಸುಮಾರಿಗೆ ಎಲ್ಲಿಂದಲೋ ಸಂಚಾರಿಯಾಗಿ ದಯಮಾಡಿಸಿದ್ದ ಒಬ್ಬ ಶರಣರು ಕೆಲೂರ ಹೊರವಲಯದ ಪ್ರಶಾಂತ ಸ್ಥಳದಲ್ಲಿ ನೆಲೆಸುತ್ತಾರೆ. ಅವರ ಹೆಸರು ಮಂಟಯ್ಯಸ್ವಾಮಿ. ಈ ಶರಣರು ಅನುಷ್ಠಾನ ಧ್ಯಾನಗಳಲ್ಲಿ ನಿರತರಾಗಿರುತ್ತಾರೆ. ಸಹಜವಾಗಿ ವಲಸೆ ಬಂದ ಕಂಚಿ ಕಾಮಕೋಟಿಯ ನಾಲ್ವರು ಸೋದರರಿಗೆ ಮಂಟಯ್ಯಸ್ವಾಮಿಗಳ ದರ್ಶನ ಲಭಿಸಿ, ಅವರಲ್ಲಿ ಪೂಜ್ಯಭಾವನೆ ಗಟ್ಟಿಗೊಳ್ಳುವುದು. ಶರಣರ ಸೇವೆಯಿಂದ ನಾಲ್ವರು ಸೋದರರಿಗೆ ಅತ್ಯಾನಂದವಾಗುವುದಲ್ಲದೆ ಇವರ ಪಾಲಿನ ಆರಾಧ್ಯದೇವರಾಗಿಯೇ ಕಾಣುತ್ತಾರೆ.

ಕೆಲೂರಿನ ಪ್ರಶಾಂತ ಸ್ಥಳದಲ್ಲಿಯೆ ಅಂದು ಭಯೋತ್ಪಾದಕರ ಹಾವಳಿಯು ವಿವಂಚನೆಗೊಳಿಸುತ್ತದೆ. ಮಂಟಯ್ಯಸ್ವಾಮಿಗಳು ನೂರಾರು ಜನ ಕ್ರೂರ ಕರ್ವಿ(ಮಾಶಾಳರು)ಗಳ ಉಪಟಳಕ್ಕೆ ನೊಂದು ಅಲ್ಲಿಂದ ಬೇರೆಡೆಗೆ ಹೊರಡುವ ಸ್ಥಿತಿಯಲ್ಲಿದ್ದಾಗ ಈ ನಾಲ್ವರು ಸದೃಡ ಕಾಯದ ಸೋದರರು ಅವರ ರಕ್ಷಣೆಗೆ ಕಂಕಣಬದ್ಧರಾಗಿ ನಿಲ್ಲುತ್ತಾರೆ. ಮಾಶಾಳರ ಜೊತೆಗೆ ಹೋರಾಟಕ್ಕಿಳಿದು ಯಶಸ್ವಿಯಾದಾಗ ಸ್ವಾಮಿಗಳ ಅನುಗ್ರಹ ಅಧಿಕವಾಗಿ ಗುರುಶಿಷ್ಯ ಸಂಬಂಧ ಗಟ್ಟಿಗೊಳ್ಳುತ್ತದೆ.

ಅಂದಿನ ಕಾಲದಲ್ಲಿ ಈ ನಾಲ್ವರು ಸೋದರರು ಮಾಶಾಳರನ್ನು ಸೋಲಿಸಿ, ಅಲ್ಲಿಂದ ಓಡಿಸಿದ ವಾರ್ತೆ ವಿಜಾಪುರದ ಅದಿಲಶಾಹನಿಗೆ ಗುಪ್ತಚಾರರಿಂದ ತಿಳಿದಾಗ ಸಂತೋಷಪಟ್ಟು ಇವರ ಶೂರತನವನ್ನು ನೋಡಲು ಇವರೆಂತಹ ಬಾಹು ಬಲವುಳ್ಳವರು ಇರುವರು ಎಂದು ತಿಳಿಯಲು ನಾಲ್ವರನ್ನು ಕರೆಯಿಸಿ ಇವರನ್ನು ಅಭಿನಂದಿಸುತ್ತ ಪೂರ್ವಾಪರ ವಿಚಾರಿಸುತ್ತಾನೆ. ಇಲ್ಲಿ ಬಿಜಾಪುರದ ಅದಿಲಶಹ ಯಾರು ಎಂಬುದು ಸ್ಪಷ್ಟ ಉಲ್ಲೇಖವಿಲ್ಲ. ಒಟ್ಟಿನಲ್ಲಿ ವಿಜಾಪುರ ಅರಸರಿಂದ ಗುರ್ತಿಸಲ್ಪಟ್ಟದ್ದು ಸತ್ಯವೆಂದು ತಿಳಿದುಬರುತ್ತದೆ.

''ದೂರದಿಂದ ವಲಸೆ ಬಂದ ಶೂರರು ನೀವು. ನಮ್ಮ ರಾಜ್ಯದಲ್ಲಿ ನೀವು ಸುಖದಿಂದ ಇರಬಹುದು. ನಿಮಗೆ ನಾಲ್ಕು ಗ್ರಾಮಗಳನ್ನು ಉಂಬಳಿಯಾಗಿ ಕೊಡಲಾಗಿದೆ. ನೀವು ಅಣ್ಣ ತಮ್ಮಂದಿರು ನಾಡಗೌಡರಾಗಿ ಎಲ್ಲರೊಂದಿಗೆ ಬೆರೆತು ಬಾಳಿರಿ ಎಂದು ಅದಿಲಶಹ ಸನ್ಮಾನಿಸಿ ಬಿಳ್ಕೊಟ್ಟನು ನಾಲ್ವರು ಸೋದರರು ತಮಗೆ ದೊರೆತ ಗ್ರಾಮಗಳ ನಾಡಗೌಡರಾಗಿ ಮತ್ತೆ ಅಧಿಕಾರ ಪಡೆದು ನೆಲೆ ನಿಂತರು.''[೫೪]

೧. ಕೆಲೂರಿಗೆ ಸಂಗನಬಸಪ್ಪ ೨. ಬೂದಿಹಾಳಕ್ಕೆ ಮಲ್ಲಪ್ಪ

೩. ಇದ್ದಲಗಿ ಗ್ರಾಮಕ್ಕೆ ನಿಂಗಪ್ಪ ೪. ಚಿತ್ತವಾಡಗಿಗೆ ಪರೂತಪ್ಪ ಹೀಗೆ ತಾವೇ ಹಂಚಿಕೊಂಡು ಆಳ್ವಿಕೆ ನಡೆಸುತ್ತಾರೆ.

ಬಿಜಾಪೂರ ಆದಿಲ್‌ಶಹ ಅರಸರಿಗಿಂತ ಮೊದಲು ಕೆಲೂರ ಮೂಲತ ವಿಜಯನಗರ ಸಾಮ್ರಾಜ್ಯ ಅಧೀನದಲ್ಲಿತ್ತು. ವಿಜಯನಗರ ಅರಸರ ಸಾಮಂತರಾದ ಇಬ್ಬರು ಸೋದರರು ಈ ಭಾಗದಲ್ಲಿ ಆಳ್ವಿಕೆ ನಡೆಸಿದರು. ಅವರೆಂದರೆ ಕೆಲೂರಿಗೆ ಪಣಿಯಪ್ಪ, ಕೊಡಗಲಿಗೆ 'ತುಕ್ಕರಸ'' ಕೊಡಗಲಿ ಗ್ರಾಮವು ಕಡುಗಲಿ ಎಂದು ಬದಲಾವಣೆಗೊಂಡು ಕೊಡಗುಲಿಯಾದಂದತೆ ತೋರುತ್ತದೆ. ''೧೫೬೫ ರಕ್ಕಸಗಿ ತಂಗಡಗಿ ಯುದ್ಧಕ್ಕೆ ಕಂಚಿಯಿಂದ 'ಕಜಗನ್ 'ನ ನೇತೃತ್ವದಲ್ಲಿ ಅನೇಕ ಸೈನಿಕರು ಯುದ್ಧಕ್ಕೆ ಬಂದಿದ್ದರು. ವಿಜಯನಗರದ ಅರಸರು ಸೋತಾಗ ಕಜಗನ್ ಕಾಲು ಕಳೆದುಕೊಂಡು ಕೃಷ್ಣ ನದಿ ದಡದಲ್ಲಿಯೇ ಉಳಿಯುತ್ತಾನೆ. ಅವನ ವಿಶ್ವಾಸಿಕ ಜನಾನ ಕೂಡ ಅಲ್ಲಲ್ಲಿ ಚದುರಿ ಹೋಗುತ್ತದೆ. ಕಜಗನ್ ಕಂಚಿಗೆ ಮರಳಿ ಹೋಗದೆ ಅಲ್ಲಿಯೇ ಉಳಿದಿದ್ದರಿಂದ ಕಜಗನ್ +ಊರು = ಕಜಗನ್ ಊರು>ಕೌಜಗನೂರ ಎಂದಾಗಿ ಬಳಕೆಯಾಗುತ್ತದೆ. ಪ್ರಸ್ತುತ ವಂಶಸ್ಥರು ಅಲ್ಲಿದ್ದಾರೆ. ಅವರಲ್ಲಿ ಇವರೂ ಒಬ್ಬರೆಂದು ತಿಳಿಮುಬರುತ್ತದೆ.''[೫೫] ಇವರ ವಂಶಾವಳಿಯಲ್ಲಿ ಕೂಡ ಕಂಚಿಕಾಮಕೋಟಿಯಿಂದ ಬಂದಿದ್ದಾರೆ ಎಂದು ಹೆಳವರ ಹೇಳಿಕೆಯಿಂದ ದೃಡಪಡುತ್ತದೆ.

ಐಹೊಳೆ, ಕೆಲೂರ ಇವು ಐಹೊಳೆ ದೇಸಾಯರ ಅಧೀನತೆಯಲ್ಲಿದ್ದವು. ಮೂಲದಲ್ಲಿ ಒಂದೇ ಆಗಿದ್ದವು. ''ಆದಿಲ್ ಶಾಯಿಗಳು. ಐಹೊಳೆ ದೇಸಾಯರಿಗೆ (ಪೂರ್ವಿಕರಿಗೆ) ಬಿರುದು ನೀಡಿ ಪಕ್ಕದ ಹಳ್ಳಿಯಾದ ಕೆಲೂರ ಪರಗಣವನ್ನು ದತ್ತಿಯಾಗಿ ಬಿಟ್ಟಿದ್ದು ಇರುತ್ತದೆ.''[೫೬] ಕೆಲೂರು ಐಹೊಳೆ ದೇಸಗತಿಯ ಒಂದು ಉತ್ಪನ್ನ ತರುವ ಭಾಗವಾಗಿತ್ತೆಂದು ತೋರುತ್ತದೆ. ನಂತರ ಐಹೊಳೆ ದೇಸಗತಿಯಿಂದ ಕೆಲೂರ, ಚಿತ್ತವಾಡಗಿ, ಇನಾಂಬೂದಿಹಾಳ ಹಾಗೂ ಇದ್ದಲಗಿ ಈ ಗ್ರಾಮಗಳ ನಾಡಗೌಡರಿಗೆ ಹಾಕಿಕೊಟ್ಟಿದ್ದಾರೆ. ಅಲ್ಲಿಂದ ನಾಡಗೌಡರ ವಡೆತನವಿದ್ದುದು ತಿಳಿದುಬರುತ್ತದೆ. ಒಬ್ಬೊಬ್ಬರು ಅಣ್ಣ ತಮ್ಮಂದಿರರು ಒಂದೊಂದು ಭಾಗದಲ್ಲಿ ನಿಂತು ಗೌಡಕಿ ಆಳ್ವಿಕೆ ಮಾಡಿದ್ದಾರೆ. ಆಯಾ ಗ್ರಾಮದಲ್ಲಿ ಪ್ರಸ್ತುತವೂ ಕೂಡ ನಾಡಗೌಡರೆಂದು ಕರೆಯುತ್ತಾರೆ. ಇದಕ್ಕೆ ನಿದರ್ಶನವೆಂಬಂತೆ ವಿಧಾನಸಭೆ ಸದಸ್ಯರಾದ ಎಂ.ಪಿ.ನಾಡಗೌಡರು ಒಬ್ಬರಾಗಿದ್ದಾರೆ.

೨.೫.೧೩. ಗಲಗಲಿ-ಯಡಹಳ್ಳಿ-ದೇಸಗತಿ

ಗಲಗಲಿ-ಯಡಹಳ್ಳಿ ದೇಸಗತಿ ಕುರಿತು ಹಿಂದಿನ ಇತಿಹಾಸವು ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಪೇಶ್ವೆಗಳ ಕಾಲದಿಂದ ಅಲ್ಪಸ್ವಲ್ಪ ಮಾಹಿತಿ ತಿಳಿದುಬರುತ್ತದೆ. ಪೇಶ್ವೆ ಬಾಳಾಜಿ ವಿಶ್ವನಾಥ ಜೀವದಾನ ನೀಡಿದ್ದರಿಂದ ಮತ್ತೆ ದೇಸಗತಿ ಹುಟ್ಟಿ ಬೆಳೆದುದಾಗಿದೆ.

ಬೀಳಗಿ ತಾಲೂಕಿನ ಕೃಷ್ಣಾನದಿಯ ದಡದಲ್ಲಿರುವ ಯಡಗಡೆಗೆ ಇರುವ ಹಳ್ಳಿಯೇ ಯಡಹಳ್ಳಿಯಾಗಿದೆ. ವತನ ಸಂಪಾದನೆ ಮಾಡಿದವರು ಸತ್ಯಪ್ಪ, ಅಣ್ಣಪ್ಪ ಕಲ್ಲಪ್ಪ ಎಂಬುವರಿಂದಲೇ ಗಾದಿ ಮಾಲಿಕತ್ವ ಮುಂದುವರಿದಂತೆ ತಿಳಿದುಬರುತ್ತದೆ. ಮಲ್ಲಪ್ಪ, ಗೌಡಪ್ಪ, ರಾಚಪ್ಪ ಎಂಬುವರು ಕ್ರಮವಾಗಿ ಆಳಿಕೆ ಮಾಡಿದ್ದಾಗಿದೆ. ರಾಚಪ್ಪ ಎಂಬುವನು ಹಂಪಿಯಲ್ಲಿ ಲಯವಾಗುತ್ತಾನೆ. ಇವನ ಹೆಂಡತಿಯಾದ ನೀಲವ್ವ ದೇಸಾಯಿಣಿ ದೇಸಗತಿ ಆಳುತ್ತಾಳೆ.

ನೀಲವ್ವನು ಚನ್ನಪ್ಪನನ್ನು ದತ್ತುಕ ಪಡೆದಳು. ಇವನ ನಂತರ ತಿಮ್ಮಪ್ಪ, ಮಲ್ಲಪ್ಪ, ದೇಸಾಯಿಗಳು ಆಳಿಕೆ ಮಾಡುತ್ತಾರೆ. ಒಂಬತ್ತನೆಯವನಾಗಿ ತಿಮ್ಮಪ್ಪ ಆಡಳಿತ ಮಾಡುತ್ತಾನೆ. ಇವನ ನಂತರ ರಾಚಪ್ಪ ಎಂಬುವನು ಗಾದಿಮಾಲಿಕತ್ವ ಪಡೆದಿದ್ದನು. ಮೂಲ ರಾಚಪ್ಪ ಎಂಬುವವನನ್ನು ಅಂದಿನ ಶ್ರೀಮಂತ ಬಾಳಾಜಿ ವಿಶ್ವನಾಥ ಪೇಶ್ವೆ ಎಂಬುವರು ಬಂಧನದಲ್ಲಿರಿಸಿದ್ದರು. ರಾಚಪ್ಪ ದೇಸಾಯಿ ಯಾವ ಕಾರಣದಿಂದ ಬಂಧನದಲ್ಲಿದ್ದನೆಂಬುದಕ್ಕೆ ಕಾರಣಗಳು ತಿಳಿದುಬರುವುದಿಲ್ಲ. ಒಂದು ದಿನ ಮುಂಜಾನೆ ರಾಚಪ್ಪನನ್ನು ಪುಣೆ ಕೇಂದ್ರ ಕಚೇರಿಯಲ್ಲಿ ಗಲ್ಲಿಗೇರಿಸಲು ಜವಾನರು ಎಳೆದೊಯ್ಯುತ್ತಿದ್ದರು. ಅಲ್ಲಿದ್ದ ವೃಷಭಲಿಂಗ ಶಿವಾಚಾರ್ಯರು ವಿಹಾರಕ್ಕಾಗಿ ಹೋಗುವಾಗ ರಾಚಪ್ಪನನ್ನು ಕಂಡು ಕಳವಳಗೊಂಡು ನಿಂತಲ್ಲೆ ನಿಂತುಬಿಟ್ಟರು. ಬಾಳಾಜಿ ವಿಶ್ವನಾಥ ಪೇಶ್ವೆಗಳು ಪೂಜ್ಯರ ಅಪ್ಪಣೆ ಪಡೆದು ಗಲ್ಲು ಶಿಕ್ಷೆ ವಿದಿಸುವ ಸಂಪ್ರದಾಯವಿತ್ತು. ಪೂಜ್ಯರಲ್ಲಿ ವಿಶ್ವನಾಥ ಪೇಶ್ವೆ ಬಂದು ಭಿನ್ನವಿಸಿಕೊಂಡಾಗ ಪೂಜ್ಯರು ವಚನ ಪಡೆದು ರಾಚಪ್ಪನನ್ನು ಗಲ್ಲಿನಿಂದ ಬಂಧ ಮುಕ್ತ ಮಾಡಲು ಹೇಳಿದರು. ಪೇಶ್ವೆಗಳೂ ಕೂಡ ಬಂಧಮುಕ್ತ ಮಾಡಿದರು. ಅಲ್ಲಿಂದಲೇ ಮತ್ತೆ ದೇಸಗತಿ ಉಚ್ಛ್ರಾಯ ಸ್ಥಿತಿಗೆ ಬಂದಿರುವುದು ತಿಳಿದು ಬರುತ್ತದೆ. ಮುಂದೆ ೧೨ನೆಯವನಾಗಿ ಬಂದ ರಾಚಪ್ಪ ದೇಸಾಯಿ ಮಧ್ಯವಯಸ್ಸಿನಲ್ಲೆ ತೀರಿಕೊಂಡರು. ಇವನ ಹೆಂಡತಿಯಾದ ದೊಡ್ಡವ್ವ ದೇಸಾಯಿಣಿ ಕೆಲವು ದಿನ ಸಂಸ್ಥಾನ ಆಳಿದಳು.

ನಂತರ ಬಂದ ಮಲ್ಲಪ್ಪ ದೇಸಾಯಿ ಆಡಳಿತದ ಸೂತ್ರವನ್ನು ಹಿಡಿದು ಸಂಸ್ಥಾನವನ್ನು ಉನ್ನತದತ್ತ ಒಯ್ಯುತ್ತಾನೆ. ಇವರಿಗೂ ಮಕ್ಕಳಾಗುವುದಿಲ್ಲ. ಆಗ ದತ್ತಕವನ್ನು ಪಡೆಯುತ್ತಾರೆ. ಯಮನವ್ವ ದೇಸಾಯಿ ಕೂಡ ಕೆಲವು ದಿನ ಆಳಿಕೆ ಮಾಡುತ್ತಾಳೆ. ಮಲ್ಲಪ್ಪ ಎಂಬುವರು ದತ್ತಕ ಬರುತ್ತಾರೆ. ಕೊನೆ ಕೊನೆಗೆ ರಾಚಪ್ಪ ದೇಸಾಯಿಗಳಿಗೆ ಗಂಡು ಸಂತಾನವಾಗುತ್ತದೆ. ಅವರೇ ಮಲ್ಲಪ್ಪ ಹಾಗೂ ಬಸವರಾಜ ಇವರೇ ಹಾಜರಿದ್ದು ಸದ್ಯ ಯಡಹಳ್ಳಿ ದೇಸಗತದ ಯಜಮಾನರಾಗಿದ್ದಾರೆ. ಆದರೆ ಗಂಡು ಸಂತಾನವಿಲ್ಲ.

ಹೆಳವರ ಒಂದು ಹೇಳಿಕೆ ಪ್ರಕಾರ ಗಲಗಲಿ ಯಡಹಳ್ಳಿ ದೇಸಗತಿ ಪೂರ್ವನೆಲೆಯನ್ನು ಈ ರೀತಿ ಗುರ್ತಿಸಬಹುದಾಗಿದೆ. ಅದೆಂದರೆ 'ಬಿದರಿ ಕೋಟಿ ದೇಸಗತಿ ಗಳಿಸಿ, ಲಡಾಯಿ ಮಾಡಿ ಅಲ್ಲಿಂದ ಬಿಟ್ಟುಕೊಟ್ಟು ಆಂಧ್ರದಲ್ಲಿರುವ ಮಾರಕಪ್ಪನ ಹಳ್ಳಿಯಲ್ಲಿಗೆ ಬಂದರು. ಈ ಪ್ರದೇಶವನ್ನು ಬಿಟ್ಟು ಚಿಕ್ಕ

ಗಲಗಲಿ ಹತ್ತಿರವಿರುವ ಹಾಳಾಗಿರುವ ಪಾಶ್ಚಾಪೂರ ಆ ಪ್ರದೇಶದ ದೇಸಗತಿ ಪಡೆದರು. ಅಲ್ಲಿಂದ ಗಲಗಲಿಗೆ ಬಂದರು.

ಅಲ್ಲಿಂದ ಸ್ಥಳಾಂತರಗೊಂಡ ಒಂದು ವಂಶ ಯಡಹಳ್ಳಿಗೆ ಬಂದಿದೆ. ''ಗಲಗಲಿ ದೇಸಗತಿಯನ್ನು ಅಲ್ಲಿಯ ಬ್ರಾಹ್ಮಣರು ಆಳುತ್ತಿದ್ದರು. ಅವರನ್ನು ಯಾವುದೋ ಕಾರಣದಿಂದ ಕೊಂದರೆಂದು ತಿಳಿದುಬರುತ್ತದೆ.''[೫೭] ೧೧ ಜನರನ್ನು ಅವರನ್ನು ಹತಾರದಿಂದ ಕಡಿದು ಅವರನ್ನು ಹೊಲದಲ್ಲಿಯೇ ಹುಗಿದಿದ್ದರಿಂದ ಆ ಪ್ರದೇಶವನ್ನು ಲಿಂಗದಳ್ಳಿ ಎಂದು ಕರೆಯುತ್ತಾರೆ. ಅಲ್ಲಿಂದಲೇ ಯಡಹಳ್ಳಿ ದೇಸಗತಿ ಕಟ್ಟಿರಬೇಕೆನಿಸುತ್ತದೆ. ಈ ಕಾರಣದಿಂದಲೇ ಪೇಶ್ವೆಗಳು ಮರಣದಂಡನೆಗೆ ಗುರಿಪಡಿಸಿರುವುದು ಆಗಿರಬೇಕೆನಿಸುತ್ತದೆ. ಆದರೆ ಸ್ಪಷ್ಟ ಮಾಹಿತಿ ಸಿಗುತ್ತಿಲ್ಲ.

ದೇಸಗತಿ ಚಾವರಾತ ಗ್ರಾಮಗಳು

ದೇಸಗತಿಯವರು ಬರೆದಿಟ್ಟ ಕೈಫಿಯತ್ತ ಪ್ರಕಾರ ೧೭ ಹಳ್ಳಿಗಳು ಇವೆ. ಇವುಗಳು ಪೂರ್ಣವಾಗಿ ಗಲಗಲಿ-ಯಡಹಳ್ಳಿ ದೇಸಗತಿಗೆ ಒಳಪಟ್ಟಿವೆ. ಅವು ಹೀಗಿವೆ.

''೧. ಗಲಗಲಿ ೨. ಅಂಬಲರಝುರಿ ೩. ಕೋಲೂರ ೪. ಯಡಹಳ್ಳಿ ೫. ರಬಕವಿ ೬. ಗಣಿ ೭. ಚಿಕ್ಕ ಹಂಚಿನಾಳ ೮. ಹಿರೇ ಹಂಚಿನಾಳ ೯. ಬುದ್ದನಿ ೧೦. ಬೂದಿಹಾಳ ೧೧. ಚವಡಾಪೂರ ೧೨. ಬಳವಲಮಟ್ಟಿ ೧೩. ಗುಳಬಾಳ ೧೪. ಬಿಸನಾಳ ೧೫. ಮುಂಡಗನೂರ ೧೬. ಬಬಲಾದಿ ೧೭. ಪಶ್ಚಾಪೂರ.''[೫೮]

ಈ ೧೭ ಗ್ರಾಮಗಳ ವತನ, ಗೌಡಕಿ ಕೂಡಾ ಇವರ ಅಧೀನತೆಯಲ್ಲಿತ್ತು. ಅದನ್ನು ಆಯಾ ಭಾಗದಲ್ಲಿ ಹಂಚಿಕೊಟ್ಟಿದ್ದಾರೆ. ಅವರ ಬಾಹುಬಂದರು ಕೂಡ ದೇಸಾಯಿ ಎಂದೇ ಕರೆಸಿಕೊಳ್ಳುತ್ತಾರೆ.

೨.೫.೧೪. ಕೊಣ್ಣೂರ ದೇಸಗತಿ

ಕೊಣ್ಣೂರ>ಕ್ಯಾನೂರ ಎಂದೇ ಕರೆಯುತ್ತಾರೆ. ಈ ಗ್ರಾಮದಲ್ಲಿ ಮುಕ್ಕಾಲುಪಾಲು ಹಾಲು ಮತಸ್ಥರೆ ಇದ್ದಾರೆ. ಕೋಣ್ಣೂರ ಗ್ರಾಮವು ದೇಸಾಯಿಗಳ ಒಂದು ಭಾಗವಾಗಿತ್ತು. ದೇಸಾಯಿಗಳು ೧೭ನೇ ಶತಮಾನದ ಮಧ್ಯಭಾಗದವರೆಗೆ ಇಲ್ಲಿ ವಾಸವಾಗಿರದೇ ಜಮಖಂಡಿಯಲ್ಲೆ ಇದ್ದರು. ಕ್ರಿ.ಶ.೧೭೩೭ರ ನಂತರ ಪೇಶ್ವೆಗಳ ಪಟವರ್ಧನರ ಆಳಿಕೆಯಿಂದ ಜಮಖಂಡಿಯಿಂದ ಸ್ಥಳಾಂತರಗೊಂಡು ಮತ್ತೆ ಕೊಣ್ಣೂರನಿಂದ ದೇಸಗತಿ ಆಳಿಕೆ ಮಾಡಿದ್ದು ತಿಳಿದುಬರುತ್ತದೆ. ಇಲ್ಲಿಯವರೆಗೆ ಈ ದೇಸಾಯಿಗಳಿಗೆ ಜಮಖಂಡಿ ದೇಸಾಯಿಗಳೆಂದು ಕರೆದಿರುವುದು ಅಳುಕಿಹೋಗಿದೆ. ಸದ್ಯ ಜನವಾಡಿಕೆಯಲ್ಲಿ ಕೊಣ್ಣೂರ ದೇಸಾಯಿಗಳೆಂದು ಕರೆಯುವುದು ರೂಢಿಯಲ್ಲಿದೆ.

ಅಖಂಡ ಬಿಜಾಪೂರ ಜಿಲ್ಲೆಯ ಬಾಗಲಕೋಟಿ ತಾಲೂಕಿನ ಕಡೆಯ ಗ್ರಾಮವೇ ಕೊಣ್ಣೂರ. ಸದ್ಯ ಇದು ತಾಲೂಕವಾರು ವಿಂಗಡನೆ ಆದ ನಂತರ ಜಮಖಂಡಿ ತಾಲೂಕಿಗೆ ಸೇರಿಕೊಂಡಿದೆ. ಈಗ ಬಾಗಲಕೋಟಿ ಜಿಲ್ಲೆಯಲ್ಲಿದೆ. ಇದರ ಚರಿತ್ರೆಯನ್ನು ಹೇಳುವ ಆಕರಗಳು ಅತ್ಯಲ್ಪ ಪ್ರಮಾಣದಲ್ಲಿ ದೊರೆತಿರುವ ಮತ್ತು ಅವುಗಳಲ್ಲಿ ಪರಸ್ಪರ ತೊಡಕು ಅಸ್ಪಷ್ಟತೆ ತುಂಬಿರುವುದು. ಅದನ್ನು ಇದುವರೆಗೆ ಉಲ್ಲೇಖಿಸದೇ ಇದ್ದುದರಿಂದ ಅಧ್ಯಯನಕ್ಕೆ ಸ್ಪಷ್ಟ ನಿರೂಪಣೆ ಸಿಗುತ್ತಿಲ್ಲ. ಹೀಗಿದ್ದರೂ ಸದ್ಯಕ್ಕೆ ಲಭ್ಯವಿರುವ ಎಲ್ಲ ಆಕರಗಳನ್ನು ತಾಳೆ ನೋಡಿ ಇಲ್ಲಿ ನಿರೂಪಿಸಿಕೊಳ್ಳಲಾಗಿದೆ.

ಜಮಖಂಡಿ ದೇಸಗತಿಯನ್ನು ಸ್ಥಾಪಿಸಿದವನು ನಂದಿಬಸಪ್ಪನು. ಇವನು ಶಕ್ತಿಯುತನಾಗಿದ್ದು ರಾಜ ಗಂಭೀರತೆಯನ್ನು ಹೊಂದಿದ್ದನು. ಇವನ ನಂತರ ಬಂದವರೂ ಕೂಡ ಅಷ್ಟೇ ಬಲಶಾಲಿಯಾಗಿದ್ದರೆಂದು ಅವರಿಂದಲೇ ದೇಸಗತಿ ಬೆಳೆಯಿತೆಂದು ತಿಳಿದುಬರುತ್ತದೆ. ಕ್ರಿ.ಶ. ೧೭೦೦ರವರೆಗೆ ಹಿಂದಿನವರ ಕುರಿತು ಮಾಹಿತಿ ಸಿಗುವುದಿಲ್ಲ. ಇವರ ವಂಶಾವಳಿಯಲ್ಲಿ ಕಾಡಪ್ಪ, ಅದೃಶ್ಯಪ್ಪ, ಗುರಪ್ಪ, ಬಸಪ್ಪ ಇವರೇ ಕಾಣಿಸಿಕೊಳ್ಳುತ್ತಾರೆ.

ಕ್ರಿ.ಶ.೧೭೩೭ರ ಕ್ಕಿಂತ ಮೊದಲು ಪ್ರಭು ಸಂಸ್ಕೃತಿಯನ್ನು ಅಳವಡಿಸಿಕೊಂಡು ಸುತ್ತಮುತ್ತಲೂ ಅಧಿಕಾರ ನಡೆಸಿದ್ದರು. ಆ ವೇಳೆಗಾಗಲೇ ಮರಾಠರ ಪ್ರಭಾವ ಹೆಚ್ಚಾಗಿದ್ದರಿಂದ ಇವರನ್ನು ಹತ್ತಿಕ್ಕಲು ಪೇಶ್ವೆಗಳಿಂದ ಸಂಚು ನಡೆದು ದೇಸಾಯಿಗಳನ್ನು ಕಾಲ್ದೆಗೆಯುವಂತೆ ಮಾಡಿದರು. ಆಗ ಕುಂಬಾರ ಕೆರೆಯ ಮೇಲೆ "೨೫೦ ಜನರಿಗೆ ಪಾಸಿ ಶಿಕ್ಷೆಯಾಯಿತು".[೫೯] ಆಗ ಕೊಣ್ಣೂರ ದೇಸಾಯಿ ಜಮಖಂಡಿಯಿಂದ ಓಡಿ ಬಂದು ಮುಧೋಳ ಘೋರ್ಪಡೆ ಅರಸನ ಅಧಿನದಲ್ಲಿದ್ದು ಪ್ರಾಣಬಿಡುತ್ತಾನೆ(ಕ್ರಿ.ಶ. ೧೭೯೯) ಅವನೇ ಕಾಡಪ್ಪ ದೇಸಾಯಿ.

ಹಾಗಾಗಿ ಜಮಖಂಡಿಯಲ್ಲಿ ದೇಸಗತಿ ಆಡಳಿತ ಖಾಲಸಾತ ಆಗುತ್ತದೆ. ಪಟವರ್ಧನರ ಬಾವುನು ಜಮಖಂಡಿ ಕಾಮೀಸದಾರ ಆಗುತ್ತಾನೆ. ಭಾಸ್ಕರಪಂತ ಸುಖದೇವ ಜಮಖಂಡಿ ಕೋಟೆಯಲ್ಲಿ ತನ್ನದೇ ಆದ ಆಡಳಿತ ಸ್ಥಾಪಿಸುತ್ತಾನೆ. ಹಾಗೆ ಶಾಂತಿ ನೆಲೆಸುವಂತೆ ಮಾಡುತ್ತಾನೆ.

ಕಾಡಪ್ಪ ದೇಸಾಯಿ ತಮ್ಮನಾದ ಗದಿಗೆಪ್ಪ ದೇಸಾಯಿ ಭಾಸ್ಕರ ಪಂತ ಸುಖ ದೇವನ ಜೊತೆಗೆ ವೈರತ್ವವನ್ನು ವಹಿಸಿಕೊಂಡು ಜಗದಾಳ ಕ್ಷೇತ್ರವನ್ನು ವಶಪಡಿಸಿಕೊಂಡನು. ಮತ್ತೆ ಭಾಸ್ಕರ ಪಂತ, ಸುಖದೇವರು ಜಗದಾಳ ಮೇಲೆ ದಾಳಿ ಮಾಡಿ ಗದಿಗೆಪ್ಪನ ೧೫೦ ಸೈನಿಕರನ್ನು ಕೊಲೆ ಮಾಡಿದರು. ಆದಾಗ್ಯೂ ಕೂಡ ಗದಿಗೆಪ್ಪ ದೇಸಾಯಿ ತಪ್ಪಿಸಿಕೊಂಡು (೩) ಮೂರುವರ್ಷಗಳವರೆಗೆ ಪಲಾಯನವಾದನು. ಕ್ರಿ.ಶ.೧೮೦೨ರಲ್ಲಿ ತೀರಿಕೊಂಡನು. ಇದರ ನಂತರ ಗದಿಗೆಪ್ಪನ ಮಗ ಅವನ ಕುಟುಂಬ ಹತ್ತು ವರ್ಷಗಳವರೆಗೆ ನಂತರ ಮುಧೋಳದಲ್ಲಿ ವಾಸಿಸುತ್ತಾರೆ. ೧೮೧೭ರಲ್ಲಿ ರಾಮಚಂದ್ರ ಪಂತ ಅಪ್ಪರವರ

ಪರವಾನಿಗೆಯಿಂದ ಜಮಖಂಡಿಗೆ ಬಂದು ಅಲ್ಲಿ ನೆಲೆಸಿದರು. ಈ ವಂಶಸ್ಥರಿಗೆ ಪಟವರ್ಧನರ ಆಳ್ವಿಕೆಯ ಕೊನೆಯವರೆಗೂ ಜಮಖಂಡಿ ಸಂಸ್ಥಾನದಲ್ಲಿ ರಾಜದರ್ಬಾರದಲ್ಲಿ ಅಷ್ಟೇ ಗೌರವದ ಪ್ರತೀಕವಾಗಿ ಒಂದು ಆಸನ ನೀಡಿ ಗೌರವಿಸಿದ್ದು ಕಂಡುಬರುತ್ತದೆ.

ಇವರ ನಂತರ ಅದೃಶ್ಯಪ್ಪ ದೇಸಾಯಿ ಕೊಣ್ಣೂರನ್ನೇ ಆಡಳಿತ ಕ್ಷೇತವನ್ನಾಗಿಸಿಕೊಂಡು ಜನಮನದಲ್ಲಿ ಅಜರಾಮನಾಗಿ ಉಳಿದಿದ್ದಾನೆ. ಅವನ ಆದರ್ಶ ಗುಣಗಳಿಂದ ಇಡೀ ಭಾಗದ ಜನತೆ 'ಜನನಾಯಕ' ಎಂಬ ಬಿರುದು ನೀಡಿ ಜನಾಧರಣೀಯ ದೇಸಾಯಿಯಾಗಿ ಕಂಗೊಳಿಸಿದ್ದಾರೆ. ಈಗಲೂ ಜಮಖಂಡಿಯಲ್ಲಿ ಜನನಾಯಕ ಸರ್ಕಲ್ ಮಾಡಿದ್ದು ನಿದರ್ಶನವಾಗಿದೆ.

ಜಮಖಂಡಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ರನ್ನನ ಗ್ರಂಥಗಳಲ್ಲಿ ಇದೊಂದು ಅಗ್ರಹಾರವೆಂದು ಉಲ್ಲೇಖಿಸಿದ್ದಾನೆ. ಇದು ಕಲ್ಯಾಣ ಚಾಲುಕ್ಯರ ರಾಜ ತ್ರಿಭುವನಮಲ್ಲನ ಬ್ರಹ್ಮಪುರಿಯಾಗಿದ್ದಿತು. ಮಹಾ ಅಗ್ರಹಾರವೆಂದು ೧೨ನೇ ಶತಮಾನದಲ್ಲಿ ಶಾಸನದಲ್ಲಿ ಉಲ್ಲೇಖವಿದೆ. ವಿಜಯನಗರ ಪತನದ ನಂತರ ಹಲವಾರು ಸಂಸ್ಥಾನೀಕರು, ಮಾಂಡಲೀಕರು ದೇಸಗತಿಯ ಆಡಳಿತಕ್ಕೊಳಗಾದ ಮುಖ್ಯ ಕೇಂದ್ರವಾಗಿದ್ದಿತು. ಕಲ್ಯಾಣ ಚಾಲುಕ್ಯರ ಕಲಚೂರಿಗಳ ಸಾಮ್ರಾಜ್ಯದ ನಂತರ ಕೊಣ್ಣೂರ ದೇಸಾಯಿ ಆಳಿಕೆ ನಡೆಸಿದ ಕೇಂದ್ರ ಸ್ಥಾನವಾಗಿದ್ದಿತು.

ಆದಿಲ್‌ಶಾಹಿಯಿಂದ ಇನಾಂ ಪಡೆದ ಇವರು ಈ ಭಾಗದ ಬಹುದೊಡ್ಡ ದೇಸಗತಿಯಾಗಿ ಆಳಿಕೆ ನಡೆಸಿದರು. ಜಮಖಂಡಿಯನ್ನೇ ತಮ್ಮ ಪರಗಣವನ್ನಾಗಿಸಿ ೧೭ನೇ ಶತಮಾನದ ಮಧ್ಯದವರೆಗೆ ಆಳಿಕೆ ಮಾಡಿದ್ದಾರೆ. ಈ ಕುರಿತು ಯಾವುದೇ ಸ್ಪಷ್ಟ ದಾಖಲೆಗಳಿಲ್ಲ. ಅಣ್ಣ ತಮ್ಮಂದಿರರ ವಾಜ್ಯದಿಂದ ದೇಸಗತಿ ರೀಕಾರ್ಡ ರೂಮಿಗೆ ಬೆಂಕಿ ಇಟ್ಟಿದ್ದರಿಂದ ಬಹುತೇಕ ಕಾಗದ ಪತ್ರಗಳು ಸುಟ್ಟುಹೋಗಿವೆಯೆಂದು ಹೇಳುತ್ತಾರೆ.

ಕ್ರಿ.ಶ.೧೭೩೭ರಲ್ಲಿ ಅಧೀನಕ್ಕೊಳಪಟ್ಟ ಗ್ರಾಮಗಳು ಪಟವರ್ಧನರ ವಶವಾಗಿ ಕೆಲವು ಕೆಲವೇ ಗ್ರಾಮಗಳು ಉಳಿದವು.

ದೇಸಗತಿ ಚಾವರಾತ ಗ್ರಾಮಗಳು

೧. ಕೊಣ್ಣೂರ, ಜಮಖಂಡಿ ಕೆಲವು ಭಾಗ. ೨. ಆಲಗೂರ ೩. ಕಂಕಣವಾಡಿ ೪. ಕುಚನೂರು

೨.೫.೧೫. ಮುದ್ದಾಪೂರ ದೇಸಗತಿ

ಮುದ್ದಾಪೂರ ದೇಸಗತಿಯು ತನ್ನ ದೇಸಗತಿಯನ್ನು ಸ್ಥಾಪಿಸಿದ್ದರ ಕುರಿತು ಪ್ರಮುಖ ದಾಖಲೆಗಳನ್ನು ಹೊಂದಿಲ್ಲ. ಇದು ಅಲ್ಲಲ್ಲಿ ದೇಸಗತಿ ಸಂಪಾದನೆ ಮಾಡುತ್ತ ಬಂದಿದ್ದಾಗಿದೆ. ('ಅಣುಗಜೀವಿತ'

ಉಂಬಳಿ) ಸ್ತ್ರೀಯರಿಗಾಗಿ ಹಾಕಿಕೊಟ್ಟ ಉಂಬಳಿಯಿಂದ ದೇಸಗತಿ ಕಟ್ಟಿದ್ದಾಗಿದೆ. ಇಲ್ಲಿಯೂ ಕೂಡಾ ಅಣ್ಣಾ ತಮ್ಮಂದಿರರ ವಾಜ್ಯದಿಂದಾಗಿ ದಾಖಲೆಗಳ ಕೋಣೆಗೆ ಬೆಂಕಿ ಇಟ್ಟ ಕಾರಣ ಸಂಪೂರ್ಣ ನಾಶಹೊಂದಿದೆ. ಈ ಮನೆತನ ಕುರಿತು ನೀರಬೂದಿಹಾಳ ದೇಸಾಯರ ಕೈಫಿಯತ್ ಸಲ್ಲಿ, ಹಾಗು ಹೆಳವರು ಹೇಳಿಕೆಯಿಂದ ಸ್ಥಳೀಯ ಮಾಹಿತಿಯೊಂದಿಗೆ ಇಲ್ಲಿ ಈ ಮನೆತನ ಕುರಿತು ನಿರೂಪಿಸಿಕೊಳ್ಳಲಾಗಿದೆ.

ಮುದ್ದಾಪೂರ ಮೂಲತಃ ಮೆಟಗುಡ್ಡ ನಿಂಗಾಪೂರ ನಡುವೆ ಇತ್ತು. ಇದು ಮುಧೋಳ ತಾಲೂಕಿನ ಘಟಪ್ರಭಾ ನದಿಯ ಬಲಗಡೆ ಇದೆ. ಕೆಲವೇ ಗ್ರಾಮಗಳನ್ನು ಹೊಂದಿದ್ದರೂ ಉತ್ತಮ ಆಳಿಕೆ ಮಾಡಿದ ದೇಸಗತಿಯಾಗಿದೆ. ಈ ಮನೆತನ ಮೂಲ ಪುರುಷ ದೊಡ್ಡ ಬಸನಪ್ಪ ದೊರೆ, ಸಣ್ಣ ಬಸನಪ್ಪ ದೊರೆ, ದೊಡ್ಡ ನಿಂಗಪ್ಪ, ಸಣ್ಣ ನಿಂಗಪ್ಪ ಜೊತೆಗೆ ನೀಲಗಂಗಾ, ಶಿವಗಂಗಾ ಮುದ್ದವ್ವ ಮಾದವ್ವ ಎಂಬುವರಿದ್ದರು. ಇವರ ಜೊತೆಗೆ ರಡ್ಡಿಮತದವರೂ ಇದ್ದರು. ಗಾಣಿಗ ಮತಸ್ಥರಾದ ಮುದ್ದಾಪೂರ ದೇಸಾಯಿಗಳು ಎಲ್ಲರನ್ನೂ ಕೂಡಿಕೊಂಡು ಬಾಳುತ್ತಿದ್ದರು.

ಮೂಲತಃ ಗುಳೇದಗುಡ್ಡದಲ್ಲಿ ನಾಯಕರಾಗಿದ್ದು ಅಲ್ಲಿಂದ ವ್ಯಾಜ್ಯ ಮಾಡಿ ಬಾದಾಮಿಗೆ ಬಂದರು. ಹಾಗೇ ಅಲೆಯುತ್ತ ಮೆಟಗುಡ್ಡಕ್ಕೆ ಬಂದರು. ಪಚ್ಚಲಗುಡ್ಡ - ಪಟ್ಟದಕಲ್ಲಿನಲ್ಲಿ ಬೇಟೆಯಾಡುವಾಗ ಮುದ್ದವ್ವ ಮಾದವ್ವರು ದನ ಮೇಯಿಸುತ್ತಿದ್ದರು. ಇದನ್ನು ನೋಡಿದ ನೀರಬೂದಿಹಾಳ ದೇಸಾಯಿ ತಾವು ಯಾರು ಎಲ್ಲಿಂದ ಬಂದಿರುವಿರಿ ಎಂದು ಕೇಳಿದನು. ಮುದ್ದವ್ವರು ಮುಂದಾಗಿ ಕೋಳೂರ ತುಮಕೂರ ಗಣೆ ಚಿಮ್ಮಲಗಿ ಕಳಸ ೪೪ ಖಾನ ದೊರೆಗಳು ಎಂದು ಹೇಳಿದರು. ಕುಡಿಯಲು ಕ್ಷೀರ ಕೊಟ್ಟು ಎಲೆ, ಆಡಿಕೆ ತಾಂಬೂಲ ಕೊಟ್ಟರು. ನೀವು ನಮ್ಮ ತಂಗಿಯರೆಂದು ಹೇಳಿ ಹೊಳೆದಂಡೇಲಿರುವ ಯಡಹಳ್ಳಿ ಗ್ರಾಮವನ್ನು ಉಂಬಳಿಕೊಟ್ಟನು. ಮುದ್ದವ್ವ ಮಾದವ್ವರು ಮುಧೋಳ ತಾಲೂಕಿನ ಯಡಹಳ್ಳಿ ಗ್ರಾಮದಲ್ಲಿ ನಿಂತು ದೇಸಗತಿ ಕಟ್ಟಿದರು.

ಇವರ ನಂತರ ಮುತ್ತಾವ ದೇಸಾಯರ ಕುರಿತು ತಿಳಿದು ಬರುವುದಿಲ್ಲ. ಇವರ ಕುರಿತು ಅಲ್ಲಲ್ಲಿ ಕೆಲವು ಮಾಹಿತಿ ಸಿಕ್ಕರೂ ದೇಸಾಯಿಗಳ ಹೆಸರು ನಮೂದಾಗಿರುವುದಿಲ್ಲ. ಚಿತ್ರಭಾನು ಕೋಟೆಯಲ್ಲಿರುವ ಶ್ರೀಮತ್ತಪರಮ ಹಂಸರನ್ನು ಕರೆತಂದು ಅವರಿಗೆ ಜಮೀನನ್ನು ಕೊಟ್ಟ ಬಗ್ಗೆ ಮಾಹಿತಿ ಸಿಕ್ಕರೂ ದೇಸಾಯಿ ಹೆಸರಿರುವುದಿಲ್ಲ. ಅದು ಈ ರೀತಿ ಇದೆ. ನಾನು ಕಾಶಿ ಶ್ರೀಶೈಲಯಾತ್ರೆಗೆ ಹೋಗುತ್ತೇನೆ. ಈ ದಿನ ಶುಭ ಮುಹೂರ್ತದಲ್ಲಿ ಹಿರೇಮಠಕ್ಕೆ ೪ ಕೂರಿಗೆ ಜಮೀನನ್ನು ಇನಾಂ ಕೊಟ್ಟಿದ್ದೇನೆ ಎಂದಿದೆ. ತಾರೀಖು ಸ್ಪಷ್ಟವಿಲ್ಲ.

ಯೆಂಡಿಗೇರಿ ದೇಸಾಯಿಗಳು ಹಾಕಿಕೊಟ್ಟ ಇನಾಂ ಗ್ರಾಮವೇ ಯಡಹಳ್ಳಿಯಾಗಿದೆ. ಈ ಭಾಗದ ಸಂಪೂರ್ಣ ಆಡಳಿತವು ಮುಧೋಳ ಘೋರ್ಪಡೆ ಅರಸನ ಅಧೀನದಲ್ಲಿತ್ತು. ಮುದ್ದವ್ವ, ಮಾದವ್ವರು

ದನಕಾಯುತ್ತಿರುವಾಗ ಆಕಳ ಹಾಲನ್ನು ಕಾಯಿಸಿದರು. ಅದು ಹಳ್ಳವಾಗಿ ಹರಿಯಲ್ಲಿಕ್ಕೆ ಹತ್ತಿತು. ಇದನ್ನು ತಿಳಿದು "ಘೋರ್ಪಡೆ ಅರಸನು ಧಾವಿಸಿ ಬಂದು ಮುದ್ದವ್ವ, ಮಾದವ್ವರಿಗೆ ಕೇಳಿಕೊಂಡನು. ನಿಮ್ಮ ಪವಿತ್ರ ಮನಸ್ಸಿನಿಂದ ಅಮೃತ ಹರಿದು ಹಳ್ಳವಾಗಿದೆ. ಈ ಭಾಗದ ಕೆಲವು ಜಮೀನನ್ನು ತಮಗೆ ಸರ್ವ ಇನಾಂ ನೀಡಿದ್ದೇನೆ." ಹಾಗೇ ನಿಮ್ಮ ಕೈಯಿಂದಲೇ ನಮ್ಮ ದಂಡಿಗೆ ಅನ್ನ ಹಾಕಿರೆಂದು ಹೇಳಿದಾಗ ಮುದವ್ವ ಮಾದವ್ವರು ೧೦ ಸೊಲಿಗೆ ಬ್ಯಾಳಿ ಹಾಕಿ ಒಂದೇ ಒಂದು ಕಡಬು ಮಾಡಿದರು. ಅದರ ನಡುವೆ ಹೂರಣ ತುಂಬಿದರು. ಐದು ಮೂಲೆ ಕಡಬು ಮಾಡಿ ಒಂದೊಂದು ಮೂಲೆಗೆ ಒಂದೊಂದು ಹಕ್ಕಿ ಇಟ್ಟು ಕುಚ್ಚಿದರು. (ಗಿಳಿರಾಮ, ಕೌಜಗ, ಪಾರಿವಾಳ, ಬುರ್ಲಿ, ಲಾವಕ್ಕಿ) ಅದನ್ನು ಇಡೀ ದಂಡಿಗೆ ಇಟ್ಟಳು. ಒಂದು ಮೊಲೆಯೊಳಗಿಂದ ಒಂದು ಹಕ್ಕಿ ಪುರ್ ಎಂದು ಹಾರಿಹೋಯಿತು. ಹೀಗೆ ಐದು ಪಕ್ಷಿಗಳು ಹಾರಿ ಹೋದಾಗ ಆಶ್ಚರ್ಯವಾದ ದೊರೆಯು ಇದರ ವೈಶಿಷ್ಟ್ಯವೇನು ಎಂದು ಕೇಳಿದನು.

ನಾವು ಐದು ಜನ ಅಕ್ಕತಂಗೇರು ನೀಲಗಂಗಾ, ಶಿವಗಂಗಾ, ಮುದ್ದವ್ವ, ಮಾದವ್ವ ಹಾಗೂ ಗೋಪತಾಯಿ ಎಂದು ಹೇಳಿದರು. ನೀವು ಏನ ಬೇಡತೀರಿ ಬೇಡರಿ ಎಂದಾಗ

೧. ಎತ್ತ ಎಮ್ಮಿ ಕೊಟ್ರ ಸುಣ್ಣದ ತೊಗಲ ಆಗತ್ತ

೨. ಸೀರೆ ಕುಬಸ ಕೊಟ್ರ ಹರಿದು ಹೋಗತಾವ

೩. ಬೆಳ್ಳಿ ಬಂಗಾರ ಕೊಟ್ರ ಮುರದ ಹೋಗತಾವ

ನಮಗ ಬಸವಣ್ಣನ ಪಾದದಷ್ಟು ಜಮೀನ ಕೊಡಬೇಕು ಅಂತ ಕೇಳಿದರು. ನೀವು ಕೊಟ್ರ ಅದನ್ನ ಆಳುತ್ತ ನಿನ್ನ ಹದ್ದದಾಗ ಇರತೀವಿ ಇಲ್ಲದಿದ್ದರ ನಾವು ಮುಂದಿನ ಸೀಮಿಗೆ ಹೋಗತೇವಿ ಅಂದರು."

ಮುದ್ದವನ ತಲಿಲೆ ಮದ್ದಾಪೂರ, ಮಾದವ್ವನ ತಲಿಲೆ ಮಾರಾಪೂರ ಆತು ಎಂಬುದು ಜನಪದರಿಂದ ತಿಳಿದುಬರುತ್ತದೆ. ಆಗ ಜಂಬಗಿ ನಾಡ ೨೫ ಹಳ್ಳಿ ದೇಸಗತಿ ಪಡೆದರು.

ಕೆಲವು ವಿಚಾರಗಳು ಉತ್ಪ್ರೇಕ್ಷೆ ಎನಿಸಿದರು. ಈಗಲೂ ಯಡಹಳ್ಳಿ ಹತ್ತರ ಹರಿದ ಹಳ್ಳಕ್ಕೆ 'ಹಾಲಹಳ್ಳ' ಎಂದೇ ಕರೆಯುತ್ತಾರೆ. ೨. ಯಡಹಳ್ಳಿಯೇ ದೇಸಗತಿಯಾಗಿದ್ದು ಅಲ್ಲಿನ ವಾಡೇಯನ್ನು ಹಿರೇಮಠಕ್ಕೆ ಬಿಟ್ಟು ಕೊಟ್ಟಿದ್ದು ಆಗಿದೆ. ಮೆಟಗುಡ್ಡದಲ್ಲಿ ಐದು ಹುಡೆಗಳಿದ್ದು ಇತ್ತೀಚಿನವರೆಗೂ ಐದು ಅಗಸಿಗಳಿದ್ದವು. ಅಲ್ಲಲ್ಲಿ ಮನೆಗಳು ಹುಟ್ಟಿಕೊಳ್ಳುತ್ತಿರುವುದರಿಂದ ಅಗಸೆಗಳು ಬಿದ್ದು ಹೋಗಿವೆ. ಒಂದೇ ಒಂದು ಅಗಸಿ ಮೂರು ಹುಡೆಗಳು ಅಲ್ಪಸ್ವಲ್ಪವಾಗಿ ಕಾಣಸಿಗುತ್ತವೆ.

ಮೆಟಗುಡ್ಡದಲ್ಲಿ ನಾಯಕ ಮನೆತನ ಹಾಗೂ ನಾಡಗೌಡ ಮನೆತನ ಈಗಲೂ ಇದೆ. ಇವರೆಲ್ಲರೂ ಸಾಕಷ್ಟು ವಿದ್ಯಾವಂತರಾಗಿದ್ದಾರೆ. ವೈದ್ಯರಾಗಿದ್ದಾರೆ. ರಾಜಕೀಯದಲ್ಲಿ ಭಾಗವಹಿಸಿ ಜನಪ್ರೀಯರಾಗಿದ್ದಾರೆ.

ದೇಸಗತಿ ಚಾವ ರಾತ ಹಳ್ಳಿಗಳು

" ೧. ಬರಗಿ ೨. ಅಂತಾಪೂರ ೩. ಚಿಚಕಂಡಿ ೪. ನಿಂಗಾಪೂರ ೫. ಹಲಕಿ, ೬. ಜಾಲಿಬೇರ ೭. ಪೆಟ್ಲೂರ ೮. ಮೆಟಗುಡ್ಡ ೯. ಜಂಬಗಿ ೧೦. ಯಡಹಳ್ಳಿ ಇವೆಲ್ಲವೂ ಮಹಾಲ ಜಂಬಗಿ ಘೋರ್ಪಡೆ ಸಂಸ್ಥಾನ ಎಂಬುದಾಗಿದೆ."[೨೦] ಘೋರ್ಪಡೆ ಅರಸರ ಅಧೀನರಾಗಿ ಆಳ್ವಿಕೆ ನಡೆಸಿದ್ದು ತಿಳಿದುಬರುತ್ತದೆ. ಒಟ್ಟಾರೆಯಾಗಿ ಎಲ್ಲ ದೇಸಗತಿಗಳ ಸಂಕ್ಷಿಪ್ತ ಮಾಹಿತಿಯನ್ನು ಕಟ್ಟಿಕೊಡಲಾಗಿದೆ. ಇವರ ಸಾಂಸ್ಕೃತಿಕ ಆಚರಣೆಗಳನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಡಿಟಿಪ್ಪಣಿಗಳು

೧. **ಪ್ರೊ.ಜಿ.ವೆಂಕಟಸುಬ್ಬಯ್ಯ, ೧೯೯೯, ಕನ್ನಡ ಇಂಗ್ಲೀಷ್ ನಿಘಂಟು, ಪು.೩೭೯**

೨. **ಡಾ.ಶಿವರಾಮ ಕಾರಂತ, ೧೯೯೨, ಸಿರಿಗನ್ನಡ ಅರ್ಥಕೋಶ, ಪು.೨೬೫**

೩. ಕಿಟೆಲ್‌ರ ಕನ್ನಡ ಇಂಗ್ಲೀಷ್ ಶಬ್ದಕೋಶ, ೨೦೦೦, ಪು.೫೬

೪. ಸಂದರ್ಶನ ಶಾರದಬಾಯಿ ಸರನಾಡಗೌಡ, ವಯಸ್ಸು ೪೫, ಬಾಗಲಕೋಟೆ

೫. ಸಂದರ್ಶನ ಬಸವರಾಜ ದೊಡ್ಡಮನಿ, ವಯಸ್ಸು ೪೨, ಪಟ್ಟದಕಲ್ಲು(ಮಂಗಳಗುಡ್ಡ)

೬. ಸಂದರ್ಶನ ಗಂಗಮ್ಮ ಸರನಾಡಗೌಡ, ವಯಸ್ಸು, ೮೫, ಬಾಗಲಕೋಟೆ

೭. ಡಾ.ಮಹಾಲಿಂಗಂ, ವಿಜಯನಗರ ಸ್ಥಳೀಯ ಸರ್ಕಾರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು.೨೨

೮. ಅದೇ, ಪು.೨೨-೨೮

೯. ಸಂದರ್ಶನ ಡಾ.ಎಂ.ಎಂ.ಕಲಬುರ್ಗಿ, ಧಾರವಾಡ

೧೦. ಇನಾಂ ಕಮೀಷನ್ ಮೋಡಿ ದಾಖಲೆಗಳು ಕನ್ನಡಕ್ಕೆ ಲಕ್ಷ್ಮಪ್ಪ ಡಂಗಿ

೧೧. ಡಾ.ವೀರೂಪಾಕ್ಷ ಬಡಿಗೇರ, ಸಿರಸಂಗಿ ಸಂಸ್ಥಾನ ಒಂದು ಅಧ್ಯಯನ, ಪು.೨೫

೧೨. ಪರ್ಶಿಯನ್ ಸನದುಗಳು ಕನ್ನಡಕ್ಕೆ ಡಾ.ಅಬ್ದುಲ್ ಗಣಿ ಇಮಾರಲ್‌ವಾಲೆ, ಬಿಜಾಪೂರ

೧೩. ಅದೇ

೧೪. ಅದೇ

೧೫. ಪರ್ಶಿಯನ್ ಸನದು ಇದು ಜಾಲಿಹಾಳ ದೇಸಾಯಿಗಳಿಗೆ ಕೊಟ್ಟಿದ್ದು ಇರುತ್ತದೆ. ಒಪ್ಪಿಗೆಯಂತೆ ಸೈನ್ಯ ಕಳಸದೇ ಇದ್ದರೂ ಕೂಡ ತಮ್ಮ ಅಹವಾಲನ್ನು ಅವರಿಗೆ ತೋರ್ಪಡಿಸಿದ್ದರಿಂದ ಮೆಚ್ಚಿ ಬರೆದ ಪತ್ರ ಇದಾಗಿದೆ. ಕನ್ನಡಕ್ಕೆ ಡಾ.ಅಬ್ದುಲ್‌ಗಣಿ ಇಮಾರಲ್‌ವಾಲೆ, ಬಿಜಾಪೂರ

೧೬. ಲೇಖನಗಳು ಬ್ರಿಗ್ಸ್ ಹಾಗೂ ಪ್ಯಾಟಂಜರ ಅವರ ನಡುವೆ ನಡೆದ ದೇಸಮುಖ ಪದದ ಮೇಲೆ ವಿವರಣೆಯನ್ನು ಈ ರೀತಿ ಸಮರ್ಥಿಸುತ್ತಾರೆ.

೧೮೨೦ರಲ್ಲಿ ಈ ರೀತಿ ಉತ್ತರಿಸುತ್ತ ದೇಶಪಾಂಡೆ ಮತ್ತು ದೇಶಮುಖ್ ಅಧಿಕಾರಿಗಳಿಗೆ ಹಿಂದುಗಳ ಗುಣಗಳಿಲ್ಲವೆಂದು ನನಗನ್ನಿಸುವುದಿಲ್ಲವೆಂದು ಈ ಅಧಿಕಾರಿಗಳನ್ನು ಮುಸ್ಲಿಂರೇ ಹುಟ್ಟು ಹಾಕಿದ್ದರೆನ್ನುವ ಸಿದ್ಧಾಂತವನ್ನು ಒಪ್ಪಿಕೊಳ್ಳುವುದಾದರೆ ಮುಸ್ಲಿಂರ ಆಗಮನಕ್ಕಿಂತ ಮೊದಲು ಇಂಥದ್ದೆ ಅಧಿಕಾರಿಗಳು ಮೈಸೂರು ಸರಕಾರದಲ್ಲಿ ಕೆಲಸ ಮಾಡುತ್ತಿದ್ದರೆಂದು ಹೇಗೆ ಹೇಳುತ್ತಿರಿ ಮತ್ತು ಸಿಂಹಳದ ದೇಸಾಯಿಗಳೆಲ್ಲಿಂದ ಬಂದರು ಆ ಪ್ರದೇಶವನ್ನು ಮುಸ್ಲಿಂರೆಂದೂ ವಶಪಡಿಸಿಕೊಳ್ಳಲಿಲ್ಲ, ಮುಸ್ಲಿಂರು ಯಾವುದೇ ಪ್ರದೇಶವನ್ನು ವಶಪಡಿಸಿಕೊಳ್ಳಲಿ ಅಲ್ಲಿ ಅವರು ಸುಧಾರಣೆಯ ಹೆಸರಿನಲ್ಲಿ ಅಳಿಸಲಾಗದ ಗುರುತನ್ನು ಬಿಟ್ಟಿದ್ದಾರೆ.

೧೭. ಪರ್ಶಿಯನ್ ಸನದು ಕನ್ನಡಕ್ಕೆ ಡಾ.ಅಬ್ದುಲ್‌ಗಣಿ ಇಮಾರತವಾಲೆ, ಬಿಜಾಪೂರ

೧೮. ಡಾ.ಮಹಾಲಿಂಗಂ, ವಿಜಯನಗರದ ಸ್ಥಳೀಯ ಸರ್ಕಾರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು.೨೨-೨೮

೧೯. ಪರ್ಶಿಯನ್ ಸನದು ಕನ್ನಡಕ್ಕೆ ಡಾ.ಅಬ್ದುಲ್‌ಗಣಿ ಇಮಾರತವಾಲೆ

೨೦. ಲೇಖನ ಎ.ಆರ್.ಕುಲಕರ್ಣಿ, ಗ್ರಾಂಡ್ ಡಫ್ ಎನ್ನುವ ಇತಿಹಾಸಕಾರನು ಮರಾಠ ಇತಿಹಾಸವನ್ನು ಬರೆಯುವಾಗ ದೇಶಪಾಂಡೆ ಮತ್ತು ದೇಶ್‌ಮುಖ ಪದಗಳ ಕುರಿತಾಗಿ ತನ್ನ ಗೆಳೆಯರು ಯುರೋಪಿಯನ್ನರು ಮತ್ತು ಮೂಲನಿವಾಸಿಗಳಿಂದ ಸ್ಪಷ್ಟಣೆಯನ್ನು ಕೋರುತ್ತಾನೆ. ಹಲವಾರು ಹಳ್ಳಿಗಳ ಗುಂಪಿನ ಸ್ಥಾನಿಕ ಸಂಸ್ಥೆಗಳಿಂದ ಅಧಿಕಾರವು ವಂಶಪಾರಂಪರ್ಯವಾಗಿದ್ದು ಪೌರಾತ್ಯ ಭಾರತ ಮತ್ತು ದಕ್ಷಿಣದ ಸಾಮಾಜಿಕ ಮತ್ತು ರಾಜಕೀಯ ಚೌಕಟ್ಟಿನ ಒಂದು ಮಹತ್ವದ ಅಂಶವಾಗಿದೆ. ಆದ್ದರಿಂದ ಅವರು ಈ ಪದಗಳ ಉಗಮದ ಬಗ್ಗೆ ಸಂಶೋಧನೆ ಕೈಗೊಳ್ಳುತ್ತಾನೆ. ಅವುಗಳು ಹುಟ್ಟಿಕೊಂಡ ಬಗ್ಗೆ ೧೪ನೇ ಶತಮಾನದಲ್ಲಿ ದಕ್ಷಿಣವನ್ನು ವಶಪಡಿಸಿಕೊಂಡನಂತರ ಅವರಿಂದ ಪರಿಚಯಸಲ್ಪಟ್ಟವು ಎನ್ನುವುದೇ ಅವರಿಗೆ ದೊಡ್ಡ ಸಮಸ್ಯೆಯಾಗಿದೆ.

ಈ ದೇಶದಲ್ಲಿ ಶಕ್ತಿಯುತ ನಾಯಕರಿದ್ದರು ಅವರು ನಮ್ಮ ದೇಶಕ್ಕೆ ನುಸುಳಿ ಬಂದ ಮುಸ್ಲಿಂ ಸರದಾರರೊಂದಿಗೆ ಕೂಡಿಕೊಂಡರು ಮತ್ತು ಇವರ ಸೇವೆಯನ್ನು ಖಾತ್ರಿ ಪಡಿಸಲು ಈ ವ್ಯವಸ್ಥೆ ಮೊದ ಮೊದಲು ಮಾಡಲಾಯಿತು. ಇದು ಮರಾಠರಲ್ಲಿ ಒಡಕು ಹುಟ್ಟಿರುವ ಸಲುವಾಗಿ ಮಹಮ್ಮದೀಯರು ಕೈಕೊಂಡ ರಾಜಕೀಯ ನೀತಿ. ಇನ್ನೂ ಮುಂದುವರಿದಂತೆ ಮುಸ್ಲಿಂರಿಗೆ ಸಹಾಯ ಮಾಡಿದ ಶಕ್ತಿಶಾಲಿ ನಾಯಕರೇ ಮೂಲತಃ ದೇಶಮುಖ್. ಕೆಲವರು ಅಕ್ಕಪಕ್ಕದವರನ್ನು ಅತೀ ಕ್ರಮಿಸಿ ರಾಜರಾದರು. ನಾಯಕರಿಗೆ ಸಹಾಯಕರಾಗಿ ನಿಂತ ಅಧಿಕಾರಿಗಳ ಗುಂಪೇ ಇರುತ್ತಿತ್ತು. ಅಂಥವರೇ ಕಾಲಕ್ರಮೇಣ ದೇಶಪಾಂಡೆ ದೇಸಮುಖರೆಣೆ ಎಂದಾದರು. ಒಟ್ಟಾರೆಯಾಗಿ ಈ ಶಬ್ದಗಳು ಮುಸ್ಲಿಂರ ಆಗಮನದಿಂದ ಹುಟ್ಟಿಕೊಂಡವೇ ಹೊರತು ಹಿಂದೂ ಮೂಲದಿಂದಲ್ಲ ಎಂಬುದು ತಿಳಿದುಬರುತ್ತದೆ.

೨೧. ಅದೇ,

೨೨. ದೇಸಮುಖ್ ಎನ್ನುವ ಶಬ್ದ ಬಹುಮನಿ ಸಾಮ್ರಾಜ್ಯದಕ್ಕಿಂತ ಮೊದಲಿನದಲ್ಲದಿದ್ದರೂ ಅದೇ ಸಮಯದಲ್ಲಿ ಮಹಾರಾಷ್ಟ್ರದಲ್ಲಿ ಇದ್ದಿರಬಹುದು ಯಜ್ಞವಲ್ಕನ ವಿದ್ಯಾವಿದುರ ಮತ್ತು ದೇಸಮುಖರು ಒಂದೇ ರೀತಿಯ ಅಧಿಕಾರಿಗಳೆಂದು ಅನುಮಾನ ಪಡುತ್ತಾನೆ ಮತ್ತು ಅವರು ಖಾಯಂ ಆದ ಅಧಿಕಾರಿಗಳಾಗಿದ್ದು ಅವರ ಆಡಳಿತ ವಂಶಪರಂಪರಾಗತವಾಗಿದ್ದು ಮುಸ್ಲಿಂ ಆಡಳಿತದಲ್ಲಿ ಅವರು ಸ್ವಲ್ಪ ಭೂಮಿ ಮತ್ತು ವಿನಾಯಿತಿಯನ್ನು ಪಡೆದಿದ್ದರು.

೨೩. ಅದೇ,

೨೪. ಅದೇ,

೨೫. ಅದೇ,

೨೬. ಕಿಟಲ್ ನಿಘಂಟು, ೨೦೦೦, ಇಂಗ್ಲೀಷ್ ಕನ್ನಡ ನಿಘಂಟು, ಪು.೯೬

೨೭. ಪಂಚಾಕ್ಷರಿ ಹಿರೇಮಠ, ೨೦೦೦, ಸಾರಂಗದೇವ ಅಭಿನಂದನಾ ಗ್ರಂಥ, ಪು.೮

೨೮. ಎಂ.ಬಿ.ನೇಗಿನಾಳ, ನೇಗಿನಹಾಳದ ಪ್ರಬಂಧಗಳು, ಪು.೨೧೦

೨೯. ವಂಶಾವಳಿಯ ಮಾಹಿತಿಯಿಂದ

೩೦. ಪಾ.ಬಾಳಣ್ಣಾ ಸೀಗಿಹಳ್ಳಿ(ಸಂ), ೧೯೮೯, ವೀರಶೈವ ದೇಸಗತಿಗಳು, ಸಂಪುಟ ೧, ಪು.೭೮

೩೧. ಸಂದರ್ಶನ, ಸಿ.ಎಸ್.ದೇಸಾಯಿ, ವಯಸ್ಸು ೬೫, ಸೊನ್ನ, ತಾ.ಬೀಳಗಿ

೩೨. ಅದೇ,

೩೩. ಇನಾಂ ಕಮೀಷನ್‌ದಿಂದ ದೊರೆತ ಇಡೀ ದೇಸಗತ ಮಾಹಿತಿ ಪತ್ರ ಸುಮಾರು ೫ ಪ್ಲಟಿನದು ಇರುತ್ತದೆ. ಸಂಪೂರ್ಣ ಮೋಡಿಯಲ್ಲಿರುತ್ತದೆ. ಕನ್ನಡಕ್ಕೆ ಲಕ್ಷ್ಮಪ್ಪ ಡಂಗಿ

೩೪. ಸಂದರ್ಶನ ಗಂಗಮ್ಮ ಸರನಾಡಗೌಡ, ವಯಸ್ಸು ೮೫, ಬಾಗಲಕೋಟೆ

೩೫. ಅದೇ,

೩೬. ಅದೇ,

೩೭. ೧೯೬೮-೬೯ರಲ್ಲಿ ನೀಡಿದ ಸನದು ಪತ್ರ ಇಂಗ್ಲೀಷ್ ಹಾಗೂ ಮೋಡಿ ಲಿಪಿಯಲ್ಲಿರುತ್ತದೆ. ಕನ್ನಡಕ್ಕೆ ಲಕ್ಷ್ಮಪ್ಪ ಡಂಗಿ

೩೮. ಲೇಖನ ಸಂಯುಕ್ತ ಕರ್ನಾಟಕ ೧೯೭೮

೩೯. ಸಂದರ್ಶನ ಬಿ.ಕೆ.ದೇಸಾಯಿ, ವಯಸ್ಸು ೬೫, ನೀರಬೂದಿಹಾಳ. ಈ ಕುರಿತಾಗಿ ಸವನೂರ ನವಾಬರ ಇತಿಹಾಸದಲ್ಲಿ ಇರುವುದೆಂದು ವಿವರಿಸುತ್ತದೆ.

೪೦. ಇನಾಂ ಕಮೀಷನ್‌ದಿಂದ ದೊರೆತ ಮೋಡಿ ದಾಖಲೆ ಪತ್ರಗಳ ಮಾಹಿತಿಯಿಂದ ಕನ್ನಡಕ್ಕೆ ಲಕ್ಷ್ಮಪ್ಪ ಡಂಗಿ

೪೧. ಅದೇ,

೪೨. ಅದೇ,

೪೩. ಸಂದರ್ಶನ ಗುರಪ್ಪ ಹಂಚಿನಾಳ ಒಟ್ಟಮುಖ್ತ್ಯಾರ ಮಹಾಲಿಂಗಪೂರ

೪೪. ಸಂದರ್ಶನ ಬಾಲಪ್ಪ ಹೆಳವರ, ವಯಸ್ಸು ೭೦, ಜಕ್ಕನಟ್ಟಿ

೪೫. ಸಂದರ್ಶನ, ಕೃಷ್ಣಪ್ಪ ದೇಸಾಯಿ ವಯಸ್ಸು ೬೦, ಹನಗಂಡಿ

೪೬. ಭಾರತ ಇತಿಹಾಸ ಸಂಶೋಧನ ಮಂಡಳಿಯವರು ಒದಗಿಸಿದ ಮಾಹಿತಿಯಿಂದ

೪೭. ಸಂದರ್ಶನ ಶಂಕರಪ್ಪ ದೇಸಾಯಿ ೪೦, ಮನಹಳ್ಳಿ, ತಾ.ಬಾಗಲಕೋಟಿ

೪೮. ಇನಾಂ ಕಮೀಷನ್ ದಾಖಲೆಯಿಂದ

೪೯. ಸಂದರ್ಶನ ಬುಜಂಗರಾವ ದೇಸಾಯಿ ಗಿರಿಸಾಗರ ಹಾಲಿವಸ್ತಿ ಬಾಗಲಕೋಟಿ

೫೦. ಅದೇ.

೫೧. ಸಂದರ್ಶನ ಡಾ.ಅಬ್ದುಲ್‌ಗಣಿ ಇಮಾರತವಾಲೆ, ವಯಸ್ಸು ೪೯, ಬಿಜಾಪೂರ

೫೨. ಇನಾಂ ಕಮೀಷನ್ ದಾಖಲೆಗಳಿಂದ

೫೩. ಪರ್ಶಿಯನ್ ಸನದು, ಕನ್ನಡಕ್ಕೆ ಡಾ.ಅಬ್ದುಲ್‌ಗಣಿ ಇಮಾರತವಾಲೆ, ಬಿಜಾಪೂರ

೫೪. ಈಶ್ವರಚಂದ ಚಿಂತಾಮಣಿ, ೧೯೯೫, ಪಿ.ಎಂ.ನಾಡಗೌಡರ, ಪು.೬೪

೫೫. ಸಂದರ್ಶನ ರಾಮಣ್ಣಾ ಕೌಜಗನೂರ, ಮುಧೋಳ

೫೬. ಸಂದರ್ಶನ ಯುವರಾಜ ದೇಸಾಯಿ ಹಾಗೂ ಹೂಗಾರ ಶಿಕ್ಷಕರು ಐಹೊಳೆ

೫೭. ಸಂದರ್ಶನ ಸಿ.ಎಸ್.ದೇಸಾಯಿ ವಯಸ್ಸು ೬೫, ಸೊನ್ನ ತಾ.ಬೀಳಗಿ

೫೮. ಬರೆದಿಟ್ಟ, ದಾಖಲೆಗಳ ಪುಸ್ತಕ. ಗಲಗಲಿ ಪರಗಣೆ ಎಂಬುದರಿಂದ ತಿಳಿದುಬರುತ್ತದೆ

೫೯. ಸಂದರ್ಶನ ಪುರುಷೋತ್ತಮ ಲೇಲೆ, ವಯಸ್ಸು ೫೨ ಜಮಖಂಡಿ ಸರಕಾರದಲ್ಲಿ ಇವರ ವಂಶಸ್ತರು ಕಾರಬಾರಿಗಳಾಗಿ ಕೆಲಸ ಮಾಡುತ್ತಿದ್ದರು. ಅವರ ವಂಶದವರಾದ ಇವರು ಮಾಹಿತಿ ನೀಡಿದ್ದಾರೆ.

೬೦. ಸಂದರ್ಶನ ಶಂಕ್ರಪ್ಪ ದೇಸಾಯಿ ಯಡಹಳ್ಳಿ ಇಂಗಳಗಿ, ತಾ.ಮುಧೋಳ

೬೧. ಮುಧೋಳ ಘೋರ್ಪಡೆ ಸರಕಾರ ನೀಡಿದ ಹಕ್ಕುಗಳ ರಿಜಿಸ್ಟರ್ ಮ್ಯಾಪ್ ಸಹಿತ ಇದರಲ್ಲಿ ಇರುತ್ತದೆ. ಮೋಡಿ ಬರೆದುದಾಗಿರುತ್ತದೆ.

ಅಧ್ಯಾಯ ೩

ಸಾಂಸ್ಕೃತಿಕ ಸ್ವರೂಪ

೩

ಸಾಂಸ್ಕೃತಿಕ ಸ್ವರೂಪ

೩.೧. ಸಾಮಾಜಿಕ ಸಂಬಂಧಗಳು

ನಮ್ಮ ಸಂಸ್ಕೃತಿಯಲ್ಲಿ ಸಾವಿರಾರು ವರ್ಷಗಳು ಬಾಳಿಕೊಂಡು ಬರುತ್ತಿರುವ ಅನೇಕ ಜಾತಿ ಪಂಥಗಳ ಸಮೂಹವೇ ಒಂದು ವ್ಯವಸ್ಥಿತವಾದ ಸಮಾಜವಾಗಿದೆ. ಇಂಥ ಸಮಾಜದ ನಂಬಿಕೆಗಳು, ನಡವಳಿಕೆಗಳು, ಸಂಬಂಧಗಳನ್ನು ಸಂಸ್ಕೃತಿಯ ಮೂಲ ಅಂಶವೆಂದು ಪರಿಗಣಿಸಲಾಗಿದೆ. ಇಲ್ಲಿ ಸಂಸ್ಕೃತಿ ಎಂಬ ಪದವು ಕೇವಲ ಮಾತಿಗೆ ನಿಲುಕದ, ಜನರು ಅನುಭವಿಸುವ, ಆಚರಿಸುವ ರೀತಿ ನೀತಿಗಳಿಂದ ಹಾಗೂ ಅದರಿಂದ ಪಡೆಯುವ ಅನುಭವಕ್ಕೆ ಕಂಡುಬರುವ ವಿಷಯವೆಂದು ಹೇಳಬಹುದು. ಇಲ್ಲಿ ಪ್ರಮುಖವಾಗಿ ದೇಸಾಯಿಗಳ ನೂರಾರು ವರ್ಷಗಳ ನಡವಳಿಕೆ, ತಿಳವಳಿಕೆ ಹಂಚಿಕೊಂಡ ಪದ್ದತಿಯೆ ಸಮಾಜಕ್ಕೆ ಕೂಡಿಬರುವ ಸಂಸ್ಕೃತಿಯ ಸಂಬಂಧವನ್ನು 'ಸಂಸ್ಕೃತಿ' ಎಂದು ಕರೆದಿರುವುದು. ದೇಸಗತಿ ಮನೆತನಗಳ ಕುಟುಂಬ. ಕುಟುಂಬ ವ್ಯವಸ್ಥೆ ಇವೆಲ್ಲದರ ಕೊಂಡಿಗಳನ್ನು ಅಲ್ಲಲ್ಲಿ ಚಿಗುರೊಡೆದಿರುವ ಕಳ್ಳುಬಳ್ಳಿ ಹಂದರವನ್ನು ವಿವಿಧ ಆಯಾಮಗಳ ಮೂಲಕ ಇಲ್ಲಿ ಕಟ್ಟಿಕೊಡಲಾಗಿದೆ. ದೇಸಗತಿ ಕೌಟುಂಬಿಕ ಸಂಬಂಧಗಳಲ್ಲಿ ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬಗಳು ಕಂಡುಬರುತ್ತವೆ.

೩.೧.೧. ಕೌಟುಂಬಿಕ ಸಂಬಂಧಗಳು

ದೇಸಾಯಿಯವರು ಸಮಸ್ತ ಸಮಾಜದ ಮೇಲೆ ಪರಿಣಾಮ ಬೀರುವ ವ್ಯಕ್ತಿತ್ವವನ್ನು ಹೊಂದಿರುವುದರಿಂದ ಅವಿಭಕ್ತ ಕುಟುಂಬದ ನೇತಾರ(ಮುಖ್ಯಸ್ಥ)ರಂತೆ ನಡೆದುಕೊಳ್ಳುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಅವರ ಕಳ್ಳುಬಳ್ಳಿ(ಆಂತರಿಕ) ಮತ್ತು ಬಾಹ್ಯ ಸಂಬಂಧ ಹೊಂದಿರುವುದರ ಕುರಿತು ಇಲ್ಲಿ ಅಧ್ಯಯನಿಸಲಾಗಿದೆ.

ಕೌಟುಂಬಿಕ ಸಂಬಂಧಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

ಕೌಟುಂಬಿಕ ಸಂಬಂಧಗಳು

- ೧. ಆಂತರಿಕ ಸಂಬಂಧಗಳು
  - ಬಂಧುತ್ವ
    - ಆತ್ಮಬಂಧುತ್ವ
    - ಪಿತೃಬಂಧುತ್ವ
    - ಮಾತೃಬಂಧುತ್ವ
    - ಇತರೆ
- ೨. ಬಾಹ್ಯ ಸಂಬಂಧಗಳು
  - ಆಡಳಿತಾತ್ಮಕ ಸಂಬಂಧ

ದೇಸಗತಿಯವರ ಸಾಮಾಜಿಕ ಜೀವನದ, ವಿವಿಧ ನೆಲೆಗಳನ್ನು ಅಧ್ಯಯನಿಸಲು ಮತ್ತು ವಿಶ್ಲೇಷಿಸಲು ಕುಟುಂಬವನ್ನು ಎತ್ತಿಕೊಂಡಾಗ ಸಾಂಸ್ಕೃತಿಕ ಮಹತ್ವದ ಮೊದಲ ಘಟಕವೆ ಅದಾಗಿದೆ ಎಂಬುದು ತಿಳಿದು ಬರುತ್ತದೆ. ಅಲ್ಲದೇ ಕುಟುಂಬವು ಕಾಲಾನುಕ್ರಮವಾಗಿ ಬದಲಾಗುತ್ತ ತನ್ನ ವ್ಯಾಪ್ತಿಯನ್ನು ಕುಗ್ಗಿಸಿಕೊಳ್ಳುತ್ತ ಅಲ್ಲದೆ ಹಿಗ್ಗಿಸಿಕೊಳ್ಳುತ್ತಾ ಬಂದಿರುವುದು ಕಾಣುತ್ತದೆ. ಅಂದರೆ ಕುಟುಂಬವು ಚಲನಾತ್ಮಕ ಘಟಕವಾಗಿದ್ದನ್ನು ಇಲ್ಲಿ ಗ್ರಹಿಸಬಹುದಾಗಿದೆ.

ಕುಟುಂಬವೆಂದರೆ ತಂದೆ, ತಾಯಿ, ಮಕ್ಕಳು, ಮೊಮ್ಮಕ್ಕಳು ಮತ್ತು ಆಶ್ರಿತರು ಹೀಗೆ ಬಂಧುಗಳ ಒಂದು ಗುಂಪಿಗೆ ಕುಟುಂಬವೆನ್ನಬಹುದು. ಅವಿಭಕ್ತ ಕುಟುಂಬಗಳು ದೇಸಗತಿ ಮನೆತನಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಒಂದರ ಪೀಳಿಗೆಯ ಕೊಂಡಿಗಳಾದ ಮಕ್ಕಳು ಮೊಮ್ಮಕ್ಕಳಲ್ಲದೆ ಮರಿಮಕ್ಕಳು ಹೀಗೆ ಒಂದೆ ಸೂರಿನಡಿಯಲ್ಲಿ ವಾಸಿಸುವುದು ಎಂದರ್ಥವಾದರೂ ದೇಸಗತಿಯವರು ಹೊಂದಿದ ವಾಡೆಯಲ್ಲಿಯೆ ವಿಭಕ್ತ ಕುಟುಂಬವಾಗಿ ವಾಸಿಸುವುದು ಇತ್ತೀಚೆಗೆ ಕಂಡುಬರುತ್ತದೆ. ದಿನನಿತ್ಯದ ಜೀವನದಲ್ಲಿ ಎಂದಿನಂತೆ ಕೂಡಿ ಒಂದೆ ಕುಟುಂಬದ ಸದಸ್ಯರಂತೆ ಜೀವಿಸುವ ಪರಿಪಾಠವಿದೆ. ಹಾಗೆ ಊರೊಟ್ಟಿನ ಸಂಬಂಧಗಳು, ಮಾಂಡಲೀಕ ಅರಸರೊಂದಿಗಿನ ಸಂಬಂಧಗಳೂ ಕೂಡ ಇಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಅವೆಲ್ಲವನ್ನು ಒಟ್ಟಾರೆಯಾಗಿ ಇಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.

೩.೧.೨. ಬಂಧುತ್ವ

ಬಹು ಸಂಬಂಧಗಳನ್ನು ಹೆಣೆದುಕೊಂಡಿರುವ ಬಿಡಿಸಲಾರದ ಬಂಧನವೆ ಬಂಧುತ್ವವೆನಿಸಿಕೊಳ್ಳುತ್ತದೆ. ಬಂಧುತ್ವ ಅನೇಕ ಕುಟುಂಬಗಳ ಸಮ್ಮಿಳಿತ ಸಮೂಹವಾಗಿದೆ. "ಕುಟುಂಬವು ಸಾಮಾಜಿಕ ಸಂಘಟನೆಯ ಮೂಲಭೂತ ಘಟಕವಾಗಿದ್ದರೆ ಬಂಧುತ್ವವು ಅಸಂಘಟನೆಯ ಸೂತ್ರವಾಗಿತ್ತೆನ್ನಬಹುದು."[೧] ಸಾಮಾಜಿಕ ಸಂಬಂಧಗಳಲ್ಲಿ ಬಂಧುತ್ವವೂ ಬಹುಮುಖ್ಯ ಪಾತ್ರವಹಿಸುತ್ತದೆ. ಇಂಗ್ಲೀಶಿನ (Kinship) ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಬಂಧುತ್ವದ ಪದ ಬಳಕೆಯಲ್ಲಿದೆ. ಬಂಧುತ್ವದ ಒಳಗಡೆ ಅನೇಕ ಬಳಗಗಳಿವೆ. ರಕ್ತ ಸಂಬಂಧಿ, ಕಳ್ಳುಬಳ್ಳಿ, ನೆಂಟರು ಇತ್ಯಾದಿ ಬಂಧುತ್ವದ ಸಂಬಂಧದಿಂದ ಜೀವನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕಾದರೆ ವ್ಯಕ್ತಿ ಇತರರ ಮೇಲೆ ಅವಲಂಬಿಸಬೇಕಾಗುತ್ತದೆ. ಬಂಧುತ್ವವು ಹುಟ್ಟಿನಿಂದಲೇ ಬರುವುದು. ಪಾಲಕರ ಪೋಷಕರ ಸಂಪರ್ಕದಿಂದ ಅದು ವೃದ್ಧಿಯಾಗುವುದು. ಕುಟುಂಬದ ಮೂಲ ಉದ್ದೇಶ ಸಂತಾನೋತ್ಪತ್ತಿಯ ಕಾರ್ಯ ಮಾತ್ರವಾಗಿರದೆ ಬಂಧುತ್ವವನ್ನು ಗೊತ್ತು ಪಡಿಸುವುದೂ ಆಗಿದೆ. ವ್ಯಕ್ತಿಯ ವೈವಾಹಿಕ ಸಂಬಂಧವು ಕ್ರಮೇಣ ಸಾಮಾಜಿಕ ಬಂಧುತ್ವದೊಡನೆ ಸಮೀಕರಣಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಸಂಬಂಧಗಳು ಸಾಂಸ್ಕೃತಿಕ ಅಧ್ಯಯನಕ್ಕೆ ಮೂಲ ಆಕರಗಳಾಗುತ್ತವೆ.

ಬಂಧುತ್ವದ ಒಳಗಡೆ ಸೇರಿರುವ ಅಂಶವನ್ನು ವಿಭಾಗೀಕರಿಸಿಕೊಂಡು ಈ ಕೆಳಗಿನಂತೆ ಕಾಣಬಹುದಾಗಿದೆ. ಅದೆಂದರೆ

"೧. ಆತ್ಮತ್ರಯ ಬಂಧುತ್ವ ೨. ಪಿತೃ ಬಂಧುತ್ವ ೩. ಮಾತೃಬಂಧುತ್ವ"[೨]

ಈ ರೀತಿ ಗುರುತಿಸಿದಾಗಲೂ ಸಹ ಇವುಗಳಲ್ಲಿಯೆ ಒಂದೊಂದರಲ್ಲಿ ಅನೇಕ ಕವಲುಗಳಿವೆ. ಅವೆಲ್ಲವನ್ನೂ ಗಮನಿಸಿದಾಗ ಅದರೊಳಗಿನ ಸಂಬಂಧಗಳನ್ನು ಸ್ಪಷ್ಟವಾಗಿ ಗುರ್ತಿಸಲು ಸಾಧ್ಯವಾಗುತ್ತದೆ. ಪ್ರಮುಖವಾಗಿ ದೇಸಗತಿ ಮನೆತನದಲ್ಲಿ ಬಾಹು ಬಂದರಲ್ಲಿ ದತ್ತಕ ಪಡೆಯುತ್ತಿರುವುದರಿಂದ ಈ ಮೂರು ಬಂಧುತ್ವವು ದೇಸಗತಿಯ ವಂಶೋದ್ಧಾರಕ್ಕೆ ಸಹಕಾರಿಯಾಗಿವೆ. ಈ ಕಾರಣದಿಂದಲೇ ಬಂಧುತ್ವದೊಳಗಿನ ಸಂಬಂಧವನ್ನು ಬಿಡಿಸಿ ನೋಡುವುದು ಸೂಕ್ತವೆನಿಸುತ್ತದೆ.

೧. ಆತ್ಮ ಬಂಧುತ್ವ

ಎಂದರೆ ತಂದೆಯ ಭಗೀನೀಯ ಪುತ್ರರು, ತಾಯಿಯ ಭಗೀನೀಯ ಪುತ್ರರು, ಸೋದರ ಮಾವನ ಪುತ್ರರು ಇವರು ಆತ್ಮಸಂಬಂಧಿಕರು ಆಗಿರುತ್ತಾರೆ.

೨. ಪಿತೃ ಬಂಧುತ್ರಯರು

ಇವರೆಂದರೆ ಪಿತಾಮಹ(ತಂದೆಯ ತಂದೆ) ಇವನ ಅಕ್ಕತಂಗಿಯರ ಪುತ್ರ, ತಂದೆಯ ಮಾತೃವಂಶ (ತಾಯಿಯ ಅಕ್ಕ ಅಥವಾ ತಂಗಿ) ಇವರ ಪುತ್ರ, ತಂದೆಯ ಸೋದರಮಾವನ ಪುತ್ರ ಇವರು ಪಿತೃ ಸಂಬಂಧಿತರಾಗಿರುತ್ತಾರೆ.

೩. ಮಾತೃ ಬಂಧುತ್ರಯ

ಇವರೆಂದರೆ ತಾಯಿಯ ಮಾತೃವಂಶ (ತಾಯಿಯ ಅಕ್ಕ ಅಥವಾ ತಂಗಿ) ಇವರ ಪುತ್ರ, ತಾಯಿಯ ಸೋದರ ಮಾವನ ಪುತ್ರ ಇವರೆಲ್ಲರೂ ಮಾತೃ ಬಂಧುತ್ವದವರು ಆಗಿರುತ್ತಾರೆ.

ಇವೆಲ್ಲ ಸಂಬಂಧಗಳು ಒಂದರಲ್ಲೊಂದು ಬೆಸೆದುಕೊಂಡಿವೆ. ಇವೆಲ್ಲವುಗಳ ಸಂಬಂಧದ ಒಳಗಡೆ ದತ್ತಕ ಪಡೆಯುವ ಪ್ರಕ್ರಿಯೆ ಮುಂದುವರಿದುಕೊಂಡು ಬಂದಿದೆ. ಕೆಲವು ಕಡೆಗೆ ಅನ್ಯ ಕಾರಣದಿಂದ ಕಳಚಿಕೊಂಡಿದೆ. ಮತ್ತೆ ಬೇರೆ ಬಂಧುತ್ರಯದಲ್ಲಿ ದತ್ತಕ ಪಡೆದುದು ಅಲ್ಲಲ್ಲಿ ಮುಂದುವರಿದಿದೆ.

ಒಟ್ಟಾರೆ ವ್ಯಕ್ತಿ ಮತ್ತು ಕುಟುಂಬಗಳು ಒಟ್ಟಿಗೆ ಬಾಳುವೆ ನಡೆಸಲು ಅನುಕೂಲವಾಗುವ ಒಂದು ವ್ಯವಸ್ಥೆಯನ್ನು ಬಂಧುತ್ವ ಕಲ್ಪಿಸುತ್ತದೆ. ಬಂಧುತ್ವದ ಗಾತ್ರ ಮತ್ತು ಕಾರ್ಯಕ್ಷೇತ್ರದಲ್ಲಿ ಕುಟುಂಬಕ್ಕಿಂತಲೂ ಮಿಗಿಲಾದದ್ದು. ಈಗಾಗಲೇ ಚರ್ಚಿಸಿದಂತೆ ಸುಲಭವಾಗಿ ಬಿಡಿಸಿಕೊಳ್ಳಲಾಗದ ಸಂಬಂಧಗಳು ಸಾಕಷ್ಟು ವಿಸ್ತಾರವಾದ ಬಲೆಯಾಗಿರುತ್ತದೆ. ಇದು ಸಾಮಾಜಿಕ ಸಂಬಂಧಗಳಂತೆಯೆ ಒಂದು ಸಮುದಾಯದಿಂದ

ಮತ್ತೊಂದು ಸಮುದಾಯದಲ್ಲಿಯೆ ಏರ್ಪಡುತ್ತಿತ್ತೆನ್ನಬಹುದು. ಪ್ರಸ್ತುತ ಅದೆ ಜಾತಿ ಮತ ಪಂಥಗಳಲ್ಲಿಯೆ ಸಂಬಂಧವೇರ್ಪಡುವುದು ಕಂಡುಬರುತ್ತದೆ. ಇದು ಎಲ್ಲಿಯೋ ಒಂದು ಕಡೆಗೆ ಬೆಸೆದುಕೊಂಡಿದ್ದು ಪರಸ್ಪರ ವಹಿವಾಟುಗಳು ಇಲ್ಲದ್ದರಿಂದ ಅದು ಕಳಚಿಕೊಂಡಿರಬಹುದಾಗಿದೆ. ಈ ರೀತಿಯಲ್ಲಿ ಬಂಧುತ್ವದ ಸಂಬಂಧಗಳು ಮತ್ತು ಸಾಮಾನ್ಯ ಚಟುವಟಿಕೆಗಳು ಪರಸ್ಪರ ಸಂಬಂಧ ಹೊಂದಿದ್ದವು. ಬಂಧುತ್ವದಲ್ಲಿ "ಅನೇಕ ಸಮೂಹಗಳಿದ್ದವೆಂದು"[೬] ತಿಳಿದುಬರುತ್ತದೆ. ಅವೆಂದರೆ ಏಕಪಕ್ಷೀಯ ಬಂಧುತ್ವ, ಉಭಯ ಬಂಧುತ್ವ, ಏಕಬಂಧುತ್ವ, ಸಮಾನ ಬಂಧುತ್ವ ಇನ್ನೂ ಮೊದಲಾದ ಬಂಧುತ್ವದ ರೂಪಗಳಿದ್ದವೆಂದು ಡಾ.ಚಿನ್ನಸ್ವಾಮಿ ಸೊಸಲೆ ಉಲ್ಲೇಖಿಸಿದ್ದಾರೆ.

"ತಂದೆ ಅಥವಾ ತಾಯಿ ಮುಖಾಂತರ ವಂಶವನ್ನು ನಿರ್ಧರಿಸಿದರೆ ಆ ಬಂಧುತ್ವವು ಏಕಪಕ್ಷೀಯ ಆಗಿರುತ್ತಿತ್ತು. ಒಂದು ವೇಳೆ ತಂದೆ ಮತ್ತು ತಾಯಿಯರಿಬ್ಬರನ್ನೂ ನಿರ್ಧರಿಸಿದರೆ ಅಂಥದನ್ನು ಉಭಯ ಪಕ್ಷೀಯ ಎಂದು ಕರೆಯಲಾಗುತ್ತಿತ್ತು." ಹೀಗೆ ಬಂಧುತ್ವ ತನ್ನ ವ್ಯಾಪ್ತಿಯನ್ನು ಹೊಂದಿದ್ದು ತಿಳಿದು ಬರುತ್ತದೆ.

ಇವರ ಒಳಗಡೆ ಎರಡು ವಿಧಗಳನ್ನು ಗಮನಿಸಬಹುದಾಗಿದೆ. ಅವೆಂದರೆ ರಕ್ತಸಂಬಂಧಗಳು ಮತ್ತು ಕಳ್ಳುಬಳ್ಳಿ ಸಂಬಂಧಗಳು.

೩.೧.೩. ರಕ್ತ ಸಂಬಂಧಗಳು

ಇದೂ ಕೂಡ ಬಂಧುತ್ವದ ಒಂದು ಘಟಕವೆ ಆಗಿದೆ. ಇವು ಒಂದರಿಂದೊಂದು ತಳಕು ಹೊಂದಿ ಇರುತ್ತವೆ. ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ ಇವು ನೇರವಾಗಿ ರಕ್ತ ಸಂಬಂಧಕ್ಕೆ ಸಂಬಂಧಿಸಿರುತ್ತವೆ. ಇವರ ಮೂಲಕ ವಂಶವನ್ನು ನಿರ್ಧರಿಸಬಹುದಾಗಿದೆ. ಇವುಗಳಲ್ಲಿ ಸಹ ಅತ್ತೆ-ಮಾವ, ಅಳಿಯ-ಭಾವ, ಮೈದುನ, ಚಿಕ್ಕಮ್ಮ-ಚಿಕ್ಕಪ್ಪ, ನಾದಿನಿ-ನೆಗೆಣ್ಣಿ ಇಂತಹ ಬಂಧು ಸೂಚಕಗಳು ವಿವಾಹದಿಂದ ಇಲ್ಲವೆ ಆಪ್ತತೆಯಿಂದ ಸೃಷ್ಟಿಯಾಗುತ್ತವೆ. ಇವುಗಳಿಗೆ ಆನುಷಂಗಿಕ ಸಂಬಂಧಗಳೆಂದು ಕರೆಯುವರು."[೭]

೩.೧.೪. ಕಳ್ಳುಬಳ್ಳಿ ಸಂಬಂಧಗಳು

ಇದೂ ಕೂಡ ವಿವಾಹದಿಂದ ಇಲ್ಲವೆ ಆಪ್ತತೆಯಿಂದ ಹೆಣೆಯಲ್ಪಟ್ಟಿರುತ್ತದೆ. ತಂದೆಗಿಂತ ಚಿಕ್ಕವರು, ತಾಯಿಗಿಂತ ಚಿಕ್ಕವರು, ಅಂದರೆ ಚಿಕ್ಕಮ್ಮ ಚಿಕ್ಕಪ್ಪ ಅಪ್ಪನ ತಂಗಿ, ಅಕ್ಕ, ಅಣ್ಣನ ಮಕ್ಕಳು ಮುಂತಾದ ಸಂಬಂಧಗಳನ್ನು "ಕಳ್ಳುಬಳ್ಳಿ ಎಂದು ಕರೆಯುವರು."[೮]

ಒಟ್ಟಾರೆಯಾಗಿ ರಕ್ತ ಸಂಬಂಧಗಳು, ಕಳ್ಳುಬಳ್ಳಿ ಸಂಬಂಧಗಳು ಸೌಹಾರ್ದಯುತವಾದ ಜೋಡಣೆಗೆ ಸಾಮಾಜಿಕ ಅಂತರ್ ಕ್ರಿಯೆಗೆ ಸಹಾಯ ಮಾಡಿ ಕೊಡುತ್ತವೆಯಲ್ಲದೆ ಸಮುದಾಯದಲ್ಲಿ ಸ್ನೇಹಪರ

ವಾತಾವರಣವನ್ನು ಪೋಷಿಸುತ್ತವೆ. ವ್ಯಕ್ತಿಗಳನ್ನು ಒಗ್ಗೂಡಿಸುವ ಪ್ರಾಥಮಿಕ ಬಂಧನವೆ ಆಗಿರುತ್ತದೆ. ದೇಸಗತಿ ಮನೆತನದಲ್ಲಿಯೇ ಇಂಥ ಕ್ರಿಯಾತ್ಮಕ ಪ್ರಕ್ರಿಯೆ ನಡೆದಿರುತ್ತದೆ. ರಾಜಮಹಾರಾಜರಾದಿಯಾಗಿ ತಮ್ಮ ವಂಶ ಬೆಳವಣಿಗೆಗೆ, ತಮಗೆ ಗಂಡು ಮಕ್ಕಳಿಲ್ಲದ ಪಕ್ಷದಲ್ಲಿ ತನ್ನ ಬಂಧುಗಳ ಪೈಕಿ ಒಬ್ಬರನ್ನು ದತ್ತುವಾಗಿ ಸ್ವೀಕರಿಸಿ ಕಾನೂನಿನ ಪ್ರಕಾರ ತಂದೆಯೆನಿಸಿಕೊಳ್ಳುತ್ತಾನೆ. ದತ್ತು ಪುತ್ರ ಎಲ್ಲ ಹಕ್ಕು ಬಾಧ್ಯತೆಗಳಿಗೆ ಒಡೆಯನಾಗುತ್ತಾನೆ. ಆದ್ದರಿಂದಲೇ ಬಂಧುತ್ವದ ನಿರ್ಣಯದಲ್ಲಿ ಸಾಮಾಜಿಕ ಮನ್ನಣೆ ಪ್ರಧಾನವಾದುದಾಗಿದೆ. ಇವೆಲ್ಲ ಅಂಶಗಳು ಗೌಣವಾಗಿರುವುದರಿಂದ ಕುಟುಂಬ ವ್ಯವಸ್ಥೆಯ ಸ್ವರೂಪಕ್ಕೆ ಬಂಧುವಾಚಕಗಳ ಬಳಕೆಯಿಲ್ಲ, ಬಂಧು ಸಮೂಹಗಳ ಸಾಂಸ್ಕೃತಿಕ ಆಯಾಮಗಳು ತುಂಬ ಸ್ವಾರಸ್ಯಕರವಾಗಿರುತ್ತವೆ. ಹಾಗೆ ಊರೊಟ್ಟಿನ ಸಂಬಂಧ, ರಾಜರುಗಳೊಂದಿಗೆ, ಮಾಂಡಲಿಕ ಅರಸರೊಂದಿಗೆ ದೇಸಾಯಿಯವರು ಸಾಮಾಜಿಕ ಸಂಬಂಧಗಳನ್ನು ಹೊಂದಿದ್ದರ ಕುರಿತು ಇಲ್ಲಿ ತಿಳಿದು ಬರುತ್ತದೆ.

೩.೧.೫. ಇತರೆ ಸಂಬಂಧಗಳು

ಬಾಗಲಕೋಟೆ ಜಿಲ್ಲೆಯ ಎಲ್ಲ ದೇಸಗತಿಗಳು ತಮ್ಮ ಸಂಬಂಧ ವಹಿವಾಟನ್ನು ಬಹುದೂರದವರೆಗೆ ಹಬ್ಬಿಸಿವೆ. ಕರ್ನಾಟಕ ಅಲ್ಲದೆ ಮಹಾರಾಷ್ಟ್ರ, ತಮಿಳುನಾಡು, ಆಂಧ್ರದವರೆಗೂ, ವರ್ತಮಾನದಲ್ಲಿ ಅಮೇರಿಕದವರೆಗೂ ಪಸರಿಸಿ ಸಂಬಂಧವನ್ನು ಘಟ್ಟಿಗೊಳಿಸಿಕೊಂಡಿದೆ.

ಬಾದಾಮಿ ತಾಲೂಕಿನ ಜಾಲಿಹಾಳ, ಐಹೊಳೆ, ಪಟ್ಟದಕಲ್ಲ, ಅವಿಭಜಿತ ಜಿಲ್ಲೆಯ ಗಣಿ ದೇಸಗತಿಯವರೂ ಸಹ ಆನೆಗೊಂದಿ ಅರಸೊತ್ತಿಗೆಯಿಂದ ವಿಜಯನಗರದ ರಾಮರಾಯನೊಂದಿಗೆ ಸಂಬಂಧ ಹೊಂದಿದ್ದಾರೆ. ಆದಿಲ್‌ಶಾಹಿಗಳ ಮತ್ತು ಪೇಶ್ವೆಗಳೊಂದಿಗೆ ಮಧುರ ಸಂಬಂಧಗಳನ್ನಿಟ್ಟು ಕೊಂಡಿದ್ದರು. ಪರಗಣ ಸಮತ್‌ಗಳಲ್ಲಿ ಸ್ಥಾನಿಕ ಗೌಡಕಿ, ದೇಶಪಾಂಡೆ ಕುಲಕರ್ಣಿ ಪಡೆದು ಒಳ ಆಡಳಿತ ಮಾಡಿದ್ದಿದೆ. ಕಾಲ ಕಾಲಕ್ಕೆ ಬದಲಾಗುವ ರಾಜಕೀಯ ಬದಲಾವಣೆಗಳನ್ನು ಸಹ ಮೂಲ ದೇಸಗತಿಯಿಂದ ಪಡೆಯುತ್ತ ಆಡಳಿತ ನಡೆಸಿವೆ. ತಮ್ಮ ಬಾಹುಬಂದರಿಗೆ 'ಅವಳಿ ಸಂಬಂಧಗಳಿಗೆ'[೬] ಹಕ್ಕು ವರ್ತನೆಗಳನ್ನು ನೀಡುವುದಲ್ಲದೆ ತಮ್ಮ ಅನುಸರಣೆಯ ನೀತಿ ಸೂತ್ರಗಳನ್ನು ಹಾಗೂ 'ಸಂಸ್ಕೃತಿ' ವಿನಿಮಯಗಳನ್ನು ಸಹ ಹಂಚಿಕೊಂಡಿದ್ದಾರೆ. ಮರೆತು ಹೋದ ಕಳ್ಳು-ಬಳ್ಳಿ ಸಂಬಂಧವು ಪುನಃ ಬೆಸುಗೆಯಿಂದ ಕೂಡಿಕೊಂಡದ್ದು ಇದೆ.

ಗಣಿ ದೇಸಾಯಿಗಳು ರಾಮರಾಯನ ವಂಶಸ್ಥರೊಡನೆ ವೈವಾಹಿಕ ಸಂಬಂಧ ಬೆಳೆಸಿದ್ದು ಮೂರು ತಲೆಮಾರುಗಳವರೆಗೆ ಮುಂದುವರಿದುಕೊಂಡು ಬಂದಿದೆ. ನಂತರದಲ್ಲಿ ಸೊಲ್ಲಾಪುರ ಹೈದ್ರಾಬಾದ ಕಡೆಗೆ ವೈವಾಹಿಕ ಸಂಬಂಧವನ್ನು ಹೊಂದಿದ್ದು ಅವರ ವಂಶಾವಳಿಯಿಂದ ತಿಳಿದುಬರುತ್ತದೆ.

ಬಾಗಲಕೋಟೆಯ ದೇಸಾಯಿಯಾದ (ಮನ್ನಿಕೇರಿ) ಸರದೇಸಾಯಿಯು ಬ್ರಾಹ್ಮಣ ಧರ್ಮಕ್ಕೆ ಸೇರಿದವರಾಗಿದ್ದಾರೆ. ತನ್ನ ಪರಗಣದ ಕಸಬೆಗಳಲ್ಲಿ ಗೌಡಕಿಯನ್ನು ಬಂಧುಗಳಿಗೆ ಹಂಚಿ ಅಧಿಕಾರ

ನೀಡಿದ್ದು ಇದೆ. ಅಲ್ಲದೆ "ಪೇಶ್ವೆಗಳೊಂದಿಗೆ ವೈವಾಹಿಕ ಸಂಬಂಧ"[೭] ಹೊಂದಿದೆ. ಇದರಿಂದ ಈ ಮನೆತನದ ಇಬ್ಬರು ವ್ಯಕ್ತಿಗಳಿಗೆ ಪೇಶ್ವೆ ಪಟ್ಟ ದೊರಕಿದೆ. ಒಬ್ಬನು ಕೃಷ್ಣರಾವ್, ಇನ್ನೊಬ್ಬ ಮಾಧವರಾವ್ ಆಗಿದ್ದಾನೆ. "ಕೃಷ್ಣರಾವ ಎನ್ನುವವನು ೧೮೨೦ ರಿಂದ ೧೮೨೨ರ ಅವಧಿಯಲ್ಲಿ ನಾಲ್ಕನೆ ದಿವಾನನಾಗಿದ್ದಾನೆ".[೮] ಇದರಿಂದ ಪೇಶ್ವೆಗಳ ಹಾಗೂ ಮಾಂಡಲಿಕರೊಂದಿಗೆ ಸ್ನೇಹಪರ ಸಂಬಂಧವು ಏರ್ಪಟ್ಟಿತ್ತೆಂದು ತಿಳಿದುಬರುತ್ತದೆ. ಕೆರೂರ ಸಂಗೋರಾಯನಿಗೆ ಮಗಳನ್ನು ಮದುವೆ ಮಾಡಿಕೊಟ್ಟು, ಹೂಲಗೇರಿ ಹಾಗೂ ಇನ್ನಿತರ ಗ್ರಾಮಗಳನ್ನು ಉಂಬಳಿಯಾಗಿ ನೀಡಿದರು. ಇದರಿಂದ ಕೆರೂರ ಸಂಗೋರಾಯನಿಗೆ ದೇಶಪಾಂಡೆಗಿರಿ ಕೊಟ್ಟರು. ಅಂದಿನಿಂದ ಇಂದಿನವರೆಗೂ ಹೂಲಿಗೇರಿ ದೇಸಾಯಿಗಳೆಂದೇ ಕರೆಸಿಕೊಳ್ಳುತ್ತಾರೆ. ಕೆರೂರ ಸಂಗೋರಾಯನ ಕುಟುಂಬ ಸಂಬಂಧಿಗಳು ವತನ ಸಂಪಾದನೆ ಮಾಡಿ ಆದಿಲ್‌ಶಾಹಿಯ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ೧೬ ಗ್ರಾಮಗಳ ಅಧಿಕಾರ ಹೊಂದಿದ್ದರೆಂಬುದು ಅವರು ಬರೆದು ದಾಖಲಿಸಿದ ವಂಶಾವಳಿ ಡೈರಿಯಿಂದ ತಿಳಿದುಬರುತ್ತದೆ.

ಹುನಗುಂದ ತಾಲೂಕಿನ ರಕ್ಕಸಗಿ ಹಾಗೂ ಅಮರಾವತಿ, ಕೊಡಗಲಿ, ಹುಲಗಿನಾಳ, ಮರೋಳ, ದೇಸಗತಿಗಳು ಒಂದಕ್ಕೊಂದು ಬಂಧ ಸೂಚಕವಾದ ಸಂಬಂಧಗಳನ್ನು ಹೊಂದಿವೆ. ಮೂಲ ರಕ್ಕಸಗಿ ದೇಸಗತಿ ಈಗಿನ ಅಮೀನಗಡ ಬೆಟ್ಟದ ಮೇಲೆ ಗಹನದುರ್ಗ ಎನಿಸಿತ್ತು. ಅಲ್ಲದೇ ಸಮೀಪದ ಸೂಳೇಬಾವಿಯ ಪಾಮಗೌಡನು ಲಕ್ಷ ವರಹ ದೊರೆ ಎನಿಸಿದ್ದನು. ಸೂಳೇಬಾವಿ ಸಮತ್ ಪರಗಣವೂ ಆಗಿತ್ತು. ಪಾಮಗೌಡನು ಸಮೀಪದ ಕ್ಷತ್ರೀಯ ದೇಸಗತಿಯ "ಐಹೊಳೆ ದೇಸಾಯರ ಮಗಳನ್ನು ಉಪಪತ್ನಿಯಾಗಿ ಸ್ವೀಕರಿಸಿ"[೯]ದನು ಇದರಿಂದ ಎರಡೂ ಮನೆತನಗಳ ಸಂಬಂಧ ಬೆಸೆದುಕೊಂಡಿತ್ತು. ಇದು ಅಂತರ್ ಜಾತಿ ವಿವಾಹಕ್ಕೆ ಮಾದರಿಯಾಗಿದೆ. ಜಾತಿ ಬೇಧವೆನಿಸದೆ ಹಬ್ಬ ಹರಿದಿನಗಳು ಅನೇಕ ಉತ್ಸವಗಳಲ್ಲಿ ಒಬ್ಬರಿಗೊಬ್ಬರು ಸಹಾಯವಾಗುತ್ತಿದ್ದ ಬಗ್ಗೆ ಹಿರಿಯ ತಲೆಮಾರಿನ ಹೂಗಾರ ಶಿಕ್ಷಕರಿಂದ ತಿಳಿದುಬರುತ್ತದೆ. ಬಹುತೇಕ ದೇಸಾಯಿಗಳು "ಸುಗಟೂರ(ಪುಂಗನೂರ) ಅರಸು ಮನೆತನದ ಜೊತೆಗೆ ಸಂಬಂಧ ಬೆಳೆಸಿದ್ದು ಇದೆ."[೧೦]

ಪುಂಗನೂರ ಅರಸರು ತಮ್ಮ ಮಗಳನ್ನು ಧಾರೆಯೆರೆದು ಕೊಡುವುದಲ್ಲದೆ ತಮ್ಮ ಮಗಳ ಸೇವೆಗಾಗಿ ಅವಳ ತಲೆ ಬಾಚಲು ಇಬ್ಬರು ಸೇವಕಿಯರನ್ನು ಕಳಿಸಿದ್ದು ವಿಶೇಷ ಸಂಗತಿಯಾಗಿದೆ. ಹಲಗಲಿ ಸರನಾಯಕರ ಅರಮನೆಯನ್ನು ತಮ್ಮ ರಾಜಸಂಸ್ಕೃತಿಯಂತೆ ಬದಲಾಯಿಸಿ ಮಗಳಿಗೆ ತೊಂದರೆಯಾಗದಂತೆ ನೋಡಿಕೊಂಡರೆಂದು ಹಿರಿಯರಿಂದ ತಿಳಿದುಬರುತ್ತದೆ.

ಹಾಗೆ ಬಾದಾಮಿ ತಾಲೂಕಿನ ಕೂಳಗಿರಿ > ಕೊಳಗೇರಿ > ಕುಳಗೇರಿಯ ಜಮೀನದಾರನಿಗೆ, ಜವಳಗಿರಿಯ ಅರಸು ಮನೆತನದಿಂದ ಕೆರಕಲಮಟ್ಟಿ ನಾಡಗೌಡರಿಗೆ ಇತರೆ ನಾಡಗೌಡರಿಗೆ ವೈವಾಹಿಕ

ಸಂಬಂಧ ಬೆಳೆದಿತ್ತು. ಒಟ್ಟಾರೆಯಾಗಿ ಗಂಡು-ಹೆಣ್ಣು ಕೊಡುವುದು ಮತ್ತು ತೆಗೆದುಕೊಳ್ಳುವ ವೈವಾಹಿಕ ಸಂಬಂಧ ಕಾರಣವಾಗಿ ಹೈದರಾಬಾದ್, ತಮಿಳುನಾಡ ಅರಸು ಮನೆತನಗಳೊಂದಿಗೂ ದೇಸಾಯರ ನಿಕಟವಾದ ಸಂಬಂಧ ಮುಂದುವರೆದುಕೊಂಡು ಬಂದಿದೆ.

ಬಿಜಾಪೂರ ಜಿಲ್ಲೆಯ ಈಗಿನ ಕೋಲ್ಹಾರ ದೇಸಗತಿಯು ಗಿರಿಸಾಗರ ದೇಸಗತಿಯ ಸಮತ್ ಪರಗಣವಾಗಿತ್ತು. ಅವರ ವಂಶಸ್ಥನಾದ ಭೋಜನಾಯಕನು ಕೋಲ್ಹಾರ ಪರಗಣೆಯನ್ನು ಆಳುತ್ತಿದ್ದನು. ನಂತರದಲ್ಲಿ ವಿಜಯನಗರದ ಅರಸರಿಗೆ ಸರಿಯಾದ ಆದರೋಪಚಾರ ಮಾಡದೇ ಇರುವಾಗ ಸಂಬಂಧ ಕಡಿಮೆ ಭೋಜನಾಯಕನ ಶಿರಚ್ಛೇದನ ಮಾಡಲು ಆಜ್ಞಾಪಿಸಿದರು. ಅದಕ್ಕೆ ಬಲಿಯಾದವನು ''ಗಾಣಿಗ ಕುಲದ ಅಣ್ಣೇಂದ್ರನೆಂದು ತಿಳಿದುಬರುತ್ತದೆ.''[೧೧]

ಈ ಗಾಣಿಗ ಕುಲದ ದೇಸಾಯಿ ಮನೆತನಗಳು ೫ ರಿಂದ ೬ ಇರುವುದು ಕಂಡು ಬರುತ್ತವೆ. ಇವರೆಲ್ಲರೂ ಕರೇಕುಲದ ಗಾಣಿಗರೆ ಆಗಿದ್ದಾರೆ. ಕೋಲ್ಹಾರ, ಹೊನ್ನಾಳ, ಕೊಣ್ಣೂರ, ಉಪ್ಪಲದಿನ್ನಿ ಹಂಗರಗಿ, ಜಾಡರಲಬಾದಿ, ಮುದ್ದಾಪೂರ ಚೌಡಾಪೂರ, ಸಿಕ್ಕೇರಿ, ಹಾಗೆ ಕೆಲವು ಪಾಟೀಲರೆನ್ನಿಸಿಕೊಂಡ ಮನೆತನದವರು ಇದ್ದಾರೆ. ಇವರೆಲ್ಲರೂ ವೀರಶೈವ ಕರಿಕುಲದವರೆಂದೇ ಹೇಳಿಕೊಳ್ಳುತ್ತಾರೆ. ಅದೃಶ್ಯ ಕವಿಯ ವಂಶಸ್ಥರು ಎಂದು ಹೇಳಿಕೊಳ್ಳುವ ಹೊನ್ನಿಹಾಳ ಸರನಾಡಗೌಡರ ಗಂಗಮ್ಮ ದೇಸಾಯಣಿ ತಮ್ಮ ಸಂಬಂಧಕ್ಕೆ ಬಂಧು ಸೂಚಕವು ಹಲವಾರು ಕಡೆಗೆ ಚಾಚಿಕೊಂಡಿದೆ ಎಂದು ಹೇಳುತ್ತಾರೆ. ಸೊಲ್ಲಾಪೂರ ಹಾಗೂ ಇತರೆಡೆ ಸಂಬಂಧ ಬೆಳೆಸಿಕೊಂಡು ಬಂದಿದ್ದರ ಬಗ್ಗೆ ತಿಳಿದುಬರುತ್ತದೆ.

ಬೀಳಗಿ ತಾಲೂಕಿನ ಗಲಗಲಿಯಡಹಳ್ಳಿ, ಸೊನ್ನ ಕೆಲವು ದೇಸಗತಿಗಳವರು ಜಾತಿ-ಮತ-ಕುಲಧರ್ಮಗಳ ಜೊತೆಗೆ ತಮ್ಮ ಅಂತಸ್ತಿಕೆಗೆ ತಕ್ಕಂತೆ ವೈವಾಹಿಕ ಸಂಬಂಧಗಳನ್ನು ಬೆಳೆಸಿದ್ದು ಇದೆ. ಲಿಂಗಾಯತ ರೆಡ್ಡಿ ಎನ್ನಿಸಿಕೊಳ್ಳುವ ಕೆಲವು ದೇಸಗತಿಗಳವರು ಪಂಚಮಸಾಲಿ > ಪಂಚಮರ ಜೊತೆ ವೈವಾಹಿಕ ಸಂಬಂಧ ಬೆಳೆಸಿದ್ದು ಇದೆ. ಮುಂದೇ ಅದೇ ಮಾದರಿಯಲ್ಲೆ ಈ ಮನೆತನಗಳು ಮುಂದುವರಿದಿದ್ದು ಕಂಡು ಬರುತ್ತದೆ. ರಾಜ ಸಂಸ್ಥಾನೀಕರ ಜೊತೆಗೆ ಸಂಬಂಧ ಹೊಂದಿದ್ದರೂ ಅರಸೊತ್ತಿಗೆಯೊಂದಿಗೆ ನಿಕಟ ಸಂಬಂಧ ಹೊಂದಿದ್ದು ವಿಶೇಷವಾಗಿದೆ. ಜಾತಿಯ ಅಡ್ಡಗೋಡೆ ಬೇಧಿಸಿ ಬಂಧುತ್ವವನ್ನು ಗಟ್ಟಿಗೊಳಿಸುತ್ತಾ ಹೋಗುತ್ತಿವೆ. ಹಾಗೆ ಸ್ನೇಹಪರ ಸಂಪರ್ಕವನ್ನು ಸೂಚಿಸುತ್ತವೆ. ಇಂದಿಗೂ ಸಹ ದೇಸಗತಿ ಎಂಬರ್ಥದಲ್ಲಿಯೆ ಊಟ, ಉಪಚಾರ, ವ್ಯವಹಾರಗಳು ಒಬ್ಬರಿಗೊಬ್ಬರಾಗಿ ನಡೆದುಕೊಂಡು ಬರುತ್ತಿವೆ.

ಪ್ರತಿಯೊಂದು ದೇಸಗತಿಯವರು ಅರಸುಗಳಿಗೆ ಸೈನಿಕ ಸಹಾಯ ಮಾಡಿದ್ದಾರೆ. ನೂರಾರು ಸೈನಿಕರಲ್ಲದೆ ತಾವೂ ಕೂಡ ಭಾಗವಹಿಸಿದ್ದು ತಿಳಿದುಬರುತ್ತದೆ. ಅಲಿ ಆದಿಲ್ ಶಹನ ಆಳ್ವಿಕೆಯಲ್ಲಿ ಈ ಭಾಗದ ದೇಸಾಯಿ ವಂಶಸ್ಥರು ಸೈನಿಕರಾಗಿದ್ದರು. ''ಹಂಡೆ ಹಣಮಿ ನಾಯಕ'' ನೆಂಬುವನು ಹೆಸರಾದವನು. ಹಾಗೆ

ಬೇಡರ ರಂಗನಾಯಕ ಹಾಗೂ ಭರಮನಾಯಕರೆಂಬುವರು ಇದ್ದರು. ಇವರು ನೀರಬೂದಿಹಾಳ ಹಾಗೂ ಐಹೊಳೆ ದೇಸಗತಿಯವರಾಗಿದ್ದಾರೆ. "ಇಮ್ಮಡಿ ಹಣಮಿ ನಾಯಕನ"ನೂ ಒಬ್ಬನೆಂದು ಸಂಶೋಧಕರು ಊಹಿಸಿದ್ದಾರೆ.

ರಂಗನಾಯಕ ಹಾಗೂ ಭರಮನಾಯಕರು ಐಹೊಳೆ ದೇಸಗತಿ ವಂಶಸ್ಥರು. ಅವರ ವಂಶಾವಳಿಯಲ್ಲಿ ಇವರ ಹೆಸರು ಕಂಡುಬರುವುದಿಲ್ಲ. ಬರೆದಿಟ್ಟ ಡೈರಿಯಲ್ಲಿ ಇವರ ಕುರಿತು ತಿಳಿದುಬರುತ್ತದೆ.

"ಮನ್ನಿಕೇರಿ ಕೃಷ್ಣರಾವನು ಸವನೂರ ನವಾಬರ ರಾಜ್ಯದ ನಾಲ್ಕನೆ ದಿವಾಣ" ನೆಂದು ನಿಯಮಿಸಿದ್ದು ಇರುತ್ತದೆ. ಆದರೆ ಮಾಧವರಾವ ಎಂಬುವನು ಪುಣೆಯಲ್ಲಿಯೆ ಇದ್ದು ಅಲ್ಲಿಯೆ ಅವನ ಅಂತ್ಯಕಾಲವಾಯಿತೆನ್ನುತ್ತಾರೆ. ಇವನ ಬಗ್ಗೆ ಹೆಚ್ಚಿನ ಮಾಹಿತಿ ಸಿಗುವುದಿಲ್ಲ.

ಒಟ್ಟಾರೆಯಾಗಿ ಸಾಂಸ್ಕೃತಿಕ ಸಂಬಂಧಗಳು ಬಂಧುತ್ವವನ್ನು ಜೋಡಿಸುವ ಕೊಂಡಿಯಾಗಿದೆ. ಬಿಡಿಸಲಾರದ ಬಂಧನವೇರ್ಪಟ್ಟು ಸಾಂಸ್ಕೃತಿಕತೆಯನ್ನು ಕಟ್ಟಿಕೊಡುತ್ತದೆ. ಸಂಬಂಧವು ಉದ್ದೇಶಿತವಾಗಿಯೆ ಹೊಂದಿದ್ದರಿಂದ ಬಂಧುತ್ವ ಎಳೆಗಳು ಬಹುದೂರದವರೆಗೆ ಹಬ್ಬಿ ಸಂಬಂಧ ಕಲ್ಪನೆ ಕೊಡುತ್ತಿರುತ್ತದೆ. ಸಾಂಸ್ಕೃತಿಕ ಒಂದಂಶವಾದ ಸಾಮಾಜಿಕ ಪ್ರಕ್ರಿಯೆ ಇದು ಚಲನ ಶೀಲತೆ ಪಡೆದು ಅಲ್ಲಲ್ಲಿ ಸಂಸ್ಕೃತಿಯನ್ನು ಬಿಂಬಿಸಲು ಸಹಕಾರಿಯಾಗುತ್ತದೆ. 'ಆಪತ್ಕಾಲದಲ್ಲಿ ಸಹಾಯ ಮಾಡುವವರನ್ನು ಆರುತಾಸ ರಾತ್ರಿಯಾಗ ನೆನೆ' ಎಂಬಂತಹ ಮಾತಿನಲ್ಲಿ ನಮ್ಮ ಸಂಸ್ಕೃತಿ ಅಡಗಿರುವುದಕ್ಕೆ ಸಹಾಯ ಸಹಕಾರ ಬೆಳೆದು ಬಂದದ್ದು ಸಂಬಂಧದಿದ್ದ ಎನ್ನುವುದು ವಿಧಿತವಾಗುತ್ತದೆ.

೩.೧.೬. ಬಹುಪತ್ನಿತ್ವದ ನೆಲೆಗಳು

ಒಬ್ಬ ದೇಸಾಯಿ ಅನೇಕ ಪತ್ನಿಯರನ್ನು ಹೊಂದಿದ ಬಹುಪತ್ನಿತ್ವ ಕುಟುಂಬ ಪದ್ಧತಿ ಕಂಡುಬರುತ್ತದೆ. ವೈವಾಹಿಕ ಚೌಕಟ್ಟಿನಲ್ಲಿ ಮೂಲ ಉದ್ದೇಶಗಳಿಗೆ ದಕ್ಕೆ ಬಂದು ವಿಫಲವಾಗಿ ಕಾಣತೊಡಗಿದಾಗ ಬಹು ಪತ್ನಿತ್ವದ ಆಸರೆ ಅದಕ್ಕೆ ಬೇಕಾಗುತ್ತದೆ. ಅಂದರೆ ಭಾರತೀಯ ಸಂಸ್ಕೃತಿಯಲ್ಲಿ ವಿವಾಹದ ಮೂಲ ಉದ್ದೇಶಗಳೆಂದರೆ ಮಾನವನ ವಂಶಾಭಿವೃದ್ಧಿ ಹಾಗೂ ಅವನ ದೈಹಿಕ ಬೇಡಿಕೆಗಳ ತೃಪ್ತಿ ಪ್ರಮುಖವಾದವುಗಳಾಗಿವೆ. ವಿವಾಹವು ಧಾರ್ಮಿಕ ಸಾಂಸ್ಕೃತಿಕ ಚೌಕಟ್ಟಿನ ರೂಪದಲ್ಲಿ ಏಕಪತಿ ಅಥವಾ ಏಕಸತಿ ಅಳವಡಿಸಿಕೊಳ್ಳುವುದು ಯೋಗ್ಯವಾಗಿದೆ. ಉಪಪತ್ನಿಯರನ್ನು ಅಳವಡಿಸಿಕೊಳ್ಳುವುದು ಒಂದು ಬಗೆಯ ಧಾರ್ಮಿಕ ನೀತಿಯೇ ಆಗಿದೆ. ಉಪಪತ್ನಿತ್ವ ಎನ್ನುವುದು ಮಾನವನ ಪ್ರೀತಿ ಮತ್ತು ಕಾಮಗಳ ವಿಶೇಷ ಸಂದರ್ಭಗಳಲ್ಲಿ ಕೌಟುಂಬಿಕ ಚೌಕಟ್ಟನ್ನು ಮೀರಿ ನಡೆಯುವುದಾಗಿತ್ತು. ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯರ ಮೇಲೆ ಕಟ್ಟುನಿಟ್ಟಿನ ನಿಬಂಧನೆಗಳು ಇದ್ದುದರಿಂದ ಉಪಪತಿತ್ವ ಬೆಳೆಯುವುದು ಸಾಧ್ಯವಾಗಿಲ್ಲ ಪ್ರತಿಯಾಗಿ ಪುರುಷರು ಉಪಪತ್ನಿತ್ವ ಹೊಂದಬಹುದಾಗಿದೆ. 'ರಾಜಾನು ವಲ್ಲಭಃ' ಈ ಅರ್ಥದಲ್ಲಿ ಬಹುಪತ್ನಿತ್ವವು ಬೆಳೆದು ಬಂದದ್ದು ಕಂಡುಬರುತ್ತದೆ. ದೇಸಾಯಿಗಳು ಸಾಮಾಜಿಕ ಜೀವನದಲ್ಲಿ ತಮ್ಮನ್ನು

ತಾವು ತೊಡಗಿಸಿಕೊಂಡು ಮೂರರಿಂದ ನಾಲ್ಕು ಮಹಿಳೆಯರನ್ನು ವಿವಾಹವಾಗುವುದು ಪ್ರತಿಷ್ಠೆಯ ಕುರುಹು ಆಗಿತ್ತೆಂದು ತೋರುತ್ತದೆ. ಉಪಪತ್ನಿಯರನ್ನು ಹೊಂದುವುದು ದೇಸಾಯಿಗಳಿಗಷ್ಟೆ ಅಲ್ಲದೆ ಖಾಸಗಿ ಸಂಬಂಧದಲ್ಲಿ ಇದ್ದಂತಹ ಸ್ತ್ರೀಯರಿಗೂ ಒದಗಿ ಬರುತ್ತದೆ. ಇಂಥ ಸಂದರ್ಭಗಳಲ್ಲಿ ಮಕ್ಕಳಭಾಗ್ಯ ಹೆಚ್ಚು ಸಿಗುತ್ತದೆ. ಆದರೆ ಅರಮನೆಯಲ್ಲಿ ಹೆಚ್ಚು ಸಿಗುವುದಿಲ್ಲ. ಒಂದರ್ಥದಲ್ಲಿ ಹೇಳುವುದಾದರೆ ಬಹುಪತ್ನಿತ್ವದಲ್ಲಿ ಹೆಚ್ಚು ಮಕ್ಕಳಾದರೆ ಗಾದಿ ಮಾಲೀಕತ್ವಕ್ಕೆ ಹೆಚ್ಚಿನ ಪೈಪೋಟಿ ಬೆಳೆದುಬರುತ್ತದೆ. ಅಲ್ಲದೆ ಹೆಚ್ಚಿನ ತಮ್ಮ ದೈಹಿಕ ಸುಖವನ್ನು ಹೊರಗಡೆ ಕಳೆದುಕೊಳ್ಳುವುದರಿಂದ ಅರಮನೆಯಲ್ಲಿ ಬಹುಪಾಲು ಮಕ್ಕಳಿರದೇ ಇದ್ದುದು ಅವರ ವಂಶಾವಳಿಯಿಂದ ತಿಳಿದುಬರುತ್ತದೆ. ದೇಸಾಯಿಗಳು ಹೆಚ್ಚಾನು ಹೆಚ್ಚು ಉಪಪತ್ನಿಯರಲ್ಲಿ ತಮ್ಮ ದೈಹಿಕ ಸುಖವನ್ನು ಹಂಚಿಕೊಂಡದ್ದು ವಿಶೇಷವಾಗಿದೆ. ಇನ್ನೊಂದರ್ಥದಲ್ಲಿ ದೇಸಗತಿಗೆ ಶಾಪವಿದ್ದುದರಿಂದ ಮಕ್ಕಳು ಬದುಕುವುದಿಲ್ಲವೆನ್ನುವುದು ಕೂಡ ತಿಳಿದುಬರುತ್ತದೆ. ಇವೆಲ್ಲದರ ಹಿನ್ನೆಲೆಯಲ್ಲಿ ದೇಸಾಯಿಗಳು ತಮ್ಮ ಪ್ರತಿಷ್ಠೆಯ ಕುರುಹಾಗಿ ಬಹುಪತ್ನಿತ್ವ ಸ್ವೀಕರಿಸಿದ್ದಾರೆ. ಇದಕ್ಕೆ ನಿದರ್ಶನವೆಂಬಂತೆ ಹಲವಾರು ದೇಸಾಯಿಗಳು ನಾಲ್ಕಾರು ಜನರನ್ನು ಮದುವೆಯಾಗಿದ್ದು ಮಾದರಿಯಾಗಿದೆ.

ದೊರೆಗಳೆನಿಸಿಕೊಂಡವರು ಗ್ರಾಮದ ಮುಖಂಡರು, ದೇಸಾಯಿಗಳು, ನಾಡಗೌಡರು ಪ್ರತಿಷ್ಠೆಯ ಕುರುಹಾಗಿ ಬೇರೆ ಬೇರೆ ಮತಧರ್ಮಿಯರ ಜೊತೆಗೆ ಸಂಬಂಧ ಬೆಳೆಸಿಕೊಂಡಿದ್ದಾರೆ. ಅವರನ್ನು ಉಪ ಪತ್ನಿಯರ ಸಾಲಿನಲ್ಲಿ ಸೇರಿಸಿಕೊಂಡು ಸಮ ಸಮನಾಗಿ ಕಂಡುಕೊಂಡದ್ದು ಸಹ ಇದೆ. ಇದು ಉದ್ದೇಶಿತ ಸಂಬಂಧವಾಗಿಲ್ಲದಿದ್ದರೂ ವಿನೋದ ಸಂಬಂಧವೂ ಪ್ರತಿಷ್ಠೆಯ ಕುರುಹು ಆಗಿತ್ತು.

ಒಬ್ಬ ದೇಸಾಯಿ ಸುಮಾರು ನಾಲ್ಕರಿಂದ ಐದು ಜನ ಉಪಪತ್ನಿಯರನ್ನು ಹೊಂದಿದ್ದಾಗ್ಯೂ ಅವರ ಚಲುವಿಕೆಗೆ ಮನಸೋತ ದೇಸಾಯಿಗಳು ದೈಹಿಕ ಸಂಬಂಧ ಹೊಂದಿದ್ದು ಇದೆ. ಹೊಂದದೇ ಇದ್ದದ್ದು ಇದೆ. ಅಂಥ ಸ್ತ್ರೀಯರೂ ಕೂಡ ಇರುವರು. ಇವರಾದರೂ ಕೂಡ ದೇಸಾಯರ ಜೊತೆಗೆ ಇರುವವಳೆಂದು ಇಡೀ ಜನತೆ ಗುರುತಿಸಿದಾಗ ಅಂಥವರಿಗೂ ಎಲ್ಲಿಲ್ಲದ ಗೌರವ, ಕೆಲವೇ ಕೆಲವು ಸ್ತ್ರೀಯರು ದೇಸಾಯರ 'ಸೂಳೆ' ಎನ್ನಿಸಿಕೊಳ್ಳಲು ತುದಿಗಾಲ ಮೇಲೆ ನಿಂತವರೂ ಇರುವರು. ಆದರೆ ಅಂಥವರ ಮನೋ ಅಭಿಲಾಷೆಗೆ ತಕ್ಕಂತೆ ದೇಸಾಯಿಗಳು ಅನೈತಿಕ ಸಂಬಂಧ ಹೊಂದಿದ್ದು ಇದೆ. ವರ್ತಮಾನದಲ್ಲಿ ಅದು ಕಂಡುಬರುವುದಿಲ್ಲ. ಭೂತಕಾಲದ ಒಂದೆರಡು ತಲೆಯ ಪೀಳಿಗೆಗಳು ಇವೆ. ಅವೆಲ್ಲವು ತಕ್ಕಮಟ್ಟಿಗೆ ಅನೇಕ ವೃತ್ತಿ ಮುಂದುವರಿಸಿಕೊಂಡು ಪ್ರತ್ಯೇಕವಾಗಿ ಕಂಡುಬರುತ್ತವೆ. ಇವರಿಗೆ ಮನೆ, ಹೊಲ, ಭೂಮಿ ಸೀಮೆ ಕೊಟ್ಟಿದ್ದಾರೆ. ಅದರ ಮೇಲೆ ದೇಸಾಯರ ಯಾವುದೇ ಹಕ್ಕು ಇರುವುದಿಲ್ಲ. ಅದು 'ಪೋಟ' ಇನಾಮದಿಂದ ಕೊಟ್ಟಿದ್ದು ಇರುತ್ತದೆ. 'ಪೋಟ ಇನಾಮ' ಎಂದರೆ ಪರಬಾರೆಯಾಗಿ ಸ್ವಂತ ಗಳಿಕೆಯಿಂದ ಕೊಡಮಾಡಿದ್ದು ಎಂದರ್ಥ. ಉಪಪತ್ನಿಯರಾಗಿದ್ದವರು ಒಂದೇ ಕೋಮಿನವರಾಗಿರುವುದಿಲ್ಲ. ಮುಸ್ಲಿಂರು, ಬೇಡರು, ಮಾಹರರು ಇರುವರು.

ಉಪಪತ್ನಿಯರಾದವರು ಯಾವುದೆ ದರ್ಪ ದೌರ್ಜನ್ಯದಿಂದ ವರ್ತಿಸಿರುವುದಿಲ್ಲ. ದಿನ ಬೆಳಗಾದರೆ ದೇಸಾಯಿಯ ಸೇವೆ ಮಾಡುತ್ತಿದ್ದರು. ದಣಿದು ಬಂದಾಗ ಅವರ ದೈಹಿಕ(ಕೈ ಕಾಲು, ಕುತ್ತಿಗೆ ಬೆನ್ನು) ನೋವಿಗೆ ಮಾಲೀಸದಂತಹ ಕೆಲಸ ಮಾಡಿ ಸೈ ಎನಿಸಿಕೊಳ್ಳುವುದೇ ಅವರ ಪ್ರಮುಖ ಸೇವೆಯಾಗಿತ್ತು. ಇದು ತಮ್ಮ ಹರೆಯದ ಕಾಲದಿಂದ ಹಿಡಿದು ಮುಪ್ಪಿನ ಕಾಲದವರೆಗೂ ನಡೆದಿತ್ತೆಂದು ಗಾಡಗೂಳಿ(ಜಾಲಿಹಾಳ)ಯ ಲಕ್ಕವ್ವಮಾದರ ಅವರಿಂದ ತಿಳಿದುಬರುತ್ತದೆ. ಹೀಗೆ ದೇಸಾಯಿಗಳು ದೊಡ್ಡಸ್ಥಿಕೆಗಾಗಿ, ತಮ್ಮ ದೊರೆತನದ ಪ್ರತಿಷ್ಠೆಗಾಗಿ ಉಪಪತ್ನಿಯರನ್ನು ಹೊಂದಿದ್ದು ವಿಶೇಷವಾಗಿ ಕಂಡುಬರುತ್ತದೆ.

೩.೧.೭. ಉರೊಟ್ಟಿನ ಸಂಬಂಧಗಳು

ಗ್ರಾಮೀಣ ಪರಿಸರದಲ್ಲಿ ಪ್ರಮುಖವಾದ ಸ್ಥಾನಮಾನ ದೇಸಾಯಿಯವರಗಿತ್ತು. ಇದು ಪಾರಂಪರಿಕವಾಗಿ ನಡೆದುಕೊಂಡು ಬಂದದ್ದಾಗಿತ್ತು. ಊರ ಜನತೆ ದೇಸಾಯಿಗಳಿಗೆ ತೋರುತ್ತಿದ್ದ ಪ್ರೀತಿ, ಗೌರವ, ಅಭಿಮಾನ ಮುಖ್ಯವಾಗಿದ್ದವು. ದೇಸಾಯಿಯವರು ಹೊಂದಿದ ಸತ್ಯ ನೀತಿಯುಕ್ತವಾದ ನಡವಳಿಕೆ, ಶಾಂತಿ, ಪ್ರೇಮ ಇವು ಗ್ರಾಮದ ಮುಖಂಡತ್ವವನ್ನು ತಂದು ಕೊಡುವ ಅಂಶಗಳಾಗಿವೆ. ಒಂದು ಪರಗಣವು ನೂರಾರು ಗ್ರಾಮಗಳಿಂದ ಅಂದರೆ ಕನಿಷ್ಟ ೧೦ ರಿಂದ ೩೦ರವರೆಗೆ ವ್ಯಾಪ್ತಿ ಹೊಂದಿತ್ತು. ಇವೆಲ್ಲವುಗಳ ಮೇಲೆ ದೇಸಾಯಿಯ ಪೂರ್ಣ ಹತೋಟಿ ಇರುತ್ತಿತ್ತು. ಕೆಲವು ಸಲ ಇವು ಹೆಚ್ಚು ಬೆಳವಣಿಗೆ ಹೊಂದಿವೆ. ಕೆಲವು ಸಲ ಕಡಿಮೆಯೂ ಆಗಿವೆ. ಪೇಶ್ವೆಗಳು ಹಾಗೂ ಬ್ರಿಟೀಷರು ಇವರಿಗೆ ಇನಾಂ ಗ್ರಾಮಗಳನ್ನು ಉಂಬಳಿ ಕೊಡುವುದನ್ನು ಮಾರುವುದನ್ನು ಹಾಗೂ ಒತ್ತೆ ಹಾಕುವುದನ್ನು ಮತ್ತೊಬ್ಬರ ಹೆಸರಿಗೆ 'ಪೋಟ' ಇನಾಂ ಮಾಡುವುದನ್ನು ನಿಲ್ಲಿಸಿದರು. ಮೂಲ ಸನದುಗಳನ್ನು ಪರಿಶೀಲಿಸಿ ಕಾಲು ಭಾಗದ ಹಕ್ಕನ್ನು ಮಾತ್ರ ಉಳಿಸಿದರು. ಇದರಿಂದ ಈ ಮೊದಲಿಗಿದ್ದ ಸಂಬಂಧ ಹಾಗೂ ನಂತರದಲ್ಲಿದ್ದ ಜನರೊಂದಿಗೆ ಪೂರ್ತಿ ಸಂಬಂಧ ಕಡಿಮೆಯಾಗುತ್ತ ಹೋಯಿತು. ಉರೊಟ್ಟಿನ ಸಂಬಂಧದಲ್ಲಿ ಬಹುಪಾಲು ಜನರು ಕೃಷಿಯನ್ನೆ ಅವಲಂಬಿಸಿದವರಾಗಿದ್ದರು. ಅವರು ದೊರೆಗಳಿಗೆ ವಿಧೇಯಕರಾಗಿರುತ್ತಿದ್ದರು ಹಾಗೆ ದೇಸಾಯಿಗಳನ್ನು ಕೂಡ ಆಧರಿಸಬೇಕಾಗಿತ್ತು. ಪ್ರತಿ ವರ್ಷ ಸಲ್ಲಿಸಬೇಕಾದ ನಜರಾಣಕ್ಕೆ ಕಪ್ಪಕಾಣಿಕೆ(ಪೊಗದಿ) ರೈತನಿಂದಲೇ ವಸೂಲಿ ಮಾಡಬೇಕಾಗಿದ್ದರಿಂದ ಒಬ್ಬರ ಮೇಲೊಬ್ಬರು ಅವಲಂಬಿತರಾಗಿರುತ್ತಿದ್ದರು. ರೈತ ಜನರು ದೇಸಗತಿಯ ಭೂಮಿಯನ್ನು ಲಾವಣಿ, ಖಂಡ ಮುಕ್ತ, ಹಾಗೂ 'ಕೋರ' ರೀತಿಯಲ್ಲಿ ಪಡೆದುಕೊಳ್ಳುತ್ತಿದ್ದರು.(ಲಾವಣಿ ಪತ್ರಿಕೆಯನ್ನು ಅನುಬಂಧ ೧ರಲ್ಲಿ ಕೊಡಲಾಗಿದೆ)

ರೈತರು ದನ ಕುರಿಗಳನ್ನು ಮೇಯಿಸಲು ದೇಸಗತಿ ಹಕ್ಕಿನ ಗುಡ್ಡ, ಬೆಟ್ಟ, ಮಡ್ಡಿ, ಕೊಪ್ಪ, ಮಟ್ಟಿ ಅಥವಾ ಗೋಮಾಳಕ್ಕೆ ಹೋಗುತ್ತಿದ್ದರು. ಕೃಷಿ ಬಳಕೆಗೆ ಉರುವಲು ಕಟ್ಟಿಗೆಯನ್ನು ತರಲಾಗುತ್ತಿತ್ತು. ಇವೆಲ್ಲವನ್ನು ಗಮನಿಸಿದಾಗ ಸಮಸ್ತವೂ ದೇಸಗತಿಯದಾಗಿತ್ತೆಂದು ತೋರುತ್ತದೆ. ದೇಸಾಯಿ ಸ್ವಾಧೀನದ

ಸಮಸ್ತ ಆಸ್ತಿಗಳ ಮೇಲೆ ಊರ ಜನರ ಹಕ್ಕಿದ್ದರೂ ಸಹ ದೇಸಾಯಿಗಳ ಒಡೆತನವಿದ್ದುದು ಕಂಡುಬರುತ್ತದೆ. ಎಲ್ಲರನ್ನು ಸಮಾನದೃಷ್ಟಿಯಿಂದ ಕಾಣುವ ದೇಸಾಯಿಗಳ ಮನೋವೃತ್ತಿ ಅತ್ಯಂತ ಮಹತ್ವವುಳ್ಳದ್ದಾಗಿದೆ. ಇಂಥ ಪ್ರವೃತ್ತಿಯಿಂದಲೇ ವ್ಯಕ್ತಿಗತ ಜೀವನದಲ್ಲಿಯೂ ಸಾಮೂಹಿಕ ಸಾಂಘಿಕ ಜೀವನದಲ್ಲಿಯೂ ಸುಲಭ ಶಾಂತಿಗೆ ಕಾರಣವಾಗಿತ್ತು ಎಂಬುದು ತಿಳಿಯಬಹುದಾಗಿದೆ. ಜನರು ಸದ್ಗುಣ ಸಚ್ಚಾರಿತ್ಯ ಹಾಗೂ ಕರ್ತವ್ಯ ಪ್ರಜ್ಞೆಯಿಂದ ತಮ್ಮ ತಮ್ಮ ಕೆಲಸದಲ್ಲಿ ಶ್ರೇಷ್ಟತೆಯನ್ನು ಮೆರೆದಿದ್ದಾರೆ. ಸಾಮಾಜಿಕ ಕೆಲಸಗಳನ್ನು ಮಾಡಿದಾಗ ರೈತರಿಗೆ ೨೦ ರೂಪಾಯಿಗಳ ವಾರ್ಷಿಕ ಸಂಬಳವನ್ನು ಕೊಡಮಾಡಿದ್ದು ಕಂಡುಬರುತ್ತದೆ. ನಂತರ ಇದು ೨೦೦ ರಿಂದ ೨೦೦೦ರೂಪಾಯಿಗಳವರೆಗೆ ಆಗಿರುವುದು ಕಂಡುಬರುತ್ತದೆ. ಮನೆ ಕಟ್ಟಿಕೊಳ್ಳಲು ಭೂಮಿ ಹಂಚಿಕೆ ಮಾಡಿಕೊಟ್ಟರೆಂದು ಊರಿನವರಿಂದ ತಿಳಿದುಬರುತ್ತದೆ. ಇಂತಹ ಕೆಲಸಗಳಿಂದ ದೇಸಗತಿಯವರ ಸೇವೆಯು ನಾನಾ ಮುಖದಿಂದ ನಡೆದುಕೊಂಡದ್ದು ಕಂಡುಬರುತ್ತದೆ.

ಸಾಮಾಜಿಕ ಕೆಲಸಗಳನ್ನು ಮಾಡಿದಾಗ ಅದು ಊರೊಟ್ಟಿನ ಕೆಲಸಕ್ಕಾಗಿಯೆ ಸಂಬಂಧಿಸಿದ್ದಾಗಿರುತ್ತದೆ. ದೇಸಾಯಿಯವರ ಸೇವೆಯು ನಾನಾ ಮುಖದಿಂದ ನಡೆದುಕೊಂಡದ್ದು. ಇದರಿಂದ ವ್ಯಕ್ತವಾಗುತ್ತದೆ. ಅವರ ಅನನ್ಯ ಭಕ್ತಿಯ ಕಾರಣಕ್ಕಾಗಿ ದೇವಾಲಯಗಳನ್ನು ಕಟ್ಟಿಸಿದ್ದಾರೆ. ಹಾಗೇ ಸಾರ್ವಜನಿಕ ಉತ್ಸವಗಳನ್ನು ಆಚರಿಸುವಂತೆ ಮಾಡಿದ್ದಾರೆ. ಧರ್ಮ, ಜಾತಿ, ಛತ್ರ, ನಿರ್ಮಿಸಿದ್ದಾರೆ. ಇತ್ಯಾದಿ ಅಂಶಗಳಿಂದ ದೇಸಗತಿಯವರು ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಿದ್ದಾರೆ. ಊರ ಜನರೊಂದಿಗಿನ ಸಂಬಂಧ ದೇಸಾಯಿಯವರು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಗಳನ್ನು ಮುನ್ನಡೆಯಿಸಿಕೊಂಡು ಹೋಗುವುದು ಹಾಗೂ ಗೈರು ಹಾಜರಿ ಇದ್ದಲ್ಲಿ ಅವರ ಕೈಕೆಳಗಿನ ಗುಮಾಸ್ತರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಖರ್ಚುವೆಚ್ಚಗಳನ್ನು ಗಮನಿಸುವುದು ಸಾಮಾನ್ಯ ಸಂಗತಿಯಾಗಿದೆ. ಒಂದೆಡೆ ವಾಸಿಸುವ ಕುಟುಂಬವು ಸರ್ವಸದಸ್ಯರಲ್ಲಿ ಸಂಬಂಧವನ್ನು ಬೆಸೆದದ್ದು ಆಗಿದೆ. 'ಸಂಸ್ಕೃತಿಯ ವಿನಿಮಯ ಸದಸ್ಯರ ಮೇಲೆ ನಿಯಂತ್ರಣ, ಸದಸ್ಯರ ಸಂರಕ್ಷಣೆ, ವ್ಯಕ್ತಿತ್ವ ವಿಕಾಸ ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತದೆ.' ಇದು ಕುಟುಂಬದ ಕಾರ್ಯವೂ ಆಗಿದೆ. ಇತ್ಯಾದಿ ಅಂಶಗಳಿಂದ ದೇಸಗತಿಯವರು ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಿದ್ದಾರೆ. ಸ್ವತಂತ್ರವಾಗಿ ಬದುಕಿದ್ದಾರೆ. ಊರೊಟ್ಟಿನ ಕೆಲಸಕ್ಕಾಗಿ, ಶೈಕ್ಷಣಿಕವಾಗಿಯೂ ಚಿಂತನೆಯನ್ನು ಮಾಡಿದ್ದಾರೆ. ಹಾಗಾಗಿ ಕೆಲವು ಸಾಂಪ್ರದಾಯಿಕ ಬಾಬುಗಳು ಕೂಡ ಊರೊಟ್ಟಿನ ಸಂಬಂಧಗಳನ್ನು ಎತ್ತಿ ತೋರಿಸುತ್ತವೆ. ಅಂಥವುಗಳು ಈ ಕೆಳಗಿನಂತಿವೆ.

೩.೧.೭.೧. ಬಾಬುಗಳು

ಬಾಬುಗಳನ್ನು 'ಉಲ್ಪಿ' 'ಚಾಜ' ಎಂದು ಹೇಳಬಹುದು. ಇಲ್ಲಿ ಪ್ರಮುಖವಾಗಿ ಸಾಂಸ್ಕೃತಿಕವಾಗಿ ಕೊಡಮಾಡಿದ ಚಾಜಗಳನ್ನೇ ಎತ್ತಿಕೊಂಡಿದೆ. ಅದು ಇಡೀ ಊರಿನದಾಗಿದೆ. ಅಲ್ಲಿ ಬರುವ ಹತ್ತಾರು

ಅಧಿಕಾರಿಗಳು ಇದಕ್ಕೆ ಒಳಪಟ್ಟಿದ್ದಾರೆ. ಇದರಲ್ಲಿ ವೀರಶೈವರಲ್ಲದೇ ವೀರಶೈವೇತರರೂ ಕೂಡ ಇದ್ದಾರೆ. ಇದರಿಂದ ಸರ್ವಧರ್ಮ ಸಮನ್ವಯತೆಯನ್ನು ಸಾಧಿಸಿದ್ದು ಕಂಡುಬರುತ್ತದೆ.

ಅಧಿಕಾರಿಗಳು ಹಾಗೂ ಅಧಿಕಾರೇತರರು	ಅಕ್ಕಿ ಶೇರು	ಗೋಧಿ ಶೇರು	ಬೆಲ್ಲಾ ಶೇರು	ತುಪ್ಪಾ	ಬ್ಯಾಳಿ	ಎಲೆ ಅಡಿಕೆ	ರೊಕ್ಕ	ರೂ ಅಣೆ
ದೇಸಾಯಿ	೧೨	೧೨	೩೬	೧೧೮	೧೨		-	೧೧೮
ದೇಸಾಯಿ ಪುರೋಹಿತ	೨	೨	೬	೧೪	೨		೧	ಅಣೆ
ದೇಸಾಯಿ ಕಾರಕೂನ	೩೬	೬	೧೮	೧೧೨	೬		೧	ಅಣೆ
ದೇಸಾಯಿ ಆಶ್ರಿತಾ	೨	೨	೬	೬೪	೨			
ದೇಸಾಯಿ ಪುರಾಣಿಕ	೨	೨	೬	೬೪	೨			
ದೇಸಪಾಂಡೆ	೧೦	೧೦	೨೦	೧೬೪	೧೦			೧೬೮
ದೇಸಪಾಂಡೆ ಕಾರಕೂನ	೫	೫	೧೫	೬೧೦	೫			
ದೇಸಪಾಂಡೆ ಪುರೋಹಿತ	೨	೨	೬	೧೪	೨			
ದೇಸಪಾಂಡೆ ಆಶ್ರಿತಾ	೨	೨	೬	೬೪	೨			
ದೇಸಪಾಂಡೆ ಪುರಾಣಿಕ	೨	೨	೬	೬೪	೨			
ನಾಡಗೌಡ	೨	೨	೬	೬೪	೨			
ನಾಡಗೌಡ ಪುರೋಹಿತ	೧೨	೨	೩೬	೧೬೮	೧೨			೧೯೮
ನಾಡಗೌಡ ಕಾರಕೂನ	೬	೬	೧೮	೧೨	೬			
ನಾಡಗೌಡ ಪುರಾಣಿಕ	೨	೨	೬	೬೪	೨			
ನಾಡಗೌಡ ಆಶ್ರೀತಾ	೨	೨	೬	೬೪	೨			
ಪಟ್ಟಣಶೆಟ್ಟಿ	೧೦	೧೦	೨೦	೧೬೪	೧೦			೧೯೮
ಪಟ್ಟಣಶೆಟ್ಟಿ ಪುರೋಹಿತ	೨	೨	೬	೧೪	೨			
ಪಟ್ಟಣಶೆಟ್ಟಿ ಕಾರಕೂನ	೫	೫	೧೫	೬೧೦	೫			
ಪಟ್ಟಣಶೆಟ್ಟಿ ಆಶ್ರೀತಾ	೨	೨	೬	೧೪	೨			
ಪಟ್ಟಣಶೆಟ್ಟಿ ಪುರಾಣಿಕ	೨	೨	೬	೬೪	೨			

ಅಲ್ಲದೆ ಸಮಸ್ತ ಊರಿನ ಪರಗಣದ, ಹಾಗೂ ಸಮತ್ ಪರಗಣದವರಿಗೂ ಕೂಡ ಈ ನೀತಿ ಅನ್ವಯವಾಗುತ್ತಿತ್ತು. ಜೋಯಿಸ, ಶೀನಭಟ್ಟ, ಸ್ವಾಮಿರಾವ ಆಚಾರ್ಯ, ಕೃಷ್ಣಭಟ್ಟ, ಜೀನಗಾರ, ಜೀನಗಾರ ನಾಯ್ಕ, ಇತರರೂ ಇದರಲ್ಲಿ ಒಳಗೊಳ್ಳುತ್ತಾರೆ.

೩.೧.೭.೨. ದೇವರ ಬಾಬತ್ತು

ಊರಿನ ಎಲ್ಲ ದೇವರಿಗೂ ಬಾಬು ಮುಟ್ಟಿಸುತ್ತಿದ್ದರು. ಇದು ಓಣಿ, ಪ್ಯಾಟಿ, ಕಿಲ್ಲಾಕ್ಕೂ ಅನ್ವಯಿಸುತ್ತಿತ್ತು. ಶ್ರೀ ಕರಪಕೀರೇಶ್ವರ, ಶ್ರೀ ಆನಿಖಂಡಿ ನಾರಾಯಣ ದೇವ, ಜೈನಪೇಟೆ ರಾಮೇಶ್ವರ, ಹಳೇದತ್ತಾತ್ರೇಯ ಶಂಕರಗುಡಿ ಲಕ್ಷ್ಮಿ ನಾರಾಯಣ, ಹಳಪ್ಯಾಟಿ ನಾರಾಯಣದೇವ, ವಿಠೋಬಾ, ಕೊತ್ತಲ ಭರಮಪ್ಪಾ, ರಾಘವೇಂದ್ರ ಗುಡಿ, ಮುರ್ತುಜ ಖಾದ್ರಿ, ಯಮನೂರಪ್ಪ, ವೆಂಕಟಪ್ಯಾಟಿ ನಾರಾಯಣ, ಹನುಮಂತ ದೇವರು ಇವರೆಲ್ಲರಿಗೂ ೧ ಸೇರು ಅಕ್ಕಿ ೧ ಸೇರು ಗೋದಿ ೧ ಸೇರುಬ್ಯಾಳಿ ೩ ಸೇರು ಬೆಲ್ಲ ೧೨ ಚಿಟ್ಟಿ ತುಪ್ಪ ೫ ಅಣೆ ದಕ್ಷಿಣ ಕೊಡುತ್ತಿದ್ದರು.

೩.೧.೭.೩. ಸೇತಸನದಿಗಳು

ತಾಳಿ ಪತ್ತಾರ, ಹೊಸಪ್ಯಾಟಿ ಹುದ್ದಾರ, ಮೂಲಿಮನಿ ಕುಲಕರ್ಣಿ, ಹಪ್ತೆದಾರ ಪ್ಯಾಟಿ ಗವಡರು, ತಳವಾರ, ವಾಲೀಕಾರ ದೇವರ ಬಾಬತ್ತನಂತೆ ಇದ್ದು ಗವಡರಿಗೆ ತಳವಾರರಿಗೆ ೬, ೪ ಸೇರು ಅಕ್ಕಿ ೬, ೪ ಸೇರು ಗೋಧಿ ೬, ೪ ಸೇರು ಬ್ಯಾಳಿ, ೧೮, ೧೨ ಸೇರು ಬೆಲ್ಲ, ೧ ರೂಪಾಯಿ ೧೨ ಚವಲಾ ಹಣ ಕೊಡುತ್ತಿದ್ದರು.

ಇವೆಲ್ಲವನ್ನು ಗಮನಿಸಿದಾಗ ಉರೊಟ್ಟಿನ ಸಂಬಂಧವನ್ನು ಪಾರಂಪರಿಕವಾಗಿ ನಡೆದುಬಂದ ಸಂಪ್ರದಾಯವನ್ನು ಅವರಲ್ಲಿದ್ದಂತಹ ಸಾಮಾಜಿಕ ಒಗ್ಗಟ್ಟು ತಿಳಿದುಬರುತ್ತದೆ. ಎಂತಹ ವೈರತ್ವವಿದ್ದರೂ ಸಹ ಸಾಂಸ್ಕೃತಿಕ ಸಂದರ್ಭಗಳಲ್ಲಿ ಮತ್ತೆ ಬೆಸೆಯುವಂತಹ ಇಂಥ ಬಾಬುಗಳು, ಸಭೆ ಸಮಾರಂಭಗಳು ಉತ್ತಮ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸೌಹಾರ್ದಗಳಿಗೆ ನಿದರ್ಶನಗಳಾಗಿವೆ.

ದೇಸಾಯಣಿಯರು ಘೊಷೆಯಲ್ಲಿಯೇ ಇರುತ್ತಿದ್ದರು. ಅವರ ಯಾವುದೇ ರೀತಿಯ ಚಟುವಟಿಕೆಗಳು ಪರದೆಯ ಹಿಂದುಗಡೆಯೇ ನಡೆಯುತ್ತಿದ್ದವು. ದೇಸಗತಿಯ ಕಾರಬಾರಿಯ ಮುಖಾಂತರ ಕೆಲಸ ನಿರ್ವಹಿಸಿಕೊಳ್ಳುತ್ತಿದ್ದರು. ದೇಸಾಯಿ ನಡುವಯಸ್ಸಿನಲ್ಲೆ ಮೃತರಾದರೆ (ಮರಣ ಹೊಂದಿದರೆ) ದೇಸಗತಿ ಆಡಳಿತ ಜವಾಬ್ದಾರಿಯು ದೇಸಾಯಿಣಿಯರ ಮೇಲೆ ಬೀಳುತ್ತಿತ್ತು. ಹಾಗೆ ದತ್ತಕ ಪುತ್ರನನ್ನು ಪಡೆಯುವುದು ದೇಸಾಯಿಣಿಯರಿಗೆ ಬಿಟ್ಟ ವಿಷಯವಾಗಿತ್ತು. ದತ್ತಕ ಪುತ್ರನನ್ನು ಪಡೆಯುವುದು ಹಾಗೂ ಜೋಪಾನ ಮಾಡುವುದು ಅಲ್ಲದೆ ಆತ ಅಧಿಕಾರ ಚುಕ್ಕಾಣಿ ಹಿಡಿಯುವವರೆಗೂ ಅಂದರೆ ಸುಮಾರು ೧೮ ರಿಂದ ೨೦ ವರ್ಷಗಳವರೆಗೆ ಅಧಿಕಾರಿಗಳೊಂದಿಗೆ, ಊರೊಟ್ಟಿನ ಸಮುದಾಯದೊಂದಿಗೆ ದೇಸಾಯಿಣಿಯರು ಬೆರೆಯುವುದು ಅನಿವಾರ್ಯವಾಗಿತ್ತು. ಊರ ಜನರಿಗೆ ಸಹಾಯ ಸಹಕಾರ ನೀಡುವುದಲ್ಲದೆ

ಕಷ್ಟವಲ್ಲಿದ್ದವರಿಗೆ ಪರಿಹಾರ ನೀಡುತ್ತಿದ್ದರು. ಇದಕ್ಕೆ ಪ್ರತಿಯಾಗಿ ಊರ ಜನತೆ ವಿಧೇಯಕವಾಗಿ ನಡೆದುಕೊಂಡದ್ದು ಸಹಕರಿಸುತ್ತಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯ ನಂತರದ ಕಾಲದಲ್ಲಿ ಊರ ಜನತೆ ದೇಸಗತಿಯವರನ್ನು ರಕ್ಷಿಸಿದ್ದು ಅಲ್ಲದೆ, ಆಸ್ತಿ ಅಂತಸ್ತಿಕೆ ದಕ್ಕುವಂತೆ ಮಾಡಿದ್ದಾರೆ. ಅದಕ್ಕೊಂದು ನಿದರ್ಶಣವೆಂಬಂತೆ ಬ್ರಿಟೀಷರ ಅವಕೃಪೆಗೆ ಪಾತ್ರರಾದ "ಹೊನ್ನಿಹಾಳ ದೇಸಗತಿಯು 'ಸಾಲದೆಲಿ'(ಇಡೀ ಕುಟುಂಬ)ಗೆ ಬಲಿಯಾಗಿ ಇಡೀ ವಂಶವೆ ನಾಶವಾಯಿತು."[೧೩] ಅವರ ಪರಗಣದ ಒಂದು ಗ್ರಾಮದಲ್ಲಿ ಅಳಿದುಳಿದ ಒಬ್ಬ ಗರ್ಭಿಣಿ ಸ್ತ್ರೀ ಪರಾರಿಯಾಗಿ ಸಮೀಪದ ಹವೇಲಿಯಲ್ಲಿಯೆ ಬದುಕಿಕೊಂಡು ಅಲ್ಲಿನ ಸೇವಾವರ್ಗದವರಲ್ಲಿದ್ದಳು. ಅವಳನ್ನು ಅವಳ ಮಗುವನ್ನು ಬೆಳೆಸಿ ನಿಷ್ಠಾವಂತ ಬ್ರಿಟೀಶ್ ಗೌರ್ನರ ಕಡೆಯಿಂದ ಏಳು ಹಳ್ಳಿಗಳ ನಾಡಗೌಡಕಿ ದೊರೆಕಿಸಿಕೊಟ್ಟದ್ದಿದೆ. ಎರಡನೆದಾಗಿ ಬಾಗಲಕೋಟೆಯೆ ಇನಾಮದಾರ ನಾಡಪಟ್ಟಣಶೆಟ್ಟಿ ಮನಹಳ್ಳಿ ಇವರೂ ಕೂಡ ಮೂಲ 'ಮಲ್ಲ' ಗ್ರಾಮ(ಮಲ್ಲಾಪೂರ)ದಲ್ಲಿದ್ದರು. 'ಬ್ರಿಟೀಷ್ ಅಧಿಕಾರಿಯ ಸೈನಿಕನನ್ನು ಕೊಲೆ'[೧೪] ಮಾಡಿದ್ದರಿಂದ ದೇಸಗತಿ ಖಾಲಸಾತ ಆಯಿತು. ಇವರೆ ಮುಂದೆ ಮನಹಳ್ಳಿ ಗ್ರಾಮದಲ್ಲಿ ನೆಲೆಸಿ ಪ್ರಜಾಜನರಿಂದ ದೇಸಗತಿಯನ್ನು ಕಟ್ಟಿ ಬೆಳೆಸಿದ್ದು ಸಹ ತಿಳಿದುಬರುತ್ತದೆ.

ಈ ಎಲ್ಲ ಅಂಶಗಳನ್ನು ಗಮನಿಸಿದಾಗ ದೇಸಗತಿ ಸ್ಥಾನಮಾನಗಳು ಮತ್ತು ಅದರಲ್ಲಿನ ಏರಿಳಿತಗಳು ಸ್ಪಷ್ಟವಾಗಿ ಕಾಣುತ್ತವೆ. ಪ್ರಜಾಪ್ರಭುತ್ವದ ಇಂದಿನ ದಿನಗಳಲ್ಲಿ ಸಹ ಸಾಂಸ್ಕೃತಿಕ ಕಾರ್ಯಕ್ರಮಗಳ ಮುಖಂಡತ್ವವನ್ನು ದೇಸಗತಿ ಮನೆತನದವರೆ ವಹಿಸುತ್ತಿರುವುದನ್ನು ಕಾಣಬಹುದು. ಪರಗಣದವರೆ ಊರ ಗ್ರಾಮದ ದೇವ ದೇವತೆಗಳ ಜಾತ್ರೆ, ಉತ್ಸವ, ಕಾರ್ತಿಕ, ರಥ ಎಳೆಯುವ ಸಂದರ್ಭಗಳಲ್ಲಿ ಕಾಯಿ, ಕರ್ಪೂರ ಕೊಡುವುದು ಪ್ರಮುಖವಾಗಿದೆ. ಇಂಥ ಸಂಪ್ರದಾಯ ಮನೆತನದವರು ಊರ ಜನರಲ್ಲಿದ್ದ ನಂಬಿಕೆ, ಮೊದಲಿದ್ದ ಸಂಬಂಧಗಳು ಇಂದಿನವರೆಗೂ ಸಾಂಸ್ಕೃತಿಕವಾಗಿ ಮಾತ್ರ ಕಂಡುಬರುತ್ತದೆ.

ಊರಿನ ಜನರು ದೇಸಾಯಿಗಳನ್ನು ಪ್ರತ್ಯಕ್ಷ ದೇವರೆಂದು ಭಾವಿಸಿದ್ದರು. ಅಪ್ಪಾರು, ಧಣೇರು, ದೊರೆ, ನಾಯಕರೆಂದು ತಲೆಬಾಗಿ ಕೈಮುಗಿದು ಗೌರವ ಸೂಚಿಸುತ್ತಿದ್ದರು. ಈಗಲೂ ಗ್ರಾಮೀಣ ಪ್ರದೇಶಗಳಲ್ಲಿ, ಗೌರವ ಸೂಚಿಸುವುದು ಕಂಡು ಬರುತ್ತದೆ. ಇಂಥ ಪ್ರದೇಶಗಳಲ್ಲಿ ಅಂದರೆ ಪರಗಣದ ಒಳಗಡೆ ಇರುವ ಕಡು ಬಡವರ ಮದುವೆ, ಮುಂಜುವೆಯಂತ ಕಾರ್ಯಕ್ರಮಗಳಿಗೆ ಉಡುಗೊರೆ ಧವಸಧಾನ್ಯಗಳನ್ನು ನೀಡುವುದು. ವರನಿಗೆ ವರೋಪಚಾರ ನೀಡುವುದು. ವಧುವಿಗೆ ತಾಳಿ, ಸುತಗಾಲುಂಗುರ ಸೀರೆ ಕುಪ್ಪಸಗಳನ್ನು ನೀಡುವುದು ಪರಂಪರೆಯಾಗಿ ಉಳಿದುಕೊಂಡು ಬಂದಿದೆ.

ದೇಸಾಯಿಗಳು ಕೆಲವು ನಿರ್ಜನ ಪ್ರದೇಶಗಳನ್ನು ಶುಚಿಗೊಳಿಸಿ ಊರನ್ನಾಗಿ ಪರಿವರ್ತಿಸಿದ್ದು ಇದೆ. ಇದಕ್ಕೆ ನಿದರ್ಶನವೆಂಬಂತೆ ತುಳಿಸಿಗೇರಿ(ತುರ್ಚಗೇರಿ) ಬಾದಾಮಿ ತಾಲೂಕಿನ ಗಿಡ್ನಾಯಕನ ಹಾಳ, ಬಾಗಲ ಕೋಟಿ ತಾಲೂಕಿನ ಹೊನ್ನಾಕಟ್ಟಿ. ಹೀಗೆ ಇನ್ನೂ ಹತ್ತಾರು ಗ್ರಾಮಗಳು ನಿರ್ಮಾಣವಾಗಿದ್ದರಿಂದ

ಅವರಲ್ಲಿದ್ದಂತ ಪ್ರಜಾಜನರ ಸೌಲಭ್ಯ, ಸಹಾಯ ಮಾಡುವಂತಹ ಸೇವಾ ಮನೋಭಾವವು ಎತ್ತಿ ತೋರಿಸುತ್ತದೆ. ಇವೆಲ್ಲವನ್ನು ಗಮನಿಸಿದಾಗ ಊರೊಟ್ಟಿನ ಜನರು ಇವರನ್ನು ಪ್ರತ್ಯಕ್ಷ ದೇವರೆಂದು ನಂಬಿದ್ದು ತಿಳಿದು ಬರುತ್ತದೆ.

ಇದಕ್ಕೆ ಅಪವಾದವಾದವರೂ ಇದ್ದಾರೆ. ದೇಸಾಯಿಯ ನಿರಂಕುಶತನದಿಂದ ಬೇಸತ್ತ ಜನ ಊರಿಗೆ ಊರೇ ಬೆಂಕಿಯಲ್ಲಿ ಬೆಂದು ದಹನವಾಗುವಂತೆ ಮಾಡಿದ್ದಿದೆ. ದೇಸಾಯಿಯ ಅಚಾರಿತ್ರಿಕತೆಯಿಂದ ಸಿಡಿದೆದ್ದ ಪ್ರಜಾಜನತೆ ದೇಸಾಯಿಯನ್ನು ಕೊಲೆ ಮಾಡಿದ ಸಂಗತಿ ಎರಡು, ಮೂರು ದಶಕದ ಹಿಂದೆ ಕಂಡುಬರುತ್ತದೆ. ಅಲ್ಲದೆ ಪರಗಣದಿಂದ ಓಡಿಸಿದ್ದು ಇದೆ. ಇತ್ತಿಚೆಗೆ ಅದೆಲ್ಲವನ್ನು ಮರೆತು ಸುಖ ಜೀವನ ಸಾಗಿಸುತ್ತಿದ್ದು ಹಿರಿಯ ತಲೆಮಾರಿನ ದೇಸಗತಿ ದೇಸಾಯಿಣಿಯರಿಂದ, ಸ್ಥಳೀಯರಿಂದ ತಿಳಿದುಬರುತ್ತದೆ. ವರ್ತಮಾನದಲ್ಲಿದ್ದ ಸ್ಥಿತಿ-ಗತಿಗಳಿಗೆ ಊರೊಟ್ಟಿನ ಜನತೆ ಸ್ತ್ರೀಯರಿಂದ ಹಿಡಿದು ಪುರುಷರಾದಿಯಾಗಿ ವಯಸ್ಸಾದ ಮುದುಕ ಮದುಕಿಯರೂ ಕೂಡ ತಲೆತುಂಬ ಸೆರಗನ್ನು ಹಾಕಿಕೊಂಡು ದೂರ ಸರಿದು ನಿಂತು ದೂರದಿಂದಲೇ ಗೌರವವನ್ನು ಸೂಚಿಸುತ್ತಾರೆ. ವೃದ್ಧರು ತಲೆಯ ಮೇಲಿನ ರುಮಾಲನ್ನು ತೆಗೆದು ಬಗಲಲ್ಲಿ ಇಟ್ಟುಕೊಂಡು ಕೈಜೋಡಿಸಿ ಕೈ ಮುಗಿದು ಗೌರವವನ್ನು ಸೂಚಿಸುತ್ತಾರೆ. ಅಲ್ಲದೆ ಸಾಂಸ್ಕೃತಿಕ ಕಾರ್ಯಗಳಲ್ಲಿ ಅವರ ಮಧ್ಯಸ್ಥಿಕೆಯಲ್ಲಿ ನಡೆಯುತ್ತಿರುವುದು ಇಂದಿನವರೆಗೂ ಮುಂದುವರಿದುಕೊಂಡು ಬಂದಿದೆ.

ವೇಳೆವಾಳಿ, ಗರುಡವಾಳಿ, ಜೋಳವಾಳಿ ಇವು ಋಣ ಬದ್ಧತೆಯನ್ನು ತೋರ್ಪಡಿಸುತ್ತವೆ. ಇಂಥ ವ್ಯವಸ್ಥೆಗೆ ಒಳಗಾದವರು ಬಹುಮಟ್ಟಿಗೆ ಹರಿಜನವರ್ಗದವರು. ಇವರಿಗೆ ಯಾವ ಆಧಾರಗಳೂ ಇರುವುದಿಲ್ಲ ತಮ್ಮ ದುಡಿಮೆಯನ್ನು ದೇಸಗತಿಯವರಲ್ಲಿ ಮಾಡುತ್ತಾರೆ. ಇವರ ದುಡಿಮೆಯಿಂದ ಸಾಲ ತೀರುವುದಿಲ್ಲ ಜೀವನ ಸಾಗಿಸುವುದು ದುಸ್ತರವಾಗಿ ಪರಿಣಮಿಸುವುದು ಇವರು ಜೀವನ ಪರ್ಯಂತವೂ ಜೀತದಾಳಾಗಿ ದುಡಿಯುತ್ತಾರೆ. ಅವನು (ಜೀತದಾರ) ತೀರಿಹೋದ ಮೇಲೆ ಆ ಮನೆತನದ ಹೆಣ್ಣಾಗಲಿ, ಗಂಡಾಗಲಿ ಮತ್ತೆ ದುಡಿಯುತ್ತಾ ಹೋಗುತ್ತಾರೆ. ಇವರಿಗಾಗಿ ಪ್ರತ್ಯೇಕ ಜಮೀನ ಇದ್ದು ಅದು ಅವರ ಜೀವನ ನಿರ್ವಹಣೆಗಾಗಿ ಇರುತ್ತದೆ. ಇಂಥ ಜನತೆಯು ದೇಸಗತಿಯ ಆಗ್ನೇಯ ಭಾಗದಲ್ಲಿ ವಾಸಿಸುತ್ತಾರೆ. ಅಸ್ಪೃಶ್ಯರ ಮೇಲಿನ ಗಾಳಿ ಅವರಿಗೆ(ದೇಸಾಯರಿಗೆ) ತಟ್ಟಬಾರದೆಂದು ಕೆಳಗಡೆ ಪ್ರದೇಶದಲ್ಲಿ ನೆಲಸಿದ್ದು ಕಂಡುಬರುತ್ತದೆ. ಹರಿಜನ ವರ್ಗದಲ್ಲಿ ದೇವದಾಸಿ ಪದ್ಧತಿ ಸಹ ಜಾರಿಯಲ್ಲಿತ್ತು. ಆದರೆ ಋತುಮತಿಯಾದ ಮೇಲೆ ಅವಳಿಗೆ ಹೂ ಮುಡಿಸಿ ಅವಳಿಗೆ ಜಾಜವನ್ನು ನೀಡುತ್ತಿದ್ದರು. ಇದು ಕೂಡ ಊರೊಟ್ಟಿನ ಸಂಬಂಧದಲ್ಲಿ ಒಂದು ಭಾಗ ಮಾತ್ರ. ಅದು 'ಜಾಜ' ಎನ್ನುವ ರೀತಿಯಲ್ಲಿ ಸಂಬಂಧ ಬೆಸೆದುಕೊಂಡು ಬಂದಿರುತ್ತದೆ. ಅಂಥವರೆಲ್ಲರೂ ದೇಸಾಯಿಯನ್ನು ಬಹುಪಾಲು ಗೌರವದಿಂದ ಕಾಣುತ್ತಾರೆ.

ದೇಸಾಯಿಣಿಯರು ಮೇಣೆಯಲ್ಲಿ ಕುಳಿತು ಪ್ರಯಾಣಿಸುತ್ತಿದ್ದರು. ಇಂಥ ಮೇಣೆಯನ್ನು ಹೊತ್ತು ಸಾಗಿಸುವವರು ಬಾರಕೇರ ಜನಾಂಗದವರಾಗಿದ್ದರು. ಇವರು ಮೂವತ್ತರಿಂದ ನಾಲವತ್ತು ಜನ ಪುರುಷರು.

ದೇಸಾಯಿಣಿಯರಿಗೆ ಚಾಮರ ಬೀಸಲು ಹೆಂಗಳೆಯರೂ ಇದ್ದರು. ನದಿ ದಾಟಿಸಲು ತೆಪ್ಪ, ದೋಣಿ, ನಾವಿ, ಹರಿಗೋಲು ಹಾಕಲು ಅಂಬಿಗರು ಇದ್ದರು. ಇವರೆಲ್ಲರ ಒಂದು ಪಟ್ಟಿ ದಾನ ನೀಡಿದ ಖಾತೆಯಲ್ಲಿ 'ಸೇತಸನದಿ'ಗಳ, ಸೇವಾವರ್ಗದವರ ಉಲ್ಲೇಖದಲ್ಲಿ ಕಂಡುಬರುತ್ತದೆ. ಇವರಲ್ಲಿಯೇ ಬಿಟ್ಟಿ ಕೆಲಸಗಳಿಗಾಗಿ ಪೂಜಾರಿ, ಭೂಸಗತ್ತಿಯವರು, ಹೂಗಾರರು, ಕಂಬಾರ, ಕುಂಬಾರ, ಹಾಲು ಮೊಸರು ಮಾರುವವರು, ದಿವಟಿಗೆ ಹಿಡಿಯುವವರು, ತಳವಾರರು, ತಮ್ಮಟೆ ವಾಲಗದವರು ಇದ್ದರು. ದಾರಿ ಉದ್ದಕ್ಕೂ ಎಲ್ಲ ಕಡೆಗೆ ಅರವಟ್ಟಿಗೆಗಳನ್ನು ಇಟ್ಟು ಅದಕ್ಕಾಗಿಯೆ ನೇಮಿಸಿದವರು ಇದ್ದರು. ಅವರಿಗೆ ನೀರಗಂಟಿಯವರೆಂದು ಕರೆಯುತ್ತಿದ್ದರು. ಹೀಗೆ ಅನೇಕ ಆಯಗಾರ ಸಮುದಾಯಗಳೂ ದೇಸಗತಿ ಸೇವಾವರ್ಗದಲ್ಲಿ ಕಂಡುಬರುತ್ತವೆ. ದೇಸಾಯಿಗಳ ಮತ-ಧರ್ಮ ಏನೇ ಆಗಿದ್ದರೂ, ಎಲ್ಲ ಜನಾಂಗ ಸಮೂಹದೊಡನೆ ಉತ್ತಮ ಬಾಂಧವ್ಯ ಹೊಂದಿದ್ದರು. ದೇಸಾಯಿಗಳು ಎಲ್ಲ ಧರ್ಮಗಳಿಗೆ ಪುರಸ್ಕಾರ ನೀಡಿ ಸಮಾನತೆಯ ಹರಿಕಾರರಾಗಿದ್ದುದು ಕಂಡುಬರುತ್ತದೆ. ದೇಸಗತಿಯಲ್ಲಿ ಅನೇಕ ಮತ ಧರ್ಮಗಳು ಕಂಡುಬಂದರೂ ಅವೆಲ್ಲವುಗಳು ಪಾರಂಪರಿಕವಾಗಿ ಉಳಿದುಕೊಂಡು ಬರಲು ಪೋಷಕರಾಗಿ ಉಳಿದದ್ದು ಕಂಡುಬರುತ್ತದೆ. ಈಗಾಗಲೆ ಉಂಬಳಿ ನೀಡಿದ್ದರ ಕುರಿತು ಉಲ್ಲೇಖಿಸಿದ್ದಾಗಿದೆ. ಆ ಕಾಲಕ್ಕೆ ಆಗಾಗ ಪಾವು, ಮಾರು, ಪೋಣೆಮಾರು, ಅರ್ಧ ಮಾರು, ಜಮೀನ ನೀಡುವಾಗ ವತನ ಉಪಯೋಗಿಸುವ ಪೂರ್ವದಲ್ಲಿ ಒಂದು 'ಷರತ್' (ನಿಯಮ) ಹಾಕಿದ್ದು ವಿಶೇಷವಾಗಿ ಕಂಡು ಬರುತ್ತದೆ. ''ನಿಮ್ಮ ಮನೆತನದಿಂದ ಒಂದು ಕುದುರೆ ಹಾಗೂ ಒಬ್ಬ ವ್ಯಕ್ತಿ ಅರಮನೆಯ ಕೆಲಸಕ್ಕೆ ವಂಶಪರಂಪರಾಗತವಾಗಿ ಬರಬೇಕು ಇದಕ್ಕೆ ಯಾರೂ ತಕರಾರು ಮಾಡಬಾರದು ಇದು ನಿಮ್ಮದೆಂದು ಭಾವಿಸಿ ದೇಸಗತಿಗೆ ಅನ್ಯ ಬಗೆಯದೆ ಸುಖ ತರುವಲ್ಲಿ ನಿಮ್ಮ ಸೇವೆಯಾಗಿರಬೇಕು.''[೧೯] ಎಂದು ಸೇವಾ ವರ್ಗದವರಿಗೆ ನೀಡಿದ ಸನದು(ದಾನಪತ್ರ)ಗಳಿಂದ ತಿಳಿದುಬರುತ್ತದೆ. ಪ್ರಮುಖವಾಗಿ ಬೇಡ(ನಾಯಕ) ಜನಾಂಗದವರಲ್ಲಿ ಇದು ಕಂಡುಬರುತ್ತದೆ.

೩.೧.೭.೪. ಹೆರಿಗೆ ಸಂದರ್ಭ ಮತ್ತು ದೇಸಗತಿಗಳು

ದೇಸಗತಿ ಪರಗಣದಲ್ಲಿರುವ ಬೇಡಜನಾಂಗದವರ ಮನೆತನದಲ್ಲಿ ಪ್ರಸೂತಿಯಾಗುತ್ತಿದ್ದ ಸಮಯದಲ್ಲಿ ದೇಸಾಯಿಯವರ ಮನೆಗೆ ಬಂದು ಒಂದು ತಂಬಿಗೆ ನೀರನ್ನು ತೆಗೆದುಕೊಂಡು ಹೋಗುತ್ತಿದ್ದರು. ದೇಸಾಯಿಯು ತನ್ನ ದೋತರದ ಚುಂಗನ್ನು ಆ ತಂಬಿಗೆಯಲ್ಲಿ ಅದ್ದಿ ಕೊಡುತ್ತಿದ್ದನು. ಒಂದು ವೇಳೆ ದೇಸಾಯಿಯು ಇರದೆ ಇದ್ದಲ್ಲಿ ಗರುಡ ಗಂಬಕ್ಕೆ ಕಟ್ಟಿದ ದೋತರದ ಚುಂಗನ್ನು ಅದ್ದಿ ಒಯ್ಯುತ್ತಿದ್ದರು. ಆ ತಂಬಿಗೆ ನೀರನ್ನು ತಂದು ಹೆರಿಗೆಯ ನೋವಿನಿಂದ ಬಳಲುವ ಸ್ತ್ರೀಯರಿಗೆ ಕುಡಿಸುತ್ತಿದ್ದರು. ಇದರಿಂದ ಹೆರಿಗೆ ಸರಳ ರೀತಿಯಲ್ಲಿ ಆಗುವುದೆಂಬ ಭಾವನೆ ಪ್ರಜಾ ಜನರದಾಗಿತ್ತು.

ಇದೇ ರೀತಿ ಇನ್ನೊಂದೆಡೆಗೆ ದೇಸಗತಿ ಮನೆತನದಲ್ಲಿಯ 'ಹುಳ್ಳನುಚ್ಚು' ಹಾಗೂ 'ಕಲ್ಲು ದೋಣಿಯ' ನೀರನ್ನು ದೇಸಾಯಿಗಳ ಅಮೃತ ಹಸ್ತ ಮುಟ್ಟಿಸಿ ಕೊಡುತ್ತಿದ್ದರು. ಇದರಿಂದಲೂ ಹೆರಿಗೆ

ಸುಲಭವಾಗಿ ಆಗುತ್ತಿತ್ತೆಂದು ಭಾವಿಸಿದ್ದರು! ಹೆಣ್ಣು ಮಗು ಜನನವಾದರೆ ಅದೆ ನೀರನ್ನು ೫ ದಿನಗಳವರೆಗೆ ಬಳಸುತ್ತ ಆ ಕೂಸನ್ನು ಎರೆಯುತ್ತಿದ್ದರು. ಒಂದು ವೇಳೆ ಗಂಡು ಮಗು ಜನನವಾದರೆ ದೇಸಗತಿಗೆ ಬಂದು ತಿಳಿಸುತ್ತಿದ್ದರು. ಆಗ ದೇಸಾಯಿಯ 'ಕಿರುಗತ್ತಿ'ಯ ಮೊನೆಯನ್ನು ನೀರಿನಲ್ಲಿ ಅದ್ದಿ ಮತ್ತೆ ಕೊಡುತ್ತಿದ್ದರು. ಕಿರುಗತ್ತಿ ಮೊನೆಯದ್ದಿದ ನೀರನ್ನು ಮಗು ತಾಯಿಯ ಮೊಲೆ ಹಾಲನ್ನು ಚಪ್ಪರಿಸುವ ಪೂರ್ವದಲ್ಲಿಯೆ 'ಗುಟ್ಟಿ' ಹಾಕುತ್ತಿದ್ದರು. ಆ ನೀರಿನಿಂದಲೆ ದಿನಾಲು ಎರೆಯುತ್ತಿದ್ದರು. ಎಂದು "ತಳವಾರ ರಂಗಪ್ಪ ಹೇಳುತ್ತಾನೆ."[೧೫] ಪಾರಂಪರಿಕವಾಗಿ ನಡೆದುಕೊಂಡು ಬಂದ ಇಂಥ ಪರಂಪರೆಯಲ್ಲಿ ಅರ್ಥವಡಗಿದೆ. ತಾಯಿಯ ಗರ್ಭದಿಂದ ಹೊರಬರುವ ಜೀವಿಯೂ ಸಹ ದೇಸಾಯಿಯ ಪರವಾಣಿಗೆಯನ್ನು ಪಡೆದುಕೊಂಡೇ ಹೊರಬರಬೇಕಾದ ಒಂದು ಗುಲಾಮಿ ಸ್ಥಿತಿಯಿದು. ದರ್ಪದ ಸಂಕೇತವಾಗಿ ಮಗು ಕಣ್ಣು ಬಿಡುವ ಮೊದಲೆ ತನ್ನ ಅಡಿಯಾಳಾಗಿ ಬರಬೇಕೆಂಬ ಹಿನ್ನೆಲೆ ಆ ಪರಂಪರೆಗಿತ್ತು. ಒಂದು ಕುದುರೆ ಹಾಗೂ ಒಬ್ಬ ವ್ಯಕ್ತಿ ವಂಶಪರಂಪರಾಗತವಾಗಿ ದೇಸಗತಿ ಚಾಕರಿಗೆ ಬರಬೇಕೆನ್ನುವುದು ಇದರ ಉದ್ದೇಶವಾಗಿದೆ. ಇದೆಲ್ಲವನ್ನು ಗಮನಿಸಿದಾಗ ಬೇಡ ಜನಾಂಗದ ಪಾರಂಪರಿಕ ಮುಖ್ಯ ಉದ್ಯೋಗ ಸೈನಿಕ ವೃತ್ತಿ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಸೈನಿಕ ವೃತ್ತಿಯ ಸಮೀಪದ ಇತರ ವೃತ್ತಿಗಳೆಂದರೆ ಅಂಗರಕ್ಷಣೆ, ನಗರ ಗ್ರಾಮ ರಕ್ಷಣೆ, ಕೋಟೆ ಕೊತ್ತಲುಗಳ ಕಾವಲು ಕೆಲಸ, ಗಸ್ತಿ ತಿರುಗುವುದು ಹಾಗೂ ಬೇಟೆ ಆಡುವುದು ಆಗಿತ್ತು. ಬೇಡರು ಬಾಹು ಸಮರ್ಥ ಜನಾಂಗಕ್ಕೆ ಸೇರಿದವರು. ದೇಸಾಯಿಗಳ ಬೆಂಬಲವನ್ನು ಪಡೆದು ದೇಸಗತಿ ರಕ್ಷಿಸಿದವರಲ್ಲಿ ಇವರ ಪಾತ್ರ ಪ್ರಮುಖವೆನಿಸುತ್ತದೆ.

೩.೨. ಧಾರ್ಮಿಕ ಸಂಬಂಧಗಳು

ಬಾಗಲಕೋಟೆ ಜಿಲ್ಲೆಯ ದೇಸಗತಿಗಳಲ್ಲಿ ಧಾರ್ಮಿಕ ಪರಂಪರೆ ಅನನ್ಯವಾಗಿರುವಂತೆ ವಿಶಿಷ್ಟಪೂರ್ಣವೂ ಆಗಿತ್ತು. ಇವರಲ್ಲಿ ಕ್ಷತ್ರೀಯ, ಬ್ರಾಹ್ಮಣ, ಜೈನ ಹಾಗೂ ವೀರಶೈವರೂ ಇರುವರು. ಅವರು ತಮ್ಮ ಸಂಸ್ಥಾನದಲ್ಲಿ ಇತರೆ ಮತ ಪಂಥಗಳನ್ನು ಪೋಷಿಸಿಕೊಂಡು ಬಂದದ್ದು ಅಲ್ಲದೆ ಸರ್ವಧರ್ಮ ಸಮನ್ವಯತೆಯನ್ನು ಗಾಢಗೊಳಿಸಿದವರಾಗಿದ್ದಾರೆ. ಕ್ರಿ.ಶ.೧೨ನೆಯ ಶತಮಾನದಲ್ಲಿ ಶರಣರು ವೀರಶೈವ ಧರ್ಮವನ್ನು ಪ್ರಚಾರಗೊಳಿಸಿದ್ದು ಮತ್ತು ಇತರೆ ಧರ್ಮದವರಿಗೆ ದೀಕ್ಷೆ ನೀಡಿದ್ದರ ಸಂಗತಿಯನ್ನು ತಿಳಿಯಬಹುದಾಗಿದೆ.

೩.೨.೧. ಹಿಂದೂ ಧಾರ್ಮಿಕಾವರಣ

ದೇಸಾಯಿ ಮನೆತನದವರು ತಮ್ಮ ಮತ ಪಂಥಗಳ ಧಾರ್ಮಿಕ ಪರಿಧಿಯಲ್ಲಿ ಬೆಳೆದುಬಂದರೂ ತಮ್ಮ ಪರಗಣದಲ್ಲಿ ಎಲ್ಲ ಧರ್ಮಗಳಿಗೆ ಸಮಾನವಾದ ಅಸ್ತಿತ್ವ ದೊರಕಿಸಿಕೊಟ್ಟಿದ್ದರ ಅಪೂರ್ವ ದಾಖಲೆಗಳು ನಮಗೆ ಧಾರಾಳವಾಗಿ ಸಿಕ್ಕುತ್ತವೆ. ಅವರ ಆಡಳಿತದಲ್ಲಿ ಇದ್ದಿರಬಹುದಾದ ಅಥವಾ

ನಿರ್ಮಿಸಲ್ಪಟ್ಟ ದೇವಾಲಯಗಳು, ಬಸದಿಗಳು, ದರಗಾಗಳೂ ದೇಸಗತಿಗಳ ಧಾರ್ಮಿಕ ಸೌಹಾರ್ದತೆಯನ್ನು ನಿಚ್ಚಳವಾಗಿ ಪ್ರತಿಬಿಂಬಿಸುತ್ತವೆ. ಕೆಲವು ಧಾರ್ಮಿಕ ನೆಲೆಗಳನ್ನು ಜೀರ್ಣೋದ್ಧಾರಗೊಳಿಸುವಲ್ಲಿ ದೇಸಗತಿಗಳು ತೋರಿಸಿದ ಶ್ರದ್ಧೆ ಹಾಗೂ ದತ್ತಿಗಳನ್ನು ಒದಗಿಸಿದ ಸಂಗತಿ, ಇನಾಮ ಕಮಿಷನ್ ರೀಕಾರ್ಡ ಮತ್ತು ಅಲಿನೇಷನ್ ದಾಖಲೆಗಳಿಂದ ಸ್ಪಷ್ಟವಾಗುತ್ತವೆ.

ಒಂದೆಡೆಗೆ ಆಯಾ ಭಾಗದಲ್ಲಿ ಶೈವರು ನಿರ್ಮಿಸಿದ ಶಿವದೇವಾಲಯಗಳು ಕ್ಷತ್ರೀಯರೆಂದೆನಿಸಿದವರು ನಿರ್ಮಿಸಿದ ಹನುಮಂತ ದೇವರ ದೇವಾಲಯ, ಜೈನರು ನಿರ್ಮಿಸಿದ ಶಿವ ಶರಣರ ಮಠಗಳು, ದರಗಾಗಳು ಪವಿತ್ರ ಧಾರ್ಮಿಕ ಕೇಂದ್ರಗಳಾಗಿ ಕಂಗೊಳಿಸಿದ್ದು ಗಮನಾರ್ಹ. ಈಗಲೂ ಅವಕ್ಕೆ ಅದೆ ಮಾನ್ಯತೆ ಇರುವುದನ್ನು ಕಾಣಬಹುದಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಮುಸ್ಲಿಂರಿಗೆ ಹಿಂದೂ ಧರ್ಮೀಯರ ಬಗ್ಗೆ ಅವರ ಆರಾಧನಾ ಸ್ಥಳಗಳ ಬಗ್ಗೆ ಅಪಾರ ಗೌರವ, ಭಕ್ತಿ ಇರುವುದು ಮಹತ್ವದ್ದೆನಿಸುತ್ತದೆ. ಅಲ್ಲಿ ಆಚರಿಸಲ್ಪಡುವ ಹಬ್ಬ ಹರಿದಿನಗಳು ಊರವರ ಹಬ್ಬಗಳಾಗಿರುವುದರಿಂದ ಧಾರ್ಮಿಕ ನಂಬಿಕೆಗಳ ಬಗೆಗೆ ಅವರಿಗಿರುವ ಒಲವು ಧಾರಾಳವಾಗಿ ಗೋಚರವಾಗುತ್ತದೆ. ಜೈನರು, ಕ್ಷತ್ರೀಯರು ಇರುವ ಆಯಾ ಭಾಗದಲ್ಲಿ ಹಿಂದೂ ಧರ್ಮದ ಪ್ರಭಾವ ದಟ್ಟವಾಗಿರುವುದು. ಅದರಿಂದಾಗಿ ಕೆಲವು ಜೈನ, ಕ್ಷತ್ರೀಯ ದೇಸಗತಿ ಮನೆತನಗಳು ಹಿಂದೂ ಧರ್ಮೀಯರಾಗಿ ಪರಿವರ್ತನೆಗೊಂಡದ್ದು ಅಲ್ಲದೆ ತಮ್ಮ ಸಂಸ್ಥಾನಗಳಲ್ಲಿ ಅದನ್ನು ಬೆಳಕಿಗೆ ತಂದದ್ದು ಇದೆ. ಮತ್ತು ಹಿಂದೂ ಧರ್ಮದ ಗುರುಗಳಿಗೆ ಉಂಬಳಿ ನೀಡಿ, ದೇವಾಲಯಗಳನ್ನು ಕಟ್ಟಿಸಿರುವುದು ಕಂಡುಬರುತ್ತದೆ.

ದೇಸಾಯರ ಕಾಲದಲ್ಲಿ ಅನೇಕ ಗುಡಿ ಗುಂಡಾರಗಳು, ಮಸೀದಿ ದರಗಾಗಳು ಧರ್ಮ ಸಮನ್ವಯತೆಯ ಸಾಂಸ್ಕೃತಿಕ ಕೇಂದ್ರಗಳಾಗಿದ್ದು; ಅವು ಇಂದಿಗೂ ಪರಂಪರಾಗತವಾದ ನಂಬಿಕೆಗೆ ಸಾಕ್ಷಿಯಾಗಿ ನಿಂತುಕೊಂಡಿವೆ.

ಬದಾಮಿ ತಾಲೂಕಿನ ಜಾಲಿಹಾಳದ ಶ್ರೀ ವೆಂಕಟೇಶ್ವರನ ಮೂರ್ತಿಯು ತಿರುಪತಿ ತಿಮ್ಮಪ್ಪನನ್ನೆ ಹೋಲುತ್ತದೆ. ಸದ್ಯ ಇದನ್ನು ವೈಷ್ಣವ ಪಂಥದವರು ಪೂಜಿಸುತ್ತಿದ್ದಾರೆ. ದೇಸಗತಿಯವರು ತಮಗಾಗಿಯೆ ನಿರ್ಮಿಸಿಕೊಂಡು ಇದಕ್ಕೆ ಮೂರು ಹೊತ್ತು ಪೂಜೆ ಸಲ್ಲಿಸುತ್ತಿದ್ದರು. ನಂತರದಲ್ಲಿ ''ತಿರುಪತಿಯಿಂದಲೆ ಆಚಾರ್ಯರನ್ನು ಕರೆತಂದು ನೇಮಿಸಿದ್ದು ಮುರಹರಿನಾಯಕನು ಬರೆದುಕೊಟ್ಟ ತಾಮ್ರ ಶಾಸನದಿಂದ ತಿಳಿದುಬರುತ್ತದೆ.''[೧೬] ದೇಸಾಯರು ಶ್ರೀವೆಂಕಟೇಶ್ವರನಿಗೆ (ದೇವರಿಗೆ) ಹೊಲವನ್ನು ಕೊಟ್ಟಿದ್ದಾರೆ. ಅಲ್ಲದೆ ಆಚಾರ್ಯರಿಗೂ ಹೊಲವನ್ನು ಕೊಟ್ಟಿದ್ದಾರೆ. ಈಗಲೂ ಕೂಡ ಅದರ ಉತ್ಪನ್ನದಿಂದ ಅವರ ಮನೆತನ ನಡೆಯುತ್ತದೆ.

ದೇಸಗತಿಗಳಲ್ಲಿಯೇ ಪವಿತ್ರ ಕ್ಷೇತ್ರವೆಂದರೆ ತೇರದಾಳ ಪ್ರಭು ದೇವರ ದೇವಾಲಯ. ತೇರದಾಳವು ಜೈನರ ಅಗ್ರಹಾರ. ಅದರ ಸುತ್ತಮುತ್ತಲಿನ ಗ್ರಾಮಗಳು ಜೈನರ ಪವಿತ್ರ ನೆಲೆಗಳಾಗಿವೆ. ದೇಸಗತಿಯ

ಕಾಲದಲ್ಲಿ ಅಂದು ಹಿಂದೂ ಧರ್ಮವನ್ನು ಹಾಗೂ ಜೈನ ಪಂಥವನ್ನು ಒಳಗೊಂಡ ಪ್ರದೇಶ ಇದಾಗಿತ್ತು. ಇಲ್ಲಿ ಜೈನರು ಹಾಗೂ ಹಿಂದೂಗಳು ಒಟ್ಟಾರೆಯಾಗಿ ಜೀವಿಸಿದ್ದು ಮಹತ್ವಪೂರ್ಣ ಸಂಗತಿಯಾಗಿ ತೋರುತ್ತದೆ. ಅದೇ ವೇಳೆಯಲ್ಲಿ ವೀರಶೈವ ಶರಣರಿಂದ ಲಿಂಗದೀಕ್ಷೆ ಹೊಂದಿದ್ದರಿಂದ ಅಲ್ಲಮ ಪ್ರಭುವಿನ ಮಠಕ್ಕೂ ನಡೆದುಕೊಳ್ಳುತ್ತಾರೆ. ಇವರ ಹಿಂಬಾಲಿಕ ಜೈನರೂ ಕೂಡ ಶರಣರ ಪ್ರಭಾವದಿಂದ ದೀಕ್ಷೆ ಪಡೆದುಕೊಂಡದ್ದು ತಿಳಿದುಬರುತ್ತದೆ. ದೇಸಾಯರ ವಂಶಾವಳಿಯಲ್ಲಿ ಅಲ್ಲಮ ಪ್ರಭು ದೇವರ ಹೆಸರನ್ನೇ ಇವರು ಇಟ್ಟುಕೊಂಡಿದ್ದಾರೆ. ಇದಕ್ಕೆ ನಿದರ್ಶನವೆಂಬಂತೆ ಮಗಿಯಪ್ಪ-ಮುಗೆಪ್ಪ ಹೆಸರಿದ್ದು ಇದು ಮಗಿಯ ಪ್ರಭು ದೇವರನ್ನು ನಿರ್ದೇಶಿಸುತ್ತದೆ. ತೇರದಾಳ ದೇಸಾಯಿಣಿಯಾದ ಸತ್ಯವ್ವ, ಮಗ "ಜಕ್ಕಪ್ಪನಿಂದ ಗೊಂಕ ಜಿನಾಲಯದಲ್ಲಿ ನೇಮಿ ಜೀನೇಂದ್ರ ವಿಗ್ರಹ ಪ್ರತಿಷ್ಠಾಪನೆ."[೧೭] ಮಾಡಿದ್ದರ ಕುರಿತು ೧೭೪೮ರಲ್ಲಿ ಬರೆಸಿದ ನೇಮಿನಾಥ ಬಸದಿಯ ವಿಗ್ರಹ ಪಾದಪೀಠದ ಶಾಸನದಿಂದ ತಿಳಿದುಬರುತ್ತದೆ.(ಶಕವರ್ಷ ೧೬೭೦)

ಅಲ್ಲದೆ ತೇರದಾಳ ಪ್ರಭುದೇವರ ಮಠದೊಂದಿಗೆ ಇರುವ ಇವರ ಸಂಬಂಧ ತುಂಬಾ ಘನಿಷ್ಠವಾದುದು "ಈ ಮಠದ ಪ್ರಭುಗಳು ತಮ್ಮ ಮತದ ಜತೆಗೆ ಕುಲದೇವರೆಂದು, ಗುರುಗಳೆಂದು ಭಾವಿಸಿದ್ದಾರೆ."[೧೮] ತೇರದಾಳ ಸ್ವಾಮಿ ಮಠಕ್ಕೆ ಕಾಯಿ ಕರ್ಪೂರ, ದೀಪ ಧೂಪ, ಈಗಲೂ ಹೋಗುವುದು ಚಲಾವಣೆಯಲ್ಲಿದೆ. ದೇವರಿಗೆ ವಿಶೇಷ ಉಡುಗೆ ತೊಡುಗೆಯನ್ನು ಸುತ್ತಲೂ ದೇವರಿಗೆ ಕಾರ್ತಿಕ ಮಾಸದಲ್ಲಿ ದೀಪಾರಾಧನೆ ಮಾಡಿಸುತ್ತ ಬಂದಿದ್ದಾರೆ. ತಮ್ಮ ಮೂಲ ಪುರುಷನು ನಡೆದುಕೊಂಡ ಪದ್ಧತಿಯಂತೆ ಈಗಲೂ ನೇಸೂರ ಹನುಪ್ಪನಿಗೆ, ಅರಕೇರಿ ಅಮೋಘಸಿದ್ಧನಿಗೆ, ನಂದೇಶ್ವರ, ನಂದಿಕೇಶ್ವರಿಗೆ ೧೬ ಕಂಬದ ಮೇಲೆ ನಂದಾದೀಪ ಇಡುತ್ತಾ ಬಂದಿದ್ದಾರೆ. ೧೦೧ ವಾಲಗ ಊದಿಸಿ ಆಚರಿಸುತ್ತ ಬಂದಿದ್ದಾರೆ. ಅಲ್ಲದೆ ದೇಸಗತಿಯ ಹಳ್ಳಿಯಲ್ಲಿ ಕೂಡ ಅಲ್ಲಿನ ನಾಡಗೌಡ, ಗೌಡರಿಗೆ ಸಹ ಇದನ್ನು ಮುಂದುವರಿಸಿಕೊಂಡು ಹೋಗಲು ದೀಪಾರಾಧನೆಗಾಗಿಯೆ ಪ್ರತ್ಯೇಕ ಜಮೀನನ್ನು ನೀಡಿದ್ದು ವಿಶೇಷವಾಗಿ ಕಂಡುಬರುತ್ತದೆ.

ಬದಾಮಿ ತಾಲೂಕಿನ ಈಗಿನ ನೀರಬೂದಿಹಾಳ ದೇಸಾಯರು ನಿರ್ಮಿಸಿದ ತುಳಸಿಗಿರಿ ಕ್ಷೇತ್ರವು ಬಾಗಲ ಕೋಟ ತಾಲೂಕಿನಲ್ಲಿದೆ. ತುಳಸಿಗಿರಿ(ತುರ್ಚಿಗೇರಿ) ಪವಿತ್ರ ಕ್ಷೇತ್ರಗಳಲ್ಲೊಂದಾಗಿದೆ. ಹಾಗೂ ನಿಡಗುಂದಿ ಸಮೀಪದ ಯಲಗೂರ ಹನುಮಂತ ದೇವರ ಕ್ಷೇತ್ರವೂ ಕೂಡ ಪ್ರಸಿದ್ಧಿ ಪಡೆದಿದೆ. ಈ ದೇವರ ಪೂಜಾರಿಗಳು ಪರಿಶಿಷ್ಟವರ್ಗದವರಿದ್ದು ಈಗಲೂ ಕೂಡ 'ಪಾಳೆ'ಯಾಗಿ ಪೂಜೆ ಸಲ್ಲಿಸುತ್ತಿದ್ದಾರೆ. ಹಾಗೆ ರೆಡ್ಡಿಗಳು ಇತರೆಯವರೂ ಸಹ ಪೂಜೆ ಸಲ್ಲಿಸುತ್ತಾರೆ. ಪರಿಶಿಷ್ಟ ಜಾತಿಯವರು(ವಾಲ್ಮೀಕಿ) ಪೂಜಾರಿ ಎಂಬ ಕುಲನಾಮದಿಂದ ಕರೆಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಈ 'ಧಾರ್ಮಿಕ ಕ್ರಿಯೆಯು ಪೂರ್ವದಿಂದಲೂ ನಡೆದುಕೊಂಡು ಬಂದುದಾಗಿದೆ. ಪೂಜೆಗಾಗಿಯೆ ಇನಾಂ ಜಮೀನನ್ನು ಕೊಟ್ಟಿದ್ದು

ಪ್ರೇಮಸಿಂಗ ತಪರೇಶಿಯವರಿಂದ ತಿಳಿದುಬರುತ್ತದೆ. ಇದರಿಂದ ಮೇಲು ಕೀಳೆನ್ನದೆ ಸಮಾನತೆಯನ್ನು ತೋರಿಸಿದ್ದು ಕಂಡುಬರುತ್ತದೆ.

ಗದ್ದನಕೇರಿ ಮಠದ ಅಖಂಡೇಶ್ವರ ಸ್ವಾಮಿಗಳಿಂದಲೂ ಕೂಡ ಧಾರ್ಮಿಕ ಕ್ರಿಯೆ ವಿಧಾನ ಅನುಸರಿಸಲು ದೇಸಾಯರು ವಚನ ಪಡೆದಿದ್ದಾರೆ. ಅಖಂಡೇಶ್ವರ ಸ್ವಾಮಿಗಳ ಕುದುರೆ ಎಗರಿದ ಸ್ಥಳದಲ್ಲಿ ನೀರು ಕೆಡವಿದ್ದರಿಂದ ನೀರು ನಿರಂತರವಾಗಿರುವಂತೆ ಆಶೀರ್ವಾದ ಪಡೆದುಕೊಂಡದ್ದು ಕುದುರೆಗೆ ಉಂಬಳಿ ನೀಡಿದ್ದು ಕಂಡುಬರುತ್ತದೆ. ಇದಕ್ಕೆ 'ಕುದುರೆ ಮಾನೆ' ಎಂದು ಕರೆಯುವುದು ಈಗಲೂ ರೂಢಿಯಲ್ಲಿದೆ. ತಿರುಪತಿ ವೆಂಕಟರಮಣನಿಗೆ ಮೂರು ನಾಮವಿರುವಂತೆ ಹನುಮ ದೇವರ ಮೂರ್ತಿಗೂ ಸಹ ಮೂರು ನಾಮ ಇರುತ್ತದೆ. ಇವರೂ ಕೂಡ ತಮ್ಮ ಧಾರ್ಮಿಕ ಆಚರಣೆ ಮಾಡುವಾಗ ಮೂರು ನಾಮ ಧರಿಸುತ್ತಾರೆ. ಪ್ರಸ್ತುತ ಈಗಲೂ ಮುಂದುವರಿದುಕೊಂಡುಬಂದಿದೆ.

ಕೋಟೆಕಲ್ಲ(ವಡವಡಗಿ ಸಮ್ಮತ ಪರೂತಿ) ಪರಗಣದ ಈ ದೇಸಾಯಿಗಳು ವೀರಶೈವ ದೀಕ್ಷೆ ಹೊಂದಿ ವೀರಶೈವ ಕ್ಷತ್ರೀಯರೆನಿಸಿಕೊಂಡಿದ್ದಾರೆ. ''೧೫ನೇ ಶತಮಾನದ ಮಧ್ಯದಲ್ಲಿ ಹಾಗೇ ೧೬ನೇ ಶತಮಾನದ ಪ್ರಾರಂಭದಲ್ಲಿ ವೀರಶೈವ ಶರಣರಿಂದ ದೀಕ್ಷೆ ಹೊಂದಿದ್ದಾರೆ. ''ಶ್ರೀಶೈಲಗಿರಿಯಲ್ಲಿ ತಪಗೈದು ನಿರ್ವಾಣಯೋಗಿ ಎಂದೆನಿಸಿ, ಆನೆಗುಂದಿ ಅಡವಿಯಲ್ಲಿ ತಪಗೈದು ಹಂಪೆಯ ರಾಜನಿಗೆ ಉಪದೇಶ ನೀಡಿ ಮಲಪಹಾರಿಗೆ ಬಂದು ಅಲ್ಲಿನ ದೊರೆ ಶಿವನಪ್ಪ ದೇಸಾಯಿಗೆ ದೀಕ್ಷೆ ನೀಡಿದ್ದು ಇದೆ.''[೧೯] ಮರುಳಶಂಕರ (ಕೊಟೇಕಲ್ಲ ಹುಚ್ಚೇಶ್ವರ ಮಠದ ಹುಚ್ಚಶಿವಯೋಗಿ) ಸ್ವಾಮಿಗಳಿಂದ ಎಂಬುದು ತಿಳಿದುಬರುತ್ತದೆ.

''ಬಳಿಕಲಾ ಶಿವನಪ್ಪ ದೊರೆಯ ತಳುವದತೈತಂದು ಪದಕೆ

ಒಲಿದು ದೀರ್ಘದಂಡವೆಸಗಿ....

ಗುರುವೆ ಶರಣ ಜನಕೆ ಕಲ್ಪತರುವೆ ವೀರಶೈವ ಮತದ

ಶಿರಿಯೆಯೆಂದು ನುತಿಸುತವನು.... ನೀನೆಂದು

ಭಿನ್ನವಿಸಿದನು. ಶರಣರಪ್ಪಣೆಯಂತೆ ಕರೆತಂದು ಅವರ ಅಣತಿಯಂತೆ ನಡೆದುಕೊಂಡು ಜನಕುಲದವರಿಗೆ ಸಹ ದೀಕ್ಷೆ ಕೊಡಿಸಿದನು.[೨೦]

'ಎನ್ನ ಭವಿತ್ವವನು ದೂಡಿ ನಿನ್ನ ಶಿಷ್ಯನನ್ನು ಮಾಡಿ'

ಇನ್ನು ಭವಕೆ ಬಾರದೆಂದೆ[೨೧].... ಎಂದು ಬೇಡಿಕೊಂಡದ್ದು ಇದರಿಂದ ವ್ಯಕ್ತವಾಗುತ್ತದೆ. ಹಾಗೆ 'ಎಲ್ಲೆಲ್ಲಿ ತನ್ನ ಗ್ರಾಮವಲ್ಲಿಯಲ್ಲಿ ಮಠವರಚಿಸಿ ಸಲ್ಲಿಸಿ ಇನಾಮುಗಳನ್ನು..... ನೀಡಿ ಮುಂದೆ ತನ್ನ ವಂಶದವರು ಎಂದೆಂದಿಗೂ ನಿನ್ನ ಕೃಪೆಯ ಹೊಂದಿ ಬಾಳಲೆನುತ... ಮತ್ತೆ ಸ್ವಾಮಿ ನೀನು ನನ್ನ ಕುಲಕೆ

ಕಾಮಧೇನುವಾಗಿ ಸದಾ ಕಾಮಿತಾರ್ಥ ನೀಡಿ ಸಲಹು ಎಂದು ಮರುಳ ಶಂಕರ ದೇವರಲ್ಲಿ (ಹುಚ್ಚ ಶಿವಯೋಗಿ) ಕೃಪೆ ಬೇಡಿದ್ದು ಕಂಡುಬರುತ್ತದೆ. ಇಲ್ಲಿನ ಕೆಲವು ವಿಚಾರಗಳಿಂದ ತಿಳಿದು ಬರುವುದೆನೆಂದರೆ ತನ್ನನ್ನು ಶಿಷ್ಯನಾಗಿ ಮಾಡಿಕೊಳ್ಳುವುದು, ಎನ್ನನ್ನು ಈ ಭವ ಬಂಧನದಿಂದ ದೂರಮಾಡುವುದು ಅರ್ಪಣಾ ಮನೋಭಾವವನ್ನೂ ಧಾರ್ಮಿಕ ಶ್ರದ್ಧೆಯನ್ನೂ, ಭಕ್ತಿಯನ್ನು, ವೈರಾಗ್ಯ ಪೂರ್ಣತೆಯನ್ನು ತಿಳಿಸುತ್ತದೆ.

ತನ್ನ ಗ್ರಾಮಗಳಲ್ಲಿ ಮಠವನ್ನು ರಚಿಸಿದ್ದಲ್ಲದೆ ನನ್ನ ವಂಶದವರು ನಿನ್ನ ಕೃಪೆಯಿಂದ ಬಾಳಲಿ ಎಂದು ಬೇಡಿಕೊಂಡದ್ದು ಮಹತ್ವಪೂರ್ಣವಾದುದಾಗಿದೆ. ಕ್ಷತ್ರೀಯ ವಂಶವು ಬಾಳಬೇಕೆಂದು ತನ್ನ ಕುಲದ ಕಾಮಧೇನಾಗಿ, ವಂಶೋದ್ಧಾರ ಬೆಳೆಯಲು ಕಾಮಿತಾರ್ಥ ನೀಡಿ ಸಲಹು ಎಂದು ಬೇಡಿಕೊಂಡದ್ದು ಅದರಲ್ಲಿ ಅಡಗಿದಂತೆ ತೋರುತ್ತದೆ.

ಐಹೊಳೆ, ಪಟ್ಟದಕಲ್ಲು, ಗಿರಿಸಾಗರ ದೇಸಾಯಿಗಳು ಸಹ ೧೫ನೇ ಶತಮಾನದಲ್ಲಿ, ವೀರಶೈವ ದೀಕ್ಷೆ ಹೊಂದಿದ್ದಾರೆ. "ಕಲೀಂದ್ರರು (ಮುಸಲ್ಮಾನರು) ಜನರ ಮೇಲೆ ರಾಜ್ಯಮಾಡುತ್ತ ಪ್ರಭಲರಾಗಿದ್ದರು. ಮಳೆ ಬೀಳದೆ ಜನರು ತಾಪತ್ರಯ ಪಡುತ್ತಿದ್ದರು. ಅಲ್ಲಿ ಪರ್ಜನ್ಯವು ಬರುವಂತೆ ಮಾಡಿ ಜನರ ಸಂಕಷ್ಟಗಳನ್ನು ದೂರ ಮಾಡಿದನು. ಅಂದಿನಿಂದ ಮಳೆಯ ಮಲ್ಲೇಶನೆಂದು ಹೆಸರು ಪಡೆದನು."[೬೩] ಅವನೆ ಸಾರಂಗದೇವನು. ಅಲ್ಲಲ್ಲಿ ದೀಕ್ಷೆ ಕೊಟ್ಟು ಬಂದಿದ್ದರಿಂದ ಆನೆಗೊಂದಿಯ ಅರಸರಿಂದ ಅವರ ವಂಶಸ್ಥರಿಗೂ ಸಹ ದೀಕ್ಷೆ ನೀಡಲು ಈ ಭಾಗಕ್ಕೆ ಕಳಿಸಿದಂತೆ ತೋರುತ್ತದೆ. ಹಾಗಾಗಿ ಇಲ್ಲಿನ ದೇಸಗತಿಯವರು ದೀಕ್ಷೆ ಹೊಂದಿದ್ದು ಮಹತ್ವಪೂರ್ಣವಾದದ್ದಾಗಿರುತ್ತದೆ.

ಈ ಭಾಗದ ಹಿರೇ ಸೋಮನಾಯಕನೆಂಬ ಬೇಡರ ದೊರೆಯು ಸುತ್ತ ಮುತ್ತಲಿನ ಸೀಮೆಯನ್ನು ಆಳುತ್ತಿದ್ದನು. ಉಳಿದವರಂತೆ ಈತನೂ ಸಹ ವೀರಶೈವ ಮತಾನುವರ್ತಿಯಾದನು. ಇವನೂ ಕೂಡ ಅಕ್ಕರಗಲ್ಲಿನ (ಪಟ್ಟದಕಲ್ಲಿನ) ದೇಸಗತಿಯನ್ನು ಪಟ್ಟದಕಲ್ಲಿನಲ್ಲಿದ್ದುಕೊಂಡು ಆಳುತ್ತಿದ್ದನು. ಇವನಂತೆ ವೀರಪ್ಪನಾಯಕನೆಂಬುವನು ಶಿವದೀಕ್ಷೆ ಹೊಂದಿ ಇಪ್ಪತ್ತರಿಂದ ಮೂವತ್ತು ಮಠ ಮಾನ್ಯಗಳನ್ನು ಕಟ್ಟಿಸಿಕೊಟ್ಟನು. ಚಿರಮಲಗಿ, ಪಟ್ಟದಕಲ್ಲ, ಅಕ್ಕರಗಲ್ಲ, ಸಿದ್ಧನಕೊಳ್ಳ, ಉಪನಾಳ ಹಾಗೂ ಇತರೆ ಸ್ಥಳಗಳಲ್ಲಿ ಮಠ ಕಟ್ಟಿಸಿದ್ದು ವಿಶೇಷವಾಗಿದೆ. ಹಾಗೆ ಅಲ್ಲಲ್ಲಿ ಪಂಚಲಿಂಗಗಳನ್ನೂ ಸ್ಥಾಪನೆ ಮಾಡಿದನು."[೬೪]

ಈ ಎಲ್ಲ ಮೇಲಿನ ವಿವೇಚನೆಯಿಂದ ಎಲ್ಲ ಮತಧರ್ಮಗಳವರು ತಮ್ಮ ಮತ ಧರ್ಮವನ್ನು ಬಿಡದೆ ಅನ್ಯಧರ್ಮವನ್ನು ದೂಷಿಸನೆ ಕಾಲ ಘಟ್ಟಕ್ಕೆ ತಕ್ಕಂತೆ ಇತರೆ ಧರ್ಮವನ್ನು ಅಪ್ಪಿಕೊಂಡದ್ದು ವಿಧಿತವಾಗುತ್ತದೆ.

೩.೨.೨. ಇಸ್ಲಾಂ ಧಾರ್ಮಿಕಾವರಣ

ಧಾರ್ಮಿಕ ಪರಂಪರೆಯಲ್ಲಿ ಇಸ್ಲಾಂ ಧರ್ಮಕ್ಕೆ ದೇಸಾಯಿಗಳು ಅಮೂಲ್ಯವಾದ ಸಹಕಾರ ನೀಡಿರುವುದು ಕಂಡುಬರುತ್ತದೆ. ಪ್ರತಿಯೊಂದು ದೇಸಗತಿಯಲ್ಲಿ ಅಂದರೆ ಪರಗಣದಲ್ಲಿ ಕಸಬೆಯಲ್ಲಿ ಮಸೀದಿ,

ದರ್ಗಾಗಳನ್ನು ಕಟ್ಟಿಸಿ, ಅಲ್ಲಿ ಮುಸ್ಲಿಂ ಮನೆತನದವರನ್ನು ಕರೆತಂದು ಅದರ ಉಸ್ತುವಾರಿ ವಹಿಸಿದ್ದು ಇದೆ. ಕೆಲವು ಕಡೆಗೆ ದೇಸಾಯಿಗಳೇ ಅದರ ಉಸ್ತುವಾರಿ ವಹಿಸಿದ್ದು ಇದೆ. ಇಸ್ಲಾಂ ಧರ್ಮದವರು ಆಚರಿಸುವ 'ಮೊಹರಂ'ನ್ನು ಇಂದಿಗೂ ಆಚರಿಸುತ್ತಾ ಬಂದಿದ್ದಾರೆ. ಒಂದು ವಿಶೇಷವೆಂದರೆ ಚಾಲುಕ್ಯ ಕಟ್ಟಿಡವಾಗಿರುವ ಬಸವಣ್ಣನ ದೇವಾಲಯವು ಕೆಲೂರ ಗ್ರಾಮದಲ್ಲಿದ್ದು ಮಸೀದಿಯಾಗಿ ಪರಿವರ್ತನೆಯಾಗಿದೆ. ಅಲ್ಲಿ ಕಂಡುಬರುವ ನಕ್ಷತ್ರಾಕಾರದ ಕಂಬಗಳು ಪುರಾತನ ಕಾಲವನ್ನೂ ನಿರ್ದೇಶಿಸುತ್ತವೆ. ದೇಸಾಯರ (ನಾಡಗೌಡರ) ಆಡಳಿತದಲ್ಲಿ ಮೇಲ್ಛಾವಣಿಯ ಮೂಲೆಗೊಂದರಂತೆ ನಾಲ್ಕು ಮೀನಾರಗಳು ಕಟ್ಟಿದ್ದು ಇದೆ. ಈ ಮಸೀದಿಯಲ್ಲಿಯೆ ಕೆಲೂರ ನಾಡಗೌಡರು ಅಲಂ (ಅಲ್ಲೆ ದೇವರು) ಪಂಜೆಗಳನ್ನು ಕೂಡ್ರಿಸುತ್ತಾರೆ. ಇವರೆ ಪ್ರಥಮ ಫಕೀರರಾಗಿ ಲಾಡಿ ಹಾಕಿಕೊಳ್ಳುತ್ತಾರೆ. ಊದು ಹಾಕುತ್ತಾರೆ. ನಂತರದಲ್ಲಿ ಕುಲಕರ್ಣಿ, ತಳವಾರ, ವಾಲೀಕಾರ, ಗೌಡರು ಹಾಗೂ ಊರವರು ಧೂಪ ದೀಪ ಹಾಕುವ ಪರಂಪರೆ ಬೆಳೆದುಬಂದಿದೆ. ಇದು ಕೇವಲ ಕೆಲೂರಿಗಷ್ಟೆ ಅಲ್ಲದೆ ಇಡೀ ದೇಸಗತಿ ಮನೆತನಗಳು, ಗೌಡ ಕುಲಗಳಿಗೆ ಅನ್ವಯಿಸುತ್ತದೆ. ಇಂಥ ಇಸ್ಲಾಂ ಧರ್ಮದ ಆಚರಣೆಯನ್ನು ಅದರ ಉಸ್ತುವಾರಿಯನ್ನು ಪರಂಪರಾಗತವಾಗಿ ಮುಂದುವರಿಸಿಕೊಂಡು ಬಂದಿದ್ದಾರೆ. ಇಸ್ಲಾಂ ಧರ್ಮದ ರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಸಾಕಷ್ಟು ಕೆಲಸಗಳನ್ನು ನೀಡುತ್ತಾ ಬಂದಿದ್ದಾರೆ. ಅಲ್ಲಲ್ಲಿ ಕಟ್ಟಿರುವ, ಕಟ್ಟಿಸಿದ ಮಸೀದಿಗಳ ರಿಪೇರಿ ಜೀರ್ಣೋದ್ಧಾರ ಮಾಡಿಸುವುದು ದೇಸಾಯರ ಕರ್ತವ್ಯ ಆಗಿದೆ.

“ಬಿಜಾಪೂರದ ಗೋಲಗುಮ್ಮಟ, ಬಾರಾಕಮಾನ ಪ್ರದೇಶವು 'ಗಣಿ' ದೇಸಾಯರದೆ ಆಗಿದೆ. ಇಲ್ಲಿ ಕಟ್ಟಡ ಕಟ್ಟಿಸಲು ಗಣಿದೇಸಾಯರಿಂದಲೇ ಉಂಬಳಿ ಪಡೆದುದು ಇದೆ.”[೨೪] ಈ ಕುರಿತಾಗಿ ಆದಿಲ್‌ಶಾಹಿಗಳು ಸನದು ನೀಡಿದ್ದರೆಂದು ಅದು ನಾಶವಾಗಿದ್ದರ ಕುರಿತು ಅದರ ತುಣುಕುಗಳನ್ನು ತೋರಿಸುತ್ತಾರೆ.

ಈಗಿನ ಜಮಖಂಡಿ ತಾಲೂಕಿನ ತೇರದಾಳ, ಹನಗಂಡಿ ದೇಸಗತಿಗೆ “ಅಫಜಲ ನಗರ”ವೆಂದು ಆದಿಲ್ ಶಾಹಿಯೆ ಆದೇಶಿಸಿದ ಸನದೊಂದು ಸಿಕ್ಕಿದೆ. ನಂತರದಲ್ಲಿ ಅಫಜಲನಗರವೆಂದು ಕರೆದುದರ ಕುರಿತು ಯಾವುದೇ ಹೇಳಿಕೆಗಳು ಇರುವುದಿಲ್ಲ. ಪ್ರಸ್ತುತ ಹನಗಂಡಿಯೆಂದೇ ಕರೆಯುತ್ತಾರೆ. ಇಲ್ಲಿ ಕಂಚುಗಾರ ಮನೆತನಗಳು ಹೆಚ್ಚು ಇರುವುದರಿಂದ ಕಂಚಿನ ಕರಾಂಡಗಳು ತಯಾರಾಗುವುದರಿಂದ ಕಂಚಗುಂಡಿ>ಕಂಚಗಂಡಿ ಬದಲಾವಣೆ ಹೊಂದುತ್ತ ಹನಗಂಡಿ ಎಂದು ಹೆಸರು ಪಡೆದುದರ ಬಗ್ಗೆ ಅಲ್ಲಿಯ ಹಿರಿಯ ತಲೆಮಾರಿನವರಿಂದ ತಿಳಿದುಬರುತ್ತದೆ. ಇಲ್ಲಿಯೂ ಕೂಡ ಅನೇಕ ದರ್ಗಾಗಳಿವೆ. ಮಾಬೂಸುಹಾನಿ, ಯಮನೂರಪ್ಪ, ಹಸೇನ ಹುಸೇನ, ಮುರ್ತುಜಾ ಖಾದ್ರಿ ಎನ್ನುವ ದೈವಗಳು ಇರುವವು. ಇವೆಲ್ಲವು ಪ್ರಸಾದ ಗದ್ದುಗೆಗಳಾಗಿವೆ. ಇವುಗಳ ಪೂಜೆ ಪುನಸ್ಕಾರ ಊದು, ದೀಪ, ಧೂಪ ಹಾಕುವ ಸಂಪ್ರದಾಯ ತೇರದಾಳ ದೇಸಾಯರಿಂದ ಮುಂದುವರಿದುಕೊಂಡು ಬಂದಿದೆ.

ಉದಾ : "ತೇರದಾಳ ನಾಡಿನಲ್ಲಿರುವ ಕಾಡಿನಲ್ಲಿ ಒಂದು ಚಾವರ ಜಮೀನ ಪರಗಣೆ ಮಜಕೂರದ ಅಡವಿ ಪೈಕಿ, ಆ ಜಮೀನಮಾಡುವವನು ಮಾಲಿಕ ನಾಯಕ ಇದ್ದು ಆ ಜಮೀನ ಇನಾಮವಾಗಿ ಮಕದೂಮ ಸೀಲೇಮಾನ ಬಿನ್ ಮಲಿಕ್ ಭಾಯಿ ಮುಜಾವರ ದರ್ಗಾ ಅಭಂಗಖಾ ಶಈದ ಇವರ ಹೆಸರ್ಲೆ ದರ್ಗಾದ ಶ್ರೀಂಗಾರ ಮತ್ತು ಹೂಗಳಿಂದ ಶ್ರೀಂಗಾರ ಮಾಡಬೇಕು ಮತ್ತು ಊದ ಹಾಕಬೇಕು (ರೋಷಸಾಯಿಚೆ ಊದ ಕರೀತಾ) ಇದು ದಯಾಖಾನರ ಚೀಠಿ ಪ್ರಕಾರ ಮತ್ತು ಅವರ ಹುಕುಂ ಪ್ರಕಾರ ನಡೇತಾ ಹೋಗತಕ್ಕದ್ದು"[೨೫] ಎಂದು ಆದಿಲ್ ಶಾಯಿ(ಫಸಲಿ ೯೭೩ ಅಂದರೆ ೧೫೬೩ನೇ ಸೆಪ್ಟೆಂಬರ್) ಫಾರಸಿಯ ಸನದಿನಿಂದ ತಿಳಿದುಬರುತ್ತದೆ. ದೇಸಾಯಿಗಳು ಜೈನ ಪಂಥದವರು ಇರುವುದರಿಂದ ಆಗ ಮುಂದುವರಿಸಿದ್ದರೆಂದು ನಂತರದಲ್ಲಿ ಮುಸ್ಲಿಂ ಸೈಯದರನ್ನು ನೇಮಿಸಿ ಅವರಿಗೆ ವಯಿಸಿಕೊಟ್ಟರೆಂದು ತಿಳಿದುಬರುತ್ತದೆ. ತೇರದಾಳದಲ್ಲಿರುವ ಸೈಯದ ಮನೆತನದವರಲ್ಲಿ ಕೂಡ ಈ ಕುರಿತಾದ ಮಾಹಿತಿ ಸಿಗುತ್ತವೆ. ಈ ದರ್ಗಾಕ್ಕೆ ಇಂದಿಗೂ ಗದ್ದುಗೆಗೆ ಗಲ್ಲೀಪ ಹೂ ಹಾರ ಕಳಿಸುತ್ತಿದ್ದಾರೆ. ಈ ಪರಗಣದ ಹತ್ತಾರು ಗೌಡ ಕುಲಗಳು ಹಿಂದಿನ ಪರಂಪರೆಯನ್ನು ಜಾತಿ, ಮತ-ಪಂಥ ಎಣಿಸದೆ ಮೇಲಾಧಿಕಾರಿಗಳ ಹುಕುಂ ಪ್ರಕಾರ ನಡೆಸುತ್ತಿದ್ದುದು ವಿಶೇಷವಾಗಿ ಕಂಡುಬರುತ್ತದೆ.

ಹುನಗುಂದ ತಾಲೂಕಿನ ತುರಮರಿ, ನಂದವಾಡಗಿಯ ದೇಸಗತಿಯು ಬ್ರಾಹ್ಮಣ ದೇಸಗತಿಯಾಗಿದ್ದು ಅಲ್ಲಿನ ಮಸೀದಿ ದರಗಾದ ಆಡಳಿತವು ಇವರಿಂದಲೆ ನಡೆಯುತ್ತದೆ. ಹಾಗೆ ಮುಧೋಳ ತಾಲೂಕಿನ ಲೋಕಾಪೂರ ಜ್ಞಾನೇಶ್ವರ ಮಠವು ಮುಸ್ಲಿಂ ಹುಸೇನ ಖಾಜಾರದು ಆಗಿದೆ. ಗುರುವು ಮುಸ್ಲಿಂ ಫಕೀರನಾಗಿದ್ದು ಶಿಷ್ಯ ಬ್ರಾಹ್ಮಣ ಪಂಥಕ್ಕೆ ಸೇರಿದವನಾಗಿದ್ದಾನೆ. ಅವರ ಶಿಷ್ಯರಾದ ಈಗಿನ ಸ್ವಾಮಿಗಳು ಹಸಿರು ರುಮಾಲು ಸುತ್ತಿ ದೀನ ಹಾಕುತ್ತಾರೆ. ಮುಸ್ಲಿಂ ಸಂಪ್ರದಾಯದ ಪ್ರಕಾರ ಮತ್ತೆ ಹಿಂದೂ ಸಂಪ್ರದಾಯದ ಪ್ರಕಾರ ಲೋಬಾನದ ಹೊಗೆ ಹಾಕಿ ಪೂಜಿಸುತ್ತಾರೆ. ಇಲ್ಲಿನ ದೇಸಾಯಿಗಳು ಮಠ ಕಟ್ಟಿಸಿ ಅದರ ಪುನುರುಜ್ಜೀವನವನ್ನು ಮಾಡಿಸಿದ್ದಾರೆ. ಅದರ ನಿತ್ಯಸೇವೆಗಾಗಿ ಜಮೀನನ್ನು ಉಂಬಳಿಯಾಗಿ ನೀಡಿದ್ದಾರೆ.

"ದರಗಾದ ಉರುಸಿನ ದಿನ ಹೊರಡುವ ಸಂದಲ್ ಮೆರವಣಿಗೆ ಹಿಂದೂ ಬಾಂಧವರ ಮನೆಯಿಂದ ಅಂದರೆ ಗೌಡರು, ನಾಡಗೌಡರು ದೇಸಾಯಿಗಳ ಮನೆಯಿಂದ ಪ್ರಾರಂಭವಾಗುವುದು."[೨೬] ಅಂದಿನ ಮೆರವಣಿಗೆ ದಿನದಲ್ಲಿ ಮಷಾಲ್ (ದಿವಟಿಗೆ) ಹಿಡಿಯುವ ಹಕ್ಕು ಹಿಂದುಗಳದಾಗಿರುತ್ತದೆ. ಇದಕ್ಕೆ ನಿದರ್ಶನವೆಂಬಂತೆ ಇಲಕಲ್ಲ ಮುರ್ತುಜಾ ಖಾದ್ರಿಯವರ ಉರುಸಿನ ಅಂಗವಾಗಿ ನಡೆಯುವ ಎಲ್ಲ ಕಾರ್ಯಕ್ರಮಗಳ ಸಮಿತಿ ಅಧ್ಯಕ್ಷರು ಹಿಂದುಗಳೇ ಆಗಿರುವರು. ಮತ್ತು ಉರುಸಿನ ದಿನ ಸಲ್ಲಿಸುವ ಗಂಧ ಪುಷ್ಪಾದಿಗಳ ಸೇವೆಯೂ ಗೌಡ, ಕುಲಕರ್ಣಿ, ದೇಸಾಯಿ, ನಾಡಗೌಡರದಾಗಿರುವುದು ಇಲ್ಲಿನ ವೈಶಿಷ್ಟ್ಯವಾಗಿದೆ. ರಕ್ಕಸಗಿ ಅಮರಾವತಿ, ಐಹೊಳೆ ದೇಸಾಯರದಲ್ಲದೆ, ಕಂದಗಲ್ಲ, ಕರಡಿ ನಂದವಾಡಗಿ

ದೇಸಾಯರಿಂದ ಶುರುವಾಗಿ ನಂತರ ಭಕ್ತರ ಸೇವೆಯಿಂದ ನಡೆದುಕೊಂಡು ಮುಂದುವರಿದಿದ್ದು ಕಂಡುಬರುತ್ತದೆ.

ಹೀಗೆ ಪ್ರತಿಯೊಂದು ಭಾಗದಲ್ಲಿ ವಿವಿಧ ಹಬ್ಬಗಳನ್ನು ಉರುಸುಗಳನ್ನು ತಮ್ಮದೆ ಆದ ವಿಶಿಷ್ಟ ರೀತಿಯಲ್ಲಿ ಆಚರಿಸುವಂತೆ ಪಾಲಿಸಿಕೊಂಡು ಬಂದುದು ಇದೆ. ಉರುಸುಗಳು ಹಿಂದೂ ಸಂಸ್ಕೃತಿಯ ಮತ್ತು ಮುಸ್ಲಿಂ ಸಂಸ್ಕೃತಿಗಳ ಮಧುರ ಮಿಲನದಿಂದ ಹುಟ್ಟಿ ಬೆಳೆದು ಬಂದವುಗಳಾಗಿವೆ. ಪ್ರಾದೇಶಿಕವಾಗಿ ಪ್ರಚಲಿತವಿರುವ ಉರುಸುಗಳ ಆಚರಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಭಾವೈಕ್ಯದ ಹೆಗ್ಗುರುತುಗಳು ಸ್ಪಷ್ಟವಾಗಿ ಗೋಚರಿಸದಿರಲಾರವು. ಕೆಲವೊಂದು ಉರುಸುಗಳು ಜಾತ್ರೆಗಳಾಗಿ ಪರಿವರ್ತನೆಗೊಂಡಿವೆ. ಅದಕ್ಕೊಂದು ಉದಾಹರಣೆ -ಯಮನೂರಪ್ಪನ ಉರುಸು, ಮುಧೋಳ ಸೈಯದ ಸಾಹೇಬರ ಉರುಸು, ಬೀಳಗಿ ಖಾಜಾ ಹುಸೇನ ಉರುಸು, ಇಲಕಲ್ಲ ಖಾದ್ರಿಯವರ ಉರುಸುಗಳಾಗಿವೆ. ಇವೆಲ್ಲವೂ ಹಿಂದೂ ಮುಸ್ಲಿಂರ ಭಾವೈಕ್ಯದ ಪವಿತ್ರ ಕ್ಷೇತ್ರಗಳಾಗಿವೆಯೆಂಬುದನ್ನು ಯಾರು ಅಲ್ಲಗೆಳೆಯುವಂತಿಲ್ಲ. ಇದರ ಹಿಂದಿನ ಶಕ್ತಿ ಎಂದರೆ ದೇಸಾಯಿಗಳೆ ಆಗಿದ್ದರು. ಈಗ ಟ್ರಸ್ಟ ಮಾಡಿದ್ದರಿಂದ ದೇಸಾಯರ ಹಕ್ಕುಗಳು ಮೊಟಕುಗೊಂಡಿವೆ. ಆದರೆ ಅವರ ಸೇವೆ ಕಾಣಿಕೆ ಪ್ರಸ್ತುತದಲ್ಲೂ ಚಲಾವಣೆಯಲ್ಲಿವೆ.

೩.೨.೩.ದೇಸಗತಿಯವರು ನೀಡಿದ ಅಲ್ಲಂಗಳು

ಅಲ್ಲಂಗಳು ಎಂದರೆ 'ಪಂಜೆಗಳು' ಎಂದು ಹೆಸರು. ಅದನ್ನು ಜನ ರೂಢಿಯಲ್ಲಿ ಅಲ್ಲಾ>ಅಲ್ಲೇ ದೇವರೆಂದು ಕರೆಯುತ್ತಾರೆ. ಇವು ಪಂಚಲೋಹದಿಂದ ಮಾಡಿದವುಗಳಾಗಿವೆ. ಇವುಗಳೂ ಆ ಊರಿನ ಗೌಡರ, ನಾಡಗೌಡರ ದೇಸಾಯರ ಮನೆಯಲ್ಲಿರುತ್ತವೆ. ನಾವೂ ಕೂಡಾ ಕಲಬುರ್ಗಿ ಕಲ್ಯಾಣದ ಗೌಡರಾಗಿರುವುದರಿಂದ ಆ ಊರನ್ನು ಬಿಟ್ಟು(ವಲಸೆ) ಬರುವಾಗ ನಮ್ಮ ದೇವರ(ಅಲ್ಲಂ)ನ್ನು ನಮ್ಮ ಹಿರಿಯರು ತಂದಿದ್ದಾರೆ. ಅವುಗಳು ಹುಸೇನ ಅಲ್ಲಂ, ಬಾರಾ ಇಮಾಮ್ ಅಲ್ಲಂ ಎಂದು ನಮ್ಮ ಮನೆತನದ ಹಿರಿಯರಿಂದ ತಿಳಿದುಬರುತ್ತದೆ. ಇವುಗಳಿಗಾಗಿ ಕೆಲವು ತೊಡಿಗೆ(ಸಮವಸ್ತ್ರ)ಗಳಿದ್ದು ಅವು ರಾಜಪೋಷಕದಂತೆ ಇರುತ್ತವೆ.

ಅಲ್ಲಂಗಳಲ್ಲಿ ಒಂದು ದೈವದ ಅಲ್ಲಂ, ಇನ್ನೊಂದು ದೇಸಾಯರ ಅಲ್ಲಂ ಇರುತ್ತದೆ. ಇವೆರಡಕ್ಕೂ ಊರಿನ ಸಮಸ್ತ ಜನರು(ಹಿಂದು-ಮುಸ್ಲಿಂರು) ದರ್ಶನ ಭಾಗ್ಯ ಪಡೆದು 'ಜಿಯಾರತ್ ' ಕೈಕೊಂಡು ಫಕೀರರಾಗುವರು. ಅಲ್ಲಂಗಳು ದೇಸಾಯರ ವಾಡೆಗೆ ಬಂದು ಬೆಟ್ಟಿಕೊಟ್ಟು ಮುಂದೆ ಸಾಗುತ್ತವೆ. ದೇಸಗತಿಯವರು ಬೆಳ್ಳಿ ಛತ್ರಿಕೆ, ಕುದುರೆ, ತೊಟ್ಟಿಲು, ನವಿಲುಗರಿ, ಹಣ, ಉತ್ತತ್ತಿ, ಲಿಂಬಿಹಣ್ಣು, ಖೊಬ್ರಿ ಎಲೆ ಅಡಿಕೆಗಳನ್ನು ಅಲ್ಲಂಗಳ ಮುಬಾರಕಕ್ಕೆ ಅರ್ಪಿಸಿ ಪುನೀತರಾಗುತ್ತಾರೆ. ಆಸಕ್ತರು ಹರಕೆ ಕೈಗೊಳ್ಳುತ್ತಾರೆ. ''ಮಕ್ಕಳ ಭಾಗ್ಯವಿಲ್ಲದವರು ಹರಕೆ ಹೊತ್ತು ತೊಟ್ಟಿಲು ಕೊಟ್ಟದ್ದು ಇದೆ''[೨೭] ಮರು ವರುಷ ಹುಟ್ಟಿದ ಕೂಸಿಗೆ ಹುಸೇನ/ಹಸೇನ ಅಂತ ನಾಮಕರಣ ಮಾಡಿದ್ದು ಇದೆ.

ಮೊಹರಂದಲ್ಲಿ ಆಚರಿಸುವ ಸಂದರ್ಭದಲ್ಲಿ ಏನೇ ಖರ್ಚು ಬಂದರೂ ಸಹ ಅದರ ಖರ್ಚು ವೆಚ್ಚವನ್ನು ಅಲ್ಲಿರುವ ದೇಸಾಯರೆ ನೋಡಿಕೊಳ್ಳುತ್ತಾರೆ. ಗುದ್ದಲಿ ಹಾಕುವುದರಿಂದ ಹಿಡಿದು ಅವನ್ನು ಮುಚ್ಚುವವರೆಗಿನ ಜವಾಬ್ದಾರಿ ದೇಸಾಯರದೆ ಆಗಿರುತ್ತದೆ.

ಈ ಹಿನ್ನೆಲೆಯಲ್ಲಿ ವಿವೇಚಿಸಿದಾಗ ಮಾನವ ಜನಾಂಗಗಳ ಆಗು ಹೋಗುಗಳ ಮೇಲೆ ಮತ ಧರ್ಮಗಳು ಬೀರುವ ಪ್ರಭಾವ ಗಾಢವಾದದ್ದು. ಹಿಂದೂ ಪಂಗಡಕ್ಕೆ ಸೇರಿದ ಜಾತಿಗಳಲ್ಲಿ ಮತೀಯ ಸಾಮರಸ್ಯವಿರುವಂತೆ ಹಿಂದು-ಮುಸ್ಲಿಂ ಕೋಮು ಸೌಹಾರ್ದಗಳಿರುವ ಆಚರಣೆಗಳು ಇದ್ದುದು ಕಂಡುಬರುತ್ತವೆ. ಇತರೆ ಯಾವುದೇ ಮತಕ್ಕಿಂತ ಇಸ್ಲಾಂ ಧರ್ಮ ಕನ್ನಡ ಜನಪದಕ್ಕೆ ಹೆಚ್ಚು ನಿಕಟವಾಗಿದೆ. ಅಷ್ಟೆ ಅಲ್ಲದೆ "ಹಿಂದೂ ಮುಸ್ಲಿಂ ಧರ್ಮಗಳೆರಡೂ ಒಂದಾಗಿ ನಡೆಸುವ ಆಚರಣೆ, ಆರಾಧನೆ ಹಬ್ಬ, ಉತ್ಸವ ಉರುಸುಗಳು ಜನಪದ ಬದುಕಿನ ವೈವಿಧ್ಯಮಯ ಸಾಮೂಹಿಕತೆಗೆ ನಿಮಿತ್ತವಾಗಿವೆ. ಈ ಆಚರಣೆಗಳು ಕೇವಲ ಭಕ್ತಿ ಪ್ರದರ್ಶನದ ಮಾಧ್ಯಮವಾಗಿರದೆ, ಬಂಧುಗಳು ನೆರೆಯವರು, ಎಲ್ಲರೂ ಏಕತ್ರಗೊಂಡು ಪರಸ್ಪರ ಸುಖ-ದುಃಖ ಹಂಚಿಕೊಂಡು ಆನಂದಿಸುವ ಪವಿತ್ರ ತಾಣಗಳಾಗಿವೆ.

ಗ್ರಾಮೀಣ ಭಾಗದಲ್ಲಿ ಊರೊಡೆಯನ ಮಾರ್ಗದರ್ಶನದಲ್ಲಿ ಪ್ರಾರಂಭವಾದ ಸಾಂಸ್ಕೃತಿಕ ಹಬ್ಬವು ಹಿಂದೂ-ಮುಸ್ಲಿಂರನ್ನು ಒಂದುಗೂಡಿಸುವ, ಮತೀಯ ಸಾಮರಸ್ಯವನ್ನು ಗಟ್ಟಿಗೊಳಿಸುವ, ಕೋಮ ಸೌಹಾರ್ದತೆಯನ್ನು ಕಾಪಾಡಿಕೊಂಡು ಬರುವವುಗಳಾಗಿವೆ. ಇದು ಗ್ರಾಮೀಣ ಭಾಗದ ಏಳಿಗೆಗೆ ಅನಿವಾರ್ಯವಾದ ಮುಖ್ಯ ಸೂತ್ರಗಳಾಗಿವೆಯೆಂದರೆ ತಪ್ಪಾಗಲಾರದು.

ಒಟ್ಟಾರೆಯಾಗಿ ಯಾವುದೆ ಮತ ಪಂಥದವರಾದರೂ ಸಹ ತಮ್ಮ ತಮ್ಮ ಮತ ಪಂಥದ ಜೊತೆಗೆ ಧಾರ್ಮಿಕ ಸಹಬಾಳ್ವೆಯಿಂದ ಬಾಳಿದ್ದು ಕಾಣುತ್ತದೆ. ಎಲ್ಲಾ ಮತ ಧರ್ಮಗಳನ್ನು ತನ್ನ ನೂರಾರು ಗ್ರಾಮಗಳಲ್ಲಿ ಬೆಳೆಸಿ, ಪೋಷಿಸಿ, ರಕ್ಷಿಸಿಕೊಂಡು ಬಂದಿರುವರೆಂಬುದು ಮೇಲಿನ ವಿವೇಚನೆಯಿಂದ ತಿಳಿದುಬರುತ್ತದೆ. ಅನೇಕ ಗುಡಿಗುಂಡಾರ ಕಟ್ಟಿಸಿ, ಮಸೀದಿ, ದರ್ಗಾ ಪುನರುಜ್ಜೀವನಗೊಳಿಸಿ ಸೌಹರ್ದ ಬದುಕಿಗೆ ಚಾಲನೆ ನೀಡಿದ್ದು ವಿಶಿಷ್ಟವಾಗಿ ಕಂಡುಬರುತ್ತದೆ. ಧಾರ್ಮಿಕ ವ್ಯವಸ್ಥೆಯಲ್ಲಿ ಸಮಾಜದ ಚಿಂತನೆಗೆ ಶಕ್ತಿರೂಪದಲ್ಲಿ ನಿಂತವರೆ ದೇಸಾಯಿಗಳೆಂಬುದು ಬೇರೆ ಏನು ಹೇಳಬೇಕಿಲ್ಲ. ಹೀಗೆ ಧಾರ್ಮಿಕ ಚೌಕಟ್ಟನ್ನು ದೇಸಗತಿಯಲ್ಲಿ ಬಹುನೆಲೆಯಲ್ಲಿ ಗುರುತಿಸಬಹುದಾಗಿದೆ.

೩.೩. ಆರ್ಥಿಕ ಸ್ಥಿತಿ-ಗತಿ

ದೇಸಗತಿ ಮನೆತನಗಳ ಆಯಾಕಾಲದ ಕಂದಾಯ ಪದ್ಧತಿಯೇ ಆರ್ಥಿಕ ವ್ಯವಸ್ಥೆಯ ಮುಖ್ಯ ಅಂಗವಾಗಿತ್ತು. ಒಕ್ಕಲುತನ ಆರ್ಥಿಕ ಚಟುವಟಿಕೆ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳನ್ನು ಬಿಂಬಿಸುವ ಅಂಶವಾಗಿತ್ತು. ದೇಸಗತಿ ಪ್ರದೇಶದ ವ್ಯಾಪ್ತಿಯ ಒಟ್ಟು ಆರ್ಥಿಕ ವ್ಯವಸ್ಥೆಯನ್ನು ತಿಳಿಯಲು ಅವರಿಗೆ

ಕೊಡ ಮಾಡಿದ ದಾನ ಪತ್ರಗಳು, ಬರೆದಿಟ್ಟ (ಡೈರಿ) ಉಲ್ಲೇಖಗಳು ಲಾವಣಿಗಳು(ಲಾವಣಿ) ಪುಸ್ತಕಗಳು, ಜಮಾ ಖರ್ಚಿನ ಕೀರ್ದಿಗಳು ಮುಂತಾದವುಗಳಿಂದ ಆರ್ಥಿಕ ವ್ಯವಸ್ಥೆಯ ವಿವರಗಳು ತಿಳಿದುಬರುತ್ತವೆ.

ಜನರ ಶಿಕ್ಷಣ, ಆಡಳಿತ, ರಾಜಕೀಯದ ಬದಲಾವಣೆ ಊಳುವವನೆ ಒಡೆಯ (Tenensy act) ಮತ್ತು ಭೂದಾನ ಪದ್ಧತಿ (ವಿನೋಬಾಭಾವೆ)ಯಂಥ ಸಂಗತಿಗಳು ದೇಸಗತಿಗಳ ಆರ್ಥಿಕ ಸ್ಥಿತಿಗತಿಯನ್ನು ಏರುಪೇರು ಮಾಡಿದವು. ರಾಜಕೀಯ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಭೂದಾನ ಅಂದೋಲನವನ್ನು ಮಾಡಿ ದೇಸಗತಿಯವರ ಭೂಮಿಯನ್ನು ಭೂ ರಹಿತ ರೈತರಿಗೆ ಭೂ ದಾನವನ್ನು ಮಾಡಲಾಯಿತು. ಜನರ ಶೈಕ್ಷಣಿಕ ಪರಿಸರ ಅಭಿವೃದ್ಧಿಯಾದಂತೆ ರಾಜಕೀಯದ ದೇಸಗತಿಗಳ ರಾಜಕೀಯ ಸ್ಥಾನಮಾನ ಕುಸಿಯುತ್ತ ನಡೆಯಿತು. ಆದರೆ ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳನ್ನು ಎಂದಿನಂತೆ ಮುಂದುವರಿಸಿಕೊಂಡು ಬಂದರೂ ಅದೊಂದು ಅಧಿಕಾರದ ಪ್ರಶ್ನೆಯಾಗದೆ ಚಾಜಿನ ಬಾಬ್ತಾಗಿ ಉಳಿದಿದೆ. ಅಂದರೆ ದೇಸಾಯರೂ ಪ್ರಜಾ ಪ್ರಭುತ್ವದಲ್ಲಿ ಪ್ರಜೆಗಳ ಸ್ಥಾನಮಾನ ಹೊಂದಿದ್ದರು ಎಂಬುದು ಮುಖ್ಯವಿಚಾರ.

ದೇಸಗತಿಯ ಪ್ರತಿಯೊಂದು ಗ್ರಾಮ, ಹಳ್ಳಿ, ಕಸಬೆಗಳು ಮುಖ್ಯವಾಗಿ ವ್ಯವಸಾಯಿಕ ಪ್ರದೇಶಗಳಾಗಿದ್ದವು. ಇವು ಆರ್ಥಿಕದ ಐಶ್ವರ್ಯದ ಪ್ರಮುಖ ಆಧಾರಗಳಾಗಿದ್ದವು. ರೈತನೆ ಹಳ್ಳಿಯ ಹಾಗೂ ಸಂಸ್ಥಾನದ ಪ್ರಮುಖ ವ್ಯಕ್ತಿಯಾಗಿದ್ದನು. ರೈತನೆ ರಾಷ್ಟ್ರದ ತ್ರಾಣ, ರೈತನೆ ರಾಷ್ಟ್ರದ ಪ್ರಾಣ, ರೈತನ ಕರಗಳಲ್ಲಿ ಕ್ಷಾತ್ರ ತೇಜವಿದೆ, ದೈವಿ ತೇಜಸ್ಸಿದೆ. ಅವನ ಸಂಪತ್ತೆ ದೇಸಗತಿ ಸಂಪತ್ತು, ಅವನ ಭಾಗ್ಯವೆ ದೇಶದ ಭಾಗ್ಯ, ರೈತರ ಉದ್ಧಾರವೇ ದೇಶೋದ್ಧಾರ ಎಂದು ನಂಬಿದ್ದರು. "ರೈತನಲ್ಲಿ ಸುಖ, ಸಂಪತ್ತು ಸಮೃದ್ಧಿಯಾಗಿದ್ದರೆ ದೇಶದಲ್ಲಿ ನೆಲವೂ, ಜಲವೂ, ಸಂಪತ್ತು ನದಿಯಂತೆ ಲೀಲಾಜಾಲವಾಗಿ ಹರಿಯುತ್ತದೆ" ಎಂದು ನಂಬಿದವರಾಗಿದ್ದರು. 'ಒಕ್ಕಲಿಗನು ಒಕ್ಕದಿದ್ದರೆ ಬಿಕ್ಕುವುದು ಜಗವೆಲ್ಲ' ಎಂಬ ಮಾತೂ ಕೂಡ ರೈತನ ವ್ಯಕ್ತಿತ್ವವನ್ನು ತೋರ್ಪಡಿಸುತ್ತದೆ.

ಈ ಮೇಲಿನ ವಿವೇಚನೆಯನ್ನು ಗಮನಿಸಿದಾಗ ರೈತರೆ ಕೃಷಿ ಕೇಂದ್ರವಾಗಿದ್ದರೆಂದೂ ಕೃಷಿಯ ಮೇಲೆಯೆ ದೇಸಗತಿ ನಿಂತಿತ್ತೆಂದು ಹಾಗೆ ಕೇಂದ್ರ ಸರಕಾರ(ಆದಿಲ್‌ಶಾಹಿ)ವು ಕೂಡ ಇದರ ಮೇಲೆ ತನ್ನ ಸಕಲ ಚಟುವಟಿಕೆಯನ್ನು ನಿರ್ವಹಿಸುತ್ತಿತ್ತೆಂಬುದು ಸ್ಪಷ್ಟವಾಗುತ್ತದೆ.

ಕೃಷಿಯು ಮಳೆಯೊಂದಿಗೆ ಜೂಜಾಟ ಮಾಡುವುದರಲ್ಲಿಯೇ ಕಾಲ ಕಳೆಯುತ್ತಿದ್ದಿತು. ಅಂದರೆ ೫ ವರ್ಷಕ್ಕೊಮ್ಮೆ ೧೦ ವರ್ಷಕ್ಕೊಮ್ಮೆ ಬರ ಬಿದ್ದೆ ಬೀಳುತ್ತಿತ್ತು. ಇದರಿಂದ ರೈತರು ತಮ್ಮ ಕೃಷಿಯನ್ನು ಬಲಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. 'ಬರಕ್ಕೆ ಬಾರೀ ಕಾಯಿ, ಸುಖಕ್ಕೆ ಉಣಚಿ ಕಾಯಿ' ಎಂಬ ಮಾತು ಅರ್ಥಪೂರ್ಣವಾಗಿದೆ. ಅಂದರೆ ಬರಗಾಲ ಬರುವ ಪೂರ್ವದಲ್ಲಿಯೇ ಬಾರಿ ಬಾರಿ ಕಾಯ್ದುಕೊ ಎನ್ನುವುದಾಗಿದೆ. ತಾನು ಸುಖವಿರುವುದಲ್ಲದೆ ಪ್ರಾಣಿಗಳೂ ಸಹ ಸುಖವಿರಬೇಕಾದರೆ 'ಉಣಚಿ' (ಜೋಳದ ದಂಟು, ಹೊಟ್ಟು, ಮೇವು) ಕಾಯ್ದುಕೊ ಎಂಬುದಾಗಿದೆ.

ಅಂದಿನ ದಿನಮಾನಗಳಲ್ಲಿ ವ್ಯವಸಾಯದ ರೀತಿಗಳು ತಕ್ಕಮಟ್ಟಿಗೆ ಇದ್ದುದರಿಂದ ಹೆಚ್ಚು ಫಸಲನ್ನು ಪಡೆಯುವಲ್ಲಿ ಸಾಧ್ಯವಾಗುತ್ತಿರಲಿಲ್ಲ. ಎರಡು ಬಗೆಯ ಬೆಳೆ ಬೆಳೆಯುತ್ತಿದ್ದರು. ಒಂದು ಮುಂಗಾರು, ಮತ್ತೊಂದು ಹಿಂಗಾರು. ಕೃಷಿ ಭೂಮಿಯಲ್ಲಿ ಬೇರೆ ಬೇರೆ ಬೆಳೆಯನ್ನು ಬೆಳೆಯದೆ ಒಂದೇ ಫಸಲನ್ನು ಬೆಳೆಯುತ್ತಿದ್ದರು. ಇಲ್ಲಿನ ಭೂ ಗುಣ, ಹವಾಮಾನಕ್ಕೆ ತಕ್ಕಂತೆ ರೈತರು ಅಂದರೆ ದೇಸಾಯಿಗಳು ಒಂದೇ ರೀತಿಯ ಬೆಳೆಯನ್ನು ಪ್ರತಿವರ್ಷದಲ್ಲಿ ಬೆಳೆಯುತ್ತಿದ್ದುದು ಕೆಲವು ಆಧಾರಗಳಿಂದ ತಿಳಿದು ಬರುತ್ತದೆ.

ದೇಸಗತಿಯವರು ಬರೆದಿಟ್ಟ ಕೆಲವು ಮೋಡಿದಾಖಲೆಗಳಲ್ಲಿ ಕೃಷಿ ಭೂಮಿಯ ಫಲವತ್ತತೆ, ಬೆಳೆಗಳು, ಹಾಗೂ ದನಕುರಿಗಳ ಬಗ್ಗೆ ಮಾಹಿತಿ ಸಿಗುತ್ತದೆ. ಮೂರರಿಂದ ಐದು ವರ್ಷಗಳಿಗೊಮ್ಮೆ ಖಾನೇಸುಮಾರಿ(ಗಣತಿ) ಮಾಡುತ್ತಿದ್ದುದರಿಂದ ಗ್ರಾಮದ ಸಮಗ್ರ ಮಾಹಿತಿಯನ್ನು ಬರೆದಿಡುತ್ತಿದ್ದರು. ಇದರಿಂದ ಅಂದಿನ ಕೃಷಿಯು ಬಗ್ಗೆ, ಬಳಕೆ ಬಗ್ಗೆ ಹೆಚ್ಚಿನ ಮಾಹಿತಿ ದೊರಕಲು ಸಹಾಯಕವಾಗಿದೆ. ಅಂದಿನ ಕಾಲದ ಕೃಷಿಯು ಪ್ರಜೆಗಳ ಪ್ರಮುಖ ವೃತ್ತಿಯಾಗಿತ್ತೆಂಬುದಕ್ಕೆ ಈ ಜನಪದ ಗೀತೆಯು ನಿದರ್ಶನವಾಗಿದೆ.

'ಜಗದಾಗಿದೆ ನಮ್ಮ ತಾಯಿ ಭೂಮಿದೇವಿಯಾ
ಉಡಿಸಿ ತೊಡಿಸಿ ಉಡಿಯ ತುಂಬುವಾ
ಬೀಜಕೊಂಡು ಸಸಿಯ ನೆಟ್ಟು ಸಸಿಗೆ ನೂರು
ತೆನೆಯ ಬಿಟ್ಟು ಹಾಲು ಉಣಿಸುವಾ ಈ ಭೂಮಿ
ತಾಯಿ ದೇವಿಗೆ'

ಇಂಥ ಕೆಲವು ಪದದ ಸಾಲುಗಳು ಕೃಷಿ ಭೂಮಿಯ ಪೂಜೆ ಹಾಗೂ ಸೇವೆಗೆ ಹೃದಯ ಪೂರ್ಣದಿಂದ ಹರಕೆ ಮಾಡಿಕೊಳ್ಳುವ ಸನ್ನಿವೇಶವನ್ನು ಅರ್ಥೈಸುತ್ತವೆ. ಅಲ್ಲದೆ ಭೂಮಿಯನ್ನು ತಾಯಿಯ ಸ್ಥಾನದಲ್ಲಿ ಇಟ್ಟು ನೆನೆಯುವುದು ಕೂಡ ಇಲ್ಲಿ ಕಾಣುತ್ತದೆ.

ವತನದಾರರಾದ ದೇಸಾಯಿ, ನಾಡಗೌಡರು ಜನ ಸಾಮಾನ್ಯರಿಗೂ ಸಹ ಭೂಮಿಯನ್ನು ಕೊಡಮಾಡಿದ್ದು ಇದೆ. ಅಂಥವುಗಳಲ್ಲಿ ಭೂ ದಾನವೆ ಹೆಚ್ಚು ಪಾಲು ಇದೆ. ಈ ಕುರಿತಾದ ದಾನಪತ್ರಗಳು ಕಂಡುಬರುತ್ತವೆ. ಅವುಗಳೆಂದರೆ ಇನಾಂ ಮತ್ತು ಉಂಬಳಿ ಆಗಿದೆ. ಇನಾಂ ಮತ್ತು ಉಂಬಳಿಗೂ ವ್ಯತ್ಯಾಸವಿದೆ. ಇನಾಂ ಎಂದರೆ ತೆರಿಗೆ ರಹಿತ ಭೂಮಿ ಎಂದು ಅರ್ಥ. ಅಂದರೆ ಬಹುಮಾನವಾಗಿ ಕೊಟ್ಟದ್ದು. ಇದರಲ್ಲಿಯೆ ಸರ್ವ ಇನಾಂ ಎಂಬುದೂ ಕೂಡ ಒಳಗೊಂಡಿದೆ.

ಉಂಬಳಿ ಎಂದರೆ ತೆರಿಗೆ ವಿಧಿಸಿದ, ತೆರಿಗೆ ಹೇರಿದ ಜಮೀನು ಎಂದರ್ಥ. ನೀರಾವರಿ ಭೂಮಿ, ಹಾಗೂ ಖುಷ್ಕಿ ಭೂಮಿ ಎಂದು ಎರಡು ಭಾಗಗಳಾಗಿ ವಿಭಾಗಿಸಿಕೊಂಡು ವ್ಯವಸಾಯ ಮಾಡಿ ಇವುಗಳ

ಆಧಾರದ ಮೇಲೆ ತೆರಿಗೆಯನ್ನು ವಸೂಲು ಮಾಡುತ್ತಿದ್ದರು. ಇವು ಉಂಬಳಿ ನೀಡಿದ ಜಮೀನುಗಳೆ ಆಗಿರುತ್ತಿದ್ದವು. ನೀರಾವರಿಯಲ್ಲಿ ಕೆರೆ, ಬಾವಿ, ಹಳ್ಳ, ಹೊಳೆಯಿಂದ ನೀರನ್ನು ಉಪಯೋಗಿಸಿಕೊಂಡು ಬೇಸಾಯ ಮಾಡುತ್ತಿದ್ದರು.

೩.೩.೧. ಭೂ ವರ್ಗೀಕರಣ

ದೇಸಗತಿಯವರ ಇಂದಿನ ಆರ್ಥಿಕ ವ್ಯವಸ್ಥೆಯನ್ನು ಗಮನಿಸಿದಾಗ ಒಕ್ಕಲುತನ ಚಟುವಟಿಕೆ ಪ್ರಮುಖ ಆರ್ಥಿಕ ಮೂಲವಾಗಿದ್ದುದನ್ನು ಸ್ಪಷ್ಟವಾಗಿ ತಿಳಿಯಬಹುದಾಗಿದೆ. ಅದರಲ್ಲೂ ಮುಖ್ಯವಾಗಿ ಭೂಮಿಯ ವರ್ಗೀಕರಣ ಮಣ್ಣಿನ ಗುಣ, ಪಟ್ಟಾ, ಕಬೂಲಾಯಿತ್ ಮುಂತಾದವುಗಳು ದೇಸಗತಿಗಳ ಆರ್ಥಿಕ ಸ್ಥಿತಿಯನ್ನು ಗುರುತಿಸಿಕೊಳ್ಳಲು ಸಹಾಯವಾಗುತ್ತದೆ.

ಕೃಷಿ ಸಂಸ್ಕೃತಿಯಲ್ಲಿ ಎರಡು ಪ್ರಭೇದಗಳು ಇರುತ್ತವೆ. ಪ್ರಧಾನವಾಗಿ ೧. ಖುಷ್ಕಿ (ಒಣ ಬೇಸಾಯ) ೨. ನೀರಾವರಿ. ಭೂಮಿಯ ಗುಣಗಳಲ್ಲಿ ಅವು ಹೊಂದಿರುವ ಮಣ್ಣನ್ನು ಆಧರಿಸಿವೆ.

ಅ. ಪಟ್ಟಾಭೂಮಿ ಬ. ಕುಳ್ಳಭೂಮಿ ಕ. ಥಲ್ ಭೂಮಿ ಡ. ಹಕ್ಕಲ್ ಭೂಮಿ ಎಂಬ ಪ್ರಭೇದಗಳು ಇವೆ. ಇವುಗಳಲ್ಲಿಯೇ ಇನ್ನೂ ವಿಭಾಗೀಕರಣ ಕಂಡುಬರುತ್ತದೆ. ಅದೆಂದರೆ-

ಕ. ಪೋಲಜ ಭೂಮಿ ಖ. ಪಕೌಟಿ ಭೂಮಿ ಗ. ಚಚರ ಭೂಮಿ ಘ. ಬಂಜರ ಭೂಮಿ

ಹೀಗೆ ಮರಾಠಿಯಲ್ಲಿ ಭೂಮಿಯ ಕುರಿತು ಹೇಳಿಕೆಗಳಿವೆ. ಇವೆಲ್ಲವೂ ಕೂಡ ಬಳಕೆಯಲ್ಲಿರದೆ ಇದ್ದರೂ ಸಹ 'ಹಳೆ ತಲೆ ಮಾರಿನವರು ಬಳಸುತ್ತಿದ್ದುದು ತಿಳಿದುಬರುತ್ತದೆ.'

ಪಟ್ಟೆ ಭೂಮಿ : ಎಂದರೆ ನೀರಾವರಿ ಆಧಾರಿತವಾದದ್ದು. ಹಾಗೆ ಕಪ್ಪು ಎರೆ ಮಣ್ಣಿನಿಂದ ಕೂಡಿದ್ದು

ಕುಳ್ಳಭೂಮಿ : ಎಂದರೆ ಸಂಪೂರ್ಣ ನೀರಾವರಿ ಎಂದರ್ಥ

ಥಲ್ ಭೂಮಿ : ಎಂದರೆ ಖುಷ್ಕಿ ಅಥವಾ ಬಯಲು ಸೀಮೆ ಭೂಮಿ ಎಂದರ್ಥ. ಇದು ಹುನಗುಂದ ಭಾಗದ ಕಡೆಗೆ ಹೆಚ್ಚು ಕಂಡುಬರುತ್ತದೆ.

ಹಕ್ಕಲ್ ಭೂಮಿ : ಎಂದರೆ ಒಣ ಭೂಮಿ, ಒಣ ಬೇಸಾಯದ್ದು ಆಗಿದೆ. ಇದಕ್ಕೆ ಸುಕ್ಕಾ ಎಂದು ಕರೆಯುತ್ತಾರೆ. ಸುಕ್ಕಾ ಇದು ಅರಬ್ಬಿಕ್ ಪದವಾಗಿದೆ. 'ಹಕ್ಕಲ್' ಸಹ ಮರಾಠಿ ಪದವಾಗಿದೆ.

ಮುಧೋಳ, ಜಮಖಂಡಿ ತಾಲೂಕುಗಳಲ್ಲಿ ಮರಾಠಿ ಪ್ರಭಾವವಿರುವುದರಿಂದ ಅಲ್ಲಿನ ಭೂಮಿಯನ್ನು ಮರಾಠಿ ಪದ ಸೇರಿಸಿ ಪೋಲಜ ಭೂಮಿ ಎಂದು ಕರೆಯುವರು. ಪೋಲಜ ಭೂಮಿ ಎಂದರೆ ಪರ್ವಕಾಲದಲ್ಲಿ ಸಾಗುವಳಿ ಮಾಡುವ ಭೂಮಿಯಾಗಿದೆ.

ಪಕೌಟ : ಎಂದರೆ ಒಂದು ವರ್ಷ ಬಿಟ್ಟು ಮತ್ತೊಂದು ವರ್ಷಕ್ಕೆ ಸಾಗುವಳಿ ಮಾಡುವ ಭೂಮಿ.

ಚಚರ : ಎಂದರೆ ಎರಡು ವರ್ಷ ಅಥವಾ ಎರಡು ವರ್ಷಕ್ಕಿಂತ ಹೆಚ್ಚು ಕಾಲ ಬಿಟ್ಟು ಸಾಗುವಳಿ ಮಾಡುವ ಭೂಮಿ.

ಬಂಜರ : ಎಂದರೆ, ಬೆಳೆಯಲಾರದ ಭೂಮಿ. ಇದು ೫ ವರ್ಷಗಳಿಗೊಮ್ಮೆ ಸಾಗುವಳಿ ಮಾಡುವುದು ಇಲ್ಲವೆ ಸಾಗುವಳಿ ಮಾಡದೆ ಇರುವ ಭೂಮಿಯಾಗಿರುತ್ತದೆ.

ಇಂಥ ಒಟ್ಟಾರೆ ಜಮೀನು ಲೆಕ್ಕವಿಲ್ಲದಷ್ಟು ದೇಸಗತಿಗೆ ಒಳಪಡುವುದರಿಂದ ತಮ್ಮ ವಿಶ್ವಾಸಿಕ ರೈತರಿಗೆ, ಸೇತಸನದಿಗಳಿಗೆ ಚಚರ್ ಹಾಗೂ ಬಂಜರು ಭೂಮಿಯನ್ನು ಕೊಟ್ಟು ಸಾಗುವಳಿ ಮಾಡಿಸಿದ್ದು ದೇಸಾಯಿಯವರು ನೀಡಿದ ಇನಾಂ ಸನದು ಪತ್ರಗಳಿಂದ ವಿಧಿತವಾಗುತ್ತದೆ. ಇಂಥ ಭೂಮಿಗಳಿಗೆ ಕೆಲವೇ ಕಂದಾಯ ನಿಗದಿಪಡಿಸಿ ಕೆಲವು ಕಂದಾಯ ರಹಿತವೆಂದು, 'ಸರ್ವಮಾನ್ಯ'ವೆಂದು ಒಪ್ಪಿಗೆ ನೀಡಿದ್ದಾರೆ. ಸರ್ವಮಾನ್ಯವೆಂದರೆ ಸಂಪೂರ್ಣ ಇನಾಮು ವತನ ಆಗಿರುತ್ತದೆ.

ಭೂಮಿಯ ವರ್ಗೀಕರಣವು ಒಕ್ಕಲುತನಕ್ಕೆ ಅವಶ್ಯಕವಾದಂತೆ ಮಣ್ಣಿನ ವರ್ಗೀಕರಣವೂ ಸಹ ಅಷ್ಟೇ ಪ್ರಮುಖವಾದುದು. ಇದನ್ನು ಆಯಾ ತಾಲೂಕುಗಳ ಪ್ರಾದೇಶಿಕ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ.

೧. ಕೆಮ್ಮಂಡಿ > ಕೆಮ್ಮಡ್ಡಿ > ಕೆಂಪು ಮಡ್ಡಿ ಕೆಂಪುಮಡ್ಡಿ ಭೂಮಿಯು ಬಾಗಲಕೋಟೆ ಬೀಳಗಿ ಬಾದಾಮಿ ತಾಲೂಕುಗಳಲ್ಲಿ ಕಂಡುಬರುತ್ತದೆ.

೨. ಮಸುಂಬ > ಮಸಾರಿ > ಕೆಂಪು ಕರಿ. ಮರಳು ಮಿಶ್ರಿತಭೂಮಿ. ಮಸಾರಿ ಹೊಲವೆಂದೇ ಇದನ್ನು ಕರೆಯುವುದು ರೂಢಿಯಲ್ಲಿದೆ. ಬದಾಮಿ, ಹುನಗುಂದ ಬಾಗಲಕೋಟೆ ತಾಲೂಕುಗಳಲ್ಲಿ ಈ ಭೂಮಿ ಕಂಡುಬರುತ್ತದೆ.

೩. ಬೆಂಚೆ > ಕಲ್ಲು ಭೂಮಿ 'ಬೆಂಚೆ' ಎಂದರೆ 'ಕಲ್ಲು' ಎಂದರ್ಥ. ಇಲ್ಲಿನ ಕಲ್ಲು ಬೆಣಚು(ಕಲ್ಲು) ಇದ್ದು ಹಾಲಿನ ಬಣ್ಣದಂತೆ ಇರುತ್ತದೆ. ಇದು ಬದಾಮಿ, ಹುನಗುಂದ ತಾಲೂಕುಗಳ ಕೆಲವು ಭಾಗಗಳಲ್ಲಿ ಕಂಡುಬರುತ್ತದೆ.

೪. ಎರಿ > ಕಪ್ಪು ಭೂಮಿ- ಇದು ಬೀಳಗಿ, ಜಮಖಂಡಿ, ಮುಧೋಳ ತಾಲೂಕಿನ ಕೆಲವು ಕಡೆಗೆ ಕಂಡುಬರುತ್ತದೆ. ಕಬ್ಬು, ಮೆಕ್ಕೆಜೋಳಕ್ಕೆ ಈ ಭೂಮಿ ಯೋಗ್ಯವಾಗಿದೆ.

೫. ಸೌಳ > ಪಳುವ = ಸೌಳ ಆಡುವ ಭೂಮಿ ಅಥವಾ ಕ್ಷಾರಿಯ ಭೂಮಿ. ಇದು ನೀರಾಡುವ ಭೂಮಿಯಾಗಿದ್ದು ಜಿಲ್ಲೆಯ ಘಟಪ್ರಭಾ, ಕೃಷ್ಣಾನದಿಯ ಹೊಳೆ ಒತ್ತಿನಲ್ಲಿ ಕಂಡುಬರುತ್ತದೆ. ಇದಕ್ಕೆ ಡೋಣಿ>ದೋಣಿ ಎಂತಲೂ ಕರೆಯುತ್ತಾರೆ. ಈ ಪ್ರದೇಶದಲ್ಲಿ ಸಿಂದಿ(ಕುರುಚಲು) ಗಿಡಗಳು ಇರುವುದರಿಂದ

‘ನೀರಾ’ವನ್ನು ತೆಗೆಯುತ್ತಾರೆ. ಇದರ ಮೇಲೆ ಹೆಚ್ಚಿನ ತೆರಿಗೆ ಹಾಕುತ್ತಿದ್ದುದನ್ನು ಈಗಾಗಲೇ ಹಿಂದೆ ಚರ್ಚಿಸಿದೆ. ಅಲ್ಲದೆ ಈ ಭಾಗದ ಬೆಳೆಗಳು ನೀರಾವರಿಯಿಂದಲೆ ಬರುವುದರಿಂದ ಆರ್ಥಿಕ ಮಟ್ಟವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿವೆ. ಜೋಳ, ಕಡಲೆ, ಹತ್ತಿ, ಸಜ್ಜೆ, ಹೆಸರು, ಅವರೆ, ಮೂಕಣಿ(ಮಡಕಿ) ತೊಗರಿ, ಅಲಸಂದೆ ಮುಂತಾದ ದ್ವಿದಳ ಧಾನ್ಯಗಳನ್ನು ಹೆಚ್ಚಾಗಿ ಬೆಳೆಯುವರು. ಇವೆಲ್ಲವೂ ಜೀವಾನಾವಶ್ಯಕ ಬೆಳೆಗಳಾದರೂ ವಾಣಿಜ್ಯ ಬೆಳೆಗಳಾಗಿವೆ.

ಇಂಥ ವಾಣಿಜ್ಯ ಬೆಳೆಗಳು ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರದವರೆಗೂ ಜಮೀನುದಾರರ ವ್ಯವಸ್ಥೆಯಲ್ಲೆ ಇರುವುದರಿಂದ ಒಕ್ಕಲುತನದ ಲಾಭಾಂಶವು ರೈತರಿಗಾಗದೆ ಜಮೀನುದಾರರಾದ ದೇಸಾಯಿ, ದೇಸಮುಖ, ನಾಡಗೌಡರಿಗೆ ಸೇರಿದ್ದಾಗಿದೆ. ರೈತರಿಗೆ ಭೂಮಿಯನ್ನು ಉಂಬಳಿಯಾಗಿ ನೀಡಿ ಫಸಲು ಬೆಳೆಯುವಂತೆ ಪ್ರೋತ್ಸಾಹ ತುಂಬಿದ್ದು ರೈತರ ಮನೆಯಲ್ಲಿ ದೊರಕಿದ ಲಾವಣಿ ಪತ್ರಿಕೆಗಳಿಂದ ತಿಳಿದುಬರುತ್ತದೆ. ಇದಕ್ಕೆ ದೇಸಗತಿಗಳಲ್ಲಿ ಸಿಗುವ ‘‘ಕಂಚಿನ ಪತ್ರಗಳು ಆಧಾರವಾಗಿವೆ.’’[೨೮] ಅದರಲ್ಲಿರುವ ‘ಜಡಿ’ಯನ್ನು ಕೊಡುತ್ತ ಹೋಗಬೇಕೆಂದು ಉಲ್ಲೇಖವಿದೆ. ಜಡಿ>ಜೂಡಿ ಎಂಬುದಾಗಿದೆ. ಜಡಿ ಎಂದರೆ ಕಂದಾಯ, ಕಂದಾಯ ರಹಿತ, ಅಲ್ಲದೆ ಕಡಿಮೆ ದರದ ಮೇಲೆ ಸಾಗುವಳಿ ಮಾಡಲು ಬಿಟ್ಟ ಚಚರ್ ಭೂಮಿಯಾಗಿದೆ.

ಈ ಭಾಗದ ಕೃಷಿ ಬೇಸಾಯಕ್ಕೆ ಶೇಕಡಾ ೭೫ರಷ್ಟು ಮಳೆ ಆಧಾರಿತ ಒಣಬೇಸಾಯವೆ ಪ್ರಮುಖವಾಗಿದೆ. ಜಿಲ್ಲೆಯ ಪೂರ್ವ ಮತ್ತು ಪಶ್ಚಿಮ ಭಾಗವು ಒಣ ಬೇಸಾಯವನ್ನೊಳಗೊಂಡದ್ದಾಗಿದೆ. ಇವೆಲ್ಲದರ ಆಧಾರದ ಮೇಲೆ ದೇಸಗತಿಯ ಆರ್ಥಿಕತೆ ಅವಲಂಬಿತವಾಗಿತ್ತು.

೩.೩.೨. ಭೂಮಿಯ ಅಳತೆ, ಹಾಗೂ ಬಳಸಿದ ಮಾಪನಗಳು

ದೇಸಗತಿಯ ದಾಖಲೆಯುದ್ದಕ್ಕೂ ‘ಮಾರು’ ಎಂಬ ಮಾನ ದಂಡವಿದ್ದು ಇದನ್ನು ಭೂದಾನ ಮಾಡುವಾಗ, ಅಥವಾ ಅರಸರಿಂದ ಉಂಬಳಿ, ಇನಾಂ ಪಡೆಯುವಾಗ ಬಳಸಿದ್ದು ಕಂಡುಬರುತ್ತದೆ.

ಏಕ್ ಮಾರ್, ದೋ ಮಾರ್, ತೀನ್ ಮಾರ್ ಇತ್ಯಾದಿ

ಏಕ್ ಮಾರ್ ಎಂದರೆ ಉತ್ತಮ ಭೂಮಿ ಎಂದರ್ಥ. ಅಲ್ಲದೆ ಲೆಕ್ಕಾಚಾರದಲ್ಲಿ ಇಂದಿನ ನಾಲ್ಕು ಕೂರಿಗೆ ಎಂದರ್ಥ. ದೋಮಾರ್ ಅಂದರೆ ಸಾಧಾರಣ ಭೂಮಿ. ಇದು ಎಂಟು ಕೂರಿಗೆಗೆ ಸಮಾನ. ತೀನ್ ಮಾರ್ ಅಂದರೆ ಹನ್ನೆರಡರಿಂದ ಹದಿನಾರು ಕೂರಿಗೆಯವರೆಗೂ ಇತ್ತು. ಆದರೆ ಕರಾಬ ಭೂಮಿ ಎನಿಸಿಕೊಳ್ಳುತ್ತಿತ್ತು. ಇಂಥ ಭೂಮಿಯ ಅಳತೆಯು ಚಲಾವಣೆಯಲ್ಲಿದ್ದು ಒಂದು ಮಾರಿಗೆ ಗೊತ್ತುಪಡಿಸಿದ ಕಂದಾಯವು ಐನಾತಿ(ರಖಂ) ಎಂದೆನಿಸಿತ್ತು. ‘‘ಮಾರು’’[೨೯] ಎಂಬ ಅಳತೆಯು ವಿಜಯನಗರದ ಅರಸರ ಕಾಲದಲ್ಲಿಯೂ ಇತ್ತು ಎಂದು ಡಾ.ಎಂ.ಜಿ.ವಾರಿಯವರು ತಮ್ಮ ಪ್ರಬಂಧದಲ್ಲಿ ಗುರುತಿಸಿದ್ದಾರೆ.

ದೇಸಗತಿಗಳವರು ಸೇತಸನದಿಗಳಿಗೆ, ನೀಡಿದಂತೆ ಧಾರ್ಮಿಕವಾಗಿ ಗುಡಿ ಗುಂಡಾರಗಳಿಗೆ ‘ಮಾರು’ ಎಂಬ ಪದವನ್ನೆ ಬಳಸಿದ್ದು ಅವರು ನೀಡಿದ ದಾಖಲೆಗಳಲ್ಲಿ ಕಂಡುಬರುತ್ತದೆ.

೧೮೮೯ರಲ್ಲಿ ಬ್ರಿಟೀಷ್‌ರ ಅಳತೆ ಪದ್ಧತಿ ಜಾರಿಯಲ್ಲಿ ಬಂದಿತು. ಅಂಗುಲ, ಅಡಿ, ಗಜ, ಫರ್ಲಾಂಗು, ಮೈಲು, ಎಕರೆ, ಗುಂಟೆ, ಚೂರಿಗೆ ಎನ್ನುವ ಅಳತೆಗಳೇ ಅವಾಗಿವೆ.

‘6’ = ಅಳಿ ಎಂದರ್ಥ

‘•|•’ = ನಾಲ್ಕನೇ ಭಾಗ ೧/೪ ಜಮೀನ = ೪ ಎಕರೆ

‘•||•’ = ಎಂಟನೇ ಭಾಗ ೧/೨ ಜಮೀನ = ೮ ಎಕರೆ

‘•|||•’ = ಭಾರಾಣೆ ಭಾಗ ೩/೪ ಜಮೀನ = ೧೨ ಎಕರೆ”[೩೦]

೧ = ಒಂದು ಮಾರು. ಅಂದರೆ ಒಂದು ಮಾರು = ೧೬ ಎಕರೆ ಆಗಿರುತ್ತದೆ. ದಾನ ಕೊಡುವಾಗ ಪಾವ ಅಣೆ, ಪೋಣೆ ಅಣೆ; ಪೋಣೆ ಪಾವ ಅಣೆ ಎನ್ನುವ ಅಳತೆಗಳನ್ನು ಸಹ ಬಳಸಿ ಕೊಡಲಾಗಿದೆ ಎಂದೂ ಸಹ ಬರೆದುದು ಕಂಡುಬರುತ್ತದೆ. ದೇಸಗತಿಯ ದಪ್ತರಗಳನ್ನು ಗಮನಿಸಿದಾಗ ಬಿರಾಡ ೧/೩ ಅಂತ ಇತ್ತು ಇದು ಶೇಕಡಾ ೩೦ರಷ್ಟು ಆಗುತ್ತದೆ. ಹೀಗೆ ಹಪ್ತಾ, ಚೌಥಾ ಎನ್ನುವ ಪಾರಿಭಾಷಿಕ ಪದಗಳು ಕಂದಾಯದ ಶೇಕಡಾ ಅಂಶವನ್ನು ತಿಳಿಸುತ್ತವೆ.

೩.೩.೩. ಭೂ ಕಂದಾಯ

ಭೂ ಕಂದಾಯದ ವ್ಯವಸ್ಥೆಯಲ್ಲಿ ಅಲ್ಲಿನ ಭೂಮಿಯ, ಹಾಗೂ ಬೇಸಾಯದ ಪರಿಸ್ಥಿತಿಗಳನ್ನು ಆಧಾರವಾಗಿಟ್ಟುಕೊಂಡು ನಿರ್ಧರಿಸುತ್ತಿದ್ದರು. ಆದಿಲ್‌ಶಾಹಿಗಳ ಕಾಲದಲ್ಲಿ ಕೊಡುತ್ತಿದ್ದ ವಾರ್ಷಿಕ ನಜರಾಣಾ ಒಟ್ಟು ಭೂಮಿಯ ಮೇಲೆ ನಿರ್ಧರಿಸಲ್ಪಡುತ್ತಿತ್ತು. ಸಾಗುವಳಿ ಭೂಮಿಗೆ ವಿಧಿಸುತ್ತಿದ್ದ ಕಂದಾಯವನ್ನು ‘ನಜರಾಣಾ’ ಎಂದು ಕರೆಯುತ್ತಿದ್ದರು. ಅದರ ಜೊತೆಗೆ ವಿಶೇಷ ಕಾಣಿಕೆ ನೀಡುತ್ತಿದ್ದರು. ಜಾಲಿಹಾಳ ದೇಸಾಯಿಯು ನಜರಾಣಾ ನೀಡಿ ತನ್ನ ಭಾಗದಲ್ಲಿ ಬೆಳೆದ ‘ಅಂಬಾಡಿ’ ಎಲೆಯನ್ನು ವಿಶೇಷವಾಗಿ ಕಾಣಿಕೆ ಕೊಟ್ಟು ಬರುತ್ತಿದ್ದನು. ಹಾಗೇ ತೇರದಾಳ ನಾಡಗೌಡನು ತನ್ನ ಭಾಗದ `ಹೇರೆತ್ತು`ಗಳನ್ನು (ಒಂದು ಜೊತೆ) ಕೊಟ್ಟು ಬರುವುದಲ್ಲದೆ ಹಾಗೆ ಮುಂಗಾರು, ಹಿಂಗಾರು ಬೆಳೆ ಕೂಡಿಯೆ ಕುದುರೆಮೇಲೆ ಹೇರಿಕೊಂಡು ಕೊಟ್ಟು ಬರುತ್ತಿದ್ದನು. ಅದಕ್ಕೆ ಪ್ರತಿಯಾಗಿ ಅರಸುಗಳು ಬಂಗಾರದ ಘಟ್ಟಿಯನ್ನು ಕೊಟ್ಟು ಖುಷಿ ಪಡಿಸುತ್ತಿದ್ದರು. ಇದರಿಂದ ದೇಸಾಯಿಗಳು ಸಾಕಷ್ಟು ಬೆಳ್ಳಿ ಬಂಗಾರ ಹೊಂದಿದ್ದು ತಿಳಿದುಬರುತ್ತದೆ. ದೇಸಾಯಿಗಳ ಸ್ಥಿರಾಸ್ಥಿಯು ಇಂತಿಷ್ಟೆ ಇತ್ತೆಂದು ಲೆಕ್ಕವೇ ಇಲ್ಲ. ಅರಸು ಕೊಟ್ಟಷ್ಟು ಇವರು ಪಡೆದಷ್ಟು ಎಂಬುದಾಗಿತ್ತು.

"ಭೂ ಕಂದಾಯವನ್ನು 'ಹೊನ್' ಎಂದು ಕರೆಯುತ್ತಿದ್ದರು."[೩೧] ಒಂದು 'ಹೊನ್' ಎಂದರೆ ಕನಿಷ್ಠ ೧೦೦೦ ಕ್ಕಿಂತ ಹೆಚ್ಚು ಆಗಿತ್ತು. ತಮಗೆ ಬರಬೇಕಾದ ಹಣವನ್ನು ಜನರಿಂದ ವಸೂಲಿ ಮಾಡಿ ನಜರಾಣಾ ಕೊಡಬೇಕೆಂದು ಸನದುಗಳಿಂದ ತಿಳಿದುಬರುತ್ತದೆ. ದೇಸಗತಿಗಳ ಮೇಲೆ ಕಂದಾಯವಲ್ಲದೆ ಹೆಚ್ಚಿಗೆ ತೆರಿಗೆ ವಿಧಿಸಿದ್ದು ಇದೆ. ಇದಕ್ಕೆ "ಬಿರಾಡ"[೩೨] ಎಂದು ಕರೆಯುತ್ತಿದ್ದರು. ಬಿರಾಡ ಪದ ಈಗಲೂ ಬಳಕೆಯಲ್ಲಿದೆ. ಗಿರಿಸಾಗರ ಹಾಗೂ ಮನ್ನಿಕೇರಿ ದೇಸಗತಿಗಳು ಜಾಲಿಹಾಳ ದೇಸಗತಿಗಳವರು ಸೈನ್ಯವನ್ನು ಸಕಾಲಕ್ಕೆ ಒದಗಿಸದಿದ್ದರಿಂದ ಬದಾಮಿ ಪರಗಣದಿಂದ ಹೆಚ್ಚಿನ ತೆರಿಗೆ ಪಾವತಿಸಿದ್ದು ಪತ್ರಿಸಿದ ಪತ್ರಗಳಿಂದ ತಿಳಿದುಬರುತ್ತದೆ. ಅಲ್ಲದೆ ಈ ಕುರಿತಾಗಿ ಅರಸುಗಳ ಜೊತೆಗೆ ಪತ್ರಿಸಿ ಕ್ಷಮೆ ಕೋರಿದ್ದರಿಂದ ಹೆಚ್ಚಿನ ಹಣವನ್ನು ಕಡಿಮೆಗೊಳಿಸಿದ್ದು ಕೂಡ ಅದರಲ್ಲಿ ಉಲ್ಲೇಖಗೊಂಡಿದೆ. ಕಾಲಾನುಕ್ರಮದಲ್ಲಿ ಹಣದ ಮೌಲ್ಯದಲ್ಲಿ ವ್ಯತ್ಯಾಸವಾದಂತೆ, ಅದಕ್ಕನುಸಾರವಾಗಿ ಕಂದಾಯದಲ್ಲೂ ಹೊಂದಾಣಿಕೆ ಮಾಡಿಕೊಂಡಿದ್ದು ಇದರಿಂದ ವಿಧಿತವಾಗುತ್ತದೆ.

ಆದಿಲ್‌ಶಾಹಿ ಕಾಲದಲ್ಲಿ ರೇಖಾ-ಝುದ್ರಿ(Rekh-Jhadri) ಎಂದು ಕರೆಯಲಾಗುವ ಯೋಜನೆಯ ವ್ಯವಸ್ಥೆ ಇದ್ದಿತು. ಈ ರೇಖಾ-ಝುದ್ರಿ ವ್ಯವಸ್ಥೆಯು ಒಂದು ವಿಧದ "ಕಂದಾಯ ಸರ್ವೇಕ್ಷಣಾ ಪದ್ಧತಿಯಾಗಿತ್ತು."[೩೩] ಇದು ತೋಡರ ಮಲ್ಲನ ವ್ಯವಸ್ಥೆಯಂತೆ ಕಂದಾಯದಲ್ಲಿ ಹೊಂದಾಣಿಕೆ ಪ್ರವೃತ್ತಿ ಹೊಂದಿದ್ದು, ಜೊತೆಗೆ ಗ್ರಾಮ ಲೆಕ್ಕಿಗರಿಂದ ಉಂಟಾಗುವ ಮೋಸದ ವ್ಯವಹಾರಗಳನ್ನು ಪತ್ತೆ ಹಚ್ಚುವ ಉದ್ದೇಶವನ್ನು ಈ ವ್ಯವಸ್ಥೆ ಒಳಗೊಂಡಿದ್ದಿತು. ಆದಿಲ್‌ಶಾಹಿಯ ಕಂದಾಯ ಅಥವಾ ತೆರಿಗೆ ಪದ್ಧತಿಯು ಉತ್ತಮ ಕಂದಾಯ ಪದ್ಧತಿ-ರೇಖಾ ಎಂದೇ ಹೆಸರಾಗಿದ್ದಿತು. ಈ ರೇಖಾ ಅಲ್ಲದೆ ಹೆಚ್ಚುವರಿಯಾಗಿ ವಿಧಿಸುವ "ಲೇವಿ(Levy)ಗಳನ್ನು ಶಾಮಿಲ್‌ಗಳೆಂದು"[೩೪] ಕರೆಯಲಾಗುತ್ತಿತ್ತು. ದೇಸಗತಿಯಲ್ಲಿ ಬಳಸುತ್ತಿದುದ್ದರಿಂದ ಏನೇ ಮೋಸಗಳು ನಡೆಯುತ್ತಿರಲಿಲ್ಲ ಅಲ್ಲದೆ ದೇಸಾಯಿಯ ಬಿಗಿ ಭದ್ರತೆಯಲ್ಲಿ ಕಂದಾಯವು ವಸೂಲಿ ಆಗುತ್ತಿತ್ತು.

ಚಿಕ್ಕಪುಟ್ಟ ದೇಸಾಯಿಗಳು ಎರಡು ಮೂರು ವರ್ಷಗಳವರೆಗೆ ಅರಸರಿಗೆ ಕಂದಾಯ ಕೊಡದೆ ಇದ್ದುದರಿಂದ ಸುಭೇದಾರರ ಮೂಲಕ ತಿಳಿದುಕೊಂಡು ಎರಡು ಮೂರು ವರ್ಷಗಳ ನಜರಾಣಾ ಒಟ್ಟಿಗೆ ಕೊಟ್ಟಿದ್ದು ತಿಳಿದುಬರುತ್ತದೆ. ಅಲ್ಲದೆ ಅರಸರ ಜೊತೆಗೆ ಶ್ಯಾಮಿಲಾಗಿ ಸೈ ಎನಿಸಿಕೊಂಡಿದ್ದು ತಿಳಿದುಬರುತ್ತದೆ.

ಪೇಶ್ವೆಗಳ ಕಾಲಾವಧಿಯಲ್ಲಿ ವಿಧಿಸಿದ ತೆರಿಗೆ ವಿಶೇಷವಾಗಿ ತಿಳಿದುಬರುತ್ತದೆ. ಪೇಶ್ವೆಗಳು 'ಚೌಥಾಯಿ'[೩೫] (೧/೪) ಎನ್ನುವ ತೆರಿಗೆ ಕ್ರಮವನ್ನು ನಿಗದಿಪಡಿಸಿದ್ದು ಇದೆ. ನಂತರದಲ್ಲಿ ೧/೧೦, ೧/೬ ಎಂದು ತಿಳಿದು ಬರುತ್ತದೆ. ಇದು ದೇಸಗತಿಯವರಿಗೆ ಭಾರವಾಯಿತು. ಆದರೂ ಸಹ ಅದಕ್ಕೆ ಹೊಂದಿಕೊಂಡು ಕಂದಾಯ ನೀಡಿದ್ದು ಕಂಡುಬರುತ್ತದೆ. ದೇಸಾಯಿಗಳು ನಿಗದಿಪಡಿಸಿದ ಜಮೀನ ಅಲ್ಲದೆ ಇತರೆ ನಿವಾಸಿಗಳ ಮನೆ

ಮನೆಗಳ ಮೇಲೆ ನೆಲಬಾಡಿಗೆ(ಭೂಬಾಡಿಗೆ) ಎಂದು ಕರಾಕರಣೆ ಕೊಡಬೇಕಾಗಿತ್ತು. ಅದನ್ನು ವಾರ್ಷಿಕವಾಗಿ ವಸೂಲಿ ಮಾಡುತ್ತಿದ್ದರು. ಹಾಗಾಗಿ ಖಾನೇಸುಮಾರಿ(ಗಣತಿ) ಮಾಡುವುದರಿಂದ ಅದರ ಸಮಗ್ರ ಜಮೀನ ವಿವರಣೆ ನೇಗಿಲ, ಎತ್ತು, ಬಂಡಿ ಬಿತ್ತನೆಗಳು ಸಹ ತೆರಿಗೆಗೆ ಸಂಬಂಧಿಸಿದ್ದವು. ಊರಿನ ದನಗಳು, ಕುರಿಗಳು ಮೇಯಿಸಲು ಗೋಮಾಳಗಳಿದ್ದವು. ಅಲ್ಲಿ ಊರಿನ ಜಂಗಳಿ ದನಗಳು, ಕುರಿಗಳು ಮೇಯಿಸಿದರೆ ತೆರಿಗೆ ಕೊಡಬೇಕಾಗಿದ್ದಿತು. ಅದಕ್ಕೆ 'ಹುಲಬನ್ನಿ' ಎಂದು ಕರೆಯುತ್ತಿದ್ದರು. ಹೀಗೆ ದೇಸಗತಿಗಳು ವಿವಿಧ ಮೂಲಗಳಿಂದ ತೆರಿಗೆ ಸಂಗ್ರಹಿಸುವುದು ತಿಳಿದುಬರುತ್ತದೆ.

ಒಟ್ಟಾರೆ ತೋಡರ ಮಲ್ಲನಿಂದ ರೂಪಿಸಲ್ಪಟ್ಟ ಕಂದಾಯ ವ್ಯವಸ್ಥೆ ಸಮಸ್ತ ನಾಡಗೌಡ, ದೇಸಾಯಿ, ದೇಸಮುಖಿ, ಪಟ್ಟಣ ಶೆಟ್ಟಿಗಳ ಮೂಲಕ ನಿರಂತರವಾಗಿ ನಡೆಯುತಿತ್ತು. ಇದರಿಂದ ದೇಸಗತಿಗೂ ಅರಸುಗಳಿಗೂ ಉತ್ತಮವಾದ ಆರ್ಥಿಕ ಭದ್ರತೆ ಇತ್ತೆಂದು ತಿಳಿದುಬರುತ್ತದೆ. ಬರ ಅಥವಾ ಮಳೆಗಳಿಂದ ತೊಂದರೆ ಅನುಭವಿಸಿದಾಗ ಆರ್ಥಿಕತೆ ಕುಸಿಯುತ್ತಿತ್ತು. ಈ ಕುರಿತಾಗಿ ದೇಸಾಯಿಗಳು ಅರಸರಿಗೆ ಪತ್ರದ ಮುಖಾಂತರ ತಮ್ಮ ಪ್ರದೇಶದ ವಿವರಣೆ ನೀಡುತ್ತಿದ್ದರು. ಕೆಲವು ಸಲ ಈ ಕುರಿತಾಗಿ ಸ್ಥಾನಿಕ ಪರಿಶೀಲನೆಗೆ ಸುಬೇದಾರರು ಬಂದು ತನಿಖೆ ಮಾಡುತ್ತಿದ್ದು ತಿಳಿದುಬರುತ್ತದೆ. ತಪ್ಪು ವಹಿವಾಟ ಇದ್ದಲ್ಲಿ ಹೆಚ್ಚಿನ ಬಿರಾಡ ಕೊಡುತ್ತಿದ್ದರು. ಆಗ ಆರ್ಥಿಕ ಸ್ಥಿತಿ ಕುಗ್ಗುತ್ತಿತ್ತು. ಉದಾಹರಣೆ ತೇರದಾಳ ದೇಸಾಯಿ ತಪ್ಪು ಮಾಹಿತಿ ನೀಡಿದ್ದರಿಂದ ಹೆಚ್ಚಿನ ತೆರಿಗೆ ಕೊಟ್ಟಿದ್ದೂ ಕಂಡುಬರುತ್ತದೆ. ಅವರಿಂದ ವಿಶ್ವಾಸ ಕಳೆದುಕೊಂಡದ್ದು ದೇಸಗತಿ ಉಚ್ರಾಯಸ್ಥಿತಿಗೆ ಬರದೇ ಇದ್ದುದು ಬರೆದಿಟ್ಟ ಡೈರಿಗಳಿಂದ ತಿಳಿದುಬರುತ್ತದೆ. ಆರ್ಥಿಕತೆಯೇ ದೇಸಗತಿ ಸ್ಥಿರಾಸ್ಥಿಯಾಗಿತ್ತು.

೩.೪.೪. ಕಸಬಾದಲ್ಲಿ ತೆರಿಗೆ ವಿಧಾನ

ಭೂ ಕಂದಾಯದ ನಂತರ ಖಜಾನೆ ಭರ್ತಿಗೆ ವಿಶೇಷ ಆಕರಗಳಿಂದ ಹೆಚ್ಚಿನ ಆದಾಯ ಬರುತ್ತಿತ್ತು. ಅದು ಕಸಬಾದಿಂದ ಮಾತ್ರ. ಕಸಬಾ>ಕಸಬೆ ಅಂದರೆ ಕಸಬು ಎಂಬುದರ ವಿಸ್ತೃತ ರೂಪವೇ ಕಸಬಾ ಆಗಿರುತ್ತದೆ. ಕಸಬು ಎಂದರೆ ಕೆಲಸ, ಉದ್ಯೋಗ, ವೇಶ್ಯಾವೃತ್ತಿ, ವ್ಯಾಪಾರ ಮುಂತಾಗಿ ತಿಳಿದುಬರುತ್ತದೆ. ಹಾಗೆ ಕಸಬೆ ಎಂಬುದು ತಾಲ್ಲೂಕಿನ ಅಥವಾ ಆ ಭಾಗದ ಮುಖ್ಯ ಸ್ಥಳ ಎಂಬುದಾಗಿದೆ. ಜನ ಬಳಕೆಯಲ್ಲಿ 'ಕಸಬೇರು' ಎಂಬುದು ಕೂಡ ರೂಢಿಯಲ್ಲಿದೆ. ಅಂದರೆ ಅಲ್ಲಿ ವೇಶ್ಯರೇ ಇರುವರೆಂಬರ್ಥವಲ್ಲ. ವಾರಕ್ಕೊಂದು ಸಲ ಜನರು ಸೇರಿ ವ್ಯಾಪಾರ ಮಾಡಿಕೊಳ್ಳುತ್ತಿದ್ದರು. ಆದ್ದರಿಂದ ಸುತ್ತಮುತ್ತಲಿನವರು ಸೇರಲು ಅನುಕೂಲವಾಗುವ ಕೇಂದ್ರ ಸ್ಥಳಕ್ಕೆ ಗ್ರಾಮಕ್ಕೆ 'ಕಸಬಾ' ಎಂದು ಕರೆಯುತ್ತಿದ್ದರು. ಈಗಿನ ಗ್ರಾಮಪಂಚಾಯತಿ ಬೋರ್ಡಗಳಲ್ಲಿ ಹಳೆ ರೀಕಾರ್ಡಗಳಲ್ಲಿ ಈ ಪದ ಕಂಡುಬರುತ್ತದೆ. ಇದನ್ನು ನಿರ್ದೇಶಿಸುವಂತೆ ಕಸಬಾ ಜಮಖಂಡಿ, ಕಸಬಾ ಧವಳೇಶ್ವರ, ಕಸಬಾ ಮಾಚಕನೂರ, ಕಸಬಾ ಬದಾಮಿ

ಕಸಬಾ ಮುಧೋಳ ಹಾಗೆ ಕಸಬಾ ಜಂಬಗಿ ಎನ್ನುವ ಗ್ರಾಮನಾಮಗಳು ಕೂಡ ಇಂದೂ ಪ್ರಚಲಿತ ಇವೆ. ಪ್ರಸ್ತುತವೂ ಅಲ್ಲಿ ವ್ಯಾಪಾರ ವಹಿವಾಟು ನಡೆದುದು ಕಂಡುಬರುತ್ತದೆ.

ಕಸಬಾ ಎಂದು ಪೂರ್ವಪದ ಹಚ್ಚಿಕೊಂಡಿರುವ ಗ್ರಾಮಗಳು ಒಂದು ಪರಗಣದಲ್ಲಿ ೫ ರಿಂದ ೬ರವರೆಗೆ ಸಿಗುತ್ತವೆ. ಒಂದು ಕಸಬಾಕ್ಕೆ ೧೦ ರಿಂದ ೨೦ ಗ್ರಾಮಗಳಿದ್ದು, ಅವೆಲ್ಲವೂ ಕಸಬಾಕ್ಕೆ ಬಂದು ವ್ಯಾಪಾರ ವಹಿವಾಟನ್ನು ಮಾಡುತ್ತಿದ್ದವು. ಅಲ್ಲಿ ನಡೆಯುವ ವ್ಯವಹಾರದ ವಸ್ತುಗಳ ಮೇಲೆ, ವ್ಯಾಪಾರಿಗಳ ಮೇಲೆ ತೆರಿಗೆ ಹಾಕುತ್ತಿದ್ದರು. ದಿನನಿತ್ಯ ಜೀವನಕ್ಕೆ ಉಪಯೋಗಿಸುವ ಆಹಾರ ಪದಾರ್ಥಗಳ ಮೇಲೂ ನೆಲಬಾಡಿಗೆ ರೂಪದಲ್ಲಿ ಅದು ವಸೂಲಿ ಆಗುತ್ತಿತ್ತು. ಬಾಗಲಕೋಟೆಯ ಪಟ್ಟಣಿಯಾದ ಇನಾಮದಾರ ಮನಹಳ್ಳಿ, ನಾಡಗೌಡ(ದೇಸಾಯಿ) ವಾರಕ್ಕೊಂದು ಸಲ ಪರಗಣದ ಸುತ್ತೆಲ್ಲ ತೆರಿಗೆ ವಸೂಲಿ ಮಾಡುತ್ತಿದ್ದನು. ಅದು ಸುಮಾರಾಗಿ ೧೫೦೦ಕ್ಕಿಂತ ಹೆಚ್ಚು ರೂಪಾಯಿಗಳಾಗಿರುತ್ತಿತ್ತೆಂದು ಅವರ ಮನೆತನದ "ಹಿರಿಯ ತಲೆಮಾರಿನವರಿಂದ ತಿಳಿದು ಬರುತ್ತದೆ."[೨೬] ದೇಸಗತಿಯವರಲ್ಲಿ ಏನಾದರೂ ಸಭೆ ಸಮಾರಂಭಗಳಿದ್ದರೆ, ತೆರಿಗೆಯನ್ನು ಹಣದ ಬದಲಿಗೆ ವಸ್ತುಗಳ ರೂಪದಲ್ಲಿ ಪಡೆಯುತ್ತಿದ್ದರು. ಇದಕ್ಕೊಂದು ನಿದರ್ಶನವೆಂಬಂತೆ ವ್ಯಾಪಾರಿಗಳ ಮೇಲೆ ನಿಗದಿಪಡಿಸಿದ ತೆರಿಗೆಯೊಂದು ಈ ಕೆಳಗಿನಂತಿದೆ.

"೧. ಗಾಣದ ಎಣ್ಣೆ ಮನೆತನದ ಮೇಲೆ ೧೫ %

೨. ಪಾನ ಬೀಡಿ ಅಂಗಡಿ ಪ್ರತಿದಿನ ತೆರಿಗೆ ೦.೫೦ ಸಭೆ ಸಮಾರಂಭದಲ್ಲಿ ಪುಕ್ಕಟೆ ನೀಡುವುದು

೩. ಗಂಜಿಯಾ ಮತ್ತು ಕಲಾಲ ಮತ್ತು ಬ್ಯೂಚರ್ಸ ಎಲ್ಲರೂ ಒಂದೇ ತೆರನಾಗಿ ತೆರಿಗೆ ನೀಡುವುದು ೧೨% ರಷ್ಟು. ಸಭೆ ಸಮಾರಂಭದಲ್ಲಿ ಪ್ರತ್ಯೇಕವಾಗಿ ಕುರಿಗಳನ್ನು ಕೊಡುತ್ತಿದ್ದರು.

೪. ದುಖಾನ ವಾಲಾ ಅಂದರೆ ಜಕಾತ(Excise) ಸಿಂಗೋಟಿ (ಸಿಂದಿ) ೧೫ ತೆರಿಗೆ ಇತ್ತು. ದೇಸಾಯರಿಗೆ ಪ್ರತ್ಯೇಕವಾಗಿ 'ನೀರಾ'ವನ್ನು ಕಳಿಸುತ್ತಿದ್ದರು.

೫. 'ಪಸಾರೆ'(ಫಸರೆ) ಪಸಾರೆ > ಫಸರೆ (ವ್ಯಾಪಾರಿಗಳ) ಮೇಲೆ ಕಸಬಾದಲ್ಲಿ ತೆರಿಗೆ ಇತ್ತು ೦.೫೦% ಇತ್ತು. ಸಭೆ ಸಮಾರಂಭದಲ್ಲಿ ಕಾಯಿಪಲ್ಲೆ ಅವಶ್ಯ ಕೊಡುತ್ತಿದ್ದರು.

೬. ಪಿಂಜಾರ್ಸ ಪ್ರತಿಮನೆಗೆ ೧ ೧/೨ = (೧=೫೦) ಪೈಸೆ ತೆರಿಗೆ ಇತ್ತು.

೭. ಮಗ್ ಜೂಲಿಸ ಅಂದರೆ ಬಣಗಾರ ಮತ್ತು ಸಾಲಿಸ್ ಪ್ರತಿ ಮಗ್ಗಕ್ಕೆ ೧ ೧/೨ (೧.೫೦) ಪೈಸೆ ತೆರಿಗೆ ಕಸಬಾದಲ್ಲಿ ಸಿಗುತ್ತಿತ್ತು.

೮. ವಾಣಿಸ್ ಮತ್ತು ವೆಂಡರ್ಸ ಬಟ್ಟೆ ವ್ಯಾಪಾರಿಗಳಿಂದ ಪ್ರತಿ ಅಂಗಡಿಗೆ ೧೨ ಪೈಸೆ ತೆರಿಗೆ ಇತ್ತು.

ಹಾಗೆ ಇತರೆ ವಸ್ತುಗಳ ಮೇಲೆ ತೆರಿಗೆ ಹೇರಿದ್ದು ತಿಳಿದು ಬರುತ್ತದೆ. ದೇಸಗತಿಯ ತಳವಾರ ಮತ್ತು ಬಾರಕೇರರು ಕರ ವಸೂಲಿ ಮಾಡುತ್ತಿದ್ದರು.

೧೦. ಚಟ್ಟಿ, ತೇಲಿ, ಅತ್ತಾರ, ನಧಾಪ್ , ಸುತಾರ, ಕುಂಬಾರ, ಸಿಂಪಿ, ನಾವಲೀಗ, ಅಲ್ಲದೆ ಇತರೆಯವರ ಮೇಲೂ ಕೂಡ ಶೇಕಡಾ ೭ರಷ್ಟು ತೆರಿಗೆ ಹಾಕುತ್ತಿದ್ದರು. ಹೀಗೆ ಉತ್ಪನ್ನದ ವಸ್ತುಗಳ ಮೇಲೆ ಮಾರಾಟ ತೆರಿಗೆ, ವೃತ್ತಿ ಉದ್ಯೋಗಗಳ ಮೇಲೆ ನಿಗದಿತ ಪ್ರಮಾಣದಲ್ಲಿ ಸುಂಕವನ್ನು ಆಕರ್ಷಿಸಲಾಗುತ್ತಿತ್ತು. ಬಾಗಲಕೋಟೆಯ ಪಟ್ಟಣಶೆಟ್ಟಿ ಇನಾಂದಾರ ಮನಹಳ್ಳಿ ದೇಸಾಯಿ ಅವರಲ್ಲಿರುವ ದಾಖಲೆಗಳು ಸುಂಕದ ಸ್ಪಷ್ಟತೆಯನ್ನು ಸೂಚಿಸುತ್ತವೆ. ಶೇಕಡಾ ೧೨ರಷ್ಟು ಸಿಂದಿಯ ಮೇಲೆ ಶೇಕಡಾ ೧೫ % ಪಸಾರ ಮಾಡುವವರ (ವ್ಯಾಪಾರ) ಮೇಲೆ ಶೇಕಡ ೧/೨ರಷ್ಟು ಮನೆಗಳಿಗೆ, ಗಾಂಜಾ (ಆಫೀಮ) ಪಾನ ಬೀಡಾ ಅಂಗಡಿಯ ಮೇಲೆ ವಿವಿಧ ವ್ಯಾಪಾರಿಗಳ ಮೇಲೆ ತೆರಿಗೆ ಹೇರಿದ್ದರು."[೩೨]

ಒಟ್ಟಾರೆಯಾಗಿ ಕಸಬೆ, ಮೌಜೆ(ದೆಹ)ಗಳಲ್ಲಿ ಪ್ರತಿವಾರಕೊಂದು ದಿನ ಸಂತೆ ನಡೆಯುತ್ತಿತ್ತು. ಅದರಿಂದ ದೇಸಗತಿಗೆ ಅಪಾರವಾಗಿ ಸುಂಕ ಸಿಗುತ್ತಿತ್ತೆಂದು ತಿಳಿದುಬರುತ್ತದೆ.

೩.೩.೫. ಅರಣ್ಯದಿಂದ ಸಿಗುವ ಲಾಭಾಂಶಗಳು

ಅರಣ್ಯೋತ್ಪನ್ನಗಳಿಂದ ಬರುವ ವಸ್ತುಗಳ ಮೇಲಿನ ಕಂದಾಯವು ವಿಶೇಷ ಲಾಭಾಂಶವಾಗಿತ್ತು. ಹುನಗುಂದ ತಾಲೂಕನ್ನು ಹೊರತುಪಡಿಸಿದರೆ ಇತರೆ ತಾಲೂಕಗಳ ಅರಣ್ಯ ದೇಸಗತಿ ವ್ಯಾಪ್ತಿಗೆ ಇಂತಿಷ್ಟೆ ಎಂದು ಹೇಳಲು ಸಾಧ್ಯವಿಲ್ಲ. ಗುಡ್ಡಬೆಟ್ಟ, ಹಳ್ಳ, ಕೊಳ್ಳ, ನದಿ ತೀರ ಇವೆಲ್ಲವುಗಳಿಂದ ಸಾಕಷ್ಟು ಲಾಭಾಂಶಸಿಗುತ್ತಿತ್ತು ಅದನ್ನು ಕೆಳಗಿನಂತೆ ನೋಡಬಹುದು.

ಅ. ಅಂಟು, ರಾಳ, ಜೇನು, ಕಟ್ಟಿಗೆ.

ಬ. ಗಿಡಮರಗಳು

ಹುಣಸೆಹಣ್ಣು, ಮಾವು, ಹುಲಗಲಿ ಬೀಜ, ತುಗ್ಗಲಿ, ಜಾಲಿ.

ಕ. ಸಸ್ಯ

ತುಮರಿ ಹೂ, ಅಮರಿ ಹೂ, ಮಧುಗುಣಕಿ ಹೂ ಇತರೆ.

ಅಲ್ಲದೆ ಕಲ್ಲು, ಮಣ್ಣು, ನದಿ-ಹಳ್ಳಗಳಿಂದ ದೊರಕುವ 'ಮರಳು' ದೇಸಗತಿಗೆ ಸೇರಿದ್ದಾಗಿತ್ತು. ವಾರ್ಷಿಕ ತಪಾಸಣೆಗೆ ಮರಗಳ ಗಣತಿ ಸಹ ನಡೆಯುತ್ತಿತ್ತು. ನೈಸರ್ಗಿಕವಾಗಿ ಬೆಳೆಯುವ ತುಮರಿ ಹೂ ಹೆಚ್ಚು ಬೆಲೆಗೆ ಮಾರುತ್ತಿತ್ತು ಎಂದು ತಿಳಿದು ಬರುತ್ತದೆ. ಹಾಗೆ ಗುಡ್ಡಬೆಟ್ಟಗಳಲ್ಲಿ ಬೆಳೆದಿರುವ 'ಹುಲ್ಲು' (Grace) 'ಹುಲಬನ್ನಿ' ರೂಪದಲ್ಲಿ ಕಂದಾಯ ಶೇಖರಣೆ ಆಗುತ್ತಿತ್ತು.

'ಹುಲಬನ್ನಿ' ಎಂದರೆ ಹುಲ್ಲುಗಾವಲಿಗೆ (ತಪ್ಪಲಕ್ಕೆ) ಸುಂಕ ಕೊಡುವುದು ಎಂದು ಹೇಳಬಹುದು. ಕುರಿಗಾರರಿಂದ, ದನಗಾರರಿಂದ ವಾರ್ಷಿಕವಾಗಿ ಸಿಗುತ್ತಿತ್ತು. ಕುರಿಗಾರರು ವಾರ್ಷಿಕ ಸುಂಕವಲ್ಲದೆ ದೇವರ ಕಾರ್ಯಕ್ಕೆ ಗಬ್ಬಾದ ಕುರಿ, ಕೊಡುವುದು ಕಡ್ಡಾಯವಾಗಿತ್ತು. ಇಂದಿಗೂ ಈ ಪದ್ಧತಿ ಜೀವಂತವಾಗಿರುವ ಕುರಿತು "ಫಕೀರಗೌಡ ಪಾಟೀಲರು ಹೇಳುತ್ತಾರೆ."[೩೮] ಕಾಡಿನಲ್ಲಿ ಬೆಳೆದ ಯಾವುದೇ ಗಿಡಗಳನ್ನು ಗೌಡರ ಪರವಾನಿಗೆ ಇಲ್ಲದೆ ಕಡಿಯುವ ಹಾಗಿಲ್ಲ, ಕಡಿದರೆ ಅವರಿಗೆ ಗುಡ್ಡಗಳಲ್ಲಿ ನಡೆದಾಡಲು ಮೇಯಿಸಲು ಪರವಾನಿಗೆ ಇರುವುದಿಲ್ಲ. ಈ ಪದ್ಧತಿಯು ಅರಣ್ಯ ಇಲಾಖೆಯಲ್ಲಿ ಪ್ರಸ್ತುತವೂ ಕಾಯ್ದೆಯಾಗಿ ಮಾರ್ಪಟಿದ್ದು ತಿಳಿದುಬರುತ್ತದೆ.

ಮಾವು ಹಾಗೂ ಇತರೆ ಗಿಡಗಳಿಂದ ಸಿಗುವ ಅಂಟು ಅದರಲ್ಲಿ ಕಟ್ಟಿರುವ ಜೇನು, ಕಟ್ಟಿಗೆ ದೇಸಗತಿಗೆ ಹೆಚ್ಚು ಫಲದಾಯಿಕವಾಗಿದ್ದವು. ಇವುಗಳಿಂದ ಬಂದ ಆದಾಯವನ್ನು ಹೇಗೆ ವಿನಿಯೋಗಿಸಬೇಕು ಎಂಬ ನಿರ್ದೇಶನವು ಅರಸರಿಂದ ಇತ್ತು. ಹುಲಬನ್ನಿಯನ್ನು ಮಾತ್ರ ಅರಸರಿಗೆ ನಿಗದಿತ ವಾರ್ಷಿಕ ನಜರಾಣಾದ ಜೊತೆಗೆ ಕಳಿಸಿ ಪ್ರತ್ಯೇಕವಾಗಿ ವ್ಯವಹರಿಸಿದ್ದು ಕೆಲವು ದಾಖಲೆಗಳಿಂದ ತಿಳಿದುಬರುತ್ತದೆ.

ಹೀಗೆ ವಿವಿಧ ಮೂಲಗಳಿಂದ ಸಿಗುವ ಆದಾಯವು ೧,೦೦,೦೦೦(ಒಂದು ಲಕ್ಷ)ಕ್ಕಿಂತ ಮಿಗಿಲಾಗಿತ್ತೆಂದು 'ಗಡಪಟ್ಟಿ' ಕೊಡುವುದರೊಂದಿಗೆ ಸೇರಿಸಿಕೊಟ್ಟಿದ್ದು "ನರಗುಂದಕರ, ತೊರಗಲ್ಲಕರರಿಗೆ ನೀಡಿದ ದಾಖಲೆಗಳಲ್ಲಿ ಪೇಶ್ವೆಗಳವರ ದಾಖಲೆಗಳಲ್ಲಿ ಉಕ್ತವಾಗಿದೆ"[೩೯] ಇದರಿಂದ ಇನ್ನೂ ಹೆಚ್ಚಿನ ಆರ್ಥಿಕ ಸ್ಥಿತಿ-ಗತಿ ಅರಿಯಲು ಸಹಾಯಕವಾಗುತ್ತದೆ.

೩.೩.೬. ದೇಸಗತಿ ಅಭಿವೃದ್ಧಿ ಹಾಗೂ ಆರ್ಥಿಕ ವೆಚ್ಚ

ದೇಸಗತಿ ಆರ್ಥಿಕ ಉತ್ಪನ್ನ ಸದಿಚ್ಛೆಯಿಂದ ಅರಸುಗಳು ಹಾಕಿದ ನಿರ್ಬಂಧದ ಚೌಕಟ್ಟಿನೊಳಗೆ ಖರ್ಚುಮಾಡುವುದು ದೇಸಗತಿಗಳ ಕಾರ್ಯವಾಗಿತ್ತು. ಖರ್ಚು ಮಾಡಿದ ಬಗ್ಗೆ ದಾಖಲೆಗಳನ್ನು ಇಡಬೇಕಾಗಿತ್ತು. ಅರಸುಗಳ ನಿರ್ದೇಶನದ ಮೇರೆಗೆ ನೌಕರರ ನೇಮಕ, ಕಟ್ಟಡ ಹಾಗೂ ಇತರೆ ಖರ್ಚುಗಳಿಗೆ ಆರ್ಥಿಕ ವೆಚ್ಚದ ಕಡಿವಾಣ ಹೇರಲಾಗಿತ್ತು. ಸರಿಯಾಗಿ ಲೆಕ್ಕಪತ್ರ ಇರದೇ ಇರುವುದರಿಂದ ದೇಸಗತಿ ಕಾಲಸಾತ(ದೇಸಗತಿ ಹಕ್ಕನ್ನು ಹಿಂದಕ್ಕೆ ಪಡೆಯುವುದು) ಆದದ್ದು ಒಂದು ನಿದರ್ಶನವಿದೆ. ಉದಾಹರಣೆಗೆ ಪೇಶ್ವೆಗಳು ಬದಾಮಿ ಪ್ರಾಂತದಲ್ಲಿ ಬಂದು ವಾರ್ಷಿಕ ಹಮ್ಮಿಣಿ ಪಡೆಯುತ್ತಿದ್ದರು. ಆಗ ಜಾಲಿಹಾಳ ದೇಸಾಯಿ, ಲೋಕಾಪೂರ ದೇಸಾಯಿಗಳು ಲೆಕ್ಕಪತ್ರ ಇಡದೇ ಇದ್ದುದರಿಂದ 'ಕಾಲಸಾತ ಮಾಡಿದರು.'[೪೦] ಅದರ ಉಸ್ತುವಾರಿಯನ್ನು ಸಮೀಪದ ದೇಸಗತಿಗೆ, ಘೋರ್ಪಡೆ ಅರಸರಿಗೆ ವಹಿಸಿಕೊಟ್ಟರು.

"ದೇಸಗತಿ ಒಟ್ಟು ಆದಾಯದಲ್ಲಿ ೧/೬ರಷ್ಟನ್ನು ಸದಾ ಖಜಾನೆಯಲ್ಲಿಟ್ಟು ಉಳಿದಿದ್ದನ್ನು ವ್ಯಯ ಮಾಡಬಹುದಾಗಿತ್ತು."[೪೧] ಒಂದು ವೇಳೆ ಹೆಚ್ಚು ಖರ್ಚುಮಾಡಿದರೆ ವಾರ್ಷಿಕ ಸಂಭಾವನೆ ಬರುತ್ತಿರಲಿಲ್ಲ.

ಅರಸರು ನೀಡಿದ ಶರತ್ತುಗಳಲ್ಲಿಯೆ ವ್ಯಯ ಮಾಡಬಹುದಾಗಿತ್ತು. ದೇಸಗತಿಯವರು ಮಾಡುವ ಖರ್ಚುಗಳ ವಿವರ ಈ ಕೆಳಗಿನಂತೆ ಇವೆ.

ಅ. ದೇಸಗತಿಯಲ್ಲಿ ನಿಗದಿಗೊಳಿಸಿದ ಕಂದಾಯದ ಹಣದಲ್ಲಿ ಸೈನ್ಯದ ವೆಚ್ಚಕ್ಕಾಗಿ ಅದನ್ನು ವಿನಿಯೋಗಿಸುವುದು.

ಆ. ಕಟ್ಟಡ ನಿರ್ಮಾಣ, ಅರಮನೆ, ಕೋಟೆ, ಗಡ ಇತ್ಯಾದಿಗಳಿಗೆ ಉಪಯೋಗಿಸುವುದು.

ಇ. ಶ್ರೀಮಂತರ(ಪೇಶ್ವೆಗಳ) ಸತ್ಕಾರಕ್ಕಾಗಿ ಖರ್ಚು ಮಾಡುವುದು.

ಈ. ನಕ್ತ ನೇಮ್ಣೂಕ (ವೇತನ)ಕ್ಕಾಗಿ ಬಳಸುವುದು.

ಉ. ಅತಿಥಿಗಳ ಸಂಬಳಕ್ಕಾಗಿ ಬಳಸುವುದು.

ಊ. ವೈಯಕ್ತಿಕ ಖರ್ಚಿಗಾಗಿ ಬಳಸುವುದು.

ಋ. ಧರ್ಮಕಾರ್ಯಕ್ಕಾಗಿ ಬಳಸುವುದು ಅದು ನಿಯಮಿತವಾಗಿ ಮಾತ್ರ.

ಎ. ಊರಿನ ಅಭಿವೃದ್ಧಿಪರ ಕೆಲಸ, ದಾರಿ, ಕಟ್ಟಡ, ಇತರೆ ಕೆಲಸಗಳಿಗಾಗಿ ಬಳಸುವುದು.

ಏ. ಮಂಗಳಸೂತ್ರ, ಮದುವೆ, ಮುಂಜಿ, ಉತ್ಸವಕ್ಕಾಗಿ ಖರ್ಚು ಮಾಡುವುದು.

ಹೀಗೆ ಈ ಮೇಲಿನ ಕಾರಣಗಳಲ್ಲದೆ ಇತರೆ ಕಾರಣಗಳಲ್ಲಿ ದೇಸಗತಿಯವರು ಉತ್ಪನ್ನದ ಲಾಭಾಂಶವನ್ನು ವ್ಯಯ ಮಾಡುತ್ತಿದ್ದರು. ಅರಸರುಗಳು ದಂಡೆತ್ತಿ ಹೋಗಬೇಕಾದಾಗ ಆಯಾ ಭಾಗದಲ್ಲಿ ಬಂದು ಕಪ್ಪ ಕಾಣಿಕೆಗಳನ್ನು ಸಹ ಪಡೆಯುತ್ತಿದ್ದರು. ಇದರಿಂದ ದೇಸಗತಿ ನಡೆಸುವುದು ಕಷ್ಟಸಾಧ್ಯವಾಗುತ್ತಿತ್ತು. ಚಿಕ್ಕ ಪುಟ್ಟ ದೇಸಗತಿಗಳು ಕೆಲವೊಮ್ಮೆ ಕಪ್ಪ ಕಾಣಿಕೆ ಕೊಡದೆ ಕಣ್ಮರೆಯಾಗುತ್ತಿದ್ದವು. ಆದರೆ ಅಂಥವುಗಳ ಮೇಲೆ ಮುಂದಿನ ವರ್ಷದಲ್ಲಿ ಬಲತ್ಕಾರದಿಂದಲೆ ಕಾಣಿಕೆ ಪಡೆಯುತ್ತಿದ್ದರು. ಅಂಥವುಗಳಲ್ಲಿ ಹೊಸೂರು, ಕಂದಗಲ್ಲ, ಕರಡಿ, ಕೊಣ್ಣೂರ, ಲೋಕಾಪುರ ಇವು ಮುಖ್ಯವಾಗಿ ಕಂಡುಬರುತ್ತವೆ.

ಇದಕ್ಕೆ ನಿದರ್ಶನವೆಂಬಂತೆ 'ಮೊಗಲರಿಗೆ ೨ ಸಲ ಕಪ್ಪಕಾಣಿಕೆ ನೀಡಿದರು. ಶಿವಾಜಿ ಮಹಾರಾಜರಿಗೆ ೨ ಸಲ ೫೦೦ ರಿಂದ ೭೦೦ ರೂಪಾಯಿ, ತೊರಗಲ್ಲಕರ, ನರಗುಂದಕರ ೧೫೦೦ ಗಡಪಟ್ಟಿ. (ಶಕೆ ೧೧೬೫ರಲ್ಲಿ) ವೈಯಕ್ತಿಕ ಕಲಹ ಪ್ರಾರಂಭವಾದಾಗ ಅದರ ವಿಚಾರಣೆಗೆ ಪೇಶ್ವೆಗಳು ಬಂದಾಗ ೪೦೦ ರಿಂದ ೫೦೦ ರೂಪಾಯಿ :ಪಡೆಯುತ್ತಿದ್ದರು. ಸಂಸ್ಥಾನೀಕ ರಾಜರು ೨೦೦೦ ರಿಂದ ೩೦೦೦ ರೂಪಾಯಿ ಪಡೆಯುತ್ತಿದ್ದರು.''[೨]

ಬ್ರಿಟೀಷ್ ಸರಕಾರವು ದೇಸಗತಿಯವರಿಗೆ ಹೆಚ್ಚಿನ ತೆರಿಗೆಯನ್ನು ವಿಧಿಸಿದ್ದು ಕಂಡುಬರುತ್ತದೆ. ಅದೆಂದರೆ ೪೫೦೦ ರೂಪಾಯಿ ಇದನ್ನು ಅವರ ಉತ್ಪನ್ನದ ಭಾಗಾಂಶವೆಂದು ತಿಳಿಯಲಾಗುತ್ತಿತ್ತು. ''ಒಂದು ರೂಪಾಯಿಗೆ ಒಂದು ಪೈಸೆಯನ್ನು ತೆಗೆದಿರಿಸಿ ಅದನ್ನು ಪ್ರತಿ ವರ್ಷಕ್ಕೊಮ್ಮೆ ಕೊಡುತ್ತಾ

ಹೋಗಬೇಕೆಂದು ಬ್ರಿಟೀಷ ಮಹಾರಾಣಿ ಒಪ್ಪಂದವಿದ್ದು”[೪೩]ದರಿಂದ ದೇಸಗತಿ ನಿಧಾನವಾಗಿ ಏಳು-ಬೀಳುಗಳಿಂದ ಮುಂದುವರಿಯಿತು. ಬ್ರಿಟೀಶ್ ಕಾಲಾವಧಿಯಲ್ಲಿ ಚಿಕ್ಕಪುಟ್ಟ ದೇಸಗತಿಗಳು ಕಣ್ಮರೆಯಾದವು. ದೊಡ್ಡ ದೇಸಗತಿಗಳು ಹಾಗೂ ಮಧ್ಯಮ ದೇಸಗತಿಗಳು ಅವರ ನಿಬಂಧನೆಗಳಿಗೆ ಒಳಪಡಿಸಿಕೊಂಡು ಉಳಿದುಕೊಂಡು ಬಂದವು. ಕೆಲವು ದೇಸಾಯಿಗಳು ಉತ್ತಮ ವ್ಯವಹಾರಿಕ ಸಂದರ್ಭವನ್ನು ಮುಂದುವರಿಸಿಕೊಂಡು ಬಂದರು. ಗ್ರಾಮೀಣ ಬದುಕಿನ ಕಷ್ಟ ಕಾರ್ಪಣ್ಯಗಳಲ್ಲಿ ಪಾಲ್ಗೊಂಡು ಪ್ರಾದೇಶಿಕ ಜನಾಂಗದ ಪ್ರೀತಿ ವಿಶ್ವಾಸವನ್ನು ಗಳಿಸಿಕೊಂಡು ದೇಸಗತಿಯ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಪ್ರಸ್ತುತ ಶ್ರೀಮಂತರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವುದರಿಂದ ವರ್ತಮಾನದಲ್ಲೂ ಅವರಿಗೆ ಸಲ್ಲಬೇಕಾದ ಗೌರವವೂ ಇಂದಿಗೂ ಸಲ್ಲುತ್ತಿದೆ.

೩.೩.೭. ಪಟ್ಟಾ ಮತ್ತು ಕಬೂಲಾಯಿತ್

ದೇಸಗತಿಯ ಆರ್ಥಿಕತೆಯನ್ನು ಹೆಚ್ಚಿಸಲು ಲೋಪ ಆಗದಂತೆ ತಡೆಹಿಡಿಯಲು ಪಟ್ಟಾ, ಕಬೂಲಾಯಿತ್‌ಗಳು ಬಹಳಷ್ಟು ಸಹಕಾರಿಯಾಗಿವೆ. ರಾಜಾ ತೋಡರಮಲ್ಲನಿಂದ ರೂಪಿಸಲ್ಪಟ್ಟ ರೇಖಾ ಝುಾದ್ರಿ ಎನ್ನುವ ತೆರಿಗೆ ನಿಯಮಗಳು ಹೆಚ್ಚುವರಿಯಾಗಿ ಬಿರಾಡವನ್ನು ವಸೂಲಿ ಮಾಡಲು ಸಹಕಾರಿಯಾದವು.

ಪಟ್ಟಾ ಎಂದರೆ ಮೂಲ ವತನದಾರನು ತಮ್ಮ ಜಮೀನಿನ ಹಕ್ಕನ್ನು ರೈತನಿಗೆ ನೀಡುವುದು ಎಂದರ್ಥ.[೪೪] ಇದು ರೈತನಿಗೆ ತಾತ್ಕಾಲಿಕವಾಗಿರುತ್ತದೆ. ಜಮೀನನ್ನು ಊಳುವಲ್ಲಿ ಉತ್ತಮ ಫಸಲು ತೆಗೆಯುವಲ್ಲಿ ಸರಿ ಕಂಡರೆ ಮಾತ್ರ ಮುಂದುವರಿಯುತ್ತಾನೆ. ಇಲ್ಲವಾದಲ್ಲಿ ಅವಧಿ ಕಡಿಮೆ ಮಾಡಿ ಬೇರೆ ರೈತನನ್ನು ನೇಮಿಸಲಾಗುತ್ತದೆ. ಇದರಲ್ಲಿ ಗೆರೆ ಮೇಲೆ, ಗೆರೆ ಕೆಳಗೆ ಎಂಬುದು ತಿಳಿದು ಬರುತ್ತದೆ. ಅಂದರೆ ಗೆರೆ ಮೇಲೆ ರೈತನ ಹೆಸರಿದ್ದು ಗೆರೆ ಕೆಳಗೆ ದೇಸಾಯಿಯ ಹೆಸರಿರುತ್ತದೆ. ಮೂಲ ವತನದಾರನಿಂದ ನೇಮಿಸಿದ್ದೆಂದು ತಿಳಿದುಬರುತ್ತದೆ. ಇದರಲ್ಲಿ ರೈತನ ಭೂಮಿ ಸರ್ವೆನಂಬರ್, ಬೆಳೆಯುವ ಬೆಳೆ, ಕ್ಷೇತ್ರ ಮುಂತಾದವು ಇರುತ್ತವೆ. ಒಟ್ಟಾರೆ ಕಂದಾಯದ ಲೆಕ್ಕಾಚಾರ ನಿಖರವಾಗಿ ಇದರಿಂದ ತಿಳಿದುಬರುತ್ತದೆ.

‘ಕಬೂಲಾಯಿತ್’ ಎಂದರೆ ಒಪ್ಪಿಗೆ ಪತ್ರ ಎಂದರ್ಥ. ಇದು ಎರಡನೇ ಕರಾರು ಪತ್ರವೆಂದು ಹೇಳಬಹುದು. ಮೊದಲನೆಯದು ಪಟ್ಟಾ ಆಗಿದ್ದರೆ ಎರಡನೆಯದು ಕಬೂಲಾಯಿತ್ ಆಗಿದೆ. ಇದು ಮರಾಠಿ ಪದವಾಗಿದೆ. ಜನಪದರಲ್ಲಿ ಬಹಳಷ್ಟು ಬಳಕೆಯಿದೆ. ದೇಸಗತಿ ಜಮೀನನ್ನು ಅವರಿಂದ ಪಡೆದುಕೊಂಡು ಮರಳಿ ಬರೆದುಕೊಟ್ಟ ಒಪ್ಪಿಗೆ ಪತ್ರ. ವಿಶೇಷವೆಂದರೆ ರೈತನು ಸಂಸ್ಥಾನಕ್ಕೆ ನಿಯತ್ತಿನಿಂದ ಕಂದಾಯವನ್ನು ನೀಡಲು ಬರೆದುಕೊಟ್ಟ ಒಪ್ಪಿಗೆ ಪತ್ರವಾಗಿದೆ. ಕಂದಾಯದ ಮೊತ್ತವನ್ನು ಇದರಲ್ಲಿ ಬರೆದಿರುತ್ತದೆ. ಇಲ್ಲಿ ಬರೆದುದಕ್ಕಿಂತಲೂ ಹೆಚ್ಚಿಗೆ ಕಂದಾಯ ವಸೂಲಿ ಮಾಡಲು ಬರುವುದಿಲ್ಲ. ಇಂಥ ಅನೇಕ ದಾಖಲೆಗಳು ದೇಸಗತಿಗಳ ಆರ್ಥಿಕ ಸ್ಥಿತಿಗತಿಗಳ ಕುರಿತು ಕುತೂಹಲಕರ ಮಾಹಿತಿಯನ್ನು ಒದಗಿಸುತ್ತವೆ.

ಒಟ್ಟಾರೆಯಾಗಿ ಪಟ್ಟಾ ಮತ್ತು ಕಬೂಲಾಯಿತ್‌ಗಳು ಒಕ್ಕಲುತನದ ಅಭಿವೃದ್ಧಿಗೆ ದೇಸಗತಿಗಳೊಂದಿಗೆ ಒಪ್ಪಂದ ಮಾಡಿಕೊಂಡದನ್ನು ಸೂಚಿಸುತ್ತವೆ. ಇಂಥ ಒಪ್ಪಂದವು ಅವರ ಮೇಲೆ ವಿಶ್ವಾಸವಿರುವರೆಗೆ ಮುಂದುವರಿಯುತ್ತವೆ. ಈ ಕುರಿತ ಸಂಗತಿಗಳು ದೇಸಗತಿ ರೀಕಾರ್ಡಗಳಲ್ಲಿ ಪ್ರತ್ಯೇಕವಾಗಿ ಕಂಡುಬರುತ್ತವೆ.(ಇದಕ್ಕೆ ಸಂಬಂಧಿಸಿದ ಕಬೂಲಾಯಿತ್ ಪತ್ರವನ್ನು ಅನುಬಂಧ ೨ರಲ್ಲಿ ಕೊಡಲಾಗಿದೆ.)

೩.೪. ಸಾಂಸ್ಕೃತಿಕ ಕೊಡುಗೆ

ದೇಸಗತಿಗಳ ಒಟ್ಟು ಸಾಂಸ್ಕೃತಿಕ ಅನನ್ಯತೆಯನ್ನು ಸಾಮಾಜಿಕ ಕೊಡುಗೆಗಳು ಎಂಬ ಹಿನ್ನೆಲೆಯಲ್ಲಿ ಕಟ್ಟಿಕೊಡಲಾಗಿದೆ. ದೇವಾಲಯಗಳ ರಚನೆ, ಜೀರ್ಣೋದ್ಧಾರ, ದೇವಾತಾ ಮೂರ್ತಿಗಳ ಪ್ರತಿಷ್ಠಾಪನೆ ಹಾಗೂ ಪೂಜಾ ಕೈಂಕರ್ಯಗಳಿಗೆ ಪ್ರೋತ್ಸಾಹ ಮತ್ತು ದಾನದತ್ತಿಗಳನ್ನ ನೀಡುವ ಮೂಲಕ ಸಮಾಜದ ಭಾವನಾತ್ಮಕ ಹಾಗೂ ಭೌತಿಕ ಪ್ರಜ್ಞೆಯನ್ನು ಆಳುತ್ತ ಬಂದರು. ಊರಿನ ಎಲ್ಲ ಪ್ರಜೆಗಳಿಗೆ(ಸೇತಸನದಿಗಳಿಗೆ) ಇತರೆ ವರ್ಗದವರಿಗೂ ಕೊಡಮಾಡಿದ್ದ ಕುರಿತು ಅವರ ಸನದು ಪತ್ರಗಳು, ಅಲಿನೇಷನ್ ರಿಕಾರ್ಡ್, ಇನಾಂ ಕಮೀಷನ್ ಮೋಡಿ ದಾಖಲೆಗಳು ಬಹುಮುಖ್ಯ ಆಕರಗಳಾಗಿದೆ.

"ಜೀವನದಲ್ಲಿ ಒಂದಾದರೂ ದೇವಾಲಯವನ್ನು ಕಟ್ಟಿಸಬೇಕು ಇಲ್ಲವೆ ಕಟ್ಟಿಸಿದ ದೇವಾಲಯಗಳಿಗೆ ದಾನವನ್ನಾದರೂ ನೀಡಬೇಕು ಎಂಬುದು ನಮ್ಮ ಹಿರಿಯರ ಧಾರ್ಮಿಕ ಭಾವನೆಯಾಗಿತ್ತು. ಎಲ್ಲ ಸಂಪತ್ತುಗಳಿಗೂ ಪುಣ್ಯವೆ ಮೊದಲು, ಎಲ್ಲ ಪುಣ್ಯಕ್ಕೂ ಈಶ್ವರನ ಪ್ರತಿಷ್ಠಾಪನೆಯೆ ಮೊತ್ತ ಮೊದಲು. ಯಾವ ವ್ಯಕ್ತಿ ದೇವರು ಮತ್ತು ದೇವಾಲಯವನ್ನು ಪ್ರತಿಷ್ಠಾಪಿಸುತ್ತಾನೋ ಅವನು ದೇವರೆ ಆಗಿಬಿಡುತ್ತಾನೆ ಎಂಬ ನಂಬಿಕೆಗಳು ನಮ್ಮ ಪೂರ್ವಜರಲ್ಲಿ ಬಲವಾಗಿ ಬೇರೂರಿದ್ದವು. ದೇವಸ್ಥಾನ ನಿರ್ಮಾಣದ ನಂತರ ಅದರ ಉಸ್ತುವಾರಿ ನೋಡಿಕೊಂಡು ಬರುವ ಕೆಲಸ ಸುಲಭವಲ್ಲ. ಕಾಲಕಾಲಕ್ಕೆ ಅದರ ಜೀರ್ಣೋದ್ಧಾರಕ್ಕೆ, ಪೂಜೆ ಪುನಸ್ಕಾರಗಳು ಸಾಂಗವಾಗಿ ನಡೆದುಕೊಂಡು ಬರಲು ಸಾಕಷ್ಟು ಆರ್ಥಿಕ ನೆರವೂ ಅಗತ್ಯವಿದ್ದಿತು. ದೇವಾಲಯಗಳನ್ನು ಕಟ್ಟಿಸುತ್ತಿದ್ದ ವ್ಯಕ್ತಿಗಳು ಇದನ್ನು ಅರಿತಿದ್ದರು. ಅಂತೆಯೆ ತಾವು ಕಟ್ಟಿಸಿದ ದೇವಾಲಯಗಳಿಗೆ ಸಾಕಷ್ಟು ದಾನ ದತ್ತಿಗಳನ್ನು ನೀಡುತ್ತಿದ್ದರು."[೨೯]ಅಲ್ಲದೆ ಇತರೆ ದೇವಾಲಯಗಳಿಗೆ ತಾವು ಕಟ್ಟಿಸಲಾಗದಿದ್ದರೂ ಕೂಡ ಹೊಸದಾಗಿ ಅಸ್ತಿತ್ವವನ್ನು ಪಡೆದ ದೇವಾಲಯಗಳಿಗೂ ತಮ್ಮ ಕೈಲಾದಷ್ಟು ದಾನದತ್ತಿಗಳನ್ನು ನೀಡುವುದರ ಮೂಲಕ ಅಲ್ಲಿನ ಪೂಜೆ ಪುನಸ್ಕಾರಗಳು ಸಾಂಗವಾಗಿ ನಡೆಯುವಂತೆ ಮಾಡಿ, ತಮ್ಮ ಭಕ್ತಿಯನ್ನು ಮೆರೆದು ಕೃತಾರ್ಥರಾಗುತ್ತಿದ್ದರು. ಈ ಪರಂಪರೆಯ ಹಿನ್ನೆಲೆಯಲ್ಲೆ ಬಾಗಲಕೋಟೆ ಜಿಲ್ಲೆಯ ದೇಸಗತಿಗಳ ಪ್ರದೇಶದಲ್ಲಿ ದೇವಾಲಯಗಳ ನಿರ್ಮಾಣ ಜೀರ್ಣೋದ್ಧಾರ, ಪೂಜಾ ಕೈಂಕರ್ಯಗಳ ವ್ಯವಸ್ಥೆ ದಾನದತ್ತಿಗಳು ಕುರಿತು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಈಗಾಗಲೆ ಹಿಂದೆ ಚರ್ಚಿಸಿದಂತೆ ಅನೇಕ ಕುಲಬಾಂದವರು ಇವರು ಆಗಿರುವುದರಿಂದ ಮೂಲತಃ ಒಕ್ಕಲುತನದ ಹಿನ್ನೆಲೆಯಲ್ಲೆ ಕೃಷಿ ವರ್ಗಕ್ಕೆ ಸೇರಿದವರು. ಇಂದಿಗೂ ಇವರು ಒಕ್ಕಲುತನವನ್ನು ಮುಂದುವರಿಸಿದ್ದಾರೆ. ಧರ್ಮ, ದೇವರು ಇತ್ಯಾದಿ ವಿಷಯಗಳಲ್ಲಿ ತೆರದ ಮನಸ್ಸಿನವರಾಗಿರುವುದು ಕಂಡುಬರುತ್ತದೆ. ಕಾಲದಿಂದ ಕಾಲಕ್ಕೆ ತಮ್ಮ ಮೇಲೆ ಆದ ಧಾರ್ಮಿಕ ಪ್ರಭಾವಗಳಿಗುಣವಾಗಿ, ನಿಷ್ಠೆಯಿಂದ ಇವರು ಜೀವನ ಸಾಗಿಸಿರುವುದನ್ನು ಕಾಣಬಹುದಾದರೂ ತಮ್ಮ ಪೂರ್ವಜರಿಂದ ತಮ್ಮ ಕುಲಕ್ಕೆ ಬಂದ ಕುಲದೇವತೆಯ ಆರಾಧನೆಯನ್ನು ಬಿಡದೆ ನಡೆಯಿಸಿಕೊಂಡು ಬರುತ್ತಿರುವುದು ವರ್ತಮಾನದಲ್ಲೂ ಕಂಡುಬರುತ್ತಿದೆ. ಪ್ರತಿ ದೇಸಗತಿ ವಾಡೆಯಲ್ಲಿ ವಾಡೆದ ಲಕ್ಷ್ಮವ್ವ ಎಂದೇ ಆರಾಧಿಸುತ್ತಾರೆ. ಹಾಗೆಯೇ ಸಿದ್ದೇಶ್ವರ, ವೆಂಕಟೇಶ್ವರ, ಮಾರುತೇಶ್ವರನನ್ನು ಪೂಜಿಸುತ್ತಿರುವರು. ಆ ಊರಿನ ನದಿ, ಬೆಟ್ಟದ ಮೋಕಿಗೆ ಇರುವ ದೇವತೆಗಳನ್ನು ಗ್ರಾಮ ದೇವತೆಯೆಂದು ಆರಾಧಿಸುತ್ತಿರುವುದು ಗಮನ ಸೆಳೆಯುತ್ತದೆ.

ವಾಡೆದಲ್ಲಿದ್ದ ಮಧ್ಯದ ಚಿಕ್ಕ ಹುಡೆಯೇ ವಾಡೇದ ಲಕ್ಷ್ಮವ್ವ ಆಗಿರುತ್ತದೆ. ಅಲ್ಲಿ ಯಾವುದೆ ಬಿಂಬಗಳು ಇಲ್ಲ. ಗೋಡೆಯ ಕಲ್ಲಿನ ಚಪ್ಪಡಿಗೆ ಪೂಜೆ ನಡೆಯುತ್ತದೆ. ಹಾಗೆ ದೇಸಗತಿ ದ್ವಾರಬಾಗಿಲದ ಉತ್ತರ ಮತ್ತು ಪಶ್ಚಿಮ ದಿಕ್ಕಿನ ಕಡೆಗಿರುವ ಕೋಟೆ ಬಾಗಿಲದ ಹತ್ತಿರ ದುರ್ಗವ್ವ ದ್ಯಾಮವ್ವರೆಂದು ಕರೆಸಿಕೊಳ್ಳುವುದಕ್ಕೆ ಪೂಜೆ ನಡೆಯುತ್ತದೆ. ಇದನ್ನು ಊರಿನ ಜನರೆಲ್ಲರೂ ಪೂಜೆ ಮಾಡುತ್ತಾರೆ. ಇದನ್ನೆಲ್ಲವನ್ನು ಗಮನಿಸಿದಾಗ ಕುಲ, ಮತ ಭೇದಗಳಿಲ್ಲದೆ ಎಲ್ಲರೂ ಈ ದೇವತೆಯನ್ನು ಆರಾಧಿಸುವುದರಿಂದ ಮನುಷ್ಯ ಮನುಷ್ಯರ ಮಧ್ಯೆ ಪ್ರೀತಿ ವಿಶ್ವಾಸಗಳು ಬೆಳೆದು, ಭಾವೈಕ್ಯತೆಯ ನಿಟ್ಟಿನಲ್ಲಿ ಗಣನೀಯ ಪಾತ್ರವಹಿಸುತ್ತಿರುವುದನ್ನು ಕಾಣಬಹುದಾಗಿದೆ.

ದೇಸಾಯರು ಆಳರಸರ ಅಧೀನರಾಗಿದ್ದರೂ ಸಹ ಅವರಲ್ಲಿರುವ ಭಕ್ತಿ, ಸಾಮಾಜಿಕ ಕಾಳಜಿ, ಕಳಕಳಿಯನ್ನು ಎತ್ತಿತೋರಿಸುವಲ್ಲಿ ಅವರ ಕಾರ್ಯಗಳು ಇಂದಿಗೂ ಸಾಕ್ಷಿಯಾಗಿ ಉಳಿದುಕೊಂಡಿವೆ. ಅರಸರ ಸಾಮಂತರಾಗಿ, ಮಾಂಡಲಿಕರಾಗಿದ್ದರೂ ಕೂಡ ತಮ್ಮ ಪ್ರದೇಶದ ಸಾಂಸ್ಕೃತಿಕ ಬೆಳವಣಿಗೆಗೆ ಇವರು ನೀಡುತ್ತಿದ್ದ ದಾನ ದತ್ತಿಗಳಿಗೆ ಅಧಿರಾಜರ ಅಪ್ಪಣೆಯನ್ನು ದೊರಕಿಸಿಕೊಳ್ಳುವ ಅವಶ್ಯಕತೆ ಇರಲಿಲ್ಲವೆಂದು ತೋರುತ್ತದೆ. ಇದನ್ನು ಗಮನಿಸಿದಾಗ ಇಂಥ ಸಾಮಂತ ನಾಯಕರುಗಳಾದ ದೇಸಾಯಿ, ದೇಸಮುಖ, ಗೌಡ ಕುಲಗಳು ಸಾಕಷ್ಟು ಸ್ವಾತಂತ್ರ್ಯ ಹೊಂದಿದ್ದರೆಂದು ಇದರಿಂದ ತಿಳಿಯಬಹುದಾಗಿದೆ.

ಪ್ರಧಾನವಾಗಿ ದೇಸಗತಿಯ ಕೊಡುಗೆಗಳು ಸಮೃದ್ಧ ಸಾಂಸ್ಕೃತಿಕ ಬೆಳವಣಿಗೆ ಕಾರಣವಾದವು. ಮತ್ತು ಸಮಾನತೆಯನ್ನು ಸಾರಿದವು. ಎಲ್ಲರನ್ನು ತನ್ನವರೆಂದು ಜನೋಪಯೋಗಿ ಕಾರ್ಯಗಳಾದ ಕೆರೆ-ಕಟ್ಟೆಗಳ ರಚನೆ, ವಿದ್ವಾಂಸ ಪಂಡಿತರಿಗೆ ನೆಲೆನಿಲ್ಲಲು ಪುರಧರ್ಮಗಳು, ಷಟ್ಕರ್ಮನಿರತರಾದ ವಿಪ್ರರಿಗೆ ಅಗ್ರಹಾರಗಳು, ಕೆಲವು ವೀರರಿಗೆ ರಕ್ತಮಾನ್ಯ ಕೊಡುಗೆ ದತ್ತಿಗಳನ್ನು ಯಥೇಚ್ಛವಾಗಿ ನೀಡಿರುವ ಅಂಶ ಇವರ ಕೊಡುಗೆ

ನೀಡಿದ ದಾಖಲೆಗಳಿಂದ ತಿಳಿದು ಬರುತ್ತದೆ. ಹಾಗೆ ವೀರಶೈವ ಸ್ವಾಮಿಗಳಿಗೆ, ಮಠಗಳಿಗೆ, ಒಡೆಯರಿಗೆ ಗ್ರಾಮ ದಾನಗಳನ್ನು ನೀಡಿ ಅವರಲ್ಲಿ ತಮಗಿದ್ದ ಭಕ್ತಿಯನ್ನು ವ್ಯಕ್ತಪಡಿಸಿರುವ ವಿವರಗಳುಳ್ಳ ಮಾಹಿತಿಯು ಮೋಡಿ ದಾಖಲೆಗಳಲ್ಲಿ ಇದೆ. ಇವೆಲ್ಲವೂ ದೇಸಗತಿ ಮನೆತನಗಳ ಸಾಂಸ್ಕೃತಿಕ ಕಾಳಜಿ ಕುರಿತು ತಿಳಿಸುವಲ್ಲಿ ನೆರವಾಗುತ್ತದೆ.

೩.೪.೧. ದಾನ ದತ್ತಿಗಳು

ದಾನ ಪ್ರಕಾರಗಳಲ್ಲಿ ಮುಖ್ಯವಾಗಿ ಮೂರು ಪ್ರಕಾರಗಳಿರುತ್ತವೆ.

"ಅ. ದೇವಾದೇಯ

ಬ. ಬ್ರಹ್ಮದೇಯ

ಕ. ಮಠ ಪುರಮಾನ್ಯ (ಪುರಧರ್ಮ)

ಈ. ಪ್ರಕಾರಗಳಲ್ಲದೆ ಇತರೆ ದಾನದತ್ತಿ ನೀಡಿದ್ದು ಇದೆ.

ಅ. ಖೈರಾತರಿಗೆ ಮಾಡಿದ ದಾನ

ಬ. ಕಾರಕೂನ ಮಂದಿಗೆ ಮಾಡಿದ ದಾನ

ಕ. ನೌಕರ ಪೇಶಾ ಮಂದಿಗೆ ಮಾಡಿದ ದಾನ

ಡ. ಸೇತಸನದಿಯವರಿಗೆ ನೀಡಿದ ದಾನ

ಢ. ಚಿಲ್ಲರ ಉಲಗಿದಾರರಿಗೆ ಮಾಡಿದ ದಾನ"[೪೬]

(ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಅನುಬಂಧ ೧ರಲ್ಲಿ ಲಗತ್ತಿಸಿದೆ)

ಇವೆಲ್ಲವು ಹೊಸೂರ ದೇಸಾಯರು ಪಡೆದ ಇನಾಮ ಕಮೀಷನ್ ಮೋಡಿ ದಾಖಲೆಗಳಲ್ಲಿ ಕಂಡುಬರುತ್ತವೆ.

೩.೪.೧.೧. ದೇವಾದೇಯ

ದೇವಾದೇಯ>ದೇವದಾಯ>ದೇವದೇಯ ಇವು ಒಂದೆ ಅರ್ಥವನ್ನು ಹೊಂದಿವೆ. ದೇವಾದೇಯ ಇದೊಂದು ಸಂಯುಕ್ತ ಪದವಾಗಿ 'ದೇವ' ಎಂಬುದು ಕನ್ನಡ ಪದ ಇದು 'ದೇವರು' ಎಂಬರ್ಥಕ್ಕೆ ಸಮಾನವಾಗಿದೆ. ಎರಡನೇದಾಗಿ ದೇಯ>ದೇಯದ>ದೆಹ ಇದು ಪರ್ಶಿಯನ್ ಪದವಾಗಿದೆ. 'ದೆಹ' ಎಂದರೆ ಗ್ರಾಮ ಎಂದಾಗುತ್ತದೆ. ಇವೆರಡರ ಸಂಯುಕ್ತ ಜೋಡಣೆಯಿಂದ 'ದೇವದೆಹ' ಎಂಬ ಪದ ನಿಷ್ಪನ್ನವಾಗಿದೆ ದೇವದೇಹ ಎಂಬುದರ ಬದಲಾಗಿ ದೇವದೇಯ ಎಂಬ ಉಚ್ಚಾರ ರೂಢಿಗತವಾಗಿದೆ.

ಬಿಟ್ಟಾರೆ ದೇವರಿಗೆ ಕೊಟ್ಟ, ದಾನಮಾಡಿದ ಗ್ರಾಮ, ಭೂಮಿ ಎಂಬುದಂತೂ ಇದರಿಂದ ಸ್ಪಷ್ಟವಾಗುತ್ತದೆ. ದೇವಾದೇಯುವು ದೇಸಗತಿಯ ವಂಶಿಯರು ವೀರಶೈವ ಗುರುಗಳಿಗೆ ಅಥವಾ ಶೈವ ಪಂಥದ ಮಂದಿರಗಳಿಗೆ ಭಕ್ತಿಯಿಂದ ಕೊಡಮಾಡಿದ ದಾನವಾಗಿರುತ್ತದೆ.

೩.೪.೧.೨. ಬ್ರಹ್ಮದೇಯ

ಇದು ಕೂಡ ದಾನದಲ್ಲಿ ವಿಶೇಷವಾದುದಾಗಿದೆ. ಇಲ್ಲಿ ಬ್ರಹ್ಮದೇಯ ಎಂಬ ಸಂಯುಕ್ತ ಪದಗಳ ಜೊಡಣೆ ಇದೆ. 'ಬ್ರಹ್ಮ' ಎಂಬುದು ಕನ್ನಡ ಪದವೇ ಆಗಿದೆ. ಬ್ರಹ್ಮ ಇದು ಬ್ರಾಹ್ಮ>ಬ್ರಾಹ್ಮಣ ಎಂಬುದಕ್ಕೆ ಪರ್ಯಾಯ ರೂಪವಾಗಿದೆ. ಅಂದಾಗ ಬ್ರಾಹ್ಮಣರಿಗೆ ಬಿಟ್ಟ ಅಥವಾ ಕೊಟ್ಟ ದಾನ ದತ್ತಿಯನ್ನು ನಿರ್ದೇಶಿಸುತ್ತದೆ.

ಈ ದೇಸಗತಿಯವರು ಪುರೋಹಿತ ವರ್ಗದವರಿಗೆ, ಆಚಾರ್ಯರಿಗೆ ಹಾಗೆ ಬ್ರಾಹ್ಮಣ ಸ್ವಾಮಿಗಳಿಗೆ ಕೊಟ್ಟಂಥ ದಾನವಾಗಿರುತ್ತದೆ.

೩.೪.೧.೩. ಮಠ, ಪುರಮಾನ್ಯ

ಇಲ್ಲಿ ಮಠ, ಪುರ ಎಂಬ ಎರಡು ಪದಗಳು ಪ್ರತ್ಯೇಕವಾಗಿ ಕಂಡುಬರುತ್ತವೆ. ಮಠವೆಂಬುದು ಎಲ್ಲ ಜಾತಿ ಮತ ಪಂಥಗಳಿಗೆ ಸಂಬಂಧಿಸಿದ್ದಾಗಿದೆ. ವೀರಶೈವ ಮಠಗಳಲ್ಲದೆ ಜೈನ ಬಸದಿ, ಮಸೀದಿಗಳಿಗೂ ಕೂಡ ಅನ್ವಯಿಸುತ್ತದೆ. ಹೀಗೆ ಮಠದೋಪಾದಿಯಲ್ಲಿಗ್ದ ಗುಳೇದಗುಡ್ಡದ ಹಿರೇಮಸೂತಿಯನ್ನು ಪುರ ಮಾಡಿಕೊಟ್ಟದ್ದು ಇದೆ. ಹರದೊಳ್ಳಿಯಲ್ಲಿದ ಇದನ್ನು ನಂತರ ಊರಿನ ಕೆರೆದಂಡೆಯ ಮೇಲೆ ಅಂದರೆ ಈಗಿನ ಮುನಸಿಪಾಲಟಿ ಎದುರಿಗೆ ಕೋಟೆಕಲ್ಲ ದೇಸಾಯಿಗಳು ವರ್ಗಾಯಿಸಿದ್ದು ಕಂಡುಬರುತ್ತದೆ. ಇವರಿಂದ ಗ್ರಾಮವನ್ನು ಪುರಮಾಡಿ ಕೊಟ್ಟಿದ್ದಲ್ಲದೆ ಪುರವಾಗಿ ರೂಪಕೊಂಡಿದ್ದಕ್ಕೆ ಪುರಧರ್ಮವಾದುದಕ್ಕೆ ನಿದರ್ಶನ ದೊರೆಯುತ್ತದೆ. ಪುರವಾಗಿಕೊಟ್ಟ, ಪುರವಮಾಡಿ, ಪುರಮಠವಾಗಿ ಕೊಟ್ಟ, ಪುರವರ್ಗದಾನ ಎಂಬ ಈ ಉಲ್ಲೇಖವು "೧೮೮೩ರ ಮುಂಬೈ ಗ್ಯಾಝೆಟೀಯರದಲ್ಲಿ"[೪೭] ದಾಖಲಾಗಿದೆ. ಇನ್ನೊಂದು ವಿಶೇಷವೆಂದರೆ ಸಾಮಾನ್ಯವಾಗಿ ಪುರಧರ್ಮ ದತ್ತಿಗಳನ್ನು ಮರ್ಯಾದೆಯ ಕುರುಹಾಗಿ ಗಣ್ಯವ್ಯಕ್ತಿಗಳಿಗೆ, ಗುರುಗಳಿಗೆ ದೇವಾಲಯದ ಸ್ಥಾನಿಕರಿಗೆ ದಾನವಾಗಿ ನೀಡುತ್ತಿದುದ್ದು ಕಂಡುಬರುತ್ತದೆ. ಮುಂದೆ ಇದು ಗ್ರಾಮದಾನಕ್ಕೆ ಪರ್ಯಾಯವಾಗಿ ಬೆಳೆದು ನಿಲ್ಲುತ್ತದೆ. ಇದಕ್ಕೆ ಮುಧೋಳ ತಾಲೂಕಿನ 'ಮಾಲಾ'ಪುರ ಗ್ರಾಮ ಉತ್ತಮ ನಿದರ್ಶನವಾಗಿದೆ. ಈ ಪ್ರದೇಶವನ್ನು ದೇವಸ್ಥಾನದ ಪೂಜಾರಿಗಳಿಗೆ ನೀಡಿದ್ದು ಮುಂದೆ ಇದೇ ಗ್ರಾಮವಾಗಿ ಪರಿವರ್ತನೆಗೊಂಡು ಪುರವಾಗಿರುವುದು ಕಂಡುಬರುತ್ತದೆ.

ದೇಸಾಯಿಗಳು ಗ್ರಾಮವನ್ನಾಗಲಿ ಅಥವಾ ಜಮೀನನ್ನಾಗಲಿ ದಾನ ಮಾಡುವಾಗ ಗಣಾರಾಧನೆಯನ್ನು ಮಾಡಿ ಅದರ ಫಲ ಹಾಗೂ ಮುಂದೆ ದೊರೆಗಳಾದಂಥವರಿಗೆ ಶ್ರೇಯಸ್ಸು ಉಂಟಾಗಲೆಂದು ಹಾಗೂ

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿದ ಫಲ ಉಂಟಾಗಲೆಂದು ಗ್ರಾಮಕ್ಕೆ ಅಥವಾ ಆಯಾ ಪ್ರದೇಶ(ಏರಿಯಾ)ಕ್ಕೆ "ಲಿಂಗ ಮುದ್ರೆ ಹಾಕಿಸಿ ದತ್ತಿ ಬಿಟ್ಟಿದ್ದು ಕಂಡುಬರುತ್ತದೆ."[೪೮]

ಕೆಲವು ಸಂತರಿಗೆ ದಾನ ನೀಡಿದ ಬಗ್ಗೆಯೂ ಸಾಕಷ್ಟು ಉಲ್ಲೇಖಗಳಿವೆ. ಗೌಡ, ಶಾನಭೋಗ, ನಾಯಕ, ಸಾಮಂತ ದೇಸಾಯಿ, ದೇಸಮುಖರಿಂದ ಹೊಲಮನೆಗಳು ಮತ್ತು ವರ್ಷಾಶನಗಳು ಸಿಕ್ಕಿವೆ. ಸಂತ ಶಿಖಾಮಣಿ ಪ್ರಸನ್ ವೆಂಕಟದಾಸರಿಗೆ ಪ್ರತಿ ಗ್ರಾಮ ಪರಗಣದಿಂದ ೧ ಹೊನ್ನದಿಂದ ೧೨ ಹೊನ್ನಗಳವರೆಗೆ ವರ್ಷಾಶನ ಸಿಕ್ಕಿದೆ. ಮೇಲಗಿರಿ (ಮನ್ನಿಕೇರಿ) ಸರದೇಸಾಯಿ ಅವರು ಮುಚಖಡಿ (ಮುಚಖಂಡಿ) ಎಂಬ ಗ್ರಾಮದಲ್ಲಿ ಇನಾಮು ಕೊಟ್ಟಿರುವುದರ ಬಗ್ಗೆಯೂ ದಾಖಲಾಯೊಂದು ಕೆಳಗಿನಂತಿದೆ. ಮೋಡಿ ಲಿಪಿಯಲ್ಲಿರುವ ಇದು "ಮಾಮಲಾ ಬಾಗಡಿಕೋಟ "ಛ ೨೧ ಮಾಹೆ ರಜಬ ಸಲಾಸ ಅಶರೀನ ಮಯಾ ಅಲಫ ಸೂರಸನ್" ಎಂದು ಬರೆದಿದೆ ಹಿಂದು ಪದ್ಧತಿಯ ಪ್ರಕಾರ ಇದರ ಮಿತಿ ಶಕೆ ೧೬೪೫ ಚೈತ್ರ್ಯವದ್ಯ ೭ ಎಂದಾಯಿತು. ಅಂದ ಬಳಿಕ ಇಸವಿ ಸನ್ ೧೭೨೩ ಏಪ್ರಿಲ್ ಎಂದು ಇಟ್ಟುಕೊಳ್ಳಬಹುದು. (ಮೋಡಿ ದಾಖಲೆಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.)

ಹರಿಗುರು ಭಕ್ತಿ ಪರಾಯಣರಾದ ಇವರು ಅಂದರೆ ಇಮ್ಮಡಿ ಹನಮಿ ನಾಯಕ ಈತನು "ತುರ್ಚಿಗೇರಿ ಅಂದರೆ ಈಗಿನ ತುಳಸಿಗೇರಿಯಲ್ಲಿ ಒಂದು ಹೊಲವನ್ನು ದತ್ತಿಯಾಗಿ ಕೊಟ್ಟಿದ್ದಾನೆ."[೪೯] ಇಲ್ಲಿ ಕೂಡ ಲಿಂಗಮುದ್ರೆ ಕಲ್ಲು ಇದೆ. (ಈ ಕುರಿತಾದ ಮೋಡಿ ಲಿಪಿ ಅನುಬಂಧದಲ್ಲಿ ಲಗತ್ತಿಸಲಾಗಿದೆ.) ನಾಸು ಪತ್ರ ಬರೆದುಕೊಡುವ ಉದ್ದೇಶವೇನೆಂದರೆ ತಾನು ದಾಸರ ನಡೆನುಡಿಗೆ ಮೆಚ್ಚಿದ ಕಾರಣ ಅವರ ಆಶೀರ್ವಾದ ನಮಗಲ್ಲದೆ ನಮ್ಮ ಮುಂದಿನ ವಂಶಸ್ಥರಿಗೂ ಸುಖ ದೊರೆಯಲಿ ಎಂಬುದಾಗಿದೆ.

ಈ ಎಲ್ಲ ಕೊಡುಗೆಗಳ ಹಿಂದಿರುವ ಮುಖ್ಯ ಪ್ರಮೇಯ ಅವರ ಭಕ್ತಿಯ ಪರಾಕಾಷ್ಠೆಯನ್ನು ಸಂಸ್ಕೃತಿ ಪ್ರೀತಿಯನ್ನ ಎತ್ತಿ ತೋರಿಸುವುದೇ ಆಗಿದೆ. ಈ ಎಲ್ಲವುಗಳೂ 'ಪೋಟ' ಇನಾಮದಿಂದ ನಡೆಯುತ್ತಿವೆ. ಅಂಥವುಗಳನ್ನೆ ದೇಸಾಯಿಗಳು ಕೊಡಮಾಡಿದ್ದು ತಿಳಿದು ಬರುತ್ತದೆ.

ಬಾಗಲಕೋಟೆ ಜಿಲ್ಲೆಯಲ್ಲಿ ದೇಸಗತಿಯವರಲ್ಲಿ ಹೆಚ್ಚಿನವರು ವೀರಶೈವ ಪರಂಪರೆಗೆ ನಿಷ್ಠೆಯುಳ್ಳವರಾಗಿದ್ದರು ವೀರಶೈವ ಶರಣರಿಗೆ ಗುರುಗಳಿಗೆ ಗ್ರಾಮ, ಪುರ ಹಾಗೂ ಭೂಮಿ ಕಾಣಿಕೆಗಳನ್ನು ದತ್ತಿಯಾಗಿ ನೀಡಿರುವುದಲ್ಲದೆ ಕೆಲವು ಮಠಗಳನ್ನು ಕಟ್ಟಿಸಿಕೊಟ್ಟಿದ್ದು ಕಾಣುತ್ತದೆ. ಮತ್ತು ಮಠಗಳ ನಿರ್ವಹಣೆಗೆ ಅನುಕೂಲವಾಗುವಂತೆ ಹಲವು ದಾನದತ್ತಿಗಳನ್ನು ಏರ್ಪಡಿಸಿರುವುದು ವಿಧಿತವಾಗುತ್ತದೆ.

ಜಮಖಂಡಿಯ ಈಗಿನ ಓಲೆ ಮಠವು ಮೂಲ ದೇಸಾಯರದೆ ಆಗಿತ್ತು. ಅಲ್ಲಿನ ಮೂಲ ಸ್ವಾಮಿಗಳಿಗೆ ಮಠವನ್ನು ದಾನವಾಗಿ ಕೊಟ್ಟು ಸ್ವಾಮಿಗಳನ್ನು ಅಲ್ಲಿಯೇ ನೆಲೆಸುವಂತೆ ಹೇಳಿದರು. ಸುಮಾರು ವರ್ಷಗಳವರೆಗೆ ದೇಸಾಯರ ಮಠವೆಂದೇ ಕರೆಯಲ್ಪಡುತ್ತಿತ್ತು. ನಂತರ ಓಲೆ ಮಠವೆಂದು ಕರೆಯುವುದು

ರೂಢಿಯಲ್ಲಿಬಂತೆಂದು ಮಠದ ಪೂಜ್ಯರಿಂದ ತಿಳಿದುಬರುತ್ತದೆ. ಓಲೆ ಮಠಕ್ಕೆ ನೀಡಿದ ದೇಸಾಯರ ಸನದುಗಳಲ್ಲಿ ದೇಸಾಯರ ಮಠವೆಂತಲೂ ಉಲ್ಲೇಖಿಸಿದ್ದು ಇದೆ."[೫೦] ಕಮತಗಿ, ಕೋಟೆಕಲ್ಲ ಗುಳೇದಗುಡ್ಡದ ಹುಚ್ಚೇಶ್ವರ ಮಠ, ಇಲಕಲ್ಲ ಚಿತ್ತರಗಿ, ಕೆಲೂರದಲ್ಲಿರುವ ಮಹಾಂತ ಸ್ವಾಮಿಗಳ ಮಠ, ಸಾರಂಗದೇವರ ಸುಮಾರು ೨೦ಕ್ಕಿಂತ ಹೆಚ್ಚು ಮಠಗಳು, ಲೋಕಾಪುರದ ಬುಜಂಗಸ್ವಾಮಿ ಮಠ, ಕೊಣ್ಣೂರ ದೇಸಾಯರ ಕಾಡಸಿದ್ದೇಶ್ವರ ಮಠ, ಗದ್ದನಕೇರಿ ಮಳಿಯಪ್ಪಯ್ಯನ ಮಠ, ಚಂದರಗಿ ಬಾಗಮ್ಮನವರ ಮಠ, ಬಬಲಾದಿ ಸದಾಶಿವಪ್ಪನವರ ಮಠ, ತೇರದಾಳ ಪ್ರಭುದೇವರ ಮಠ ಇತ್ಯಾದಿಗಳು ಪುರ, ಮಠ, ಪುರಧರ್ಮ ವರ್ಗದಾನಕ್ಕೆ ಸೇರಿದ ಮಠಗಳೆಂದು ಅಲ್ಲಿರುವ ಕಂಚಿನ ಪತ್ರಗಳಿಂದ ಮನಗಾಣಬಹುದಾಗಿದೆ.

ವಡವಡಗಿಯ ದೇಸಾಯಿ ಕಲ್ಲನಾಗತಿ ಎನ್ನುವ (ಕಮತಗಿ) ಸಮತ್ ಪರಗಣದ ಅಧಿಕಾರಿಯಾಗಿದ್ದನು. ಇವನು ತಮ್ಮ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ದಾನಕಾರ್ಯಗಳನ್ನು ಮಾಡಿದ್ದು ಕಾಣುತ್ತದೆ. ಇದರ ಒಂದು ಉಲ್ಲೇಖ ಕೆಳಗಿನಂತಿದೆ. "ನಿರ್ಜನ ಪ್ರದೇಶವಾದ ಹೊನ್ನಾಯಕನ ಕಟ್ಟೆಯಲ್ಲಿ ರಾಯಪ್ಪನ ಮೊಮ್ಮಗನಾದ ಗೋಪಾಲಪ್ಪನು ಮಾಡಿಸಿದ ಪುನರ್ವಸತಿ, ದೇವಾಲಯ ನಿರ್ಮಾಣ, ಕೆರೆಯ ಜೀರ್ಣೋದ್ಧಾರ ಮೊದಲಾದ ಧರ್ಮಕಾರ್ಯಗಳನ್ನು ಮಾಡಿದ್ದಾಗಿದೆ."[೫೧] ಅಲ್ಲಿ ಎಲ್ಲಿಯೂ ತನ್ನ ಹೆಸರನ್ನು ಉಲ್ಲೇಖಿಸದೆ ಇದ್ದುದರಿಂದ ಕಂಪನಿ ಸರಕಾರ ಮೆಚ್ಚಿ ಶಾಸನ ಬರೆಸಿದ್ದು ಅವರು ಮಾಡಿದ ಕಾರ್ಯಕ್ಕೆ ಆಧಾರವಾಗಿದೆ.

ಗದ್ದನಕೇರಿ ಗ್ರಾಮವು ಚುನ್ನಿಕೇರಿಯ ದೇಸಾಯಿಯ ಆಡಳಿತ ವ್ಯಾಪ್ತಿಗೆ ಬರುತ್ತಿತ್ತು. ಈತ ಮಳಿಯಪ್ಪ ಸ್ವಾಮಿಗಳಿಗೆ ದಾನ ಮಾಡಿದ ಪ್ರಸಂಗವೊಂದು ಹೀಗಿದೆ "ರಾಘವ ಭೀಮಪ್ಪದೇಸಾಯಿ ಕಟ್ಟಿಸಿದ ಕೆರೆಗೆ ಮಾಳಿಂಗಪ್ಪನ ಮಗ ಮೋನಪಯ್ಯನಿಗೆ ಭೂದಾನ"[೫೨] ಮಠಕ್ಕೆ ನಿರಂತರ ಪೂಜಾ ಸೇವೆಗಳು ಮುಂದುವರಿಯಲಿ ಎನ್ನುವ ಕಾರಣದಿಂದ ದಾನ ನೀಡಿದ್ದು ಅವರ ವಂಶಸ್ಥರಿಂದ ತಿಳಿದುಬರುತ್ತದೆ.

ಕ್ರಿ.ಶ.೧೫ನೇ ಶತಮಾನದ ಪ್ರಾರಂಭದಲ್ಲಿ ವೀರಶೈವ ಮಠಗಳು ಹುಟ್ಟಿಕೊಂಡವು. ವೀರಶೈವ ಧರ್ಮವನ್ನು ಬೀರುವ ವೈಚಾರಿಕವಾಗಿ ಸೈದ್ಧಾಂತಿಕವಾಗಿ ಕಟ್ಟಿನಿಲ್ಲಿಸಿದ ಪ್ರಮುಖರಲ್ಲಿ ಮರುಳಶಂಕರ ದೇವರು, ಕಾಡಸಿದ್ದೇಶ್ವರರು, ತೇರದಾಳ ಪ್ರಭುದೇವರು, ಸಾರಂಗದೇವರು, ಇಲಕಲ್ಲ ಮಹಾಂತ ಸ್ವಾಮಿಗಳು ಅಲ್ಲದೆ ಕೆಲವು ಸಂತರು ಎದ್ದು ಕಾಣುತ್ತಾರೆ. ಇವರೆಲ್ಲರೂ ದೇಶ ಸಂಚಾರಿಯಾಗಿ ಕಾಶಿಯಿಂದ, ಅಲೆದು ಬಾಗಲಕೋಟಿ ಜಿಲ್ಲೆಯಲ್ಲಿ ಶಿವಾಧೀನರಾಗಿದ್ದು ಅವರ ಕರ್ತೃಗದ್ದುಗೆಗಳಿಂದ ಮನಗಾಣಬಹುದಾಗಿದೆ. ಅವರ ಪುರಾಣಗಳಿಂದ ಚರಿತ್ರೆಗಳಲ್ಲಿ ಉಲ್ಲೇಖಿತವಾಗಿರುವ ಅಂಶವನ್ನು ಹಿರಿಯ ವಿದ್ವಾಂಸರೂ ಗುರ್ತಿಸಿದ್ದಾರೆ.

ಒಟ್ಟಾರೆಯಾಗಿ ದೇಸಾಯಿಗಳು ಮಠಗಳನ್ನು ಕಟ್ಟಿಸಿ ಅವುಗಳ ನಿರ್ವಹಣೆಯ ಬಗ್ಗೆ ಕಾಳಜಿ ವಹಿಸಿ ದಾನದತ್ತಿ ಬಿಟ್ಟು ಕೊಟ್ಟರು. ಇವುಗಳು ಇಂದೂ ಕೂಡ ಮಠದ ಆಸ್ತಿಯಾಗಿದ್ದು ಬಹುದೊಡ್ಡ ಉತ್ಪನ್ನವನ್ನು ಹೊಂದಿದ್ದು ಆಯಾ ಮಠಗಳ, ಮಠಪತಿಗಳಿಂದ ತಿಳಿದು ಬರುತ್ತದೆ.

೩.೪.೧.೪. ಅಗ್ರಹಾರ, ಯಜ್ಞಯಾಗಾದಿಗಳು

ಗುರುಹಿರಿಯರಲ್ಲಿ ಭಕ್ತಿವುಳ್ಳವರಾಗಿದ್ದ ಮತ್ತು ಜನಾನುರಾಗಿಗಳಾಗಿದ್ದ ದೇಸಗತಿಯ ದೊರೆಗಳು ಗ್ರಾಮಗಳನ್ನು ಭೂಮಿ ಸೀಮೆಗಳನ್ನು ಬ್ರಾಹ್ಮಣರಿಗೆ, ಜೈನರಿಗೆ ದತ್ತಿಯಾಗಿ ಬಿಟ್ಟಿರುವುದು ಕಂಡುಬರುತ್ತದೆ. ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ ಅಥವಾ ಗ್ರಾಮ ಎಂಬ ಅರ್ಥವಿರುವ ಅಗ್ರಹಾರ ಚತುರ್ವರ್ಣಗಳಲ್ಲಿ ಶ್ರೇಷ್ಠರೆಂದು ಭಾವಿಸಿದ್ದರಿಂದ ಅವರಿಗೆ ಸಂದಿದೆ. ಬ್ರಾಹ್ಮಣರು ಅಗ್ರಹಾರಗಳಲ್ಲಿ ಷಟ್ಕರ್ಮನಿರತವಾಗಿ ನೆಮ್ಮದಿಯಿಂದ ಇದ್ದರೆ ರಾಜ್ಯಕ್ಕೆ ಕಲ್ಯಾಣವಾಗುವುದೆಂದು ನಮ್ಮ ನಾಡಿನ ದೇಸಾಯರು ನಂಬಿದ್ದರು. ಅಂತೆಯೇ ಚಿಕ್ಕಪುಟ್ಟ ನಾಯಕರು, ಗೌಡರು, ದೇಸಾಯಿ ದೇಸಮುಖರು ಪ್ರಮುಖವಾಗಿ ಅಗ್ರಹಾರಗಳ ಸ್ಥಾಪನೆಗೆ ಗಮನಕೊಟ್ಟಿರುವುದು ಕಂಡುಬರುತ್ತದೆ.

ಬಾಗಲಕೋಟೆಯು ಜೈನ ಪೇಟೆ, ವೆಂಕಟಪೇಟೆ, ಹಳೇಪೇಟೆ ಎಂದು ಹಲವು ಪ್ರಮುಖ ಪೇಟೆಗಳನ್ನು ಹೊಂದಿದೆ. ಆಯಾ ಪೇಟೆಯಲ್ಲಿ ಆಯಾ ಮತಸ್ಥರೇ ಹೆಚ್ಚು ಕಂಡುಬರುತ್ತಾರೆ. ಜೈನರಿಗೆ, ಬ್ರಾಹ್ಮಣರಿಗೆ ಬ್ರಹ್ಮದೇಯವಾಗಿ ಭೂದಾನವನ್ನು ನೀಡಿರುತ್ತಾರೆ.

ಬಾದಾಮಿ ತಾಲೂಕಿನ ಜಾಲಿಹಾಳದಲ್ಲಿ "ಬ್ರಾಹ್ಮಣರಿಗಾಗಿಯೇ ಪ್ರತ್ಯೇಕವಾದ ಒಂದು ಜಾಗವಿತ್ತು. ಸದ್ಯ ಅದು ಊರಿನ ಮಧ್ಯೆ ಬಂದಿದೆ. ಪ್ರತಿಯೊಂದು ದೇಸಗತಿಯಲ್ಲಿ ಕಾರಕೂನರಾಗಿ, ಪುರೋಹಿತರಾಗಿ, ದೇಶಪಾಂಡೆಗಳಾಗಿ, ಆಚಾರ್ಯರಾಗಿ ಹತ್ತಾರು ಕುಟುಂಬಗಳು ಇರುತ್ತಿದ್ದವು. ಅಲ್ಲದೆ ಅವರ ಬಂಧು ಬಳಗವೂ ಕೂಡ ಇರುತ್ತಿದ್ದರು. ಅಂಥವರಲ್ಲಿ ಯಜ್ಞಯಾಗಾದಿಗಳನ್ನು ನೆರವೇರಿಸುತ್ತಿದ್ದರಿಂದ ಒಂದು ಸಮೂಹವೇ ಅಲ್ಲಿದ್ದುದು ಕಂಡುಬರುತ್ತದೆ.

ನರಹರಿ ಆಚಾರ್ಯ ಬಿನ್ ರಾಮಾಚಾರ್ಯ ಜಾಲಿಹಾಳ ಮತ್ತು ಶೇಷಭಟ್ಟ ಗ್ರಾಮ ಪುರೋಹಿತ ಇವರಿಗೂ ಜಾಲಿಹಾಳ ದೇಸಾಯಿ ೧೭೫೦ರಲ್ಲಿ ಇನಾಂ ಕೊಟ್ಟಿದ್ದು ಇದೆ. ತದನಂತರದಲ್ಲಿ ವೆಂಕಟರಾವ್ ಗೋವಿಂದ ಕಾರಕೂನರಿಗೆ, ಜನಾರ್ಧನ ಪೋತನೀಸ್ . ಹಾಗೆ ಭೀಮಾಜಿ ಶೇಷೊ ಜೋಯಿಸರಿಗೆ ಕೆರೆಯ ಭಾಗದ ಪೂರ್ವದಲ್ಲಿ ಗದ್ದೆಯನ್ನು ಕೊಟ್ಟಿದ್ದಾರೆ. ದೇಸಗತಿಯ ಈಶಾನ್ಯ ದಿಕ್ಕು 'ಲಕ್ಷ್ಮೀ ವೆಂಕಟೇಶನ' ವಸತಿ ಸ್ಥಾನವಾಗಿದ್ದರಿಂದ ಅದರ ಪೂಜ್ಯಕರಿಗೆ ನೀಡಿದರೆ ಸದಾ ಲಕ್ಷ್ಮಿ ನೆಲೆಸುತ್ತಾಳೆಂದು ಭಾವಿಸಿ "ದತ್ತಿ ಬಿಟ್ಟಿದ್ದು"[೫೩] ವಿಶೇಷವಾಗಿದೆ. ಇಂಥ ಪುರೋಹಿತರ ವಿದ್ವಾಂಸರ ಹಾಗೂ ಸದ್ಬ್ರಾಹ್ಮಣರ ಮಹತ್ವ ಅನುಚೂನವಾಗಿ ಗಮನಾರ್ಹವಾದುದಾಗಿದ್ದು ಎಂದು ಇದರಿಂದ ಸ್ಪಷ್ಟವಾಗುತ್ತದೆ.

ದೇಸಗತಿ ಮನೆತನಗಳ ವಿಶೇಷ ಆಚರಣೆ ಯಜ್ಞಯಾಗಾದಿಗಳು ಮುಂತಾದ ವೈದಿಕ ಆಚರಣೆಗಳಿಗೆ ಸದಾ ಸಿದ್ಧರಾಗಿದ್ದು ದೇಸಗತಿಗೆ ಯಶ ಬಗೆಯಬೇಕೆಂದು ಸನದುಗಳಲ್ಲಿ ಉಲ್ಲೇಖಿಸಿರುವುದರಿಂದ ಅದರ ಆಜ್ಞೆಯಂತೆ ಅವರ ವಂಶೀಯರು ಪ್ರಸ್ತುತದಲ್ಲಿ ದಾನದತ್ತಿಗಳನ್ನು ಬಳಸಿಕೊಂಡಿದ್ದು ಇದೆ. ವರ್ಷಕ್ಕೊಮ್ಮೆ ಕಾಶಿಗೆ ಹೋಗಿ ದೇಸಗತಿಗೆ ಯಶ ಸಿಗಲೆಂದು ಯಜ್ಞ ಮಾಡಿ ಬರುತ್ತಿದ್ದರೆಂದು ಜಾಲಿಹಾಳ ದೇಶಗತಿ ವೈಧಿಕ ಆಚಾರ್ಯರಿಂದ ತಿಳಿದುಬರತ್ತದೆ. ಹೀಗೆ ಬಿಟ್ಟ ದಾನದತ್ತಿಗಳ ಸುಕೃತ ಫಲಗಳನ್ನು ನೀಡುತ್ತಿದ್ದುದರಿಂದ ಪುಣ್ಯ ಪ್ರದವಾದ ಕೊಡಿಗೆಯಾಗಿತ್ತೆಂದು ಇದರಿಂದ ಎಲ್ಲರ ಗಮನ ಸೆಳೆಯುತ್ತದೆ. ದೇಸಾಯಿಗಳು ಪ್ರಭುಗಳಾಗಿ, ಪೋಷಕರಾಗಿ ಸಾಂಸ್ಕೃತಿಕ ಸಂವಾಹಕರಾಗಿ ಇವೆಲ್ಲಕ್ಕೂ ಮಿಗಿಲಾಗಿ ಜನಾನುರಾಗಿಗಳಾಗಿ ಬಾಳಿದ್ದು ಇದರಿಂದ ಸ್ಪಷ್ಟವಾಗಿ ವಿಧಿತವಾಗುತ್ತದೆ.

೩.೫. ಸಾಹಿತ್ಯ, ಸಂಗೀತ, ಕಲೆ

ಮಧ್ಯಯುಗಿನ ಕಾಲದಲ್ಲಿ ಅರಸುಗಳು ರಾಜ್ಯ-ರಾಜ್ಯಗಳೊಡನೆ ಸೆಣಸಾಟ ನಡೆಸಿದ್ದರು. ಅರಸೊತ್ತಿಗೆಯಲ್ಲಿ ಮಾತ್ರ ಸಾಹಿತ್ಯ, ಸಂಗೀತ, ಕಲೆ ಬೆಳೆದು ಬಂದಿತ್ತು. ಅಲ್ಲಿ ಅರಬ್ಬಿ, ಉರ್ದು ಮತ್ತು ಪರ್ಷಿಯನ್ ಭಾಷೆಗಳು ಅಭಿವೃದ್ಧಿಗೊಂಡವು. ಇಂಥ ಸಮಯದಲ್ಲಿ ಹುಟ್ಟಿಕೊಂಡ ದೇಸಗತಿಗಳು ಅಷ್ಟೊಂದು ಪ್ರಬುದ್ಧಾವಸ್ಥೆಗೆ ಬಂದಿರಲಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ಕುಂಠಿತವಾಗಿತ್ತು. ವಿವಿಧ ಮತ, ಭಾಷೆ, ಪಂಥಗಳ ಜನರಿದ್ದರೂ ಮಾತನಾಡುವುದು ಮಾತ್ರ ಕನ್ನಡವಾಗಿದ್ದರೆ ಆಡಳಿತಾತ್ಮಕ ಹಾಗೂ ವ್ಯವಹಾರಿಕ ಬರಹ ಮಾತ್ರ 'ಮರಾಠಿ ಮೋಡಿ' ಲಿಪಿಯಲ್ಲಿತ್ತು. ದೇಸಾಯಿಗಳು ಹಿಂದೂ ಧರ್ಮದ ಶರಣರ ತತ್ವಗಳಿಗೆ ಮಾರುಹೋಗಿದ್ದರು. ನೀತಿ ಬೋಧೆಯನ್ನು ಕೇಳುತ್ತಿದ್ದರು. 'ಚರಿತ್ರೆಗಿಂತ ಚಾರಿತ್ರ್ಯ ದೊಡ್ಡದು' ಎಂದು ತಿಳಿದಿದ್ದರು. ತೇರದಾಳ ಪ್ರಭುದೇವರ ಚರಿತ್ರೆ, ರಾಘವೇಂದ್ರ ಶ್ರೀಗಳ ಗ್ರಂಥಗಳ ದಾನ ಶರಣ ಸಾಹಿತ್ಯದ ಮಾರ್ಗ ಬೆಳೆಸುವಲ್ಲಿ ದೇಸಗತಿಗಳ ಪಾತ್ರ ಬಹುದೊಡ್ಡದು. ನಂತರದಲ್ಲಿ ಬಂದ ದೇಸಾಯಿಗಳೂ ಸಹ ಇದನ್ನು ಮುಂದುವರಿಸಿದ್ದಾರೆ. ಪುರಾಣ, ಪ್ರವಚನ, ನಾಟಕ, ಭಕ್ತಿ ಕುಸುಮಾಂಜಲಿ ಶಿವ ಮಹಾತ್ಮೆ, ಶಿವಸ್ತುತಿ ಮುಂತಾದ ಕಾರ್ಯಗಳನ್ನು ಶ್ರಾವಣ ಮತ್ತು ಭಾದ್ರಪದ ಮಾಸದಲ್ಲಿ ನಡೆಸುತ್ತಿದ್ದರು. ದೇಸಾಯಿಗಳು ಅಲ್ಪ ಜ್ಞಾನ ಪಡೆದಿದ್ದರೂ ಸಾಮಾಜಿಕ ಜ್ಞಾನ ಹೊಂದಿದ್ದರು. ಅರಮನೆಯಲ್ಲೆ ಬ್ರಾಹ್ಮಣ ಪುರೋಹಿತರಿಂದ ಶಿಕ್ಷಣ ಪಡೆಯುತ್ತಿದ್ದರು. ಕೆಲವು ಸೂಕ್ಷ್ಮ ವಿಚಾರಗಳನ್ನು ತಿಳಿಯಲು ಅರಮನೆಯ ಕಾರುಬಾರಿ, ಪುರೋಹಿತ ಕಾರಕೂನರ ಜೊತೆಗೆ ಹಂಚಿಕೊಳ್ಳುತ್ತಿದ್ದರು. ಇದರಿಂದ ಅವರು ಸಾಹಿತ್ಯ ಆಸಕ್ತಿ ಉಳ್ಳವರಾಗಿದ್ದುದು ಕಂಡುಬರುತ್ತದೆ.

ದೇಸಗತಿ ಮನೆತನಗಳಲ್ಲಿ ಇರುವ ಕೆಲವು ಸಾಹಿತ್ಯದ ಗ್ರಂಥಗಳು

೧. ಶಿವ ಶರಣರ ಜೀವನ ಹಸ್ತಪ್ರತಿಗಳು

೨. ಪಂಚೀಕರಣ ಸೂತ್ರ

೩. ಶಿವಸ್ತುತಿ

೪. ಯಾತಾಳ ಮಂತ್ರಸಿದ್ಧಿ(ಮರಾಠಿ)

೫. ದೇವಿಪುರಾಣ(ಹಸ್ತಪ್ರತಿ)

೬. ಮನೆ ವಕೀಲ

೭. ಕೆಲವು ಕಾಯ್ದೆ ಕಾನೂನ ಹಸ್ತಪ್ರತಿಗಳ ಗ್ರಂಥಗಳು.

೮. ನ್ಯಾಯಾಧೀಕರಣ ಸೂತ್ರ (ಮರಾಠಿ)

೯. ಭಜನಾವಳಿಗಳು

೧೦. ಪಂಚಾಂಗಗಳು

೧೧. ಇತರೆ ಗ್ರಂಥಗಳು

೧೨. ಇತ್ತೀಚಿನ ನೂರಾರು ಗ್ರಂಥಗಳು

ಇದರಲ್ಲಿ ಮರಾಠಿ ಗ್ರಂಥಗಳೆ ಹೆಚ್ಚಾಗಿವೆ.

ಇವೆಲ್ಲ ಗ್ರಂಥಗಳನ್ನು ಗಮನಿಸಿದಾಗ ದೇಸಾಯಿಗಳು ಓದು ಬಲ್ಲವರಾಗದಿದ್ದರೂ ಕೇಳಿ ತಿಳಿದುಕೊಳ್ಳುತ್ತಿದ್ದರೆಂಬುದಕ್ಕೆ ಇವೆಲ್ಲ ಗ್ರಂಥಗಳು ಆಧಾರವಾಗಿವೆ. ಶ್ರಾವಣ ಮಾಸದಾದ್ಯಂಥ ದೇಸಾಯಿ. ದೇಸಾಯಿಣಿಯರು ಪ್ರತ್ಯೇಕ ಆಸನದಲ್ಲಿ ಕುಳಿತುಕೊಂಡು ದೇವಿಪುರಾಣವನ್ನು ನವರಾತ್ರಿಯಲ್ಲಿ ಕೇಳುತ್ತಿದ್ದರು. ಹರಿಕಥೆ, ಪಾರಾಯಣ, ಶಿವ ಭಜನೆಯನ್ನು ಮಾಡಿಸುತ್ತಿದ್ದರು. ಹೀಗೆ ಸಾಹಿತ್ಯ ಆರಾಧಕರಾಗಿದ್ದುದು ವಿಶೇಷವಾಗಿ ಕಂಡುಬರುತ್ತದೆ.

ದೇಸಾಯಿಣಿಯರೂ ಕೂಡ ದೇಸಾಯರ ನೆರಳಾಗಿದ್ದುಕೊಂಡು ಸಾಹಿತ್ಯ ಆರಾಧಕರಾಗಿದ್ದರೆಂದು ತಿಳಿದುಬರುತ್ತದೆ. ತೇರದಾಳದ ಸತ್ಯವ್ವಳು ತನ್ನ ಪರಗಣದಲ್ಲಿ ಜೈನ ಪರಂಪರೆಯ ಪ್ರಭಾವವನ್ನು ಗುರುತಿಸಲು ಗಣತಿ ಮಾಡಿಸಿ ಅದರ ಬೆಳವಣಿಗೆಗೆ ಶ್ರಮಿಸಿದ್ದು ಹಸ್ತಪ್ರತಿ ಬರೆಸಿದ್ದು ಅವರ ವಂಶಸ್ಥರಿಂದ ತಿಳಿದುಬರುತ್ತದೆ. ಹಾಗೆ ಪುಂಗನೂರ ಸಂಸ್ಥಾನದ ಅರಸುಮನೆತನದ ರಕ್ಕಸಗಿ ದೇಸಾಯರ ಸೊಸೆ ಮತ್ತು ಜವಳಗೇರಿ ಗೌಡರ ಸೊಸೆ ಸಾಹಿತ್ಯವನ್ನು, ಸಂಸ್ಕೃತವನ್ನು ಬಲ್ಲವರಾಗಿದ್ದರೆಂದು ತಮ್ಮ ಬಹುಪಾಲು ವೇಳೆಯನ್ನು ಸಾಹಿತ್ಯ ಓದುವುದರಲ್ಲಿ ಕಳೆಯುತ್ತಿದ್ದರೆನ್ನುವ ವಿಚಾರಗಳು ತಿಳಿದುಬರುತ್ತವೆ.

ಒಡಪುಗಳು, ಬೀಸುವ ಪದಗಳು, ಕುಟ್ಟುವ ಪದಗಳು, ತ್ರಿಪದಿಗಳನ್ನು ಹಾಡುವುದು, ಜಾನಪದ ಹಾಡುಗಳನ್ನು ಕಲಿತುಕೊಳ್ಳುವುದು ಇತ್ಯಾದಿಗಳಲ್ಲಿ ಬಹು ಆಸಕ್ತರಾಗಿದ್ದರು. ಗಂಡನ(ದೊರೆ) ಹೆಸರು

ಹೇಳುವಾಗ ಒಡಪುಕಟ್ಟಿ ಹೇಳುವುದು ವಿಶೇಷವಾಗಿ ಕಂಡುಬರುತ್ತದೆ ಇಂಥವುಗಳಲ್ಲಿ ತಮ್ಮ ಜಾಣ್ಮೆಯನ್ನು ವ್ಯಕ್ತಪಡಿಸುತ್ತಿದ್ದರು ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ.

ಉದಾ : ವೀರತನದ ವರ್ಣನೆಗೆ

ಅ. "ಸಾವಿರ ಕುದುರೆ ಸರದಾರ

ಲಕ್ಷ ವರಹ ದೊರೆ ಎಣಿಸ್ಯಾರ

ಶ್ರೀಮಂತರ(ಪೇಶ್ವೆ)ನ್ನು ಮಣಿಸ್ಯಾರ

ದೊರೆತನ ಗಳಿಸ್ಯಾರ"[೫೪]

ಬ. ಯಂಡಿಗೇರಿ ಮುಂದ ಹತ್ಯಾನ

ಬಿಳಿಕುದರಿ ಗಟ್ಟಿ ಮಾಡ್ಯಾನ

ದೇಸಗತಿ ಪುಟ್ಟಿ ಮಾಡ್ಯಾನ

ಬೆಳಗಾವಿಗೆ ......[೫೫]

ಕ. ಮೆಲ್ಲಕ್ಕ ನಡಿರಣ್ಣಾ - - - -

- - - - ಕಾಲನ ಕಲ್ಲ ಅದರ‍್ಯಾವ

ಪಲ್ಲಕ್ಯಾಗಿನ ಮುತ್ತ ಉದರ‍್ಯಾವ

- - - - - - - - -

ಪಾದಪ್ಪನವರ ಕತ್ತಿ ಕುಣಿದಾವ ಕದನಕ್ಕ"[೫೬]

ಹೀಗೆ ವೀರತನವನ್ನು ಪ್ರೇಮಿಸುವ ಮತ್ತು ಮೆಚ್ಚಿಕೊಳ್ಳುವ ಪ್ರಭಾವ ಈ ಬಗೆಯ ಒಡಪುಗಳಲ್ಲಿ ಕಂಡುಬರುವವು. ದೇಸಾಯಿ ಸ್ತ್ರೀಯರು ತಮ್ಮ ಪತಿ ದೇಸಾಯಿಯವರನ್ನು ಬಣ್ಣಿಸುವ ಒಡಪುಗಳು ಸಾವಿರಾರು ಸಿಗುತ್ತವೆ. ಇಂಥ ಹಲವಾರು ಒಡಪುಗಳು ಅರ್ಥಗರ್ಭಿತವಾಗಿದ್ದು ಜಾನಪದದ ಸೊಗಡನ್ನು ಸಾರುತ್ತವೆ. ಇವು ಅವರವರ ಮನಸ್ಸಿನ ಭಾವನೆಗಳನ್ನು ಹಾಗೂ ದೇಸಾಯಿಗಳ ವೀರತನವನ್ನು ಹೊಗಳುವುದು ಸಹಜವಾಗಿವೆ.

"ಕವಿ ಮುರ ಹರಿನಾಯಕ" ಎನ್ನುವವನು[೫೭] ಬದಾಮಿ ತಾಲೂಕಿನ ಜಾಲಿಹಾಳ ದೇಸಗತಿಯವನಾಗಿದ್ದಾನೆ. ಈ ಮನೆತನದಲ್ಲಿ ಇಬ್ಬರು ಕವಿಗಳಾಗಿ ಹೋಗಿದ್ದಾರೆ. ಕವಿ ಮುರಹರಿನಾಯಕ ಎನ್ನುವವನು ವೈದ್ಯಕೀಯ ವೃತ್ತಿಯಲ್ಲಿ ಪರಿಣತಿ ಹೊಂದಿ ಪೇಶ್ವೆಗಳಂತವರಿಗೆ ನಾಟಿ ಔಷಧಿ ನೀಡಿ ಅವರಿಂದ ಬಿರುದಾವಳಿಗಳಿಸಿದ್ದಾನೆ. ಹಾಗೆ ವೈದ್ಯಕೀಯ ಶಾಸ್ತ್ರವನ್ನು ಬರೆದಿಟ್ಟಿದ್ದಾನೆ ಎಂಬುದು ಇವರ ವಂಶಸ್ಥರಿಂದ ತಿಳಿದುಬರುತ್ತದೆ. ಆದರೆ ಆ ಗ್ರಂಥ ಲಭ್ಯವಿರುವುದಿಲ್ಲ. ವೈದ್ಯ ಮುರಹರಿನಾಯಕರಿಗೆ ಪೇಶ್ವೆಗಳಿಂದ ಉಲ್ಲೇಖಿಸಿದ ಪತ್ರವು ದೊರೆತಿದೆ. ಅದು ಈ ಕೆಳಗಿನಂತಿದೆ.

ನೀವು ನಾಟಿ ವಿದ್ಯೆಯಲ್ಲಿ ಪರಿಣತರಿರುವಿರಿ ನೀವಲ್ಲದೆ ನಿಮ್ಮ ಮನೆಯವರು ಯಾರೆ ಬಂದರೂ ಗೌರವಿಸುತ್ತೇವೆ. ಸಣ್ಣವರು ಹಿರಿಯರು ಎಂಬ ಬೇಧಭಾವವಿಲ್ಲ. ತಾವುಗಳು ದೇಹಕ್ಕೆ ಒಗ್ಗುವ ಔಷಧ ತಯಾರಿಸಿ ಇಡಿರಿ ನಾವೇ ಖುದ್ದಾಗಿ ಬಂದು ಒಯ್ಯುತ್ತೇವೆ. ದೊರೆತನ ಸಂಪಾದಿಸಿ ಕೀರ್ತಿ ತರಬೇಕು ಎಂದು ತಾತಾಚಾರ್ಯ ಎಂಬುವರು ಬರೆದು ಕೊಟ್ಟ ಪತ್ರವಾಗಿದೆ. ಇದು ಅವರ ವಿದ್ವತ್ ಹಾಗೂ ವೈದ್ಯಕೀಯ ಕುರಿತಾಗಿ ಹೆಚ್ಚಿನ ಮಾಹಿತಿ ಒದಗಿಸುವಲ್ಲಿ ಸಹಕಾರಿಯಾಗಿದೆ.

ಇವನ ನಂತರ ಮತ್ತೊಬ್ಬ ಮುರಹರಿನಾಯಕನೆಂಬುವವನು ನಾಟಕಕಾರನಾಗಿ, ಹೊಸೂರ(ಜಾಲಿಹಾಳ) ದೇಸಗತಿ ಸಮತ್ ಪರಗಣದ ದೊರೆಯಾಗಿ ಕಂಡುಬರುತ್ತಾನೆ. ಅವನೇ ನಾಟಕಕಾರ ಮುರಹರಿನಾಯಕ.

೩.೫.೧. ನಾಟಕಕಾರ ಮುರಹರಿನಾಯಕ

ಜಾಲಿಹಾಳ ದೇಸಗತಿ ಸಮತ್ ಪರಗಣದ ವಂಶೀಯರಲ್ಲೆ ಈತನು ಬಹು ಪ್ರಸಿದ್ಧನು. ತನ್ನ ೧೫ನೇ ವಯಸ್ಸಿನಲ್ಲೆ ದೇಸಗತಿಯ ವ್ಯವಹಾರವನ್ನು ಅರಿತಿದ್ದನು. ಸಕಲ ಗುಣ ಸಂಪನ್ನನಾಗಿ ದೊರೆತನಕ್ಕೆ ಹೇಳಿ ಮಾಡಿಸಿದ ದೇಸಾಯಿ ಎನಿಸಿದ್ದನು. ಸಮಾಜದಲ್ಲಿ ಆದ ಏರುಪೇರುಗಳಿಗೆ ಕಾರಣ ಹುಡುಕುವ ಚಿಕಿತ್ಸಕ ಬುದ್ಧಿ ಇವನಲ್ಲಿತ್ತು. ಜನರ ಆಶೋತ್ತರಗಳೇನು? ಎಂಬುದನ್ನು ತಿಳಿದುಕೊಂಡಿದ್ದನು ಎಂದು ಇವನ ಹೆಂಡತಿ "ಲಕ್ಷ್ಮವ್ವಳಿಂದ ತಿಳಿದುಬರುತ್ತದೆ."[೫೮]

ಕವಿ ಮುರಹರಿನಾಯಕನು ಸುಮಾರು ನಾಟಕಗಳನ್ನು ಬರೆದಿದ್ದಾನೆ. ಅಂಥವುಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಿದೆ.

೧. ಬಸವಿಯ ಬಾಳು ೨. ಸವತಿಯ ಶಾಪ ೩. ವಿಧವೆಯ ವಿಧಿ ಕೈವಾಡ ೪. ಮಯೂರ ಧ್ವಜ(ದೊಡ್ಡಾಟ) ೫. ಅಪರಾಧಿ ಯಾರು?

ಇದಲ್ಲದೆ ಇನ್ನೂ ಆರು ಸಾಮಾಜಿಕ ನಾಟಕಗಳು ಹಸ್ತಪ್ರತಿಯಲ್ಲಿವೆ. ಇಂಥ ನಾಟಕಗಳು ಹಸ್ತಪ್ರತಿಯಲ್ಲಿರುವಾಗಲೆ ಬದಾಮಿಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ಪ್ರಯೋಗಿಸಿದ್ದಾರೆ."[೫೯] ಜನ ಮನ್ನಣೆಯನ್ನು ಗಳಿಸಿದ ಈ ನಾಟಕಗಳು ಮುರಹರಿನಾಯಕರನ್ನು ಇನ್ನಷ್ಟು ಸಾಹಿತ್ಯದೆತ್ತರಕ್ಕೆ ಒಯ್ಯುವಲ್ಲಿ ಸಹಕಾರಿಯಾದವು.

ಹೊಸೂರ ಗ್ರಾಮದಲ್ಲಿ ಯಾವುದೋ ಕಾರಣದಿಂದ ದೇಸಾಯಿ ಬೆಂಬಲಿಗರಿಂದ ಯಾರದೋ ಕೊಲೆಯಾಯಿತು, ಸುಮಾರು ದಿನಗಳವರೆಗೆ ಅವರು ಅಡವಿಯಲ್ಲೆ ಇದ್ದು ಬೇನಾಮಿಯಾದರು. ಕೊನೆಗೆ ಮುರಹರಿನಾಯಕರು ನೇರವಾಗಿ ಕೋರ್ಟಿಗೆ ಹಾಜರಾಗಿ ಕೊಲೆ ಅಪವಾದದ ಮೇಲೆ ಶಿಕ್ಷೆಯನ್ನು ಅನುಭವಿಸಿದರು. ಬೆಳಗಾವಿ ಜೇಲಿನಲ್ಲಿದ್ದುಕೊಂಡು ತಮ್ಮ ಸಾಹಿತ್ಯ ಚಟುವಟಿಕೆಯನ್ನು ಮುಂದುವರೆಸಿ

'ಅಪರಾಧಿ ಯಾರು?' ಎಂಬ ನಾಟಕವನ್ನು ರಚಿಸಿ ಕೈದಿಗಳಿಂದಲೆ ನಾಟಕವಾಡಿಸಿ ಒಬ್ಬ ಆದರ್ಶವ್ಯಕ್ತಿ ಎಂದೆನಿಸಿದರು. ಇದರಿಂದ ಕೋರ್ಟು ಅವರನ್ನು ನಿರಪರಾಧಿ ಎಂದು ಪರಿಗಣಿಸಿ ತೀರ್ಪು ನೀಡಿತು. ಜೇಲಿನಿಂದ ಬಿಡುಗಡೆಯಾಗಿ ಬಂದ ಮೇಲೆ ಬಹಳ ದಿನಗಳ ಕಾಲ ಬದುಕಲಿಲ್ಲ ೧೯೮೫ರಲ್ಲಿ ನಿಧನರಾದರು.

ಮುರಹರಿನಾಯಕನು ಬರೆದ ಹತ್ತು ನಾಟಕಗಳಲ್ಲಿ ಮೂರು ನಾಟಕಗಳು ಹಸ್ತಪ್ರತಿಯಲ್ಲಿವೆ. ಒಂದು ದೊಡ್ಡಾಟವಿದ್ದು (ಮಯೂರಧ್ವಜ) ಅದು ಸಂಸ್ಕೃತ, ಮರಾಠಿ ಹಾಗೂ ಆಂಗ್ಲ ಭಾಷೆಯನ್ನು ಸೇರಿಸಿ ಬರೆದುದಾಗಿದೆ. ಬಸವೆಯ ಬಾಳು, ಸವತಿಯ ಶಾಪ ಎರಡೂ ಕೃತಿಗಳು ನೀರುಬಿದ್ದು ನಾಶವಾಗಿ ಮಧ್ಯದ ಕೆಲವು ಪುಟಗಳು ಮಾತ್ರ ಉಳಿದುಕೊಂಡಿವೆ. ಕಬ್ಬಿಣದ ಟ್ರಂಕ್‌ದಲ್ಲಿ ಜಂಗು ಹತ್ತಿ ತುಣುಕು ತುಣುಕಾಗಿ ಹೋಗಿವೆ. ಅಂಥವುಗಳಲ್ಲಿಯೆ ಉಳಿದ ಪುಟಗಳೂ ಸಹ ಒಂದಕ್ಕೊಂದು ಅಂಟಿಕೊಂಡಿವೆ.

'ಮಯೂರ ಧ್ವಜ' ಎಂಬದು ದೊಡ್ಡಾಟವಿದೆ. ಈ ನಾಟಕದ ಕಥಾವಸ್ತು ಪೌರಾಣಿಕ ಕಥಾವಸ್ತುವನ್ನೊಳಗೊಂಡದ್ದಾಗಿದೆ. ಲಕ್ಷ್ಮೀಶನ ಜೈಮಿನಿ ಭಾರತ ಪ್ರಭಾವ ಬೀರಿದಂತೆ ಭಾಸವಾಗುತ್ತದೆ. ಮಯೂರ ಧ್ವಜ ಪಾತ್ರವನ್ನು ಪ್ರಧಾನವಾಗಿರಿಸಿ ಬರೆದ ನಾಟಕವಿದು.

ಮಹಾಭಾರತದ ೧೮ ದಿನಗಳ ಕಾಲ ಯುದ್ಧ ನಡೆದ ನಂತರ ಧರ್ಮರಾಜನು ಯಾಗ ಮಾಡುತ್ತಾನೆ. ಯಾಗದ ಕುದುರೆಯೊಂದಿಗೆ ಅರ್ಜುನ ಹೋಗುತ್ತಾನೆ. ಯಾಗದ ಕುದುರೆಯು ಮಯೂರ ಧ್ವಜ, ತಾಮ್ರಧ್ವಜರ ರಾಜ್ಯಕ್ಕೆ ಬಂದಾಗ ಅದನ್ನು ಕಟ್ಟಿ ಹಾಕುತ್ತಾರೆ. ಯುದ್ಧಕ್ಕೆ ಸಿದ್ಧರಾಗುತ್ತಾರೆ. ಯುದ್ಧದಲ್ಲಿ ಸೋಲುತ್ತಾರೆ. ಆದರೂ ತಮ್ಮ ವೀರ ರೋಚಿತ ಹೋರಾಟದಿಂದಾಗಿ ರಾಜನ ಮೆಚ್ಚುಗೆಗಳಿಸುತ್ತಾರೆ. ನಾಟಕದಲ್ಲಿ ಪಾತ್ರಗಳೆ ಮಾತನಾಡುವಂತೆ ಬರೆದುದು ಅವರ ಕೌಶಲ್ಯ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ. ಪ್ರತಿಯೊಂದು ಪಾತ್ರಗಳ ಮಾತುಗಳನ್ನು ಗಮನಿಸಬೇಕು. ಇವರ ನಾಟಕದಲ್ಲಿನ ಪಾತ್ರ ಪಾತ್ರಗಳಲ್ಲಿನ ಸಂಭಾಷಣೆ ಎದ್ದು ತೋರುತ್ತದೆ. ಇಂದಿನ ಶಿಕ್ಷಣ ಎಷ್ಟು ಮುಂದುವರಿದರೂ ಮಹಾಭಾರತದ ಕಥೆ ಅರಿಯದವರು ಬಹುಪಾಲು ಇದ್ದಾರೆ. ಅವರ ಓದು, ನಮ್ಮ ಸಂಸ್ಕೃತಿಯನ್ನು ಬಿಂಬಿಸುವಲ್ಲಿ ಸಾಕಷ್ಟು ಸಾರ್ಥಕವಾಗಿದೆ. ಅವರ ಮುಂಧೋರಣೆಯೂ ಅವರ ಸಾಹಿತ್ಯದಲ್ಲಿ ಮೂಡಿ ಬಂದಿದೆ. ನಾಟಕದ ಒಂದೆರಡು ಪಾತ್ರಗಳ ಸಂಭಾಷಣೆಯನ್ನು ಗಮನಿಸುವುದು ಅವಶ್ಯವೆನಿಸುತ್ತದೆ. ಆದರೆ ಭಾಗಶಃ ನಾಟಕವನ್ನು ಪರಿಚಯಿಸುವುದು ಕಷ್ಟಸಾಧ್ಯ. ಆದರೂ ಒಂದೆರೆಡು ಉಲ್ಲೇಖಗಳಿಂದ ಅವರ ನಾಟಕ ಬರೆಯುವ ಶೈಲಿ ಎಷ್ಟು ಗಾಢವಾಗಿತ್ತು ಎಂಬುದನ್ನು ಅವಶ್ಯವಾಗಿ ಉದಾಹರಿಸಬಹುದಾಗಿದೆ.

ಮಯೂರ ಧ್ವಜ : ಪ್ರವೇಶಿಕೆಯಲ್ಲಿ ಮಯೂರಧ್ವಜನು ತನ್ನನ್ನು ತಾನೇ ಸಭಾಕ್ಕೆ ಪರಿಚಯಿಸುವಲ್ಲಿ ಹೀಗೆ ಉದ್ಧರಿಸುತ್ತಾನೆ.

"ಎಲೈ ಚಟುಲತರ ತೇಜೋತ್ಕಾಟದಿಂದೆಸೆಯುವ ಮಣಿಗಣ ಖಚಿತವಾದ ಕಿರೀಟಮಂ ಮಸ್ತಕದೊಳ್ ಧರಿಸಿ ಕನಕತನಕ ಕುಂಡಲಾಸ್ಕೃತನಾಗಿ ಕಂಬು ಕಂಠಕ್ಕೆ ವಜ್ರ ಮಣಿಗಳ ಬಂಧದಿಂದೆವಕೆಯಾರ ಹಾರಗಳಿಂದ ಶೋಭಿತನಾಗಿ, ಕಡಗ ಕಂಕಣದಿಂದ ಅಲಂಕೃತವಾದ ಪುಂಡ ಬಲಕರಾಗ್ರದಲ್ಲಿ ಶರಚಾಪವನ್ನು ಪಿಡಿದು ಕಡಶಡಗರ ಕಾಂತೆಯ ಮುಖ ಜಡಜದೊಳ್ ಹೊಡಕರಿಸುವ ಎಡಬಲದ ಕುಡಿಮೀಸೆಗಳ ಕಡುಚೆಲ್ವಿನಿಂದೊಪ್ಪುವ, ಸಭಾ ಭದ್ರಾಸನದಲ್ಲಿ ಜಡಜಾಂಬಕನಂತೆ ಮಂಡಿಸಿರುವ ರಾಜೇಂದ್ರನಂದಾರೆಂದು ಬೆಸಗೊಳ್ಳುವ ಕುಶಲಮತಿ ನೀದಾರೋ ತಮ್ಮಾ"[೬೦]........ ಹೀಗೆ ಮಯೂರ ಧ್ವಜನ ಪಾತ್ರದ ಸಂಭಾಷಣೆ ಕನ್ನಡದಲ್ಲಿ ವ್ಯಕ್ತವಾದುದ್ದಾದರೆ ಇದೇ ನಾಟಕದಲ್ಲಿ ಬರುವ ನಕುಲ ಧ್ವಜನ ಪಾತ್ರವು ಮರಾಠಿ ಪ್ರಭಾವವನ್ನು ಬೀರಿದೆ.

ನಕುಲ ಧ್ವಜ : "ಮಹಾರಾಜ್ ಅಪಣ್ ದುಷ್ಟನಿಗ್ರಾ ಸೃಷ್ಟಿ ಪರಿಪಾಲನಾಕರಣಾ ರಾಯಮ ಆಣೆ! ಧರ್ಮ ಆಶಾ ತ್ರಿಜಗರ್ವಿಖ್ಯಾತಿ| ನಾಮ ಸರ್ವಶಾಸ್ತ್ರ ಅಸೂನ್ ಅನುಭವಿ | ಸರ್ವಮಾನಿ ಪ್ರಾಣಿ ಮಾತ್ರಾನ್ ಅಸರಾನಿ | ನರಸೂರ ನಾಗಲೋಕಾಂಚಾ ಸರ್ವಾನಿ ಅಪಾಕಾಲ್ಯಾಪರ್ನಾಸ್ತ್ರಾ ಪೂರ್ವ ಶಿವಧ್ಯಾನಕ್ಕೆ ಚಿತ್ತಾಹೋ | ಉನಸ್ಸಸ್ಥತ ಆಹೇ ಆಸಂಪತೀತ ಪ್ರಪನ್ಯಾಸ | ತ್ಯಾಜ್ಯಾ ತ್ಯಾಜ್ಯಾ ಅಪರಾಧನ್ ಯೋಗ್ಯ ಶ್ಯಾಸನ್ ಕರು. ತುಮ್ಮಾಚೆ | ಮರ್ಜಿ ಪ್ರಕಾರೇತರ ಆಹೇ ರಾಜನ್"[೬೧]

ಈ ಮಾತನ್ನು ಗಮನಿಸಿದಾಗ ಉತ್ತರ ಕರ್ನಾಟಕದಲ್ಲಿ ಮರಾಠರ ಆಡಳಿತ ಪ್ರಭಾವದಲ್ಲಿ ಮುರಹರಿನಾಯಕರು ಮರಾಠಿ ಪ್ರಭಾವದಿಂದ ಆ ಭಾಷೆಯನ್ನು ಬಲ್ಲವರಾಗಿದ್ದರು. ಹಾಗೆ ಇಂಗ್ಲೀಷರು ಬಿಟ್ಟು ಹೋದ ಆಡಳಿತ ಭಾಷೆಯಾದ ಆಂಗ್ಲ(ಇಂಗ್ಲೀಷ್)ವನ್ನು ಬಲ್ಲವರಾಗಿದ್ದರು. ಮಯೂರ ಧ್ವಜ ನಾಟಕದ ಮಂತ್ರಿ ಪಾತ್ರವನ್ನು ಆಂಗ್ಲ ಭಾಷೆ ಬಳಸಿ ರೂಪಿಸಲಾಗಿದೆ.

ಮಂತ್ರಿ : "ಓಮಾಯ್ ಡೀಯರ ಫಾದರಕಿಂಗ್ ಆಲ್ ಈವರ ಪ್ರೊಜನಿ ಹ್ಯಾಪಿ ಈಯರಲಿ ಇನ್ ಕಮ್ ಫ್ರಾಮ್ ಅದರ್ ಕಿಂಗಸ ಈಜಿಲಿ ರಿಸೀವ್ಡ ಇಸ್ ದಿ ಪ್ರಾವುಡ್ ಕಿಂಗ್ಸ್ ಆರ್ ನಾಟ ಕನ್ಟೆಂಟ ಟು ಗೀವ್ಡ ಇನ್ ಕಮ್ ಆಯ್ ವುಯಿಲ್ ಟೇಕಮನಿ ಫ್ರಾಮ್ ದೆಮ್. ಫಾಯಿಂಗ್ ಆಯಂಡ್ ವಿನ್ನಿಂಗ್ ಇನ್ ದೀವಾರ ಎನ್ಮೀಜ ಆರ್ ಆಯಜಯಾಬುವೆಲ್ ಆಯಜ ಫ್ರೆಂಡ್ಸ ಮೆಟ್ ಎಪ್ಪ್ರೀಡೆ ದೇರಾರ ಪೋರ ಕಾಸ್ಟ, ಬ್ರಾಹ್ಮನ, ಕ್ಷತ್ರೀಯು, ವೈಶ್ಯ ಶೂದ್ರ. ದೇಆರ್ ವರ್ಕಿಂಗ್ ಇನ್ ದೇ ಆರ್ ಕಾಸ್ಟ್ ದೇ ಆರ್ ಬಿಲಿವ್ವಿಂಗ್ ವಿಷ್ಣು ಫಾರದೀ ಟಾಯಿಂಬೀಯಿಂಗ ಆಯ್ ವುಯಿಲ್ ಎಕ್ಸಪ್ರೆಸ್ ಯು ದೀ ನಿವುಜ್ ಯಪ್ಪ್ರೀಡೆ ಹುಯಿಜ್ ವುಯಿಲ್ ಹ್ಯಾಪನ್ ಇನ್ ಅವರ ಕಿಂಗಡಮ್ ...."[೬೨]

ಕವಿ ಮುರಹರಿನಾಯಕರು ಬಹು ಭಾಷಾ ಪಂಡಿತರಾಗಿರಬೇಕೆನಿಸುತ್ತದೆ. ಒಂದೇ ನಾಟಕದಲ್ಲಿ ಭಿನ್ನವಾಗಿ ಭಾಷೆಯನ್ನು ಬಳಸಿದಾಗ ನಾಟಕವು ರಸಾವೇಶವನ್ನು ತುಂಬಿ ಗಂಭೀರತೆಯನ್ನು ತೋರ್ಪಡಿಸುತ್ತದೆ.

ಇವರ ಬರಹ ಹಾಗೂ ಸಂಭಾಷಣೆಯನ್ನು ಗಮನಿಸಿದಾಗ ಅವರವರ ನಡುವೆ ಬಂದ ಹೇಳಿಕೆಗಳು ಉದಾಹರಣೆಗಳು ತಕ್ಷಣವೆ ವಿಲಿಯಂ ಶೇಕ್ಸಫಿಯರನನ್ನು ಅವನ ಭಾಷೆಯನ್ನು ನೆನಪಿಗೆ ತರುತ್ತವೆ. ಹಾಗೆ ನಾಟಕದಲ್ಲಿ ಸ್ವಯಂ ರಚಿತ ಮಹಾಕಾವ್ಯಗಳಲ್ಲಿ ಬರೆದಂತೆ ಕೆಲವು ಪದ್ಯಗಳು ತೋರಿ ಬರುತ್ತವೆ.

ಉದಾ : ಮಯೂರ ಧ್ವಜನು ಚಿಂತಾಕ್ರಾಂತನಾದಾಗ ಶ್ಲೋಕ ರೂಪದಲ್ಲಿ.....

"ಏಳು ಯಜ್ಞವ ಮಾಡಿದೇನು ಹರಿಕರುಣವನ್ನು

ತಾಳಿ ಬಂದು | ತೋಲಲಿಲ್ಲ ಪಾದವ ......

"ಲೋಲ ಬಸವಣೆಯು ರಾಮಲಿಂಗನು ನಿನ್ನ |

ಪಾಲಿಸನು ಹರಿಪಾದ ಸ್ಮರಿಸೋ |"

"ಧರೆಯೊಳು ನಂದಗಿರಿ ಪುರವನು ಪಾಲಿಪ |

ಗುರು ರಾಮೇಶನಂಘ್ರಿಯನೆ ಪೊರೆಯುವ ನಿನ್ನನು |"[೬೩]

ಅಲ್ಲದೆ ಹಲವೆಡೆ ಸಂಸ್ಕೃತ ಶ್ಲೋಕಗಳನ್ನು ಬಳಸಿಕೊಂಡಿದ್ದಾರೆ. ಬಹು ಭಾಷಾ ವಿಶಾರದರಾದ ಮುಳಗುರಿನಾಯಕರು ಅತಿ ಔಚಿತ್ಯ ಪೂರ್ಣವಾಗಿ ಸಂಸ್ಕೃತ ಶ್ಲೋಕಗಳನ್ನು ಬಳಸಿ ನಾಟಕವನ್ನು ಬರೆದಿದ್ದಾರೆ.

ಉದಾ : ಆಶಾ ಬದ್ಧತೆ ಲೋಕೆ ಕರ್ಮಣಾಂ ಬಹುಚಿಂತೆ

ಆಯಾಃ ಕ್ಷೀಣೆ ನಜಾಯತೆ ತಸ್ಮಾತ್ರ ಜಾಗ್ರ ಜಾಗ್ರತೇ"[೬೪]

ಹೀಗೆ ದೊಡ್ಡಾಟದುದ್ದಕ್ಕೂ ಅನೇಕ ರೀತಿಯ ಉಪಯುಕ್ತವಾದ ನೀತಿ ಪ್ರಧಾನ ಸಾಲುಗಳನ್ನು ಬಳಸಿಕೊಂಡಿದ್ದಾರೆ. ತಮ್ಮ ಮನೆ ದೇವರ ಸ್ಮರಣೆಯನ್ನು ಮಾಡಿದ್ದಾರೆ. ಪಟ್ಟದಕಲ್ಲ ಹಾಗೂ ಐಹೊಳೆಯ ರಾಮಲಿಂಗನನ್ನು ಸ್ಮರಿಸಿದ್ದಾರೆ. ಇವರು ಕೇವಲ ನಾಟಕಕಾರರಷ್ಟೆ ಅಲ್ಲ, ಕಲಾವಿದರೂ ಕೂಡಾ ಆಗಿದ್ದಾರೆ. ನಾಟಕಗಳ ಹಸ್ತಪ್ರತಿ ಮೇಲೆ ಸುಂದರ ಮಹಿಳೆಯ ಚಿತ್ರವನ್ನು ಬಿಡಿಸಿ ಬಣ್ಣದಿಂದ ಅಲಂಕರಿಸಿದ್ದಾರೆ.

ಇವರು ಬರೆದ ಇತರ ನಾಟಕಗಳು ಪೂರ್ಣ ಲಭ್ಯವಿಲ್ಲದಿದ್ದರೂ ನಾಟಕಕಾರರಾಗಿ ಅಂದಿನ ತಮ್ಮ ಸುತ್ತ ಮುತ್ತಲಿನ ಪರಿಸರದ ಸ್ತ್ರೀ ಸ್ಥಾನಮಾನ ಕುರಿತೇ ಹೆಚ್ಚು ನಾಟಕ ರಚಿಸಿದ್ದು ತಿಳಿದುಬರುತ್ತದೆ. ವಿಧವೆಯ ವಿಧಿ ಕೈವಾಡ : ಅಸಹಾಯಕ, ಅನಾಥ ವಿಧವಾ ಸ್ತ್ರೀಯ ಜೀವನ ಚಿತ್ರಣ ಈ ನಾಟಕದ ಕಥಾವಸ್ತು. ಒಂದು ಮಗುವಿರುವ ವಿಧವಾ ಸ್ತ್ರೀ ತನ್ನ ಬದುಕನ್ನು ಭಿಕ್ಷಾಟನೆಯಿಂದಲೆ ನಡೆಸುತ್ತಿದ್ದಳು.

ಅವಳ ಚಲುವಿಕೆಗೆ ಮನಸೋತ ಗೌಡರ ಬಲಾತ್ಕಾರಕ್ಕೆ ಬಲಿಯಾಗಿ ದುಃಖಾಂತ ಜೀವನವನ್ನು ನಡೆಸುವ ಮಹಿಳೆಯ ಕಥೆ ಈ ನಾಟಕವಾಗಿದೆ. ಅಂಗಲಾಚಿ ಬೇಡಿಕೊಂಡರೂ ಭಿಕ್ಷಾಟನೆಯ ಜೀವನದಿಂದಾಗಿ ಅವಳ ಕೂಗೂ ಕಣ್ಮರೆಯಾಗುತ್ತದೆ. ಒಂದು ಗ್ರಾಮದ ಚಾರಿತ್ರಿಕ ಹಿನ್ನೆಲೆಯನ್ನು ಚರಿತ್ರಾ ಹೀನರನ್ನು ಗುರುತಿಸಿ ಬರೆಯಲಾದ ಈ ನಾಟಕ ಪೂರ್ಣವಾಗಿ ಲಭ್ಯವಾಗಿಲ್ಲ. ಅಬಲೆಯರ ಜೀವನಕ್ಕೆ ಸಾಂತ್ವನ ನೀಡುವ ಇಂಥ ನಾಟಕಗಳು ಜನರ ಚಾರಿತ್ರ್ಯವನ್ನು ತಿದ್ದುವ ಉತ್ತಮ ಚಾರಿತ್ರ್ಯ ಹೊಂದುವ ಸಾಮಾಜಿಕ ಕಳಕಳಿಯನ್ನು ಹೊಂದಿದ್ದು ಇದರಲ್ಲಿ ಒಂದಂಶವಾಗಿ ಕಂಡುಬರುತ್ತದೆ.

ಸವತಿಯ ಶಾಪ : ಅರಮನೆಯಲ್ಲಿ ನಡೆಯುತ್ತಿರುವ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಗಂಡು, ಹೆಣ್ಣಿನ ಮೇಲೆ ನಡೆಸುತ್ತ ಬಂದ ಶೋಷಣೆ ನಿರಂತರವಾಗಿ ನಡೆದು ಬಂದ ಈ ಜಡಗಟ್ಟಿದ ವ್ಯವಸ್ಥೆಗಳನ್ನು ಒಡೆದು ಹಾಕಲು ಸವತಿಯೊಬ್ಬಳ ಕನಿಕರದ ಧ್ವನಿಯೇ ಈ ಕಥೆಯ ಕಥಾವಸ್ತು.

ಜಾಲಿಹಾಳ ದೇಸಗತಿಯು ಉಪಪತ್ನಿಯರಿಂದಲೆ ಸರ್ವನಾಶವಾದದ್ದು ಪೇಶ್ವೆಗಳ ಹಾಗೂ ೧೮೪೬ರ ಕೆಲವು ದಾಖಲೆಗಳಿಂದ ತಿಳಿದುಬರುತ್ತದೆ. ಜಾಲಿಹಾಳ ದೇಸಗತಿಯ ಕೆಲವು ಘಟನೆಯನ್ನು ಆದರಿಸಿ ನಾಟಕಗಳನ್ನು ಬರೆದಿರಬೇಕೆನಿಸುತ್ತದೆ. ಈ ಕಥೆಯಲ್ಲಿ ಮಾನವೀಯ ಅನುಕಂಪವಿದೆ. ಕಾಲ್ಪನಿಕ-ವಾಸ್ತವಿಕ ವಿಶಿಷ್ಟ ತಂತ್ರನೈಪುಣ್ಯತೆಯಿಂದ ಕೂಡಿದೆ. ಅಲ್ಲಿ ಗೌಡರ, ದೇಸಾಯರ ದರ್ಪದ ದೃಷ್ಟಿ-ಧೋರಣೆಗಳನ್ನು ಅಳವಡಿಸಿಕೊಂಡು ಆಧುನಿಕ ಕಾಲದ ವ್ಯವಸ್ಥೆಗೆ ಒದಗಿಬಂದ ಎಲ್ಲ ಬಗೆಯ ಒಲವುಗಳಿಗೆ ರಚಿಸಿದ್ದರಿಂದ ಪಾತ್ರಗಳ ಅಂತರಂಗ, ಬಹಿರಂಗ ಬದುಕಿನ ಸಂಘರ್ಷ ಸಮಸ್ಯೆಗಳಿಗೆ ಸವತಿಯ ಜೀವನ ಸುಖಾಂತವಾಗಿರದೆ ದುಃಖಾಂತವಾಗಿರುವುದಾಗಿದ್ದುದು ಅಳಿದುಳಿದ ಕೆಲವು ಪುಟಗಳಲ್ಲಿ ಕಂಡುಬರುತ್ತದೆ. ಹಾಗೆ ಮನೆ ಹೆಂಡರಿಗೆ ದೇಹ ಸುಖ ಕೊಡದೆ ಚಾಜದ ನೆಪದಲ್ಲಿ ದೇಸಾಯರು ಮತ್ತೊಬ್ಬರ ಮೇಲೆ ನಡೆದ ಅಕ್ರಮ ನಡವಳಿಕೆ ಕೂಡ ಇದರಲ್ಲಿ ಇರುವುದಾಗಿದೆ.

ಒಟ್ಟಾರೆ ಕವಿ ಮುರಹರಿನಾಯಕರು ಮುಚ್ಚುಮರೆಯಿಲ್ಲದೆ ಪ್ರಗತಿಗಾಮಿ ಹಾಗೂ ಬಂಡಾಯದ ಧೋರಣೆಗಳನ್ನು ಅಳವಡಿಸಿಕೊಂಡು, ಜಮೀನದಾರಿ ವ್ಯವಸ್ಥೆಯಿಂದ ದೂರನಿಂತು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಿನ್ನೆಲೆಯ ಬದುಕಿನಲ್ಲಿ ನಡೆದ ದುಷ್ಪರಿಣಾಮಗಳನ್ನು ಬಿಚ್ಚಿಡುವ ಉದ್ದೇಶ ಇವರ ಸಾಹಿತ್ಯದ ಮುಖ್ಯ ಆಶಯವಾಗಿರುವುದು ಇದರಿಂದ ತಿಳಿದುಬರುತ್ತದೆ.

ಜಾನಪದ ಕಲೆಗಳಾದ ಬಯಲಾಟ, ಪಾರಿಜಾತ, ಕುಸ್ತಿ ಮುಂತಾದ ಆಟಗಳಿಗೆ ಎಲ್ಲ ವಿಧದಿಂದಲೂ ದೇಸಾಯರು ಪ್ರೋತ್ಸಾಹ ನೀಡುತ್ತಿದ್ದರು. ಬೀಳಗಿ, ತೇರದಾಳ, ಗುಳೇದಗುಡ್ಡ ಈ ಭಾಗಗಳಲ್ಲಿ ಜಾನಪದ ಕಲೆಗಳು ಬಹಳಷ್ಟು ಬೆಳೆದು ಬಂದಿವೆ. ಅದರಲ್ಲೂ ಪ್ರತಿಯೊಂದು ಗ್ರಾಮೀಣ ಪ್ರದೇಶದಲ್ಲಿ ಕುಸ್ತಿಪಂದ್ಯ ನಡೆಯುತ್ತಿದ್ದವು. ಇದಕ್ಕೆ ನಿದರ್ಶನವೆಂಬಂತೆ ಇಂದಿಗೂ ಕೂಡ ಅಲ್ಲಿ ಕಟ್ಟಿದ ಗರಡಿಮನೆಗಳು ಇವೆ.

ಶ್ರಾವಣ ಮಾಸದ ಸೋಮವಾರ ದಿನ ಸುತ್ತೆಲ್ಲ ಹಳ್ಳಿಯ ಪೈಲವಾನರು ಬಂದು ಕುಸ್ತಿ ಒಗೆದು ದೇಸಾಯರಿಂದ ಇನಾಮು ಪಡೆಯುತ್ತಿದ್ದುದು ಕಂಡುಬರುತ್ತಿತ್ತು. ಸದ್ಯ ಅದು ನಿಂತುಹೋಗಿದೆ.

ದೇಸಾಯಿಗಳು ಕೊಟ್ಟ ಕೆಲವು ಸಂಗೀತ ವಾದ್ಯಗಳು ನೂರಾರು ವರ್ಷಗಳಿಂದ ಮೇಳದ ಮನೆಯಲ್ಲಿ ಕಂಡುಬರುತ್ತವೆ. ಇದರಿಂದ ಕಲಾವಿದರಿಗೆ ಕಲೆಗೆ ಪ್ರೋತ್ಸಾಹ ನೀಡುತ್ತಿದ್ದರೆಂದು ತಿಳಿದುಬರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಊರ ಜಾತ್ರೆಯ ಸಂದರ್ಭದಲ್ಲಿ ಇಡೀ ನಾಟಕದ ಖರ್ಚನ್ನೆಲ್ಲಾ ದೇಸಾಯರೆ ವಹಿಸಿಕೊಳ್ಳುತ್ತಿದ್ದರು. ಗಲಗಲಿ ದೇಸಾಯರು ಸಂಗೀತ ವಿಧೂಪಿಯಾಗಿದ್ದರು. ವೀಣೆ, ತಬಲಾ ನುಡಿಸುತ್ತಿದ್ದರೆಂದು ಸ್ಥಳೀಯರಿಂದ ತಿಳಿದುಬರುತ್ತದೆ. ಅವರು ತಮ್ಮ ವಾಡೆದಲ್ಲಿ ಕಛೇರಿ ನಡೆಸಿದ್ದು ವಿಶೇಷವಾಗಿ ತಿಳಿದುಬರುತ್ತದೆ.

ಕಲಿಯುಗದ ಕೃಷ್ಣನೆಂದೆ ಹೆಸರು ಗಳಿಸಿದ ಮುಧೋಳದ ದಿವಂಗತ ಬರಗಿ ರಾಚಯ್ಯಸ್ವಾಮಿ ಈ ಭಾಗದ ದೇಸಾಯಿ, ಹಾಗೂ ಅರಸು ಸಂಸ್ಥಾನಿಕರಿಂದ ಚಿಕ್ಕ ವಯಸ್ಸಿನಲ್ಲೇ ಪ್ರೋತ್ಸಾಹಕ್ಕೆ ಪಾತ್ರನಾಗಿದ್ದನು. ಹಾಗೆ ಗೊಂದಲಿಗರ ಕಥೆಯನ್ನು ತಮ್ಮೂರ ಜನತೆಗೆ ಕೇಳುವ ಅವಕಾಶ ಕಲ್ಪಿಸಿಕೊಟ್ಟು ಆ ಕಲಾಕಾರರಿಗೆ ವಸ್ತು ವಡವೆಗಳನ್ನು ನೀಡುವುದರ ಮೂಲಕ ಕಲಾಪೋಷಕರಾಗಿದ್ದರೆಂದು ತಿಳಿದುಬರುತ್ತದೆ. ಅವರಿಗೆ ಕೊಟ್ಟ "ಹವಳದ ಸರ, ಶಾಲು, ಬೆಳ್ಳಿ ತೋಡೆ, ಮುಂಗೈಗೆ ಬೆಳ್ಳಿ ಕಡಗ ಈಗಲೂ ಕಂಡುಬರುತ್ತವೆ."

ದೇಸಗತಿಯಲ್ಲಿ ವಿಶೇಷವಾಗಿ ರಿಯಾಯಿತ>ರಿವಾಯಿತ ಹಾಗೂ ಲಾವಣಿ ಹಾಡುಗಾರರು ಕಂಡುಬರುತ್ತಾರೆ. ದೇಸಾಯರ ಶೂರತನ ಸುಖ-ದುಃಖಗಳನ್ನು ಕಟ್ಟಿಕೊಡುವ ಮುಸ್ಲಿಂ ಬಾಂಧವರು ರಿಸಲದಾರ, ರಸೂಲದಾರ, ರಿವಾಯಿತದಾರರೆಂದು ಕರೆಸಿಕೊಂಡಿದ್ದಾರೆ. ಇವರಿಗೂ ಕೂಡ ದೇಸಾಯಿಯರಿಂದ ತುಂಬಾ ಸಹಾಯ ದೊರೆತಿದೆ. ವಿಶೇಷ ಸಂದರ್ಭದಲ್ಲಿ ವಾಡೆದ ಒಳಗಡೆ ಲಾವಣಿ, ರಿವಾಯಿತ್ ಹಾಡಿ ಕೇಳಿಸಲಾಗುತ್ತಿತ್ತೆಂದು "ರಿಸಲದಾರ ಬಾಬು ಹೇಳುತ್ತಾರೆ."[೬೫]

ದೇಸಾಯರು ಸ್ವತಃ ಬೇಟೆಗೆ ಹೋಗುತ್ತಿದ್ದರು. ಇವರು ಬೇಟೆ ಆಡುವ ಪ್ರಾಣಿಗಳೆಂದರೆ ಚಗರೆ ಜಿಂಕೆ ಹಾಗು ಕಾಡುಕೋಣ. ವಿಶೇಷವಾಗಿ ಚಿರತೆಯಾಗಿತ್ತು. ಇದಕ್ಕಾಗಿಯೇ ಕುದುರೆ ಸವಾರಿಗೆ ಬೇಟೆಗಾರರಿಗೆ ದೇಸಗತಿಯಲ್ಲಿ ಅವಕಾಶ ನೀಡಿ ತರಬೇತಿ ಕೊಡಿಸುತ್ತಿದ್ದರು. ಇವರು ಬೇಟೆ ಆಡುತ್ತಿದ್ದರೆಂಬ ನಿದರ್ಶನಕ್ಕೆ "ಆ ಪ್ರಾಣಿ ಚರ್ಮಗಳ ಆಸನ ಹಾಗೂ ಗೋಡೆ ಗಂಬಗಳಿಗೆ ನೇತು ಹಾಕಿದ ಅವುಗಳ ತಲೆ ಬುರಡೆಗಳೆ ಸಾಕ್ಷಿಯಾಗಿವೆ. ಹಾಗೆ ಅವುಗಳ ಚರ್ಮದ ಮೇಲೆ ದೇಸಾಯಿಗಳು ಕುಳಿತುಕೊಳ್ಳುವರು. ಮುಂದೆ ಬಂದ ದೇಸಾಯಿಗಳು ಕುಳಿತುಕೊಳ್ಳುತ್ತಿರಲಿಲ್ಲ"[೬೬] .ಏಕೆಂದರೆ ಅದು ಅವರ ಗೆಲುವಿನ ಸಂಕೇತವಾಗಿರುವುದರಿಂದ ಆಧಾರವಾಗಿ ನಿಲ್ಲುತ್ತದೆ.

ಸಂಗೀತ ವಿದೂಷಿ ಸನಾದಿ ಅಪ್ಪಣ್ಣ : ದೇಸಾಯಿಗಳು ಸಂಗೀತ ಆಸ್ವಾದಕರಾಗಿದ್ದರೆಂದು ಹೇಳಬಹುದಾಗಿದೆ. ಬೀಳಗಿ ಭಾಗದ ಶಹನಾಯಿ ವಾದಕ ಸನಾದಿ ಅಪ್ಪಣ್ಣನೊಂದಿಗೆ ಹಬ್ಬ ಹರಿದಿನಗಳಲ್ಲಿ ಸಂಗೀತ ಕಛೇರಿಯನ್ನು ಏರ್ಪಡಿಸುತ್ತಿದ್ದರು. ರಕ್ಕಸಗಿ, ಶಿರಗುಪ್ಪಿ ಸೊನ್ನ, ಪಟ್ಟದಕಲ್ಲು ಅಲ್ಲದೆ ಇತರೆ ಸಂಸ್ಥಾನೀಕರೂ ಕೂಡ ಸಂಗೀತವನ್ನು ಕೇಳಿ ಆನಂದಿಸುತ್ತಿದ್ದರೆಂದು "ಕೃಷ್ಣಮೂರ್ತಿ ಪುರಾಣೀಕರು ಕಾದಂಬರಿಯಲ್ಲಿ ಉಲ್ಲೇಖಿಸಿದ್ದಾರೆ."[೬೭] ಸನಾದಿ ಅಪ್ಪಣ್ಣನ ಸಂಗೀತಕ್ಕೆ ಮೆಚ್ಚಿದ ದೇಸಾಯಿಯವರು ಭೂ ಉಂಬಳಿಯನ್ನು ಅವರ ಮನೆತನಕ್ಕೆ ಕೊಡಮಾಡಿದ್ದಾರೆ. ಇದರಿಂದ ದೇಸಾಯಿಗಳು ಸಂಗೀತ ಪ್ರೀಯರಾಗಿದ್ದರೆಂದು ತಿಳಿದುಬರುತ್ತದೆ. ಪ್ರಸ್ತುತ ಈ ವಾಲಗದ ಮನೆತನದ ವಂಶಸ್ಥರು ಬೀಳಗಿ ತಾಲೂಕಿನ ಸುನಗದಲ್ಲಿದ್ದಾರೆ.

ಒಟ್ಟಿನಲ್ಲಿ ದೇಸಾಯಿಯರಿಂದ ಒಂದು ಕಡೆಗೆ ಜಾನಪದ ಕಲೆ-ಕಲಾಕಾರರಿಗೆ ಪ್ರೋತ್ಸಾಹ ಸಿಕ್ಕರೆ ಇನ್ನೊಂದು ಕಡೆ, ಅವರಿಂದ ಸಾಂಸ್ಕೃತಿಕ ಮನೋರಂಜನೆಯು ಪ್ರಜೆಗಳಿಗೆ ಒದಗುತ್ತಿದುದು ಇದರಿಂದ ವಿಧಿತವಾಗುತ್ತದೆ. ದೇಸಾಯಿಗಳು ಕಲಾವಿದರೂ ಹೌದು ಪ್ರೋತ್ಸಾಹದಾಯಕರೂ ಹೌದು ಎಂಬುದರಲ್ಲಿ ಎರಡು ಮಾತಿಲ್ಲ.

೩.೫.೩. ಕಸೂತಿ-ಕಲೆ, ಚಿತ್ತಾರ(ಕರಕುಶಲತೆ)

ದೇಸಗತಿ ಮನೆತನದ ಸ್ತ್ರೀಯರು ಕಲಾ ಪ್ರೀಯರಾಗಿದ್ದರು. ಹಾಗೆ ಧಾರ್ಮಿಕ ಮನೋಭಾವನೆಯುಳ್ಳವರಾದ ಇವರು ವಾಡೆಗಳಲ್ಲಿ ಭಿತ್ತಿ ಚಿತ್ರಗಳನ್ನು ಗೋಡೆಗಳ ಮೇಲೆ ಚಿತ್ರಿಸುತ್ತಿದ್ದರು. ರುಕ್ಮೀಣಿ-ಸತ್ಯಭಾಮೆಯರ ಚಿತ್ರಗಳು ಇರುತ್ತಿದ್ದವು. ಕಲೆಯನ್ನು ಕರಗತ ಮಾಡಿಕೊಂಡ ಇವರು ತಮ್ಮ ಕರೆಚಂದ್ರಕಾಳಿ ಸೀರೆ ಮೇಲೆ ಕಸೂತಿ ಹಾಕುತ್ತಿದ್ದರು. ಚಿಕ್ಕ ಮಕ್ಕಳ ಕುಲಾಯಿ-ಕುಂಚಿಗೆಗೆ ಮುತ್ತನ್ನು ಹಚ್ಚುವುದು ಅವರ ಕಲಾಪ್ರಿಯತೆಯನ್ನು ತೋರಿಸುತ್ತದೆ. ಕಸೂತಿಯಲ್ಲಿ, ನವಿಲು, ಗಿಳಿ, ಹಗ್ಗದ ಆಟದ ಹುಡುಗಿಯರು, ತುಳಸಿಕಟ್ಟೆ ಮೊದಲಾದವು ಸಾಮಾನ್ಯವಾಗಿರುತ್ತಿದ್ದವು.

ಕುಬಸ > ಕುಪ್ಪಸ(ಕುಪ್ಪಸದ ರವಿಕೆ) ಬಗೆ ಬಗೆಯ ಚಿತ್ತಾರವನ್ನು ಹೊಂದಿದವುಗಳನ್ನು ತೊಡುವುದು ದೇಸಗತಿಯ ದೇಸಾಯಿಣಿಯರ ಕಲಾ ಪ್ರೀಯತೆಯನ್ನು ಎತ್ತಿ ತೋರಿಸುತ್ತದೆ. ಸುಮಾರು ೧೦೦೦ ಕ್ಕಿಂತ ಹೆಚ್ಚು ಬಗೆಯ ಚಿತ್ತಾರಗಳುಳ್ಳ ರೇಷ್ಮೆ ಖಣಗಳ ಸಂಗ್ರಹ ಇವರಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಮುಖ್ಯವಾಗಿ ಸೂಜಿಮಲ್ಲಿಗೆ, ಸೇವಂತಿಗೆ, ತೇರು, ರುದ್ರಾಕ್ಷಿ, ಸಿದ್ದೇಶ್ವರ ಮುಕುಟ(ರುಂಡಮಾಲಿ) ಬಗೆ ಬಗೆಯ ಹೂಗಳು ಬಹು ಆಕರ್ಷಣೀಯವಾದವುಗಳಾಗಿದ್ದವು ವಿವಿಧ ವಿನ್ಯಾಸದಲ್ಲಿ ಕುಪ್ಪಸ ಹೊಲಿಸುವುದು(ಕೈಯಿಂದಲೇ ಹೊಲೆಯುವುದು) ಕಲಾ ಪ್ರೀಯತೆಯನ್ನು ತೋರಿಸುತ್ತದೆ.

ದೇಸಾಯಿಗಳು ಹಾಗೂ ಅವನ ಕುಟುಂಬದವರು ಬಾರಿ ವಸ್ತುಗಳನ್ನು ಧರಿಸಿ(ಫ್ಲಾನಲ್ ರೇಷ್ಮೆ ಉಡುಪು) ಪ್ಯಾಷನ್ ಮಾಡುತ್ತಿದ್ದರು. ಪ್ರಸ್ತುತವೂ ಕೂಡ ಇಂಥ ಉಡುಪು ಕಂಡುಬರುತ್ತವೆ. ಪುಣಾ, ಬಾಂಬೆಗಳಲ್ಲಿ ವಾಸಿಸುವ ಈ ದೇಸಾಯಿ ವಂಶಸ್ಥರು ಚಿನ್ನದ ತಟ್ಟೆ ಬಟ್ಟಲುಗಳನ್ನು ಉಪಯೋಗಿಸುತ್ತಿದ್ದರು. ತಮ್ಮ ವಾಡೆಕ್ಕೆ ಬಂದಾಗ ಅವರು ಬಳಸುವ ತಟ್ಟೆ ಬಟ್ಟಲುಗಳು ಬೆಳ್ಳಿಯವುಗಳಾಗಿವೆ. ದೇಸಾಯಿ ಕುಟುಂಬ ವರ್ಗದವರು ಉಪಯೋಗಿಸುತ್ತಿದ್ದ ಧೋತಿ, ಸೀರೆ ವರ್ತಮಾನದಲ್ಲೂ ಕಾಶಿ, ಕಾಂಜಿವರಂನ ರೇಷ್ಮೆ ಪೀತಾಂಬರಗಳೆ ಆಗಿವೆ. ಮೈಸೂರ ರುಮಾಲುಗಳು, ವೆಲ್ವೆಟ್ ಹಾಸಿಗೆಗಳು ಮತ್ತು ಕಾಶಿ ಚಾದರಗಳನ್ನು ಉಪಯೋಗಿಸುತ್ತಾರೆ. ವಾಡೆದ ಒಂದು ಕೋಣೆ ಭೂತಕಾಲದ ವಿವರಣೆ ನೀಡುವಲ್ಲಿ ಸಾಕ್ಷಿಯಾಗಿದೆ. ಅದರಲ್ಲಿ ಸೈನಿಕರ ಬಟ್ಟೆಗಳ ಒಂದು ಸಾಲು ಕೂಡ ಕಂಡುಬರುತ್ತದೆ. ಕೆಲವು ದೇಸಾಯಿಣಿಯರು ಪಾಟ್ಲಿ(ಬಂಗಾರದ ಬಳೆಗಳು) ಮುತ್ತಿನ ನತ್ತು, ಬುಗಡಿ, ಬೆಂಡೋಲೆ, ಮುತ್ತಿನ ಸರ ವಂಕಿ, ಡಾಬು, ತೋಳಬಂದಿ, ನಾಗಮುರಗಿ ತೊಡುವುದು ಅವರ ಕಲಾಪ್ರೀಯತೆಯನ್ನು ತೋರಿಸುತ್ತದೆ. ಅವೆಲ್ಲವನ್ನು ತಮ್ಮ ಆಜ್ಞೆಯಂತೆ ಮಾಡಿಸಿಕೊಳ್ಳುತ್ತಿದ್ದರು. ವಿಶೇಷ ಹಬ್ಬ ಹರಿದಿನಗಳಲ್ಲಿ ಮದುವೆ ಮುಂಜುವೆಗಳಲ್ಲಿ ಇಂಥ ಉಡುಗೆಗಳನ್ನು ತೊಡುವುದು ಸಾಮಾನ್ಯವಾಗಿದೆ

ದೇಸಾಯರ ಜೀವನದ ಪ್ರತಿಯೊಂದು ಅಂಗಗಳಲ್ಲಿ ಸಾಹಿತ್ಯ-ಸಂಗೀತ-ಕಲೆಗಳು ಹಾಸು ಹೊಕ್ಕಾಗಿದೆ. ವಿದೇಶಿಯರೂ ಗಮನಿಸುವಷ್ಟು ಮಹತ್ವ ಪಡೆದಿವೆ. ಅನೇಕ ಬಗೆಯ ಆಭರಣಗಳನ್ನು ವಿದೇಶಿಯರೂ ಕೂಡ ಮೆಚ್ಚಿ ಧರಿಸಿಕೊಳ್ಳುವಷ್ಟು ಓದಿ ಆನಂದಿಸುವಷ್ಟು ಮಹತ್ವವನ್ನು ಹೊಂದಿವೆ.

ದೇಸಾಯರ ಜೀವನದ ಪ್ರತಿಯೊಂದು ಅಂಗಗಳಲ್ಲಿ ಸಾಹಿತ್ಯ-ಸಂಗೀತ-ಕಲೆಗಳು ಹಾಸುಹೊಕ್ಕಾಗಿವೆ. ವಿದೇಶಿಯರು ಗಮನಿಸುವಷ್ಟು ಮಹತ್ವ ಪಡೆದಿವೆ. ಅನೇಕ ಬಗೆಯ ಆಭರಣಗಳನ್ನು ವಿದೇಶಿಯರೂ ಕೂಡ ಮಚ್ಚಿ ಧರಿಸಿಕೊಳ್ಳುವಷ್ಟು ಓದಿ ಆನಂದಿಸುವಷ್ಟು ಮಹತ್ವವನ್ನು ಹೊಂದಿವೆ.

ಒಟ್ಟಾರೆಯಾಗಿ ದೇಸಗತಿ ಸಾಂಸ್ಕೃತಿಕತೆಯನ್ನು ಬಹುನೆಲೆಯಲ್ಲಿ ಗುರ್ತಿಸಿದ್ದರಿಂದ ಅವರು ಸಮಾಜೋ ಸಾಂಸ್ಕೃತಿಗೆ ನೀಡಿದ ಕೊಡುಗೆ ಅಪಾರವಾಗಿದೆ. ಅವರ ಭಾವ, ಭಾವನೆಗಳು ಸಾಮಾಜಿಕ ಕಲ್ಯಾಣ ಮಾಡುವುದು ಪರಂಪರಾಗತವಾಗಿ ರಕ್ತಗತವಾಗಿ ಬಂದಿದೆ. ಆದ್ದರಿಂದ ಅವರು ಪ್ರಜಾಪಾಲಕರಾಗಿರುವುದಲ್ಲದೆ ಪ್ರಜಾಪೇಕ್ಷೆಯುಳ್ಳವರೂ ಆಗಿದ್ದರು. ಗ್ರಾಮೀಣ ಜೀವನದ ಪ್ರಮುಖ ಭಾಗವಾಗಿ ಸಾಂಸ್ಕೃತಿಕ ಸಂವಾಹಕರಾಗಿ ಕಂಡುಬರುತ್ತಾರೆ. ಇಂಥ ದೇಸಗತಿಗಳು ಇನ್ನು ಜನಮನದಲ್ಲಿ ಜೀವಂತವಾಗಿ ಉಳಿಸಿದ್ದು ಇದರಿಂದ ಕಂಡುಬರುತ್ತದೆ.

ಅಡಿಟಿಪ್ಪಣಿಗಳು

೧. ಡಾ.ಎನ್.ಚಿನ್ನಸ್ವಾಮಿ ಸೋಸಲೆ, ೨೦೦೪, ಸಾಮ್ರಾಜ್ಯ ಮತ್ತು ಸಂಸ್ಥಾನ, ಪು.೪೩

೨. ಅಬಾಜಿ ರಾಮಚಂದ್ರ ಸಾವಂತ, ೧೮೨೨, ಅಶೌಚ ನಿರ್ಣಯ, ಪು.೨೮

೩. ಡಾ.ಎನ್.ಚಿನ್ನಸ್ವಾಮಿ ಸೋಸಲೆ, ಪೂರ್ವೋಕ್ತ, ಪು.೪೪

೪. ಅದೇ,

೫. ಡಾ.ಎಸ್.ಎಸ್.ಅಂಗಡಿ, ಸಂಬಂಧವಾಚಕ ಮತ್ತು ಸಂಭೋದನೆಗಳು, ಪು.೬

೬. ಅದೇ,

೭. ಕೈಫಿಯತ್ ಮೋಡಿ ದಾಖಲೆ, ಕನ್ನಡ ಅನುವಾದ ಲಕ್ಷ್ಮಪ್ಪ ಡಂಗಿ

೮. ಗೋವಿಂದ ಮೂರ್ತಿದೇಸಾಯಿ, ೧೯೯೯, ಸವನೂರ ನವಾಬ, ಪು.೪೮

೯. ಸಂದರ್ಶನ ಹೂಗಾರ ಶಿಕ್ಷಕರು, ಸೂಳಿಭಾವಿ, ಹುನಗುಂದ ತಾಲ್ಲೂಕು

೧೦. ಪಿ.ವ್ಹಿ.ಕೃಷ್ಣಮೂರ್ತಿ, ಗುಗಟೂರು ಅರಸುಮನೆತನ, ಪು.೩೮

೧೧. ಡಾ.ರಾಜೇಂದ್ರ ಅಣ್ಣಾನವರ, ೨೦೦೦, ಅದೃಶ್ಯ ಕವಿ ಜೀವನ ಮತ್ತು ಕೃತಿಗಳು, ಪು.೭

೧೨. ಸಂದರ್ಶನ ಡಾ.ಎಸ್.ವ್ಹಿ.ನಾಯಕ, ಮುಧೋಳ

೧೩. ಸಂದರ್ಶನ ಎಂ.ಆರ್.ಕುಲಕರ್ಣಿ, ಬಾಗಲಕೋಟೆ

೧೪. ಪರ್ಶಿಯನ್ ದಾಖಲೆಗಳು ಕನ್ನಡಕ್ಕೆ ಅನುವಾದ ಡಾ.ಅಬ್ದುಲ್‌ಗಣಿ ಇಮಾರತವಾಲೆ

೧೫. ಸಂದರ್ಶನ ರಂಗಪ್ಪ ತಳವಾರ, ವಯಸ್ಸು ೭೦, ತೇರದಾಳ

೧೬. ಸಂದರ್ಶನ ವೆಂಕಟೇಶ್ವರ ದೇವಸ್ಥಾನದ ಆಚಾರ್ಯರು, ಜಾಲಿಹಾಳ, ಬಾದಾಮಿ ತಾಲ್ಲೂಕು

೧೭. ಮರಾಠಿ ಸನದು ಕನ್ನಡಕ್ಕೆ ಲಕ್ಷ್ಮಪ್ಪ ಡಂಗಿ, ವಯಸ್ಸು ೯೦, ಮುಧೋಳ

೧೮. ಸಂದರ್ಶನ ಕೃಷ್ಣಪ್ಪ ದೇಸಾಯಿ, ವಯಸ್ಸು ೭೦, ಹನಗಂಡಿ

೧೯. ಎಸ್.ಆರ್.ಗೌಡರ, ೧೯೯೯, ಹುಚ್ಚೇಶ್ವರ ಕುಸುಮಾಂಜಲಿ, ಗದಗ, ಪು.೮

೨೦. ಅದೇ, ಪು.೮-೧೧

೨೧. ಅದೇ, ಪು.೮-೧೧

೨೨. ಪಂಚಾಕ್ಷರಿ ಹಿರೇಮಠ(ಸಂ), ಸಾರಂಗದೇವ ಅಭಿನಂದನಾ ಗ್ರಂಥ, ಪು.೬೯

೨೩. ಅದೇ, ಪು.೭೭

೨೪. ಸಂದರ್ಶನ ದಿವಂಗತ ಗಣಿ ದೇಸಾಯಿಗಳು, ವಯಸ್ಸು ೮೦, ಬಿಜಾಪೂರ

೨೫. ಮರಾಠಿ ಸನದು ಕನ್ನಡಕ್ಕೆ ಲಕ್ಷ್ಮಪ್ಪ ಡಂಗಿ, ವಯಸ್ಸು ೯೦, ಮುಧೋಳ

೨೬. ಸಂದರ್ಶನ ಸೈಯದ್ ಇಸ್ಮಾಯಿಲ್, ವಯಸ್ಸು ೬೦, ಇಲ್ಲಕಲ್ಲ. ಮುರ್ತುಜಾ ಖಾದ್ರಿಯವರ ದರಗಾದ ಪೂಜಾರಿಗಳಾಗಿರುತ್ತಾರೆ.

೨೭. ಸಂದರ್ಶನ ನಬಿರಸೂಲ ರಾಜೇಸಾಬ ಉಸ್ತದ, ವಯಸ್ಸು ೪೮, ಇವರು ಘೋರ್ಪಡೆ ಸರಕಾರದ ಸೈಯಿದರು. ೧೯೫೭ ರಿಂದ ಸಂಪೂರ್ಣ ಇವರ ಹಕ್ಕಿರುತ್ತದೆ. ಈಗಲೂ ಕೂಡ ಪುಣೆಯಿಂದ ಅಲ್ಲಂಗಳಿಗೆ ಕಾಣಿಕೆ ಉಡಿಗೆ ತೊಡಿಗೆ ಬರುತ್ತವೆ. ಇಮಾಮ ಹುಸೇನ ಅಲ್ಲಂಕ್ಕೆ ಹಿಂದೂಗಳು ಧರಿಸುವ ಬೆಳ್ಳಿ ಗುಂಡುಗಡಿಗೆ ತೊಟ್ಟಿಲು ಕೊಟ್ಟಿದ್ದು ಇರುತ್ತದೆ. ಮಕ್ಕಳಾಗದವರು ಹರಕೆ ಹೊತ್ತು ಕೊಟ್ಟಿದ್ದಾಗಿರುತ್ತದೆ ಎನ್ನುತ್ತಾರೆ. ಜಡ್ಡು ಜಾಪತ್ರೆಯಿಂದ ಬಳಲುವವರು ಹರಕೆ ಹೊತ್ತು ಕುದುರೆಯಂತೆ ನಡೆದಾಡಲು ಬರುವಂತೆ ಮಾಡೆಂದು ಬೇಡಿಕೊಂಡಿದ್ದರಿಂದ ಕುದುರೆ ಮೂರ್ತಿಕೊಟ್ಟಿದ್ದು ಇರುತ್ತದೆ.

೨೮. ಲಾವಣಿ ಪತ್ರಿಕೆ ಹಾಗೂ ಗಣತಿ ಡೈರಿಗಳು

೨೯. ಪರ್ಶಿಯನ್ ಸನದು ಕನ್ನಡಕ್ಕೆ ಡಾ.ಅಬ್ದುಲ್‌ಗಣಿ ಇಮಾರತವಾಲೆ, ಬಿಜಾಪೂರ

೩೦. ಲಾವಣಿ ಪತ್ರಿಕೆ

೩೧. ಡಾ.ಎಂ.ಜಿ.ವಾರಿ, ೧೯೬೯, ಸೋದೆ ಅರಸು ಮನೆತನ, ಪು.೧೫೧

೩೨. ಅದೇ, ಪು.೧೫೧

೩೩. ಮರಾಠಿ ಸನದು ಕನ್ನಡಕ್ಕೆ ಲಕ್ಷ್ಮಪ್ಪಡಂಗಿ, ವಯಸ್ಸು ೬೦, ಮುಧೋಳ

೩೪. ಇನಾಂ ಕಮೀಷನ್ ದಾಖಲೆಗಳು ದೇಣಿಗೆ ನೀಡಿದ್ದರ ಮಾಹಿತಿಗಳು ಇವೆ

೩೫. ಇನಾಂ ಕಮೀಷನ್ ದಾಖಲೆ ಮೋಡಿಲಿಪಿ ಕನ್ನಡಕ್ಕೆ ಲಕ್ಷ್ಮಪ್ಪ ಡಂಗಿ, ವಯಸ್ಸು ೬೦, ಮುಧೋಳ

೩೬. ಸಂದರ್ಶನ ಶಂಕ್ರಪ್ಪ ದೇಸಾಯಿ, ವಯಸ್ಸು ೪೫, ಮನಹಳ್ಳಿ

೩೭. ಜಮಾ ಖರ್ಚಿನ ಬಾರನೀಸಿ ಮೋಡಿ ದಾಖಲೆಗಳು, ಕನ್ನಡಕ್ಕೆ ಲಕ್ಷ್ಮಪ್ಪ ಡಂಗಿ

೩೮. ಸಂದರ್ಶನ ಫಕೀರಗೌಡ ಪಾಟೀಲ, ವಯಸ್ಸು ೭೦, ಹರದೊಳ್ಳಿ ಗುಳೇದಗುಡ್ಡ

೩೯. ಅಡಾವೆ ಪತ್ರಿಕೆ, ಘೋರಪ್ಪಡೆ ಸರಕಾರವು ಹೊರಡಿಸಿದ ೧೯೨೦ರ ಪತ್ರಿಕೆ ದೇಸಾಯಿಗಳಿಂದ ಕ್ರೂಢೀಕರಿಸಿದ ಮೊತ್ತದ ಸಾರಾಂಶ ಇದರಲ್ಲಿದೆ

೪೦. ಜಾಲಿಹಾಳ ದೇಸಗತಿಯವರು ಬರೆದಿಟ್ಟ ಬಾರನೀಸ್

೪೧. ಪೇಶ್ವೆಗಳು ನೀಡಿದ ಸನದುಗಳು. ಮರಾಠಿ ಮೋಡಿ ದಾಖಲೆಗಳು ಕನ್ನಡಕ್ಕೆ ಲಕ್ಷ್ಮಪ್ಪ ಡಂಗಿ

೪೨. ಲೋಕಾಪೂರ ದೇಸಾಯಿಗಳಿಗೆ ಹಾಗೂ ಘೋರ್ಪಡೆ ಅರಸರಿಗೆ ನಡೆದ ವ್ಯಾಜ್ಯದಲ್ಲಿ ಬರೆದಿಟ್ಟ ದಾವೆ ಮಾಹಿತಿಯಿಂದ

೪೩. ೧೮೮೭ರಲ್ಲಿ ನೀಡಿದ ಮಹಾರಾಣಿ ಸನದು ಇಂಗ್ರೇಜ ಹಾಗೂ ಮೋಡಿದಾಖಲೆ ಕನ್ನಡಕ್ಕೆ ಲಕ್ಷ್ಮಪ್ಪಡಂಗಿ

೪೪. ಬಾಂಬೆ ಆಕ್ಟ್ xxxix ೧೯೫೩, ಗೌರ್ನಮೆಂಟ್ ಆಫ್ ಮಹಾರಾಷ್ಟ್ರ ಗೆಜೆಟ್

೪೫. ಪಿ.ವ್ಹಿ.ಕೃಷ್ಣಮೂರ್ತಿ, ಪೂರ್ವೋಕ್ತ ಪು.೩೮

೪೬. ಇನಾಂ ಕಮೀಷನ್ ರೀಕಾರ್ಡ್ ಮೋಡಿಬಾಖಲೆ, ಕನ್ನಡಕ್ಕೆ ಲಕ್ಷ್ಮಪ್ಪ ಡಂಗಿ

೪೭. ಮುಂಬೈ ಗ್ಯಾಜೆಟಿಯರ್, ೧೯೯೩, ಕನ್ನಡಕ್ಕೆ ವೆಂಕಟರಂಗೋಕಟ್ಟಿ, ಪು.೪೫೦

೪೮. ಸಂದರ್ಶನ ಹೊನ್ನಾಕಟ್ಟಿ ಗ್ರಾಮದೇವರಿಗೆ ಬಿಟ್ಟ ಪ್ರದೇಶ, ಲಕ್ಷ್ಮಣಪೂಜಾರಿ

೪೯. ಡಾ.ಎ.ಟಿ.ಪಾಟೀಲ, ಹಸ್ತಪ್ರತಿ, ೧೯೫೨, ಪ್ರಸನ್ನ ವೆಂಕಟದಾಸರು, ಪು.೮೨

೫೦. ಮೋಡಿ ಸನದು, ಕನ್ನಡಕ್ಕೆ ಲಕ್ಷ್ಮಪ್ಪ ಡಂಗಿ, ಮುಧೋಳ

೫೧. ಡಾ.ಎಂ.ಎಂ.ಕಲಬುರ್ಗಿ(ಸಂ), ೧೯೭೬, ಬಿಜಾಪೂರ ಜಿಲ್ಲೆ ಶಾಸನಸೂಚಿ, ಪು.೪೨-೪೩

೫೨. ಅದೇ, ೪೦-೪೧

೫೩. ಸನದು ಪತ್ರ ಮೋಡಿ ಕನ್ನಡಕ್ಕೆ ಲಕ್ಷ್ಮಪ್ಪಡಂಗಿ, ಮುಧೋಳ

೫೪. ಸಂದರ್ಶನ ಪವಾಡೆಪ್ಪ ದೇಸಾಯಿ, ವಯಸ್ಸು ೪೦, ಲೋಕಾಪೂರ

೫೫. ಅದೇ,

೫೬. ಸಂದರ್ಶನ ರಾಮವ್ವ ಮಾದರ, ವಯಸ್ಸು ೭೦, ದೇಸಾಯರ ವಾಡೇ, ಕೋಟೆಕಲ್ಲ, ಗುಳೇದಗುಡ್ಡ

೫೭. ಹಳೆಗನ್ನಡ ಲಿಪಿ ಪೇಶ್ವೆಗಳ ತಾತಾಚಾರ್ಯ ಎಂಬುವರು ಬರೆದುಕೊಟ್ಟ ಲೇವಾದೇವಿ ಪತ್ರ

೫೮. ಸಂದರ್ಶನ ಲಕ್ಷ್ಮವ್ವ ದೇಸಾಯಿಣಿ, ವಯಸ್ಸು ೮೫, ಹೊಸೂರು, ತಾ.ಬಾದಾಮಿ

೫೯. ಸಂದರ್ಶನ ಬಾಬು ದೇಸಾಯಿ, ವಯಸ್ಸು ೪೨, ಹೊಸೂರು, ತಾ.ಬಾದಾಮಿ

೬೦. ಮುರಹರಿನಾಯಕ(ಲೇ), ಮಯೂರಧ್ವಜ ದೊಡ್ಡಾಟದಿಂದ, ಪು.೨

೬೧. ಅದೇ, ಪು.೪

೬೨. ಅದೇ, ಪು.೫

೬೩. ಅದೇ, ಪು.೬

೬೪. ಅದೇ, ಪು.೯

೬೫. ಸಂದರ್ಶನ ಬಾಬು ರಿಸರದಾರ ವಯಸ್ಸು ೭೦, ಹುನಗುಂದ

೬೬. ಸಂದರ್ಶನ ಗುರಪ್ಪ ಹವಾಲ್ದಾರ, ವಯಸ್ಸು ೭೦, ಕಂದಗಲ್ಲ

೬೭. ಕೃಷ್ಣಮೂರ್ತಿ ಪುರಾಣಿಕ, ೯೭೦, ಸನಾದಿ ಅಪ್ಪಣ್ಣ ಕಾದಂಬರಿ, ಪು.೨೦

ಅಧ್ಯಾಯ ೪

ದೇಸಗತಿ ಆಡಳಿತ ಸ್ವರೂಪ

೪.೧. ದೇಸಗತಿ ಆಡಳಿತ ವಿಧಗಳು

೪.೨. ದೇಸಾಯಿ ಮತ್ತು ಅರಸರು

೪.೩. ಸರ್ಕಾರದಿಂದ ನೇಮಿಸಲ್ಪಟ್ಟ ಅಧಿಕಾರಿವರ್ಗ ಹಾಗೂ ಕರ್ತವ್ಯಗಳು

೪.೪. ದೇಸಗತಿ ಆಡಳಿತದಲ್ಲಿರುವ ವಿವಿಧ ಇಲಾಖೆಗಳು

೪.೫. ದೇಸಗತಿ ಆಡಳಿತದಲ್ಲಿ ಜೇಷ್ಠಪುತ್ರಾಧಿಕಾರತ್ವ

೪.೬. ಮುದ್ರೆಗಳು

೪

ದೇಸಗತಿ ಆಡಳಿತ ಸ್ವರೂಪ

ಕರ್ನಾಟಕ ಐತಿಹಾಸಿಕ ಪರಂಪರೆಯನ್ನು ಅವಲೋಕಿಸಿದಾಗ ೬ನೇ ಶತಮಾನದಿಂದ(ಗಂಗರಿಂದ) ವಿಜಯನಗರ ಸಾಮ್ರಾಜ್ಯದವರೆಗೆ ಪ್ರಜಾಸತ್ತಾತ್ಮಕವಾದ ಗ್ರಾಮಾಡಳಿತವಿದ್ದುದು ಸ್ಪಷ್ಟವಾಗುತ್ತದೆ. ಅದೇ ಮಾರ್ಗದಲ್ಲಿ ಮುಂದೆಯೂ ದೇಸಗತಿಯಂತಹ ಸ್ಥಾನಿಕ ಮನೆತನಗಳೂ ಆಡಳಿತವನ್ನು ನಿರ್ವಹಿಸಿದವು. ಅದರ ಆಡಳಿತ ವಂಶಪಾರಂಪರ್ಯ ವ್ಯಕ್ತಿಯಾಗಿ ಪ್ರಮುಖನಾದವನೇ ದೇಸಾಯಿ.

ರಾಜಮಹಾರಾಜರೆನಿಸಿಕೊಂಡವರು ಮತ್ತು ಅವರ ವಂಶಸ್ಥರು ರಾಜ್ಯಾಡಳಿತದ ಸೂತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದರೆ ಪ್ರಜಾಪ್ರಭುತ್ವದ ವಿಕೇಂದ್ರಿಕೃತ ಗ್ರಾಮೀಣ ಪರಿಸರದಲ್ಲಿ ಗೌಡ, ದೇಸಾಯಿಯಂತವರು ಆಡಳಿತ ನಿರ್ವಹಿಸುತ್ತ ಬಂದಿರುವುದು ಎದ್ದು ಕಾಣುತ್ತದೆ. ರಾಜ್ಯಾಡಳಿತದ ರೀತಿನೀತಿಗಳಿಗೆ ತಕ್ಕಂತೆ ದೇಸಾಯಿಗಳು ತಮ್ಮ ವೈಶಿಷ್ಟ್ಯಪೂರ್ಣ ಆಡಳಿತವನ್ನು ನಡೆಸಿಕೊಂಡು ಬರುವುದರೊಂದಿಗೆ ಸಮಾಜಮುಖಿಯಾಗಿ ಆ ನೆಲ-ಜಲದ ಸಾಂಸ್ಕೃತಿಕ ಸೆಲೆಯಾಗಿ, ಗ್ರಾಮೀಣ ಬಡ ಜನರ ಆಶೋತ್ತರಗಳಿಗೆ ಸ್ಪಂದಿಸುತ್ತಾ ಬಂದಿದ್ದಾರೆ. ಆ ಕಾಲದ ಆಡಳಿತದ ಸೂತ್ರವು ಕೇಂದ್ರ-ಪ್ರಾಂತ-ಪರಗಣ ಎಂದು ವಿಂಗಡಣೆಯಾಗಿರುವುದು ಕಂಡುಬರುತ್ತದೆ. ಇದರಲ್ಲಿ ಪರಗಣವೇ ಸ್ಥಳೀಯ ಸರಕಾರ ಪ್ರಮುಖ ಕಲ್ಪನೆಯಾಗಿದೆ.

ದೇಸಗತಿಗಳೆಂದರೆ ಸ್ಥಳೀಯ ಆಡಳಿತವನ್ನು ರಾಜಕೀಯ ಹಾಗೂ ಸಾಂಸ್ಕೃತಿಕ ಒಡೆತನವನ್ನು ಒಳಗೊಂಡಂಥವಾಗಿವೆ. ಸರ್ವ ಸಮಾಜದ ಕಲ್ಯಾಣವನ್ನು ಅದರ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುತ್ತ, ನ್ಯಾಯ, ಧರ್ಮ, ಕಲೆ, ಸಾಹಿತ್ಯ, ಸಂಗೀತ, ಶಿಕ್ಷಣ, ಅರವಟ್ಟಿಗೆಯಿಂದ ಹಿಡಿದು, ಅನ್ಯರ ವಿರುದ್ಧ ಸಿಡಿದೇಳುವ, ಜನಮನದಲ್ಲಿ ಧೈರ್ಯ ಸಾಹಸ ತುಂಬುವ ಜನಸಾಮಾನ್ಯರ ಯೋಗಕ್ಷೇಮ ಕಾಯುವ ಮಹತ್ವಪೂರ್ಣ ಕಾರ್ಯಗಳನ್ನು ಮಾಡುತ್ತ ಬಂದಿವೆ. ದೇಸಾಯಿಗಳು ಇನಾಮದಾರರಾಗಿದ್ದು ಕೊಂಡು ದೊರೆತನ ಹೊಂದಿದ್ದರು. ಅಧಿಕಾರಿಗಳ ಸಹಾಯದಿಂದ ಗ್ರಾಮಾಡಳಿತವನ್ನು ಪರಗಣದ ನೆಲೆಯಲ್ಲಿ ಕಟ್ಟಿಕೊಂಡು ಸಮರ್ಥವಾಗಿ ನಿರ್ವಹಿಸಿದ್ದಾರೆ. ತಮ್ಮ ದರ್ಪದ ಸೌಧದಡಿಯಲ್ಲಿ ಗ್ರಾಮೀಣ ಸಂಸ್ಕೃತಿಯನ್ನು ಸುಂದರಗೊಳಿಸಿ ಜನಜೀವನವನ್ನು ವೈವಿಧ್ಯಪೂರ್ಣ ಹಾಗೂ ಸಂಪದ್ಭರಿತವಾಗುವಂತೆ

ಮಾಡಿದಂತೆ ಅಧಃ ಪತನದತ್ತ ಕೊಂಡೊಯ್ದ ಉದಾಹರಣೆಗಳೂ ಇವೆ. ಮೇಲಾಗಿ ದೇಸಾಯಿಗಳ ದರ್ಪದ ದಳ್ಳುರಿಯಲ್ಲಿ ಗ್ರಾಮೀಣ ಜನರಲ್ಲಿ ವೈರತ್ವ ಹೊಗೆಯಾಡಿ ಕೆಲವು ಗ್ರಾಮಗಳು ಸುಟ್ಟು ಭಸ್ಮವಾಗಿ ಸ್ಮಶಾನ ಸದೃಶವಾದ ಸಂಗತಿಗಳೂ ಕೂಡಾ ಅಷ್ಟೇ ಸತ್ಯ. ಅಂದಿನ ದಿನಮಾನಗಳಲ್ಲಿ ದೇಸಾಯಿಯವರು ನಾಡು ನುಡಿ ಹಿತ ರಕ್ಷಣೆಗಾಗಿ ತ್ಯಾಗ ಬಲಿದಾನಗಳನ್ನು ಮಾಡಿದ್ದೂ ಇದೆ. ಮತ್ತೆ ಕೆಲವು ದೇಸಾಯಿಗಳು ತಮ್ಮ ಸ್ವಾರ್ಥ ಸಾಧನೆಗಾಗಿ ದೇಸಗತಿಯನ್ನು ದುರುಪಯೋಗ ಮಾಡಿಕೊಂಡಂಥ ಉದಾಹರಣೆಗಳು ಇವೆ. ದೇಸಗತಿಯವರು ಭೋಗ ಸಂಪನ್ನರೂ ಹೌದು; ತ್ಯಾಗ ಸಂಪನ್ನರೂ ಹೌದು ಎಂಬುದನ್ನು ಅಲ್ಲಗಳೆಯುವಂತಿಲ್ಲ. ಸ್ಥಳೀಯ ಚರಿತ್ರೆಯನ್ನು ತಿಳಿಯುವಲ್ಲಿ ದೇಸಗತಿಗಳ ಅಧ್ಯಯನ ಅತೀ ಮಹತ್ವದ್ದಾಗಿ ಕಂಡು ಬರುತ್ತದೆ. ರಾಜಮಾರ್ಗದಿಂದ, ಪ್ರಜಾಮಾರ್ಗದವರೆಗೆ ಸಾಗಿ ಬಂದ ಈ ದೇಸಗತಿ 'ಆನೆ ನಡೆದುದೇ ಮಾರ್ಗವೆಂಬಂತೆ' ಕಾಲಗರ್ಭದಡಿಯಲ್ಲಿ ಅನೇಕ ಏರಿಳಿತಗಳನ್ನು ಕಂಡುಕೊಂಡಿವೆ. ಆಯಾ ಕಾಲದ ಪರಿಸರ, ಸಾಂಸ್ಕೃತಿಕ ಹಿನ್ನೆಲೆ ದೇಸಗತಿಗೆ ದಾರಿದೀಪವಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಆಕರಗಳ ಕೊರತೆ ಇದ್ದರೂ ದೇಸಗತಿಯಲ್ಲಿ ಸಿಗುವ ನೂರಾರು ಸನದುಗಳ ಕೆಲವೊಂದು ದಾಖಲೆಗಳು ದೇಸಗತಿಗಳ ಆಂತರ್ಯವನ್ನು ಅರಿಯುವಲ್ಲಿ(ಪರ್ಶಿಯನ್ ಭಾಷಾಂತರ ಮರಾಠಿ ದಾಖಲೆ) ಸಹಾಯಕವಾಗುತ್ತದೆ.

೪.೧. ದೇಸಗತಿ ಆಡಳಿತ ವಿಧಗಳು

ದೇಸಾಯರ ಆಡಳಿತ ವ್ಯವಸ್ಥೆಯನ್ನು ಹಲವು ನೆಲೆಯಲ್ಲಿ ಗುರ್ತಿಸಿಕೊಳ್ಳಲಾಗಿದೆ ಅದು ಹೀಗಿದೆ.

"೧. ಏಕ ಸ್ವಾಮ್ಯ ಆಡಳಿತ

೨. ಉಭಯ ಸ್ವಾಮ್ಯ ಆಡಳಿತ

೩. ಬಹುಸ್ವಾಮ್ಯ ಆಡಳಿತ

೪. ವಂಶಪಾರಂಪರ್ಯ ಆಡಳಿತ

೫. ಕುಟುಂಬಿಟ್ಟಿ ಅಣುಗ ಜೀವಿತ ಆಡಳಿತ"[೧]

ಈ ಆಡಳಿತ ವಿಭಾಗಗಳ ಕುರಿತ ಮಾಹಿತಿ ೬ನೇ ವಿಕ್ರಮಾದಿತ್ಯನ ಶಾಸನಗಳಿಂದಲೂ ಕಾಣಿಸಿಕೊಳ್ಳುತ್ತವೆ.

ಏಕಸ್ವಾಮ್ಯ ಆಡಳಿತ : ಒಬ್ಬನೇ ಎಲ್ಲದರ ಒಡೆತನ ಹೊಂದಿದವ ಎಂದರ್ಥ ಅಧಿಕಾರ ಪಡೆದ ವ್ಯಕ್ತಿಯು (ದೇಸಾಯಿ) ತಾನು ಜೀವಂತವಾಗಿರುವವರೆಗೆ ಈ ಒಡೆತನವನ್ನು ಅನುಭವಿಸಬಹುದಾಗಿದೆ. ಅಂದರೆ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಮಾತ್ರ ಏಕಸ್ವಾಮತ್ವ ಅಧಿಕಾರವನ್ನು ದೇಸಾಯಿ ಹೊಂದಿದ್ದನೆಂದು ಹೇಳಬಹುದು.

ಬೀಳಗಿ ತಾಲೂಕಿನ ಸಿರಗುಪ್ಪಿ, ಗಲಗಲಿಯಡಹಳ್ಳಿ, ಬಾದಾಮಿ ತಾಲೂಕಿನ ಕೆರಕಲಮಟ್ಟಿ, ಅಕ್ಕರಗಲ್ಲ, ಹುನಗುಂದ ತಾಲೂಕಿನ ಐಹೊಳೆ, ಕರಡಿ, ಕಂದಗಲ್ಲ, ಮುಧೋಳ ತಾಲೂಕಿನ ಮುದ್ದಾಪೂರ. ಇವು ಏಕಸ್ವಾಮ್ಯ ಆಡಳಿತ ವಿಭಾಗಗಳಲ್ಲಿ ಏಕಸ್ವಾಮ್ಯ ಆಡಳಿತ ಪರಗಣಕೇಂದ್ರವಾಗಿತ್ತು.

ಉಭಯ ಸ್ವಾಮ್ಯ : ಉಭಯಸ್ವಾಮ್ಯ ಎಂದರೆ ಎರಡು ಕಡೆಗೆ ಒಡೆತನ ಹೊಂದಿದ ಆಡಳಿತ ಪ್ರಕಾರ ಆಗಿದೆ. ಪರಗಣದ ವ್ಯಾಪ್ತಿಗೆ ಮೀರಿದ ಪರಗಣದ ಹೊರಗೆ ಇರುವಂಥ ಪ್ರದೇಶವನ್ನು ಸಮ್ಮತ್ ಪರಗಣ ಎಂದು ವಿಭಾಗಿಸಲಾಗುತ್ತಿತ್ತು. ಈ ಎರಡೂ ಘಟಕಗಳನ್ನು ಒಬ್ಬನೇ ದೇಸಾಯಿ ನೋಡಿಕೊಳ್ಳುತ್ತಿದ್ದನು. ಇಂಥ ದೇಸಾಯಿಗಳು ವಿಶೇಷ ಇನಾಂ ಪಡೆದು ಅರಸನಿಂದ ನೇಮಿಸಲ್ಪಡುತ್ತಿದ್ದರು.

ಮುಧೋಳ ಪರಗಣದ ಕುಳಲಿದೇಸಾಯಿ, ಮುದಕವಿ ಸಂಸ್ಥಾನದ ಒಡೆತನ ಹೊಂದಿದ್ದು 'ದ್ವೈಸಂಪಾಯನ ಪದ್ಧತಿ' ಪ್ರಕಾರ ಎರಡೂ ಸಂಸ್ಥಾನಕ್ಕೆ ಒಬ್ಬನೇ ದೇಸಾಯಿ ಆಗಿದ್ದಾನೆ. ಮುದ್ದೇಬಿಹಾಳ ತಾಲೂಕಿನ ನಡವಣಗಿ ದೇಸಾಯಿ ಬಾದಾಮಿ ತಾಲೂಕಿನ ಈಗಿನ ಕೋಟೆಕಲ್ಲ ಸಮ್ಮತ ಪರ್ವತಿ ದೇಸಗತಿಯನ್ನು ಆಳುತ್ತಿದ್ದಾನೆ. ನಿಡುಗುಂದಿ ಪರಗಣದಲ್ಲಿ ಸೇರಿಸಿಕೊಂಡು ಆಡಳಿತ ನಡೆಸಿದ್ದು ವಿಧಿತವಾಗುತ್ತದೆ.

ವಂಶಪಾರಂಪರ್ಯ ಸ್ವಾಮ್ಯತ್ವ : ಹೀಗೆಂದರೆ ದೇಸಗತಿಯ ಒಂದು ವಿಭಜಿತ ಆಡಳಿತವೆನ್ನಬಹುದು. ದೇಸಾಯಿ ತನ್ನ ಬಾಹುಬಂದರಿಗೆ, ಅಥವಾ ಮೂಲ ದೇಸಗತಿಯಿಂದ ವಿಭಜನೆಗೊಳಿಸಿ ಹಂಚಿದ ಆಡಳಿತವೇ ವಂಶಪಾರಂಪರ್ಯ ಸ್ವಾಮತ್ವ ಆಗಿರುತ್ತದೆ. ಅವರಿಗೆ ಪಾಟೀಲಕಿ, ಕುಲಕರ್ಣಿ, ದೇಶಪಾಂಡೆಗಿರಿ ನಾಡಗೌಡಕಿ ನೀಡಿದ್ದು ವಿಶೇಷವಾಗಿದೆ. ಇದನ್ನು ವಂಶಪಾರಂಪರ್ಯ ಸ್ವಾಮತ್ವ ಆಡಳಿತವೆಂದು ಗುರ್ತಿಸಬಹುದು.

ದೇಸಾಯಿಗಳು ತಮ್ಮ ಆಡಳಿತದಲ್ಲಿ ತಮಗೆ ಇದ್ದಂತಹ ಹಕ್ಕು ಬಿಟ್ಟುಕೊಟ್ಟು ಬೇರೆಯವರಿಗೆ ಗೌಡಕಿ ನೀಡಿದ್ದು ಇದೆ. ಅವರಿಗೆ ಉಂಬಳಿ ನೀಡಿದ್ದಾರೆ. ತೇರದಾಳದ ದೇಸಗತಿಯಲ್ಲಿ ಬೇರೆ ಬೇರೆ ಮತಧರ್ಮದವರು ಗೌಡಕಿ ಹೊಂದಿದ್ದು ಅವರೆಲ್ಲರೂ ಪಾಟೀಲ, ಗೌಡ್ರ, ಮುಲ್ಕಿ ಪಾಟೀಲ ಎಂದು ಕರೆಸಿಕೊಂಡಿದ್ದಾರೆ.

ಬಹುಸ್ವಾಮ್ಯತ್ವ : ಎಂಬುದು ವಿಶಾಲ ಅರ್ಥಸೂಚಿಸುತ್ತದೆ. ಇದು ಏಕಸ್ವಾಮ್ಯ, ಉಭಯಸ್ವಾಮ್ಯಕ್ಕಿಂತ ಭಿನ್ನವಾಗಿವೆ. ಇಂಥ ದೇಸಾಯಿಗಳು ಪಂಚಮಹಲ ಒಡೆಯರೆನಿಸಿಕೊಂಡಿದ್ದಾರೆ. ಹಾಗೇ ಬಹುದೊಡ್ಡ ಪರಗಣಗಳ ಅಧಿಕಾರಿಗಳಾಗಿದ್ದಾರೆ. ಒಂದೊಂದು ಮಹಲಿನ ಪ್ರತ್ಯೇಕ ಪ್ರತ್ಯೇಕ ಆಡಳಿತ ನಡೆಸಿರುವುದು ವಿಶೇಷವಾಗಿ ಕಂಡುಬರುತ್ತದೆ. ಇಂಥ ದೇಸಾಯಿಗಳನ್ನು ಬಹುಸ್ವಾಮ್ಯತ್ವ ಹೊಂದಿದ ದೇಸಾಯಿಗಳೆಂದು ಗುರ್ತಿಸಿಕೊಂಡಿದೆ. ಜಾಲಿಹಾಳ ದೇಸಗತಿ. ಇದು ಜಾಲಿಹಾಳ, ರೋಣ, ಗಜೇಂದ್ರಗಡ, ಕೊಪ್ಪಳ ತಾಲೂಕಿನ ಯಲಬುರ್ಗಾ, ಬಾಗಲಕೋಟೆ ತಾಲೂಕಿನ ಶಿರೂರದವರೆಗೆ ವ್ಯಾಪ್ತಿಯನ್ನು ಆಡಳಿತ

ಹೊಂದಿತ್ತು. ೨. ರಕ್ಕಸಗಿ ದೇಸಗತಿ. ಇದು ರಕ್ಕಸಗಿ, ಸೂಳೀಬಾವಿ, ಅಮರಾವತಿ, ೩. ನೀರಬೂದಿಹಾಳ. ಇದು ಬೀಳಗಿ, ಹಾಲಿಗೇರಿ ಹಾಗೂ ಯಂಡಿಗೇರಿ ವ್ಯಾಪ್ತಿಯನ್ನು ಪಡೆದುಕೊಂಡಿದ್ದು ವಿಧಿತವಾಗುತ್ತದೆ.

'ಕುಟುಂಬಿಟ್ಟಿ ಅಣುಗ ಜೀವಿತ' ಆಡಳಿತ ಈ ಪದಪುಂಜವನ್ನು ಅರ್ಥಮಾಡಕೊಳ್ಳುವುದು ಅವಶ್ಯವಾಗಿದೆ. ಇಲ್ಲಿ ಮೂರು ಪದಗಳ ವಾಕ್ಯಸಂಬಂಧವಿದೆ.

೧. ಕುಟುಂಬಿಟ್ಟಿ ೨. ಅಣುಗ ೩. ಜೀವಿತ

ಕುಟುಂಬಿಟ್ಟಿ ಎಂದರೆ ಒಂದು ಮನೆತನಕ್ಕೆ ಬಿಟ್ಟದ್ದು 'ಅಣುಗ' ಎಂದರೆ ಪ್ರೀತಿಗೆ ಪಾತ್ರರಾದವಳು. ಸ್ತ್ರೀ ಅಥವಾ ಮಗಳು' 'ಅಣು' ಎಂದರೆ ಒಂದು ವಸ್ತುವಿನ ಸಣ್ಣಭಾಗವೆಂದಾಗುತ್ತದೆ. ಅಂದರೆ ದೇಸಗತಿಯ ಸಣ್ಣ ಘಟಕ ಎನ್ನಬಹುದು. ಜೀವಿತ ಎಂದರೆ ಜೀವನ ನಿರ್ವಹಣೆಗಾಗಿ ಬದುಕಲು ಕೊಟ್ಟ ಕಾಣಿಕೆ. ಇವೆಲ್ಲದರ ಸಂಯುಕ್ತ ಜೊಡನೆಯೇ ಕುಟುಂಬಿಟ್ಟಿ ಅಣುಗ ಆಗಿರುತ್ತದೆ.

ಪ್ರಾಚೀನ ಕಾಲದಿಂದಲೂ ಹಿಂದೂ ಸಂಸ್ಕೃತಿಯಲ್ಲಿ 'ತೆರವು' ಎಂಬುದನ್ನು ಸ್ತ್ರೀಗೆ ಕೊಡುತ್ತಾ ಬರಲಾಗಿದೆ. ಆದರೆ ರಾಜಸ್ವದಂತೆ ಮೆರೆದ ದೇಸಾಯಿಗಳು ತೆರುವು ಎಂಬ ರೂಪದಲ್ಲಿ ಗ್ರಾಮಗಳನ್ನು ಉಂಬಳಿ ನೀಡಿದ್ದು ಈ ಅವಧಿಯಲ್ಲಿ ವಿಶೇಷವಾಗಿಯೇ ಇದೆ. ಇಂಥ ದಾನವನ್ನೇ ಕುಟುಂಬಿಟ್ಟಿ ಅಣುಗ ಜೀವಿತ ಸ್ವಾಮತ್ವ ಎಂದು ಗುರ್ತಿಸಿಕೊಂಡು ಅಧ್ಯಯನಿಸಲಾಗಿದೆ. ಇಂಥ ವಿಶೇಷವಾದ ದೇಸಗತಿಗಳು ಬಾಗಲಕೋಟೆ ಜಿಲ್ಲೆಯಲ್ಲಿ ಕಂಡುಬರುತ್ತವೆ.

೧. ಮುದ್ದೇಬಿಹಾಳ ತಾಲೂಕಿನ ವಡವಡಗಿ ದೇಸಾಯಿಯ ಹೆಣ್ಣಾಸ್ತಿಯು ಕೋಟೆಕಲ್ಲ ದೇಸಗತಿಯಲ್ಲಿದೆ. ಈ ಮನೆತನದ ದೇಸಾಯಿ ಒಬ್ಬ ಸ್ತ್ರೀಯನ್ನು ಮೋಹಿಸಿ ಮದುವೆಯಾದ ಕಾರಣ ಅವಳಿಗೆ ಏಳು "ಗ್ರಾಮಗಳನ್ನು ಉಂಬಳಿ ಕೊಡಲಾಗಿರುತ್ತದೆ".[೨] ಈ ಗ್ರಾಮಗಳನ್ನು ಬಳಸಿಕೊಂಡು ಮತ್ತೆ ಇನಾಂ ಪಡೆದುಕೊಂಡು ತನ್ನ ದೇಸಗತಿಯ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದಾರೆ. ಅದನ್ನು ಸಮತ್ನ್ನಾಗಿ ಮಾಡಿಕೊಂಡಿದ್ದು ತಿಳಿದುಬರುತ್ತದೆ.

೨. ಮನ್ನಿಕೇರಿ ದೇಸಾಯಿಗಳು ತಮ್ಮ ಮಗಳನ್ನು ಕೆರೂರ ಸಂಗೊರಾಯನಿಗೆ ಕೊಟ್ಟು ಅವಳಿಗೆ ದೇಸಪಾಂಡೆಗಿರಿ ಕೊಟ್ಟರು. ಅದನ್ನು ಅನುಭವಿಸುವ ಈ ಮನೆತನದವರು ಕೆರೂರ ಪರಗಣದ ದೇಶಪಾಂಡೆಗಳಾಗಿ ಆಳಿಕೆ ಮಾಡಿದ್ದಾರೆ. ಪ್ರಸ್ತುತ ಈ ಮನೆತನದವರಿಗೆ ಹೂಲಗೇರಿ ದೇಸಾಯಿಗಳೆಂದು ಕರೆಯುವುದು ರೂಢಿಯಲ್ಲಿದೆ. ಒಂದು ಸಾಮಾನ್ಯ ಮನೆತನವು ಹೆಣ್ಣು ಪಡೆಯುವುದಲ್ಲದೆ ತೆರುವು ಸಂಬಂಧಗಳಿಂದಾಗಿ ದೇಸಗತಿ ಆಳಿಕೆ ಮಾಡಿದ್ದು ವಿಶೇಷವಾಗಿದೆ.

೩. ಈ ಭಾಗದ ದೇಸಾಯಿಗಳಾದ, ಸೊನ್ನ, ಹಲಗಲಿ, ಗಲಗಲಿ ಯಡಹಳ್ಳಿ, ಐಹೊಳೆ, ಪಟ್ಟದಕಲ್ಲು ಹಾಗೂ ಕೊಣ್ಣೂರ ದೇಸಗತಿಗಳಲ್ಲಿ ಹೆಣ್ಣು ಮಕ್ಕಳಿಗೆ ಒಂದೊಂದು ಗ್ರಾಮದಲ್ಲಿ ೧೨೨ ಮಾರದಿಂದ

೨೧೧ ಮಾರಗಳವರೆಗೆ ಜಮೀನನ್ನು ಉಂಬಳಿ ನೀಡಿದ್ದಾರೆ. ಆ ಗ್ರಾಮಗಳನ್ನು ಸೇರಿಸಿಕೊಂಡು ಆ ಮನೆತನದ ದೇಸಾಯಿಗಳು ಆಳಿಕೆ ಮಾಡಿದ್ದಾರೆ.

೪. ಕಂದಗಲ್ಲ ನಾಡಗೌಡರು ಲಿಂಗಸೂರ ದೇಸಗತಿಯಿಂದ ಸ್ಥಳಾಂತರಗೊಂಡು ಹೆಣ್ಣಾಸ್ತಿಗೆ ಬಂದು ನಿಂತಿದ್ದಾರೆ.

ಒಟ್ಟಾರೆಯಾಗಿ ದೇಸಗತಿಯ ಆಡಳಿತ ವಿಧಗಳನ್ನು ಏಕಸ್ವಾಮ್ಯ, ಉಭಯಸ್ವಾಮ್ಯ, ಬಹುಸ್ವಾಮ್ಯ ವಂಶಪಾರಂಪರ್ಯ ಹಾಗೂ ಕುಟುಂಬಿಟ್ಟಿ ಅಣುಗ ಜೀವಿತ ಎಂಬ ನೆಲೆಯಲ್ಲಿ ನೋಡಬಹುದಾಗಿದೆ.

ಕುಟುಂಬಿಟ್ಟಿ ಅಣುಗಜೀವಿತ ದಾನವು ಕೇವಲ ಹೆಣ್ಣಾಸ್ತಿಯಾಗದೇ ಅದೊಂದು 'ಸಮತ್ 'ಆಗಿ ಅಂದರೆ ಪರಗಣದ ಉಪ-ಪರಗಣ (Miner Division) ಆಗಿದೆ. ಇಂಥ ದೇಸಾಯಿಗಳು ಹೊಸ ಅಸ್ತಿತ್ವವನ್ನು ಪಡೆದುಕೊಂಡು ದೇಸಗತಿ ಅಳಿಕೆ ಮಾಡಿದ್ದು ಕಂಡು ಬರುತ್ತದೆ. ಹೀಗೆ ಈ ಐದು ಆಡಳಿತ ವಿಭಾಗಗಳು ಮಹತ್ವಪೂರ್ಣವಾಗಿದ್ದು ದೇಸಗತಿ ಅಧ್ಯಯನಕ್ಕೊಂದು ಹೊಸ ಬೆಳಕು ನೀಡಿವೆ.

೪.೧.೧. ಪರಗಣ

ಪರಗಣ ಎನ್ನುವುದು ಪರ್ಶಿಯನ್ ಪದವಾಗಿದ್ದು ಅದರ ಅರ್ಥ ಪ್ರದೇಶ ಎಂದಾಗುತ್ತದೆ.''[೬] ಪರಗಣ ಹಲವು ಗ್ರಾಮಗಳ, ಪ್ರದೇಶಗಳ ಕೇಂದ್ರಸ್ಥಳ ಅಥವಾ ಮುಖ್ಯಸ್ಥಳ ಮಧ್ಯವರ್ತಿಸ್ಥಳ ಎಂಬುದಾಗಿದೆ. 'ಪರಗಣ' ಪದವು ಎಲ್ಲಿಯೂ ಬಳಕೆಯಾಗಿರುವುದಿಲ್ಲ. ಇದರ ರೂಪ ನಿಷ್ಪತ್ತಿ ಈ ರೀತಿ ಇದೆ. ಪುರ+ಗಣ=ಪುರಗಣ>ಪರಗಣ ಎರಡು ಪದಗಳ ಜೋಡಣೆಯಿಂದ ಪುರಗಣ>ಪರಗಣ ಆದಂತೆ ತೋರುತ್ತದೆ. ಪುರ ಎಂಬುದು ಸಂಸ್ಕೃತ ಪದ. ಗಣ ಎಂಬುದು ಸಮೂಹ, ಗುಂಪು ಅಥವಾ ಒಕ್ಕೂಟ ಆಗಿದೆ. ಹಲವು ಗ್ರಾಮಗಳ ಒಕ್ಕೂಟವೇ 'ಪರಗಣ'. ಗ್ರಾಮಗಳ ಸಮೂಹದ ಕೇಂದ್ರಸ್ಥಾನವೇ ಪರಗಣ ಎಂದು ಹೇಳಬಹುದು. ಗ್ರಾಮಗಳಿಗೆ ನಿರ್ದೇಶನ ಕೊಡುವ ಮುಖ್ಯಾಧಿಕಾರಿಯ ಕೇಂದ್ರಸ್ಥಾನವೇ ಪರಗಣ. ದೇಸಗತಿ ಆಡಳಿತದಲ್ಲಿ ಪರಗಣವೇ ಪ್ರಮುಖವಾಗಿದೆ. ಇದು ಆಡಳಿತದ ವಿಭಾಗವೂ ಆಗಿತ್ತು.

'ಪರಗಣದ ಒಳಗೆ ಹೊರಗೆ ಚಿಕ್ಕ ಚಿಕ್ಕ ಘಟಕಗಳಿದ್ದವು. ಅವುಗಳಿಗೆ ಮಾಮಲಾ, ಕಾಲಾಬ ಎಂದು ಕರೆಯಲಾಗುತ್ತಿತ್ತು. ಪರಗಣವೆಂದರೆ ಜಿಲ್ಲೆ ಅಥವಾ ಪ್ರದೇಶವೆಂದಾಗುತ್ತದೆ. ಇದು ಮುಸ್ಲಿಂ ಆಡಳಿತಗಾರರಿಂದ ಪ್ರಾರಂಭವಾಗಿ ಉತ್ತರ ಹಿಂದುಸ್ಥಾನ ಮತ್ತು ದಕ್ಷಿಣ ಹಿಂದುಸ್ಥಾನದಲ್ಲಿ ವ್ಯಾಪಕವಾಗಿ ಜಾರಿಯಲ್ಲಿತ್ತು. ಮುಖ್ಯವಾಗಿ ಇದನ್ನು ಕೆಲವು ಪಟ್ಟಣಗಳಿಗೆ ಉಪಯೋಗಿಸಲಾಗುತ್ತಿತ್ತು. ಉದಾಹರಣೆಗೆ ಮುಧೋಳ ಪರಗಣಾ, ಕಲಾದಗಿ ಪರಗಣಾ, ಬೀಳಗಿ ಪರಗಣಾ. ಈ ಶಬ್ದ ದಕ್ಷಿಣದಲ್ಲಿ ತಘುಲಕ್ಕರ ಆಡಳಿತಾವಧಿಯಲ್ಲಿ ಜಾರಿಯಲ್ಲಿತ್ತೆಂದು ತಿಳಿದುಬರುತ್ತದೆ. ಅಂದರೆ ೧೪ನೇ ಶತಮಾನದ ಮೊದಲ

ಭಾಗದಲ್ಲಿ ಈ ಪರಗಣದ ವಿಭಜನೆ ಯಾವ ರೀತಿ ಇತ್ತೆಂದು ಸ್ಪಷ್ಟತೆ ಇಲ್ಲ. ಆದರೆ ಆದಿಲ್‌ಶಾಹಿಗಳ ದಾಖಲೆಯ ಪ್ರಕಾರ ಇದರ ಬಗ್ಗೆ ತಕ್ಕಮಟ್ಟಿಗೆ ಉತ್ತರ ಸಿಗುತ್ತದೆ.

೪.೧.೧.೧. ಪರಗಣ ವ್ಯಾಪ್ತಿ

"ಒಂದು ಪರಗಣವೆಂದರೆ ೫೦ ರಿಂದ ೨೦೦ ಹಳ್ಳಿಗಳನ್ನು ಒಳಗೊಂಡಿರುತ್ತದೆ. ಈ ಪರಗಣಗಳನ್ನು ದೇಸಿಯವಾಗಿರುವ ಸ್ಥಳೀಯ ವಿಭಜನೆಗೆ ಪುನಾನಾಮಕರಣ ಮಾಡಲಾಗಿದೆ ಎಂದು ತಿಳಿದುಬರುತ್ತದೆ."[೪] ಸ್ಥಳೀಯ ವಿಭಜನೆಯಲ್ಲಿ ಹಿಂದುಗಳೇ ಮುಖ್ಯವಾಗಿದ್ದು ಅದನ್ನು ಬಳಸುತ್ತಿದ್ದರೆಂದು ಆ ಕಾರಣದಿಂದಲೇ ಆದಿಲ್‌ಶಾಹಿಗಳ ದಾಖಲೆಗಳಲ್ಲಿ ಪರಗಣ ಎಂದು ಮೇಲಿಂದ ಮೇಲೆ ಬಳಸುತ್ತಿದ್ದರೆಂದು[೫] ತಿಳಿದುಬರುತ್ತದೆ. ಈ ಪದವನ್ನು ದೇಸಿಯತೆಯಲ್ಲಿ ಬಳಸಿದಾಗ ದೇಸಿಪದ ವಿದೇಶಿ ಪದಕ್ಕಿಂತ ಹಳೆಯದೆಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಮುಸ್ಲಿಂ ಅರಸರು ತಮ್ಮ ವಿಕೇಂದ್ರಿಕರಣಗೊಂಡ ಆಡಳಿತದಲ್ಲಿ ಪರಗಣವೆಂದು ಬಳಸಿದ್ದಾರೆ.ಪ್ರತಿಯೊಂದು ಪರಗಣಕ್ಕೆ ದೇಸಾಯಿಯೇ ಪ್ರಮುಖನಾಗಿದ್ದ. ಪರಗಣದ ಗಾತ್ರ ದೇಸಾಯಿ ಆಳುವ ಪ್ರದೇಶದ ಗಾತ್ರದ ಮೇಲೆ ಅವಲಂಬಿಸಿತ್ತು. ಅದನ್ನು ಪ್ರತಿನಿಧಿಸಿದ ವ್ಯಕ್ತಿ, ಆಳುವ ಕ್ಷೇತ್ರದ ಹೆಸರೇ ಪರಗಣವಾಗಿದೆ. ಕೆಲವು ಸಲ ಪರಗಣದಲ್ಲಿ ಅನೇಕ ಜನ ದೇಸಾಯಿಗಳಿದ್ದರು. ಅವರು ಬಾಹು ಬಂದರೂ ಆಗಿದ್ದರು. ಅಂದರೆ ಪರಗಣವು ಅವರವರ ಬಾಹುಬಂದರಲ್ಲಿ ಹಂಚಿ ಹೋಗಿತ್ತೆಂದು ತೋರುತ್ತದೆ. ಅಥವಾ ಭಾಗಶಃ ಇನ್ನೊಬ್ಬರಿಗೆ ವರ್ಗಾವಣೆ ಮಾಡಿದ ಪರಿಣಾಮವಾಗಿ ಹಲವಾರು ದೇಸಾಯಿಗಳು ಒಂದೊಂದು ದೇಸಗತಿ ಮಾಡಿಕೊಂಡು ಆಳಿಕೆ ಮಾಡಿದ್ದಾರೆ.

ಈ ಪರಗಣದ ಹೊರಗೆ ಕೂಡ ಕೆಲವು ಗ್ರಾಮಗಳು ಕಂಡುಬರುತ್ತವೆ. ಆದಿಲ್‌ಶಾಹಿಗಳ ಸನದಿನಲ್ಲಿ ಈ ಉಲ್ಲೇಖ ಬರುತ್ತದೆ. ಅದೆಂದರೆ "೧ ಕೇರಿಯಾತ್ ನಿಮಗೆ ಕೊಡಮಾಡಿದೆ."[೬] ಕೇರಿಯಾತ್ ಕೈರಾಯತ್ ಅಂದರೆ ಹದಿನಾಲ್ಕು ಹಳ್ಳಿಗಳು ಉದಾ : ಕುಂದರಗಿ ಈ ಗ್ರಾಮಕ್ಕೆ ಹದಿನಾಲ್ಕು ಹಳ್ಳಿಗಳಿವೆ. ಕೇರಿಯತ್ ಅಂದರೆ ಅದು 'ಸಮತ್' ಎನಿಸುತ್ತದೆ. ಅದು ಪರಗಣದ ಹೊರಗಡೆ ಇರುತ್ತದೆ. ಸಮ್ಮತ್, ಕೈರಾತ್, ತರಫ ಎನ್ನುವ ಪದಗಳು ಅರಬ್ಬಿಭಾಷೆಯಿಂದ ಬಂದಿದೆ. ಮುಸ್ಲಿಂರು ಇವುಗಳನ್ನು ದಕ್ಷಿಣ ಭಾಗದಲ್ಲಿ ಜಾರಿಗೆ ತಂದರು. ತರಫ ಎಂಬುದು ಇತಿಹಾಸದಲ್ಲಿ ಬಹಳಷ್ಟು ಬಳಕೆ ಇದೆ. ಸಮ್ಮತ್ ಎಂಬುದನ್ನು ಗ್ರಾಮಗಳ ಪೂರ್ವಪದವಾಗಿ ಕೆಲವೇ ಗ್ರಾಮಗಳಿಗೆ ಹಚ್ಚಿದ್ದಾರೆ. ಬಾಗಲಕೋಟೆ ಕ್ಷೇತ್ರದಲ್ಲಿ ಸುಮಾರು ೫೦ ಗ್ರಾಮಗಳಿವೆ. ಉದಾಹರಣೆಗೆ ಎಸ್.ಕೆ.ಕೊಪ್ಪ, ಎಸ್.ಎಚ್.ಬೂದಿಹಾಳ, ಎಸ್.ಕೆ.ಹೊಸೂರ ಎಸ್.ಪರ್ವತಿ ಎಸ್=ಸಮ್ಮತ ಆಗುತ್ತದೆ. ಕೆ=ಪರಗಣದ ಹೆಸರು. ಅದರ ಮುಂದಿನದು ಊರಿನ ಹೆಸರು. ಅದು ಪರಗಣದ ಹೊರಗಡೆ ಇರುವ ಗ್ರಾಮವೆಂಬುದನ್ನು ಸೂಚಿಸುತ್ತದೆ.

ಪರಗಣದ ಹೊರಗಡೆ ಇರುವ ಈ ಗ್ರಾಮಗಳು ಅಥವಾ ಸಣ್ಣ ವಿಭಜನೆಗಳು ಯಾವುದೇ ಏಕರೂಪ ತಳಹದಿಯ ಮೇಲೆ ಆಗಿರಲಿಲ್ಲ. ಅವುಗಳನ್ನು ಸ್ಥಳೀಯ ಅಗತ್ಯಗಳ ಹಿನ್ನೆಲೆಯಲ್ಲಿ ಮಾಡಿದ್ದು ಆಯಾ ದೇಸಾಯಿಗಳ ಬಲಾಬಲಕ್ಕೆ ಸಾಕ್ಷಿಯಾಗಿರಬೇಕೆನಿಸುತ್ತದೆ. ಒಟ್ಟಾರೆ 'ಸಮ್ಮತ್ 'ಗಳು ಕೂಡ ಪರಗಣದ ವಿಭಾಗವಾಗಿದ್ದು ವಿಶೇಷವಾಗಿದೆ.

ಪರಗಣದಲ್ಲಿ ದೇಸಾಯಿಯೇ ಪ್ರಮುಖ. ತನ್ನ ಸದಸ್ಯರಲ್ಲಿ ಅಥವಾ ಕುಟುಂಬದಲ್ಲಿ ಹಂಚಿ ಹೋದುದರಿಂದ ಇಂಥ ಚಿಕ್ಕ ಪುಟ್ಟ ವಿಭಜನೆಗಳು ಪರಗಣದಲ್ಲಿ ಕಾಣುತ್ತವೆ. ಹಾಗೆ ಭಾಗಶಃ ಪರಗಣವನ್ನು ಕೇಂದ್ರ ಸರಕಾರವೂ ಕೂಡ ವಿಭಜನೆ ಮಾಡಿದ್ದರಿಂದ, ಅಲ್ಲಿ ಹೊಸದಾಗಿ ದೇಸಾಯಿಯನ್ನು ನೇಮಕಗೊಳಿಸಿದ್ದರಿಂದ ರಾಜಸ್ವವನ್ನು ನೀಡಿದ್ದರಿಂದ ಇಂಥ ಸಣ್ಣ ವಿಭಜನೆಗಳು ಕಾಣುತ್ತವೆ. ಉದಾರಣೆಗೆ ಸಮ್ಮತ್ ಕುಂದರಗಿ ಇದಕ್ಕೆ ಶಿರಗುಪ್ಪಿ ದೇಸಗತಿಯನ್ನು, ಸಮ್ಮತ್ ಬೂದಿಹಾಳಕ್ಕೆ ಕರಡಿ ನಾಡಗೌಡರನ್ನು ಉದಾಹರಿಸಬಹುದಾಗಿದೆ. ಹಾಗೆ ಸಮ್ಮತ್ ಪರ್ವತಿಗೆ, ನಿಡಗುಂದಿ ಪರಗಣೆ ಪಡಸಲಗಿ ದೇಸಗತಿಯನ್ನು ಸೂಚಿಸಬಹುದಾಗಿದೆ. ಒಂದು ಸಮತ್ ಎಂದರೆ ಇದರಲ್ಲಿ ಕನಿಷ್ಟ ಐದರಿಂದ ಹತ್ತು ಹಳ್ಳಿಗಳಿರುತ್ತಿದ್ದವು. ಸಮ್ಮತ್ ಒಂದು ಸೇರಿ ಮೂವತ್ತಕ್ಕಿಂತ ಹೆಚ್ಚು ಗ್ರಾಮಗಳು ಕಂಡುಬರುತ್ತವೆ. ಈ ಗ್ರಾಮಗಳ ಆದಾಯದಲ್ಲಿ ಎಲ್ಲಾ ಬಾಬುಗಳು ಸೇರಿದ್ದವು. ಅದರಲ್ಲಿ ಒಂದು ಪಟ್ಟಣ ಇರುತ್ತಿತ್ತು.

ಬಾಗಲಕೋಟಿ ಜಿಲ್ಲೆಯ ಚಿಕ್ಕ ಪುಟ್ಟ ದೇಸಗತಿಗಳು ಬಹಳಷ್ಟು ಸಮತ್ ಗ್ರಾಮಗಳಾಗಿದ್ದು, ಅದರ ಒಡೆತನದಲ್ಲಿ ದೇಸಾಯಿಗಳು, ನಾಡಗೌಡರು ಆಡಳಿತ ಮಾಡಿದ್ದು ಕಂಡುಬರುತ್ತದೆ. ಇದೊಂದು ಪರಂಪರಾನಿಷ್ಠ ಇನಾಂ ಎಂದು ಹೇಳಬಹುದು. ಅರಸನಿಂದ ಪಡೆದಂತಹ ವ್ಯಕ್ತಿಗಳು ವಿಶೇಷ ರಾಜಸ್ವದ ಅನುಗ್ರಹದಿಂದ ಪರಂಪರಾನಿಷ್ಠೆಯಿಂದ, ಅರಸನ ದಯೆಯಿಂದ, ಪಡೆದಂತಹವು. ಅದರ ನಿರ್ವಹಣೆಗೆ ಉಚ್ಚವರ್ಗದ ನೌಕರರು ಇಲ್ಲಿ ಇರುತ್ತಿದ್ದರು.

೪.೨. ದೇಸಾಯಿ ಮತ್ತು ಅರಸರು

ಅರಸುಗಳ ವಿಕೇಂದ್ರಿಕರಣ ನೀತಿಯಿಂದ, ದಯೆಯಿಂದ, ಅನುಕೂಲದಿಂದ ದೇಸಾಯಿಗಳಿಗೆ ಕೊಡಮಾಡಿದ ಹುದ್ದೆ, ಮತ್ತು ಸಂಭಾವನೆಯನ್ನು ಆಗಾಗ ದೃಢೀಕರಣ ಮತ್ತು ಪುನರ್ ದೃಢೀಕರಣವನ್ನು ಮಾಡುತ್ತಿದ್ದರು. ಕಾಲಕಾಲಕ್ಕೆ ನೋಟಿಸು ನೀಡಿ ಒಪ್ಪಿಗೆ ಪಡೆಯುತ್ತಿದ್ದರು. ಸ್ಥಳೀಯ ನೌಕರ ಶಾನಭೋಗಳಿಗೆ, ವಂಶಪರಂಪರಾಗತ ಅಧಿಕಾರಿಗಳಿಗೆ ಉಂಬಳಿ ಹಿಡುವಳಿದಾರರಿಗೂ ಅನ್ವಯಿವಾಗುತ್ತಿತ್ತು. ತಾವು ಮಾಡಿದಂತ ನಿರ್ಧಾರವನ್ನು ಮನ್ನಿಸಿ ದೇಸಾಯಿಗಳು ತಮ್ಮ ಕಛೇರಿ ಕೆಲಸಗಳನ್ನು ನಿರ್ವಹಿಸುವಾಗ ಯಾವುದೇ ತೊಂದರೆ ಕೊಡಬಾರದೆಂದು "ಫರ್ಮಾನಗಳಲ್ಲಿ ಆದೇಶಿಸುತ್ತಿದ್ದರು". ಅದು ಹೀಗಿದೆ

೧. ಕಛೇರಿಯಲ್ಲಿ ಅಧಿಕೃತ ಕೆಲಸಗಳನ್ನು ಮಾಡಬೇಕು.

೨. ಅರಸನಿಗೆ ವಿಧೇಯನಾಗಿರಬೇಕು.

೩. ಅರಸನಿಗೆ ಅಂದರೆ ಖಜಾನೆಗೆ ಪ್ರತಿವರ್ಷ ನಿರ್ದಿಷ್ಟ ಕಂದಾಯ(ನಜರಾಣಾ) ಕೊಡಬೇಕು.

೪. ದೇಸಾಯಿಯು ಒಳ್ಳೆ ನಡತೆ, ಒಳ್ಳೆ ವಿಧೇಯತೆ ಹೊಂದಿರಬೇಕು.

೫. ಪರಗಣ ಹೊಂದಿದ್ದಲ್ಲಿ ಒಬ್ಬ ಹವಾಲ್ದಾರ. ಹಾಗೂ ನೌಕರ ಶಾಹಿಯನ್ನು ನೇಮಿಸುತ್ತಿದ್ದರು. ಅಲ್ಲದೆ ನೇಮಿಸಿದ ಹವಾಲ್ದಾರ ಮತ್ತು ನೌಕರಶಾಹಿ ಕಾರಕೂನನ ಆಡಳಿತವನ್ನು ಒಪ್ಪುವಂತೆ ಆದೇಶಿಸುತ್ತಿದ್ದರು.

ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಅರಸನ ಕಟ್ಟುನಿಟ್ಟಿನ ಆಡಳಿತದ ಹೊಣೆ ಹಾಗೆ ದೇಸಾಯಿಗಳ ವಿಧೇಯತೆ ಸ್ಪಷ್ಟವಾಗುತ್ತದೆ. ಪರಗಣ ಜಿಲ್ಲೆಯ ಮೇಲ್ವಿಚಾರಣೆಯನ್ನು ದೇಸಾಯಿಗಳ ಸೇವೆಯ ಮುಖಾಂತರ, ಹಾಗೆ ಮಹಲದಾರನ ಮುಖಾಂತರ ಕೇಳಿ, ಇಡೀ ಸ್ಥಳೀಯ ಆಡಳಿತದ ಜವಾಬ್ದಾರಿಯನ್ನು ದೇಸಾಯಿಗೆ ವಹಿಸಿದ್ದು ಕಂಡುಬರುತ್ತದೆ.

ಇನ್ನೊಂದರ್ಥದಲ್ಲಿ ದೇಸಗತಿಯ ಮೇಲೆ ಆಗಾಗ ಮೇಲ್ವಿಚಾರಣೆ ನಡೆದುದು ಕಂಡುಬರುತ್ತದೆ. ದೇಸಾಯಿಗಳ ನಿರ್ಲಕ್ಷತೆ, ಅನಿಯಮಿತತೆ ಕಂಡು ಬಂದಲ್ಲಿ ದೇಸಾಯಿ ಕ್ರಮ ಬದ್ಧವಾಗಿ ಕರ್ತವ್ಯಗಳನ್ನು ನಿರ್ವಹಿಸುವಂತೆ ಆದೇಶಿಸುತ್ತಿದ್ದರು. ಅಥವಾ ತನ್ನ ಅನಿಯಮಿತತನವನ್ನು ತಕ್ಷಣ ನಿಲ್ಲಿಸಬೇಕು. ಇರದೇ ಇದ್ದರೆ ದೇಸಾಯಿ ಆಡಳಿತ ಮತ್ತು ಸಂಭಾವನೆಯನ್ನು ಮತ್ತೊಬ್ಬರಿಗೆ ಕೊಡಲಾಗುತ್ತಿತ್ತು.

ದೇಸಾಯಿಗಳು ಅವಿಧೇಯರಾಗಿ ಜನಸಾಮಾನ್ಯರಿಗೆ ತೊಂದರೆ ಕೊಡುತ್ತಿದ್ದರೆ, ದಂಗೆ ಏಳುತ್ತಿದ್ದರೆ, ಬಗ್ಗು ಬಡಿಯುವ ಸಲುವಾಗಿ ಸೈನ್ಯವನ್ನು ಕಳುಹಿಸುತ್ತಿದ್ದರು. ಅಥವಾ ಸ್ಥಳೀಯ ಹವಾಲ್ದಾರನ ಹತೋಟಿಯಲ್ಲಿರುವ ಸೈನಿಕರಿಂದಲೇ ಹತ್ತಿಕ್ಕುತ್ತಿದ್ದರು. ಅಂಥವನನ್ನು ಬಂಧನಕ್ಕೊಳಪಡಿಸಿ ರಾಜಧಾನಿಗೆ ಕರೆಯಿಸಿ ಶಿಕ್ಷೆ ವಿಧಿಸುತ್ತಿದ್ದರು. ಇದು ಮುಸ್ಲಿಂ ಅರಸರಿಂದ ಪ್ರಾರಂಭವಾಗಿ ಪೇಶ್ವೆಗಳ ಅವಧಿಯವರೆಗೂ ಮುಂದುವರಿದಿತ್ತು. ಅಂಥ ಶಿಕ್ಷೆ ಅನುಭವಿಸುವ ಪ್ರಮೇಯವು ಈ ಜಿಲ್ಲೆಯ ಕೆಲವು ದೇಸಾಯಿಗಳಿಗೆ ಬಂದೊದಗಿತ್ತು. ಉದಾಹರಣೆಗೆ : ತೇರದಾಳ ದೇಸಾಯಿ, ಜಾಲಿಹಾಳ ದೇಸಾಯಿ, ಲೋಕಾಪೂರ ದೇಸಾಯಿ, ಗಲಗಲಿ ಯಡಹಳ್ಳಿ ದೇಸಾಯಿ ಇತ್ಯಾದಿ. ಕೆಲವು ಸಲ ದೇಸಾಯಿಗಳು ಇಂಥ ಘಟನೆಗೆ ಗುರಿಯಾದರೂ ಅವರ ಮನೆತನದವರು ಅಂದರೆ ತಪ್ಪು ಮಾಡಿದ ದೇಸಾಯಿಗಳ ಸಂಬಂಧಿಕರು ದೇಸಗತಿ ಅಧಿಕಾರ ಮತ್ತು ಇನಾಂನ್ನು ತಮಗೆ ಒಪ್ಪಿಸಬೇಕೆಂದು ಮನವಿ ಮಾಡಿಕೊಂಡಾಗ ಅರಸನು ಒಪ್ಪಿ ನೀಡಿದ್ದು ಇದೆ. ಇದಕ್ಕೊಂದು ಉದಾಹರಣೆ : 'ಮನ್ನಿಕೇರಿ ದೇಸಗತಿಯಾಗಿದೆ'. ಅರಸುಗಳ ಬಿಗಿಯಾದ ನಿಯಂತ್ರಣದಿಂದ ದೇಸಗತಿ ಆಳಿಕೆಯು ವ್ಯವಸ್ಥಿತವಾಗಿದ್ದು ಅವನ ಅಧೀನತೆಗೆ ಒಳಪಟ್ಟು ನಡೆಯುತ್ತಿದುದು ಮಹತ್ವಪೂರ್ಣ ವಿಷಯವಾಗಿದೆ.

೪.೨.೧. ದೇಸಾಯಿಯ ಕರ್ತವ್ಯಗಳು

ಪರಗಣ ಕ್ಷೇತ್ರದಲ್ಲಿರುವಂಥ ದೇಸಾಯಿ(ದೇಸಮುಖ)ಗಳು ಅವರ ಕರ್ತವ್ಯಗಳನ್ನು ಈ ಮುಂದಿನಂತೆ ನೋಡಬಹುದು.

೧. ತನ್ನ ಕ್ಷೇತ್ರದಲ್ಲಿರುವ ಜಮೀನನ್ನು ಉಳುಮೆ ಮಾಡಿ, ಆ ಜಮೀನನ್ನು ಅಭಿವೃದ್ಧಿಪಡಿಸುವುದು.

೨. ದೇಸಾಯಿಗಳು ಆ ಪ್ರದೇಶದ ರಕ್ಷಣೆಯನ್ನು, ಭದ್ರತೆಯನ್ನು ನಿರ್ವಹಿಸುವುದು.

೩. ನ್ಯಾಯಾಧೀಕರಣ ಮುಂತಾದವುಗಳನ್ನು ನಿರ್ವಹಿಸಿ ಆ ಪ್ರದೇಶದ ಉನ್ನತಿಗಾಗಿ ಸಂಪದ್ಭರಿತವಾಗಿ ಹಾಗೂ ಅರಸನ ಆದಾಯ ಹೆಚ್ಚಾಗುವಂತೆ ಮಾಡುವುದು. ಹೀಗೆ ಇನ್ನೂ ಪ್ರಮುಖ ಅಂಶಗಳು ಕಂಡುಬರುತ್ತವೆ. ಅಂಥವುಗಳಲ್ಲಿ ವಿಶೇಷವಾಗಿರುವಂಥವುಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

೪.೨.೨. ಮಿಲಿಟರಿ ಹಾಗೂ ಭದ್ರತೆ ನಿರ್ವಹಣೆ

ಪರಗಣ ಕ್ಷೇತ್ರದಲ್ಲಿರುವ ಸ್ಥಳೀಯ ಅಧಿಕಾರಿಗಳಾದ ದೇಸಾಯಿಗಳು ತಮಗೆ ವಹಿಸಿರುವ ಪ್ರದೇಶಗಳ ಭದ್ರತೆಗೆ ಜವಾಬ್ದಾರರಾಗಿರುತ್ತಾರೆ. ಇದಕ್ಕಾಗಿ ದೇಸಾಯಿಗಳು ತಮ್ಮದೇ ಆದ ಮಿಲಿಟರಿ(ಸೈನ್ಯ)ಯಲ್ಲಿ ಕುದುರೆದಳ, ಕಾಲ್ದಳ ಹೊಂದಿರಬೇಕಾಗುತ್ತಿತ್ತು. ಅಲ್ಲದೆ ಅದರ ಖರ್ಚುವೆಚ್ಚವನ್ನೂ ಕೂಡ ತಾನೇ ಹೊಂದಿರಬೇಕಾಗಿತ್ತು. ಉದಾಹರಣೆಗೆ "ಜಾಲಿಹಾಳ ದೇಸಾಯಿಗಳು ೨೫೦೦೦ ಮಿಲಿಟರಿ ಸೈನಿಕರನ್ನು ಹೊಂದಿದ ಬಗ್ಗೆ ತಿಳಿದುಬರುತ್ತದೆ."[೮] ಚಿಕ್ಕಪುಟ್ಟದೇಸಾಯಿಗಳು ಕೂಡ ನೂರರಷ್ಟು ಸೈನಿಕ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದರು. ಆದಿಲ್‌ಶಾಹಿಗಳ ಫರ್ಮಾನದಲ್ಲಿ ಇಂತಿಷ್ಟೇ ಸೈನ್ಯ ಹೊಂದಿರಬೇಕೆಂದು ಎಲ್ಲಿಯೂ ನಿರ್ದೇಶನವಿಲ್ಲ. ಆದರೆ ತಮ್ಮ ಅಗತ್ಯಕ್ಕೆ ತಕ್ಕಂತೆ ಅವಶ್ಯಕತೆ ಇದ್ದಲ್ಲಿ ಸೈನಿಕರ ಸಂಖ್ಯೆ ಹೆಚ್ಚಿಸುವ ಬಗ್ಗೆ ನಿರ್ದೇಶಿಸಿದ್ದು ಇದೆ. ಅದೆಂದರೆ ಇದು ನಿಮ್ಮ ಉನ್ನತಿ ಸಲುವಾಗಿದೆ. ನೀವು ಇನ್ನೂ ಹೆಚ್ಚಿನ ದೊರೆತನ ಸಂಪಾದಿಸುವಲ್ಲಿ ನಿಮಗೆ ಸಹಾಯಕವಾಗುವುದೆಂದು ತಿಳಿದುಬರುತ್ತದೆ. ಅಂದರೆ ದೇಸಾಯಿಗಳು ಸರಕಾರದ ಆದೇಶದ ಪ್ರಕಾರ ಸೈನ್ಯ ಹೊಂದಿದ್ದರೂ ಅದು ತನ್ನ ಬಲಾಬಲದ ಮೇಲೆ ಇತ್ತೆಂದು ತೋರುತ್ತದೆ. ಇನ್ನೊಂದು ಮಹತ್ವದ ಸಂಗತಿಯೆಂದರೆ ತನ್ನ ಕ್ಷೇತ್ರದಲ್ಲಿ (ದೇಸಾಯಿ)ದಂಗೆ ಅಥವಾ ಜಗಳವುಂಟಾದಾಗ ಅವುಗಳನ್ನು ಬಗ್ಗು ಬಡಿಯುವ ಸಲುವಾಗಿ ಸರಕಾರದ ಪರವಾನಿಗೆ ಅವಶ್ಯಕತೆ ಇರಲಿಲ್ಲವೆನಿಸುತ್ತದೆ. ಆಗಿನ ಸಂದರ್ಭಕ್ಕೆ ತಕ್ಷಣ ಸರಕಾರದ ಯಾವುದೇ ನಿರ್ದಿಷ್ಟ ಆದೇಶವನ್ನು ನಿರೀಕ್ಷಿಸದೆ ನಿರ್ವಹಿಸಬಹುದಾಗಿತ್ತು. ಅಂಥ ಕಲವು ಘಟನೆಗಳು ದೇಸಗತಿಗಳಲ್ಲಿ ನಡೆದುದರಿಂದ ಅದನ್ನು ತಾವೇ ಬಗೆಹರಿಸಿ ನಿಯಂತ್ರಿಸಿದ್ದು ಇದೆ.

ರಕ್ಕಸಗಿ ದೇಸಾಯಿ ವಂಶಸ್ಥ ಪಾಮನಗೊಂಡ (ಪಾಮನಗೌಡ) ದೇಸಾಯಿ ಚೆಂಡಾಟದಲ್ಲಿ ಗೆದ್ದುಬಂದುದರಿಂದ ಐಹೊಳೆ ದೇಸಾಯರ ಮಗಳು ಮೆಚ್ಚಿ ಮದುವೆಯಾಗಲು ಬಂದಾಗ ಐಹೊಳೆ

ದೇಸಾಯಿಗಳಿಗೂ ರಕ್ಕಸಗಿ ದೊರೆಗಳಿಗೂ ನಡೆದ ಘಟನೆಯನ್ನು, ಸೂಳಿಬಾವಿಯ ಕ್ಷೇತ್ರದಲ್ಲಿ ಕಾಣಬಹುದಾಗಿದೆ. ಇದು ವೈಯಕ್ತಿಕ ಸಂಬಂಧಕುರಿತಾದುದರಿಂದ ಬಗೆಹರಿಸಿಕೊಂಡರು. ಇಂಥದ್ದೇ ಘಟನೆ ನೀರಬೂದಿಹಾಳ ವಡವಡಗಿ ದೇಸಗತದಲ್ಲಿ ಗಿರಿಸಾಗರ ದೇಸಗತದಲ್ಲಿ ಕಂಡುಬರುತ್ತವೆ. ಹಾಗೇ ಆ ಕ್ಷೇತ್ರದಲ್ಲಿ ಕರ್ತವ್ಯದ ನಿರ್ಲಕ್ಷತೋರಿದ, ಆಕ್ಷೇಪಣೆಗಳ ಆಧಾರದ ಮೇಲೆ ಕೂಡ ವಿಚಾರಿಸಿ ಬಗೆಹರಿಸುವುದು ಆದೇಶವಿತ್ತೆಂದು ತಿಳಿದುಬರುತ್ತದೆ. ಜನಸಾಮಾನ್ಯರಿಗೆ ತೊಂದರೆ ಕೊಡುವ ಪಾಟೀಲರು, ಇತರೆ ದೇಸಾಯಿಗಳಿಂದ ಉಂಬಳಿ ಪಡೆದ ಹಿಡುವಳಿದಾರರು, ಉಂಬಳಿ ಪಡೆದು ಅಕ್ರಮವಾಗಿ ಪ್ರವೇಶ ಮಾಡುವವರನ್ನು, ದಂಗೆ ಕೋರರನ್ನು ನಿಯಂತ್ರಿಸುವ ಅಧಿಕಾರವು ದೇಸಾಯರಿಗಿತ್ತೆಂದು ತಿಳಿದುಬರುತ್ತದೆ.

೪.೨.೩. ದೇಸಾಯಿ ಕೊಡಮಾಡುವ ಶಿಕ್ಷೆಗಳು

ಈಗಾಗಲೇ ದೇಸಾಯಿಯ ಅನೇಕ ಕರ್ತವ್ಯಗಳನ್ನು ಅವಲೋಕಿಸಿದಾಗಲೂ ಅವನು ವಿಧಿಸುವ ಶಿಕ್ಷೆಗಳು ಸಾಮಾನ್ಯವಾಗಿದ್ದರೂ ಕೆಲವು ಶಿಕ್ಷೆಗಳು ಕಠೋರವಾಗಿದ್ದವು. ಅವುಗಳನ್ನು ಇಲ್ಲಿ ಕ್ರೋಢೀಕರಿಸಿ ನಿರೂಪಿಸಿಕೊಳ್ಳಲಾಗಿದೆ. ದೇಸಗತದ ಆಡಳಿತದಲ್ಲಿ ಇದು ಜವಾಬ್ದಾರಿತನದ ನಿರ್ಣಯವಾಗಿದೆ. ಹೀಗಾಗಿ ಅದನ್ನು ಸರಿಪಡಿಸಿ ನಿಭಾಯಿಸುವುದು ದೇಸಾಯಿಯ ಹಿರಿತನಕ್ಕೊಂದು ಬೆಲೆತರುವ ಅಂಶವಾಗಿದೆ.

೧. ಯಾವುದೇ ಅಪರಾಧಿಗೆ ಕೇಂದ್ರ ಸರಕಾರದ ಆದೇಶವಿಲ್ಲದೆ ಮರಣ ದಂಡನೆ ವಿಧಿಸುವ ಹಕ್ಕಿರುವುದಿಲ್ಲ.

೨. ಯಾವುದೇ ಶಿಕ್ಷೆ ಸಾಮಾನ್ಯವಾಗಿರಬೇಕು. ಅದು ಒಪ್ಪಿತವಾಗುವಂತಿರಬೇಕು.

೩. ತಮ್ಮ ದೇಶ ಬಿಟ್ಟು ಹೋದ ವ್ಯಕ್ತಿ, ಕುಟುಂಬಗಳನ್ನು ದೇಶಕ್ಕೆ ಮರಳಿ ತರುವ ಅಧಿಕಾರವನ್ನು ದೇಸಾಯಿ ಮತ್ತು ಚಿಕ್ಕಪುಟ್ಟ ಸಂಸ್ಥಾನಿಕರಿಗೂ ಅವರ ವಂಶಪರಂಪರಾಗತವಾದ ಅಧಿಕಾರಿಗಳಿಗೂ ಕೊಡಲಾಗಿತ್ತು. ಅಲ್ಲದೆ ಒತ್ತಾಯ ಮಾಡಲಾಗಿತ್ತು. ಹಾಗೆ ಓಡಿ ಹೋದ ಜನರನ್ನು ಕೂಡ ಮರಳಿ ತಂದು ಅವರು ಹಳ್ಳಿಯಲ್ಲೇ ನೆಲೆ ನಿಂತು ಉಳುಮೆ ಮಾಡಿಕೊಂಡು ಜೀವನ ಸಾಗಿಸುವಂತೆ ಪ್ರೇರೆಪಿಸುವುದು ಒಂದು ಪ್ರಮುಖ ಕರ್ತವ್ಯವಾಗಿತ್ತು. ಇಂಥ ಘಟನೆಗಳ ಕುರಿತು ಕೇಂದ್ರ ಸರ್ಕಾರಕ್ಕೆ ಅಂದರೆ ಅರಸನಿಗೆ ದೂರುಗಳು ಬಂದಲ್ಲಿ. ಅಲ್ಲಿನ ಪರಿಸ್ಥಿತಿ ಅವಲೋಕಿಸಲು ಅರಸನ ಕಡೆಯಿಂದ ತನಿಖಾಧಿಕಾರಿಗಳು ಬಂದು ಅಲ್ಲಿನ ಮಳೆ, ಬೆಳೆ ವೀಕ್ಷಿಸಿ ತಸಿಖೆ ನೂಡಿ ಅರಸನಿಗೆ ತಿಳಿಸುತ್ತಿದ್ದರು. ಅರಸನು ಅದಕ್ಕೆ ಪ್ರತಿಯಾಗಿ ಕೆಲವು ಷರತ್ತುಗಳೊಂದಿಗೆ ಕಂದಾಯ, ಮಾಫ ಮಾಡಿ ಫರ್ಮಾನನ್ನು ನೀಡುತ್ತಿದ್ದನು. ಇದರಿಂದ ಆ ಪ್ರದೇಶ ಜನರು ಗುಳೇ ಹೋಗುವುದನ್ನು ತಪ್ಪಿಸಲು ಸರಕಾರವು ಮಹತ್ವಪೂರ್ಣ ಕಾರ್ಯವನ್ನು ಕೈಕೊಳ್ಳುತ್ತಿತ್ತು. ಅದರಂತೆ ದೇಸಾಯಿ ಕೂಡ ಜನರಿಗೆ ತೊಂದರೆ ಆಗದಂತೆ ಅಂಥ ಪರಿಸ್ಥಿತಿ ಉಂಟಾಗದಂತೆ ಜವಾಬ್ದಾರಿ ವಹಿಸುತ್ತಿದ್ದನು.

೪.೨.೪. ವಿಶೇಷ ಸೈನಿಕ ಕರ್ತವ್ಯಗಳು

ಸೈನಿಕ ಕಾರ್ಯಾಚರಣೆಯನ್ನು ಅನ್ಯ ಶಕ್ತಿಯವಿರುದ್ಧ ಮಾಡುವಾಗ ದೇಸಾಯಿಗಳು ಸರಕಾರದಿಂದ ನೇಮಕವಾದ ಹವಾಲ್ದಾರನ ಆದೇಶದಂತೆ ಸೈನ್ಯವನ್ನು ಕ್ರೂಢೀಕರಿಸಿಕೊಳ್ಳುತ್ತಿದ್ದರು. ಅರಸನು ನೀಡಿದ ಫರ್ಮಾನನ್ನು ಓದಿ ತಿಳಿದುಕೊಂಡು ತಕ್ಷಣ ತಡಮಾಡದೇ ಸೈನ್ಯದಲ್ಲಿ ಸೇರಬಹುದಾಗಿತ್ತು. ಅದು ಎರಡು ರೀತಿಯಿಂದ ತಿಳಿದುಬರುತ್ತದೆ. ೧. ಕೆಲವು ಸಲ ರಾಜಧಾನಿಗೆ ಬಂದು ಸೈನ್ಯ ಕೂಡಿಕೊಳ್ಳುವುದು. ೨. ಅರಸು ಕಳುಹಿಸಿದ ಆ ಭಾಗದಲ್ಲಿ ಸೈನ್ಯದ ಜೊತೆಗೆ ಸೇರಿಕೊಂಡು ಸೈನಿಕ ದಂಡಾಧಿಕಾರಿಗಳೊಂದಿಗೆ ಸರಿಯಾಗಿ ವರ್ತಿಸಿ, ಜಯ ತರುವಂತೆ ಹೋರಾಡುವುದು ಒಂದಂಶದ ಕರ್ತವ್ಯವಾಗಿತ್ತು. ಉಂಬಳಿ ಪಡೆದ ಪ್ರತಿಯೊಬ್ಬ ಚಿಕ್ಕ ಪುಟ್ಟ ಹಿಡುವಳಿದಾರರೂ ಕೂಡ ಈ ಆದೇಶವನ್ನು ಪಾಲಿಸುತ್ತಿದ್ದರು.

ಇಂಥ ಸೈನ್ಯ ಅನ್ಯ ಶಕ್ತಿಯ ವಿರುದ್ಧ ಹೋರಾಡುವಾಗ ಯಾರು ವಿಶೇಷ ಸಾಧನೆ ಮಾಡುವರೋ ಅವರು ಅರಸನಿಂದ ಬಿರುದುಗಳನ್ನು ಪಡೆದು, ಇನಾಂಗಳನ್ನು ಹೆಚ್ಚಿಸಿಕೊಳ್ಳುತ್ತಿದ್ದರು. ಇಂಥ ಬಿರುದಾವಳಿಗಳು ಬಾಗಲಕೋಟ ಜಿಲ್ಲೆಯ ದೇಸಗತಿಗಳಿಗೆ ದೊರತಿವೆ. ಆದರೆ ಅವರುಗಳು ಯಾವ ಯುದ್ಧದಲ್ಲಿ ಯಾರ ವಿರುದ್ಧ ಹೋರಾಡಿದರೆಂದು ತಿಳಿದುಬರುವುದಿಲ್ಲ. ಪ್ರಾಣದ ಹಂಗು ತೊರೆದು ಹೋರಾಡಿದರೆ "ಕಿರಾಯತಿ ಫಕೀರ, ವಾ ಕಿರಾಯತಿ ಈ ಶಾಹಿ" ಎಂದು ಬಿರುದನ್ನು ನೀಡುತ್ತಿದ್ದರು.

ಈ ಭಾಗದ ಬಹುತೇಕ ದೇಸಾಯಿಗಳಲ್ಲಿ ಎಲ್ಲರೂ ಯುದ್ಧದಲ್ಲಿ ಭಾಗವಹಿಸಿದ್ದರೂ ಮೊಗಲರ ಆಕ್ರಮಣದಲ್ಲಿ ಎದುರಾಳಿಯಾಗಿ ಬಹಳ ಒಳ್ಳೆ ರೀತಿಯಿಂದ ಹೋರಾಡಿದ್ದನ್ನು ಅವರ ವಂಶಸ್ಥರಿಂದ ತಿಳಿದುಬರುತ್ತದೆ. ಅಲ್ಲದೆ "ಸುಲ್ತಾನನಿಂದ 'ವಜೀರ' ಪದವಿ ೫೦೦ ಕಾಲ್ಬಳ. ಒಂದು ಉಂಬಳಿ ಗ್ರಾಮ ಸಿಕ್ಕಿತೆಂದು ಹೇಳುತ್ತಾರೆ."[೧೨] ಈ ಕುರಿತು ಅವರು ಬರೆದಿಟ್ಟಿಂತ ದಾಖಲೆ(ಸನದು) ಮಾತ್ರ ಈ ಕುರಿತು ಸೂಚಿಸುತ್ತದೆ.

೪.೨.೫. ದೇಸಾಯರ ಬಿರುದಾವಳಿಗಳು

ದೇಸಾಯಿಗಳ ಚಾಣಾಕ್ಷತನ, ವಿಶ್ವಾಸ, ಪ್ರೀತಿ ಹಾಗೂ ಸಹಾಯ ಸಹಕಾರ ಇವೆಲ್ಲವುಗಳ ಒಟ್ಟು ಸೇವೆಯ ಪ್ರತಿಫಲವೆ ದೇಸಗತಿಗೆ ದೊರಕಿದ ಬಿರುದಾವಳಿಗಳು. ಕಾಲ ಘಟ್ಟದಲ್ಲಿ ಬಿರುದಾವಳಿಗಳನ್ನು ಪಡೆದಾಗ ದೇಸಗತಿಗಳ ಘನತೆ ಗೌರವಗಳು ಹೆಚ್ಚಾಗುತ್ತಿದ್ದವು. ಹಾಗೆ ಸುತ್ತ ಮುತ್ತೆಲ್ಲ ಒಂದೊಂದು ದೇಸಗತಿಯವರು ಒಂದೊಂದು ಸಾಹಸ ಮಾಡಿ ಉನ್ನತ ಸ್ಥಾನಕ್ಕೆ ಏರಿರಬೇಕೆನಿಸುತ್ತದೆ. ಅಂಥ ಬಿರುದಾವಳಿಗಳು ಹೀಗಿವೆ.

೧. "ರಾಜದುರ್ಗದ ದೊರೆ ರಕ್ಕಸಗಿ ಸಂಸ್ಥಾನ"[೧೩]

೨. "ಲಕ್ಷವರಹದ ದೊರೆ ರಕ್ಕಸಗಿ ಸಂಸ್ಥಾನ"[೧೪]

೩. "ಕರಿಯ ಕುಬೇರ"[೧೫] ಸೊನ್ನ ದೇಸಗತಿ

೪. "ಜಂಗಿ ಸಾವಕಾರ"[೧೬] ಸೊನ್ನದ ದೇಸಗತಿ

೫. "ಹೆಬ್ಬುಲಿ ನಾಯಕ"[೧೭] ಪಟ್ಟದಕಲ್ಲ (ಅಕ್ಕರಗಲ್ಲ) ದೇಸಗತಿ

೬. "ಗಹನ್ ದುರ್ಗ ಆನೆ ಖಾಸ್"[೧೮] ಕುಳಲಿ, ಮುಗಳಖೋಡ ಸಂಸ್ಥಾನ

೭. "ಮೂರ ಹೊಳಿ ಮಂಡಿ ಪಚ್ಚಾ"[೧೯] ಈಗಿನ ನೀರಬೂದಿಹಾಳ ದೇಸಗತಿ

೮. "ಬೈರ ಹಕ್ಕಿ ಬಹದ್ದೂರ"[೨೦] ಐಹೊಳೆ ದೇಸಾಯಿ

ಅಲ್ಲದೇ 'ಸರನಾಡ' ಚೌದರಿ, ಸರದೇಸಾಯಿ, ಸರನಾಡಗೌಡ ಎಂಬಿತ್ಯಾದಿ ಬಿರುದಾವಳಿಗಳು ಇದ್ದ ಬಗ್ಗೆ ತಿಳಿದುಬರುತ್ತವೆ. ಇಂಥವರು ಅಲ್ಲದೇ ಇತರೆ ಚಿಕ್ಕಪುಟ್ಟ ದೇಸಾಯಿಗಳೂ ಕೂಡ ಒಡೆತನ ಹೊಂದಿ ತಕ್ಕ ಮಟ್ಟಿಗೆ ಗೌರವಕ್ಕೆ ಪಾತ್ರರಾಗಿದ್ದು ಕಾಣುತ್ತದೆ.

೪.೨.೬. ಬಡತಿ

ದೇಸಾಯಿಗಳು ಏಕ ನಿಷ್ಠೆಯಿಂದ ಅರಸರ ಅಧೀನರಾಗಿದ್ದುದರಿಂದ ಕಾಲಕಾಲಕ್ಕೆ ದೊರೆತನದ ಪ್ರತೀಕವಾಗಿ ವಾರ್ಷಿಕ ನಜರಾಣಾ ಕೊಡುತ್ತ ಬಂದಿದ್ದಾರೆ. ಅಂಥವರನ್ನು ವಿಶೇಷವಾಗಿ ಗುರ್ತಿಸಿ ಆಯಾ ಭಾಗದಲ್ಲಿ ನೇಮಕವಾದ ಹವಾಲ್ದಾರ ಸಹಾಯ ಪಡೆದು ಉನ್ನತ ದರ್ಜೆಗೆ ಏರಿಸಿದ್ದಾರೆ. ಅಂಥ ಪದವಿಗಳೇ ಅವರಿಗೆ ಕೊಡಮಾಡಿದ ಬಡತಿಗಳಾಗಿವೆ. ಇಂಥ ಬಡತಿಗೆ ಅರ್ಹರಾದವರಲ್ಲಿ ಬದಾಮಿಯ, ಜಾಲಿಹಾಳ ದೇಸಾಯಿಗಳಾಗಿದ್ದಾರೆ. ಅವರಿಗೆ ಪ್ರಾಂತ್ಯಾಧಿಕಾರಿಗಳಾಗಿ ಕೊಪ್ಪಳ ತಾಲೂಕಿನ ಯಲಬುರ್ಗಾದವರೆಗೂ ಅಧಿಕಾರ ವ್ಯಾಪ್ತಿ ಪಡೆದು ಬಹುದೊಡ್ಡ ವತನ ಸಂಪಾದಿಸಿದ್ದಾರೆ.

'ಸರ' ಎಂಬುದು ಬಹುವ್ಯಾಪ್ತಿ ಹೊಂದಿದವರಿಗೆ ಕೊಡಮಾಡಿದ ಬಡತಿಯಾಗಿದೆ. ಇದು ಬಿರುದು ಅಲ್ಲ. ಸರಹದ್ದು, ಸರಪಂಚ, ಸರನಾಯಕ ಸರ ದೇಸಾಯಿ, ಸರನಾಡಗೌಡ, ಸರನಾಡ ಚೌದರಿ ಇತ್ಯಾದಿ. ಇವರಿಗೆ ಆದಿಲ್‌ಶಾಹಿ ಪೇಶ್ವೆಗಳ ಕಾಲದಲ್ಲಿ ಸಿಕ್ಕ ಹುದ್ದೆ 'ಬಡತಿ'ಯಾಗಿದ್ದರೆ ಬ್ರಿಟೀಷರ ಕಾಲದಲ್ಲಿ 'ಸರ್ ' ಎಂಬ ಗೌರವ ಸೂಚಕ ಹುದ್ದೆ ಸಿಕ್ಕಿದ್ದು ಕಂಡುಬರುತ್ತದೆ. ಆದರೆ ಬ್ರಿಟೀಷರು ನೀಡಿದ ಪದವಿ ಎಂದರೆ "ಬಹದ್ದೂರ, ರಾವಬಹದ್ದೂರ, ರಾವ ಸಾಹೇಬ"[೨೧]ಎಂಬುದಾಗಿದೆ.

೪.೩. ಸರಕಾರದಿಂದ ನೇಮಿಸಲ್ಪಟ್ಟ ಅಧಿಕಾರಿ ವರ್ಗ ಹಾಗೂ ಕರ್ತವ್ಯಗಳು

ದೇಸಗತಿಗಳಲ್ಲಿ ಹವಾಲ್ದಾರ, ಕಾರಕೂನ, ದೇಶಕುಲಕರ್ಣಿ ಪಟೇಲ ಇತ್ಯಾದಿಯವರು ಕಂಡುಬರುತ್ತಾರೆ. ಇವರು ನೇರವಾಗಿ ನೇಮಕವಾದ ಅಧಿಕಾರಿಗಳಾಗಿದ್ದಾರೆ. ಇವರೂ ಕೂಡ ಉಂಬಳಿ ಪಡೆದವರೇ ಇರುತ್ತಾರೆ. ಇವರಲ್ಲಿ ಪ್ರಮುಖರಾದವನೆಂದರೆ ಹವಾಲ್ದಾರ ಮತ್ತು ಕಾರಕೂನ.

ಹವಾಲ್ದಾರ ಮಾತ್ತು ಕಾರಕೂನರು ಮಾಮಲಾದಲ್ಲಿರುತ್ತಾರೆ. 'ಮಾಮಲಾ' ಎಂದರೆ ಕೇಂದ್ರಸ್ಥಳ ಎಂದರ್ಥ. ಇನ್ನೊಂದರ್ಥದಲ್ಲಿ ನಿಶ್ಚಯ, ಒಪ್ಪಂದ ಎಂದಾಗುತ್ತದೆ. ಇದರ ಜೊತೆಗೆ ಕಾಲಾಬ ಎಂಬುದು ಸೇರಿಕೊಂಡಿದೆ. ಕಾಲಾಬ ಎಂದರೆ ಕೋಟೆ, ವಾಡೇ ಎಂದರ್ಥವಾಗುತ್ತದೆ. ಇವೆರಡರ ವಾಕ್ಯಂಬಂಧವೆಂದರೆ ವಾಡೇಯಲ್ಲಿಯ ಪ್ರತ್ಯೇಕ ಘಟಕ ಅಧಿಕಾರಿಯಾಗಿರುವುದೇ ಮಾಮಲಾದ ಅರ್ಥವಾಗಿರುತ್ತವೆ. ಅವನಿಗೆ ಮಾಮಲಾದಾರ, ಅಥವಾ ಹವಾಲ್ದಾರ ಎಂದು ಹೇಳಬಹುದು. "ಮಾಮಲಾ, ಕಾಲಾಬ ಇವು ಅರೆಬಿಕ್ ಭಾಷೆಯಿಂದ ಬಂದಿರುತ್ತವೆ."[೨೨] ಇದನ್ನು ಅಭ್ಯಯನ ದೃಷ್ಟಿಯಿಂದ ಇಲ್ಲಿ ಗುರ್ತಿಸಿಕೊಂಡಿದೆ. ಆದಿಲ್‌ಶಾಹಿಗಳು ತಮ್ಮ ಆಡಳಿತಾತ್ಮಕ ವಿಭಜನೆಗಳನ್ನು ತೋರಿಸುವ ಸಲುವಾಗಿ ಇವನ್ನು ಪ್ರಯೋಗಿಸುತ್ತಿದ್ದರು. ಇವನ್ನು ಪರ್ಶಿಯನ್ ಫರ್ಮಾನಗಳಲ್ಲಿ ಉಲ್ಲೇಖಿಸಿದ್ದು ಕಂಡುಬರುತ್ತದೆ.

ಹವಾಲ್ದಾರ ಮತ್ತು ಸೇವಾ ಸಿಬ್ಬಂಧಿಗಳು ದೇಸಗತಿಗಳಲ್ಲಿ ಇರುತ್ತಿದ್ದರು. ಅವರು ಹಲವಾರು ಅಧಿಕೃತ ಕರ್ತವ್ಯಗಳನ್ನು ಕೈಗೊಳ್ಳುತ್ತಿದ್ದರು. ಹಾಗೆ ಒಂದು ಜಿಲ್ಲೆಯಿಂದ ಒಂದು ಜಿಲ್ಲೆಗೆ ಇವರಿಗೆ ವರ್ಗಾವಣೆಯೂ ಆಗುತ್ತಿತ್ತು. ಯಾವುದೇ ಪರಗಣಕ್ಕೆ ವರ್ಗಾವಣೆ ಆದರೂ ಆಡಳಿತಾತ್ಮಕ ಕರ್ತವ್ಯಗಳಲ್ಲಿ ಯಾವ ಮೂಲಭೂತ ವ್ಯತ್ಯಾಸ ಇರಲಿಲ್ಲ. ರಕ್ಷಣೆ ಹಾಗೂ ಹಣಕಾಸಿನ ಉದ್ದೇಶಕ್ಕಾಗಿ (ಕಂದಾಯ ಸಲುವಾಗಿ) ಅಲ್ಲಿ ಮೇಲ್ವಿಚಾರಣೆಗೆ ಇರುತ್ತಿದ್ದರು.

ಮಿಲಿಟರಿ ಮಾತ್ರ ಹವಾಲ್ದಾರನ ಉಸ್ತುವಾರಿಯಲ್ಲಿತ್ತು. ಅರಸನಿಗೆ ಮಿಲಟರಿ ಬೇಕಾದಲ್ಲಿ ಹವಾಲ್ದಾರನು ಒಪ್ಪಂದ ಮಾಡಿಕೊಂಡು ಸರಬರಾಜು ಮಾಡುತ್ತಿದ್ದನು. ಅವನ ಒಪ್ಪಿಗೆಯಂತೆ ದೇಸಾಯಿ ಸೈನಿಕರನ್ನು ಕಳಿಸಲು ಸಮ್ಮತಿ ನೀಡುತ್ತಿದ್ದನು. ಈ ಭಾಗದಲ್ಲಿದ್ದ ಹವಾಲ್ದಾರರ ಹೆಸರುಗಳು ಈ ರೀತಿ ಇವೆ.

"೧. ಇಕಲಾಸ್ ಖಾನ್ ೨. ಖಾನ್ ಹಬೀಬಶಾ ಶರ್ಜ ೩. ಕರೀಮಖಾನ್ ಕೆಲವಡಿ"

ಇವರಲ್ಲದೆ ವಂಶಪರಂಪರಾಗತ ಅಧಿಕಾರಿಗಳು ದೇಸಗತಿ ಆಡಳಿತದಲ್ಲಿ ಇರುತ್ತಿದ್ದರು. ಈ ಅಧಿಕಾರಿಗಳು ಮುಸ್ಲಿಂ ಅರಸೊತ್ತಿಗೆಗಿಂತ ಪೂರ್ವದಲ್ಲೆ ಅಸ್ತಿತ್ವದಲ್ಲಿದ್ದರು. ವಾಸ್ತವವಾಗಿ "ಪಾಟೀಲ, ಕುಲಕರ್ಣಿ ಇವರು ಮಹಾರಾಷ್ಟ್ರದ ದಕ್ಷಿಣದ ಪಶ್ಚಿಮ ಭಾಗದಲ್ಲಿ ಇದ್ದ ಬಗ್ಗೆ ಸಂಶೋಧನೆಯಾಗಿದೆ."

ವಂಶ ಪರಂಪರಾಗತವಾಗಿರುವ ಅಧಿಕಾರಿಗಳ ಅಧಿಕಾರಗಳಲ್ಲೇನೂ ಭಿನ್ನತೆ ಕಾಣುವುದಿಲ್ಲ. ಸ್ಥಾನೀಕ ವಿಶೇಷ ಅಧಿಕಾರಗಳು ಇರದೇ ಇರುವುದರಿಂದ ಅವರ ಕುರಿತು ಇಲ್ಲಿ ಚರ್ಚೆ ನಡೆಸಿಲ್ಲ. ಪ್ರಮುಖವಾಗಿ ದೇಸಾಯಿಯ ಅಧಿಕಾರವನ್ನಷ್ಟೇ ಇಲ್ಲಿ ಗುರ್ತಿಸಿಕೊಂಡು ನಿರೂಪಿಸಿಕೊಳ್ಳಲಾಗಿದೆ.

ಮುಸ್ಲಿಂ ಅವಧಿಯಲ್ಲಿ ವಂಶಪರಂಪರಾಗತವಾಗಿರುವ ಅಧಿಕಾರಿಗಳ ಕರ್ತವ್ಯಗಳು ಸಂಭಾವನೆ ವಿಧಾನಗಳು ಬೇರೆಯಾಗಿವೆ. ಅವರ ಮಿರಾಸ್ ಅಥವಾ ವತನಗಳಲ್ಲಿ ಕಾಣಬಹುದಾಗಿದೆ. ದೇಸಾಯಿಗಳ

ಸಂಭಾವನೆ ರೂಪದಲ್ಲಿ ಇನಾಂ ಗ್ರಾಮವೇ ಆಗಿರುತ್ತದೆ. 'ಇನಾಂ' ಎಂದರೆ ಸತತವಾದಂತಹ ಕಾಣಿಕೆಯಾಗಿದೆ. ಇನಾಂ ಎಂಬುದು ಅರೇಬಿಕ್ ಭಾಷೆಯ ಶಬ್ದವಾಗಿದೆ.

ಆದಿಲ್‌ಶಾಹಿಯ ಅರಸರ ಅವಧಿಯಲ್ಲಿ ಪ್ರತಿಯೊಬ್ಬ ವಂಶಪರಂಪರಾಗತ ಅಧಿಕಾರಿಗಳು, ಅವರ ಕಛೇರಿ ಮತ್ತು ಇನಾಂನ್ನು ದೇಸಾಯಿ ಪಡೆದುಕೊಳ್ಳುತ್ತಿದ್ದರು. ಉಂಬಳಿ ಪಡೆದಂತಹ ವ್ಯಕ್ತಿ ವಂಶಪರಂಪರಾಗತವಾಗಿರುವ ಅಧಿಕಾರಿಗಳ ಸಂಭಾವನೆಯನ್ನು ಹೆಚ್ಚು ಮಾಡುವ ಅಥವಾ ಖಾಲಿ ಇರುವ ಜಾಗಗಳಲ್ಲಿ ಹೊಸದಾಗಿ ನೇಮಕ ಮಾಡುವ ಮತ್ತು ಈ ರೀತಿ ಕೊಡಲ್ಪಟ್ಟ ಲಾಭಗಳನ್ನು ಸುಲ್ತಾನರಿಂದ ಒಪ್ಪಿಗೆ ಪಡೆದುಕೊಳ್ಳುವ ಅಧಿಕಾರವನ್ನು ಹೊಂದಿದ್ದರು. ಹಾಗೆ ಅಧಿಕಾರಿಗಳು ಅರಸರಿಗೆ ವಿಧೇಯಕರಾಗಿರಬೇಕು. ಕೆಲವು ಸಂದರ್ಭಗಳಲ್ಲಿ ಅರಸನು ನೇರವಾಗಿ ಈ ಪ್ರಯೋಜನಗಳನ್ನು ಒದಗಿಸುತ್ತಿದ್ದನು.

ನೌಕರಶಾಹಿಗಳಾದ ಪಾಟೀಲ ಕುಲಕರ್ಣಿ ದೇಶಕುಲಕರ್ಣಿ, ಮಹಾಜನ್ ಇವರಿಗೆ ಹಕ್ಕುಗಳು ಕಡಿತವಾದಾಗ ನೇರವಾಗಿ ಅರಸನಿಗೆ ಮನವಿ ಮಾಡಬಹುದಾಗಿತ್ತು. ಮತ್ತು ಅರಸನು ಇವರ ಹಕ್ಕುಗಳನ್ನು ಪುನಃ ಕೊಟ್ಟು ಅವುಗಳನ್ನು ರಕ್ಷಿಸುತ್ತಿದ್ದನು. ಇಂಥ ಒಂದು ಘಟನೆಯನ್ನು ಉದಾಹರಿಸುವುದಾದರೆ ಮನ್ನಿಕೇರಿ ದೇಸಾಯಿ ಬಾಹುಬಂದರಿಗೆ ವೈಯಕ್ತಿಕ ದ್ವೇಷ ಅಸೂಯೆಗಳಿಂದ ಹಕ್ಕುಗಳು ಕಡಿಮೆಯಾಗಿದ್ದವು. ಅವನ್ನು ಮತ್ತೆ ಪಡೆದುಕೊಂಡದ್ದು ಅವರು ಬರೆದಿಟ್ಟ ಕೈಫಿಯತ್ತಿನಿಂದ ತಿಳಿದುಬರುತ್ತದೆ. ಒಟ್ಟಾರೆಯಾಗಿ ಈ ವಂಶಪಾರಂಪರ್ಯ ಅಧಿಕಾರಿಗಳು ಸ್ಥಳೀಯ ನೌಕರಿ ಶಾಹಿಯ ಸೇವಕರಲ್ಲ; ಅವರು ಅರಸನ ಸೇವಕರು.

ವಂಶಪರಂಪರಾಗತವಾಗಿರುವ ಈ ಅಧಿಕಾರಗಳ ಬಗ್ಗೆ ಇನ್ನಷ್ಟು ಮಾಹಿತಿ ದೊರಕುತ್ತದೆ. ಅವರಿಗೆ ಕೊಡಮಾಡುವ ಉಂಬಳಿಗಳು ವಾಸ್ತವಿಕವಾಗಿ ಹೆಸರಿಗೆ ಮಾತ್ರವಾಗಿದ್ದವು. ಆದರೆ ಅರಸನು ಕೊಡಮಾಡಿದ ಫರ್ಮಾನಗಳಲ್ಲಿ ದೃಢೀಕರಿಸಿದ್ದು ಈ ರೀತಿ ವಿವರಣೆ ಸಿಗುತ್ತದೆ. ಇವನ ನಂತರ ಇವನ ಮಗನಿಗೆ, ಮೊಮ್ಮಗನಿಗೆ ಮುಂದುವರಿಯುವಂತೆ ಆದೇಶಿಸಿದಲ್ಲದೆ ಎಂದೂ ಬದಲಾವಣೆ ಆಗದಂತೆ ಸೂರ್ಯಚಂದ್ರರಿರುವವರೆಗೂ ವಂಶದಿಂದ ವಂಶಕ್ಕೆ ವಂಶಪರಂಪರಾಗತವಾಗಿ ಕೊಡ ಮಾಡಿದೆ. ಇಂಥ ಸಾಂಪ್ರದಾಯಿಕ ನಿಬಂಧನೆಗಳನ್ನು ನೀಡಿರುವುದರಿಂದ, ಅಧಿಕಾರಿಗಳು ವಿಧೇಯಕರಾಗಿರುವ ಭಾವನೆಯಿಂದಲೇ ಅವನ್ನು ರಾಜ ನಿಷ್ಠೆಯಿಂದ, ಭಕ್ತಿಪೂರ್ವಕವಾಗಿ ರಾಜ ಪ್ರಗತಿಯ ಶುಭ ಇಚ್ಛೆಗಳು, ಉಪ್ಪಿನ ಋಣವನ್ನು ತೀರಿಸುವುದು, ಅರಸುಗಳ ಖಜಾನೆಗೆ ನಿರ್ದಿಷ್ಟವಾದಂತಹ ಕಂದಾಯ, ತೆರಿಗೆ, ಕಾಣಿಕೆಯನ್ನು ಒಪ್ಪಿಸುವುದು ಮತ್ತು ತಮ್ಮ ಇನಾಂಗಳ ಮೇಲೆ ಕೂಡ ಕೊಡುವುದು ಹಾಗೇ ರಾಜ ಹೇಳಿದ ಕರ್ತವ್ಯಗಳನ್ನು ನೇರವೇರಿಸುವುದು ಪ್ರಮುಖವಾಗಿ ತಿಳಿದುಬರುತ್ತದೆ.

ವತನ(ಮಿರಾಸ್) ಇದು ವಂಶಪಾರಂಪರ್ಯವಾಗಿ ಬಂದಿದ್ದಾಗಿವೆ. ಇದನ್ನು ವಿಭಜಿಸಬಹುದು. ಮಾರಾಟ ಮಾಡಬಹುದು. ಸರ್ವ ಇನಾಂ ಎಂಬುದು ಸ್ವತಂತ್ರವಾಗಿರುವುದರಿಂದ ಅದು ಕೂಡ ನಿರ್ಬಂದಿತವಿಲ್ಲದ ಜಮೀನಾಗಿತ್ತು. ಆದರೆ ಇನಾಂ ಭೂಮಿಯನ್ನು ಮಾರಲು ಬರುತ್ತಿರಲಿಲ್ಲ. ಅದರ ಮೇಲೆ 'ಜೂಡಿ' ಇರುವುದರಿಂದ ಅದು ಸರಕಾರದ ಭೂಮಿಯೇ ಆಗಿತ್ತು. ಒಟ್ಟಾರೆಯಾಗಿ ವಂಶಪಾರಂಪರ್ಯ ಅಧಿಕಾರಿಗಳು ದೇಸಾಯಿಗೆ, ಹಾಗೂ ಅರಸರಿಗೆ ನಿಷ್ಠರಾಗಿದ್ದು ತಮ್ಮ ಪಾಲಿನ ಕರ್ತವ್ಯಗಳನ್ನು ನಿರ್ವಹಿಸುತ್ತಿರುವುದು ಪ್ರಮುಖವಾಗಿದ್ದುದೆ ಆಗಿದೆ.

೪.೩.೧. ದೇಸಗತಿಯಲ್ಲಿದ್ದ ಸರಕಾರೇತರ ಅಧಿಕಾರಿಗಳು

ಆಡಳಿತಾಧಿಕಾರಿಗಳು

೧. ಮುಖ್ತ್ಯಾರ — ೨. ಖಾಸಗಿ ಕಾರಬಾರಿ

೩. ತಳವಾರರು — ೪. ವಾಲೀಕಾರರು

೫. ಪಟ್ಟೇವಾಲರು — ೬. ಬಾರಕೇರರು

೭. ಪಾಗನೀಸ್ — ೮. ಶಿಲೇದಾರರು

೯. ನೌಬತ್ತದಾರರು — ೧೦. ತೋಫಖಾನೆಯವರು

೧೧. ಕುದರಿ ಸ್ವಾರಿಗಳು — ೧೨. ಬಾರಾಬಲೂತೆದಾರರು

೧೩. ಮಾಹರ ಜನಾಂಗದವರು

೧. **ಮುಖ್ತ್ಯಾರರು :** ಮುಖ್ತ್ಯಾರರು ಇಬ್ಬರಿರುತ್ತಾರೆ. ಅವರೆಂದರೆ ಮುಖ್ತ್ಯಾರ ನುತ್ತು ಒಟ್ಟ ಮುಖ್ತ್ಯಾರ. ಕೆಲಸದಲ್ಲಿ, ಹಕ್ಕುಗಳಲ್ಲಿ ಇವರಿಬ್ಬರಲ್ಲೂ ಭಿನ್ನತೆ ಇದೆ.

ಆಡುಭಾಷೆಯಲ್ಲಿ ಮುಖತ್ಯಾರ>ಮುಗುತ್ಯಾರ>ಮುಕ್ತ್ಯಾರ ಎಂದು ಬಳಸುತ್ತಾರೆ. ಮೂಲತಃ ಮುಖ್ಯಾತರ ಎಂದು ಹಿರಿಯ ತಲೆಮಾರಿನವರಿಂದ ತಿಳಿದುಬರುತ್ತದೆ. ಮಕ್ತೆ>ಮುಕ್ತೆ>ಮುಖತೆ ಆಗಿರುವ ಸಾಧ್ಯತೆಯಿದೆ. ಮಕ್ತೆ=ಎಲ್ಲವನ್ನು ಒಟ್ಟಿಗೆ ಹಿಡಿದವ. ಅಥವಾ ಗುತ್ತಿಗೆದಾರ ಎಂಬರ್ಥವಾಗುತ್ತದೆ.

ಮುಖ್ತ್ಯಾರ ಎಂದರೆ ಮೂಲ ಯಜಮಾನ ಮಾಡುವ ಎಲ್ಲ ಕೆಲಸಗಳನ್ನು ನಿರ್ವಹಿಸಲು ನೇಮಿಸಿಕೊಂಡ ವ್ಯಕ್ತಿ. ಇನ್ನೊಂದರ್ಥದಲ್ಲಿ ಯಾರು ತಮ್ಮ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಿಲ್ಲವೋ ಅಂಥವರು ಮುಖ್ತ್ಯಾರನ್ನು ನೇಮಿಸಿಕೊಂಡು ನಿರ್ವಹಿಸುತ್ತಿದ್ದರು. ಇಂಥವರು ದೇಸಗತಿಯಲ್ಲಿ ನೇಮಕವಾಗಿದ್ದಾರೆ. ಅವರ ಮುಖಾಂತರ ಆಡಳಿತ ನಡೆಸಲಾಗುತ್ತಿತ್ತು.

ಖಾಸಗಿ ಕಾರಬಾರಿಗಳು : ದೇಸಗತಿಗಳಲ್ಲಿ ದೇಸಾಯಿಗಳ ಆಪ್ತ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಾರೆ.

ತಳವಾರರು : ತಳವಾರರಿಗೆ ತಲವಾರರು ಎಂದು ಕರೆಯುತ್ತಾರೆ. ಇವರು ಮಾಡುವ ಪ್ರಮುಖ ಕೆಲಸದಿಂದಲೇ ತಲವಾರ>ತಳವಾರ ಎಂಬುದಾಗಿ ತೋರುತ್ತದೆ. ದೇಸಾಯಿಯ ಎಡಬಲಗಳಲ್ಲಿ ಖಡ್ಗ ಹಿಡಿದು ರಕ್ಷಣೆ ಮಾಡುವವರು. ಅಲ್ಲದೆ ಊರ ಕಾವಲುಗಾರರಾಗಿ ಪಹರೆ ಮಾಡುವುದು ಇವರ ಕೆಲಸವಾಗಿದೆ.

ಪಟ್ಟೆವಾಲರು : ದೇಸಗತಿಯ ವಾಡೇದ ಬಾಗಿಲಿನಿಂದ ಹಿಡಿದು ಅರಮನೆ ಒಳಗಡೆ ಸದರಿನ ಎಡಬಲಗಳಲ್ಲಿ ಕಂಡುಬರುವವರೇ ಇವರು. ದೇಸಗತಿಯ ಪಟ್ಟೆಗಳನ್ನು ಎದೆಮೇಲೆ ಧರಿಸಿಕೊಂಡು ವಿಶೇಷ ಕಾರ್ಯಕ್ರಮಗಳಲ್ಲಿ ಎಡಬಲಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಇವರೂ ದ್ವಾರಪಾಲಕರು ಹೌದು ಗೌರವ ಸೂಚಿಸುವವರೂ ಹೌದು.

ಬಾರಕೇರ : ಮೇಣೆ ಹೊರುವವರೇ ಇವರು. ದೇಸಗತಿಯ ಸ್ತ್ರೀಯರನ್ನು ವಿಹಾರಕ್ಕಾಗಿ ಕರೆದೊಯ್ಯುವುದೇ ಇವರ ಪ್ರಮುಖ ಕೆಲಸವಾಗಿತ್ತು.

ಪಾಗನಿಸ್ : ಇವರು ಕುದರೆ ವಾಲಾಗಳು. ದೇಸಾಯಿಯ ಕುದುರೆ ವ್ಯವಸ್ಥಾಪಕ. ಕುದುರೆ ಮೇಯಿಸುವುದು ಅದರ ಯೋಗಕ್ಷೇಮ ನೋಡುವುದು, ದೇಸಾಯಿಗೆ ಕುದುರೆ ಅವಶ್ಯವಾಗಿ ಬೇಕಾದಾಗ ಒದಗಿಸಿಕೊಡುವುದು.

ಶಿಲೇದಾರ ಮತ್ತು ನೌಬತ್ತದಾರರು : ಇವರು ವಿಶೇಷ ಕೆಲಸ ಮಾಡುವವರೇ ಆಗಿದ್ದಾರೆ. ಇವರ ಕೆಲಸ ಅರಮನೆಯಲ್ಲಿ ನಗಾರಿ ಬಾರಿಸುವುದು ಆಗಿರುತ್ತದೆ.

ತೋಫಖಾನೆಯವರು : ದೇಸಗತಿ ಸರಹದ್ದಿನಲ್ಲಿ ತೋಫ(ಗಡ)ಗಳನ್ನು ಕಾಯುವ ಜನರೇ ಇವರು. ಇವರ ಕಾಯಕದ ಮೇರೆಗೆ ಇವರ ಕುಲನಾಮ ಬಂದಿದ್ದು ಕಂಡುಬರುತ್ತದೆ.

ಕುದುರೆಸ್ವಾರಿಗಳು : ಇವರು ಸೈನಿಕ ಕಾಲ್ದಳ ಕುದುರೆದಳದವರು ಪ್ರತಿಯೊಂದು ದೇಸಗತಿಯಲ್ಲಿ ನೂರಾರು ಜನ ಕಾಣಬರುತ್ತಾರೆ.

ಬಾರಾ ಬಲೂತೆದಾರರು : ಇವರು ೧೨ ಜನ ಕುಶಲಕರ್ಮಿಗಳು ಇವರೂ ಕೂಡ ದೇಸಗತಿಯಿಂದ ಇನಾಂ ಪಡೆದ ಬಿಟ್ಟಿ ಚಾಕರಿದಾರರು ಆಗಿರುತ್ತಾರೆ.

ಮಾಹರ ಜನಾಂಗ : ಇಡೀ ವಾಡೇದಲ್ಲಿ ಸುಮಾರು ಪಾಲು ಕೆಲಸ ಮಾಡುವವರೇ ಇವರು. ದಿನದ ಇಪ್ಪತ್ನಾಲ್ಕು ತಾಸು ಕೆಲಸ ಮಾಡುವವರು ಇವರಾಗಿದ್ದಾರೆ. ಅಲ್ಲದೆ ವಂಶಪಾರಂಪರ್ಯವಾಗಿ ದುಡಿಯುತ್ತಿರುವರು.

ಹೀಗೆ ದೇಸಗತಿಗಳಲ್ಲಿ ಇವರಲ್ಲದೆ ಇನ್ನೂ ಅನೇಕ ಜನಾಂಗಗಳ ಪಟ್ಟಿಯೂ ಸಿಗುತ್ತದೆ. ಅವರುಗಳೆಲ್ಲ ದೇಸಗತಿಯ ವಿಶ್ವಾಸಿಕರಾಗಿ, ಪ್ರಾಮಾಣಿಕರಾಗಿ ಕೆಲಸ ನಿರ್ವಹಿಸುವ ಸರಕಾರೇತರ ವರ್ಗವಾಗಿದೆ. ಇವರೆಲ್ಲರ ಸಹಕಾರದಿಂದ ರಾಜಸಂಸ್ಕೃತಿಯನ್ನು ಅಳವಡಿಸಿಕೊಂಡು ರಾಜರಂತೆ ಮೆರೆದವರು ಈ ದೇಸಾಯಿಗಳು.

೪.೪. ದೇಸಗತಿ ಆಡಳಿತದಲ್ಲಿರುವ ವಿವಿಧ ಇಲಾಖೆಗಳು

ಕಛೇರಿ (office) : ದೇಸಗತಿ ಆಡಳಿತ ನಡೆಸಲು ಒಂದು ಭಾಗವು ಅರಮನೆ(ವಾಡೇ)ಯಲ್ಲಿಯೇ ಇರುತ್ತದೆ. ಅದಕ್ಕೆ ಕಛೇರಿ ಎಂದೇ ಕರೆಯುತ್ತಿದ್ದರು. ಇಂದಿನ ಆಡಳಿತ ಕಛೇರಿಗೂ ಅಂದಿನ ಕಛೇರಿಗೂ ಬಹುವ್ಯತ್ಯಾಸ ಇತ್ತು. ದೇಸಗತಿ ಒಳಗಡೆ ಅಂದರೆ ಕಛೇರಿಯಲ್ಲಿ ಸಾರ್ವಜನಿಕರಿಗೆ ಅವಕಾಶವಿರುತ್ತಿರಲಿಲ್ಲ. ಕೆಲವು ಸಂದರ್ಭಗಳಲ್ಲಿ ನ್ಯಾಯತೀರ್ಮಾನಕ್ಕೆ ಸದರ ಕಟ್ಟೆಗೆ ಮಾತ್ರ ತಪ್ಪಿತಸ್ಥರು ಬರುತ್ತಿದ್ದರು.

ಕಛೇರಿಯಲ್ಲಿ ನಾಲ್ಕಾರು ಜನರು ಕುಲಕರ್ಣಿಗಳಿದ್ದು ಎಲ್ಲರೂ ಒಂದೊಂದು ಕೆಲಸ ನೋಡಿಕೊಳ್ಳು ತ್ತಿದ್ದರು. ದೇಸಗತಿಯ ಸುಗಮ ಆಡಳಿತ ಹಾಗೂ ಅಭಿವೃದ್ಧಿಕಾರ್ಯಗಳಿಗೆ ಸಹಾಯಕವಾಗು ವಂತೆ ಕೆಲಸಕ್ಕನುಗುಣವಾಗಿ ಇಂದಿನ ಇಲಾಖೆಗಳಂತೆ ಅಂದು ವಿವಿಧ ಇಲಾಖೆಗಳು ಅಸ್ತಿತ್ವದಲ್ಲಿದ್ದವು. ಅವುಗಳಿಗಾಗಿ ನಿರ್ದಿಷ್ಟ ಕೆಲಸ ನೋಡಿಕೊಳ್ಳಲು ಲೆಕ್ಕಪತ್ರವಿಡಲು ಸೇವಕ ವರ್ಗವಿತ್ತು.

ದೇಸಗತಿ ಕಛೇರಿಯಲ್ಲಿದ್ದ ಅನೇಕ ಕಾಗದ ಪತ್ರಗಳ ಕೋಣೆಗೆ ದಪ್ತರ ಕೋಣೆಯೆಂದು ಕರೆಯುತ್ತಾರೆ. ಇದು ಸದರಿನ ಎಡಭಾಗದಲ್ಲಿರುತ್ತಿತ್ತು. ಪತ್ರಾಗಾರ, ಅಭಿಲೇಖಾಲಯ ಎಂದು ಮುಂತಾಗಿ ತಿಳಿದುಬರುತ್ತದೆ. ಅದರಲ್ಲಿದ್ದ ಕೆಲವು ದಾಖಲೆಗಳನ್ನು ಈ ರೀತಿ ಹೆಸರಿಸಬಹುದು.

೧. ಖಾತೆ ಕೀರ್ದಿಗಳು

೨. ಕಬೂಲಾಯತ ಪತ್ರಗಳು

೩. ಬಾಂಡ್ ಪೇಪರಗಳು

೪. ಕಂದಾಯ ವಸೂಲಿ ಪತ್ರಗಳು

೫. ಇತರೆ ಪತ್ರಗಳು

ಹೀಗೆ ಒಂದು ಉದ್ದಪಟ್ಟಿಯೇ ತಯಾರಾಗುತ್ತದೆ. ಇವುಗಳಲ್ಲಿಯೇ ವಿವಿಧ ದಪ್ತರಗಳ ಆಡಳಿತಕ್ಕೆ ಸಂಬಂಧಿಸಿದ್ದು, ಆರ್ಥಿಕ, ರಾಜಕೀಯ, ನೌಕರಶಾಹಿ ಸಾಂಸ್ಕೃತಿಕವಾಗಿರುವ ಪತ್ರಗಳನ್ನು ವಿಭಜನೆ ಮಾಡಬಹುದು.

ಒಂದು ದೇಸಗತಿ ಮನೆತನದಲ್ಲಿ ಬರೆದಿಟ್ಟಂತಹ ಕೈಫಿಯತ್ತಿನಿಂದ ಕಛೇರಿ ಕಾಗದಗಳನ್ನು ಪರಿಶೀಲಿಸಿ ಆಯಾ ಶಾಖೆಗೆ ವರ್ಗೀಕರಿಸಿಕೊಂಡು ಇಲ್ಲಿ ವಿಭಜಿಸಿದೆ.

೪.೪.೧. ದಪ್ತರ ಶಾಖೆ

ದಪ್ತರ = ಕಛೇರಿಯ ಕಾಗದಪತ್ರ, ದಾಖಲೆ, ಲೆಕ್ಕಪತ್ರ, ವ್ಯವಸ್ಥಿತವಾಗಿ ಜೋಡಿಸಿಟ್ಟ ಕಾಗದ ಪತ್ರಗಳ ಕಟ್ಟು. ದಾಖಲೆ ಪುಸ್ತಕ, ರಿಜಿಸ್ಟರುಕಾರ್ಯಾಲಯ, ಕಛೇರಿ ಅಥವಾ ದಪ್ತರ ಖಾನೆ ಎಂದರ್ಥವಾಗುತ್ತದೆ. ಇಲ್ಲಿರುವ ವಿವಿಧ ದಾಖಲೆಗಳನ್ನು ವ್ಯವಸ್ಥಿತವಾಗಿ ವಿಭಾಗೀಕರಿಸಿದೆ.

ದಪ್ತರ ಶಾಖೆ

- ೧. ಸುಂಕದ ದಪ್ತರ
  - ಜೂಡಿ ದಪ್ತರ
- ೨. ಜಮೀನಗಳ ದಪ್ತರ
  - ಆಯಾ ಭಾಗದ ಜಮೀನ ದಪ್ತರ
    - ಸರ್ವಮಾನ್ಯ ದಪ್ತರ
    - ಅಪ್ಪಗೋಳ ಪಾವ ದಪ್ತರ
    - ತಂಗಿ ಪಾವ ದಪ್ತರ
  - ಅಡವಿ ಜಮೀನ ದಪ್ತರ
- ೩. ಅಧಿಕಾರಿಗಳ ನೇಮಕದಪ್ತರ
  - ಸರಕಾರಿ ನೇಮಕ ಅಧಿಕಾರಿಗಳ ದಪ್ತರ
  - ಸರಕಾರೇತರ ಅಧಿಕಾರಿಗಳ ನೇಮಕ ರಿಜಿಸ್ಟರ್
  - ಇತರೆ
    - ಹೊಲೆಯಾಳು ದಪ್ತರ
    - ಸೇತನದಿಗಳ ದಪ್ತರ
- ೪. ರಕ್ಷಣಾ ಖಾತೆ ದಪ್ತರ
  - ಹತಾರೆಗಳ ದಪ್ತರ
  - ಭರ್ಚಿಜಂಬೆಗಳ ದಪ್ತರ

೫. ಇತರೆ

- ದಾನದ ದಪ್ತರ
  - ಸೇತನದಿ ದಪ್ತರ
  - ಧರ್ಮದಯಾ ದಪ್ತರ
  - ದೇವದಯಾ ದಪ್ತರ
- ಗಣತಿ ದಪ್ತರ
  - ಜನಗಣತಿ
  - ದನಗಣತಿ
  - ಇತರೆ

ಹೀಗೆ ಈ ಎಲ್ಲ ದಾಖಲೆಗಳನ್ನು ಬೇರೆ ಬೇರೆ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರು. ಅದನ್ನು ನಿರ್ವಹಿಸಲು ಆಯಾ ಪ್ರದೇಶದ ವ್ಯಾಪ್ತಿಯ ಮೇಲೆ ಕೆಲವು ಗ್ರಾಮಗಳ ಒಂದು ಸಮತ್‌ನ್ನು ಮಾಡಿ ಒಂದು ಕಡೆಗೆ ಪರಗಣದ ಭಾಗವೆಂದು, ಮತ್ತೊಂದೆಡೆ ಕಸಬೆ ಭಾಗವೆಂದು ಹಾಗೂ ಮೌಜೆ ಭಾಗವೆಂದು ದಾಖಲಿಸಿದ್ದು ಇದೆ. ಕಸಬೆ, ಮೌಜೆಗಳು ಕೂಡ ಆಡಳಿತದ ಒಂದು ಚಿಕ್ಕ ಭಾಗಗಳಾಗಿವೆ. ಹೀಗೆ ವಿಸ್ತಾರವಾದ ಪ್ರದೇಶದ ಮೇಲೆ ಒಬ್ಬ ವ್ಯಕ್ತಿ ಆಡಳಿತ ನಡೆಸುವುದು ಕಷ್ಟದ ಕೆಲಸ. ಇಂದೂ ಕೂಡ ಆಡಳಿತದ ವಿವಿಧ ನೆಲೆಗಳಲ್ಲಿ ಹಂಚಿಕೆಯಾಗಿ ಅವುಗಳಿಗೆ ಅಧಿಕಾರಿಗಳನ್ನು ನೇಮಿಸಿ ಆಡಳಿತ

ಸುಗಮಗೊಳಿಸಿದ್ದಾಗಿದೆ. ಹಾಗೆ ಮಧ್ಯಕಾಲಿನ ಸಂದರ್ಭದಲ್ಲಿಯೂ ಕೂಡಾ ಪ್ರಾಂತಾಧಿಕಾರಿಗಳು, ಪರಗಣಾಧಿಕಾರಿಗಳು, ಕಸಬಾಧಿಕಾರಿಗಳು ಹಾಗೂ ಗೌಡಕುಲಕರ್ಣಿಗಳು ಅಧಿಕಾರಿಗಳಾಗಿ ಕಂಡುಬರುತ್ತಾರೆ. ಮೊದಮೊದಲು ಪರಗಣ ಜಿಲ್ಲೆಯಾಗಿ, ಪೇಶ್ವೆಗಳ ಕಾಲದಲ್ಲಿ ತಾಲೂಕಾಗಿ, ಮತ್ತೆ ಬ್ರಿಟೀಷರ ಕಾಲದಲ್ಲಿ ಪರಿವರ್ತನೆ ಹೊಂದಿತು. ಹೀಗೆ ಆಡಳಿತದ ವಿವಿಧ ಹಂತಗಳಲ್ಲಿದ್ದ ದಾಖಲೆಗಳು ಕೂಡ ದೇಸಗತಿ ಅಧ್ಯಯನಕ್ಕೆ ಆಧಾರವಾಗಿ ನಿಲ್ಲುತ್ತವೆ.

೪.೪.೧.೧. ಆಡಳಿತದಲ್ಲಿ ಬಳಸುತ್ತಿದ್ದ ಕೆಲವು ಪ್ರಮುಖ ಪದಗಳು

ದೇಸಗತಿ ಆಡಳಿತದಲ್ಲಿ ಕಾಗದ ಪತ್ರಗಳಲ್ಲಿ ಕೆಲವು ಮಹತ್ವದ ಪದಗಳು ಬಳಕೆಯಾಗಿವೆ. ಅವುಗಳನ್ನು ಈ ಕೆಳಗಿನಂತೆ ಗುರ್ತಿಸ ಬಹುದಾಗಿದೆ.

ದಸ್ಕತ್ತು	:	ದಸ್ತೂರ, ದಸ್ತಾವೇಜ ದಾಖಲೆ
ದಸ್ತೂರ	:	ರುಜು ಅಥವಾ ಸಹಿ
ದಸ್ತಗಿರಿ	:	ಸೆರೆ ಹಿಡಿಯುವುದು; ಕೈದು; ಬಂಧನ
ದಸ್ತಾವೇಜ	:	ಪ್ರಮಾಣ ಭೂತವಾದ ಕಾಗದ ಪತ್ರ; ದಾಖಲೆ ಪತ್ರ, ಸಲ್ಲಿಕೆ ಚೀಟಿ; ರಸೀದ.
ದಾಖಲೆ	:	ಲೆಕ್ಕಕ್ಕೆ ಸೇರಿದುದು
ಪಾವ	:	೧/೪ ಎಂದರ್ಥ
ಹಳೇ ವತನ	:	ಮೊದಲು ಸಿಕ್ಕ ವತನ
ಹಳೆ ಶರ್ತಿ	:	ಹಿಂದಿನ ನಿಯಮಾವಳಿ
ತಕ್ತಾ/ತಕ್ತೆ	:	ಬರೆದಿಟ್ಟ ದಪ್ತರ
ವಹಿವಾಟ	:	ಉಪಭೋಗಿಸುವುದು
ಪೋಟ ಇನಾಂ	:	ಅಣ್ಣ ತಮ್ಮಂದಿರು ಉಪಯೋಗಿಸುವ ಇನಾಂ
ದರೋ ಬಸ್ತ	:	ಹಕ್ಕಾಗಿ ಪಡೆದುಕೊಂಡದ್ದು
ಮಿಳಕತಿ	:	ಕೂಡಿಸು
ಖಾನೇ ಸುಮಾರಿ	:	ಗಣತಿ
ಸಂಪಾದಕರು	:	ಜಮೀನ (ಗಳಿಸಿಕೊಂಡವರು) ಪಡೆದವರು
ಸಂವತಿ	:	ಎರಡನೇಯವಳು
ತಪಶೀಲ	:	ವಿವರಣೆ
ಚಾಕರಿ	:	ಸೇವೆ ಮಾಡು

ವಿಕ್ರಿ : ಮಾರಾಟ

ತಾಕೀದ : ಎಚ್ಚರಿಕೆ

ಮಕ್ತೆ : ಮಾಡಲು ಕೊಟ್ಟಿದ್ದು

೪.೪.೧.೨. ದೇಸಗತಿ ಆಡಳಿತದ ಕೆಲವು ಮಹತ್ವಪೂರ್ಣ ರೀಕಾರ್ಡುಗಳು

ದಾಖಲು ಪತ್ರ ವಿಭಾಗ(ರೀಕಾರ್ಡ ರೂಂ)[೨೪]

ದೇಸಗತಿಯ ಕಛೇರಿಯಲ್ಲಿ ಅನೇಕ ವಿಷಯಕ್ಕೆ ಸಂಬಂಧಿಸಿದ ಪತ್ರಗಳು ಇರುತ್ತಿದ್ದವು. ಅವುಗಳೆಂದರೆ,

೧. ಮೌಜೆ ಲಾವಣೆ ಆಕಾರಗಳ ಪತ್ರ

೨. ಮೌಜೆ ಜಮಾ ಖರ್ಚಿನ ಪಾವತಿಸಹಿತ ಟಿಪ್ಪಣಿ ಪುಸ್ತಕ

೩. ಲೇವಾದೇವಿ ಕಾಗದಗಳು

೪. ಮೌಜೆ, ಕಸಬೆಗಳ ಲಾವಣೆ, ಕಮ್ಮಿಜಾಸ್ತಿ ಜಮಾಬಂದಿ ಪತ್ರಗಳು

೬. ದೇಸಗತಿ ಜೂಡಿ ಭರಣಾ ಪತ್ರ

೭. ಮೌಜೆ ಲಾವಣೆ ರೋಜಖತ

೮. ದೇಸಗತಿ ಜೂಡಿ ಬಾಬತ ಪತ್ರ

೯. ಕಬೂಲಾಯತಿಗಳು

೧೦. ಕೋರಿ ಜಮಾ ಖರ್ಚು

೧೧. ಗಾವಠಾನ ವಸೂಲ ಕಾಗದ

೧೨. ಮೌಜೆವಾರ ಜಮೀನ ಜಾಡ

೧೩. ವತನ ಸಂಬಂಧ ಸವಾಲ ಜವಾಬ

೧೪. ಹೊಲಿತಾನ ಬಾಬತ ವಸೂಲ ಟಿಪ್ಪಣಿ

೧೫. ಶೆರೆ ಸಿಂದಿ ಪ್ರಕರ್ಣ

೧೬. ಮಧೋಳ ಸರಕಾರದ ಪತ್ರಗಳು

೧೭. ಸರಕಾರಿ ಪತ್ರ

೧೮. ಮುಖತ್ಯರಿ ಪತ್ರ

೧೯. ಜಮೀನ ಪತ್ರ

೨೦. ಖರೀದಿ ಪತ್ರ

೨೧. ಇನಾಮತ ತಾಳೆಬಂದ

೨೨. ಇನಾಮತಿ ಚಾವರಾತ ಚಿಠಿ

೨೩. ಸೇತಸನದಿ ರಿಲಿಸಮವಾರ ಪಟ್ಟಿ

೨೪. ಇನಾಮತಿ ಚಾವರಾತ ಚಿಡ್ಡಾ

೨೫. ಮೌಜೆವಾರ ಖಾತೆ ಬುಕ್

೨೬. ಸರಕಾರಿ ಹುಕುಮಿನಿ ಕಾಗದ

೨೭. ದೇಸಗತಿ ಹದ್ದಿನಲ್ಲಿರುವ ಜಂಗಲ್ ಖರ್ಡಾ ಹಾಗೂ ಘೋಷವಾರ

೨೮. ಹೋದ ಬಂದ ಜನರ ಗಣತಿ

೨೯. ಪ್ರತಿಗ್ರಾಮದ ಜನಗಣತಿ

೩೦. ಪ್ರತಿಗ್ರಾಮದ ದನಗಣತಿ

೩೧. ಪ್ರತಿಗ್ರಾಮದ ಮನಿಗಳ ಯಾದಿ ಅದರ ಸ್ವರೂಪ ವಿವರಣೆ

೧. ಟೆಂಟು, ಶೆಡ್ಡು ೩೨. ಮನಿ ಬಿರಾಡಗಳ ವಹಿ

೩೩. ಗೌಡ ಕುಲಕರ್ಣೀರ ನೇಮಿಸಿಕೊಂಡ ಪತ್ರಿಕೆ

೩೪. ಪ್ರಮುಖ ಮನೆತನಗಳ ವಂಶಾವಳಿ ಕಾಗದ

೩೫. ಕರಾರ ಪತ್ರಗಳು

೩೬. ರಾಜೀನಾಮೆ ಪತ್ರ

೩೭. ಕೌಲ ಕಾಗದಗಳು

೩೮. ಹೊಲಗಳ ಸಾಗುವಳಿ, ಬೀಳು, ಸಾಗುವಳಿಭೂಮಿಯಲ್ಲಿ ಏನು ಬಿತ್ತಿದ್ದು ಅದರ ಬಗ್ಗೆ ವಿವರಣೆ

೩೯. ಆವಕ ಜಾವಕ ಬಾರನೀಸ

೪೦. ಕಸಬಾದಲ್ಲಿ ಇನಾಮತಿ ಮನಿಗಳು ವ.ಖಾಲಿ, ವ ಮನಿಗಳ ತಪಶೀಲ ವಾರ ಪತ್ರಿಕೆ

೪೧. ತಳ ಝಡತಿ ತಾಳೆಬಂದ

೪೨. ವಾಲೀಕಾರ ಜನರ ನೌಕರಿ ಪತ್ರಗಳು

೪೩. ಮನಿಗಳ ಗರ್ಪಟ್ಟಿ ವಹಿ (ಘರಪಟ್ಟಿ)

೪೪. ಪಹಣಿ ಪತ್ರಿಕೆ ನಮೂನಾ ನಂ ೯

೪೫. ಮನಿ ದಾವೇದ ಸಂಬಂಧ ಖರ್ಚಿನ ವಹಿ

೪೬. ಮೈಲಿ-ಬುಕ್

೪೭. ಇನಾಂ ಗ್ರಾಮದ "ಮುಲಕಿ" ಪ್ರಕರ್ಣ ಕಾಗದ

೪೮. ದಸ್ತಾವೀಜ ಕಾಗದಗಳು

೪೯. ಚಾವರಾತ ಗ್ರಾಮಗಳಲ್ಲಿ ದೇಸಗತಿ ವತನೀ ಮನಿಗಳ ವಸೂಲ ಮಾಡುವ ಪತ್ರಿಕೆ

೫೦. ಪೊಲೀಸ್ ಖಾತ್ಯ ಕಡಿಲಗೆ ರೂಳ

೫೧. ಎರಡನೇ ಗ್ರಾಮದಿಂದ ಗ್ರಾಮಕ್ಕೆ ವಲಸೆ ಬಂದು ಇರುವವರ ಜನರ ಪತ್ರಿಕೆ

೫೨. ಜೋಳದ ಜಮಾ ಖರ್ಚಿನ ವಹಿ

೫೩. ಮನೀ ಖರೀದಿ ಪತ್ರ

೫೪. ಕಮತ ಲಾವಣಿ ಪತ್ರಿಕೆ ವಹಿ

೫೫. ದೇಸಾಯಿಗಳ ಪರಿಶೀಲನೆ ಮಾಡಿಬಂದ ರಜಿಸ್ಟರ್

೫೬. ಭಾಡೆಪತ್ರ

೫೭. ಪ್ರತಿಗ್ರಾಮ ಮೌಜೆ, ಹಾಗೂ ಇನಾಂ ಗ್ರಾಮದ ಠರಾವ ಬಂದ

೫೮. ಚೌಕರೀ ಜನರ ಗೈರ ಹಾಜರ ದಿವಸದ ಬುಕ್

೫೯. ಜಂಗಮ ಮೂಲ, ವ ದನಕರಗಳ ಪತ್ರಿಕೆ

೬೦. ಪೌಜದಾರಿ ಕಾಗದ, ಕಾಣೆ, ಕೊಲೆ, ಖಟ್ಲೆ ನಾಡದ ಪ್ರಾಕರ್ಣ

೬೧. ದೇಸಗತಿ ಚಿಲ್ಲರ ಪ್ರಕರಣಗಳು.

೬೨. ನಿವೃತ್ತ ನಂತರ ಚಾರ್ಜ ಕೊಟ್ಟ ಪತ್ರಿಕೆ

೬೩. ಬೆಳ್ಳಿ ಬಂಗಾರ ಸಮಾನುಗಳ ವಹಿ

೬೪. ಕಿರುಕಳ ಟಿಪ್ಪಣಿ.

೬೫. ಅಖಂಡ ವಿಜಾಪೂರ ಜಿಲ್ಲೆಯ ಇನಾಮದಾರ ಇದ್ದ ಇನಾಮದಾರರ ಯಾದಿ

೬೬. ದೇಸಗತಿ ವಂಶಾವಳಿ ವಹಿ

೬೭. ಗಡ್ಡಿಯೊಳಗೆ ಹುಲ್ಲು ಗೋಮಾಳಕ್ಕೆ ಕಳಿಸಿದ್ದ ಯಾದಿ

೬೮. ನೋಟಿಸಗಳ ಯಾದಿ

೬೯. ಯಿಂಗ್ರೇಜ ಸರಕಾರ ನೀಡಿದ ದಾಖಲೆಗಳು

೭೦. ಈ ಪತ್ರಕ್ಕೆ ನೀಡಿದ ಉತ್ತರಗಳು

೭೧. ಹಾಗೂ ಮೋಡಿ ದಾಖಲೆಗಳು

೭೧. ಖಾನೆ ಸುಮಾರಿ ೩ ವರ್ಷಕ್ಕೊಮ್ಮೆ ಇರುವ ಯಾದಿ

೭೨. ದೇಸಗತಿ ಖಾತೆವಾರ ಉತ್ಪನ್ನ ಪತ್ರಿಕೆ

೭೩. ನವಕರಿ ನಾಮೆ ಪತ್ರಿಕೆ

೭೪. ದೇಸಗತಿ ಸಾಮಾನುಗಳ ಯಾದಿ

೭೫. ದಂಡಿನ ಖಾತೆದ ಸರ್ಕ್ಯುಲರಗಳು

೭೬. ಗ್ರಾಮದಲ್ಲಿ ದೇವಸ್ಥಾನಕ್ಕೆ ಭೂಮಿ, ರಥ, ಮನಿ ಕಟ್ಟಿಸಿದ್ದರ ವಹಿ

೭೭. ದೇಸಾಯಿ, ದೇಸಾಯಿಣಿಯರು ವಾಡೇ ಬಿಟ್ಟು ಹೋಗಿ ಬಂದ ವಿವರಣೆ, ಹಾಗೂ ದೇವಸ್ಥಾನಕ್ಕೆ ಹೋಗಿ ಬಂದ ಖರ್ಚು ಪ್ರತ್ಯೇಕ ಪ್ರತ್ಯೇಕ.

೭೮. ಕುರಿಗಳ ಸಂಖ್ಯಾ ಪತ್ರಿಕೆ

೭೯. ಅಥಾವೆ ಪತ್ರಿಕೆ

೮೦. ದೇಸಗತಿ ಪಾಗಾ ಕಟ್ಟಿಸುವುದು

೮೧. ಕೂಲಿ ಜನರ ಹಾಜರಿ ಹಾಗೂ ಕಮಿಬುಕ್

೮೨. ಹತ್ತಿ, ಸೆಂಗಾ, ಜೋಳ, ವಿವಿಧ ಬೆಳೆಗಳು

೮೩. ಕಳುವಾದ ವಿವರಣೆ ಪ್ರಸ್ತಾಪ

೮೪. ಹಬ್ಬ ಹುಣ್ಣಿವೆ ಖರ್ಚು ಪುಸ್ತಕ

೮೫. ದಿವಾನಿ ಮೊಕದ್ದಮೆ ಪತ್ರ

೮೬. ರೋಜ ಕಿರ್ದಿ ಬೆಳ್ಳಿ, ಬಂಗಾರ, ತಾಮ್ರ ಇತ್ಯಾದಿ ಸಾಮಾನುಗಳ ಯಾದಿ

೮೭. ಜಂಗಮರಿಗೆ ದಕ್ಷಿಣೆ ದೇಣಿಗೆ ಕೊಟ್ಟ ಯಾದಿ

೮೮. ಕಟಗಿ ವಿಕರಿ

೮೯. ಮದುವೆ ಮುಂಜಿ ಇತ್ಯಾದಿಗೆ ಖರ್ಚಿನ ಯಾದಿ

೯೦. 'ಕುಸ್ತಿ' ಜನರ ಯಾದಿ

೯೧. ಗ್ರಾಮದಿಂದ ವಿಶೇಷ ಸೈನ್ಯ ವ್ಯವಸ್ಥೆ ಇದ್ದವರ ಯಾದಿ

೯೨. ಆಹೇರ ಯಾದಿ

೯೩. ಶ್ರೀಮಂತರ ಫಲ ಶೋಭನದಲ್ಲಿ ಆದ ಆಹೇರ ಪತ್ರಿಕೆ

೯೪. ಶಿವಯೋಗಿ ಮಂದಿರಕ್ಕೆ ಭಿಕ್ಷೆ ನೀಡಿದ ಯಾದಿ

೯೫. ಗ್ರಾಮಸ್ಥರಿಗೆ ವಿಶೇಷ ಹುಕುಂಗಳ ಯಾದಿ

೯೬. ಗ್ರಾಮಸ್ಥರಿಂದ ಬಂದ ರೀಪೋರ್ಟಗಳ ಉತಾರಿಸಿದ ಯಾದಿ

೯೭. ಸರಕಾರಕ್ಕೆ ಬರಕೊಂಡ ಯಾದಿಗಳ ಉತಾರಿಸಿದ ನಕಲುಗಳು

೯೮. ಮಠಗಳಿಗೆ ಸಂಬಂಧಿಸಿದವುಗಳು

೯೯. ಇತ್ತಿಚೀನ ಲೋಕಲ್ ಬೋರ್ಡ ಕಾಗದಗಳು

೧೦೦. ಬಂದೂಕಿನ ಕಾಗದ

೧೦೧. ಖಡ್ಗ, ಕಠಾರಿಗಳ ಸಂಖ್ಯೆ

೧೦೨. ಮುದ್ದತ್ತು ಬಳಕೆ ಮಾಡಿದ್ದು ಸಂಖ್ಯೆ

೧೦೩. ದೇಸಗತಿಯಿಂದ ದೇಸಗತಿಗೆ ಸಂಬಂಧಪಟ್ಟ ಯಾದಿ

೧೦೪. ಗವರ್ನರ ಸಾಹೇಬರಿಗೆ ಮಾಡಿದ ಅರ್ಜಿಗಳು

೧೦೫. ದೇಸಗತಿ ಡಾಯರಿ

೧೦೬. ಭಕ್ಷೀಸ ಪತ್ರಗಳು

೧೦೭. ಪ್ರತಿಗ್ರಾಮ ಮೌಜೆಗಳ ನಕಾಶೆ, ಹದ್ದು ಇತರೆ ಮಾಹಿತಿ

೧೦೮. ಮುಂಬಯಿ ಕಾಯಿದೆ ಕೌನ್ಸಿಲ್ ಕಾಗದ

೧೦೯. ರೆಡ್ ಕ್ರಾಸ್

೧೧೦. ನ್ಯಾಮಿಗೌಡರೆ ವತನೀ

೧೧೧. ಸರಕಾರಕ್ಕೆ ಬರಕೊಂಡ ಅರ್ಜಿ

೧೧೨. ಶೀಮಿ ಕಾಗದ

೧೧೩. ದತ್ತಕ ಪ್ರಕರಣ ಕಾಗದ

ಇವೆಲ್ಲವುಗಳಲ್ಲದೆ ಮಹತ್ವದ ಗುಪ್ತಪತ್ರಗಳೂ ಇವೆ. ದೇಸಾಯಿಗಳು ಬೇರೆಯವರೊಡನೆ ವ್ಯವಹರಿಸಿದ ಪತ್ರಗಳು ಅವು. ಅವೆಲ್ಲವೂ ಮೋಡಿ ಲಿಪಿಯಲ್ಲಿದ್ದದು ತಿಳಿದುಬರುತ್ತದೆ. ಇಂಥ ದಾಖಲು ಪತ್ರಗಳನ್ನು ಸರಿಯಾದ ರೀತಿಯಲ್ಲಿಡುವುದು, ಸಂರಕ್ಷಿಸುವುದು, ಪತ್ರಗಳ ಮಾಹಿತಿ ರಹಸ್ಯವಾಗಿರುವಂತೆ ನೋಡಿಕೊಳ್ಳುವುದು ಈ ದಾಖಲೆಗಳ ಮಹತ್ವವೆಂದು ತಿಳಿದು ಬರುತ್ತದೆ. ದೇಸಾಯಿಗಳಿಂದ ನೇಮಿಸಲ್ಪಟ್ಟ ಈ ವಿಭಾಗದ ಅಧಿಕಾರಿಗಳು ದೇಸಗತಿಯ ನಂತರದ ಸ್ಥಾನಕ್ಕೆ ಸೇರಿದ್ದಾರೆ. ಲೆಕ್ಕಬರೆಯುವ ಹಾಗೂ ಶ್ಯಾನುಬೋಗರು ಪ್ರಮುಖರಾಗಿದ್ದರೆ ಈ ವಿಭಾಗದ ಮುಖ್ಯಸ್ಥರು ಒಬ್ಬರಿಗೊಬ್ಬರು ಅನ್ಯೂನ್ಯ ಸಂಬಂಧ ಹೊಂದಿದ್ದರು.

ಈ ಇಲಾಖೆಯ ಕರಣಿಕರು ಕುಲಕರ್ಣಿಗಳು ಎಲ್ಲರೊಂದಿಗೆ ಪ್ರೀತಿ, ಸೌಹಾರ್ದತೆಯಿಂದ ಇರುತ್ತಿದ್ದರು. ದೇಸಾಯಿಗಳು ಇವರೊಂದಿಗೆ ದೇಸಗತಿಯ ಆಗು ಹೋಗುಗಳ ಕುರಿತು ಚರ್ಚಿಸುತ್ತಿದ್ದರು. ಇಂಥದೆಲ್ಲವನ್ನು ನಿರ್ಧರಿಸುವುದು ಇವರ ಪ್ರಮುಖ ಕರ್ತವ್ಯವಾಗಿತ್ತು. ಹೀಗೆ ಈ ವಿಭಾಗವು ದೇಸಗತಿ ಆಡಳಿತದಲ್ಲಿ ತನ್ನ ಕರ್ತವ್ಯವನ್ನು ನಿರ್ವಹಿಸಿದೆ. ಇವರ ಅರ್ಹತೆಯೆಂದರೆ ಭಾಷಾ ಪ್ರಾವಿಣ್ಯತೆ, ಓದಲು ಬರೆಯಲು ಬರುವುದರ ಜೊತೆಗೆ ತೀಕ್ಷ್ಣಮತಿಯೂ, ಮಾತುಬಲ್ಲವರೂ ಆಗಿರುತ್ತಿದ್ದರು.

೪.೪.೧.೩. ಆಡಳಿತದಲ್ಲಿದ್ದ ಲಿಪಿ, ಭಾಷೆ

ಈ ನಾಡನ್ನು ಆಳಿದ ಬಾದಾಮಿ ಚಾಲುಕ್ಯರಿಂದ, ಕಲ್ಯಾಣದ ಚಾಲುಕ್ಯರವರೆಗೆ ಸಂಸ್ಕೃತ ಹಾಗೂ ಹಳಗನ್ನಡ ಭಾಷೆ ಆಡಳಿತದಲ್ಲಿತೆಂದು ಇತಿಹಾಸದಿಂದ ತಿಳಿದು ಬರುತ್ತದೆ. ಅದೇ ಭಾಷೆಯಲ್ಲಿಯೇ ಸಾಹಿತ್ಯ ಕೂಡ ರಚನೆಯಾಯಿತು. ರನ್ನ, ಪಂಪ, ಪೊನ್ನ ಇವರಾದರೂ ಕೂಡ ಹಳಗನ್ನಡದಲ್ಲಿ ಸಾಹಿತ್ಯ ರಚನೆ ಮಾಡಿದರು. ಅವರವರ ಕಾಲದಲ್ಲಿ ಕನ್ನಡ ಭಾಷೆಯ ಜೊತೆಗೆ ಇತರ ಭಾಷೆಗಳು ಆಡಳಿತದಲ್ಲಿ ಬಂದಿವೆ. ಮಧ್ಯಯುಗದಲ್ಲಿ ಬಹಮನಿ ಅರಸರು ಹಾಗೂ ಆದಿಲ್‌ಶಾಹಿಗಳು ಪರ್ಶಿಯಾ ದೇಶದಿಂದ ಬಂದಿದ್ದರಿಂದ ಪರ್ಶಿಯನ್ ಭಾಷೆ, ಅರೆಬಿಕ್ , ಉರ್ದು, ಭಾಷೆ ದಿನಬಳಕೆಯ ಭಾಷೆಗಳಾದವು. ಅವರ ಅಧೀನದಲ್ಲಿದ್ದ ದೇಸಿಯರು ಕನ್ನಡ ಮಾತನಾಡುತ್ತಿದ್ದರು. ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಮರಾಠಿ ಮಾತನಾಡುತ್ತಿದ್ದರು. ಮರಾಠಿ ಬರೆಯುತ್ತಿದ್ದರು.

ಆಡಳಿತದಲ್ಲಿ ಬರಹಕ್ಕಾಗಿ ಮರಾಠಿ, ಮೋಡಿ ಲಿಪಿಗಳನ್ನು ಬಳಸುತ್ತಿದ್ದರು. ದೇಸಗತಿಯ ಎಲ್ಲ ಕಾಗದ ಪತ್ರಗಳು 'ಮೋಡಿ'ಯಲ್ಲಿಯೇ ಇವೆ. ಜನಸಾಮಾನ್ಯರೂ ಕೂಡ ಮೋಡಿಯನ್ನು ನಾಲ್ಕು ದಶವಕದ ಹಿಂದೆ ಬಳಸುತ್ತಿದ್ದರು. ಈಗಲೂ ಕೂಡ ಸಂಸ್ಥಾನಿಕರ ಮನೆಯಲ್ಲಿದ್ದ ಮೋಡಿ ದಾಖಲೆಗಳೇ ಸಾಕ್ಷಿ. ಆದಿಲ್‌ಶಾಹಿಗಳೂ ಕೂಡ ಪರ್ಶಿಯನ್ ಸನದುಗಳನ್ನು ಕೊಟ್ಟಾಗಲೂ ಅದರ ಕೆಳಗಡೆ ಮೋಡಿ ಬರಹ ನೀಡಿದ್ದು ಇದೆ. ಕಾರಣವಿಷ್ಟೆ. ದೇಸಿಯ ಆಡಳಿತಗಾರರಿಗೆ ಪರ್ಶಿಯನ್ ಬರುತ್ತಿರಲಿಲ್ಲ. ಅವರ ಅನುರೂಪದಲ್ಲೆ ಅರ್ಥೈಸಿ ಬರೆದುದರಿಂದ ಓದಬಹುದಾಗಿತ್ತೆಂದು ಇದರಿಂದ ವಿಧಿತವಾಗುತ್ತದೆ.

ದೇಸಿಯ ಆಡಳಿತಗಾರರಾದ ದೇಸಾಯಿಗಳು ಅಷ್ಟೊಂದು ಕಲಿತವರಲ್ಲ. ಬಹುಮಟ್ಟಿಗೆ ಅಲ್ಪ ಅಕ್ಷರ ಜ್ಞಾನಿಗಳೇ ಆಗಿದ್ದರು. ಅವರ ನೌಕರಶಾಹಿಗಳು ಮೋಡಿ ಬಲ್ಲವರಾಗಿದ್ದುದರಿಂದ ಈ ಲಿಪಿ ಬಳಸುತ್ತಿದ್ದರೆಂದು ತಿಳಿದುಬರುತ್ತದೆ. ನನಗೆ ಸಿಕ್ಕಂತ ದಾಖಲೆಗಳು ಸಂಪೂರ್ಣವಾಗಿ ಮೋಡಿದಾಖಲೆಗಳೇ ಆಗಿವೆ ಎಂಬುದು ಇಲ್ಲಿ ಗಮನಾರ್ಹ.

೪.೪.೧.೪. ಗೌರವ ಸಂಬೋಧನೆಗಳು

ಅರಸುಗಳು ದೇಸಗತಿಯವರಿಗೆ ಸಂಭೋದಿಸಿದ ಭಾಷಾ ಶೈಲಿಯು ವೈಶಿಷ್ಟ್ಯವಾಗಿದೆ.

೧. ರಾಜಶ್ರೀ ಯಾವಿರಾಜಿತ, ರಾಜಮಾನ್ಯರಾಜಶ್ರೀ ಮೌಜೆ ಅರೇಶಂಕರ ವಡವಡಗಿ ಇವರಿಗೆ

೨. ಸಮ್ಮತ ಚೂಡಾಮಣಿಗಳಾದಂಥ ಶ್ರೀಮಂತ ತೇರದಾಳ ದೇಸಾಯಿ ಸತ್ಯವ್ವ ತತ್ಪುತ್ರ ಜಕ್ಕಣ್ಣ ಸಹವಾಗಿ ಮಾಡಿಸಿ ಶ್ರೀಗೊಂದು.

೩. ಸಕಲಗುಣ ಸವಾಸ ಪರಿಪೂರ್ಣ ರಾಜಮಾನ್ಯೆ ರಾಜಶ್ರೀ ಪಾಸಪ್ಪ ಮುಖೀಯಪ್ಪ ದೇಸಾಯಿ.

೪. ಕೌಲನಾಮಾ ದ ಜುಬದತುಲ ಇಕರಾನ ಪಾಸಪ್ಪ ದೇಸಮುಖಿ ಮತ್ತು ಪಾಯಗೌಡ ನಾಡಗೌಡ ಮತ್ತು ಗೋಪಾಳ ತಿಮ್ಮಾಜಿ ದೇಶಪಾಂಡೆ ಮೋಕದಮಾನಿ ಮತ್ತು ರಯಾನಿ ಕಸಬೇ ಮತ್ತು ಗಾಂವಗನ್ನಾ

೫. ರಾಜಶ್ರೀ ಅಖಂಡಿತ ಲಕ್ಷ್ಮಿ ಅಲಂಕೃತ ರಾಜಮಾನ್ಯ ಸ್ನೇಹಾಂಕಿತ.

೬. ಮೊಹಬತ ಶಾರಿ ಮುಖತಾ ಅದುಬಾರಿ ಲಕ್ಷ್ಮವ್ವಾ ದೇಸಾ ಇಣೆ ಮತ್ತು ವೋಫೇ ಗೌಡಾ ವಲದ ಕೃಷ್ಣಗೌಡ ದೇಸಾಇ

೭. ತೀರ್ಥರೂಪ ರಾಜಮಾನ್ಯ ರಾಜಶ್ರೀ ಯಲಗೌಡ - ಮಲಗೌಡ ಪಾಟೀಲು ಕಸಬೇ ಐನಾಪೂರ ಮತ್ತು ನಾಇಕ ಪಟೇಲ ಮೌಜೆ ಖೇಮಲಾಪೂರ[೨೫]

೮. ಗೋಸಲಬೈರಿ ದೇಸಮುಖಿ ಇವರಿಗೆ''[೨೬]

೪.೫. ದೇಸಗತಿ ಆಡಳಿತದಲ್ಲಿ ಜೇಷ್ಠಪುತ್ರಾಧಿಕಾರತ್ವ

ರಾಜಮಹಾರಾಜಾಧಿಯಾಗಿ ಉತ್ತರಾಧಿಕಾರಿ ನೇಮಕ ಪರಂಪರಾಗತವಾಗಿ ನಡೆದು ಬಂದ ಪದ್ಧತಿ. ಅದೇ ಮಾದರಿಯಲ್ಲಿಯೇ ದೇಸಗತಿಯ ಉತ್ತರಾಧಿಕಾರಿಯಾಗಿ ನೇಮಕ ಮಾಡುವ ರೂಢಿ ಬೆಳೆದುಬಂದಿದೆ. ದೇಸಾಯಿಗಳು ಪುತ್ರ ಸಂತಾನವಿಲ್ಲದೆ ಮೃತರಾಗಿರುವುದರಿಂದ ಅದರ ವಾರಸುದಾರತ್ವವನ್ನು ಮುನ್ನಡೆಸಲು ದೇಸಾಯಣಿಯರು ಆಳಿಕೆ ಮಾಡಿದ್ದಾರೆ. ಅದು ರಾಜನೀತಿಯಲ್ಲಿ ಅಪ್ರಸ್ತುತವಾಗಿರುವುದರಿಂದ ಸಂಸ್ಥಾನದ ಅಭಿವೃದ್ಧಿ, ಉಳುವಿಕೆ ಹಾಗೂ ವಂಶಾಭಿವೃದ್ಧಿಗಾಗಿ ಇಂಥ ಪರಂಪರೆಯನ್ನು ಮುಂದುವರಿಸಲು ಸರಕಾರದ ಅನುಮತಿ ಹಾಗೂ ಮತ್ತೆ ಅಧಿಕಾರ ಹೊಂದಿದುದನ್ನು ಮುಂದುವರಿಸಲು ಸರಕಾರಕ್ಕೆ ತಿಳಿಸುವುದು ಅವಶ್ಯಕತೆ ಇತ್ತು. ಸರಕಾರದ ಕೆಲವು ಕಟ್ಟು ನಿಟ್ಟುಗಳ ಪಾಲನೆಯನ್ನು ನಿಯಮ ಬದ್ಧವಾಗಿ ಪಾಲಿಸಬೇಕಾಗಿತ್ತು. ಅಂಥ ಕೆಲವು ವಿಚಾರಗಳನ್ನು ಆಡಳಿತದ ಹಿನ್ನೆಲೆಯಲ್ಲಿ ನಿರೂಪಿಸಿಕೊಳ್ಳಲಾಗಿದೆ.

ಪುತ್ರಸಂತಾನವಿಲ್ಲದ ದೇಸಾಯಿಗಳು ಜೀವಂತ ಇರುವವರೆಗೂ ದತ್ತಕವನ್ನು ಪಡೆದಿರುವುದಿಲ್ಲ. ದೇಸಾಯಿಗಳು ಪುತ್ರಸಂತಾನಕ್ಕಾಗಿ ಮೂರರಿಂದ ನಾಲ್ಕು ಮದುವೆ ಮಾಡಕೊಂಡರೂ ಮಕ್ಕಳಾಗದೆ ಕೊರಗಿ ಮೃತರಾಗಿರುವರು. ಅಂಥ ದೇಸಾಯಿಣಿಯರು ತಮ್ಮ ತವರು ಮನೆ ಕಡೆಗೆ ದತ್ತುಕ ಪಡೆದಿದ್ದಾರೆ. ದತ್ತುಕ ಪಡೆಯುವಾಗಲೂ ರಕ್ತ ಸಂಬಂಧದ ಪ್ರಭೇದಗಳು ಇಲ್ಲಿ ಅವಶ್ಯವಾಗಿ ಕಂಡುಬರುತ್ತವೆ. ಅದೆಂದರೆ ದೇಸಾಯಿಯ ಅಣ್ಣತಮ್ಮಂದಿರರ ಮಕ್ಕಳು ಈ ಮನೆತನಕ್ಕೆ ದತ್ತುಕ ಪಡೆಯಲು ಬರುವುದಿಲ್ಲ. ಅಣ್ಣನು ಸತ್ತ ಮೇಲೆ ಬಿರಾದಾರನಾದ ತಮ್ಮನು ದೇಸಗತಿ ಆಳಲು ಬರುವುದಿಲ್ಲ. ಅದು ಅವನ ವಂಶಪಾರಂಪರ್ಯಕ್ಕೆ ಸಂಬಂಧವಿರುತ್ತದೆ. ಅಂದರೆ ಜೇಷ್ಠ ಪುತ್ರಾಧಿಕಾರತ್ವವೇ ಉತ್ತರಾಧಿಕಾರಿಯಾಗಲು ನಿಯಮವಿದ್ದಂತೆ ತೋರುತ್ತದೆ.

೪.೫.೧. ದತ್ತುಕ ಪಡೆಯಲು ಬೇಕಾದ ರಕ್ತಸಂಬಂಧ

ಬಂಧುತ್ರಯ : ೧. ಆತ್ಮಬಂಧುತ್ರಯ ೨. ಪಿತೃಬಂಧುತ್ರಯ ೩. ಮಾತೃಬಂಧುತ್ರಯ ಈ ಮೇರೆಗೆ ಒಂಬತ್ತು ಬಂಧುಗಳನ್ನು ಗ್ರಹಣ ಮಾಡಬೇಕು. ತನ್ನ ತಂದೆಯ ಭಗೀನಿಯ ಪುತ್ರರು. ತಾಯಿಯ ಭಗೀನಿಯ ಪುತ್ರರು ಸೋದರ ಮಾವನ ಪುತ್ರರು ದತ್ತಕ ತಾಯಿಯಿಂದ ಕಲಿತು ಬೆಳೆಸಿಕೊಂಡು ತನ್ನದೆಂದು ಹತ್ತುವರ್ಷದ ಮೇಲೆ ಭಾವನೆ ಬರುವಂತೆ ಪ್ರೇರೇಪಣೆ ಆಗುತ್ತದೆ. ಹೀಗಾಗಿ ಚಿಕ್ಕ ಮಗುವನ್ನು ದತ್ತಕ ಪಡೆಯುವುದು ಪರಂಪರಾಗತವಾಗಿ ಬಂದಿದೆ.

ಈ ಪದ್ಧತಿ ಬ್ರಿಟೀಷರ ಕಾಲದಲ್ಲಿ ಬಿದ್ದು ಹೋಯಿತು. ಮತ್ತೆ ಮಹಾರಾಣಿ ಕಾಲಕ್ಕೆ ಜಾರಿಯಾಯಿತು.

೪.೫.೨. ಆಡಳಿತದ ಹಿನ್ನೆಲೆಯಲ್ಲಿ ಬಳುವಳಿಯಾಗಿ ನೀಡುವ ವಸ್ತುಗಳು

ದತ್ತಕ ಪಡೆಯುವುದು ಅಥವಾ ಗಾದಿ ಮಾಲೀಕತ್ವ ವಹಿಸುವುದು ಆಡಳಿತದ ಹಿನ್ನೆಲೆಯಲ್ಲಿ ಮಹತ್ವದ್ದಾಗಿದೆ. ಕೇವಲ ನಾಮ ಮಾತ್ರ ಅಧಿಕಾರ ಹೊಂದುವುದಲ್ಲ. ದೇಸಗತಿಯ ಕುರುಹುಗಳನ್ನು ಪಡೆದು ನಾಡಿನ ಏಳ್ಗೆಯನ್ನು ಬಯಸುವುದಾಗಿತ್ತು. ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಹಾಗೂ ಸಾಂಸ್ಕೃತಿಕವಾಗಿ ಮುಂದುವರಿಸಬೇಕಾಗಿತ್ತು. ಅಂಥ ಪರಿಕಲ್ಪನೆಯನ್ನು ಹೊಂದುವಂತೆ ಅವರನ್ನು ತಯಾರಿಸುವುದು ದೇಸಾಯಿಣಿಯ ಮಹತ್ ಕಾರ್ಯಗಳಲ್ಲಿ ಪ್ರಮುಖವಾದ ಒಂದಂಶವಾಗಿದೆ. ನೀತಿ, ನಿಯಮ, ಪಾಲನೆ ಪೋಷಣೆ ಕೂಡ ಮಹತ್ವವಾದವುಗಳಾಗಿವೆ.

೧. ಪೇಠಾ ೨. ನ್ಯಾಯದಂಡ ೩. ದೇಸಗತಿ ಉಂಗುರಗಳು ಇವು ದೇಸಾಯಿಗೆ ಬಂದ ಪೋಷಕ ವಸ್ತುಗಳು. ಅದರಲ್ಲೂ ದೇಸಗತಿ ಉಂಗುರಗಳು ಎರಡು ಇದ್ದು ಅವುಗಳೇ ದೇಸಾಯಿಯ ಘನತೆಗೆ ಗೌರವಗಳಿಗೆ ಪ್ರೀತಿದ್ಯೋತಕವಾದವು ಆಡಳಿತ ಹಿನ್ನೆಲೆಯಲ್ಲಿ ಪ್ರಮುಖವಾದವುಗಳು ಆಗಿವೆ.

೪.೫.೩. ಮುದ್ರೆಗಳು

ರಾಜ ಮಹಾರಾಜಾಧಿಕಾಲದಿಂದಲೂ ತಮ್ಮ ತಮ್ಮ ಆಡಳಿತದ ಹೆಗ್ಗುರುತಾಗಿ ಲಾಂಛನ ಮತ್ತು ಮುದ್ರೆಗಳನ್ನು ಬಹಳಷ್ಟು ಬಳಸಿದ್ದಾರೆ. ಇತಿಹಾಸ ರಚನೆಯಲ್ಲಿ ಇವುಗಳು ಆಯಾ ಮನೆತನದ ಕೀರ್ತಿಯನ್ನು ಹೇಳುವಲ್ಲಿ ಸಹಕಾರಿಯಾಗಿವೆ. ದೇಸಾಯಿಗಳು ಕೂಡ ತಮ್ಮ ಆಡಳಿತದ ಹೆಗ್ಗುರುತಾಗಿ ವಿಶೇಷ ಲಾಂಛನಗಳನ್ನು ಹೊಂದಿದ್ದಾರೆ. ಆದಿಲ್‌ಶಾಹಿ ಅರಸುಗಳು ದೇಸಾಯಿಗಳಿಗೆ ಪ್ರೇರಣೆ ನೀಡಿ, ಆಡಳಿತದ ಸೂತ್ರ ಕೊಟ್ಟಿದ್ದರಿಂದ ಅವರು ನೀಡಿದ ಆದೇಶದ ಅಂಶವನ್ನೇ ಲಾಂಛನ ಮಾಡಿಕೊಂಡು ಆಡಳಿತದಲ್ಲಿ ಬಳಸಿದ್ದಾರೆ. ಇಂಥ ವಿಚಿತ್ರ ಮೊಹರುಗಳು ಇಲ್ಲಿಯವರೆಗೆ ಎಲ್ಲಿಯೂ ದಾಖಲಾಗಿಲ್ಲ. ಅಲ್ಲದೆ ಬೆಳಕಿಗೆ ಬಂದಿರುವುದಿಲ್ಲ.

ಬಹುತೇಕ ಎಲ್ಲ ದೇಸಾಯಿಗಳು ಅವರಿಂದ (ಮುಸ್ಲಿಂ ಅರಸರಿಂದ) ಇನಾಂ ಪಡೆದುದರಿಂದ ಅವರ ಅಧೀನರಾಗಿರುವಂತೆ ಅದರ ಮೇಲೆ ಪರ್ಶಿಯನ್ ಅರೆಬಿಕ್ ಲಿಪಿ ಹೊಂದಿದಂತೆ ಕಂಡುಬರುತ್ತದೆ. ಉಂಗುರಗಳ ಮೇಲೆ ಮುದ್ರೆಗಳ ಮೇಲೆ ಈಗಲೂ ಇಂಥ ಲಿಪಿ ಇರುವುದು ಸಾಕ್ಷೀಕರಿಸುತ್ತದೆ. (ಮುದ್ರೆಗಳ ಫೋಟೋವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ)

ಇತ್ತೀಚೆಗೆ ಹೊರಡಿಸಿದ ಮುದ್ರೆಗಳು ಕನ್ನಡ, ಮರಾಠಿ ಲಿಪಿಯಲ್ಲಿ ಇರುವುದು ಕಾಣುತ್ತದೆ. ಎಲ್ಲ ದೇಸಗತಿಯ ಮುದ್ರೆಗಳು ಒಂದೇ ವಿಧದವುಗಳಾಗಿಲ್ಲ. ಚಿತ್ತಾರ ಚಿತ್ತಾರವಾಗಿವೆ. ಅವುಗಳ ಸ್ವರೂಪವನ್ನು ಈ ಕೆಳಗಿನಂತೆ ಗುರ್ತಿಸಿಕೊಳ್ಳಲಾಗಿದೆ.

ಮುದ್ರೆಗಳ ಸ್ವರೂಪ : ದೇಸಗತಿ ಮುದ್ರೆಗಳಲ್ಲಿ ೨ ವಿಧಗಳಿವೆ. ಒಂದು ಲಾಂಛನದ ಶಿಖೆ, ಇನ್ನೊಂದು ಅದೇ ಮಾದರಿಯಲ್ಲಿರುವ ಸಾಮಾನ್ಯ ಶಿಖೆ.

ದೇಸಗತಿ ಪರಗಣದ ಮುದ್ರೆಗೆ ಮೊಹರು ಎಂದು ಕರೆಯುತ್ತಾರೆ. ಮೊಹರು ಎಂಬ ಪದವು ಮರಾಠಿ ಮೂಲದ್ದಾಗಿದೆ.

ಶಿಖೆದ ಉಂಗುರ

೧. ದೇಸಾಯಿ ಲಾಂಛನ ಉಂಗುರ — ೨. ಮೊರ್ತಬ್ ಉಂಗುರ

೧. ಮುದ್ರೆ = ಖಂಡ ಮೊಹರು, ಕಂಬ ಮೊಹರು

ಈ ಮುದ್ರೆಗಳ ಮೇಲೆ ತಮ್ಮ ಮನೆದೇವರ ಹೆಸರನ್ನು ಬರೆದಿದ್ದು ಕಾಣುತ್ತದೆ.

ಅದು ಮೋಡಿ ಅಥವಾ ಪರ್ಶಿಯನ್ ಲಿಪಿಯಲ್ಲಿರುತ್ತದೆ.

ಅದರಲ್ಲಿ ಅರ್ಧ ಚಂದ್ರ ಸೂರ್ಯನ ಗುರ್ತು ಇರುತ್ತದೆ.

೨. ಪ್ರಸ್ತುತ ಇದಕ್ಕೆ ಶಿಖೆ>ಶಿಕ್ಕಾ ಎಂದೇ ಕರೆಯುತ್ತಾರೆ. ಕೆಲವು ದೇಸಗತಿಯವರಿಗೆ ಶಿಖೆದ ಮನೆತನ ಎಂದೇ ಕರೆಯುತ್ತಾರೆ. ಇಂಥ ಉಂಗುರಗಳು ಬೇರೆ ಯಾವ ಆಡಳಿತದಲ್ಲೂ ಕಾಣುವುದಿಲ್ಲ. ದೇಸಗತಿ ಉಂಗುರವು ದೇಸಾಯಿಗಳಿಗೆ ವಂಶಪಾರಂಪರ್ಯವಾಗಿ ಬಳುವಳಿಯಾಗಿ ಬಂದಿರುತ್ತದೆ. ಯಾವಾಗಲೂ ದೇಸಾಯಿಯು ಅದನ್ನು ಧರಿಸಿಕೊಳ್ಳುತ್ತಿದ್ದನು. ಇವನ ಹೊರತಾಗಿ ಯಾರೂ ಧರಿಸಿಕೊಳ್ಳುವಹಾಗಿಲ್ಲ. ದೇಸಗತಿ ಉಂಗುರ ಧರಿಸಿದವರೇ ದೇಸಾಯಿರೆಂದು ಗುರ್ತಿಸುವುದಾಗಿತ್ತು. ಅದೇ ಅವರ ಹೆಗ್ಗುರುತಾಗಿ ಕಂಡುಬರುತ್ತಿತ್ತು.

ಶಿಖೆದ ಉಂಗುರ ದೇಸಾಯಿ ಮತ್ತು ದೇಸಗತಿಗಳ ಹಕ್ಕು ಮತ್ತು ಅಸ್ತಿತ್ವದ ಭಾಗವಾಗಿತ್ತು. ಕೆಲವು ಅರಸರುಗಳು ಕಾರಣಾಂತರಗಳಿಂದ ದೇಸಗತಿ ಶಿಖೆದ ಉಂಗುರವನ್ನು ಕಸಿದುಕೊಳ್ಳುವ ಮೂಲಕ ಅವರ

ಆಡಳಿತದ ಹಕ್ಕನ್ನು ಮೊಟಕುಗೊಳಿಸಿದ್ದೂ ಕಾಣುತ್ತದೆ. ಇಂಥ ಘಟನೆ ಮೂರು ನಾಲ್ಕು ಮನೆತನಗಳಲ್ಲಿರುವ ಈ ಕುರಿತಾಗಿ ಬರೆದಿಟ್ಟ ಡೈರಿಗಳಿಂದ ತಿಳಿದುಬರುತ್ತದೆ. ಹೀಗಾಗಿ ಆಡಳಿತದ ಹೆಗ್ಗುರುತಾಗಿ, ವಂಶಪಾರಂಪರ್ಯ ಅಧಿಕಾರದ ಸಂಕೇತವಾಗಿರುವ ಶಿಖೆದ ಉಂಗುರ ಮಹತ್ವದ ಸ್ಥಾನ ಪಡೆದಿದೆ. ಒಂದು ವೇಳೆ ಕಳೆದರೆ ಅದಕ್ಕೆ ಹಕ್ಕು ಪತ್ರ ಬರೆದುಕೊಡಬೇಕು. ಅದೇ ಮಾದರಿಯ ಇನ್ನೊಂದು ಶಿಖೆದ ಉಂಗುರ ಹೊಂದಿದ್ದರೆ ಸರಕಾರಕ್ಕೆ ತಿಳಿಸದೇ ಹೋದರೆ ಅಂಥ ದೇಸಗತಿಯನ್ನು ಖಾಲಸಾತ ಮಾಡುತ್ತಿದ್ದರು. ಆಗ ದೇಸಗತಿಯನ್ನು ಮತ್ತೊಬ್ಬರಿಗೆ ವರ್ಗಾವಣೆ ಮಾಡುತ್ತಾರೆ. ಅಂಥ ದೇಸಗತಿಗಳು ಕೂಡ ಹಕ್ಕು ಕಳೆದುಕೊಂಡು ಮತ್ತೆ ಪಡೆದುಕೊಂಡಿವೆ. ಹೀಗೆ ಶಿಖೆದ ಉಂಗುರವು ತನ್ನದೆ ಆದ ಮೌಲ್ಯವನ್ನು ಹೊಂದಿದ್ದು ಮಹತ್ವದ್ದೆಣಿಸಿದೆ.

ಈ ಉಂಗುರದ ಬಳಕೆ ವಿಶೇಷವಾಗಿ, ಸರಕಾರಕ್ಕೆ ಮನವಿ ಮಾಡಿಕೊಳ್ಳುವಾಗ ವಾರ್ಷಿಕ ನಜರಾಣಾ ಕೊಡುವಾಗ, ದತ್ತಕ ಪಡೆಯುವಾಗ ಬಳಕೆ ಆಗುತ್ತಿತ್ತು

೨. ಎರಡನೆಯ ಶಿಖೇದ ಉಂಗುರವು ಕೂಡ ಮಹತ್ವದ್ದಾಗಿದೆ. ಇದೂ ಪಂಚಲೋಹದ್ದು ಇರುತ್ತದೆ. ಇದರ ಮೇಲೆ ಮೊರ್ತಬ್ ಶುದ್ ಎಂದು ಬರೆದುದು ಇದೆ. ಇದು ದೇಸಾಯಿಯ ಮುಖ್ಯಬೆರಳಲ್ಲಿ ಇರುತ್ತಿತ್ತು. ದೇಸಾಯಿ ಪರವಾನಿಗೆ ಇಲ್ಲದೆ, ಅವನಿಗೆ ತಿಳಿಸಲ್ಪಡದೇ ಯಾವುದೇ ವಿಷಯವನ್ನು ದಸ್ತೂರ ಮಾಡುತ್ತಿರಲಿಲ್ಲ. ದಸ್ತೂರ ಮಾಡಿದರೆ ಅದಕ್ಕೆ ಈ ಶಿಖೆಯ ಮುದ್ರೆಯಿಂದ ರುಜುವಾತು ಮಾಡುವ ಹಾಗಿಲ್ಲ ಎಂಬುದು ತಿಳಿದುಬರುತ್ತದೆ. ಈ ಶಿಖೆಯನ್ನು ದಸ್ತೂರ ಮಾಡಿದ ಕೊನೆಯ ಸಾಲಿನಲ್ಲಿ ಅದಕ್ಕೆ ಹೊಂದಿಕೊಂಡೆ ಹಾಕುತ್ತಿದ್ದರು. ಇದರಿಂದ ತಿಳಿದು ಬರುವುದೇನೆಂದರೆ ಈ ಶಿಖೆಯಿಂದ ಮೊಹರು ಮಾಡಿದ ಮೇಲೆ ಮುಂದೆ ಏನೂ ಬರೆಯುವ ಹಾಗಿಲ್ಲ; ಇದನ್ನು ಓದಿ ತಿಳಿದುಕೊಂಡಿದೆ. ಇದು ಸರಿಯಾಗಿದೆ ಎಂದು ರುಜುವಾತು ಮಾಡಿದ್ದು ಇದರ ಒಪ್ಪಿಗೆಯಲ್ಲಿರುವುದೆಂದು ವಿಧಿತವಾಗುತ್ತದೆ.

ಉಂಗುರದ ಮೇಲಿರುವ ಚಿತ್ರ ಹಾಗೂ ಲಿಪಿ : ದೇಸಗತಿಯ ಉಂಗುರದ ಶಿಖೆ ಮೇಲೆ ಬೇರೆ ಬೇರೆ ಚಿತ್ರ ಕೆತ್ತಿದ್ದು ಇದೆ. ಆನೆ, ಸೂರ್ಯ, ಚಂದ್ರ, ತ್ರಿಶೂಲ, ಕಿರೀಟ, ಲಿಂಗ ಮುಂತಾದವು ಇವೆ. ಇವುಗಳಲ್ಲೆ ಆನೆಯ ಚಿತ್ರವು ವಿಭಿನ್ನತೆ ಹೊಂದಿದೆ. ಹಾಗೆ ಈ ಚಿತ್ರಗಳ ಮೇಲೆ ಪರ್ಶಿಯನ್ ಉಲ್ಲೇಖವಿದೆ.

ಎರಡನೆ ಉಂಗುರವು ಪಂಚಲೋಹದ ಬೆಳ್ಳಿಯದಾಗಿತ್ತು. ಹೊಲಮನೆ ಉತಾರ, ದತ್ತಕಪತ್ರ, ದಾನಪತ್ರ, ವಿವರಣಾತ್ಮಕ ಪತ್ರದ ಮೇಲೆ ಈ ಮುದ್ರೆ ಬೀಳುತ್ತಿತ್ತು. ಪರ್ಶಿಯನ್ ಹಾಗೂ ಮರಾಠಿಯ ಲಿಪಿಯಲ್ಲಿ ಮೊರ್ತಬ್‌ಶುದ್ ಎಂಬ ಲಿಪಿ ಇರುತ್ತಿತ್ತು.

ಇವೆರೆಡು ಉಂಗುರುದ ಮುದ್ರೆಗಳು ಆಡಳಿತಕ್ಕೆ ಹಿಡಿದ ಕನ್ನಡಿಯಂತಿವೆ. ಆಡಳಿತಾತ್ಮಕ ವ್ಯವಹಾರವು ಇವುಗಳ ಮುಖಾಂತರ ನಡೆದುದನ್ನು ದೇಸಗತಿಗಳಲ್ಲಿರುವ ದಾಖಲೆ ಪತ್ರಗಳನ್ನು ಪರಿಶೀಲಿಸಿದಾಗ ಸ್ಪಷ್ಟವಾಗುತ್ತದೆ.

ಮುದ್ರೆಗಳು ಮತ್ತು ಬಿಲ್ಲಾಗಳು : ಪ್ರತಿಯೊಂದು ದೇಸಗತಿಯ ಮುದ್ರೆಗಳು ಚಿತ್ತಾರವನ್ನು ಹೊಂದಿದ್ದು ಗೋಲಾಕಾರ, ಎಲೆಯಾಕಾರ, ಹೂವಿನಾಕಾರ, ಅಷ್ಟಕೋನಾಕಾರವಾಗಿವೆ. ಅವೆಲ್ಲವುಗಳು ಶುದ್ಧಬೆಳ್ಳಿಯಿಂದ ಮಾಡಿದವುಗಳಾಗಿವೆ. ಅದರ ಮೇಲೆ ಪರ್ಶಿಯನ್, ಹಾಗೂ ಹಿಂದಿ ಇಂಗ್ಲೀಷ್ ಕನ್ನಡ ಲಿಪಿಯನ್ನು ಕೆತ್ತಿದ್ದು ಕಾಣಸಿಗುತ್ತವೆ. ಎಲ್ಲವುಗಳಿಗೂ ಖಂಡಹಿಡಿಕೆ. ಲಂಬಹಿಡಿಕೆ ಇದ್ದು ಕಾಗದ ಪತ್ರಗಳ ಮೇಲೆ ಮುಖಪುಟದ ಮೇಲೆಯೇ ಒತ್ತಿ ದಸ್ತೂರ ಮಾಡುತ್ತಿದ್ದರು.

ಬಿಲ್ಲಾಗಳು ಕೂಡ ತತ್ತಿಯಾಕಾರ ಅಷ್ಟಕೋನಾಕಾರ. ಚೌಕಾಕಾರ ಹಿಂದಿ, ಇಂಗ್ಲೀಷ್ , ಕನ್ನಡ ಲಿಪಿ ಹೊಂದಿವೆ. ಇಂದಿನ ಆಫೀಸಗಳಲ್ಲಿರುವ ಪಟ್ಟೇವಾಲಾರ ಬಿಲ್ಲಾಗಳಂತೆ ಇವು ಇರುತ್ತವೆ. ಇದೇ ಮಾದರಿಯಲ್ಲಿ ೧೦ ಜನ ಪಟ್ಟೆವಾಲಾರು ವಾಡೇದ ಬಾಗಿಲಿನಿಂದ ಹಿಡಿದು ಸದರದವರೆಗೆ ಕಾಣುತ್ತಿದ್ದರು. ಹಾಗೇ ದೇಸಾಯಿ ಸಭೆ ಸಮಾರಂಭಗಳಿಗೆ ಹೋಗುವಾಗಲೂ ಈ ಪಟ್ಟೇ ವಾಲಾರು ಎಡಬಲಗಳಲ್ಲಿ ಕಾಣಸಿಗುತ್ತಾರೆ. ಇಂದಿಗೂ ಇಂಥ ಬಿಲ್ಲಾಗಳು ದೇಸಗತಿಯವರಲ್ಲಿವೆ. ಅವುಗಳ ಮೇಲೆ ಸಂಖ್ಯೆ ಹಾಕಿದ್ದಾರೆ ಈ ಸಂಖ್ಯೆಗಳು ಪಟ್ಟೇವಾಲರನ್ನು ಸೂಚಿಸುತ್ತವೆ. ಇದರ ಮೇಲೆ ಪರಗಣದ ಹೆಸರು. ತಾಲೂಕಿನ ಹೆಸರು ದೇಸಗತಿ ಹೆಸರು. ಹಾಗೇ ದೇಸಾಯಿಯ ಹೆಸರೂ ಕೂಡ ಇದ್ದುದು ವಿಧಿತವಾಗುತ್ತದೆ.

ಒಟ್ಟಾರೆಯಾಗಿ ಬಾಗಲಕೋಟಿ ಜಿಲ್ಲೆಯ ದೇಸಗತಿ ಆಡಳಿತ ಪದ್ಧತಿಯನ್ನು ಅವಲೋಕಿಸಿದಾಗ ಒಂದಾನೊಂದು ಕಾಲದಲ್ಲಿ ವೈಭವಯುತವಾಗಿ ಮೆರೆದಿದ್ದ ಈ ದೇಸಗತಿ ಆಡಳಿತವು ಇಂದು ಕಾಣದಂತಾಗಿವೆ. ದೇಸಗತಿ ಆಡಳಿತವು 'ಸರ್ವರ ಕಲ್ಯಾಣ ಬಯಸುವಂತೆ' ಇತ್ತು. ದೇಸಗತಿ ಆಡಳಿತಕ್ಕೊಳಪಟ್ಟ ಗ್ರಾಮದ ಜನತೆ ಅತ್ಯಂತ ಸುಖಕರವಾದ ಜೀವನ ಸಾಗಿಸುತ್ತಿದ್ದರೆಂಬುದು ಪ್ರಸ್ತುತ ಅಧ್ಯಯನದಿಂದ ವೇದ್ಯವಾಗುತ್ತದೆ. ದೇಸಗತಿ ಅಧಿಕಾರ ಸೂತ್ರವನ್ನು ಹಿಡಿದುಕೊಂಡ ದೇಸಾಯಿ, ದೇಸಮುಖ, ನಾಡಗೌಡರು, ಪ್ರಜೆಗಳ ಯೋಗಕ್ಷೇಮದ ಬಗ್ಗೆ ಗ್ರಾಮದ ಏಳ್ಗೆಯ ಬಗ್ಗೆ ಹಗಲಿರುಳು ಚಿಂತನೆಯನ್ನು ಮಾಡಿ ಪ್ರಗತಿಪಥದತ್ತ ಕೊಂಡೊಯ್ಯುವಲ್ಲಿ ಸಿದ್ಧಹಸ್ತರು.

ದೇಸಾಯಿಯವರು ತಮ್ಮ ತಮ್ಮ ಪ್ರದೇಶಾಭಿವೃದ್ಧಿಗಾಗಿ ಅಲ್ಲಲ್ಲಿ ಕೆಲವು ಅಧಿಕಾರಿ ವರ್ಗಗಳನ್ನು ನೇಮಿಸಿ ಅದರ ಮುಖಾಂತರ ಪ್ರಜೆಗಳ ಕುಂದುಕೊರತೆಗಳನ್ನು ಆಲಿಸಿ ತಕ್ಕ ಪರಿಹಾರ ಕಂಡುಕೊಳ್ಳುತ್ತಿದ್ದರೆಂಬುದು ತಿಳಿದುಬರುತ್ತದೆ. ಅಧಿಕಾರಿ ವರ್ಗದವರು ಊರಿನ, ಗ್ರಾಮದ, ಪ್ರದೇಶದ ವ್ಯಾಪ್ತಿಗೊಳಪಟ್ಟಂತೆ ಯಾವುದೇ ರೀತಿಯ ಕುಂದುಕೊರತೆಗಳಿದ್ದರೂ ಅವುಗಳನ್ನು ದೇಸಾಯಿಗಳ

ಗಮನಕ್ಕೆ ತರುವುದು ಅದರಿಂದ ಪರಿಹಾರ ಸೂತ್ರಗಳನ್ನು ಕಂಡುಕೊಳ್ಳುವುದು ಪ್ರಮುಖವಾಗಿತ್ತು. ಮತ್ತು ಸಾರ್ವಜನಿಕ ಕಾರ್ಯಗಳನ್ನು ಕೈಗೊಳ್ಳುವುದು ಹಾಗೂ ಅವುಗಳ ಬಗ್ಗೆ ಸವಿವರವಾಗಿ ಲಿಖಿತ ರೂಪದಲ್ಲಿ ಬರೆದು ದಾಖಲೆಗೊಳಿಸುವುದು ಅಧಿಕಾರಿ ವರ್ಗದ ಪ್ರಮುಖ ಕರ್ತವ್ಯವಾಗಿತ್ತೆಂದು ತಿಳಿದುಬರುವುದು.

ಹೀಗೆ ಆಡಳಿತದ ಸೂತ್ರವನ್ನು ನಿರ್ವಹಿಸುತ್ತಿದ್ದ ದೇಸಾಯಿಗಳು ಆಡಳಿತದ ಅನುಕೂಲಕ್ಕಾಗಿ ದೇಸಗತಿಗಳಲ್ಲಿ ಕಸಬೆ, ಮೌಜೆ, ಮುಂತಾದ ವಿಭಾಗಗಳನ್ನಾಗಿ ವಿಂಗಡಿಸಿಕೊಂಡು ಸುಸೂತ್ರ ಆಡಳಿತ ನಿರ್ವಹಿಸುತ್ತಿರುವುದು ವೇದ್ಯವಾಗುತ್ತದೆ.

ಅಡಿಟಿಪ್ಪಣಿ

೧. ಡಾ.ಜೆ.ಎಂ.ನಾಗಯ್ಯ, ೧೯೯೯, **೬ನೇ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ,** ಪು.೮೨

೨ ಸಂದರ್ಶನ, ಬಿ.ಕೆ.ದೇಸಾಯಿ, ವಯಸ್ಸು ೬೫, ನೀರಬೂದಿಹಾಳ

೩. ಡಾ. ಶಿವರಾಮ ಕಾರಂತ, **ಸಿರಿಗನ್ನಡ ಅರ್ಥಕೋಶ,** ಪು.೩೦

೪. ಡಾ. ಕೃಷ್ಣಕೊಲ್ಹಾರ ಕುಲಕರ್ಣಿ, ೨೦೦೧. **ಆದಿಲ್‌ಶಾಹಿ,** ಪು.೧೦

೫. ಅದೇ,

೬. ಪರ್ಶಿಯನ್ ಸನದು, ಕನ್ನಡಕ್ಕೆ ಡಾ ಅಬ್ದುಲ್ ಗಣಿ ಇಮಾರತವಾಲೆ ಬಿಜಾಪೂರ....ಸನದನಲ್ಲಿ ಇರುತ್ತದೆ.

೭. ಅದೇ.

೮. ಅದೇ,

೯. ಅದೇ,

೧೦. ಅದೇ,

೧೧. ಪಕುಜವಾಹಿರೊಶಿ, ೧೯೮೮, **ಮಧ್ಯಕಾಲೀನ ಮುಸ್ಲಿಂರ ಆಡಳಿತದಲ್ಲಿ ಅದಿಲ್ ಶಾಹಿಗಳ ಸ್ಥಳೀಯ ಆಡಳಿತ,** ಪು.೧೦

೧೨. ಸಂದರ್ಶನ, ಸಿ.ಎಸ್.ದೇಸಾಯಿ, ವಯಸ್ಸು ೫೫, ಸೊನ್ನ

೧೩. ಸಂದರ್ಶನ, ಗುರಪ್ಪ ಕಣ್ಣೂರ ವಯಸ್ಸು ೬೮, ಅಮೀನಗಡ

೧೪. ಸಂದರ್ಶನ, ಪಿ.ಬಿ.ದುತ್ತರಗಿ, ವಯಸ್ಸು ೭೦, ಸರ್ವಮಂಗಳ ನಾಟಕ, ಸೂಳಿಭಾವಿ

೧೫. ಸಂದರ್ಶನ ಸಿ.ಎಸ್.ದೇಸಾಯಿ, ವಯಸ್ಸು ೫೫, ಸೊನ್ನ

೧೬. ಹಳೇಗನ್ನಡ ಹಸ್ತಪ್ರತಿ, ಫಸಲಿ ೯೯೩, ಬಿಳಗಿ

೧೭. ಬರೆದಿಟ್ಟ ಡೈರಿ

೧೮. ದೇಸಗತಿ ಮೊಹರು

೧೯. ದೇಸಾಯರ ಲಗ್ನ ಪತ್ರಿಕೆ

೨೦. ಸಂದರ್ಶನ, ಮಲ್ಲಪ್ಪ ಹೆಳವರ, ವಯಸ್ಸು ೪೦, ಜಕ್ಕನಹಟ್ಟಿ

೨೧. ದೇಸಗತಿಯವರಿಗೆ ನೀಡಿದ ಸನದು ಪತ್ರ ೧೯೨೮, ೧೯೩೨, ದೆಹಲಿ

೨೨. ಜಿ.ವೆಂಕಟಸುಬ್ಬಯ್ಯ, ೧೯೯೮, ಯರವಲು ಪದಕೋಶ, ಪು.೫೦

೨೩. ಪರ್ಶಿಯನ್ ಸನದು, ಕನ್ನಡಕ್ಕೆ ಅನುವಾದ ಡಾ.ಅಬ್ದುಲ್ ಗಣಿ ಇಮಾರತಮಾಲೆ, ಬಿಜಾಪೂರ

೨೪. ದೇಸಗತಿ ಬರೆದಿಟ್ಟ ದಪ್ತರ

೨೫. ಮರಾಠಿ ಸನದುಗಳು

೨೬. ಪರ್ಶಿಯನ್ ಸನದು, ಕನ್ನಡಕ್ಕೆ ಅನುವಾದ ಡಾ.ಅಬ್ದುಲ್ ಗಣಿ ಇಮಾರತಮಾಲೆ, ಬಿಜಾಪೂರ

ಅಧ್ಯಾಯ ೫

ದೇಸಗತಿ ವಾಸ್ತುಶಿಲ್ಪ ಸ್ವರೂಪ

೫.೧. ಕಟ್ಟಡ

೫.೨. ಕಲಾವಿದರೊಡನೆ ಮಾಡಿಕೊಂಡ ಒಪ್ಪಂದ

೫.೩. ಬಲಿ ಸಂಪ್ರದಾಯ

೫.೪. ಕಟ್ಟಡದ ವಾಸ್ತು ಬದಲಾವಣೆ

೫.೫. ವಾಡೆದ ಸುತ್ತಮುತ್ತಲಿನ ಪರಿಸರ

೫

ದೇಸಗತಿ ವಾಸ್ತುಶಿಲ್ಪ ಸ್ವರೂಪ

"ಒಂದು ಕಾಲದಲ್ಲಿ ಆಳರಸರನ್ನು ಮತ್ತು ಪ್ರಜೆಗಳನ್ನು ರಕ್ಷಿಸುತ್ತಿದ್ದ ಕೋಟೆಗಳು ಈಗ ಪ್ರಾಚೀನ ಸ್ಮಾರಕಗಳಾಗಿ ಉಳಿದಿವೆ"[೧] ಅಂಥವುಗಳಲ್ಲಿ ದೇಸಗತಿ ಕೋಟೆಗಳನ್ನು ಸೇರಿಸಬಹುದಾಗಿದೆ. ಹಾಗೇ ಮೂಲ ಸ್ಥಳಗಳನ್ನು ಬಿಟ್ಟು ಸ್ಥಳಾಂತರ ಹೊಂದಿ ಮತ್ತೆ ಕೋಟೆ ಕಟ್ಟಿಕೊಂಡು ಸುಮಾರು ಎರಡುನೂರಾ ಐವತ್ತು ವರ್ಷಗಳವರೆಗೆ ಉಳಿಸಿಕೊಂಡು ಬಂದಿದ್ದಾರೆ. ಅವೆಲ್ಲವೂ ಈಗ ಅಲ್ಲಲ್ಲಿ ಬಿದ್ದುಹೋಗಿವೆ, ಹಾಳು ಕೊಂಪೆಯಾಗಿವೆ. ಗೂಬೆ, ಕಾಗೆ, ಮಂಗಗಳ ವಾಸವಾಗಿವೆ. ಬದಲಾದ ರಾಜಕೀಯ ಸನ್ನಿವೇಶ ಮತ್ತು ದೇಸಾಯಿಗಳ ಬೇಜವಾಬ್ದಾರಿತನದಿಂದ ಪ್ರಸ್ತುತ ಇವು ತಮ್ಮ ಮಹತ್ವವನ್ನು ಕಳೆದುಕೊಂಡಿವೆ. ಐತಿಹಾಸಿಕವಾಗಿ ಮಹತ್ವವಾಗಿರುವ ದೇಸಗತಿ ಕಟ್ಟಡಗಳು ಬಾಗಲಕೋಟಿ ಜಿಲ್ಲೆಯಾದ್ಯಂತ ನಾಲವತ್ತಕ್ಕೂ ಹೆಚ್ಚು ಇವೆ. ಇಲ್ಲಿ ಕೆಲವೇ ಕೆಲವು ಮಹತ್ವವಿರುವ ಮತ್ತು ಉಳಿದಿರುವ ದೇಸಗತಿಗಳ ಕಟ್ಟಡಗಳ ವಾಸ್ತು ವಿವರಗಳನ್ನು ನಿರೂಪಿಸಿಕೊಳ್ಳಲಾಗಿದೆ.

"ರಾಜ್ಯಗಳು ಸಾಮ್ರಾಜ್ಯಗಳು ಉದಯವಾಗುವುದಕ್ಕಿಂತ ಮೊದಲು ಎಲ್ಲ ಜನರು ಚಿಕ್ಕ ಊರುಗಳಲ್ಲಿ ವಾಸಿಸುತ್ತಿದ್ದರು. ತಮ್ಮನ್ನು ತಮ್ಮ ಸಂಪತ್ತನ್ನು ಕಳ್ಳರಿಂದ, ವೈರಿಗಳಿಂದ ಮತ್ತು ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಅವರು ಊರುಗಳ ಸುತ್ತಲೂ ಕೋಟೆಯನ್ನು ಕಟ್ಟಲು ಪ್ರಾರಂಭಿಸಿದರು. ಊರುಗಳು ಬೆಳೆದು, ಹಲವಾರು ಊರುಗಳು ಒಟ್ಟುಗೂಡಿ ರಾಜ್ಯಗಳಾಗಿ ಸ್ಥಾಪನೆಯಾದ ಮೇಲೆ ಆಳುವ ಅರಸರು ತಮ್ಮ ರಾಜ್ಯಗಳನ್ನು ಸಂರಕ್ಷಿಸಿಕೊಳ್ಳಲು ರಾಜಧಾನಿಯಲ್ಲಿ ಮತ್ತು ಗಡಿ ಪ್ರದೇಶಗಳಲ್ಲಿ ಬಲವಾದ ಕಟ್ಟಡಗಳನ್ನು ಕಟ್ಟಿಸಿದರು. ಒಂದು ರಾಜ್ಯದ ಅತ್ಯಾವಶ್ಯಕವಾದ ಸಪ್ತಾಂಗಗಳಲ್ಲಿ ದುರ್ಗವೂ ಒಂದು ಎಂದು ರಾಜನೀತಿ ಹೇಳುತ್ತದೆ."[೨] ಇಂಥ ವಿವೇಚನೆಯಲ್ಲಿ ಹುಟ್ಟಿಕೊಂಡ ದೇಸಗತಿ ಕಟ್ಟಡಗಳು ಮಹತ್ವಪೂರ್ಣವಾಗಿವೆ.

ದೇಸಗತಿಗಳವರ ಕಟ್ಟಡಗಳು ಕೂಡ ಆಯಕಟ್ಟಿನ ಸ್ಥಳದಲ್ಲಿವೆ. ಮಟ್ಟಿ, ಗುಡ್ಡ, ಕೊಪ್ಪ ಹಾಗೂ ಗಿರಿಗಳ ಮೇಲೆ ಕಟ್ಟಿದ್ದಾಗಿವೆ. ಅಲ್ಲಲ್ಲಿ ಈಗಲು ಕಾಣಸಿಗುತ್ತವೆ. ಅದೇ ಮಾದರಿಯಲ್ಲಿ ನದಿಯ ದಂಡೆ ಮೇಲೆ ಕಟ್ಟಿಕೊಂಡಿದ್ದಾರೆ. ಇಂಥವುಗಳನ್ನು ಕಟ್ಟುವಾಗಲೂ ಸಹ ಕೆಲವು ವಾಸ್ತುಶಾಸ್ತ್ರೀಯ ಅಂಶಗಳನ್ನು ಗಮನಿಸಿದ್ದಾರೆನ್ನುವುದು ಗಮನಾರ್ಹ ಸಂಗತಿ. ಅಂಥವುಗಳೆಂದರೆ

೧. “ವರಿಣ : ಹಳ್ಳಮುಳ್ಳುಕಲ್ಲುಗಳಿಂದ ಸುತ್ತುವರಿಯಲ್ಪಟ್ಟಿರುವುದು.

೨. ಪರಿಖ : ಆಳವಾದ ಕಂದಕಗಳಿಂದ ಸುತ್ತುವರಿಯಲ್ಪಟ್ಟಿರುವುದು.

೩. ಪರಿಘ : ಕಲ್ಲು ಅಥವಾ ಮಣ್ಣಿನ ಎತ್ತರವಾದ ಗೋಡೆಗಳಿಂದ ಸಂರಕ್ಷಿಸಲ್ಪಟ್ಟಿರುವುದು.

೪. ಜಲ : ನೀರಿನಿಂದ ಸುತ್ತವರಿಯಲ್ಪಟ್ಟಿರುವುದು.

೫. ಗಿರಿ : ಬೆಟ್ಟದ ಮೇಲಿರುವುದು

೬. ಸೈನ್ಯ : ಶಸ್ತ್ರ ಸನ್ನದ್ಧರಾದ ಸದೃಢರಾದ ಸೈನಿಕರಿಂದ ರಕ್ಷಿಸಲ್ಪಟ್ಟಿರುವ ಆವರಣ.


೭. ಸಹಾಯ : ಬಂಧುಗಳ ಮತ್ತು ಸ್ನೇಹಿತರ ಮನೆಗಳಿಂದ ಆವೃತವಾಗಿರುವುದು.”[೬]

ಈ ಮೇಲಿನ ಎಲ್ಲ ಅಂಶಗಳು ಅರಸೊತ್ತಿಗೆ ಕಟ್ಟಡಗಳಿಗೆ ಅನ್ವಯವಾಗುತ್ತಿದ್ದರೂ ದೇಸಗತಿಗಳವರೂ ಇದನ್ನು ಅನುಸರಿಸಿ ಕಟ್ಟಿದ್ದಾರೆ.

ಬಾಗಲಕೋಟಿ ಜಿಲ್ಲೆಯಲ್ಲಿ ಉಳಿದಿರುವ ಕೋಟೆಗಳನ್ನು ಗಮನಿಸಿದರೆ ಅವುಗಳು ಗಿರಿದುರ್ಗಗಳಲ್ಲಿವೆ. ಅವುಗಳೆಂದರೆ ಕೋಟೆಕಲ್ಲ (ಗುಳೇದಗುಡ್ಡದ ಮೇಲಿರುವ) ‘ಕಲ್ಲಿ’ ಗ್ರಾಮ. ೨. ಹುನಗುಂದ ತಾಲೂಕಿನ ಅಮೀನಗಡ ಗ್ರಾಮದ ಉತ್ತರಕ್ಕೆ ಬೆಟ್ಟದ ಮೇಲಿನ ಗ್ರಾಮ. ೩. ಬಾದಾಮಿ ತಾಲೂಕಿನ ಬೇಲುಗಿರಿ ಗ್ರಾಮ. ೪. ಇದೇ ತಾಲೂಕಿನ ಅಕ್ಕರಗಲ್ಲ ಗ್ರಾಮ. ೫. ಕೆರಕಲಮಟ್ಟಿ, ಹಾಗೇ ಇನ್ನುಳಿದವುಗಳೂ ಕೂಡ ಜಲದುರ್ಗಗಳಾಗಿವೆ.

‘ಕೋಟೆ’ ಎಂದಾಕ್ಷಣ ಸಾಮಾನ್ಯವಾಗಿ ರಕ್ಷಣೆಯ ಆವರಣವುಳ್ಳ ಕಟ್ಟಡಕ್ಕೆ ಕೋಟೆ ಎಂದರ್ಥ. ಇವುಗಳನ್ನು ಆಯಾ ಪ್ರದೇಶದ ಭೂರಚನೆಗೆ ಅನುಸಾರವಾಗಿ ಕಟ್ಟಿದ್ದಾರೆ. ಪ್ರಜಾಜನರ ರಕ್ಷಣೆಗೆ ಇಂಥ ಕೋಟೆಗಳನ್ನು ಇವರು ಹೊಂದಿದ್ದರ ಕುರಿತು ಕೆಲವು ಮಾಹಿತಿ ಸಿಗುತ್ತವೆ. ದೇಸಾಯಿಗಳು ಕೋಟೆ ಒಳಗಡೆ ಪ್ರಜಾಜನರ ಮನೆಗಳೂ ಕೂಡ ಕಂಡುಬರುತ್ತವೆ. ಇಂಥವುಗಳೆಂದರೆ ರಕ್ಕಸಗಿ ಒಡೆತನದ ಹುಲ್ಯಾಳ ಗ್ರಾಮ, ಹೊನ್ನಿಹಾಳ ಗ್ರಾಮ, ಮುದಕವಿ ಗ್ರಾಮ, ಹೊಸಕೋಟೆ ಗ್ರಾಮ, ಗಿರಿಸಾಗರ ಗ್ರಾಮ, ಹೊಸೂರ ಹಾಗೂ ಕೊಣ್ಣೂರ ಗ್ರಾಮಗಳಾಗಿವೆ.

೫.೧. ಕಟ್ಟಡಗಳು



೫.೧.೧. ಕೋಟೆ

ಕೋಟೆ ಗೋಡೆಯು ದೊಡ್ಡದೊಡ್ಡಕಲ್ಲು ಬಂಡೆಗಳಿಂದ ಎರಡಾಳೆತ್ತರದವರೆಗೆ ಇದ್ದು ಮೇಲೆ ಹೋದಂತೆ ಚಿಕ್ಕಕಲ್ಲುಗಳಿಂದ ಕಟ್ಟಲಾಗಿದೆ. ಇದು ಸುಮಾರು ೮ ಮೀಟರದಿಂದ ೧೦ ಮೀಟರರವರೆಗೆ ಎತ್ತರವಾಗಿದೆ. ಇದರ ದಪ್ಪವೂ ೬ ಫೂಟದಿಂದ ೮ ಫೂಟಗಳಷ್ಟು ದಪ್ಪವಾಗಿವೆ. ಅದರ ಒಳಗಡೆ ಹಾಳು ಮಣ್ಣು ತುಂಬಿದ್ದಾರೆ. ಅಲ್ಲಲ್ಲಿ ಅರ್ಧ ವೃತ್ತಾಕಾರದ ತಡೆ ಗೋಡೆ ಕಟ್ಟಿದ್ದಾರೆ. ಆದರೆ ಅವು ಗಡಗಳಾಗಿರದೆ ಗಡಗಳ ಸ್ವರೂಪದಂತಿರುವ ಕೊತ್ತಲಗಳೆನ್ನಬಹುದು. ಆಯಾ ಗ್ರಾಮ ಹದ್ದನ್ನು ಗುರ್ತಿಸಿಕೊಂಡು ಕಟ್ಟಿದ್ದು ಇದೆ. ಅದರ ಒಂದೆಡೆಗೆ ಜಲವಿರುವುದು. ಮತ್ತೊಂದೆಡೆಗೆ ಆಯಕಟ್ಟಿನ ಪ್ರವೇಶವಿರುವುದು. ಹಾಗೆ ತಗ್ಗು ಇದ್ದುದು ಕಂಡು ಬರುತ್ತದೆ. ಈ ತಗ್ಗುಗಳನ್ನು ಕಡಿದು ಮಾಡಿದವುಗಳಲ್ಲ ನೈಸರ್ಗಿಕ ಕಂದಕಗಳಾಗಿವೆ. ಹೀಗೆ ದೇಸಗತಿಯ ಒಟ್ಟಾರೆ ಭೂಪ್ರದೇಶದ ಸ್ವರೂಪ ಕಂಡುಬರುತ್ತದೆ.

ಈ ಕಟ್ಟಡಗಳಿಗೆ ಸ್ಥಳೀಯವಾಗಿ ಸಿಗುವ ಕಲ್ಲನ್ನೇ ಬಳಸಿದ್ದಾರೆ. ಕಲ್ಲಿನಲ್ಲಿಯೂ ಕೂಡ ಪ್ರಭೇದಗಳಿವೆ. ಕರಿಯಕಲ್ಲು, ಬಿಳಿಕಲ್ಲು, ಕೆಂಪುಕಲ್ಲು, ಬೆಣಚುಕಲ್ಲು ಇತ್ಯಾದಿ.

೧. ರಬಲಿ ಕಲ್ಲು	೨. ಪಾಡೇದಕಲ್ಲು
೩. ಹೆದರಕಲ್ಲು	೪. ಕಾಣಕಿ ಕಲ್ಲು
೫. ಚಾವಣಿ ಕಲ್ಲು	೬. ಬೂಚಿ ತೋಡಿ
೭. ಸಡಕಿ ತೋಡಿ	೮. ಪಟ್ಟಿ ಮೂಲಿ
೯. ಕಡಮೂಲಿ	೧೦. ಹಿತಾಡಿ
೧೧. ಪಡತರ"[೪]	

ರಬಲಿ ಕಲ್ಲು : ಇದು ಅಡ್ಡದಿಡ್ಡಿಯಾಗಿದ್ದು ಉಬ್ಬುತಗ್ಗು ಬಾಲಗಳನ್ನು ಹೊಂದಿರುತ್ತದೆ. ಕಟ್ಟಡಕ್ಕೆ ಹೊಂದಿಕೆಯಾಗುವುದಿಲ್ಲ. ಇದನ್ನು ಬರಿ ಹಾಕಲು ಉಪಯೋಗಿಸುತ್ತಾರೆ. ಕೆಲವು ವೇಳೆ ಅದನ್ನೆ ಉಪಯೋಗಿಸಿ ಕಟ್ಟಡ ಕಟ್ಟಿಸುತ್ತಾರೆ.

ಪಾಡೇದ ಕಲ್ಲು : ಇದು ದೊಡ್ಡದಾಗಿದ್ದು ಉದ್ದಬಾಲವನ್ನು ಹೊಂದಿರುತ್ತದೆ. ಹೊಂದಿಸಿ ಕಟ್ಟಲು ಎಡ, ಬಲ ಮುಖವನ್ನು ಸರಿಪಡಿಸಿ ಕಟ್ಟಡಕ್ಕೆ ಅಣಿಗೊಳಿಸುವರು. ಅದು ಪಾಡೇದ ಕಲ್ಲು ಎನಿಸುತ್ತದೆ.

ಹೆದರಕಲ್ಲು : ಇದೇ ಕಲ್ಲನ್ನೇ ದೇಸಗತಿ ಕಟ್ಟಡಕ್ಕೆ ಬಳಸಿದ್ದಾರೆ. ಇದು ಎರಡು ಫೂಟಿಗಿಂತಲೂ ದೊಡ್ಡದಾಗಿದ್ದು ದಪ್ಪವಾಗಿರುತ್ತದೆ. ಅದರ ಮುಖವನ್ನು ಹೊಡೆದು ಮುಖಕ್ಕೆ ಮುಖ ಹೊಂದಿಸಿ ಬಳಸುತ್ತಾರೆ. ಇದು ಹೆದರು ಕಲ್ಲು ಎನಿಸುತ್ತದೆ.

ಕಾಣಕಿ : ಇದು ಚಿಕ್ಕದಾಗಿದ್ದು ೧೦, ೧೫, ೧೨, ಇಂಚು ಉದ್ದ, ಅಗಲ, ಎತ್ತರವಿದ್ದು ಸುತ್ತಲೂ ನುಣುಪಾಗಿ ಹೊಡೆದು ಕಟ್ಟಡಕ್ಕೆ ಬಳಸುತ್ತಾರೆ. ಅದು ಕಾಣಿಕೆ ಎನಿಸುತ್ತದೆ. ಇಂಥದನ್ನು ದೇಸಗತಿ ವಾಡೇದ ಮುಖ ಬಾಗಿಲಿಗೆ ಕಮಾನುಗಳಿಗೆ, ಬಾಗಿಲ ಚೌಕಟ್ಟಿನ ಸುತ್ತಲೂ ಕಿಡಕಿಯ ಸುತ್ತಲೂ, ಕಿಡಕಿ ತಳದಲ್ಲಿ ಹಾಕಿದ್ದು ಕಂಡುಬರುತ್ತದೆ. ಇದಕ್ಕೆ 'ತೊಗರಿ ಹೊಡೆತ, ಹೊಳಿ' ಹಾಕಿಸಿರುತ್ತಾರೆ. ಇದರಿಂದ ಕಟ್ಟಡಕ್ಕೆ ಮೆರಗು ಬರುತ್ತದೆ.

ಚಾವಣಿ ಕಲ್ಲು : ಇದು ಐದು ಫೂಟದಿಂದ ಹಿಡಿದು ಹತ್ತು ಫೂಟಗಳವರೆಗೆ ಉದ್ದವಿರುತ್ತದೆ. ಇದು ಮೇಲ್ಹಾವಣಿಗೆ ಹಾಕಲೂ ಉಪಯೋಗಿಸುತ್ತಾರೆ.

ವಾಡೇಗಳಿಗಾಗಿಯೇ ಬಳಸಿದ ಕಲ್ಲುಗಳು ಮೇಲಿನವುಗಳೇ ಆಗಿದ್ದರೂ ಕಲ್ಲುವಡ್ಡರ ಕಲೆಯೇ ಕಟ್ಟಡಕ್ಕೆ ನೈಪುಣ್ಯತೆಯನ್ನು ಒದಗಿಸಿದೆ. ಅವರುಗಳು ಹೊಡೆತದ ನೈಪುಣ್ಯತೆ ಈ ಕೆಳಗಿನಂತಿದೆ.

ಬೂಟಿ ತೋಡಿ, ಸಡಕಿ ತೋಡಿ, ಕಡಮೂಲಿ, ಹಿತಾಡಿ, ಪಡತರ ಇವುಗಳ ಮೇಲೆ ಪುಟಾಣಿ ಹೊಡೆತ, ಸಾಸವಿ ಹೊಡೆತ, ನಾಗರ ಹೊಡೆತ, ಹೀಗೆ ಬೇರೆ ಬೇರೆ ಹೊಳಿ ಹಾಕಿಸಿ ಕಟ್ಟಿಸಿದ್ದು ಕಾಣಿಸುತ್ತದೆ. ವಾಡೇದ ಮುಂದಿನ ಭಾಗದಲ್ಲಿ ಇಂಥ ಕಲ್ಲುಗಳು ಕಂಡುಬರುತ್ತವೆ. ಕೆರಕಲಮಟ್ಟೆ ನಾಡಗೌಡರ ವಾಡೆ, ಕೊಣೆಗನೂರ ದೇಸಾಯರವಾಡೆ ಇದಕ್ಕೆ ಮಾದರಿಯಾಗಿವೆ. ಕಲ್ಲುಗಳ ಮಧ್ಯದಲ್ಲಿ ಸಂದಿ ಇಲ್ಲದಂತೆ ಒಂದು ಕಲ್ಲು ಮತ್ತೊಂದಕ್ಕೆ ಹೊಂದಿಕೊಳ್ಳುವಂತೆ ಅಂಚು ಅಂಚಿಗೆ ಹೊಡೆದು ಜೋಡಿಸಿದ್ದಾರೆ. ಕಲ್ಲುಗಳ ಮಧ್ಯದಲ್ಲಿ ಯಾವುದೆ 'ಗಾರೆ' ಇಲ್ಲ. ವಿಶೇಷವೆಂದರೆ ವಾಡೇದ ಒಳಗೆ ಪೌಳಿ ಇದ್ದು ಅದರೊಳಗಡೆ ಗೌಪ್ಯವಾಗಿ ಅಡಗಿಗೊಳ್ಳುವಂತೆ ಕಟ್ಟಿಸಿರುವುದು ಕಂಡುಬರುತ್ತದೆ.[೫] ಅಲ್ಲಿಂದ ವಿಶೇಷ ನೆಲಮನೆಗೆ ಹೋಗಿ ಬರಬಹುದಾಗಿದೆ.

ಒಟ್ಟಾರೆಯಾಗಿ ಜಿಲ್ಲೆಯಾದ್ಯಂತ ಕಂಡುಬರುವ ಕಟ್ಟಡಗಳು ೨೦೦ ರಿಂದ ೨೫೦ ವರ್ಷ ಹಳೆಯವಾಗಿವೆ. ಅಂದಿನ ಕಾಲದಲ್ಲಿ ಬೆಳೆದುಕೊಂಡು ಬಂದ ಸಾಮಾಜಿಕ ಸಾಂಸ್ಕೃತಿಕ ಪ್ರತಿಬಿಂಬವೆನಿಸಿಕೊಳ್ಳುತ್ತವೆ. ವಾಸ್ತುಶಿಲ್ಪದಂತಿರುವ ಇವು ಇತಿಹಾಸಗಾರರಿಗೆ ಪ್ರತ್ಯಕ್ಷ ನಿದರ್ಶನಗಳಾಗಿವೆ. ಕಲ್ಲು ಹೊಡೆದವನಾಗಲಿ, ಕಟ್ಟಡ ಕಟ್ಟಿದವನಾಗಲಿ ಅವರು ತೋರಿದ ಜಾಣ್ಮೆ ಮೆಚ್ಚುವಂತಹದ್ದು. ಅರಸು ಸಂಸ್ಕೃತಿಯನ್ನು ಅಳವಡಿಸಿಕೊಂಡು ದೊರೆತನಕ್ಕೆ ಗೌರವತರುವಲ್ಲಿ ಇವುಗಳು ಧ್ವನಿಸುತ್ತವೆ.

೫.೧.೨. ಗಡಗಳು

ದೇಸಗತಿ ಕಟ್ಟಡಗಳಲ್ಲಿ ಇದು ಕೂಡ ಮಹತ್ವಪೂರ್ಣ ಕಟ್ಟಡವಾಗಿದೆ. ಅರ್ಧ ವೃತ್ತಾಕಾರವಾಗಿ ಕಟ್ಟಿದ ಎತ್ತರ ಕಟ್ಟಡಕ್ಕೆ ಬುರುಜು ಕೊತ್ತಲ ಎಂದು ಕರೆದರೆ ಪ್ರತ್ಯೇಕವಾಗಿ ವೃತ್ತಾಕಾರವಾಗಿ ಕೊಪ್ಪ, ಮಟ್ಟಿ, ಮರಡಿ, ದಿನ್ನೆಗಳ ಮೇಲೆ ಸರಹದ್ದಿನಲ್ಲಿ ಕಟ್ಟಿದ ಕಟ್ಟಡವೆ 'ಗಡ' ಎಂದು ಎನಿಸಿಕೊಳ್ಳುತ್ತದೆ.

ಇದಕ್ಕೆ 'ಅಟ್ಟಳಿಕೆ' ಎಂದೂ ಕರೆಯುತ್ತಾರೆ. ಅರಸರುಗಳು ಇಂಥವುಗಳನ್ನು ಕಟ್ಟಿಕೊಂಡಿದ್ದರೂ ಈ ಕುರಿತು ಅಧ್ಯಯನವಾಗದೇ ಉಳಿದಿದೆ. ದೇಸಗತಿಗಳವರು ಈ ಜಿಲ್ಲೆಯ ಪೂರ್ವಭಾಗದಲ್ಲೆ ಹೆಚ್ಚು ಗಡಗಳನ್ನು ಕಟ್ಟಿದ್ದಾರೆ. ಕಾರಣವೆಂದರೆ ವಿಜಯನಗರ ಅರಸರಿಗೂ, ಆದಿಲ್‌ಶಾಹಿಗಳಿಗೂ ಮುದುಗಲ್ ಕೋಟೆ ಸಲುವಾಗಿ ರಕ್ಕಸಗಿ ತಂಗಡಗಿ ಯುದ್ಧದವರೆಗೂ ಮೇಲಿಂದ ಮೇಲೆ ಯುದ್ಧ ನಡೆದಿದ್ದರಿಂದ ಆಯಕಟ್ಟಿನ ಸ್ಥಳದಲ್ಲಿ ಕಟ್ಟಿದ್ದು ಕಂಡುಬರುತ್ತದೆ.

ಮುಧೋಳ ಹಾಗೂ ಜಮಖಂಡಿ ಕಡೆಗೆ ಗಡಗಳು ಕಂಡುಬರುವುದಿಲ್ಲ. ಕಾರಣ "ಈ ಭಾಗವು ಮರಾಠರ ವಶದಲ್ಲಿದ್ದದರಿಂದ, ಈ ಭಾಗದಲ್ಲಿ ಯುದ್ಧಗಳಿಗೆ ಅವಕಾಶವಿಲ್ಲದೆ ಇರುವುದರಿಂದ, ಆಯಕಟ್ಟಿನ ಸ್ಥಳ ಆಗಿರದೇ ಇರುವುದರಿಂದ ಇಂಥ ಗಡಗಳು ಕಂಡುಬರುವುದಿಲ್ಲ."[೫]

ಗಡಗಳ ಸುತ್ತಳತೆ, ಎತ್ತರ ಅದರ ವೈಶಿಷ್ಟ್ಯಕೂಡ ಮಹತ್ವದ್ದಾಗಿದೆ. ಗಡಗಳ ತಳವಿನ್ಯಾಸ ೫೦ ಪೂಟಗಿಂತಲೂ ಹೆಚ್ಚಿದೆ. ಮೇಲ್ಗಡೆ ಹೋದಂತೆ ೪೦ ಪೂಟ ಸುತ್ತಳತೆ ಇದೆ. ಅಂದರೆ ತಳದಿಂದ ಮೇಲ್ಗಡೆ ಹೋದಂತೆ ಕಡಿಮೆಯಾಗುತ್ತ ಹೋಗುತ್ತದೆ. ಎತ್ತರವು ೧೫ ಪೂಟದಿಂದ ೨೦ ಪೂಟಗಳವರೆಗೆ ಇವೆ. ಗಡಗಳಲ್ಲಿ ತುಂಬ ಹಾಳು ಮಣ್ಣು ತುಂಬಿದ್ದಾರೆ. ಇದರ ಮೇಲ್ಗಡೆ ಆ ದಿನಗಳಲ್ಲಿ ಹಗಲು ರಾತ್ರಿ ಕಾವಲುಗಾರನಿದ್ದು ಜನರ ರಕ್ಷಣೆ ಮಾಡುತ್ತಿದ್ದನೆಂದು ಸ್ಥಳೀಕರಿಂದ ತಿಳಿದುಬರುತ್ತದೆ.

ಗಡಗಳ ವೈಶಿಷ್ಟ್ಯತೆಯು ತುಂಬಾ ಮೆಚ್ಚುವಂತಹದ್ದು ಅವುಗಳಿಗೆ ಕಿಂಡಿಗಳಿವೆ. ಇದಕ್ಕೆ 'ಅಂಬುಕಿಂಡಿ' ಎಂದು ಹೆಸರು. ಪಹರೆಗಾರರು ಅಂಬುಕಿಂಡಿಯಿಂದಲೇ ಪತ್ತೆಹಚ್ಚುತ್ತಿದ್ದರು. ಕೆಲವು ಗಡಗಳ ಮೇಲೆ ಕಲ್ಲಿನ ಮೇಲ್ಛಾವಣಿ ಇದ್ದು ಅದರ ಒಳಗಡೆ ಪಹರೆಗಾರರು ಚಳಿ ಮಳೆಯಿಂದ ರಕ್ಷಿಸಿಕೊಳ್ಳುತ್ತಿದ್ದರು. ಗಡಗಳ ಮತ್ತೊಂದು ವಿಶೇಷತೆಯೆಂದರೆ ಪೂಟಿಗೊಂದರಂತೆ 'ಪನ್ನಾಳಿ'ಗೆ ಮೋರೆಯನ್ನು ಬಿಟ್ಟಿದ್ದಾರೆ. ಬಿದ್ದ ಮಳೆಯ ನೀರು ಸಲೀಸಾಗಿ ಹರಿದುಬರಲು ಅನುಕೂಲವಾಗುವಂತಿತ್ತು. ಹಾಳುಮಣ್ಣು ನೀರನ್ನು ಹಿಡಿದು ಕೊಂಡಿದ್ದರೂ ಬಸಿಯಾಗಿ ಹರಿದು ಬರುವಂತೆ ಪನ್ನಾಳಿಗೆ ಮೊರೆಗಳು ಅಲ್ಲಲ್ಲಿ ಬಿಟ್ಟದ್ದಾಗಿದೆ. ಇದು ಗಡಕ್ಕೆ ವಿಶೇಷ ಕಲೆಯಾಗಿ ತೋರಿಬರುತ್ತದೆ. ಇಂಥ ಕಟ್ಟಡ ಕಟ್ಟುವಲ್ಲಿ ಶಿಲ್ಪಿತೋರಿದ ಬುದ್ಧಿವಂತಿಕೆ ಮೆಚ್ಚುತಕ್ಕದಾಗಿದೆ. ಇಂಥ ವಿಭಿನ್ನ ರೀತಿಯಲ್ಲಿ ನಿರ್ಮಿಸಿದ ಗಡಗಳು, ಕೋಟೆ ಕಟ್ಟಡಗಳ ಸಾಲುಗಳಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಸೂಚಿಸುತ್ತವೆ. ಅಂದು ಪಹರೆಗಾರ, ತೋಫಖಾನೆಯವರ ಪಹರೆಯಲ್ಲಿದ್ದ ಈ ಗಡಗಳು ಸದ್ಯ ಕುರಿಗಾರರ ಪಹರೆಯರದಾಗಿವೆ. ಇವುಗಳು ಒಂದೆಡೆ ಬಿದ್ದು ತನ್ನ ನಿಜ ಸ್ವರೂಪವನ್ನು ಕಳೆದುಕೊಂಡಿವೆ. ಸದ್ಯ ಒಂಟಿಸಲಗದಂತೆ ಹಾಗೇ ನಿಂತಿವೆ.

೫.೧.೩. ವಾಡೆ (ಅರಮನೆ)

ದೇಸಗತಿಗಳು ರಾಜತ್ವದ ಒಂದು ಲಕ್ಷಣವಾಗಿರುವ ಅರಮನೆಯಂತಹ ವಾಡೆಗಳನ್ನು ಕಟ್ಟಿಕೊಂಡಿದ್ದು ಮಹತ್ವದ ಸಂಗತಿ. ಜೊತೆಗೆ ತಮ್ಮ ಆಳಿಕೆಯಲ್ಲಿ ಒಂದು ಸಾಮ್ರಾಜ್ಯದ ಮಾದರಿಗಳನ್ನು ಪುನರುತ್ಪಾದಿಸುವ

ತಮ್ಮದೇ ಆದ ಸಂದರ್ಭಕ್ಕೆ ಅವನ್ನು ಅಳವಡಿಸಿಕೊಳ್ಳುವ ಕ್ರಿಯೆಯನ್ನು ವಾಸ್ತುಶಿಲ್ಪಗಳಲ್ಲಿ ಕಾಣಬಹುದಾಗಿದೆ.

ಸ್ಥಾನಿಕ ಸಂಸ್ಥಾನೀಕರಾದ ದೇಸಾಯಿ, ನಾಡಗೌಡರ ತಮ್ಮ ಶ್ರೇಣೀಕೃತ ಅಧಿಕಾರದ ಭೌತಿಕ ಸಾಮರ್ಥ್ಯ, ಪ್ರತಿಷ್ಠೆ, ಶಾಸ್ತ್ರಬದ್ಧತೆ ಹಾಗೂ ಕಲಾತ್ಮಕತೆಯ ಪ್ರತೀಕವಾಗಿ ಈ ಕಟ್ಟಡಗಳು ಕಂಡುಬರುತ್ತವೆ. ಉನ್ನತ ಕಲಾ ಶೈಲಿಯ ಶಾಸ್ತ್ರೀಯವಾದ ಮಾರ್ಗದಲ್ಲಿ ಇಲ್ಲಿನ ಮಂಟಪಗಳ ರಚನೆಯಲ್ಲಿಯಾಗಿದೆ. ಇಂಥ ನಿರ್ಮಿತಿಗಳು ಸಂಸ್ಥಾನಿಕ ದೇಸಗತಿಗಳಲ್ಲಿ ತಲೆ ಎತ್ತಿವೆ. ಪಂಚಮಹಲ್‌ಗಳೆಂದು ಕರೆಸಿಕೊಳ್ಳುವ ಈ ಸಂಸ್ಥಾನಗಳ ಈ ವಾಡೆಗಳು ದೇಸಗತಿ ಕೇಂದ್ರಗಳಾಗಿವೆ. ಈ ಕಟ್ಟಡಗಳು ಕ್ರಿ.ಶ.೧೫೦೦ ಹೊತ್ತಿಗೆ ದೇಸಗತಿಗಳ ಭೌತಿಕ ಅಧಿಕಾರಕ್ಕೆ ಪೂರಕವಾಗಿಯೇ ಇವೆ.

ದೇಸಗತಿ ಮನೆತನಗಳು ವಿಭಿನ್ನ ಮಟ್ಟದಲ್ಲಿ ತಮ್ಮ ಅರಮನೆ ಮಾದರಿಗಳನ್ನು ಸ್ಥಾಪಿಸಿದವು. ಇಪ್ಪತ್ತು(೨೦) ದೇಸಗತಿಗಳ ಪೈಕಿ ರಕ್ಕಸಗಿ ಸಂಸ್ಥಾನ, ಜಾಲಿಹಾಳ ಸಂಸ್ಥಾನ, ಹೊನ್ನಿಹಾಳ ಸಂಸ್ಥಾನ, ಲೋಕಾಪೂರ ಸಂಸ್ಥಾನ, ಕೊಣೆಗನೂರ ಹಾಗೂ ತೇರದಾಳ ಹನಗಂಡಿ ಸಂಸ್ಥಾನಗಳ ವಾಡೆಗಳು ದೇಸಗತಿಗಳಲ್ಲಿಯೇ ಮೇಲ್ಮಟ್ಟದ ವಾಡೆಗಳಾಗಿವೆ. ಇನ್ನುಳಿದ ದೇಸಗತಿಯವರು ವಾಡೆಗಳನ್ನು ಕಟ್ಟಿಸಿಕೊಂಡರೂ ಪಂಚಮಹಲ ದೊರೆಗಳಿಗಿಂತ ವಿಭಿನ್ನವಾದ ರೀತಿ ಕಂಡುಬರುತ್ತದೆ. ವಾಡೆಗಳಲ್ಲಿ ಒಳಗಡೆ ಕುಸುರಿ ಕೆಲಸದ ಅಲಂಕರಣಗಳು ಇರುತ್ತವೆ. ಇದು ಹೆಚ್ಚಾಗಿ ಕಟ್ಟಿಗೆಯಲ್ಲಿ ಇರುವುದು ವಿಶೇಷ.

ಇದುವರೆಗೂ ಗಮನಕ್ಕೆ ಬಾರದೇ ಇತಿಹಾಸದಲ್ಲಿ ಮರೆಮಾಚಿಕೊಂಡಿರುವ ವಾಡೇಗಳು ಇಂದು ನಮಗೆ ಹೆಚ್ಚು ಮುಖ್ಯವಾಗಿವೆ. ಇಲ್ಲಿಯವರೆಗೆ ಈ ಕುರಿತು ಸಂಶೋಧಕರು ಕಣ್ಣು ಹಾಯಿಸದೇ ಇರುವುದು ವಿಪರ್ಯಾಸ. ಈ ಕುರಿತು ಹೆಚ್ಚು ಅಧ್ಯಯನವಾಗಬೇಕಾಗಿದೆ. ನಿರ್ಲಕ್ಷ್ಯ ತೋರಿದ್ದಾದರೆ ಇದ್ದ ಇತಿಹಾಸವು ನಶಿಸಿ ಹೋಗುತ್ತದೆ.

ದೇಸಗತಿಗಳ ವಾಡೆಗಳನ್ನು ಎಂದು ಕಟ್ಟಿದರು ಎಂಬುದು ನಿಖರವಾದ ದಾಖಲೆಗಳಿಲ್ಲ. ಯಾವ ಕಟ್ಟಡಗಳ ಮೇಲೂ ಇಸ್ವಿಯನ್ನು ದಾಖಲಿಸಿಲ್ಲ. ಈ ಕುರಿತು ದಾಖಲೆಗಳಿದ್ದರೂ ಅವುಗಳ ಲಭ್ಯತೆ ಆಗಿಲ್ಲ. "೧೭ ರಿಂದ ೨೦ನೇ ಶತಮಾನದ ಆರಂಭದ ಕಾಲದವರೆಗೆ ರಚನೆಗೊಂಡಿರುವ ಇಂಥ ಅನೇಕ ವಾಡೆ-ರಾಜವಾಡೆಗಳು ಉತ್ತರ ಕರ್ನಾಟಕದಲ್ಲಿವೆ."[೬] ಇವೆಲ್ಲವುಗಳು ಶಿಥಿಲಾವಸ್ಥೆಯಲ್ಲಿವೆ. ಇವುಗಳ ಯೋಗಕ್ಷೇಮಕ್ಕೆ ಯಾರು ಇರುವುದಿಲ್ಲ. ಕೆಲವು ದೇಸಗತಿಯವರು ಇದ್ದರೂ ವಿಶಾಲವಾದ ವಾಡೆಯನ್ನು ರಕ್ಷಿಸಿಕೊಳ್ಳುವಷ್ಟು ಸಮರ್ಥರಾಗಿರುವುದಿಲ್ಲ. ಅಲ್ಲದೆ ಅವುಗಳಿಗೆ ಉತ್ತರಾಧಿಗಳು ಇಲ್ಲದೇ ಬಿಕೋ ಎನ್ನುತ್ತಿವೆ. ಮತ್ತೊಂಡೆ ಕ್ರಯಕ್ಕೆ ಪಡೆದುಕೊಂಡವರು ವಾಸಿಸುತ್ತಿದ್ದಾರೆ. ಅದರ ಅಳಿದುಳಿದ ಕೆಲಭಾಗವು ನಿರ್ಜನವಾಗಿದ್ದು ಮುಳ್ಳುಕೊಂಪೆಗಳಿಂದ ತುಂಬಿ ಅನಾಥವೆಂಬಂತೆ ಬಿದ್ದುಕೊಂಡಿವೆ. ಕೃಷ್ಣಾನದಿ ದಂಡೆಯ

ಮೇಲೆ ಬರುವ ಕೆಲವು ವಾಡೇಗಳು ಆಲಮಟ್ಟಿ ಹಿನ್ನೀರಿನಿಂದ ಸಂಪೂರ್ಣ ಮುಳುಗಿ ಹೋಗಿವೆ. ಇವುಗಳಲ್ಲಿ ಹೊನ್ನಿಹಾಳ, ಸೊನ್ನ, ಬಿದರಿ, ಮನ್ನಿಕೇರಿ ಹಾಗೂ ಬಾಗಲಕೋಟಿ ಸೇರಿವೆ. ಇವುಗಳಿಗೆ ಬೇರೆ ಕಡೆಗೆ ಸ್ಥಳ ನಿಗದಿಪಡಿಸಿ ಪುನರ್ವಸತಿ ಕೇಂದ್ರಗಳಲ್ಲಿ ಬಿಟ್ಟಿದ್ದರೂ ದೇಸಾಯಿಗಳಲ್ಲಿ ನಿರ್ಲಕ್ಷ್ಯ ತಾತ್ಸಾರಭಾವನೆಗಳಿರುವುದರಿಂದ ಅಂಥ ವಾಡೇ ಕಟ್ಟುವ ಗೋಜಿಗೆ ಹೋಗದೆ ತಟಸ್ಥರಾಗಿದ್ದುದು ತಿಳಿದುಬರುತ್ತದೆ. ಇದಕ್ಕೆ ಕಾರಣ ಕೂಡ ಅವರಿಂದ ಕೇಳಿ ಬರುತ್ತದೆ. "ನೋಡಿ ನಾವೇನು ವಾಡೇ ಕಟ್ಟುದಿಲ್ಲ. ಕಟ್ಟಿದರೂ ಅದರ ಪ್ರಯೋಜನವಾಗುದಿಲ್ಲರಿ, ವಾಡೇ ಮುಳುಗಿದ್ದರ ಕುರಿತು ಹಣ ದೊರಕಿದ್ದರೂ ಮೊದಲಿನ ಹಾಗೆ ಆಗುದಿಲ್ಲರಿ. ಅದರ ವ್ಯವಸ್ಥೆಗೆ ನೂರಾರು ಆಳುಗಳು ಬೇಕು. ನಾವಿಬ್ಬರ ಗಂಡ ಹೆಂಡರು ಇದ್ದು ಏನು ಮಾಡೂದ ಅದರಿ"[೭] ಎನ್ನುತ್ತಾರೆ. ಮುಂದುವರಿದಂತೆ "ನಮ್ಮ ವಾಡೇ ಮುಳುಗಿದೆ, ಅದರ ಕಟ್ಟಿಗೆ ತಂದ್ದಿ, ಅದರ ಕಲ್ಲು, ಮಣ್ಣು ತರಾಕ ಆಗುದಿಲ್ಲರಿ. ತೋಡಿ ಕಲ್ಲ ಬಿಟ್ಟಬರೂದ ಅಂದ್ರ ಮನಸ್ಸಿಗೆ ತಾಪ ಆಗುತ್ತದೆ. ಬರೇ ತೊಲಿ, ಜಂತಿ, ಕಂಬಗಳಿಂದ ಏನಾಗುದರಿ ಎಂದು ವಿವರವಾಗಿ ಹೇಳುತ್ತಾರೆ."[೮] ಇವರ ಮಾತಿನ ಹಿನ್ನೆಲೆಯನ್ನು ಗಮನಿಸಿದಾಗ ಇವರ ಮಾತಿನ ದಾಟಿಯಲ್ಲಿ ನಿರುತ್ಸಾಹವಿದೆ. ಆಶೆ ಕಳೆದುಕೊಂಡಂತೆ ಕಾಣುತ್ತದೆ. ಇದು ಅಷ್ಟೇ ಕೂಡ ಸತ್ಯವೆನಿಸಿದೆ. ಕೃಷಿಯನ್ನೆ ಅವಲಂಬಿಸಿ ತಮ್ಮ ಜೀವನ ಸಾಗಿಸುತ್ತಿದ್ದರಿಂದ ಹಳೇ ಮಾದರಿ ಕಟ್ಟಡಕ್ಕ ಲಕ್ಷ್ಯವಹಿಸದೆ ಹೊಸ ಹೊಸ ವಿನ್ಯಾಸದ ಕಟ್ಟಡಕ್ಕೆ ಜೋತು ಬಿದ್ದುದು ಕಂಡುಬರುತ್ತದೆ.

೫.೧.೩.೧ ದೇಸಗತಿ ವಾಡೇಗಳ ಒಳ ಸ್ವರೂಪ

ಊರಿನ ದೊಡ್ಡ ಮನೆತನದ ಕಟ್ಟಡಕ್ಕೆ ವಾಡೆ, ಅರಮನೆ, ದೊಡ್ಡಮನೆ ಎಂತಲೂ ಕರೆಯುವ ಪದ್ಧತಿ ಈಗಲೂ ಹಳ್ಳಿಗರಲ್ಲಿದೆ. ಇಂಥ ಮನೆತನಗಳಿಗೆ ಏನೇ ಅಡ್ಡಹೆಸರುಗಳಿದ್ದರೂ ದೇಸಾಯಿಗಳ ವಾಡೆ, ದೇಸಮುಖರ ವಾಡೆ, ನಾಡಗೌಡರ ವಾಡೆ ಎಂದು ಕರೆಯುವುದು ಸಾಮಾನ್ಯ. ಇಂಥ ವಾಡೆಗಳು ಒಂದರ್ಥದಲ್ಲಿ ಆಳರಸರ ಕಾಲದಿಂದಲೂ ವಾಸಕ್ಕಾಗಿ ಕಟ್ಟಿಕೊಂಡ ವಿಶಿಷ್ಟ ವಾಸ್ತುಶಿಲ್ಪದ ಕಟ್ಟಡಗಳಾಗಿವೆ. ಕೆಲವು ಅದರ ಒಳಗಡೆ ಕಂಡುಬಂದರೆ ಇನ್ನೂ ಕೆಲವುಗಳು ಕೋಟೆ ರಹಿತ ವಾಡೆಗಳು ಕಂಡುಬರುತ್ತವೆ. ಬಹುತೇಕ ಇವು ಇತ್ತೀಚಿನ ವಾಡೆಗಳೆನ್ನಬಹುದು. ಈ ಕಟ್ಟಡಗಳು ಜನಸಾಮಾನ್ಯರಿಗಿಂತ ಭಿನ್ನವಾದ ರಚನೆಗಳು. ಈ ವಾಡೆಯ ರಚನೆಗಳು ಸರಳ ರಚನೆಗಳಾಗಿವೆ. ದೇಸಾಯಿ ವಾಸಿಸುವ ಮನೆ ವಿಶಾಲವಾದ ಅರಮನೆಯಂತಿದೆ. ಇಂಥ ವಾಡೇ ದೇಸಾಯಿಗಳ ಆಡಳಿತದ ಪರಗಣದಲ್ಲಿ ಹಾಗೂ ಅವರು ವಾಸಿಸುವ ಗ್ರಾಮೀಣ ಪ್ರದೇಶದಲ್ಲಿ ಕಂಡುಬರುತ್ತವೆ.

ಈ ವಾಸ್ತುಗಳಲ್ಲಿ ವೈವಿಧ್ಯಮಯ ರಚನಾ ವಿನ್ಯಾಸಗಳೂ ಪ್ರಭೇದಗಳು ಇವೆ. ಅವು

೧. ಜಗುಲಿ ೨. ಹಜಾರ

೩. ಚೌಕಿ ೪. ಖಜಾನೆ

೫. ಶಸ್ತ್ರಗಾರ ೬. ದರ್ಬಾರ ಕೋಣೆ

೭. ವಿಶ್ರಾಂತಿಗೃಹ ೮. ಶಯ್ಯಾಗಾರ

೯. ಪೂಜಾಗೃಹ ೧೦. ಹರಿಗೆ ಕೋಣೆ

೧೧. ಅಡಿಗೆ ಮನೆ ೧೨. ಸ್ನಾನದ ಗೃಹಗಳು

೧೩. ಪ್ರಸಾದ ಕೋಣೆ ೧೪. ಇತರೆ ಕೋಣೆಗಳು

೧೫. ದಾಖಲೆಗಳ ಕೋಣೆ (ರಿಕಾರ್ಡ ರೂಂ)

ಹೀಗೆ ವಾಡೆಯಲ್ಲಿ ಕಾಣಸಿಗುತ್ತವೆ. ವಾಡೆದ ಒಳಗೆ ಸದರು ಆಡಳಿತದ ಕಟ್ಟಡ, ನ್ಯಾಯ ತೀರ್ಮಾನ ಕಟ್ಟಡ, ಕುದುರೆ, ಆನೆ, ಸೇವಕರುಗಳಿಗಾಗಿ ಲಾಯದ ಮನೆಗಳು ಹೀಗೆ ದೊಡ್ಡ ಸಮುಚ್ಛಯವೇ ಅದರಲ್ಲಿ ಅಂತರ್ಗತವಾಗಿರುತ್ತದೆ. ವಾಡೆಯ ವ್ಯಾಪ್ತಿ ಸುಮಾರು ಐದು ಎಕರೆಗಳಿಂದ ಹದಿನೈದು ಎಕರೆಗಳವರೆಗೆ ವಿಶಾಲವಾಗಿ ಹರಡಿಕೊಂಡಿದೆ.

ಇನ್ನೂ ವಿಶೇಷತೆ ಎಂದರೆ ವಾಡೆದೊಳಗಿನ ಮುಂದಿನ ಕಮಾನು, ಮಾಡಗಳು, ಕಿಡಕಿಗಳು, ಕುದುರೆ ಲಾಯದ ಮನೆಗಳು ಇಂಡೋಸಾರ್ಸೆನಿಕ್ ಮಾದರಿಯನ್ನು ಹೊಂದಿವೆ. ಕೆಲವು ವಾಡೆಗಳ ಮಹಾದ್ವಾರವು ಇತರೆ ಕಟ್ಟಡಗಳು ಆಯಾತಾಕಾರವಾಗಿದ್ದರಿಂದ ಇವು ವಾಡೇಗಳ ವಾಸ್ತುರಚನೆಯ ವೈಶಿಷ್ಟತೆಯಾಗಿದ್ದುದು ಕಂಡುಬರುತ್ತದೆ. ವಾಡೆಗಳಲ್ಲಿ ಅಂದರೆ ವಿಶಾಲವಾದ ಸದರಿನಲ್ಲಿ ಕರ್ನಾಟಕದ ಚಿತ್ರಕಲೆಗೆ ಅಮೂಲ್ಯ ಕೊಡುಗೆ ನೀಡಬಲ್ಲ ಭಿತ್ತಿ ಚಿತ್ರಗಳ ಸೊಗಸಾದ ಕೆತ್ತನೆಗಳು ದರ್ಬಾರ ಹಾಲಿನಲ್ಲಿವೆ. ಅವರು ಬಳಸಿದ ಬಣ್ಣಗಾರಿಕೆ, ಶೈಲಿ, ಕಥಾನಿರೂಪಣೆಯಲ್ಲಿ ತಮ್ಮದೇ ಆದ ಶೈಲಿಯನ್ನು ಹೊಂದಿವೆ. ಅಂಥವುಗಳಲ್ಲಿ ಸುಂದರ ಸ್ತ್ರೀಯೊಬ್ಬಳು ಪೂಜೆ ಮಾಡುವ ಪೂಜಾಗೃಹದ ಭಿತ್ತಿಯ ಚಿತ್ರಗಳು ಕೂಡ ಇದೇ ಮಾದರಿಯಲ್ಲಿ ರಚನೆಗೊಂಡಿವೆ. ಹಾಗೇ ವಾಡೇದ ಸ್ತ್ರೀಯರ (ದೇಸಾಯಿಣಿಯರ) ಕೈಬರಹದ ಫೋಟೊಗಳು, ಅಲಂಕಾರಗಳೊಂದಿಗೆ (ಉಡಿಗೆ ತೊಡಿಗೆ) ಸಿಂಗಾರಗೊಂಡು ತೂಗು ಹಾಕಿದ್ದು ವಿಶೇಷ ಗಮನಸೆಳೆಯುತ್ತದೆ. ವಾಡೇದ ಬಾಗಿಲಲ್ಲಿ ವಿಭಿನ್ನ ಶೈಲಿ ಮರಕೆತ್ತನೆ ಕೆಲಸ ವಿಶೇಷವಾಗಿದೆ. ವೀರಶೈವ ಲಿಂಗಾಯತ ದೇಸಗತಿಗಳ ಬಾಗಿಲವಾಡದ ಎಡಬಲಗಳಲ್ಲಿ ಜಯ-ವಿಜಯ ಮೂರ್ತಿಗಳಿದ್ದು ಕೈಯಲ್ಲಿ ಬಡಿಗೆ (ಕೋಲು) ಹಿಡಿದು ನಿಂತಿದ್ದಾರೆ. ಮತ್ತು ಬಾಗಿಲವಾಡದ ಹಣೆ ಪಟ್ಟಿಯ ಮೇಲೆ ವಿಘ್ನೇಶ್ವರನ ಮೂರ್ತಿ ಇದೆ. ಎಡಬಲಕ್ಕೂ 'ಮಯೂರ'ದ ಆಕಾರದ ಹಾಗೆ ಚಿತ್ರವಿದ್ದು ಸುತ್ತೆಲ್ಲ ನಾಗಮುರಗಿ ಹಾಗೆ ಸುಳುವು ಇದೆ. ಮಯೂರ ದೇಹವಿದ್ದು ದೇಹದ ಮೆಲ್ಗಡೆ ಜಯ-ವಿಜಯರ ಹಾಗೇ ಮೂರ್ತಿಗಳು ಇವೆ. ಅದನ್ನೆಲ್ಲವನ್ನು ಬಲಗೈಯಲ್ಲಿ ಎತ್ತಿ ಹಿಡಿದ ಹಾಗೆ ಕೆತ್ತಿಸಿದ್ದಾರೆ. ಒಂದು ಸುಳುವಿಗೆ ಒಂದಕ್ಕೊಂದು ಅಂಟಿಕೊಂಡಿವೆ. ಬಾಗಿಲವಾಡದ ಮೇಲೆ ಪ್ರಭುಳಿ(ಪ್ರಭಾವಳಿ) ಇದ್ದು ಚಿತ್ತಾಕರ್ಷಕವಾಗಿದೆ. ತಲೆ ಮೇಲೆ ಎಡಬಲಗಡೆ

ಹುಲಿಯ ಮೂರ್ತಿಗಳಿದ್ದು ಎರಡೂ ಕಾಲು ಜೋಡಿಸಿ ಆಸೀನರೂಢವಾಗಿವೆ. ಬಾಗಿಲವಾಡದ ಎಡಬಲಗಳಲ್ಲಿ ವಿಶಾಲವಾದ ಗವಾಕ್ಷಿಗಳಿದ್ದು ಅದರ ಸುತ್ತುಮುತ್ತಲೂ ಮರಕೆತ್ತನೆ ಕೆಲಸ ಮನಾಕರ್ಷವಾಗಿದೆ. ಒಂದೊಂದು ಭಾಗದ ಮರಕೆತ್ತನೆ ಕೆಲಸದ ಕಲೆಗೆ ಭಿನ್ನವಾಗಿ ಹೆಸರಿಸಿದ್ದು ಇದೆ. ಅದೆಂದರೆ "ಹಗ್ಗಮುರಗಿ, ನಾಗಮುರಗಿ, ಸುರಗಿ ಮುರಗಿ ಎಂದು ಹಿರಿಯ ತಲೆಮಾರಿನ ಕಲಾವಿದರಿಂದ ತಿಳಿದುಬರುತ್ತದೆ."[೯] ಗವಾಕ್ಷಿಗಳ ಮೇಲೂ ಪ್ರಭುಳಿ ಇದ್ದು ಸುಳುವಿನಿಂದ ವಿಶೇಷತೆಯನ್ನು ಹೊಂದಿದೆ. ಇಂಥ ಕಲೆಯನ್ನು ಅಳವಡಿಸಿಕೊಂಡ ಕಲಾವಿದನ ನೈಪುಣ್ಯತೆ ಎದ್ದುಕಾಣುತ್ತದೆ.

ಬಾಗಿಲುವಾಡದ ತೋಳುಗಳಲ್ಲಿ ಹಾಗೂ ಕಂಬ ಬೋದಿಗೆ ಮದನ ಕೈಗೊಂಬೆ ಇವೆ. ನಯ, ಸುಣಪು ಚಿತ್ತಾರಗಳು ಮನವನ್ನು ಸೂರೆಗೊಳ್ಳುತ್ತವೆ. ವೀರಶೈವೇತರ ದೇಸಗತಿಗಳವರ ವಾಡೇದ ಚಲುವಿಕೆ ಸ್ವಲ್ಪ ಭಿನ್ನವಾಗಿದೆ. ಈ ಮೇಲೆ ವಿವೇಚಿಸಿದ ಎಲ್ಲ ಅಂಶಗಳಿದ್ದರೂ ಕ್ಷತ್ರೀಯ ದೇಸಗತಿಗಳಲ್ಲಿ ಬಾಗಿಲವಾಡದ ಮೇಲೆ ಸೂರ್ಯ ಚಂದ್ರರ ಚಿತ್ತಾರವಿದೆ. ನಡುವೆ ಚಿಗರಿ ಚಿತ್ರವಿದೆ. ಎಡಬಲ ಹಾಗೂ ಮಧ್ಯೆ ಶ್ರೀ ನಾರಾಯಣನ ಸಂಕೇತಗಳಿವೆ. ಹಾಗೇ ಜೈನ ದೇಸಗತಿಯ ವಾಡೇದಲ್ಲಿ ಕೂಡ ಮೂರ್ತಿಗಳಿಲ್ಲ, ಆದರೆ ಬಾಗಿಲ ತೋಳುಗಳಿಗೆ ಬಾಗಿಲವಾಡದ ಹಣೆಪಟ್ಟಿಗೆ ಚಿತ್ತಾರದ, ಜೈನರ ಸಂಕೇತದ ಹೂವಿದೆ. ಅದು ಉಬ್ಬು, ತಗ್ಗು ಹೊಂದಿದೆ. ಹೀಗೆ ವಿಭಿನ್ನವಾದ ತಮ್ಮ ಧಾರ್ಮಿಕ ನಂಬಿಕೆಯಂತೆ ಕಲೆಯನ್ನು ಹೊಂದಿದ್ದು ಕಾಣಸಿಗುವುದು ದೇಸಗತಿ ವಾಡೆಗಳಲ್ಲಿ ಮಾತ್ರ.

ಒಟ್ಟಾರೆ ಕಟ್ಟಡ, ಮರಕೆತ್ತನೆ ಕೆಲಸ ಉತ್ತಮ ವಾಸ್ತುರಚನೆ ಮಾದರಿ ಎನಿಸಿವೆ. ದೇಸಗತಿ ವಾಡೇಗಳು ಸಾಂಸ್ಕೃತಿಕ ಪ್ರತಿರೂಪಗಳು. ಕರ್ನಾಟಕದ ವಾಸ್ತುಶಿಲ್ಪಕ್ಕೆ ಮತ್ತು ಇತಿಹಾಸಕ್ಕೆ ಮರೆಯಲಾರದ ಕೊಡುಗೆ ನೀಡುವಲ್ಲಿ ಇವು ಕಂಡುಬರುತ್ತದೆ.

೫.೧.೩.೨. ಕಂಬಗಳು, ಚೌಸಪ್ಪಿ, ಸದರ

ಉತ್ತರ ಕರ್ನಾಟಕದಲ್ಲಿ ಸಿರಿವಂತಿಕೆಗೆ ಇನ್ನೊಂದು ಹೆಸರೆಂದರೆ ದೇಸಾಯಿಗಳ ವಾಡೆಗಳು. ಅಲ್ಲಿನ ಚಲುವಿಕೆಗೆ ಮನಸೋಲದವರೇ ಇಲ್ಲ. ಹಲವು ಶತಮಾನಗಳ ಹಿಂದೆ ವೈಭವದಿಂದ ಮೆರೆದ ಈ ವಾಡೆಗಳ ಸ್ಥಿತಿ ಇಂದು ತುಂಬಾ ಶಿಥಿಲಾವಸ್ಥೆಯಲ್ಲಿದೆ. ಈಗಾಗಲೆ ಚರ್ಚಿಸಿದಂತೆ ಕಲೆ ವಿನ್ಯಾಸವು ಉತ್ಕೃಷ್ಟ ಮಟ್ಟದ್ದಾಗಿರುವುದರಿಂದ ಮುಳಗಡೆ ಹೊಂದಿ ಜಲಾವೃತವಾಗಿ ಹೋಗಿದೆ. ಅವುಗಳಲ್ಲಿ ದೇಸಾಯಿಯರ ಸದರ (ಬೈಟಕಖಾನೆ)ದ ಕೆಲವು ಅಂಶಗಳನ್ನು ಇಲ್ಲಿ ಪ್ರತ್ಯೇಕವಾಗಿ ಚರ್ಚಿಸಲಾಗಿದೆ.

ವಾಡೇದ ಬೃಹತ್ ಕಟ್ಟಡದಿಂದ ಹಿಡಿದು ವಾಡೇದ ಕಟ್ಟಿಗೆಯ ಬಂಗಲೆಯೇ ಇಡೀ ಮನೆಯ ಪ್ರಮುಖ ಆಕರ್ಷಣೆ. ವಾಡೇದ ಒಳನೋಟ ಸಾಲು ಕಂಬಗಳು, ಕಮಾನು ತಿರುವಿದ ಮಂಟಪ ರಚನೆ. ಚಿತ್ತಾಕರ್ಷಕವಾಗಿ ಅಚ್ಚರಿಮೂಡಿಸುತ್ತಿವೆ. ದೇಸಾಯಿಗಳು ವರ್ಷಕ್ಕೊಂದಾವರ್ತಿ ಅಗಸಿ, ಕುಸುಬಿ, ಸಂಗಾ

ಬೀಜಗಳನ್ನು ಅರೆದು ಎಣ್ಣೆ ತಯಾರಿಸಿ ಶುದ್ಧವಾದ ತೈಲ ತಯಾರಿಸಿ ತೊಲೆ, ಕಂಬ, ಕಮಾನು, ಮಂಟಪ, ಬೋದುಗಳಿಗೆ ಎಲ್ಲಕ್ಕೂ(ಕಟ್ಟಿಗೆಯ ಮಾದರಿಗೆ) ಎಣ್ಣೆ ಉಣಿಸುತ್ತಿದ್ದರು, ತೀಡುತ್ತಿದ್ದರು. ಈ ಕಾರಣದಿಂದ ಕಟ್ಟಿಗೆಯಲ್ಲಿ ಅರಳಿದ ಎಲ್ಲ ಕಲೆಯೂ ಕಂದುಬಣ್ಣದಿಂದ ಹೊಳೆಯುತ್ತಿತ್ತು. ಅಂಥ ನೋಟ ಐದಾರು ವರ್ಷಗಳ ಹಿಂದೆ ಹೊನ್ನ್ಯಾಳ ದೇಸಗತಿ ವಾಡೆಯಲ್ಲಿತ್ತು. ಸದ್ಯ ಕಾಣಸಿಗುವುದಿಲ್ಲ. (ಇದಕ್ಕೆ ಸಂಬಂಧಿಸಿದ ಭಾವಚಿತ್ರವನ್ನು ಅನುಬಂಧ ೨ರಲ್ಲಿ ಲಗತ್ತಿಸಲಾಗಿದೆ.)

೫.೧.೩.೩. ಬಳಸಿದ ಕಟ್ಟಿಗೆ

ವಾಡೇದಲ್ಲಿ ಬಳಸಿದ ಕಟ್ಟಿಗೆಯ ಸುಮಾರು ಭಾಗವು ಸಾಗವಾನಿಯದ್ದೇ ಇರುತ್ತದೆ. ಇದರಲ್ಲಿಯ ವಿಶೇಷತೆಯೆಂದರೆ "ಕಟ್ಟಿಗೆ ಒಳಗಿನ 'ಗಂಡು ಕೆಚ್ಚ'ನ್ನು ಉಪಯೋಗಿಸಿದ್ದರೆಂದು ಹೇಳುತ್ತಾರೆ."[೦೦] ನೂರಾರು ವರ್ಷಗಳಾದರೂ ಕಲೆಯು ನಸಿಸದೇ ತನ್ನ ಸ್ವರೂಪವನ್ನು ಪ್ರತಿಬಿಂಬಿಸುತ್ತದೆ. ದೇಸಗತಿಯ ಹೆಬ್ಬಾಗಿಲು ೧೫ ಪೋಟು ಎತ್ತರ ೫ ಫೂಟ ಅಗಲವಾಗಿವೆ. ಎರಡು ಬಾಗಿಲವಾಡದ ಪಳಿಗಳು ಅಖಂಡವಾಗಿದೆ. ಅದನ್ನು ಎಳೆದು ಮುಚ್ಚಲು ಎರಡಾಳು ಬೇಕಾಗುತ್ತದೆ. ಹಾಗೆ ಬಾಗಿಲು ಮುಚ್ಚಿದ ಮೇಲೆ ಅಳದಂಡಿಗಿ ಇದ್ದು ಇದು ಕೂಡ ೮ ೮ ಇಂಚು ಚೌರಸ ಇರುತ್ತದೆ. ಇದನ್ನು ಎಳೆದ ಮೇಲೆ, ಲಗಳಿ ಹಾಕಿದ ಮೇಲೆ ತೆರೆಯಲು ಬರುವುದಿಲ್ಲ. ವಾಡೇದ ಒಳಸೇರುವುದಾದರೆ ಬಾಗಿಲವಾಡದ ಪಳಿಯ ಒಂದು ಕಡೆಗೆ ಚಿಕ್ಕದಾದ ಬಾಗಿಲಿದ್ದು ಅದು 'ಜೀನೆ' ಎನಿಸಿಕೊಳ್ಳುತ್ತದೆ. ಇದರ ಮುಖಾಂತರ ಬಾಗಿಲು ಕಾವಲುಗಾರನ ಪರವಾನಿಗೆ ಪಡೆದು ಒಳಬರುತ್ತಿದ್ದರು. ಸದ್ಯಕ್ಕೂ ಇದು ಮುಂದುವರಿದುದು ಕಂಡುಬರುತ್ತದೆ.

ದೇಸಗತಿ ವಾಡೇದ ಕಟ್ಟಿಗೆ ಕೆಲಸಕ್ಕೆ ನಯನಾಜೂಕಿಗೆ, ಸಾಗವಾನಿ ಹಾಗೂ ಕೆಲವು ಕಡೆಗೆ ದೇವರ ಮಂಟಪಕ್ಕೆ ಶಯ್ಯಾಗೃಹದಲ್ಲಿರುವ ಮಂಚಕ್ಕೆ ಶ್ರೀಗಂಧದ ಕಟ್ಟಿಗೆ ಕೂಡ ಬಳಸಿದ್ದಾರೆ. ಆದ್ದರಿಂದ ಶ್ರೀಮಂತಿಕೆಯ ಮತ್ತೊಂದು ಹೆಸರೆಂದರೆ ದೇಸಾಯಿಯರ ವಾಡೇ ಎನ್ನುವುದನ್ನು ಈಗಲೂ ಜನರು ಹೇಳುತ್ತಾರೆ.

ಬಾಗಿಲು ವಾಡದ ಪಳಿಗಳಿಗೆ ಮೇಲೆ, ಮಧ್ಯ, ಕೆಳಗಡೆ ಪಟ್ಟಿ ಬಡೆದಿರುತ್ತಾರೆ. ಅಲ್ಲದೆ ಅದಕ್ಕೊಂದು ಉದ್ದ ಪಟ್ಟಿ ಬರೆದಿರುತ್ತಾರೆ. ಅವೆಲ್ಲಕ್ಕೂ ಒಂದೊಂದು ಹೆಸರಿದೆ. ಅದೆಂದರೆ

೧. ಅಡ್ಡ ಪಟ್ಟಿಗಳಿಗೆ 'ಗಂದೋಲಿ' ಎಂದು ಹೆಸರು.

೨. ಉದ್ದವಾದ ಒಂದೇ ಪಟ್ಟಿಗೆ 'ರೇಜರ' ಎಂದು ಹೆಸರು.

ಇವೆಲ್ಲವುಗಳಿಗೆ ಲೋಹದ ಚಂಡ ಮಳಿಗಳನ್ನು ಬಂಧಿಸಿರುವುದರಿಂದ ಅವೆಲ್ಲವೂ ತಾಮ್ರದವುಗಳಾಗಿವೆ. ಆ ಮಳೆಗಳ ಜೊತೆಗೆ ತಾಮ್ರದ ಚಿತ್ತಾರದ 'ಹೂ' ಬಿಲ್ಲೆಗಳನ್ನು ಜೋಡಿಸಿರುತ್ತಾರೆ.

ಬಾಗಿಲವಾಡವು ಮುಂದೆ, ಹಿಂದೆ ಸರಿದಾಡಲು ಕೆಳಗೆ ಕಬ್ಬಿಣದ ಪಟ್ಟಿ ಇದೆ. ಅದಕ್ಕೆ 'ಪಡಿ' ಎಂದು ಹೆಸರಿದೆ. ಹೀಗೆ ಇನ್ನೂ ಅನೇಕ ಬಗೆಯ ಅಂಶಗಳು ಬಾಗಿಲವಾಡದಲ್ಲಿ ಕಂಡುಬರುತ್ತವೆ.

೫.೧.೩.೪. ತೋಳುಗಳು ಹೊಸ್ತಿಲು

ದೇಸಗತಿ ಬಾಗಿಲವಾಡದ ತೋಳುಗಳು ಎರಡು ಮೂರು ಪಟ್ಟಿಯನ್ನು ಹೊಂದಿದ್ದು ಆಖಂಡ ಕಟ್ಟಿಗೆಯಲ್ಲಿಯೇ ಕೆತ್ತನೆ ಕೆಲಸ ಮಾಡಿದ್ದು ಇರುತ್ತದೆ. ಮುಂದಿನ ಪಟ್ಟಿಯ ಅಂಚನ್ನು ಚಿತ್ತಾಕರ್ಷಕವಾಗಿ ಕೆತ್ತಿದ್ದು ಇರುತ್ತದೆ. 'ರುದ್ರಾಕ್ಷಿ' 'ನವಿಲ ಪರಿ' ಮಾಟ ಕೆತ್ತಿದ್ದು ಇದೆ. ಇನ್ನೊಂದು ಪಟ್ಟಿ ಮೇಲೆ ಎಲೆ ಬಳ್ಳಿಯ ಸುಳಿವನ್ನು ನೋಡಿದರೆ ಅಂಚು ಅಂಚಿಗೂ ಕಲಾತ್ಮಕ ಚಲುವನ್ನು ಕಲಾವಿದನ ನೈಪುಣ್ಯತೆಯನ್ನು ತೋರ್ಪಡಿಸುತ್ತದೆ. ಹಾಗೆ ಹೊಸ್ತಿಲು ಎನ್ನುವುದು ಎಲ್ಲಕಡೆಗೂ ಕಂಡುಬರುತ್ತದೆ. ಇದು ಪ್ರವೇಶ ಮಾಡುವ ಮೊದಲೆ ತಡೆದು ನಿಲ್ಲಿಸುವ ಏಕೈಕ ಸಾಧನವಾಗಿದೆ. ಹೊಸ್ತಿಲೆನ್ನುವುದು ಮನೆಯ ಮಹಾಲಕ್ಷ್ಮಿಯೆಂದು ಅದಕ್ಕೆ ಪೂಜೆ, ಪುನಸ್ಕಾರ, ಅರಿಷಿಣ, ಕುಂಕುಮ ಹಚ್ಚಿ ಪೂಜಿಸುತ್ತಾ ಬಂದಿದ್ದಾರೆ. ಹೊಸ್ತಿಲೆನ್ನುವುದು ದೇವತಾ ಸ್ವರೂಪವನ್ನು ಸೂಚಿಸುತ್ತದೆ. ಇದು ಕೆಳವರ್ಗದ ಮನೆಯವರಿಂದ ಹಿಡಿದು ಮೇಲ್ಮಟ್ಟದ ಅಂತಸ್ತಿನವರೆಗೂ ನಡೆದುಕೊಂಡು ಬಂದ ಸಂಪ್ರದಾಯವಾಗಿದೆ. ರಾಜ ಮಹಾರಾಜರೂ ಸಹ ತಮ್ಮ "ಖಜಾನೆಯ ಕಾಳಿನ ಭಂಡಾರದ ಬಾಗಿಲು ತೆರೆಯಲು ಮಹಾರಾಣಿಯರಿಂದ ಪೂಜೆ ಸಲ್ಲಿಸಿದ್ದು ಕಂಡುಬರುತ್ತದೆ."[೧೧]

ವಾಡೇದಲ್ಲಿ ಮರಣವನ್ನಪ್ಪಿದರೆ ಶವವನ್ನು ಹೊರಗೆ ತರಬೇಕಾದರೆ ಶವದ ತಲೆಯನ್ನು ಅಥವಾ ಕಾಲನ್ನು ಹೊಸ್ತಿಲಿಗೆ ತಾಗಿಸಿ ಹೊರತರುತ್ತಾರೆ. ಇದರಿಂದ ಹೊಸ್ತಿಲನ್ನು ಎಡವಿ ಹೋದರೆ ಮತ್ತೆ ಮನೆಯಲ್ಲಿ ಅವಕಾಶವಿಲ್ಲವೆನ್ನುವುದು ವಿಧಿತವಾಗುತ್ತದೆ. ಈ ಕಾರಣದಿಂದಲೆ ಬಾಗಿಲು ದಾಟುವಾಗ ಎಡವಬಾರದೆನ್ನುವ ಅರ್ಥವನ್ನು ಸೂಚಿಸುತ್ತದೆ.

ಇಂದಿಗೂ ಕೂಡ ದೇಸಗತಿ ವಾಡೇದ ಒಳಗಡೆ ಬರುವ ಎದೆಗಾರಿಕೆ ಯಾರಿಗೂ ಇಲ್ಲ. ಬರುವ ಪ್ರಯತ್ನ ಮಾಡಿದರೂ ಹೊಸ್ತಿಲು ಹೊರಗೆ ಮಾತ್ರ ಎನ್ನುವುದು ಕುತೂಹಲಕರ ಸಂಗತಿಯಾಗಿದೆ.

೫.೧.೩.೫. ಹಜಾರ, ಪಡಸಾಲೆ

ವಿಶಾಲವಾದ ವಾಡೇದ ಹೆಬ್ಬಾಗಿಲಿನ ಒಳಗೆ ಆನೆಯೂ ಕೂಡ ಅಂಬಾರಿಯೊಂದಿಗೆ ಹಾದು ಹೋಗಬಹುದಾಗಿತ್ತು. ಅಂಥ ಹೆಬ್ಬಾಗಿಲನ್ನು ದಾಟೀದ ಕೂಡಲೇ ಜೀಕು, ಎರಡೂ ಮಗ್ಗಲು ಎತ್ತರಕಟ್ಟೆ, ಕಂಡುಬರುತ್ತದೆ. ಮತ್ತೊಂದೆಡೆ ಮೂವತ್ತು ನಾಲವತ್ತು ದನಕರುಗಳಿಗಾಗಿ ಕಟ್ಟಿದ ಕೊಟ್ಟಿಗೆ, ಕೊಟ್ಟಿಗೆಯಲ್ಲಿ ಮೇವನ್ನಿಡಲು ಸಾಕಷ್ಟು ಸ್ಥಳ, ಕಂಡುಬರುತ್ತದೆ. ಇದನ್ನು ದಾಟಿದ ಕೂಡಲೆ ಹಜಾರ ಪಡಸಾಲೆ.

ಪಡಸಾಲೆಯ ಸುತ್ತಲೂ ಕಂಡುಬರುವುದೆ ಚೌಸಪ್ಪಿ ಆಗಿದೆ. ಇಲ್ಲಿ ಅನೇಕ ಬಗೆಯ ಕಟ್ಟಿಗೆಯ ಕೆಲಸ ಕೆತ್ತನೆ ಕಂಡುಬರುತ್ತದೆ. ಅವುಗಳನ್ನು ಒಂದೊಂದಾಗಿ ನೋಡಬಹುದು.

ವಾಡೇದ ಮಹಾದ್ವಾರ ದಾಟಿದ ಮೇಲೆ ಕಂಡುಬರುವ ವಿಶಾಲವಾದ ಅಖಾಡವೇ ಹಜಾರ. ದೇಸಗತಿಯ ಹಜಾರದಲ್ಲಿ ಬರುವಷ್ಟರಲ್ಲಿಯೇ ಭಯವೆನ್ನುವುದು ಹುಟ್ಟಿ ಧೈರ್ಯವನ್ನೆ ಕಳೆದುಕೊಳ್ಳುವಂತೆ ಭಾಸವಾಗುತ್ತದೆ. ವಾಡೇದಲ್ಲಿ ಅರಮನೆ ತಕ್ಷಣ ಸಿಗದಂತೆ ಅನಂತದೂರದಲ್ಲಿರುವುದು ವಿಶೇಷವೆನಿಸಿದೆ. ಈ ಹಜಾರವೇ ವಾಡೇದ ಅತ್ಯಾಕರ್ಷಣೆಯನ್ನು ಹೇಳುವಂತಿದೆ. ಹಜಾರದ ಒಂದೆಡೆಗೆ ವಾಡೇ ಕಟ್ಟಿದ್ದು ದೂರದಿಂದಲೇ ಕಂಡುಬರುತ್ತದೆ. ನಡುವಿನ ಹಜಾರವನ್ನು ದಾಟಿದ ಬಳಿಕ ಮತ್ತೊಂದು ವಿಶಾಲವಾದ ಪ್ರದೇಶವೇ ಪಡಸಾಲೆ. ಅಥವಾ ಬಂಕ ಎಂದು ಕರೆಯುತ್ತಾರೆ. ಈ ಪಡಸಾಲೆ (ಬಂಕ)ಯು ನೋಡಲು ಬಲು ಸುಂದರವಾಗಿರುತ್ತದೆ. ಎರಡು ಕಡೆಗೆ ಮೂರು ನಾಲ್ಕು ಮೆಟ್ಟಲುಗಳ 'ಗಗ್ಗರ' ಕಟ್ಟೆ ಆ ಗಗ್ಗರ ಕಟ್ಟೆಯ ಮೇಲೆ ಇರುವ ಎತ್ತರವಾದ ಸ್ಥಳವೇ ಇದಾಗಿರುತ್ತದೆ. ಹಾಗೆ ದೇಸಾಯರು ಕೂಡ್ರುವ 'ಬೈಠಕ ಖಾನೆ' ಇದಾಗಿತ್ತು. ಈ ಬೈಠಕಖಾನೆ ಪೇಶ್ವೆ ಥಾಟಿನ ಗಾದಿ ದಿಂಬುಗಳಿಂದ ಶೋಭಿಸುತ್ತಿತ್ತು. ಇಂಥ ಕೆಲವು ಅವಶೇಷಗಳು ಹಲವು ಕಡೆ ಕಂಡುಬರುತ್ತವೆ. ಪ್ರಸ್ತುತ ದೇಸಾಯಿಗಳ ದೌಲತ್ತು ಮುಗಿದು ಹೋಗಿದ್ದರಿಂದ ಅಳಿದುಳಿದ ಅವಶೇಷಗಳು ಮಾತ್ರ ಕಾಣಸಿಗುತ್ತವೆ.

ಪಡಸಾಲೆಯಲ್ಲಿ ಸುತ್ತಲಿನ ಗೋಡೆಯನ್ನು ವೀಕ್ಷಿಸಿದಾಗ ಅಲ್ಲಿನ ನೋಟ ಆಶ್ಚರ್ಯಗೊಳಿಸುವಂತಿದೆ. ಕಂಬಗಳಿಗೆ ನೇತುಹಾಕಿದ ಚಿರತೆ, ಹುಲಿ ಹಾಗೂ ಜಿಂಕೆ, ಕಾಡುಕೋಣಗಳ ರುಂಡಗಳು ಕಾಣಸಿಗುತ್ತವೆ. ಇವೆಲ್ಲವೂ ದೇಸಾಯಿಗಳ ಶೂರತನಕ್ಕೆ ಸಾಕ್ಷಿಯೊದಗಿಸುತ್ತವೆ. ಹಾಗೆ ಖಡ್ಗಗಳ ಸಾಲು, ಡಾಲು, ಇವು ಕೂಡ ದೇಸಗತಿಯ ಶೂರತನದ ಪ್ರತೀಕವಾಗಿದೆ.

ಪಡಸಾಲೆಯಿಂದ ಪಾತಾಳಂಕಣದ ಮೂಲಕ ಸದರ ಗೃಹ (ಸಭಾಭವನ) ಪ್ರವೇಶವಾಗುತ್ತದೆ. ಇದು ಚೌಕಾಕಾರವಾಗಿದ್ದು ಎಲ್ಲವೂ ಎರಡು ಸಾವಿರ ಅಡಿ ವಿಸ್ತೀರ್ಣ ಹೊಂದಿದೆ. ಇಲ್ಲಿಂದಲೆ ಬೇರೆ ಬೇರೆಯಾಗಿ ಒಳಗಡೆ ಪ್ರವೇಶ ಮಾಡಲು ಹತ್ತಾರು ಬಾಗಿಲುಗಳಿವೆ. ಇನ್ನೂ ಹೆಚ್ಚೆಂದರೆ ಪಂಚಮಹಲ ಒಡೆಯರಾದ ರಕ್ಕಸಗಿ ಸಂಸ್ಥಾನದ ಅಮರಾವತಿ ವಾಡೇದಲ್ಲಿ ಒಂದನೂರ ಬಾಗಿಲು ಒಂದುನೂರು ಕಿಡಕಿ, ಒಂದನೂರು ಮಾಡಗಳು ಒಂದರ ಎದುರು ಮತ್ತೊಂದು ಬರುವಂತೆ ಕಟ್ಟಿದ್ದಾರೆ. ಇದನ್ನು ನೋಡಿದರೆ ವಿಸ್ಮಯವಾಗುತ್ತದೆ.

ಈ ಪಡಸಾಲೆಯ ಮೇಲ್ಗಡೆ ಮೇಲಂತಸ್ತಿದ್ದು ವಿಶಾಲವಾದುದು ಕಂಡುಬರುತ್ತದೆ. ಐದಾರು ಕಮಾನುಗಳಿದ್ದು ಅರಮನೆ ಸ್ತ್ರೀಯರು ಅಲ್ಲಿಂದಲೆ ಹೊರಗಿನ ನೋಟವನ್ನು ಕಂಡು ಆನಂದಿಸುತ್ತಿದ್ದರು. ಅಲ್ಲಿ ಕೂಡ್ರುವ ವ್ಯವಸ್ಥೆಯೂ ಇತ್ತು. ಏನಾದರೂ ಮನರಂಜನೆ ನಡೆದರೆ ಅಲ್ಲಿಂದಲೇ ನೋಡಿ

ಆನಂದಪಡುತ್ತಿದ್ದರು. ಹಾಗೆ ಅಲ್ಲಿಂದ ಇಳಿದು ಅರಮನೆಯೊಳಗೆ ಹೋಗುತ್ತಿದ್ದರು. ಅಲ್ಲಿಯೂ ಕೂಡ ವಿಶಾಲವಾದ ಮೈದಾನವಿದ್ದು ಅಂಗಳದಲ್ಲಿ ತಿರುಗಾಡಿ ಗಾಳಿ ಬಡಿಸಿಕೊಳ್ಳುತ್ತಿದ್ದರು. ಇದೆಲ್ಲವನ್ನು ಗಮನಿಸಿದಾಗ ಆ ದಿನದ ಸಿರಿವಂತಿಕೆಯಲ್ಲಿ ಮೆರೆದ ವೈಭವದ ಸವಿಯನ್ನು ಮೆಲುಕು ಹಾಕಿದರೆ, ಇಂದಿನ ಕಾಂಕ್ರಿಟ ಯುಗದಲ್ಲಿ ಹಳೆ ತಲೆಮಾರಿನ ವಾಡೆಯು ತನ್ನ ಉಸಿರನ್ನು ಹಿಡಿದುಕೊಂಡು ನೂರಾರು ವರ್ಷ ಬಾಳಿ ನಿಂತಿದೆ. ಸದ್ಯ ಅದರ ಯೋಗಕ್ಷೇಮ ಇರದೇ ಇದ್ದುದರಿಂದ ಆಯುಷ್ಯ ಕಡಿಮೆಯಾಗುತ್ತ ನಡೆದಿದೆ.

ಒಟ್ಟಾರೆಯಾಗಿ ಇಂಥ ವೈಭವದ ಕಟ್ಟಡಗಳು ಇನ್ನು ಕೆಲವೇ ವರ್ಷಗಳಲ್ಲಿ ಬಿದ್ದು ಹೋಗುವುದಲ್ಲದೆ ಎಳ್ಳಷ್ಟು ಅದರ ಕುರುಹಗಳು ಸಿಗಲಾರವು.

೫.೧.೩.೬. ಚೌಸಪ್ಪಿ

ಅರಮನೆಯ ಒಳಗಡೆ ರಾಜಸಂಸ್ಕೃತಿಯ ವೈಭವದ ಪಡಸಾಲೆಯು 'ಚೌಸಪ್ಪಿ'ಯನ್ನು ಹೊಂದಿದೆ. ಸುತ್ತಲೂ ಚೌಕಾಕಾರವಾಗಿ ಕಟ್ಟಿಗೆಯ ಚಲುವಿನ ಕಲಾ ವೈಭವವನ್ನು ಕಮಾನು, ಮಂಟಪಗಳನ್ನು ಒಳಗೊಂಡಿರುವ ಪ್ರದೇಶವೇ 'ಚೌಸಪ್ಪಿ' ಎನಿಸಿಕೊಳ್ಳುತ್ತದೆ. ಇಂಥ ವೈಭವವು ರಾಜಮಹಾರಾಜರ ಅರಮನೆಗಳಲ್ಲಿ ಕಾಣಬಹುದು. ಅವೆಲ್ಲವೂ ಪ್ರಾಚೀನ ಇತಿಹಾಸದ ಸಾಲಿಗೆ ಸೇರಿದರೆ ಮಧ್ಯಕಾಲೀನ ರಾಜಕೀಯದ ಅವಧಿಯಲ್ಲಿ ಚಿಕ್ಕಪುಟ್ಟ ದೇಸಗತಿ ಸಂಸ್ಥಾನೀಕರು ಅದೇ ಮಾದರಿಯಲ್ಲಿ ಅರಮನೆಯನ್ನು ಕಟ್ಟಿಕೊಂಡು ಕಲಾನೈಪುಣ್ಯತೆ ಬಿಂಬಿಸುವಂತೆ ಮಾಡಿದ್ದಾರೆ. ಕಟ್ಟಿಗೆ ಕೆಲಸದಲ್ಲಿ ವಿಶೇಷ ನೈಪುಣ್ಯತೆ ಹೊಂದಿದವರನ್ನು ಕರೆಸಿ ಕೆತ್ತಿಸಿದ್ದಾರೆ. ಇವು ಇಂದಿಗೂ ಕಲಾವಿದರ ನೆನಪನ್ನು ಉಳಿಸಿವೆ.

ಚೌಸಪ್ಪಿಯ ಸ್ವರೂಪ ಹೀಗಿದೆ.

೧. ಸಾಲ ಮಡಿಗೆ ಕಂಬಗಳು
೨. ಗೋಡೆಗೆ ಮಡಿಗಿದ ಕಂಬಗಳು
೩. ಮಧ್ಯಕಂಬಗಳು
೪. ಚೌಕ ಕಂಬಗಳು
೫. ದುಂಡು ಕಂಬಗಳ
೬. ಗದ್ದುಗೆ ಕಲ್ಲುಗಳು
೭. ಬೋದುಗೆಗಳು
೮. ಗಡಿಗೆಗಳು
೯. ನಾಗೋಸುಗಳು
೧೦. ತೊಲೆಗಳು
೧೧. ಪಾನಪಟ್ಟಿಗಳು
೧೨. ತರಂಗಂತರಂಗ ಪಟ್ಟಿಗಳು
೧೩. ಕಂಬಗಳಿಗೆ ತಿರುವಿದ ಕಮಾನುಗಳು[೨]

ಹೀಗೆ ಚೌಸಪ್ಪಿಗೆ ಸಂಬಂಧಿಸಿದ ಒಂದು ಪಟ್ಟಿಯೇ ಸಿದ್ಧವಾಗುತ್ತದೆ. ಅದರ ಒಳಗಡೆ ಇನ್ನೂ ಪ್ರಭೇದಗಳಿದ್ದು ಪ್ರಮುಖವಾದುದನ್ನು ಇಲ್ಲಿ ನಿರೂಪಿಸಿಕೊಂಡು ಚರ್ಚಿಸಿದೆ. ಚೌಸಪ್ಪಿಯಲ್ಲಿ ಅರಳಿದ ಕಲೆಯನ್ನು ಕಲಾವಿನ್ಯಾಸವನ್ನು ಒಂದೆಡೆ ಚರ್ಚಿಸುವುದು ಅತೀ ಜರೂರಾಗಿದೆ. ಅಂಥದನ್ನು ಚರ್ಚಿಸದೇ ಇದ್ದರೆ ಕಲಾವಿದನ ಚಾಕ ಚಕ್ಯತೆ, ಜಾಣ್ಮೆ ಮರೆಯಾಗುವುದು ಸಹಜ. ಅವನ ಶ್ರಮ ವ್ಯರ್ಥವಾಗುವುದು.

ಚೌಸಪ್ಪಿಯ ಕಂಬಗಳು : ಚೌಸಪ್ಪಿಯಲ್ಲಿ ಮುಂದಿನ ಕಂಬಗಳಿಗೆ ಗರುಡ ಕಂಬಗಳೆಂದು ಕರೆಯುವರು. ಇವು ಹಜಾರದ ಎದುರಿಗೆ ಕೆಲವು ಕಡೆ ಕಂಡುಬರುತ್ತವೆ. ಇಡೀ ಭಾರವನ್ನು ಇವು ಹೊತ್ತಿದ್ದರಿಂದಲೇ ಗರುಡ ಕಂಬಗಳೆಂದು ಕರೆಸಿಕೊಳ್ಳುತ್ತವೆ. ಚೌಸಪ್ಪಿಯಲ್ಲಿ ಕಾಣಿಸಿಕೊಂಡ ಇವು ದುಂಡಾಗಿ ಕಲಾತ್ಮಕವಾಗಿವೆ. ಕಲಾವಿದನು ತನ್ನ ಮನದಿಚ್ಛೆಯಂತೆ ತೂಕಬದ್ಧವಾಗಿ ಅಳತೆಗೋಲನ್ನಿರಿಸಿ ಕೆತ್ತಿದ್ದರೂ ಅದರ ಒಂದೊಂದು ಭಾಗದ ಹೆಸರು ಗೊತ್ತಿರದೇ ಹೋಗಿವೆ. ಒಂದು ವೇಳೆ ಗೊತ್ತಿದ್ದರೂ ಬೆಳಕಿಗೆ ಬಾರದೇ ಗೌಣತೆ ಹೊಂದಿವೆ. ಪ್ರಸ್ತುತ ದಿನಮಾನದಲ್ಲಿ ವಿದ್ವಾಂಸರು, ಹಿರಿಯ ಕಲಾವಿದರು ಅದಕ್ಕೊಂದು ನಿರ್ದಿಷ್ಟ ಹೆಸರಿಟ್ಟು ಕರೆದಿದ್ದಾರೆ. ಹಾಗೇ ವಾಸ್ತು ಕೂಡಾ ಮೆಚ್ಚತಕ್ಕದಾಗಿದೆ. ಅವುಗಳನ್ನು ಸಾದ್ಯಂತವಾಗಿ ಇಲ್ಲಿ ಚರ್ಚಿಸಲಾಗಿದೆ.

ಕಂಬದ ಗದ್ದುಗೆ ಕಲ್ಲು : ಇವು ಚೌಕಾಕಾರವಾಗಿದ್ದು ಚೌಕ ಅದೋ ಪದ್ಮದಿಂದ ಕೂಡಿದೆ. ಈ ಗದ್ದುಗೆ ಕಲ್ಲಿಗೆ ಉಪಾನ, ಜಗತಿ ಎನ್ನುವರು.

೨. ಗರುಡ ಕಂಬದ ಮಾಟವು ದುಂಡಾಗಿವೆ. ಇವು ಗದ್ದುಗೆ ಮೇಲೆ ನಿಂತಿದ್ದು ಕಂಬವು ಕಲಾ ಚೆಲುವಿನಿಂದ ಕೂಡಿದೆ. ಇದರಲ್ಲಿ ಕಲೆಯ ಪ್ರಭೇದಗಳಿವೆ.

೧. ಅಧೋಪದ್ಮ

೨. ಆಂತರಿಕ ನೆಲ್ಲಿಕಾಯಿ ಮಾಟದ ಮಧ್ಯಪಟ್ಟಿ ಕುಮುದ ಅಥವಾ ಹಾಲಗಡಗ.

೩. ಎಲೆಗಳು ಅರಳಿದ ಉರ್ಧ್ವಪದ್ಮ

೪. ಖಂಡಖಂಡವಾಗಿ ರೇಖಾ ಎಳೆದ ದುಂಡುಕಂಬ.

ಅಲ್ಲದೆ ಕಂಬದ ಮೇಲ್ಗಡೆ ಚಪ್ಪಟೆ ಆಕಾರದ ನೆಲ್ಲಿಕಾಯಿ ಕುಮುದ, ಕಲಾ ಚೆಲುವಿನ ಗಡಿಗೆ, ಗಡಿಗೆ ಮೇಲೆ ಪಟ್ಟಿ, ಹೆಣೆದು ಕಮಾನುತಿರುವಿದ ಕುಸುರಿ ಕೆಲಸದ ಕಲೆಯನ್ನು ಕಾಣಬಹುದು. ಹೀಗೆ ಚೌಸಪ್ಪಿಯಲ್ಲಿ ಅರಳಿಸಿ ಪ್ರತಿಭಾಶಾಲಿ ಶಿಲ್ಪಿಯ ಹಸ್ತಕೌಶಲವು ಮೆಚ್ಚತಕ್ಕದಾಗಿದೆ. ಇಲ್ಲಿಯ ಕಟ್ಟಿಗೆ ಕೆತ್ತನೆಗಳಲ್ಲಿ ವಾಸ್ತವತೆ ಇದೆ. ಉತ್ಕೃಷ್ಟ ನಯಗಾರಿಕೆ ಇದೆ.


ಮುಂದಿನ ಗರುಡ ಕಂಬಗಳನ್ನು, ಅಲ್ಲಿ ಅರಳಿದ ಕಲೆಯನ್ನು ಚೆನ್ನಾಗಿ ನೋಡಬಹುದು. ದಿನದ ಹನ್ನೆರಡು ತಾಸು ಸರಾಗವಾಗಿ ಬೆಳಕು ಹರಿದು ಬರುವಂತೆ ಇರುವುದರಿಂದ ಸ್ಪಷ್ಟವಾಗಿ ಗೋಚರಿಸುತ್ತವೆ.

ಚೌಸಪ್ಪಿಯ ಒಳಗಡೆ ಅಡಗಿದ ಮಧ್ಯಕಂಬಗಳು, ಅಂಕಣ ಕಂಬಗಳು ಹಾಗೂ ಗೋಡೆಗೆ ಮಡಗಿದ ಕಂಬಗಳಿಂದ ವಿಶಾಲವಾದ ಅಂಕಣಗಳು ಕಂಡುಬರುತ್ತವೆ. ಈ ಎಲ್ಲ ಕಂಬಗಳು ಒಂದನ್ನೊಂದು ಹೋಲುವುದಿಲ್ಲ. ಒಂದೇ ಆಕಾರದಲ್ಲಿ ಇಲ್ಲವಾಗಿದೆ. ಅಂದರೆ ಮುಂದಿನ ಕಂಬಗಳು ಮಾತ್ರ ಭಿನ್ನವಾಗಿ ಈ ಎಲ್ಲ ಅಂಕಣಗಳಿಂದೊಡಗೂಡಿದ ವಾಸ್ತುವೇ 'ಚೌಸಪ್ಪಿ' ಎನಿಸಿಕೊಳ್ಳುತ್ತದೆ.

ಚೌಸಪ್ಪಿಯ ಅಂಕಣಗಳಲ್ಲಿ ವಿಶೇಷತೆ ಕಂಡುಬರುತ್ತದೆ. ಅಲ್ಲಿ ತೂಗಾಡುವ ಮಂಚ ದೇಸಾಯಿಗಳ ವಿಶ್ರಾಂತಿಯ ಪ್ರತೀಕವೆಂಬಂತೆ ತೋರುತ್ತದೆ. ಅದರ ಮೇಲೆ ಹುಲಿಚರ್ಮ, ಚಿಗರೆ ಚರ್ಮ ಹಾಕಿದ್ದು ಇರುತ್ತದೆ. ಅಲ್ಲದೆ ಮಂಚದ ಕೆಳಗಡೆ ಸದಾ ರತ್ನಗಂಬಳಿ ಹಾಸಿದ್ದು ದೇಸಾಯಿ ಗೌರವಕ್ಕೆ, ವರ್ಚಸ್ಸಿಗೆ ಸಾಕ್ಷಿಯಾಗಿದೆ.

ಯಾವ ದೇಸಾಯಿಗಳು ಬೇಟೆಯಾಡಿ ಹುಲಿ, ಚಿಗರೆ ಹೊಡೆದಿದ್ದರೆ ಅದರ ಚರ್ಮದ ಮೇಲೆ ಕೂಡ್ರುವ ಹಕ್ಕಿತ್ತೆಂದು ಹಿರಿಯ ಅನುಭವಿಯೊಬ್ಬರಿಂದ ತಿಳಿದುಬರುತ್ತದೆ. ಚೌಸಪ್ಪಿಯ ಒಂದು ಭಾಗವಲ್ಲಿ ಕುಲಕರ್ಣಿ, ತಳವಾರ, ವಾಲೀಕಾರರು ಕೂಡ್ರುವ ಜಾಗಗಳೂ ಇರುತ್ತಿದ್ದವು. ಹೀಗೆ ಚೌಸಪ್ಪಿ ತನ್ನ ವೈಭವವನ್ನು ಹೆಚ್ಚಿಸಿಕೊಳ್ಳುವಲ್ಲಿ ಇಂಥ ವಾಸ್ತವತೆಯ ಸ್ವರೂಪ ಕಂಡುಬರುತ್ತದೆ.

ಅಂಕಣಗಳು : ಅಂಕಣಗಳ ಬಗ್ಗೆ ಈಗಾಗಲೇ ಚರ್ಚಿಸಿದ್ದರೂ ಅಲ್ಲಿ ಬಳಸಿದ ಕೆಲ ವಸ್ತುಗಳು, ಅವುಗಳ ಹೆಸರುಗಳು ವೈಶಿಷ್ಟ್ಯಪೂರ್ಣವಾಗಿವೆ. ಅವುಗಳೆಂದರೆ

"೧. '' ಇದು ಕನ್ನಡ ಮೂಲಾಕ್ಷರ ಸ್ವರವಾಗಿದ್ದಂತೆ ತೋರುತ್ತದೆ. ಇದಕ್ಕೆ 'ಗುಲಾಜಿ' ಎಂದು ಹೆಸರು."[೧೩] ಎಲ್ಲ ಅಂಕಣಗಳಲ್ಲಿ ಜೋಡಿ, ಜೋಡಿಯಾಗಿ ಹಾಕಿರುತ್ತಾರೆ. ಇಂಥವುಗಳಿಗೆ ತೂಗುಮಂಚ ಕಟ್ಟಿರುತ್ತಾರೆ.

೨. '' ಇದು ಮಂಗನ ಬಾಲದ ಹಾಗೆ ಇದ್ದು ಎಲ್ಲ ಅಂಕಣಗಳಲ್ಲಿ ಜೋತು ಬಿಟ್ಟಿರುತ್ತಾರೆ. ಇದಕ್ಕೆ 'ಅಕ್ಕೋಡಿ' ಎಂದು ಹೆಸರು"[೧೪] ಇವೆಲ್ಲವು ಹಿತ್ತಾಳೆಯಿಂದ ಮಾಡಿದವುಗಳಾಗಿವೆ.

ಚೌಸಪ್ಪಿಯ ಮೇಲಂತಸ್ತು : ಇದೂ ಕೂಡ ಚೌಸಪ್ಪಿಯ ಮೇಲು ಭಾಗವಾಗಿದೆ. ಇದೇ ಎಲ್ಲವನ್ನೂ ಹೊತ್ತುಕೊಂಡು ನಿಂತಿದೆ. ಇಲ್ಲಿ ಕೂಡ ಮೇಲಂತಸ್ತಿಗೆ ಹೊಂದಿಕೊಂಡ ವಾಸ್ತುವಿಗೆ ವಿವಿಧ ಹೆಸರಿದ್ದು ಗಮನಾರ್ಹವೆನಿಸಿದೆ. ಅವೆಂದರೆ

೧. ಬೋದುಗೆಗಳು
೨. ಪಾನಪಟ್ಟಿಗಳು
೩. ಉಡದಾರ ಪಟ್ಟಿಗಳು
೪. ಇತರೆ

ಈ ಎಲ್ಲ ಭಾಗಗಳು ಮೇಲಂತಸ್ತಿಗೆ ಹೊಂದಿಕೊಂಡಿವೆ. ಇವೆಲ್ಲವುಗಳನ್ನು ಒಂದಕ್ಕೊಂದು ಜೋಡಿಸಿದ್ದಾರೆ. ಯಾವುದನ್ನು ಬಿಚ್ಚಿಕೊಳ್ಳಲು, ಜೋಡಿಸಲು ಸಾಧ್ಯವಾಗುವುದಿಲ್ಲ. ಅಂಥ ಕಲಾ ಚಾತ್ಕ್ರಯನ್ನು ಒಳಗೊಂಡಿದೆ. ಇದಕ್ಕೆ 'ಖಂಡ ಬೋದು' ಎಂದು ಹೆಸರು. ಇಡೀ ವಾಡೇದ ಕಲಾ ಜೋಡಣೆ ಖಂಡು ಖಂಡಾಗಿದ್ದು ಒಂದರ ಖಂಡಿನೊಳಗೆ ಮತ್ತೊಂದು, ಅದರಲ್ಲಿ ಮತ್ತೊಂದು ಸೇರಿಸಿ ಬೆಣೆಗಳ ಮುಖಾಂತರ ಜೋಡಿಸಿದ್ದರಿಂದಲೇ ಈ ಹೆಸರು ಬಂದಂತೆ ತೋರುತ್ತದೆ. ಚೌಸಪ್ಪಿಯಲ್ಲಿ ಅಲಂಕಾರಕ್ಕಾಗಿ ಬಳಸುವ ಬಿಡಿಭಾಗಗಳನ್ನು ಜೋಡಿಸಿ ಸಾಂಕೇತಿಕ ಆಕಾರಗಳನ್ನು ಮೂಡಿಸುವುದು ಹಳೆಯ ಸಂಪ್ರದಾಯದಿಂದ ಸಂಪೂರ್ಣ ಭಿನ್ನವಾದುದಾಗಿದೆ. ಇಲ್ಲಿ ವಾಸ್ತವತೆಯನ್ನು ಗಮನದಲ್ಲಿಟ್ಟು ಕೊಂಡಿರುವುದರಿಂದ ಹೆಚ್ಚಾಗಿ ಸಾಮಾನ್ಯ ಮತ್ತು ಸಹ ಆಕಾರಗಳ ಬಗ್ಗೆ ಹೆಚ್ಚು ಒಲವಿದೆ. ಎಲ್ಲಕ್ಕಿಂತ ಹೆಚ್ಚಾಗಿ ಅಗತ್ಯವಿವರಗಳನ್ನು ಆಯ್ಕೆ ಮಾಡಿ ಮೂಡಿಸುವುದರ ಮೂಲಕ ಅಲಂಕಾರ ವಿನ್ಯಾಸಗಳ ಬಳಕೆಯಲ್ಲಿ ತೋರಿರುವ ಸಂಯಮವೂ ಮೆಚ್ಚತಕ್ಕದ್ದು. ಹೀಗೆ ಚೌಸಪ್ಪಿ ಮೇಲಂತಸ್ತು ವಿಭಿನ್ನ ವಿಭಿನ್ನವಾಗಿ ಕಂಡುಬಂದರೂ ಇಡೀ ವಾಡೇದ ಸೂತ್ರವು ಒಂದು ಮೂಲೆಯಲ್ಲಿ ಇರುವುದು. ಆ ಬೆಣೆಯನ್ನು ಬಿಚ್ಚಿದಾಗ ಮಾತ್ರ ಮೇಲಂತಸ್ತು ಸರಾಗವಾಗಿ ಬಿಚ್ಚಲು ಬರುವಂತೆ ಮಾಡಿದ್ದೆ ಕಲಾವಿದನ ಕೈಚಳಕದ ಖಂಡ ಬೋದು ವಿಶಿಷ್ಟವಾಗಿ ಕಂಡುಬರುತ್ತದೆ.

ಬೋದಿಗೆಗಳು : ಪ್ರತಿಯೊಂದು ಕಂಬಕ್ಕೆ ಮೇಲಾರದ ತೊಲೆಗೆ, ಅಂತಸ್ತಿಗೆ ಹೊಂದಿಕೊಂಡಿರುವ, ಜೋಡಿಸಿಕೊಂಡಿರುವ, ತ್ರಿಕೋನಾಕಾರದ ಬೋದಿಗೆಗಳೇ ಬೋದುಗಳೆಂದು ಕರೆಯುವುದು ರೂಢಿಗತವಾಗಿದೆ. ಜನಪದರ ಬಾಯಲ್ಲಿ ಬೋದಗಳೆಂದು ಅಪಭ್ರಂಶಗಳಾಗಿದ್ದು ಕಂಡುಬರುತ್ತದೆ. ಬೋದುಗೆಗಳೆಂದರೆ ಕಂಬದ ಮೇಲೆ ತೊಲೆಯನ್ನು ನಿಲ್ಲಿಸಲು ಮಾಡಿದ ಸಾಧನ. ಈ ಬೋದುಗೆಗಳು ಖಂಡ ಹೊಂದಿದ್ದು ತೊಲೆಗೆ, ಪಕ್ಕದ ಪಟ್ಟಿಗಳಿಗೆ ಹಾಗೂ ಪಾನಪಟ್ಟಿಗಳಿಗೆ ಜೊಡಣೆಯಾಗಿರುತ್ತದೆ.

ಚೌಸಪ್ಪಿಯ ಮೇಲ್ಗಡೆ ಇವು ಅಲಂಕಾರಿಕೆಯಿಂದ ಕೂಡಿದ್ದಾಗಿವೆ. ಪ್ರತಿಯೊಂದು ಬೋದುಗೆಗೆ ಒಂದೇ ಮಾಟದ ಕಲೆಗಾರಿಕೆಯನ್ನು ಕೆತ್ತಿದ್ದು ವೇದ್ಯವೆನಿಸಿದೆ. ಬೋದುಗೆಗಳಲ್ಲಿ ವಿವಿಧ ತೆರನಾದ ಚಿತ್ತಾರವಿದ್ದು ಅದನ್ನು ಈ ರೀತಿ ಗುರ್ತಿಸಿದೆ.

"೧. ಬುಗುರಿಗಳು

೨. ಬುಗುರಿಗಳಿಗೆ ಹೂ ಮತ್ತು ಬಳೆಗಳು"[೧೫]

೩. ಉರ್ದ್ವ ಮುಖಮಾಡಿ ಜೋತುಬಿದ್ದ ಮಾವಿನ ಮಾಟದ ಗಿಳಿರಾಮ

೪. ಬೋದುಗೆಗಳನ್ನು ಎತ್ತಿ ಹಿಡಿದಿರುವ ಮದನ ಕೈಗೊಂಬೆಗಳು

೫. ಸಿಂಹ, ಗಿಳಿ ಹಾಗೂ ವೀರಯೋಧರ ಮೂರ್ತಿಗಳೂ ಕೂಡ ಆಕರ್ಷಕವಾಗಿವೆ.

ಸಿಂಹವು ತನ್ನ ಎರಡು ಕಾಲುಗಳನ್ನು ಕಂಬಕ್ಕೆ ಒತ್ತಿ ಇನ್ನೆರಡು ಕಾಲುಗಳನ್ನು ಎತ್ತಿಕೊಂಡಿದೆ. ತನ್ನ ತಲೆ ಮೇಲೆ ಗಿಳಿರಾಮನನ್ನು ಹೊತ್ತುಕೊಂಡು ವೀರಯೋಧನ ಕಾಲುಗಳನ್ನು ತಲೆ ಮೇಲಿರಿಸಿ ತನ್ನ ಬಲ ಪ್ರದರ್ಶನ ತೋರಿಸುವುದಲ್ಲದೆ ಇಡೀ ತೋಲೆಯನ್ನೆ ಎತ್ತಿ ಹಿಡಿದಂತೆ ತೋರುತ್ತದೆ. ಇಲ್ಲಿ ಯಾರ ಶಕ್ತಿ ಎಷ್ಟೇಷ್ಟು ಇದೆ ಎಂಬುದನ್ನೂ ತೋರ್ಪಡಿಸುತ್ತದೆ. ಇವು ಒಂದಕ್ಕೊಂದು ಸರಪಣಿಯಂತೆ ಇದ್ದು ಒಂದರ ಶಕ್ತಿ ಇನ್ನೊಂದಕ್ಕೆ ಆಧಾರವಾಗಿ ಕೊಟ್ಟಂತೆ ಇದೆ. ಕಂಬದ ಆಧಾರದ ಮೇಲೆಯೇ ನಿಂತ ಇಡೀ ಭಾವಣಿಯು ಮರೆಯಾಗಿ ಕಲಾವಿದನು ಕೆತ್ತಿದ ಈ ಮೂರ್ತಿಗಳೇ ಎತ್ತಿ ಹಿಡಿದಿವೆ ಎನ್ನುವಂತೆ ಕಲ್ಪನೆ ಮಾಡಿಕೊಡುತ್ತವೆ. ಇನ್ನೂ ವಿಶೇಷತೆ ಎಂದರೆ ಈ ಬೋದುಗೆಗಳ ಎಡ ಬಲ ಕಪಾಳಕ್ಕೆ ಸಹಸ್ರ ಕೈಗಳುಳ್ಳ ವ್ಯಕ್ತಿಯೊಬ್ಬ ವೀರತನದಿಂದ ಹೋರಾಡುತ್ತಿದ್ದು ಕಂಡುಬರುತ್ತದೆ. ಹೀಗೆ ವಾಡೇದ ಕಲಾತ್ಮಕ ಕೆತ್ತನೆ ಬಗ್ಗೆ ಅರ್ಥಪೂರ್ಣ ಸಂಗತಿಗಳನ್ನು ಚಿತ್ರಿಸಿಕೊಡುತ್ತದೆ.

ತೊಲೆಗಳು-ಪಾನಪಟ್ಟಿಗಳು : ವಿಶಾಲವಾದ ಪಡಸಾಲೆ ೫೦ ರಿಂದ ೬೦ ಅಂಕಣಗಳನ್ನು ಹೊಂದಿದೆ. ಖಂಡ ಖಂಡವಾಗಿ ಜೋಡಿಸಿದ ತೊಲೆಗಳು ಎಲ್ಲ ಕಂಬಗಳ ಮೇಲೆ ಇದ್ದು ಛತ್ತಿನ ಭಾರವನ್ನು ಹೊತ್ತಿವೆ. ತೊಲೆಗಳ ಎರಡೂ ಅಂಚುಗಳಿಗೂ ಅಂಚನ್ನು ಮುರಿದು 'ಎಳೆ ಕತ್ತನ್ನು' ಹಾಕಿದ್ದರಿಂದ ಅದೇ ಕಲೆಯಾಗಿ ಪರಿವರ್ತನೆಯಾಗಿರುತ್ತದೆ. ಇದಲ್ಲದೆ ಮತ್ತಾವ ಕಲೆಯೂ ಅಲ್ಲಿ ಕಂಡುಬರುವುದಿಲ್ಲ. ಆದರೆ ತೊಲೆಯ ಮೇಲೆ ಹೇರಿರುವ ಹಲಗೆಗಳು ಮೆಟ್ಟಲು ಆಕಾರವಾಗಿ ಜೋಡಿಸಿರುವುದರಿಂದ ಮುಖಕ್ಕೆ ಮುಖ ಹೊಂದಿಸಿರುವುದರಿಂದ ಕಲಾತ್ಮಕವಾದ ಚೆಲವು ಅಲ್ಲಿರುತ್ತದೆ.

ಪಾನ ಪಟ್ಟಿಗಳು ಮುಂದೆ ಹಾಯ್ದು ತೊಲೆಗೆ ಬಂದಿಸಿಯೇ ಇರುವವು. ಬೋದುಗೆಗಳ ಮೇಲೆ, ಚೌಸಪ್ಪಿ ಕಮಾನುಗಳ ಮೇಲೆ ಸುತ್ತಲೂ ಹಂತಹಂತವಾಗಿ ಐದಾರು ಪಟ್ಟಿಗಳು ಕಂಡುಬರುತ್ತವೆ. ಈ ಪಟ್ಟಿಗಳಿಗೆ ತೆನೆಗಳನ್ನು ಕೆತ್ತಿದ್ದು ಅವು ಅಧೋಮುಖವಾಗಿವೆ. ಈ ತೆನೆಗಳೇ ಇಡೀ ವಾಡೇದ ಚೆಲುವನ್ನು ದ್ವಿಗುಣಗೊಳಿಸಿವೆ.

ಚೌಸಪ್ಪಿ ಕಮಾನು : ಚೌಸಪ್ಪಿಗೆ ಹೆಚ್ಚಿನ ಚೆಲುವನ್ನು ನೀಡಿದ ಕೆತ್ತನೆ ಎಂದರೆ ಕಮಾನುಗಳು ಅಥವಾ ಮಂಟಪಗಳು. ಇವು ಅಖಂಡವಾಗಿದ್ದು ಇಂಡೋಸಾರ್ಸೆನಿಕ್ ಮಾದರಿಯಲ್ಲಿ ಕೆತ್ತಿದ್ದಾಗಿವೆ. ಹಾಗೇ ಅರ್ಧಚಂದ್ರಾಕೃತಿ ರಚನೆಯಿಂದ ಕೆತ್ತಿದ್ದರಿಂದ ಅಧೋಪದ್ಮವಾಗಿ ಕಂಬಕ್ಕೆ ಬಂದಿಯಾಗಿರುತ್ತದೆ. ಹಾಗೆ ಬುಗುರಿ ಮಾಡಿದ್ದು ನೆಲ್ಲಿಕಾಯಿ ಮಾಟದ ಉರ್ಧ್ವಮುಖ ಹಾಗೂ ಅಧೋಪದ್ಮವಾದ ಕಲಾಚೆಲುವು ಅಲ್ಲಿ ಕಂಡುಬರುತ್ತದೆ. ಅರ್ಧಚಂದ್ರಾಕೃತಿ ಅಂಚನ್ನು 'ಗೋಲು' ಹೊಡೆದಿರುವುದರಿಂದ ನಾಜೂಕಾದ ಕಲೆಯು ದ್ವಿಗುಣಗೊಳಿಸುವಂತೆ ಕಂಡುಬರುತ್ತದೆ. ಹೀಗೆ ಕಮಾನುಗಳುಳ್ಳ ಈ ಕೆತ್ತನೆ ಎಲ್ಲ ವಾಡೇಗಳಲ್ಲಿ ಕಂಡುಬರುವುದಿಲ್ಲ. ಇವು ವಿಶೇಷ ಕಲಾವಿದನ ಕೈಚಳಕದಿಂದ ನಿರ್ಮಿತವಾದವುಗಳು. ಹಾಗೇ ಅಷ್ಟೇ

ವಿಶೇಷ ವೈಭವದ ಕಟ್ಟಡ ಕಟ್ಟಿಸಬೇಕೆಂಬ ಹಂಬಲವುಳ್ಳ ದೇಸಾಯಿಗಳಿರುವುದರಿಂದ ಇಂಥ ನಿರ್ಮಿತಿಗಳು ಸಾಧ್ಯವಾಗಿದೆ. ಇಂಥ ಕಲಾ ಚೆಲುವಿನ ಚೌಸಪ್ಪಿಗಳು ನಿರ್ಮಾಣಗೊಂಡಿವೆ. ಕಲಾ ರಸಿಕರಲ್ಲದವರು ಇಂಥ ನಿರ್ಮಿತಿಗೆ ಮನಸೋಲದೆ ಇರುವುದರಿಂದ ಅಲ್ಲಿ ಯಾವುದೇ ಕೆತ್ತನೆ ಕಂಡುಬರುವುದಿಲ್ಲ. ಅದು ಅವರವರ ಮನೋಧರ್ಮಕ್ಕೆ ಸಾಕ್ಷಿಯಾಗಿದ್ದು ಕಂಡುಬರುತ್ತದೆ.

೫.೨. ಕಲಾವಿದರೊಡನೆ ಮಾಡಿಕೊಂಡ ಒಪ್ಪಂದ

ಮರಕೆತ್ತನೆ ಕೆಲಸ ಮಾಡುವ ವಿಶೇಷ ಕಲಾವಿದರಾದ ಬಡಿಗೇರರನ್ನು ಕರೆಯಿಸಿ ಖಂಡ ಜೋದು ನಿರ್ಮಿತ ವಾಡೇದ ಒಳ ನಿರ್ಮಿತಿ ಮಾಡಿದ್ದು ಈಗಾಗಲೇ ಚರ್ಚಿತವಾಗಿದೆ. ಆದರೆ ವೃತ್ತಿಯನ್ನು ಬೆಳೆಸಿಕೊಂಡು ಬಂದ ಇವರಿಗೆ ಒಪ್ಪಂದ ಮಾಡಿಕೊಂಡುದು ವಿಶೇಷವಾಗಿದೆ. ಈ ಕುರಿತು ಕಲಾವಿದ ಹಾಗೂ ದೇಸಾಯರ ನಡುವಿನ ಒಪ್ಪಂದದ ಕೆಲವು ಚಿಂತನೆಯನ್ನು ಇಲ್ಲಿ ಎತ್ತಿಕೊಳ್ಳಲಾಗಿದೆ.

ವಾಡೇದ ಒಳ ನಿರ್ಮಿತಿಯಲ್ಲೆ ಮೇಲ್ಮಟ್ಟದ ಕಲಾನೈಪುಣ್ಯತೆ ಹೊಂದಿದ ವಾಡೇ ಎಂದರೆ ಬೀಳಗಿ ತಾಲೂಕಿನ ಹೊನ್ಯಾಳ, ಜಮಖಂಡಿ ತಾಲೂಕಿನ ಕೊಣ್ಣೂರ, ಬಾದಾಮಿ ತಾಲೂಕಿನ ಕೆರಕಲಮಟ್ಟಿ, ಹುನಗುಂದ ತಾಲೂಕಿನ ಕರಡಿ ಹಾಗೂ ಕಂದಗಲ್ಲ. ಇವೆಲ್ಲವುಗಳ ಕಲಾಕಾರರು ಬೇರೆ ಬೇರೆಯಾಗಿದ್ದಾರೆ. ಇಂಥವರಲ್ಲಿ ಒಬ್ಬ ಕಲಾವಿದರ ಮಾಹಿತಿ ಸಂಗ್ರಹಿಸಲಾಗಿದೆ.

ಹೊನ್ಯಾಳ ದೇಸಗತಿಯ ವಾಡೆಯನ್ನು ಅದರ ಒಳಗಿನ ವಿನ್ಯಾಸವನ್ನು ನಿರ್ಮಾಣ ಮಾಡಿದವನು ಕೆಂದೂರಿನ ಮಾನಪ್ಪ ಬಡಿಗೇರ. ಇವನು ತನ್ನ ಎಳೆ ವಯಸ್ಸಿನಲ್ಲೆ ಮಹಾಕೂಟದಲ್ಲಿ ಕಲಾ ಕುಸುರಿ ಕೆಲಸಗಳನ್ನು ಚಿತ್ರಿಸಿಕೊಂಡು ಕಲೆ ಬೆಳೆಸಿಕೊಂಡವನು. ತನ್ನ ಅಜ್ಜ ತಾತಂದಿರರ ಜೊತೆಗೆ ಹಳ್ಳಿಹಳ್ಳಿಗೆ ಹೋಗುತ್ತಿದ್ದನು. ಅದನ್ನು ನೋಡಿ ಬೆಳೆಸಿಕೊಂಡು ಬಂದು ಇಂಥ ಕಲೆಯನ್ನು ಅರಗಿಸಿಕೊಂಡು ನಿರ್ಮಿಸಿದನೆಂದು ಜನಪದರಿಂದ ತಿಳದುಬರುತ್ತದೆ.

ಈ ಮನೆತನದ ಕಲಾವಿದರು ಐದಾರು ತಲೆ ತಲಾಂತರದವರೆಗೂ ಪರಂಪರಾಗತವಾಗಿ ಕಟ್ಟಿಗೆ ಕೆತ್ತನೆ ಕೆಲಸದಲ್ಲಿ ನಿಪುಣರಾಗಿದ್ದರು. ಆಗಾಗ ಜಿಲ್ಲೆಯಾದ್ಯಂತ, ಹೊರಗೂ ಹೋಗಿ ಕಟ್ಟಿಗೆ ಕೆತ್ತನೆ ಕೆಲಸ ಮಾಡುತ್ತಿದ್ದರು. ಒಂದೇ ಕಡೆಗೆ ಸುಮಾರು ಎರಡರಿಂದ ಮೂರು ವರ್ಷಗಳವರೆಗೆ ಅಲ್ಲಿದ್ದು ಕೆಲಸ ಮಾಡುತ್ತಿದ್ದರು.

ಹೊನ್ಯಾಳ ವಾಡೇ ಕಟ್ಟಿದವನಿಗೆ ಒಂದು ದಿನಕ್ಕೆ ಮೂರನೂರ ಎಲೆ ಅಡಿಕೆ, ಎರಡು ಹೊತ್ತು ಹೋಳಿಗೆ ಊಟ ಕೊಡಬೇಕು ಎಂಬುದು ಒಂದು ಒಪ್ಪಂದ. ಇಂಥ ವಾಡೇದ ಕಲಾ ಚೆಲುವನ್ನು ಇನ್ನೊಂದು ಕಡೆಗೆ ಕೆತ್ತುವುದಿಲ್ಲವೆನ್ನುವುದು ಒಪ್ಪಂದದ ಒಂದಂಶವಾಗಿತ್ತು ಎಂದು ಸ್ಥಳೀಯರ ಹೇಳಿಕೆ

ಇದೆ.'' ಇಂಥ ವಾಡೇ ಈ ಭಾಗದಲ್ಲಿ ಬೇರೆಲ್ಲಿಯೂ ಇಲ್ಲ. ಅವನ ವೇತನವಾಗಲಿ, ಸಂಸಾರಕ್ಕೆ ಬೇಕಾದ ಸೌಲತ್ತುಗಳಾಗಲಿ ಅವುಗಳ ಬಗ್ಗೆ ಮಾಹಿತಿ ದೊರೆತಿಲ್ಲ. "ಕೆಂದೂರಿನಿಂದ ಸ್ಥಳಾಂತರಗೊಂಡು ಹೊನ್ನಾಳದಲ್ಲಿಯೇ ಇರುವುದರಿಂದ ಅವರಿಗೆ ಯಾವುದಕ್ಕೂ ಕೊರತೆಯಾಗಿಲ್ಲವೆನ್ನುತ್ತಾರೆ.''[೧೬] ಹೊನ್ನಾಳ ಬಿಟ್ಟು ಹೋಗುವಾಗ ಇಡೀ ವಾಡೇದ ಸೂತ್ರವನ್ನು ಹೇಳಿ ಹೋದನೆಂದು ಇದನ್ನು ಮತ್ತಾರಿಗೂ ಹೇಳಬೇಡವೆಂದೂ ವಚನ ಪಡೆದಿದ್ದನೆಂದು ಹೇಳುತ್ತಾರೆ.

ಇತ್ತೀಚೆಗೆ ಆಲಮಟ್ಟಿ ಹಿನ್ನೀರಿನಿಂದ ಮುಳುಗಡೆಯಾಗಲು ಸಮೀಪಿಸಿದಾಗ ನೂರಾರು ವಡ್ಡರು, ಬಡಿಗರು ಬಂದು ಪ್ರಯತ್ನಿಸಿದರೂ ಬಿಚ್ಚಲಿಲ್ಲ. ಕೊನೆಗೆ ಈ ಮನೆತನದ ಹಿರಿಯ ಜೀವ ಗಂಗಮ್ಮ ದೇಸಾಯಿ ಬರೆದಿಟ್ಟ ಕಾಗದ ನಕ್ಷೆ ತೋರಿಸಿ, ಬೆಣೆ (ಬಿಚ್ಚಿಸಿ) ಕಿತ್ತಿದಾಗ ಒಂದೂ ಕಟ್ಟಿಗೆ ಹಾಳಾಗದಂತೆ ಒಂದೊಂದೆ ಬಿಚ್ಚಿ ತಂದು ಇಟ್ಟರೆಂದು ಹೊನ್ನಾಳ ಜನತೆ ಹೇಳುತ್ತಾರೆ.

''ಕೆಂದೂರಿನ ಮಾನಪ್ಪನ ವಂಶಸ್ಥರೆ ಕ್ರಿ.ಶ.೧೮೫೨ರಲ್ಲಿ ಕೊಣ್ಣೂರಿನ ವಾಡೇದ ಚೌಸಪ್ಪಿಯನ್ನು ಮಾಡಿಕೊಟ್ಟರೆಂದು ಹೇಳುತ್ತಾರೆ.''[೧೭] ಇಲ್ಲಿ ಬರಲು ಕಾರಣವಿಷ್ಟೆ. ಹೊನ್ನಿಹಾಳ ದೇಸಾಯಿಗಳು ಗಾಣಿಗರು, ಕೊಣ್ಣೂರ ದೇಸಾಯಿಗಳೂ ಗಾಣಿಗರು ಹಾಗೂ ಸಂಬಂಧಿಕರು ಆಗಿರುವುದುರಿಂದ ಅಲ್ಲಿನ ಕಲಾ ಚೆಲುವನ್ನು ನೋಡಿ ಅದರ ಒಂದು ಭಾಗದಷ್ಟು ಮಾತ್ರ ಕಟ್ಟಿಗೆ ಕೆತ್ತನೆ ಮಾಡಿಸಿದ್ದು ಕಂಡುಬರುತ್ತದೆ. ಆದರೆ ಹೊನ್ನಿಹಾಳದ ಚೌಸಪ್ಪಿಗೂ, ಕೊಣ್ಣೂರ ದೇಸಾಯರ ಚೌಸಪ್ಪಿಗೂ ಭಿನ್ನತೆ ಇದೆ.

"ಇಂಥ ಕಟ್ಟಿಗೆ ಕೆತ್ತನೆ ಕೆಲಸವು ಮರಾಠರ ಪ್ರಭಾವದಿಂದಾಗಿ ವಾಡೇಗಳಲ್ಲಿ ಹುಟ್ಟಿಕೊಂಡವು.''[೧೮] ಕಂಬಗಳು, ಕಿಟಕಿ, ಬಾಗಿಲು, ತೊಲೆ ಹಾಗೂ ಇತರೆ ಎಲ್ಲವೂ ಕಲಾತ್ಮಕವಾಗಿವೆ. ಇಂಥ ವೈಭವಪೂರ್ಣ ರಚನಾತ್ಮಕ ಕಲಾ ವಿನ್ಯಾಸವನ್ನು ಚೌಸಪ್ಪಿ, ಬೋದುಗೆಗಳಲ್ಲಿ ಗುರ್ತಿಸಬಹುದಾಗಿದೆ.

ಒಟ್ಟಾರೆ ದೇಸಾಯಿಗಳು ಸಂಸ್ಕೃತಿಗೆ ಸಲ್ಲಿಸಿರುವ ಕೊಡುಗೆ ಮಹತ್ತರವಾದುದು. ಇಂಥ ಕಟ್ಟಡ ವಾಸ್ತು ಶೈಲಿ ಚೆಲುವು ನೋಡಿದರೆ ಅಂದಿನ ಅವರ ಜೀವನೋತ್ಸಾಹ, ಔದಾರ್ಯ ಸ್ವಾಭಿಮಾನಿಗಳ ನೋಟವನ್ನೂ ಕಾಣಬಹುದು. ಕಲಾವಿದ ಸಹಜವಾಗಿ ಕಲಾತ್ಮಕವಾಗಿ ಕೆತ್ತಿ ಇಡೀ ಪ್ರತಿಭೆಯನ್ನು ಕಲೆಗಾಗಿ ವಿನಿಯೋಗಿಸಿ ಒಂದು ಕಲಾ ಪ್ರಪಂಚವನ್ನೇ ಅಲ್ಲಿ ತೆರೆದಿಟ್ಟಿದ್ದಾನೆ. ಅಂದಿನ ಕಲಾವಿದನ ಹೃದಯ ಸಂಸ್ಕೃತಿಯನ್ನು ಕಲ್ಪಿಸಿಕೊಂಡು ಇತಿಹಾಸದ ಪುಟಗಳಲ್ಲಿ ತನ್ನ ಸ್ಥಾನವನ್ನು ಹಿಗ್ಗಿಸುವಂತಿದೆ. ಅಲ್ಲಿರುವ ಬಾಗಿಲುಗಳ ಅಕ್ಕಪಕ್ಕದಲ್ಲಿ ಸೂಕ್ಷ್ಮ ಕೆತ್ತನೆಗಳಿವೆ. ಒಟ್ಟಾರೆ ಕಲೆಯ ಒಂದು ದೊಡ್ಡ ಗುಚ್ಛವೇ ಕಂಡು ಬರುತ್ತದೆ. ದೇಸಗತಿ ವಾಸ್ತುಶಿಲ್ಪವು ಎಲ್ಲ ರೂಪ ಹೊಂದಿ ನಿರ್ದಿಷ್ಟ ರೂಪವನ್ನು ತಾಳಿತು. ಕರ್ನಾಟಕ ಸಂಸ್ಕೃತಿಯ ವೈಭವವನ್ನು ಇವು ಲೋಕಕ್ಕೆ ನೀಡಿದ ಕೀರ್ತಿ ದೇಸಗತಿಯ ವರವಾಗಿದೆ.

೫.೩. ಬಲಿ ಸಂಪ್ರದಾಯ

ವೇಸಗತಿ ವಾಸ್ತುಶಿಲ್ಪದ ಅಧ್ಯಯನದಡಿಯಲ್ಲಿ ವಾಡೇ, ಕೋಟೆ, ಗಡ, ಕಟ್ಟಡಗಳ ಕುರಿತು ಈಗಾಗಲೇ ಚರ್ಚಿಸಿದೆ. ಇಲ್ಲಿ ಕೋಟೆಯ ಮಹಾದ್ವಾರ ಕಟ್ಟುವಾಗ, ಗಡಗಳನ್ನು ನಿರ್ಮಿಸುವಾಗ 'ಬಲಿ' ಕೊಟ್ಟ ಪ್ರಕರಣಗಳು ಲಭ್ಯವಾಗಿದ್ದರಿಂದ ಇದನ್ನು ಪ್ರತ್ಯೇಕವಾಗಿ ಚರ್ಚಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

'ಬಲಿ'ಯೆನ್ನುವದು ಪ್ರಾಚೀನಕಾಲದಿಂದಲೂ ನಡೆದುಕೊಂಡು ಬಂದ ಪದ್ಧತಿ. ಯಜ್ಞಯಾಗಾದಿಗಳಲ್ಲಿ ಇದನ್ನು ಬಳಸುತ್ತಿದ್ದರು. ಕೆಲವು ಸಲ ಗೃಹಸ್ಥನು ತನ್ನ ದಿನದ ಆಹಾರದಲ್ಲಿ ಒಂದು ಭಾಗವನ್ನು ಪ್ರಾಣಿ, ಪಕ್ಷಿ ಮುಂತಾದವುಗಳಿಗೆ ಕೊಡುವ ಧಾರ್ಮಿಕ ಕ್ರಿಯೆ; ಭೂತಯಜ್ಞ, ಆಹುತಿಯಾಗಿ ಅರ್ಪಿಸುವ ಅನ್ನ, ದ್ರವ್ಯ, ಪ್ರಾಣಿ, ಮನುಷ್ಯ ಮುಂತಾದವು ಆಗಿದ್ದು ತಿಳಿದುಬರುತ್ತದೆ. ಬಲಿಕೊಡುವುದು ಎಂದರೆ ಆಹುತಿಯಾಗಿ ಅರ್ಪಿಸು ಎಂದು ತಿಳಿದುಬರುತ್ತದೆ. ಹೀಗೆ ಬಲಿ ಎನ್ನುವುದು ವಿಶೇಷ ಅರ್ಥವನ್ನು ಸೂಚಿಸುತ್ತದೆ. ಬಲಿಪೀಠ, ಬಲಿಹರಣ, ಬಲಿಹಾಕು ಎಂಬುವುಗಳಾಗಿವೆ.

ಬಾಗಲಕೋಟಿಯ 'ಜಂಗಿ' ಸಾವುಕಾರ ಎನಿಸಿಕೊಂಡ ಸೊನ್ನದ ದೇಸಾಯಿ ಮೂಲತಃ ಬಾಗಲಕೋಟೆಯಲ್ಲಿ ಆಳಿಕೆ ಮಾಡಿದ್ದು ಈಗಲೇ ಚರ್ಚಿಸಿದೆ. ಆದರೆ ಆ ದಿನದಲ್ಲಿ ಬಾಗಲಕೋಟಿ ಜಿಲ್ಲೆಯ ಮಹಾದ್ವಾರವನ್ನು ಕಟ್ಟಿದ್ದರ ಕುರಿತು ಆಧಾರ ಸಿಗುತ್ತದೆ. ಈ ಒಂದು ಆಧಾರದಲ್ಲಿ ಫಸಲಿ, ೯೩ರಲ್ಲಿ ಬಾಗಲಕೋಟಿ ಕಿಲ್ಲೆ ಮಹಾದ್ವಾರವನ್ನು ಕಟ್ಟಿದರು ಎಂದು ಉಲ್ಲೇಖಿಸಿದ್ದಾಗಿದೆ. ಈ ಕಟ್ಟಡ ಮಾಡುವಾಗ ಒಂದು ಕಥೆಯನ್ನು ಬರೆದುದು ಅದರಲ್ಲಿ ಸಿಗುತ್ತದೆ. ಅದೆಂದರೆ

ಕಿಲ್ಲೆದ ಮಹಾದ್ವಾರವು ಕಟ್ಟುತ್ತಲೆ ಬಿದ್ದುಬಿಡುತ್ತಿತ್ತು. ಸುಮಾರು ಸಲ ಕಟ್ಟಿದರು ರಾತ್ರಿ ಹೊತ್ತು ನಿಲ್ಲುತ್ತಿರಲಿಲ್ಲ. ಇದರಿಂದ ಬೇಸತ್ತ ಇವರು ಕಿಲ್ಲೆ ಮಹಾದ್ವಾರ ಕಟ್ಟಲು 'ರಮಲ ಶಾಸ್ತ್ರ' ಕೇಳಿದರು. ರಮಲ ಶಾಸ್ತ್ರದ ಪ್ರಕಾರ 'ಬಲಿ' ಕೊಡಲು ಹೇಳಿದರು. ಅದು ಬಸಿರು ಹೆಂಗಸನ್ನು ಬಲಿ ಕೊಡಲು ಹೇಳಿದಾಗ ತಡವರಿಸಿದರೂ ತಮ್ಮದೇ ಆದ ದರ್ಪದ ದಳ್ಳುರಿ ಇರುವಾಗ ಅದನ್ನು ಸರಳವಾಗಿ ಕೈಗೆತ್ತಿಕೊಂಡರು. ನದಿದಂಡೆಯ ಆಚೆ ಅಂದರೆ "ಘಟಪ್ರಭೆಯ ಆಚೆ ದಂಡೆಗೆ ಯಂಕಂಚಿ ಗ್ರಾಮವಿದೆ. ಆ ಗ್ರಾಮದ ಗೌಡರ ಮಗಳು ಹೆರಿಗೆಗಾಗಿ ತೌರಿಗೆ ಬಂದಿದ್ದಳು. ಇದನ್ನು ಕಾಯ್ದು ಕುಳಿತ ಇವರು ತರಿಬಡಿದು ನೀರು ತುಂಬುವಾಗ ಎತ್ತಿಕೊಂಡು ಬಂದು ಕಿಲ್ಲೆಯ ಮಹಾದ್ವಾರದ ಒಳಗೆ ಅದೂ ಮುಚಖಂಡಿ ಭಾಗದ ಕಡೆ ಹಾಕಿ ಕಟ್ಟಲಾಗಿದೆ ಎಂದು ಉಲ್ಲೇಖವಿದೆ."[೧೯]

ಜಾಲಿಹಾಳ ದೇಸಾಯಿಗಳು ಅಂದರೆ ಮೂಲ ಬೇಲುಗಿರಿ ಸಂಸ್ಥಾನೀಕರು "ಗುಡ್ಡದ ಮೇಲೆ ಹುಡೇ ಕಟ್ಟುವಾಗ ಅದು ನಿಲ್ಲದೆ ಬೀಳುತ್ತಿರಲು ಸಂಪ್ರದಾಯದಂತೆ ಅದಕ್ಕೆ 'ಹಾರ'(ಬಲಿ) ಕೊಡಬೇಕಾಗುತ್ತದೆ."[೨೦] ಎಂದು ಶಾಸ್ತ್ರ ಕೇಳಿದ್ದರು. "ಒಂದು ದಿನ ಅಂದರೆ ಕಾರಹುಣ್ಣಿಮೆ ದಿನ ಕರಿಗಡಬು ಉಂಡ

ಸಂಜೀವಪ್ಪನಿಗೆ ದೇಸಾಯಿ ಆಜ್ಞೆ ಮಾಡುತ್ತಾನೆ. ನೀನು ಹುಡೇದ ಒಳಗಡೆ ಕುಳಿತುಕೊಂಡು ಬರಬೇಕು ಎಂದು ಹೇಳುತ್ತಾನೆ. ಮುಗ್ಧನಾದ ಸಂಜೀವಪ್ಪ ಕುಳಿತುಕೊಳ್ಳುತ್ತಾನೆ. ಆದರೆ ಎಲ್ಲರೂ ಮೋಸದಿಂದ ಜೋರಾಗಿ ಕಲ್ಲು ತುಂಬಿ ಹುಡೆ ಕಟ್ಟಿ ಮುಗಿಸುತ್ತಾರೆ. ಅವನ ನೊಂದ ತಾಯಿ ಸಕ್ರವ್ವ, ದೇಸಾಯಿಯ ರಾಜ್ಯ ಮಣ್ಣುಗೂಡಲೆಂದು ಶಪಿಸುತ್ತಾಳೆ.

ಈ ಮೇಲಿನ ಸಂಗತಿಗಳನ್ನು ನೋಡಿದಾಗ ಬಲಿ ಸಂಪ್ರದಾಯವು ಆ ದಿನದಲ್ಲಿ ಎಷ್ಟೊಂದು ಪ್ರಚಲಿತದಲ್ಲಿತ್ತೆಂದು ತಿಳಿದುಬರುತ್ತದೆ. ಜನಪದ ಸಾಹಿತ್ಯದಲ್ಲಿ ಇಂಥ ಘಟನೆಗಳು ಸಾಕಷ್ಟು ಸಿಗುತ್ತವೆ. ಇತ್ತೀಚೆಗೆ ಕೂಡ ದೊಡ್ಡ ದೊಡ್ಡ 'ಡ್ಯಾಂ'ಗಳನ್ನು ಕಟ್ಟುವಾಗಲು 'ಬಲಿ'ಕೊಡುತ್ತಾರೆಂದು, ಮಕ್ಕಳನ್ನು ಅಪಹರಿಸಿ ಒಯ್ಯುತ್ತಾರೆಂದು ವದಂತಿಗಳಿವೆ. ಹೀಗೆ ಬಲಿ ಸಂಪ್ರದಾಯವನ್ನು ದೇಸಗತಿಯವರೂ ಕೂಡ ಪಾಲಿಸಿದ್ದರೆಂದು ಮೇಲಿನ ಉದಾಹರಣೆಗಳು ಆಧಾರ ಒದಗಿಸಿವೆ.

೫.೩.೧ ಸ್ಥಳ ಆಯ್ಕೆ

ಯಾವುದೇ ಒಂದು ಇಮಾರತಿ ನಿರ್ಮಾಣಕ್ಕೆ ಯೋಗ್ಯಸ್ಥಳ, ಅಲ್ಲಿನ ಪರಿಸರ ಪ್ರಮುಖವಾಗಿದೆ. ಅದರಂತೆ ದೇಸಾಯಿಗಳೂ ಕೂಡ ತಮ್ಮ ಸಲುವಾಗಿ, ತಮ್ಮ ಜನಗಳ ಸಲುವಾಗಿ ಇಮಾರತೆಗಳ ನಿರ್ಮಾಣಕ್ಕೆ ಸ್ಥಳ ಆಯ್ಕೆ ಮಾಡಿಕೊಂಡು ಅಲ್ಲಿ ನೆಲೆ ನಿಂತು ಜೀವನ ಸಾಗಿಸಲು ಒಂದಿಷ್ಟು ಯೋಚನೆ ಮಾಡಿರುವುದು ಅವರು ಕಟ್ಟಿದ ಕೋಟೆ, ಕೊತ್ತಲ, ಕೋಟೆಯ ಸುತ್ತುಗೋಡೆ, ಅಗಸೆಬಾಗಿಲು, ಅರಮನೆ, ಮೊದಲಾದ ಅಳಿದುಳಿದ ಅವಶೇಷಗಳು ಕುರುಹುಗಳಾಗಿವೆ. ಪ್ರತಿಯೊಂದು ದೇಸಗತಿಯ ಐತಿಹಾಸಿಕ ಕುರುಹಾಗಿ ಕೋಟೆ, ಕೋಟೆಯ ಒಳಗಡೆ ಅರಮನೆ ಜನ ಸಾಮಾನ್ಯರ ಮನೆ ಹಾಗೇ ಹೊರಗೆ ಕೂಡ ಇಂಥ ಮನೆಗಳನ್ನು ಈಗಲೂ ಕಾಣುತ್ತೇವೆ. ಇಂಥ ವಿಶಾಲವಾದ ಪ್ರದೇಶದಲ್ಲಿ ಜನಸಾಮಾನ್ಯರಿಗೂ ತಮಗೂ ಭಿನ್ನತೆ ಇರುವಂತೆಯೇ ಸ್ಥಳ ಆಯ್ಕೆ ಮಾಡಿದ್ದು ವಿಶೇಷವಾಗಿದೆ.

ತಾವು ಆಯ್ಕೆ ಮಾಡಿದಂತಹ ಸ್ಥಳವು ಎತ್ತರ ಪ್ರದೇಶವಾಗಿದ್ದುದು. 'ಕೊಪ್ಪ' 'ಮಟ್ಟ' ಆಗಿರುತ್ತದೆ. ಇದರ ಮೇಲ್ಗಡೆ ತಮ್ಮ ವಾಸಕ್ಕಾಗಿ ಸ್ಥಳ ಆಯ್ಕೆ ಮಾಡಿದ್ದು, ಕೆಳಗಡೆಗೆ ಜನಸಾಮಾನ್ಯರು ವಾಸವಾಗಿರುವಂತೆ ನಿರ್ದೇಶಿಸಿದ್ದು ಕಂಡುಬರುತ್ತದೆ.

"ಈ ನಾಲ್ಕು ದಿಕ್ಕುಗಳಲ್ಲಿ ವೈರಿ ಪಡೆಯನ್ನು ತಡೆಯಲು ಸೂಕ್ತವಾದ ಕಟ್ಟಡವನ್ನು ಕಟ್ಟಬೇಕೆಂದು ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಹೇಳುತ್ತಾನೆ. ನೆಲಕೋಟೆಯನ್ನು ವಶಪಡಿಸಿಕೊಳ್ಳುವುದು ಸುಲಭ ನದಿಕೋಟೆಯ ವಶ ಕಷ್ಟಕರ ಮತ್ತು ಗಿರಿಕೋಟೆ ವಶ ಇನ್ನೂ ಕಷ್ಟಕರ" ಎನ್ನುತ್ತಾನೆ. ದೇಸಾಯಿಗಳು ಒಂದೆಡೆ ನೆಲೆ ನಿಂತು ಮತ್ತೆ ಸ್ಥಳಾಂತರಗೊಂಡು, ನದಿದಂಡೆಗೆ ಹೋಗಿ ಕೋಟೆ ಕಟ್ಟಿಕೊಂಡಿದ್ದಾರೆ. ಹಾಗೆಯೇ ಕಟ್ಟಡಗಳನ್ನು ಕಟ್ಟುವಾಗಲೂ ನೈಸರ್ಗಿಕ ವಿಕೋಪಗಳನ್ನು ಗಮನದಲ್ಲಿಟ್ಟುಕೊಂಡು,

ಸುರಕ್ಷಿತತೆಯನ್ನು ಮತ್ತು ಸಂರಕ್ಷಣೆಯನ್ನ ಪ್ರಧಾನವಾಗಿಟ್ಟುಕೊಂಡು ಪ್ರದೇಶವನ್ನು ಆಯ್ಕೆ ಮಾಡುತ್ತಿದ್ದರು. ತಾವು ಆಯ್ಕೆ ಮಾಡಿದ ಸ್ಥಳವು ನದಿಯಿಂದ ಸ್ವಲ್ಪ ದೂರದಲ್ಲಿದ್ದುದಾಗಿರುತ್ತದೆ. ಹಾಗೇ ವಾಸ್ತುವಿನ ಹಿನ್ನೆಲೆಯಲ್ಲಿಯೇ ಗುರ್ತಿಸಿದ್ದು ವಿಶೇಷವಾಗಿರುತ್ತದೆ.

೫.೩.೨. ದಿಕ್ಕುಗಳು ಮತ್ತು ನಿವೇಶನ

ದೇಸಗತಿಗಳಲ್ಲಿ ತಮಗಾಗಿಯೇ ಒಬ್ಬ ಶಾಸ್ತ್ರಜ್ಞ ಪುರೋಹಿತನನ್ನು ನೇಮಿಸಿ ಕೊಂಡಿರುತ್ತಿದ್ದರು. ಅವನಿಗೂ ಕೂಡ ಉಂಬಳಿಯಾಗಿ ಜಮೀನನ್ನು ನೀಡಿ ತಮ್ಮ ಮನೆತನದ ಧಾರ್ಮಿಕ ವಿಧಿ ವಿಧಾನಗಳನ್ನು ಮಾಡಲು ಕೇಳಿಕೊಂಡು ಅದಕ್ಕೆ ಪರಿಹಾರವನ್ನು ಕೈಕೊಳ್ಳುತ್ತಿದ್ದರು. ಇಂಥ ಶಾಸ್ತ್ರ, ಪಂಚಾಂಗ, ರಮಲಶಾಸ್ತ್ರ ದಂತ ಹೇಳಿಕೆಯನ್ನು ಗಟ್ಟಿಯಾಗಿಟ್ಟುಕೊಂಡು ಬಂದ ದೇಸಾಯಿಗಳು ಶಾಸ್ತ್ರೋಕ್ತವಾಗಿಯೇ ಕಟ್ಟಡಗಳನ್ನು ಕಟ್ಟಿದ್ದಾರೆ. ಆಯಕಟ್ಟಿನ ಸ್ಥಳಗಳಿದ್ದರೂ ಕೂಡ ಅದು ಪೂರ್ವಾಭಿಮುಖವಾಗಿ ಬರುವಂತೆ ಹಾಗೂ ಉತ್ತರಾಭಿಮುಖವಾಗುವಂತೆ ದಿಕ್ಕುಗಳನ್ನು ಗುರ್ತಿಸಿಕೊಂಡು ವಾಡೇಗಳನ್ನು ಕಟ್ಟಿಕೊಂಡದ್ದು ಅಲ್ಲಿರುವ ಕಟ್ಟಡಗಳು ನಿರ್ದೇಶಿಸುತ್ತವೆ.

ಕಟ್ಟಡಗಳ ಎಡಗಡೆ ಈಶಾನ್ಯ ದಿಕ್ಕಿಗೆ ನದಿ ಹರಿಯುತ್ತಿದ್ದರೆ ಅದು ತುಂಬಾ ಒಳ್ಳೆಯದೆಂದು ಅವರ ಭಾವನೆಯಾಗಿದೆ. ಕೆಲವು ಸಲ ತಮ್ಮ ವಾಸ್ತುಪ್ರಕಾರ ಕೆರೆ, ಭಾವಿ, ಕಲ್ಯಾಣಿಯಂತ ಹೊಂಡಗಳನ್ನು ಕಟ್ಟಿಕೊಂಡದ್ದು ಇನ್ನೂ ವಿಶೇಷ ಎನಿಸಿವೆ. ಇವು ಸಾಮಾಜಿಕ ಕೊಡುಗೆಗಳಾದರೂ ವಾಸ್ತುನೆಲೆಯಲ್ಲಿ ಕಟ್ಟಿದ್ದು ವಿಶೇಷವಾಗಿರುತ್ತದೆ.

ಕೆಲವು ಹಿರಿಯ ತಲೆಮಾರಿನ ಶಾಸ್ತ್ರಬಲ್ಲವರನ್ನು ಸಂದರ್ಶಿಸಿದಾಗ ನಂಬಲಾರ್ಹವಾದ ಸಂಗತಿಗಳು, ಬೆಳಕಿಗೆ ಬಂದವು. ಅವೆಲ್ಲವುಗಳನ್ನು ಒಂದೆಡೆಗೆ ಸಮೀಕರಿಸಿ ಚರ್ಚಿಸಲು ಇಂಥದೊಂದು ಅವಕಾಶವನ್ನು ಇಲ್ಲಿ ಕಲ್ಪಿಸಿಕೊಂಡಿದೆ. ಅದೆಂದರೆ

೧. ವಾಡೇಯಲ್ಲಿ ಮಕ್ಕಳು ಹುಟ್ಟಿದರೂ ಬದುಕುವುದಿಲ್ಲ ಎನ್ನುತ್ತಾರೆ.

೨. ಕೆಲವು ವಾಡೆಗಳಲ್ಲಿ ಪಿಶಾಚಿ, ಮೃತ್ಯುಭಯವಿರುತ್ತದೆ ಎನ್ನುತ್ತಾರೆ.

೩. ಕೆಲವು ವಾಡೇಗಳಲ್ಲಿ ದನಕರುಗಳು ಮಾತ್ರ ಬದುಕುತ್ತವೆ. ಅಲ್ಲದೆ ವೃದ್ಧಿಯಾಗುತ್ತವೆ ಎನ್ನುತ್ತಾರೆ.

೪. ಇತ್ಯಾದಿ

ಕಟ್ಟಡ ಕಟ್ಟುವ ಪೂರ್ವದಲ್ಲಿ ಕೆಲವು ಸ್ಥಳದ ಅಥವಾ ನಿವೇಶನದ ಪರಿಶೀಲನೆಯೂ ಕೂಡ ವಾಸ್ತುವಿನ ಪ್ರಮುಖಭಾಗವಾಗಿದೆ. ಅಲ್ಲಿರುವ ಮಣ್ಣು, ತಗ್ಗು, ದಿನ್ನೆ, ಏರು, ಇಳುವು, ಕಲ್ಲು, ವಾಸನೆ, ಮಣ್ಣಿನ ಬಣ್ಣ ಇವೆಲ್ಲವೂ ಕೂಡ ಪ್ರಮುಖವಾದ ಅಂಶಗಳೆಂದು ತಿಳಿದುಬರುತ್ತದೆ.

ಪ್ರತಿಯೊಂದು ವಸ್ತುವಿಗೂ ತನ್ನದೇ ಆದ ಬಣ್ಣ ವಾಸನೇ ಇರುವುದು ಸಹಜ. ಅದು ಪ್ರಕೃತಿ ಗುಣಧರ್ಮ. ಆದಾಗ್ಯೂ ಮಣ್ಣಿನ ಬಣ್ಣ, ವಾಸನೆ ಕುರಿತು ಇಂಥ ಸಂಪ್ರದಾಯವನ್ನು ನಂಬುವುದು ಅಸಾಧ್ಯವೆನಿಸುತ್ತದೆ. ಆದರೂ ಪರಂಪರಾಗತವಾಗಿ ರೂಢಿಸಿಕೊಂಡು ಬಂದ ಈ ಪರಂಪರೆ ಈಗೀಗ ಮರೆಯಾಗುತ್ತಿದೆ. ಕೆಲವು ಹಳೆ ತಲೆಮಾರಿನವರು ಇಂಥ ನಂಬಿಕೆಯನ್ನು ಉಳಿಸಿಕೊಂಡು ಬಂದವರು ಗ್ರಾಮೀಣ ಭಾಗದಲ್ಲಿದ್ದಾರೆ. ವೈಶ್ಯರೆನಿಸಿಕೊಂಡಂಥವರು, ಕ್ಷತ್ರೀಯರು, ಬ್ರಾಹ್ಮಣರು ಕಾಣಸಿಗುತ್ತಾರೆ. ಅಂಥವರ ಕೆಲವು ವಿಚಾರಗಳನ್ನು ಇಲ್ಲಿ ಕ್ರೂಢೀಕರಿಸಿದೆ.

ಕೆಂಪು ಮಣ್ಣಿನಿಂದ ಕೂಡಿದ, ಹುಲ್ಲು ಬೆಳೆದಿರುವ, ಎತ್ತರ ಪ್ರದೇಶದ ಭೂಮಿ ಶ್ರೇಷ್ಟವೆಂದು, ಹಳ್ಳ ತಿಟ್ಟೆಗಳಿಲ್ಲದ, ಹಳದಿ ಬಣ್ಣದ, ಜೇನಿನ ವಾಸನೆ, ಹುಳಿ, ರುಚಿಯಾದ ಮಣ್ಣಿನಿಂದ ಕುಡಿದ್ದರೆ, ಫಲಪುಷ್ಪ ಭರಿತವಾದ ಭೂಮಿಯಾದರೆ ಒಳ್ಳೆಯದು ಎನ್ನುತ್ತಾರೆ.

ಜೋತಿಷ್ಯ ಶಾಸ್ತ್ರದ ಪ್ರಕಾರ ಬಿಳಿ ಮಣ್ಣು, ಕಪ್ಪು ಮಿಶ್ರಿತ ಮಣ್ಣು ಇದ್ದರೆ ಎಲ್ಲರಿಗೂ ಶುಭವೆಂದು ನಂಬಿಕೆ ಇದೆ. ಇಂಥ ಅನೇಕ ನಂಬಿಕೆಗಳು ಹುಟ್ಟಿಕೊಂಡಿದ್ದರಿಂದ ಇಂಥ ಪರಂಪರೆಗೆ ಅಂಟಿಕೊಂಡಿದ್ದು ತಿಳಿದುಬರುತ್ತದೆ. ಅವರೆಲ್ಲರ ಮನೋಧರ್ಮ ಇತ್ತೀಚೆಗೆ ಬದಲಾದಂತೆ ಕಂಡುಬರುತ್ತದೆ. ಆದರೆ ಕಟ್ಟಡದಲ್ಲಿ ವಾಸ್ತುವನ್ನು ಮಾತ್ರ ಪಾಲಿಸುತ್ತಿದ್ದುದು ಮುಂದುವರಿದುಕೊಂಡು ಬಂದಿದೆ.

ದೇಸಾಯಿಗಳು ವಾಸ್ತುಪ್ರಕಾರ ತಮ್ಮ ವಾಡೆಗಳನ್ನು ನಿರ್ಮಿಸಿಕೊಳ್ಳುತ್ತಾ ನಡೆದುದು ಉದ್ದಕ್ಕೂ ಸಾಗಿಬಂದಿದೆ. ಮೂಲ ಪ್ರದೇಶವನ್ನು ಬಿಟ್ಟು ಸಮೀಪದಲ್ಲಿರುವ ಪ್ರದೇಶದಲ್ಲಿ ವಾಡೇ ಕಟ್ಟಿಸಿಕೊಂಡದ್ದು ಸಾಕಷ್ಟು ಇದೆ. ಇಂಥ ಅನುಸರಣೆ ಮಾಡಿಕೊಂಡವರಲ್ಲಿ ಈಗಿನ ನೀರಬೂದಿಹಾಳ ದೇಸಾಯಿ, ಕೆರಕಲ ಮಟ್ಟಿನಾಡಗೌಡ, ಮುದ್ದಾಪೂರ ದೇಸಾಯಿ, ಹಾಗೂ ಇತರರೂ ಕೂಡ ಒಬ್ಬರಾಗಿದ್ದಾರೆ. ಹೀಗೆ ನಿವೇಶನ ಪರಿಶೀಲನೆಯ ಪರಿಕಲ್ಪನೆ ನಂತರದಲ್ಲಿ ಉದ್ಭವಿಸಿದ್ದರಿಂದ ಇಂಥ ಬದಲಾವಣೆ ಆಗಿರಬೇಕೆಂದು ಜನಪದರ ನಂಬಿಕೆಯಾಗಿದೆ.


ವಾಸ್ತುಶಾಸ್ತ್ರಜ್ಞರ ಪ್ರಕಾರ ''ಕೆಲವು 'ವಿಥಿ'ಗಳು ಇವೆ. ಅವುಗಳು (ಕಟ್ಟಡಗಳು) ದೋಷಯುಕ್ತವಾಗಿರುವುದರಿಂದ ಇಂಥ ಘಟನೆಗಳು ಜರುಗುತ್ತವೆಂದು ಹೇಳುತ್ತಾರೆ.'' ಅವು (ವಿಥಿ) ಇಂದಿನವುಗಳಲ್ಲ ಪ್ರಾಚೀನಕಾಲದಿಂದಲೂ ಮುಂದುವರಿದುಕೊಂಡು ಬಂದಂಥವುಗಳಾಗಿವೆ. ಅವೆಂದರೆ

''೧. ಗೋವಿಥಿ   ೨. ಅಗ್ನಿವಿಥಿ   ೩. ಪ್ರೇತ ವಿಥಿ

೪. ಜಲವಿಥಿ   ೫. ದಾನ್ಯವಿಥಿ   ೬. ಗಜವಿಥಿ

೭. ಸಿಂಹವಿಥಿ   ೮. ನಾಗವಿಥಿ''

ಇವೆಲ್ಲವುಗಳ ವಾಸ್ತು ಈ ಕೆಳಗಿನಂತಿವೆ.



ಈ ಕಟ್ಟಡ (ವಾಸ್ತು) ಕೂಡ ಸ್ಥಳದ ಪರಿಕಲ್ಪನೆಯಿಂದ ಪೂರ್ಣ ಕಟ್ಟಡ ಹೊಂದುವವರೆಗೆ ಎತ್ತರ, ತಗ್ಗು ಇತ್ಯಾದಿಯಾಗಿ ಮಾಹಿತಿ ನೀಡುತ್ತದೆ.

ಹೀಗೆ ಒಟ್ಟಾರೆಯಾಗಿ ಮಾಹಿತಿಯು ವಾಸ್ತುಕುರಿತು ಬೇರೆ ಬೇರೆಯಾಗಿ ಕಂಡುಬಂದರೂ ವಾಸ್ತು ತಜ್ಞರ ಅಭಿಪ್ರಾಯವೂ ಇದಾಗಿದೆ. ಇವುಗಳ ಆಧಾರಿತವಾದ ಕಟ್ಟಡಗಳೇ ಹುಟ್ಟಿಕೊಂಡಿವೆ. ದೇಸಾಯಿಗಳು ಮೊದಲು ತಮ್ಮ ಅನುಕೂಲಕ್ಕೆ ತಕ್ಕಂತೆ ಕಟ್ಟಡ ರಚಿಸಿಕೊಂಡು ವಾಸ್ತು ಅನುಸರಿಸಿ ಸರಿಪಡಿಸಿಕೊಂಡಿದ್ದಾರೆ. ಹೆಚ್ಚು ಪಾಲು 'ಗಜವಿಥಿ'ಯನ್ನು ದೇಸಾಯಿಗಳು ಪಾಲಿಸಿದಂತೆ ಕಂಡುಬರುತ್ತದೆ.

೫.೪. ಕಟ್ಟಡದ ವಾಸ್ತು ಬದಲಾವಣೆ

ಪ್ರತಿಯೊಬ್ಬರಿಗೂ ವಸತಿ ಅತ್ಯವಶ್ಯವಾಗಿದೆ. ಇಲ್ಲಿ ವಸತಿ ರಹಿತರೂ ವಸತಿ ಸಹಿತರೂ ಇದ್ದಾರೆ. ಇಂಥ ಪರಿಸರದಲ್ಲಿದ್ದ ನಮಗೆ ಕಟ್ಟಡದ ವಾಸ್ತು ಕುರಿತು ಚರ್ಚೆ ನಡೆದಿದೆ. ಈ ಕುರಿತು ವಾಸ್ತುವಿನ ಬಗ್ಗೆ ಅನೇಕ ಪುಸ್ತಕಗಳು, ಶಾಸ್ತ್ರಜ್ಞರು ಹುಟ್ಟಿಕೊಂಡು ತಮ್ಮದೇ ಆದ ವಾಸ್ತುವಿನ ಕುರಿತು ಹೇಳುತ್ತಲೇ ನಡೆದಿದ್ದಾರೆ.

ಗಾಳಿ, ಬೆಳಕು, ಸರಳ ಹರಿದು ಬರುವುದೊಂದೆ (Ventilation) ಒಂದು ವ್ಯವಸ್ಥಿತವಾದ ಕಟ್ಟಡ ಎನಿಸಿಕೊಳ್ಳುತ್ತದೆ. ಅದು ಆರೋಗ್ಯದ ದೃಷ್ಟಿಯಿಂದಲೂ ಚೆನ್ನಾಗಿರುತ್ತದೆ. ಇದರೊಳಗಡೆ ಕೆಲವು ಮೂಢ ನಂಬಿಕೆಗಳು ಸಂಪ್ರದಾಯಗಳು ಮನೆಯನ್ನೇ ಕುರಿತು ಹುಟ್ಟಿಕೊಂಡಿದ್ದರಿಂದ ಅವುಗಳ ಮಾಹಿತಿ ಕ್ರೂಢೀಕರಿಸಿಕೊಂಡು ಸಂಕ್ಷಿಪ್ತ ವಿವರಣೆಯೊಂದಿಗೆ ಚರ್ಚಿಸಿದೆ. ಅವು ಹೀಗಿವೆ

೧. ಬಾಗಿಲು, ಕಿಡಕಿ, ಮಾಡ 'ಸೂಲ'ದಲ್ಲಿ ಬೀಳಬಾರದು.

೨. ಬಾಗಿಲು ದಕ್ಷಿಣಾಭಿಮುಖವಾಗಿ, ಪಶ್ಚಿಮಾಭಿಮುಖವಾಗಿ ಇರಬಾರದು.

೩. ತೊಲೆಗಳು ಬಾಗಿಲಿಗೆ ಅಡ್ಡವಾಗಿರಬಾರದು.

೪. ಇತರೆ ಕಾರಣಗಳು

ಇಂಥ ಅನೇಕ ನಂಬಿಕೆಗಳು ಬೇರೂರಿವೆ. ಇಂಥವೆಲ್ಲವನ್ನು ಗಮನಿಸಿಯೇ ಕಟ್ಟಡ ಕಟ್ಟುವ ಕುಶಲ ಕರ್ಮಿಗಳಾಗಲಿ, ಕಟ್ಟಿಗೆ ಕೆಲಸ ಮಾಡುವ ವರ್ಗವಾಗಲಿ ಅರಿತಿದ್ದರೂ ತಪ್ಪು ತಿಳಿವಳಿಕೆಯಿಂದ ಜರುಗಿರಬೇಕೆಂದು ಕೆಲವರ ಅಭಿಮತ. ಅಂಥವೆಲ್ಲವನ್ನು ಆಗಾಗ ಬದಲಾವಣೆ ಮಾಡುತ್ತ ಬಂದಿದ್ದಾರೆಂದು ವಾಡೇದ ವಂಶಸ್ಥರಿಂದ ತಿಳಿದುಬರುತ್ತದೆ.

ದೇಸಾಯಿಗಳ ಅರಮನೆಯೊಳಗೆ ಹೋಗಬೇಕಾದರೆ ಮೂರು ನಾಲ್ಕು ಬಾರಿ ಹಾವಿನ ನಡಿಗೆಯಂತೆ ಅಡ್ಡದಿಡ್ಡವಾಗಿ ಹೋಗಬೇಕಾಗುತ್ತದೆ. ಇದು ಅವರು ಪಾಲಿಸಿದ ವಾಸ್ತುವಿನ ನಂಬಿಕೆಯಾಗಿದೆ. ಇನ್ನೊಂದರ್ಥದಲ್ಲಿ ಅರಮನೆ ಸ್ತ್ರೀಯರು ಘೋಷೆಯಲ್ಲಿದ್ದುದರಿಂದ ತಕ್ಷಣ ಪರಪುರುಷನ ಕಣ್ಣೆದುರಿಗೆ ಬೀಳಬಾರದೆಂಬುದು ಒಂದು ಉದ್ದೇಶ ಇದರಲ್ಲಡಗಿದೆ. ಅವರ ಮೂಢ ನಂಬಿಕೆಗೆ ವಿರುದ್ಧವಾದ ಇತ್ತೀಚಿನ ಬದಲಾವಣೆಗೆ ಕೆಲವು ಕಾರಣಗಳಿಂದ ಸೃಷ್ಟಿಗೊಂಡಿವೆ. ಕಾಲದ ಅಗತ್ಯತೆಗನುಗುಣವಾಗಿ ಬದಲಾವಣೆ ಮಾಡುವುದು ಅನಿವಾರ್ಯತೆ ಆಯಿತು. ಆಗ ಮಹಾದ್ವಾರದ ವಾಸ್ತುವನ್ನೇ ಬಿಟ್ಟು ಅಗತ್ಯವಿರುವ ಕಡೆಗೆ ವಿಶಾಲವಾದ ಬಾಗಿಲನ್ನು ಹುಟ್ಟಿಸಿಕೊಂಡರು. ಕಾರಣವೆಂದರೆ ದೇಸಾಯಿಗಳು ಆನೆ ಅಂಬಾರಿಯನ್ನು ಹೊಂದುವಷ್ಟು, ಒಂಟೆಗಳನ್ನು ಹೊಂದುವಷ್ಟು ಪ್ರಭಲರಾದರು. ಬ್ರಿಟೀಷ ಅಧಿಕಾರಿಗಳು ದೇಸಗತಿಗೆ ಆಗಾಗ ಭೇಟಿ ನೀಡಲು ಪ್ರಾರಂಭಿಸಿದರು. ಪೇಶ್ವೆಗಳಂಥವರು ನೂರಾರು ಸೈನಿಕರು ದೇಸಗತಿ ಒಳಗಡೆ ಪ್ರವೇಶ ಬಯಸಿದರು. ಆಗ ಇಕ್ಕಟ್ಟಾದ ಪ್ರದೇಶದ ದ್ವಾರಬಾಗಿಲನ್ನು ಬಿಟ್ಟು ಬೇರೆ ಕಡೆಗೆ ಮಹಾದ್ವಾರವನ್ನು ನಿರ್ಮಿಸಿಕೊಂಡರು. ಇಂಥ ಬದಲಾವಣೆಗೆ ಯಾವ ವಾಸ್ತುವನ್ನು ಪಾಲಿಸಲಿಲ್ಲ. ಮೂಢನಂಬಿಕೆಗಳು ಎಲ್ಲಿಯವರೆಗೆ ಘಟ್ಟಿಯಾಗಿರುತ್ತವೆಯೋ ಅಲ್ಲಿಯವರೆಗೆ ಸಂಪ್ರದಾಯ ಮುಂದುವರಿಯುತ್ತದೆ ಎಂಬುದು ಇದರಿಂದ ತಿಳಿದುಬರುತ್ತದೆ. ಇಂಥ ಅಗತ್ಯತೆ ಕಂಡುಬಂದರೂ ಅದಕ್ಕೆ ಪೂರಕವಾಗಿ ಕೆಲವು ಬದಲಾವಣೆಗಳನ್ನು ಸೃಷ್ಟಿಸಿಕೊಂಡರು. ಕಟ್ಟಡಗಳ ವಾರಸುದಾರಿಕೆ ಇರದೇ ಇದ್ದುದರಿಂದ ಪ್ರಸ್ತುತ ಒಂಟಿ ಸಲಗದಂತೆ ಕಂಡುಬರುತ್ತವೆ.

ಒಟ್ಟಾರೆಯಾಗಿ ದೇಸಾಯಿಗಳು ರಾಜವೈಭವದಡಿಯಲ್ಲಿ ಮೆರೆದು ಕಾಲದ ಅಗತ್ಯಕ್ಕೆ ತಕ್ಕಂತೆ ಏನೇ ಬದಲಾವಣೆ ಮಾಡಿಕೊಂಡರು ಸೃಷ್ಟಿ, ಲಯದ ಮುಂದೆ ಚಿಕ್ಕದಾಗಿದೆ. ಕಾಲನ ತುಳಿತಕ್ಕೆ ಸಿಗುತ್ತಿರುವುದರಿಂದ ಏನೇ ಪ್ರಮಾಣಿಭೂತ ಮಾಡಿಕೊಂಡರೂ 'ಪೂರ್ವಜನ್ಮದ ಕರ್ಮಫಲ ಅವರ ದೈಹಿಕ ದುರ್ಬಲತೆ. ಹೀಗೆ ಅನೇಕ ಕಾರಣಗಳು ಕೂಡ ಅದರ ವಾರಸುದಾರಿಕೆಗೆ ಕಾರಣವಾಗಿವೆ.

೫.೪.೧. ವಾಸ್ತುಕಲ್ಲು

ದೇಸಾಯಿಗಳು ತಮ್ಮ ವಾಡೆ ಕಟ್ಟಿಸುವಾಗ, ಈಶಾನ್ಯ ಭಾಗದಲ್ಲಿ ವಾಸ್ತುಕಲ್ಲು ಬರೆಯಿಸಿ, ಅದರ ಕೆಳಗಡೆ ಪಂಚಲೋಹ (೫ ತೆರನಾದ ಲೋಹ)ವನ್ನು ೭ ತೆರನಾದ ದವಸ ದಾನ್ಯಗಳನ್ನು ಮಡಿಕೆಯಲ್ಲಿ ತುಂಬಿ ಹುಗಿಯುತ್ತಾರೆ. ಕಾರಣವೆಂದರೆ "ಅಲ್ಲಿರುವ ಬಲಿಯು ತಲೆ ಕೆಳಗಾಗಿ ಮೇಲೆ ಬರದಂತೆ, ಆ ಬಲಿಯನ್ನು ತುಳಿಯುವ ಸಂಕೇತವೆಂದು ವಾಸ್ತುಕಲ್ಲು ಆ ಬಲಿಗೆ ಕಟೀ ಬಂಧನ ಮಾಡುವಂತೆ ಉಲ್ಲೇಖಿಸುತ್ತದೆಂದು ವಾಸ್ತು ಶಾಸ್ತ್ರಜ್ಞರು ಹೇಳುತ್ತಾರೆ." ಇದರ ವಾಸ್ತುಕಲ್ಲು ಕ್ಷೇತ್ರಕಾರ್ಯದಲ್ಲಿ ಸಿಕ್ಕಿವೆ. ವಿಶಿಷ್ಟತೆ ಬಿಡಿಸಲು ಶಾಸ್ತ್ರಜ್ಞರು ಪ್ರಯತ್ನಿಸಿದ್ದಾರೆ. ಅಲ್ಲಿರುವ ಎರಡು ಸೊನ್ನೆಗಳು ವಾಸ್ತುವಿಗೆ ಸರಿಯಾದ ಅರ್ಥ ನೀಡದೆ ಇರುವುದರಿಂದ 'ವಾಸ್ತು' ಶಾಸ್ತ್ರಕ್ಕೆ ಪ್ರಶ್ನೆಯಾಗಿಯೇ ಉಳಿದಿದೆ. ಶಾಸ್ತ್ರಜ್ಞರ ಪ್ರಕಾರ ಅಲ್ಲಿರುವ ಸಂಖ್ಯೆಯನ್ನು ಅಡ್ಡ ಉದ್ದ ಮೂಲೆಗೆ ಕೂಡಿಸಿದಾಗ ಸಮ, ಬೆಸ ಸಂಖ್ಯೆ ಬಂದರೆ ಅಥವಾ ಬೆಸಸಂಖ್ಯೆ ಬಂದರೆ ಆ ಸಂಖ್ಯೆ ಮೇಲೆ ವಾಸ್ತುವಿನ ಕುರಿತು ಹೇಳುವುದು ಅವರ ಅನುಭವದಲ್ಲಿರುವುದು ತಿಳಿದುಬರುತ್ತದೆ.

ಹೀಗೆ ಕಟ್ಟಡ ಕಟ್ಟುವಾಗಲೂ ತಂತ್ರ, ಮಂತ್ರ, ಗೊಂಬಿ, ಫಲ, ಪುಷ್ಪ, ಕಾಳು, ಕಡ್ಡಿ, ಮಡಿಕೆ ಕುಡಿಕೆ ಇತ್ಯಾದಿಯಾಗಿ ಹುಗಿಯುವುದು ಈಗಲೂ ಮುಂದುವರಿದುಕೊಂಡು ಬಂದಿದೆ. ಈಗಲೂ ಕೂಡ ವಿಶೇಷ ಸಂಪ್ರದಾಯವನ್ನು ಅವರು ಅನುಸರಿಸುತ್ತಿದ್ದುದು ಇದರಿಂದ ತಿಳಿದುಬರುತ್ತದೆ.

೫.೫. ವಾಡೇದ ಸುತ್ತಲಿನ ಪರಿಸರ

ದೇಸಗತಿಯ ವಾಡೇಗಳು ಜನಸಂಪರ್ಕದಿಂದ ಅನತಿ ದೂರದಲ್ಲಿವೆ. ದೇಸಾಯಿಗಳು ನಡೆದಾಡುವ, ಸಾಮಾನ್ಯ ಜನರು, ಪ್ರಜಾ ಜನರು ನಡೆದಾಡುವ ದ್ವಾರಬಾಗಿಲು ಬೇರೆ ಬೇರೆಯಾಗಿದೆ. ದೇಸಾಯಿಗಳಿಗೂ ಪ್ರಜಾಜನರಿಗೂ ಮುಖಾಮುಖಿ ಬೇಟಿಯು ಆಗುವುದಿಲ್ಲ. ಅಂಥ ಪ್ರಮೇಯವು ಒದಗಿಬಂದರೆ, ತಕ್ಷಣ ಪಕ್ಕಕ್ಕೆ ಸರಿದು ನಿಲ್ಲುವುದು ಹಾಗೂ ಗೌರವ ಸೂಚಿಸುವುದು ಕಂಡುಬರುತ್ತದೆ. ಹಾಗೆಯೇ ಪ್ರಜಾ ಜನರ ಮನೆಗಳು ಕೂಡ ಈಶಾನ್ಯ ದಿಕ್ಕಿನಲ್ಲಿರುವುದು ಕಡಿಮೆ. ಹಾಗೇ ನೈರುತ್ಯ ದಿಕ್ಕಿನಲ್ಲಿರುವುದಿಲ್ಲ. ಈ ಎರಡು ದಿಕ್ಕುಗಳಲ್ಲಿ ಉಚ್ಚವರ್ಗದವರ ಮನೆಗಳು ಕಂಡುಬರುತ್ತವೆ. ಇಲ್ಲವಾದರೆ ಆ ದಿಕ್ಕಿನಲ್ಲಿ ನದಿ ಅಥವಾ ಕೆರೆಯು ಕಂಡುಬರುತ್ತದೆ.

ಇಂಥ ಸುತ್ತಮುತ್ತಲಿನ ಪರಿಸರದ ನಿಜಾಂಶವೇನು ಎಂಬುದನ್ನು ಅವಲೋಕಿಸಿದಾಗ ದುರ್ಬಲ ವರ್ಗದವರ ಮೇಲಿಂದ ಗಾಳಿ ತಮಗೆ ಬರಬಾರದು ಎಂಬುದು ಅವರ ಆಂತರಿಕ ಬಲವಾಗಿರಬೇಕೆನಿಸುತ್ತದೆ. ಇನ್ನೊಂದರ್ಥದಲ್ಲಿ ಬಿಸಿಲು ಗಾಳಿ ಬೆಳಕಿಗೆ ತಕ್ಕಂತೆ ಅರಮನೆಯು ಎತ್ತರದ ಮೇಲಿರುವುದರಿಂದ ಅರಮನೆಯ ಎದುರಿನಲ್ಲಿ ಮನೆಯಿರಬಾರದೆಂಬೂದು ಕೂಡ ಒಂದಾಂಶವಾಗಿದೆ.

ಒಟ್ಟಾರೆಯಾಗಿ ದೇಸಾಯಿಗಳು ಸಮಾನತೆಯನ್ನು ಅಳವಡಿಸಿಕೊಂಡು ಆಡಳಿತ ನಡೆಸಿದ್ದರೂ ಕೂಡ ಅವರ ಕಟ್ಟಡಗಳು ಹಾಗೂ ಇರುವಿಕೆಯ ಹಂತದಲ್ಲಿ ಇಂಥ ಅನೌಪಚಾರಿಕ ವಿಧಿ ವಿಧಾನಗಳು ಅಲ್ಲಿರುವುದು ವೇದ್ಯವಾಗುತ್ತದೆ. ಇಂಥ ಅನೇಕ ಆಂತರಿಕ ಒಲವುಗಳನ್ನು ಜನರು ಅರಿಯದೆ ಬಾಳುತ್ತಿದ್ದಾರೆ. ಅಲ್ಲಿನ ಪರಿಸರ, ಪ್ರಜಾಜನರು ಇವರ ಮಾತನ್ನು ವೇದವಾಕ್ಯವೆಂದು ಪಾಲಿಸುತ್ತ ನಡೆದುಕೊಂಡು ಬರುವುದು ಅನನ್ಯವಾಗಿದೆ.

ಅಡಿಟಿಪ್ಪಣಿಗಳು

೧. ಚೆನ್ನಬಸಪ್ಪ ಪಾಟೀಲ, ೧೯೯೯, **ಕರ್ನಾಟಕದ ಕೋಟೆಗಳು ಸಂಪುಟ ೧**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೩

೨. ಅದೇ

೩. ಅದೇ

೪. **ಸಂದರ್ಶನ :** ಸಂಗಪ್ಪ ಕಂಬಾರ ವಯಸ್ಸು ೨೦, ಸ್ಥಳ : ಕೆರಕಲಮಟ್ಟಿ ತಾ.ಬಾದಾಮಿ

೫. **ಸಂದರ್ಶನ :** ಎಸ್ .ಆರ್ .ಕಾಳಗಿ ವಯಸ್ಸು ೮೫, ಸ್ಥಳ ಮುಧೋಳ

೬. ಅನಿಲಕಮತಿ(ಸಂ), ೧೯೯೭, **ಚಂದ್ರಕಾಂತ ಪೊಕಲೆ,** ಶ್ರೀ ಅಲ್ಲಮಪ್ರಭು ಜನಕಲ್ಯಾಣ ಸಿದ್ದಸಂಸ್ಥಾನಮಠ ಚಿಂಚಣಿ, ಪು.೫೨

೭. **ಸಂದರ್ಶನ :** ಶ್ರೀಮತಿ ಗಂಗಮ್ಮ ಸರನಾಡಗೌಡ ಹೊನ್ನಾಳ, ವಯಸ್ಸು ೭೫, ಸ್ಥಳ ಬಾಗಲಕೋಟೆ ಸರನಾಡಗೌಡರ ವಾಡೆ

೮. **ಸಂದರ್ಶನ :** ಚಂದ್ರಶೇಖರ ದೇಸಾಯಿ ಬೀಳಗಿ ವಯಸ್ಸು ೬೮, ಸ್ಥಳ ಮುಧೋಳ ಸರನಾಯಕರ ವಾಡೆ

೯. **ಸಂದರ್ಶನ :** ಬಸಪ್ಪ ಬಡಿಗೇರ ವಯಸ್ಸು ೮೨, ಸ್ಥಳ ಗುಳೇದಗುಡ್ಡ

೧೦. **ಸಂದರ್ಶನ :** ಗಂಗಮ್ಮ ಸರನಾಡಗೌಡ ಹೊನ್ನಾಳ ವಯಸ್ಸು ೭೫, ಸ್ಥಳ ಬಾಗಲಕೋಟೆ, ತಮ್ಮ ವಾಡೇ ಕಟ್ಟಿಸಲು ಆ ಕಾಲದಾಗ ನಮ್ಮ ಹಿರೇರು ದಾಂಡೇಲಿಯಿಂದ ಕಟ್ಟಿಗೆ ತಂದಾರ ಬರುವಾಗ ಕೆಂದುರಿನ ಮಾನಪ್ಪ ಹಾಗೂ ಅವನ ಕುಟುಂಬದ ಸದಸ್ಯರನ್ನು ಕರಕೊಂಡ ಬಂದು ಕೆತ್ತನೆ ಕೆಲಸ ಮಾಡ್ಯಾರ. ಈ ವಾಡೇ ನೋಡಿ ಬೆಂಗಳೂರಿನವರು ಸಿನಿಮಾ ತಕ್ಕೊಂಡ ಹೋಗ್ಯಾರ. ಅದು 'ನಾಗಮಂಡಲ' ಸಿನಿಮಾ ಐತಿ. ಮತ್ತೆ ಹಾಗೆ ಎರಡು ಮೂರ ಸಲ ಯಾರ್ಯಾರೋ ಬಂದು ಹೋಗ್ಯಾರ. ಮತ್ತ ಮುಳಗಿ ಹೋಗತೈತಿ ಸದ್ಯಕ್ಕೆ ಮುಳುಗಿ ಹೋಗಿದೆ. ವಾಡೇ ಬಿಚ್ಚಿ ಎಲ್ಲಕಟ್ಟಿಗೆ ತಂದಿದ್ದಾರೆ. ಕಲ್ಲು ಮಣ್ಣು ಮಾತ್ರ ಜಲವೃತವಾಗಿ ಹೋಗಿದೆ.

೧೧. ಕಾಮತ ಆರ್.ಡಿ., ೧೯೭೦, **ಟಿಪು ಸುಲ್ತಾನ ನಾಟಕ,** ಪು.೧೫

೧೨. **ಸಂದರ್ಶನ :** ಸಂಗಪ್ಪ ಕಂಬಾರ ವಯಸ್ಸು ೫೦, ಸ್ಥಳ ಮುಧೋಳ ಕಂಬಾರ ಕುಲುವೆ

೧೩. ಅದೇ

೧೪. ಅದೇ

೧೫. **ಸಂದರ್ಶನ :** ನಾಗಪ್ಪ ವಡೆಯರ ಐಹೊಳೆ ವಯಸ್ಸು ೭೦, ಸ್ಥಳ ಕೆರಕಲಮಟ್ಟಿ ಎಸ್. ಆಯ್ ಅಂಗಡಿ, ಕೆರಕಲಮಟ್ಟಿ

೧೬. **ಸಂದರ್ಶನ :** ಸಂಗಪ್ಪ ಕಂಬಾರ ವಯಸ್ಸು ೫೦, ಮೂಲಸ್ಥಳ ಬೀಳಗಿ ತಾಲೂಕಿನ ಬಾಡಗಿ ಹಾಲಿವಸ್ತಿ ಮುಧೋಳ, ಸ್ಥಳ ಕಂಬಾರ ಕುಲಮೆ ಮುಧೋಳ

೧೭. ಬಿಜಾಪುರ ಜಿಲ್ಲಾ ಗೇಝೆಟೀಯರ, ೧೯೯೯, ಪರಿಷ್ಕೃತ ಆವೃತ್ತಿ, ಬೆಂಗಳೂರು

೧೮. ಬರೆದಿಟ್ಟ ಕನ್ನಡ ಹಸ್ತಪ್ರತಿ ಫಸಲಿ ೯೩ ಇದು ಅಶುದ್ಧಲಿಪಿಯಲ್ಲಿದೆ. ಇದರಲ್ಲಿ ಸೊನ್ನ ದೇಸಗತಿ ಕುರಿತು ಹತ್ತಾರು ಮಾಹಿತಿಗಳು ಇದರಲ್ಲಿದೆ.

೧೯. ದೇವೇಂದ್ರ ಮಾಧವನವರು ನಿವೃತ್ತ ಶಿಕ್ಷಕರು ಹೊಳೆಆಲೂರ. ಕಾಲಗರ್ಭದಲ್ಲಿ ಮರೆಯಾದ ಜಾಲಿಹಾಳ ಸಂಸ್ಥಾನ ಒಂದು ಹುಡುಕಾಟ ಎಂಬ ಹಸ್ತಪ್ರತಿಯಲ್ಲಿ ಉಲ್ಲೇಖಿಸಿದ್ದಾರೆ.

ಅಧ್ಯಾಯ ೬

ಸ್ಥಳನಾಮ ಕುಲನಾಮ ಹಾಗೂ ವ್ಯಕ್ತಿನಾಮಗಳು

೬.೧. ಸ್ಥಳನಾಮಗಳು

೬.೨. ಕುಲನಾಮಗಳು

೬.೩. ವ್ಯಕ್ತಿನಾಮಗಳು

೬

ಸ್ಥಳನಾಮಗಳು-ಕುಲನಾಮಗಳು ಹಾಗೂ ವ್ಯಕ್ತಿನಾಮಗಳು


೬.೧. ಸ್ಥಳನಾಮಗಳು

ಶಾಸ್ತ್ರೀಯವಾಗಿ ನಡೆಯಬೇಕಾದ ನಾಮ ಅಧ್ಯಯನಗಳಲ್ಲಿ ಸ್ಥಳನಾಮ, ಕುಲನಾಮ ಹಾಗೂ ವ್ಯಕ್ತಿನಾಮ ಅಧ್ಯಯನಗಳು ಒಂದು. ಇವು ತ್ರಿವೇಣಿ ಸಂಗಮದಂತಿದ್ದು ಒಂದಕ್ಕೊಂದು ಪೂರಕವಾಗಿ ಸಾಕ್ಷೀಕರಿಸುತ್ತವೆ. ನಾಮಗಳು ಜನಜೀವನ, ಸಂಸ್ಕೃತಿ, ನಾಗರೀಕತೆ, ಪಳೆಯುಳಿಕೆಗಳು ಮುಂತಾದವುಗಳ ಬಗೆಗೆ ತಿಳವಳಿಕೆ ನಾಮಾಧ್ಯಯನದಿಂದ ಸಾಧ್ಯ. ಈ ಮುಖೇನ ಬಾಗಲಕೋಟಿ ಜಿಲ್ಲೆಯ ಸ್ಥಳನಾಮಗಳು ಅವರಲ್ಲೂ ದೇಸಗತಿ ಆಡಳಿತಗಳ ಸ್ಥಳನಾಮಗಳು, ದೇಸಾಯರ ಕುಲನಾಮಗಳು, ದೇಸಾಯಿಗಳ ಅಧ್ಯಯನದ ವಸ್ತು ಆಗಿವೆ. ಇವೆಲ್ಲವೂ ಒಂದೊಂದು ಅಂಶವನ್ನು ತಿಳಿವಳಿಕೆ ಮಾಡಿಕೊಡುವುದರಿಂದ ನಾಮಾಧ್ಯಯನ ಅವಶ್ಯವೆಂದು ತೋರುತ್ತದೆ.

ಪ್ರಸ್ತುತ ನಾಮಗಳು ಗತಕಾಲದಲ್ಲಿ ನಡೆದ ಘಟನೆಗಳನ್ನು ಭೌಗೋಳಿಕ ವಿವರಗಳನ್ನು ವಂಶಪರಂಪರೆಗಳ ಧಾರ್ಮಿಕ ರೀತಿನೀತಿಗಳನ್ನು ಆಧರಿಸಿವೆ. ಇವುಗಳನ್ನು ಆಧರಿಸಿಯೇ ನಾಮಗಳನ್ನು ಈ ಅಧ್ಯಾಯದಲ್ಲಿ ಅಭ್ಯಸಿಸಲು ಎತ್ತಿಕೊಳ್ಳಲಾಗಿದೆ.

ಬಾಗಲಕೋಟಿ ಜಿಲ್ಲೆಯೆಂಬುದು ವಿಜಾಪೂರ ಜಿಲ್ಲೆಯಿಂದ ವಿಭಜನೆಗೊಂಡದ್ದು ಆಗಿದೆ. ಮೂಲತಃ ಅಖಂಡ ವಿಜಾಪುರ ಜಿಲ್ಲೆ ಒಂದೆಡೆಗೆ "ತರ್ದವಾಡಿನಾಡು 'ಬೆಳವಲನಾಡು' ಎಂದು ವಿಭಾಗಿಸಲ್ಪಟ್ಟಿತ್ತು".[1] ಹಾಗೆ ಬಾಗಲಕೋಟಿ ಜಿಲ್ಲೆಯ ಪಶ್ಚಿಮ ಭಾಗವಾದ ತೇರದಾಳವು 'ಕೊಂಡನಾಡಿನ' ಉಪವಿಭಾಗವಾಗಿತ್ತೆಂದು"[2] ಶಾಸನಗಳಿಂದ ತಿಳಿದುಬರುತ್ತದೆ. ಇವುಗಳ ಮುಖೇನ ಗಮನಿಸಿದಾಗ ಈಗಿನ ಬಾಗಲಕೋಟಿ ಜಿಲ್ಲೆಯು ಒಂದು ನಾಡಿನ ಭಾಗವಾಗಿರದೆ ನಾಲ್ಕಾರು ನಾಡಿನ ಭಾಗವಾಗಿ ಆಡಳಿತಕ್ಕೊಳಪಟ್ಟ ಪ್ರದೇಶವಾಗಿದೆ. ಇಲ್ಲಿನ ಗ್ರಾಮಗಳು ತನ್ನದೆ ಆದ ವೈಶಿಷ್ಟ್ಯದಿಂದ ಕೂಡಿವೆ. ಮಧ್ಯಕಾಲಿನಾವಧಿಯಲ್ಲಿ ಆಡಳಿತ ನಡೆಸಿದ ದೇಸಗತಿಗಳವರು ಕೊಟ್ಟ ವತ್ತಿದಾನಗಳೂ ಆರ್ಥಿಕ ಅಭಿವೃದ್ಧಿ ಕಾರ್ಯಗಳು ಮುಂತಾದವುಗಳೂ ಕೂಡ ನಾಮವನ್ನು ಪ್ರತಿನಿಧಿಸುತ್ತವೆ. ಮತ್ತು ಆಳವಾದ ವಿಷಯವನ್ನು ತಿಳಿಸುತ್ತವೆ.

ಪ್ರಸ್ತುತ ಸಂದರ್ಭದಲ್ಲಿ ಈ ನಾಮಗಳ ಸಂಕ್ಷಿಪ್ತ ವಿವರಣೆಯನ್ನು ವಿವೇಚಿಸಲಾಗಿದೆ. ಹಾಗೆ ಕುಲನಾಮಗಳು ಬೇರೆ ಬೇರೆಯಾಗಿದ್ದು ಅಧಿಕಾರ ಹಿಡಿದ ಹುದ್ದೆಯನ್ನು ಲಕ್ಷಿಸಿ ಅಧ್ಯಯಿಸಲಾಗಿದೆ. ವ್ಯಕ್ತಿನಾಮಗಳಿಗೆ ಧಾರ್ಮಿಕ ಅಂಶವು ಮಾಹಿತಿ ಒದಗಿಸಿಕೊಡುತ್ತವೆ. ಇವೆಲ್ಲವನ್ನು ಸೈದ್ಧಾಂತಿಕವಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಅಧ್ಯಯನಿಸಲಾಗಿದೆ. ನಾಮ ಮೂಲಾಧ್ಯಯನಗಳ ದೃಷ್ಟಿಯಿಂದ ಅಭ್ಯಾಸದ ಸೌಲಭ್ಯಕ್ಕಾಗಿ ಈ ಕೆಳಗಿನಂತೆ ವರ್ಗೀಕರಿಸಿದೆ.



ಈ ಮೇಲಿನ ವರ್ಗೀಕರಣವನ್ನು ಪ್ರಧಾನವಾಗಿಟ್ಟುಕೊಂಡು, ಕುಲನಾಮ ಸ್ಥಳನಾಮಗಳನ್ನು ಆಧರಿಸಿ ಅವುಗಳಲ್ಲಿ ಕ್ರಮಾಗತವಾಗಿ ಭೂವಾಚಕ, ಜಲವಾಚಕ, ವ್ಯಕ್ತಿವಾಚಕ ನೆಲೆಗಳನ್ನು ಆಯ್ದುಕೊಳ್ಳಲಾಗಿದೆ. ಕುಲನಾಮವನ್ನು ಅಧಿಕಾರವಾಚಕ ನೆಲೆಯಲ್ಲಿ ಆಯ್ದುಕೊಂಡಿದೆ. ವ್ಯಕ್ತಿನಾಮದಲ್ಲಿ ಅಂಕಿತ ನಾಮಗಳ ನೆಲೆಯನ್ನು ಆಯ್ಕೆ ಮಾಡಿಕೊಂಡು ನಿರೂಪಿಸಲಾಗಿದೆ.

೬.೧.೧. ಸ್ಥಳನಾಮಗಳ ಸ್ವರೂಪ

ಭೂವಾಚಕ : ತಗ್ಗು, ಮೊರಡಿ, ದಿನ್ನೆ, ಮಟ್ಟಿ, ಕೊಪ್ಪ.

ಶಿಲಾಘಟಕ : ಕಲ್ಲು, ಅರೆ, ಗುಡ್ಡ.

ಜಲಸೂಚಕ : ಕೆರೆ, ಹೊಳಿ, ಸಮುದ್ರ, ಸಾಗರ, ಝರಿ, ಕೊಳ.

ಮಣ್ಣುಸೂಚಕ : ಕೆಂಪು (ಕೆಮ್ಮರಡಿ)

ಸಸ್ಯವಾಚಕ : ಲವಳ, ನೀರಲ, ಮುತ್ತಲ, ಬನ್ನಿ, ಜಾಲಿ, ಹೊನ್ನಿ, (ಮರ, ಗಿಡ, ಹೂ) ಮಲ್ಲಿಗೆ, ಸಂಪಿಗೆ, ಕಮಲ, ಬೇವಿನ, ಕಳ್ಳಿ.

ಸಾಂಸ್ಕೃತಿಕ ಸೂಚಕ : ರಾಮ, ಈಶ್ವರ (ಶಿವ)

ಪ್ರಾಣಿ, ಪಕ್ಷಿಸೂಚಕ : ಗೋವು, ಎತ್ತು, ಎಮ್ಮೆ, ಕರಡಿ, ನವಿಲು.

ಪದಾರ್ಥಸೂಚಕ : ಬೆಣ್ಣೆ, ಬೇವು.

ವ್ಯಕ್ತಿವಾಚಕ : ಕಜಗ, ಶಿಂಗ, ಹನುಮ, ಭೀಮ, ಸೋಮ, ಗಂಗ, ಗೋವಿಂದ, ಸಿದ್ದ, ಅಮೀನ, ಗಿಡ್ಡ.

ವೃತ್ತಿವಾಚಕ : ಕುಂಬಾರ, ಗಾಣಿಗ, ಅಕ್ಕಸಾಲಿಗ, ಮಡಿವಾಳ, ಕಂಬಾರ.

ಗ್ರಹ ನಕ್ಷತ್ರ : ಮಂಗಳ

ಹೀಗೆ ಈ ನಾಮ ಮೂಲಗಳ ಅಧ್ಯಯನದ ಸಾಂಸ್ಕೃತಿಕ ಪರಂಪರೆಯು ಬೆಳೆಯುತ್ತ ವಿಸ್ತೃತಗೊಂಡಿದೆ. ಇವುಗಳ ಪ್ರತ್ಯೇಕ ಅಧ್ಯಯನವು ತೀರ ಅವಶ್ಯವೆನಿಸುತ್ತದೆ. ಕೆಲವೇ ಗ್ರಾಮಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ.

೬.೧.೨. ದೇಸಗತಿ ಗ್ರಾಮಗಳು

ಪಟ್ಟದಕಲ್ಲ (ಅಕ್ಕರಗಲ್ಲ), ಕಂದಗಲ್ಲ, ಐಹೊಳೆ, ರಕ್ಕಸಗಿ, ಕರಡಿ, ಬದಾಮಿ, ಬಾಗಲಕೋಟಿ, ಬೀಳಗಿ, ಯಡಹಳ್ಳಿ, ಗಿರಿಸಾಗರ, ಜಾಲಿಹಾಳ, ಹೊನ್ನಿಹಾಳ, ಮುಧೋಳ, ಮುದ್ದಾಪೂರ, ಲೋಕಾಪೂರ, ಕೊಣ್ಣೂರ, ತೇರದಾಳ, ಜಮಖಂಡಿ, ಕೆರಕಲಮಟ್ಟಿ, ಮನಿಹಳ್ಳಿ, ಮನ್ನಿಕೇರಿ, ಕೋಟೆಕಲ್ಲ, ಕೆಲೂರ, ಕುಂದರಗಿ (ಶಿರಗುಪ್ಪಿ).

ಸ್ಥಳನಾಮದ ವಿವಿಧ ಹೆಸರುಗಳು ಅವುಗಳ ಭೂಪ್ರದೇಶದ ಸ್ವರೂಪಗಳ ಆಧಾರದ ಮೇಲೆ ಸೂಚಿತವಾಗಿರುತ್ತವೆ. ಅವುಗಳನ್ನು ಈ ಕೆಳಗಿನಂತೆ ಹೇಳಬಹುದು.

ಕಲ್ಲ : ಭೌಗೋಳಿಕ ಸ್ಥಿತಿಯನ್ನು ಅಲ್ಲಿನ ಶಿಲಾವಾಚಕ ನಾಮಧ್ಯೇಯವನ್ನು ಸೂಚಿಸುತ್ತದೆ.

ಕೋಟೆ : ಇದು ಆ ಪ್ರದೇಶದ ಚಿತ್ರಣ ಬಿಂಬಿಸುತ್ತದೆ. ಕೋಟೆ, ಗಡ ಇತ್ಯಾದಿ.

"ಗೀ : ಗಾ, ಗೆ, ಗಿ - ಕೆಯ್ ಇಕ್ಕೆ = ಕೆ, ಕಿ, ಗೆ, ಗಿ ಇಕ್ಕೆ ಕೆಯ್ ಸಂಸ್ಕೃತದ ಮೂಲರೂಪಗಳು ಕೆಯ್ -ಇಕ್ಕೆ ಒಂದು ಕಡೆ ಕೆ (ಕಿ) ಗೆ (ಗಿ) ಇನ್ನೊಂದೆ ಚೆ (ಚಿ) ಜೆ (ಜಿ) ಸೆ (ಸಿ) ಕೆಯ್ ಅಂದರೆ ಪ್ರದೇಶ ಹೀಗೆ ರೂಪ ವ್ಯತ್ಯಾಸ ಜರುಗುತ್ತದೆ."[9]

ಹಾಳ್ ಬಾಳ್ ಪಾಳ್ : ಇದು ಪ್ರದೇಶವನ್ನು ಸೂಚಿಸುತ್ತದೆ. ಹಾಳ್ >ಬಾಳ್ >ಪಾಳ್ ಪ್ರದೇಶವೆಂದಾಗುತ್ತದೆ.

ಊರು : "ಇದು ಅಚ್ಚ ದ್ರಾವಿಡ ಪದ. ಆದರೆ "ಊರು" ಕೊನೆಯಲ್ಲಿ ಬರುವ ಕೆಲವು ವಾರ್ಗಿಕವಾಗಿದೆ. ಪುರದಿಂದ ಕೊನೆಯಾಗುತ್ತಿದ್ದವೆಂಬುದಕ್ಕೆ ಶಾಸನಾಧಾರಗಳಿವೆ."[೫]

ಹಳ್ಳಿ : "ಹಳ್ಳಿಯ ರೂಪ ಭೇದವೇ ಪಳ್ಳಿ. ಇದುವಾರ್ಗೀಕವಾಗಿ ಕಂಡುಬರುತ್ತದೆ. ಕನ್ನಡ 'ಹಳ್ಳಿ' ಎಂಬುದು ತೆಲುಗು ತಮಿಳಿನಿಂದ ಪ್ರಭಾವ ಪಡೆದು ಹಳ್ಳಿ, ಪಳ್ಳಿ, ಅಲಿ, ಲಿ, ಆಗಿ ಉಳಿದಿದೆ"[೬]

ಮಟ್ಟಿ : ಆ ಪ್ರದೇಶದ ಗುಡ್ಡ, ಬೆಟ್ಟವನ್ನು ಸೂಚಿಸುತ್ತದೆ. ಅಲ್ಲಿನ ಪರಿಸರ ಹೇಳುವಲ್ಲಿ ಸಹಾಯಕವಾಗುತ್ತದೆ.

ಸ್ಥಳನಾಮಗಳು ಚಾರಿತ್ರಿಕವಾಗಿ ಉಜ್ವಲ ಪರಂಪರೆಯನ್ನು ಹೇಳುತ್ತವೆ. ಮೌರ್ಯ, ಶಾತವಾಹನ, ಕದಂಬ, ಗಂಗ, ಚಾಲುಕ್ಯ, ಹೊಯ್ಸಳ, ರಾಷ್ಟ್ರಕೂಟ, ವಿಜಯನಗರ, ಟಿಪ್ಪುಸುಲ್ತಾನ, ಕೆಳದಿ ಮನೆತನ, ಮೈಸೂರು ರಾಜರು ಆಳ್ವಿಕೆ ನಡೆಸಿದ ರಾಜ್ಯ ವೈಭವವನ್ನು ಮತ್ತು ಅನೇಕ ಮುಸ್ಲಿಂ ದೊರೆಗಳು ದಂಡೆತ್ತಿ ಬಂದು! ನಶಿಸಿ ಹೋದ ಕೋಟೆ ಕೊತ್ತಲಗಳ ವಿಷಯವನ್ನು ತಿಳಿಸುತ್ತವೆ. ಪೇಶ್ವೆಗಳು ಹಾಗೂ ಬ್ರಿಟೀಶರ ಆಡಳಿತದಡಿಯಲ್ಲಿಯೂ ಸ್ಥಳನಾಮಗಳು ಹೊಸ ಹೊಸ ರೂಪಾಂತರ ಪಡೆದಿವೆ. ಹಳೆ-ಹೊಸ, "ಚಿಕ್ಕ-ದೊಡ್ಡ ಖುರ್ದ್ (ಕೆಡಿ) ಬುದ್ರುಕ್ (ಬಿಕೆ)"[೭] ಮತ್ತು 'ಸಮತ್' ಇತ್ಯಾದಿ ವೈವಿಧ್ಯಮಯ ಸ್ವರೂಪವನ್ನು ಗಮನಿಸಿದಾಗ ಸ್ಥಳನಾಮಗಳ ಅಧ್ಯಯನವು ಅಗತ್ಯವಾದುದೆಂದು ತೋರುತ್ತದೆ. ಇಲ್ಲಿ ಸಮಗ್ರವಾಗಿ ವಿವೇಚಿಸುವುದು ಕಷ್ಟವಾದರೂ ೨೦ ರಿಂದ ೨೫ ಗ್ರಾಮಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಈ ಸ್ಥಳನಾಮಗಳು ಸಾಂಸ್ಕೃತಿಕ ಪರಂಪರೆಯನ್ನು ಹೊಂದಿವೆ. ಒಂದು ಸ್ಥಳದಲ್ಲಿ ನೆಲೆ ನಿಂತ ಮಾನವ ಪ್ರಕೃತಿಯನ್ನು ಪೂಜಿಸಿದ. ಕಲ್ಲು, ಮಣ್ಣು, ನೀರು ಇತ್ಯಾದಿಯಾಗಿ ಇಡೀ ಪ್ರಕೃತಿಯನ್ನು ಪೂಜಿಸಿದ ಹಾಗಾಗಿ ಕೆಲವು ಗ್ರಾಮಗಳು ಆ ಹಿನ್ನೆಲೆಯ ಹೆಸರು ಪಡೆದವೆಂದು ತಿಳಿದುಬರುತ್ತದೆ.

ಸ್ಥಳನಾಮಗಳು ಗ್ರಾಮ, ಕುಟುಂಬ, ವಂಶ, ವೃತ್ತಿ, ಜಾತಿ, ಬೆಡಗುಗಳನ್ನು ತಿಳಿಸುವುದರ ಜೊತೆಗೆ ಮನೆತನದ ಹೆಸುಗೆಯಾಗಿ ಕಂಡುಬರುತ್ತವೆ. ಉದಾ. ಹೊನ್ನಿಹಾಳ್. ಹೊನ್ನಿ ಎಂಬುದು ಗಾಣಿಗ ಮನೆತನದವರ ಬೆಡಗವನ್ನು ಸೂಚಿಸುತ್ತದೆ. ಹೀಗೆ ಕೆಲವು ಸಾಮಾಜಿಕ ಅಂಶಗಳು ಸ್ಥಳನಾಮ ತಿಳಿಸುವಲ್ಲಿ ಸಹಾಯಕವಾಗಿವೆ.

ಪ್ರತಿಯೊಂದು ಗ್ರಾಮನಾಮಕ್ಕೂ ಊರಿಗೂ ಕೇರಿಗೂ ಕಲ್ಪಿತವಾದ ಕಥೆಗಳು ಇಲ್ಲದೇಯಿಲ್ಲ. ಹಾಗಾಗಿ ಹಳ್ಳಿಯ ಹೆಸರುಗಳ ಮೂಲ, ರಚನೆ, ವಿಕಾಸ ಮತ್ತು ಅವುಗಳ ವಾಸ್ತವ ಅರ್ಥವಂತಿಕೆ ರಹಸ್ಯವೆಂದೇ ಹೇಳಬಹುದು. ಹಳ್ಳಿಗರು ಸ್ವಾಭಿಮಾನದಿಂದ ಊರಿನ ಕಥೆಯನ್ನು ಪ್ರಾಚೀನತೆಗೆ ಹೋಲಿಸಿ ರಾಮಾಯಣ ಮಹಾಭಾರತ ಕಥೆಗೆ ಗಂಟುಹಾಕುತ್ತಾರೆ. ಹಾಗಾಗಿ ಜಾನಪದ ದೃಷ್ಟಿಯಿಂದ ಸ್ಥಳನಾಮಗಳು ಅಧ್ಯಯನ ಸ್ವಾರಸ್ಯಕರವಾಗಿರುತ್ತದೆ. ಒಟ್ಟಾರೆ ಸ್ಥಳನಾಮಗಳು ಬಹು ಆಸಕ್ತಿಯಾಗಿ ಕಂಡುಬರುತ್ತವೆ.

ಇತಿಹಾಸ ಕಲ್ಪಿಸುತ್ತವೆ. ಪ್ರಾಚೀನತೆಯನ್ನು ಬಿಂಬಿಸುತ್ತದೆ. ಅಂಥವುಗಳಲ್ಲಿ ಈ ಗ್ರಾಮನಾಮಗಳು ಸೇರಿಕೊಂಡಿವೆ. ಅವುಗಳ ಪದ ನಿಷ್ಪತ್ತಿಯೊಡನೆ ಈ ಕೆಳಗಿನಂತೆ ವಿವೇಚಿಸಲಾಗಿದೆ.

೬.೧.೩. ಸ್ಥಳನಾಮುಗಳ ವಿವೇಚನೆ

ಪಟ್ಟದಕಲ್ಲ್ : ''ಪಟ್ಟದಕಲ್ಲ ಎಂಬುದು ಪ್ರಸ್ತುತ ಗ್ರಾಮನಾಮ. ಬೆಳ್ವೊಲ ೩೦೦ರೊಳಗೆ ಇತ್ತೆಂದು ತಿಳಿದುಬರುತ್ತದೆ''[೯] ಹಿಂದೆ 'ಕಿಸುವೊಳಲ್' ಎನಿಸಿತ್ತು. ಪಟ್ಟದಕಲ್ >ಪೆಟ್ರಿಗಲ್ ಎಂದು ಹಲವಾರು ವಿದ್ವಾಂಸರು ಗುರ್ತಿಸಿದ್ದಾರೆ. ಶಾಸನಾಧಾರಿತ ಗ್ರಾಮ ನಿಷ್ಪತ್ತಿ, ಕಿಸು+ವೊಟಲ್=ಕಿಸುವೊಳಲು ಎಂದಾಗುತ್ತದೆ. ಚಾಲುಕ್ಯರ ಅರಸರು ರಾಜಗೌರವಗಳನ್ನು (ಸಾಮ್ರಾಜ್ಯದ ಅಧಿಕಾರ) ವಹಿಸಿಕೊಳ್ಳಲು ಪಟ್ಟಾಭಿಷೇಕಕ್ಕಾಗಿ ಇಲ್ಲಿ ಬರುತ್ತಿದ್ದರೆಂದು ತಿಳಿದುಬರುತ್ತದೆ. ಪಟ್ಟಾಭಿಷೇಕದ ಪ್ರತೀಕವಾಗಿ 'ಪಟ್ಟದಕಲ್' ಪಟ್ಟದಕಲ್ಲು ಎಂದು ರೂಢಿಗತಗೊಂಡಿದೆ.

ಕಂದಗಲ್ಲ : ಕಂದಗಲ್ಲ ಎಂಬುದು ಪ್ರಚಲಿತ ಗ್ರಾಮನಾಮ. ಇದು ಹುನಗುಂದ ತಾಲೂಕಿನ ಗಡಿನಾಡು ಪ್ರದೇಶವಾಗಿದೆ. ಈ ಗ್ರಾಮನಾಮ ಭೂವಾಚಕವಾಗಿದೆ. ಈ ಗ್ರಾಮನಾಮ ಪದ ನಿಷ್ಪತ್ತಿ ಕಂದ + ಗಾಲೆ = ಕಂದಗಾಲೆ>ಕಂದಗಲ್ >ಕಂದಗಲ್ಲ ಎಂಬುದು ರೂಢಿಗತವಾಗಿದೆ. 'ಕಂದ' ಎಂದರೆ ಕಪ್ಪು ಎಂದಾಗುತ್ತದೆ. ಗಾಲೆ ಎಂದರೆ ಪ್ರದೇಶ. ಅಂದರೆ ಕಪ್ಪುಶಿಲೆಯ ಪ್ರದೇಶವೆಂದು ಹೇಳಬಹುದು. ''ಶಾಸನಗಳಲ್ಲಿಯೂ ಕಂದಗಾಲೆ ಎಂದೇ ಉಲ್ಲೇಖಿಸಿದ್ದು''[೧೦] ತಿಳಿದುಬರುತ್ತದೆ. ಇಲ್ಲಿನ ಸಾಂಸ್ಕೃತಿಕ ಅಭ್ಯಾಸಿಗಳು ಶಿಶುಶಿಲಾಪುರವೆಂದು ಕರೆದಿದ್ದಾರೆ.

ಐಹೊಳೆ : ಐಹೊಳೆ ಎಂಬುದು ಪ್ರಚಲಿತ ಗ್ರಾಮನಾಮ. ಈ ಗ್ರಾಮನಾಮವು ದ್ವಂದ್ವಮಯವಾಗಿದೆ. ವ್ಯಕ್ತಿವಾಚಕ, ಹಾಗೂ ಜಲವಾಚಕ ಸೂಚಿಯಾಗಿದೆ. ಹಾಗೆ ಜನಪದೀಯವಾಗಿಯೂ ಹೇಳುತ್ತಾರೆ. ಈ ಗ್ರಾಮನಾಮದ ಪದದ ನಿಷ್ಪತ್ತಿಯು ಈ ರೀತಿ ಇದೆ. ''ಅಯ್ಯನಪೊಟಲ್ >ಅಯ್ಯನವೊಳಲ್ >ಐಹೊಳೆ ಎಂದಾಗುತ್ತದೆ. ಳ=ವೊಳಲ್ ಎಂದಾಗುತ್ತದೆ ಎಂದು ಹಲವಾರು ವಿದ್ವಾಂಸರು ಗುರ್ತಿಸಿದ್ದಾರೆ. ಈ ಭಾಗದಲ್ಲಿ ಐನೋರ್ವರು ಇದ್ದ ಬಗ್ಗೆಯೂ ಉಲ್ಲೇಖಗಳಿವೆ.''[೧೧] ಮಲಪ್ರಭಾ ನದಿಯೂ ಕೂಡ ಹರಿದಿದೆ. ಇವೆಲ್ಲವುಗಳ ಸಮ್ಮಿಳಿತವೇ ಐಹೊಳೆ ಎಂದು ಜನ ನುಡಿಯಲ್ಲಿದೆ. ಐನೋರ್ವರ ಮೊದಲುಗೊಂಡು 'ಹೊಳೆ' ಸೇರಿಸಿ ಈ ಗ್ರಾಮನಾಮ ಐಹೊಳೆ ಎಂದು ಹೆಸರು ಪಡೆದುಕೊಂಡಿದೆ.

ರಕ್ಕಸಗಿ : ಇದು ಪ್ರಚಲಿತ ಗ್ರಾಮನಾಮ. ಮೂಲ ಗ್ರಾಮದ ಹೆಸರು ''ರಾಜದುರ್ಗವೆಂದು ಕರೆಯುತ್ತಿದ್ದು ಸ್ಥಳೀಯರಿಂದ ತಿಳಿದುಬರುತ್ತದೆ.''[೧೨] ಇದು ಈಗಿನ ಅಮೀನಗಡ ಗ್ರಾಮದ ಬೆಟ್ಟದ ಮೇಲೆ ಇದೆ. ಈ ಗ್ರಾಮದ ಅವಶೇಷಗಳು ಇನ್ನೂ ಅಲ್ಲಿ ಕಾಣಸಿಗುತ್ತವೆ. ಕೋಟೆ, ಗಡ, ಅಲ್ಲಲ್ಲಿ ಬಿದ್ದ ಮನೆಗಳು ಇವೆ. ಸದ್ಯ ಬೇಚರಾಕ ಆಗಿದೆ. ಈ ಗ್ರಾಮನಾಮ ನಿಷ್ಪತ್ತಿ ರಕ್ಕಿ+ಕೈಯ್ = ರಕ್ಕಿಗಿ>ರಕ್ಕಸಗಿ

ಎಂದಾಗುತ್ತದೆ. ಗುಡ್ಡದ ಮೇಲಿಂದ ಇಳಿದು ಬಂದು ದೇಸಾಯಿಗಳು ಜನರನ್ನು ರಕ್ಷಿಸಿದರು ಎಂದು ಆ ಗ್ರಾಮದ ಜನರು ಹೇಳುತ್ತಾರೆ. ಇನ್ನು ಮುಂದುವರೆದಂತೆ ಹಳ್ಳದ ದಂಡೆಯ ಮೇಲೆ 'ರಕ್ಷಿ' ಎನ್ನುವ ಮನೆತನದವರು ವಾಸಿಸಿರುವುದರಿಂದ 'ರಕ್ಷಗಿ' [೧೩]ರಕ್ಷಿಗಳ ಕೆಯ್ ಎಂಬುದಾಗಿತ್ತೆಂದು ರಕ್ಷಿ ಮನೆತನದವರಿಂದ ತಿಳಿದುಬರುತ್ತದೆ. ಈ ಮನೆತನದವರು 'ಮುದಕವಿ' ಗ್ರಾಮದಲ್ಲಿ ಇರುತ್ತಾರೆ. ಅವರು ತಮ್ಮ ಮೂಲಸ್ಥಳ ಕುರಿತು ವಿವರಣೆ ನೀಡುತ್ತಾರೆ.

ಕರಡಿ : ಕರಡಿ ಎಂಬುದು ಪ್ರಸ್ತುತ ಗ್ರಾಮನಾಮ. ಶಾಸನದಲ್ಲಿ ಇದನ್ನು "ಕರಿಪಿಡಿ-೩೦ ಕರಡಿ ಕಲ್ಲು"[೧೪] ಎಂದು ಉಲ್ಲೇಖಿಸಿದ್ದು ಇದೆ. ಹಾಗೆ ಕರಡಿ ಗ್ರಾಮವು ೩೦ ಗ್ರಾಮಗಳ ಆಡಳಿತ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಈ ಗ್ರಾಮನಾಮ ನಿಷ್ಪತ್ತಿ ನೋಡಲಾಗಿ ಕರಿಯ+ವಾಡಿ =ಕರಿವಾಡಿ>ಕರಡಿ ಎಂಬುದಾಗಿದೆ. ಕರಿಯ ಅಂದರೆ ಆನೆಗಳ ಹಿಂಡು, ವಾಡಿ ಎಂದರೆ ಪ್ರದೇಶ ಎಂಬುದಾಗಿದೆ. ರಕ್ಕಸಗಿ ತಂಗಡಗಿ ಯುದ್ಧದ ಸಮಯದಲ್ಲಿ ಇಲ್ಲಿ ವಿಜಯನಗರದ ಅರಸರು ಆನೆಗಳನ್ನು ಕಟ್ಟಿದ್ದರೆಂದು ಜನರು ಹೇಳುತ್ತಾರೆ. ಹಾಗಾಗಿ ಕರಿಯವಾಡಿ>ಕರಿವಿಡಿ>ಕರಡಿ ಆಗಿರುತ್ತದೆ. ಇಲ್ಲಿಯ ಬಸವಣ್ಣದೇವರಿಗೆ ಕರಡಿಯ ಮುಖ ಇರುವುದರಿಂದ ಈ ಗ್ರಾಮಕ್ಕೆ ಕರಡಿ ಎಂದು ಕರೆಯುತ್ತಿದ್ದ ಬಗ್ಗೆ ಹೇಳುತ್ತಾರೆ. ಮುಂದುವರೆದಂತೆ ಅರಸರು ಬಂಗಾರದ ಒಡವೆಗಳನ್ನು ಕರಾಂಡದಲ್ಲಿ ತುಂಬಿ ನೆಲದಲ್ಲಿ ಹುಗಿದಿದ್ದರೆಂದು, ಇಲ್ಲಿ ಸಿಕ್ಕ ಕರಾಂಡಗಳ ಮುಖೇನ ಈ ಗ್ರಾಮಕ್ಕೆ ಕರಾಂಡಪುರವೆಂದು ಕರೆಯುತ್ತಾರೆ. ಹೀಗೆ ಅನೇಕ ಐತಿಹ್ಯಗಳು ಈ ಗ್ರಾಮ ಕುರಿತು ಹುಟ್ಟಿಕೊಂಡಿವೆ.

ಬಾಗಲಕೋಟೆ : ಶಾಸನದಲ್ಲಿ ಈ ಗ್ರಾಮನಾಮವನ್ನು "ಬಾಗೆನಾಡೆಪ್ಪತ್ತರ ಎಂದು ಉಲ್ಲೇಖಿವಿದೆ"[೧೫] ಬಾಗಡೆ=೭೦ ಇದು ಎಪ್ಪತ್ತು ಹಳ್ಳಿಗಳ ಒಂದು ಆಡಳಿತ ವಿಭಾಗವಾಗಿದ್ದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಬಾಗೆನಾಡು, ಬಾಗಡಿಗೆ ಎಂದು ಹೆಸರುಗಳಿವೆ. ಈ ಗ್ರಾಮ ಕುರಿತು ಕೆಲವು ಐತಿಹ್ಯಗಳು ಹುಟ್ಟಿಕೊಂಡಿವೆ. ಅದೆಂದರೆ ಈ ಗ್ರಾಮದಲ್ಲಿ ಒಬ್ಬ ಯೋಧನು ಹುಲಿಯನ್ನು ಕೊಂದನೆಂದು ಹೇಳುತ್ತಾರೆ (ಬಾಗ>ಹುಲಿ) ಹುಲಿಯನ್ನು ಕೊಂದ ಊರು ಎಂದಾಗುತ್ತದೆ. "ವಿಜಾಪುರದ ಬಾದಶಹನು ತನ್ನ ಮಗಳ ಬಳೆಯ (ಬಾಂಗಡಿ) ವೆಚ್ಚಕ್ಕಾಗಿ ಈ ಗ್ರಾಮವನ್ನು ಹಚ್ಚಿಕೊಟ್ಟನೆಂದು ನಂತರದಲ್ಲಿ ಇದಕ್ಕೆ 'ಬಾಂಗಡಿಕೋಟ' ಎಂಬ ಹೆಸರು ಬಂತೆಂದು ಮುಂಬಯಿ ಗ್ಯಾಝಿಟೀಯರದಲ್ಲಿ ಉಲ್ಲೇಖಿಸಿದ್ದಾರೆ."[೧೬]

ಬೀಳಗಿ : ಬೀಳಗಿ ಎಂಬುದು ಪ್ರಸ್ತುತ ಗ್ರಾಮನಾಮ. ಕ್ರಿ.ಶ.೧೯೫೬ರವರೆಗೆ 'ಪೇಠಾ' ಆಗಿತ್ತು. ಈ ಗ್ರಾಮ ನಿಷ್ಪತ್ತಿ ನೋಡಲಾಗಿ ಬೀಳ್ +ಕೆಯ್ =ಬೀಳಗಿ ಎಂದಾಗುತ್ತದೆ. 'ಬೀಳ್' ಎಂದರೆ 'ಗುಡ್ಡ' ಎಂದಾಗುತ್ತದೆ. ಗುಡ್ಡದ ಸೆರಗಿನಲ್ಲಿರುವ ಪ್ರದೇಶವೆಂದು ತೋರುತ್ತದೆ. ಇದು ಸೋಪ್ಪ ದೇಸಗತಿಯ ಬೀಳಗಿ ಪರಗಣವಾಗಿದೆ. ಗುಡ್ಡದ ಸೆರಗಿನಲ್ಲಿಯೇ ವಾಡೇ ಇದ್ದು ಅದನ್ನು ಈಗ ಕಲ್ಮಠಕ್ಕೆ ದಾನ ಮಾಡಿದ್ದಾರೆ.

ಯಡಹಳ್ಳಿ : ಯಡಹಳ್ಳಿ ಎಂಬುದು ಪ್ರಚಲಿತ ಗ್ರಾಮನಾಮ. ಇದು ಕೃಷ್ಣಾನದಿಯ ದಂಡೆಯ ಮೇಲಿದೆ. ಈ ನದಿಯು ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತದೆ. ಇದು ನದಿಯ ಎಡಗಡೆಗೆ ಇರುವುದರಿಂದ ಈ ಹೆಸರು ಬಂದಿದೆ ಎನ್ನಲಾಗಿದೆ. ಈ ಭಾಗದಲ್ಲಿ ಅಂದರೆ ಬಾಗಲಕೋಟೆ ಜಿಲ್ಲೆಯಲ್ಲಿ ಐದರಿಂದ ಆರು ಇದೇ ಹೆಸರಿನ ಗ್ರಾಮಗಳು ಸಿಗುತ್ತವೆ. ಇವೆಲ್ಲವೂ ನದಿಯ ಎಡಗಡೆ ಇರುತ್ತವೆ. ಜನರು ಇವನ್ನು ತಮ್ಮ ಸೌಲಭ್ಯಾಕಾಂಕ್ಷೆಗೋಸ್ಕರ ಮಸನಯಡ್ಡೊಳ್ಳಿ, ಗಲಗಲಿಯಡ್ಡೊಳ್ಳಿ ಚಿಕ್ಕೆಯಡ್ಡೊಳ್ಳಿ ದೇಸಾಯರ ಯಡ್ಡೊಳ್ಳಿ ಎಂದು ಕರೆಯುತ್ತಾರೆ. ಯಡಗಡೆ > ಯಡ + ಹಳ್ಳಿ = ಯಡಹಳ್ಳಿ ಎಂದಾಗಿದೆ.

ಗಿರಿಸಾಗರ : ಇದು ಪ್ರಚಲಿತ ಗ್ರಾಮನಾಮ. ಇದು ಬೀಳಗಿ ತಾಲೂಕಿನ ಉತ್ತರಕ್ಕೆ ೨೦ ಕಿ.ಮೀ. ದೂರದಲ್ಲಿದೆ. ಈ ಗ್ರಾಮನಾಮವು ದ್ವಂದ್ವಮಯವಾಗಿದೆ. ಗಿರಿ ಮತ್ತು ಸಾಗರ ಎರಡು ಪದಗಳು ಪ್ರಮುಖವಾದವುಗಳೆ. 'ಗಿರಿ' ಎಂಬುದು ಭೂವಾಚಕವಾಗಿದೆ. ಸಾಗರವೆಂಬುದು ಜಲವನ್ನು ಸೂಚಿಸುತ್ತದೆ. ಗಿರಿಯ ಸುತ್ತೆಲ್ಲ ಜಲವಿರುವುದು ಸ್ವಾಭಾವಿಕ. ಬೆಟ್ಟದಿಂದ ಅಥವಾ ಗುಡ್ಡದಿಂದ ಹರಿದು ಬಂದ ನೀರು ಸಾಗರೋಪಾಧಿಯಲ್ಲಿ ನಿಂತಿದ್ದರಿಂದ ಸಾಗರ ಆಗದಿದ್ದರೂ ಸಾಗರವೆಂದು ಕರೆದುಕೊಂಡಿದ್ದಾರೆ. ಗ್ರಾಮವು ಗುಡ್ಡದ ಮೇಲೆ ಇದ್ದುದು ಸ್ಪಷ್ಟವಾಗುತ್ತದೆ. ಅಲ್ಲಿನ ಪರಿಸರದ ಹಿನ್ನೆಲೆಯಲ್ಲಿ ಈ ಗ್ರಾಮವನ್ನು ಗಿರಿಸಾಗರವೆಂದು ಕರೆದುದು. ಜನರಿಂದ ತಿಳಿದುಬರುತ್ತದೆ.

ಜಾಲಿಹಾಳ : ಜಾಲಿಹಾಳ ಎಂಬುದು ಪ್ರಚಲಿತ ಗ್ರಾಮನಾಮ. ಇದು ಬಾದಾಮಿ ತಾಲೂಕಿನ ದಕ್ಷಿಣಕ್ಕೆ ಗುಡ್ಡದ ಸೆರಗಿನಲ್ಲಿ ಹಳ್ಳದ ದಂಡೆಯ ಮೇಲೆ ನೆಲೆಸಿದ್ದಾಗಿದೆ. ಈ ಗ್ರಾಮದ ಮೂಲ ಹೆಸರು 'ಬೇಲುಗಿರಿ'[೨೦] ಎಂಬುದಾಗಿದೆ. ಬೆಟ್ಟದ ಮೇಲಿಂದ ಗುಳೇ ಬಂದು ಕೆಳಗಡೆ ನೆಲೆಸಿದ್ದು ಜನರಿಂದ ತಿಳಿದುಬರುತ್ತದೆ. ಈ ಗ್ರಾಮ ನಾಮನಿಷ್ಪತ್ತಿ ನೋಡಲಾಗಿ, ಜಾಲಿ+ಪಾಳ್ = ಜಾಲಿಹಾಳ್. ಪಾಳ್ ಬದಲಾವಣೆ ಹೊಂದಿ ಹಾಳ್ ಆಗಿದೆ. 'ಪ'ಕ್ಕೆ 'ಹ'ಕಾರ ಸೇರಿಕೊಂಡಿದೆ. ಬೇಲುಗಿರಿಯಲ್ಲಿ ಕೋಟೆ, ಗಡ, ಬಿದ್ದ ಮನೆಗಳು ಕಾಣಸಿಗುತ್ತವೆ. ಸದ್ಯ ಗುಡ್ಡದ ಕೆಳಗಡೆಯೇ ಈ ಗ್ರಾಮ ಇರುತ್ತದೆ.

ಹೊನ್ನಿಹಾಳ : ಇದು ಮೊದಲು ಪೊನ್ + ಪಾಳ್ >ಹೊನ್ನಿಪಾಳ್ >ಹೊನ್ನಿಹಾಳ್ >ಹೊನ್ನಾಳ್ >ಹೊನ್ನಿಹಾಳ ಎಂದು ಸ್ಥಿತ್ಯಂತರಗೊಂಡಿದೆ. ಈ ಗ್ರಾಮದ ಮೂಲ ಪುರುಷರು ಗಾಣಿಗ ಮತಸ್ಥರಾಗಿದ್ದಾರೆ. ಇವರನ್ನು ಹೊನ್ನಿನವರೆಂದೇ ಕರೆಯುತ್ತಿದ್ದರು. 'ಹೊನ್ನಿ' ಎಂಬುದು ಇವರ ಬೆಡಗದ ಹೆಸರು. ಹೊನ್ನಿನವರ ಪಾಳ್ (ಪ್ರದೇಶ) ಎಂದು ಕರೆದುದಾಗಿದೆ. ಈ ಗ್ರಾಮದ ಮೂಲಪುರುಷರು ಹೊನ್ನಿನವರೇ ಆಗಿರುವುದು ಅಲ್ಲಿನ ಹಿರಿಯ ತಲೆಮಾರಿನವರಿಂದ ತಿಳಿದುಬರುತ್ತದೆ. ಸದ್ಯ ಈ ಗ್ರಾಮವು ಆಲಮಟ್ಟಿ ಹಿನ್ನೀರಿನಿಂದ ಮುಳುಗಡೆ ಆಗಿ ಸ್ಥಳಾಂತರಗೊಂಡಿದೆ.

ಒಂದು ಐತಿಹ್ಯದ ಪ್ರಕಾರ ನದಿಯ ದಂಡೆಯ ಮೇಲೆ ಇರುವ ಈ "ಗ್ರಾಮವು ಸಮೃದ್ಧವಾಗಿರುವ ಭೂಮಿಯನ್ನು ಹೊಂದಿತ್ತು. ನದಿಯ ದಂಡೆಯ ಮೇಲೆ ಹೊನ್ನಿ ಸಸ್ಯ ಸಮೃದ್ಧವಾಗಿದ್ದು, ದನಕರುಗಳಿಗೆ ದೊರೆಯುತ್ತಿರುವುದರಿಂದ ಹೊನ್ನಿಹಾಳ ಎಂದು ಕರೆದುದನ್ನು ಜನರು ಹೇಳುತ್ತಾರೆ."[೧೭]

ಈ ಮೇಲಿನ ಎರಡೂ ಸಂಗತಿಗಳನ್ನು ತಳ್ಳಿಹಾಕುವಂತಿಲ್ಲ. ಪ್ರಸ್ತುತ ಹೊನ್ನಿಹಾಳ ಗ್ರಾಮನಾಮವನ್ನು ಜನನುಡಿಯಲ್ಲಿ ಹೊನ್ನ್ಯಾಳ ಎಂದು ಕರೆದುದಾಗಿದೆ.

ಮುಧೋಳ : ಮಧೋಳ ಎಂಬುದು ಪ್ರಚಲಿತ ಗ್ರಾಮನಾಮ. ಇದರ ನಿಜ ನಿಷ್ಪತ್ತಿಯನ್ನು ನೋಡಲಾಗಿ "ಮುದ್ದನಪೊಟಿಲ್ >ಮುದುವೊಳಲ್ >ಮುಧೋಳ ಎಂದು ಈ ಗ್ರಾಮನಾಮದ ನಿಜರೂಪವನ್ನು ನಿರ್ಣಯಿಸಬಹುದಾಗಿದೆ. ಈ ಗ್ರಾಮದ ನಿಷ್ಪತ್ತಿ ನೋಡಿದಾಗ ಒಬ್ಬ ವ್ಯಕ್ತಿಯ ಹೆಸರಿನಿಂದ ಕರೆದುದಾಗಿದ್ದು ಸ್ಪಷ್ಟವಾಗುತ್ತದೆ."[೧೮] ಮುದ್ದನಪೊಳಲ್ ಬದಲಾಗಿ ಮುಧೋಳ, ಮತ್ತೆ ಪೇಶ್ವೆಗಳ ಕಾಲಕ್ಕೆ 'ದ'ವನ್ನು 'ಧ'ವೆಂದು ಘಟ್ಟಿಯಾಗಿ ಹೆಸರಿಸಿದ್ದು ವಿಶೇಷವೆನಿಸುತ್ತದೆ. ಇದೆಲ್ಲವೂ ಜನರ ಸೌಲಭ್ಯಾಕಾಂಕ್ಷೆಯಿಂದ ಬದಲಾವಣೆ ಹೊಂದಿದ್ದೆಂದು ಸಿದ್ಧವಾಗುತ್ತದೆ.

ಮುದ್ದಾಪೂರ : ಮುದ್ದಾಪೂರ ಎಂಬುದು ಪ್ರಸ್ತುತ ಗ್ರಾಮನಾಮ. ಇದರ ನಿಜ ನಿಷ್ಪತ್ತಿ ನೋಡಲಾಗಿ ಪೂರ್ವಪದ 'ಮುದ್ದ' ಎಂಬುದಾಗಿದೆ. ಇದು ವ್ಯಕ್ತಿವಾಚಕವಾಗಿದೆ. ಮುದ್ದನ+ಪುರ = ಮುದ್ದಾಪುರ ಎಂದು ಗುರ್ತಿಸಿಕೊಂಡಿದೆ. ಈ ತೆರನಾದ ಗ್ರಾಮಗಳು ಮತ್ತೆಲ್ಲಿಯೂ ಕಂಡುಬರುವುದಿಲ್ಲ. ಮುಧೋಳಕ್ಕೂ ಮೂಲ ಮುದ್ದಾಪುರ ಗ್ರಾಮಕ್ಕೂ ನಡುವೆ ನದಿ ಅಡ್ಡವಾಗಿದೆ. ನದಿ ದಾಟಿದರೆ ಮೆಟಗುಡ್ಡ, ನಿಂಗಾಪುರ ನಡುವೆ ಇರುವ ಗ್ರಾಮವೇ ಮುದ್ದನಪುರವಾಗಿದೆ. ಅಲ್ಲಿರುವ ಹಣಮಪ್ಪನ ಗುಡಿಯು ಮುದ್ದಪ್ಪನ ಗುಡಿ ಎಂದೇ ಸಾಕ್ಷೀಕರಿಸುತ್ತದೆ.

ಲೋಕಾಪುರ : ಲೋಕಾಪುರ ಎಂಬುದು ಪ್ರಸ್ತುತ ಗ್ರಾಮನಾಮ. "ಲೋಕಾಪುರಂತ ಊರಿಲ್ಲ; ಲೋಕೇಶ್ವರಿ ಅಂತ ದೇವರಿಲ್ಲ ಎನ್ನುತ್ತಾರೆ"[೨೦] ಗ್ರಾಮದವರು. ಇದರ ನಿಷ್ಪತ್ರಿಯು ಲೋಕನ + ಪುರ=ಲೋಕಾಪುರ ಎಂದಾಗುತ್ತದೆ. "ತೈಲಕಬ್ಬೆಯ ನಾಲ್ಕು ಜನ ಮಕ್ಕಳಲ್ಲಿ ಒಬ್ಬನಾದ ಲೋಕಟೆಯಿಂದ ಲೋಕಮಹೇಶ್ವರಿ, ಲೋಕಸಮುದ್ರ ಮತ್ತು ಲೋಕಾಪುರ ನಿರ್ಮಾಣವಾಗಿತ್ತೆಂದು ಶಾಸನಾಧಾರಿತವಾಗಿ ವಿದ್ವಾಂಸರು ಗುರ್ತಿಸಿದ್ದಾರೆ."[೨೧]

ಈ ವಿವೇಚನೆಯಿಂದ ಒಬ್ಬವ್ಯಕ್ತಿಯ ದಾನದತ್ತಿ ನೀಡಿದ್ದರಿಂದ ಅವನ ಹೆಸರಿನಲ್ಲಿರುವ ಗ್ರಾಮವೆಂದೆ ತಿಳಿದುಬರುತ್ತದೆ.

ಕೊಣ್ಣೂರ : ಇದು ಜಮಖಂಡಿ ತಾಲೂಕಿನ ಚಿಕ್ಕ ಗ್ರಾಮ. ಇದರ ನಿಜ ನಿಷ್ಪತ್ತಿ ಕೊಣ್ +ಊರು=ಕೊಣ್ಣೂರ ಎಂದಾಗುತ್ತದೆ. ಕೊಣ್ ಎಂದರೆ ಕೆರೆ, ಹೊಂಡ ಎಂದು ನಿಘಂಟುಗಳು ಅರ್ಥೈಸಿವೆ.

ಇದು ಕೆರೆಯ ಊರು ಎಂದು ಹೇಳಬಹುದು. ಬೆಟ್ಟದ ಮೇಲೆ ಕೆರೆ ಇದೆ. ಬೆಟ್ಟದ ಮೇಲ್ಗಡೆಯಿಂದ ಕೆಳಗಡೆ ಬಂದು ನೆಲೆದುನಿಂತಿದೆ. ತಮ್ಮ ಸೌಲಭ್ಯಾಕಾಂಕ್ಷೆಗೋಸ್ಕರ ಆಡುಮಾತಿನಲ್ಲಿ ಕ್ಯಾನೂರ ಎಂದು ರೂಢಿಯಲ್ಲಿದೆ. ಮತ್ತೆ ಕೆಲವರು ಕೊಣೆಗನೂರ ಕೊಣ್ಣೂರ ಎಂದು ಕರೆಯುವುದು ಬಳಕೆಯಲ್ಲಿದೆ.

ತೇರದಾಳ : ತೇರದಾಳ ಎಂಬುದು ಪ್ರಸ್ತುತ ಗ್ರಾಮನಾಮ. ಈ ಗ್ರಾಮನಾಮವು ನಿಷ್ಪತ್ತಿ ತೇರಾ>ತೇರ + ದಾಳ=ತೇರದಾಳ ಎಂಬುದಾಗಿದೆ. " 'ತೇರಾ' ಎಂದರೆ ೧೩ ಎಂದರ್ಥ. "ತೇರಿದಾಳ-೧೨"[೨೨] ಎಂಬುದು ಆಡಳಿತ ವಿಭಾಗವಾಗಿತ್ತೆಂದು ಶಾಸನದಿಂದ ತಿಳಿದುಬರುತ್ತದೆ. ಇದು ಸಂಖ್ಯಾವಾಚಕ ಗ್ರಾಮವಾಗಿದ್ದೆಂದು ತಿಳಿದುಬರುತ್ತದೆ.' ಹನ್ನೆರಡು ಗ್ರಾಮಗಳಿಗೆ ಆಡಳಿತಭಾಗವಾಗಿದ್ದಲ್ಲದೆ ತನ್ನದೊಂದು ಸೇರಿಸಿಕೊಂಡು ೧೩ ಎಂಬುದಾಗಿರುತ್ತದೆ. "ಚಾಲುಕ್ಯ ಪೆರ್ಮಾಡಿ ಎಂಬ ಅರಸನು(ಕ್ರಿ.ಶ. ೧೦೭೫-೧೧೨೬)ಗುಜರಾತ್ ಚೋಳದೇಶಗಳ ಅರಸನನ್ನು ಗೆದ್ದು ಬಂದ ಬಳಿಕ ತೇರದಾಳ ಗ್ರಾಮವನ್ನು ಕಟ್ಟಿದನು"[೨೩]ಎಂದು ಶಾಸನದಲ್ಲಿ ಉಲ್ಲೇಖವಿದೆ..

ಜಮಖಂಡಿ : ಜಂಬುಖಂಡಿ>ಜಂಬುಖಿಂಡಿ>ಜಮಖಂಡಿ ಎಂಬುದು ಪ್ರಸ್ತುತ ಗ್ರಾಮನಾಮ. ಇದಕ್ಕೆ ಸಾವಿರಾರು ವರ್ಷಗಳಿಗಿಂತಲೂ ಹಳೆಯದಾದ ಇತಿಹಾಸವಿದೆ. ಮಹಾಕವಿ ರನ್ನನು ಇದೊಂದು ಅಗ್ರಹಾರವೆಂದು ತನ್ನ ಗ್ರಂಥದಲ್ಲಿ ಹೇಳಿಕೊಂಡಿದ್ದಾನೆ. "ಜಂಬುಖಂಡಿ ಎಪ್ಪತ್ರ್ಕಂ"[೨೪] ಎಂದು ಕರೆದಿದ್ದಾನೆ.

"ಬೆಳಗಲಿಯಯ್ಯೂರ-೩೦೦ ರೊಳಗೆ ಅಗ್ಗಳವೆನಿಸಿದ ಜಂಬುಖಂಡಿ ಎಪ್ಪತ್ರ್ಕಂ ಎಂದಿದೆ (೯ನೇ ಶತಮಾನ)"[೨೫] ಜಂಬುಕಗಳ ವಾಸ - ಅಂದರೆ ನರಿಗಳ ವಾಸ. 'ಜಂಬು' ಆನೆಗಳ ವಾಸ ಅಥವಾ ನೆರಲ ಗಿಡಗಳಿಂದ ಕೂಡಿ ಆವೃತವಾದ ಪ್ರದೇಶ. ಕಡಿದಾದ ಪ್ರದೇಶವೆಂದು ಹೇಳಬಹುದು. ಈ ಎಲ್ಲ ವಿವೇಚನೆಗಳ ಹಿನ್ನೆಲೆಯಲ್ಲಿ ಮಹತ್ವಪೂರ್ಣ ಅಂಶವು ಸಿಗುತ್ತದೆ. ಈ ಗ್ರಾಮದಲ್ಲಿ ಜಂಬುಕೇಶ್ವರ ದೇವಸ್ಥಾನವಿದ್ದು ಇದು ಸಹ ಗ್ರಾಮನಾಮಕ್ಕೆ ಆಧಾರವಾಗಿ ನಿಲ್ಲುತ್ತದೆ. ಕಾಲ ಬದಲಾದಂತೆ ಜಂಬುಖಂಡಿ ಜನರ ಬಳಕೆಯಲ್ಲಿ ಬಲವಾಗಿ ಹಾಯ್ದು ಜಮಖಂಡಿ ಆಗಿರುವುದು ಸಹಜವಾಗಿದೆ. ಖಿಂಡಿ>ಖಂಡಿ>ಕಂಡಿ>ಕಂದಕ ಇದೂ ಸಹ ಗ್ರಾಮನಾಮಕ್ಕೆ ಪೂರಕವಾಗಿದೆ. ಈ ಗ್ರಾಮದ ಸುತ್ತಲೂ ಕಂಡಿ, ಗಂಡಿ ಇರುವ ವಾರ್ಗಿಕಗಳು ಕಂಡುಬರುತ್ತವೆ.

ಕೆರಕಲಮಟ್ಟಿ : ಕೆರಕಲಮಟ್ಟಿ ಎಂಬುದು ಪ್ರಸ್ತುತ ಗ್ರಾಮನಾಮ. ಇದು ಗುಡ್ಡದ ಸೆರಗಿನಲ್ಲಿ ನೆಲೆಸಿರುವುದಾಗಿದೆ. ಮೂಲತಃ "ಗ್ರಾಮವು 'ಮಟ್ಟಿ' ಎಂದು ಕರೆಯಲ್ಪಡುತ್ತಿತೆಂದು ಜನರಿಂದ ತಿಳಿದುಬರುತ್ತದೆ."[೨೬] ವಲಸೆ ಬಂದು ಕೊರಕಲ ಪ್ರದೇಶದಲ್ಲಿ ನೆಲೆ ನಿಂತುದರಿಂದ 'ಕೊರಕಲಮಟ್ಟಿ' ಎಂಬುದು ಬದಲಾಗಿ ಕೆರಕಲಮಟ್ಟಿ ಎಂದು ಈಗಲೂ ಪ್ರಚಲಿತದಲ್ಲಿದೆ.

ಮನಿಹಳ್ಳಿ : ಪ್ರಸ್ತುತ ಮನಿಹಳ್ಳಿಯೆಂದೆ ಕರೆಯಿಸಿಕೊಳ್ಳುವ ಈ ಗ್ರಾಮ ಬಾಗಲಕೋಟಿ ಜಿಲ್ಲೆಯ ಸರಹದ್ದಿನಲ್ಲಿದೆ. ನದಿ ದಡದಲ್ಲಿ "ಮನಿಹಳ್ಳಿ ನಾಡಗೌಡರ ಮೂವತ್ತೊಕ್ಕಲು ಸೇರಿ ಹುಟ್ಟಿಕೊಂಡಿತೆಂದು ಹಿರಿಯ ತಲೆಮಾರಿನ ಜನರಿಂದ ತಿಳಿದುಬರುತ್ತದೆ."[೨೭] ಈ ಗ್ರಾಮದ ನಿರ್ವಹಣೆ ನಾಡಪಟ್ಟಣಶೆಟ್ಟಿ ಅವರಿಗೆ ಸೇರಿದೆ.

ಕೋಟೆಕಲ್ಲ : ಕೋಟೆಕಲ್ಲು ಎಂಬುದು ಪ್ರಸ್ತುತ ಗ್ರಾಮ ನಾಮ. ಮೂಲತಃ ಈ ಗ್ರಾಮವು ಬೆಟ್ಟದ ಮೇಲಿದ್ದು ಕಾಲಾಂತರದಲ್ಲಿ ವಲಸೆ ಬಂದುದಾಗಿದೆ. "ಮೂಲಗ್ರಾಮದ ಹೆಸರು "ಕಲ್ಲಿ"[೨೮] "ಕಲ್ಲಿಕೋಟೆ"[೨೯] ಎಂದು ತಿಳಿದುಬರುತ್ತದೆ. ಅಲ್ಲಿ ಈಗಲೂ ಬೆಟ್ಟದ ಮೇಲೆ ಕೋಟೆ, ಕೋಟೆಯ ಮಹಾದ್ವಾರ ಗಡಗಳು, ಜನರು ವಾಸಿಸುವ ಮನೆಗಳು ಚಂಡಾಡು ಬಝಾರ, ಸಂತೆ ಬಝಾರ, ಬಸವಣ್ಣದೇವರ ಗುಡಿ, ಆದಿಲ್‌ಶಾಹಿಗಳ ಮಹಲದಾರರ ಎರಡು ಘೋರಿಗಳೂ ಅಲ್ಲಿ ಕಂಡುಬರುತ್ತವೆ. ಕಲ್ಲಿಕೋಟೆ ತಿರುವುಮುರುವು ಆಗಿ ಕೋಟೆಕಲ್ಲಿ>ಕೋಟೆಕಲ್ಲ ಆಗಿರುವುದು ಸಹಜವೆನಿಸುತ್ತದೆ. "ಕ್ರಿ.ಶ. ೧೫೦೦ರ ನಂತರ ಗೋಪಾಲಪ್ಪ ದೇಸಾಯಿ ಬೆಟ್ಟದಿಂದ ಇಳಿದು ವಾಡೆ ಕಟ್ಟಿಸಿದ್ದು ಆಗಿದೆ."[೩೦] ಮತ್ತೆ ಅಲ್ಲಿಂದ ದಕ್ಷಿಣಕ್ಕೆ ಹೋಗಿ ಗುಡ್ಡದ ಸರುವಿನಲ್ಲಿ ವಾಡೇ ಕಟ್ಟಿಸಿಕೊಂಡು ನೆಲೆ ನಿಂತುದು ಕಂಡುಬರುತ್ತದೆ. ಪ್ರಸ್ತುತ ಕೋಟೆಕಲ್ಲ ಎಂದೇ ಕರೆಯುತ್ತಿರುವುದು ಬಳಕೆಯಲ್ಲಿದೆ.

ಕೆಲೂರ : ಯೇಳೂರ>ಕೇಳೂರ>ಕೆಲೂರ ಎಂಬುದು ಪ್ರಸ್ತುತ ಗ್ರಾಮನಾಮ. ಈ ಗ್ರಾಮದ ಸುತ್ತಲೂ ಏಳು ಹಣಮಂತ ದೇವರುಗಳ ಗುಡಿಗಳು ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಯೇಳೂರ ಎಂದು ಕರೆಯುತ್ತಿರುವದು. ಹಿರಿಯ ತಲೆಮಾರಿನವರಿಂದ ತಿಳಿದುಬರುತ್ತದೆ. ಕಾಲಗತಿಸಿದಂತೆ ಕೇಳೂರ, ಕೆಲೂರ ಆಗಿರಬೇಕೆನಿಸುತ್ತದೆ. ಇನ್ನು ಕೆಲವರು "ಕೆಲವು+ಊರು=ಕೆಲೂರ ಆಗಿರುವುದೆಂದು ಹೇಳುತ್ತಾರೆ."[೩೧]

ಈ ಎರಡು ವಿವೇಚನೆಗಳು ಭಿನ್ನವಾಗಿಲ್ಲ. ಎರಡು ಒಂದೇ ಅರ್ಥೈಸುವುದರಿಂದ ಈ ಗ್ರಾಮನಾಮಕ್ಕೆ ಮೇಲಿನ ಆಧಾರಗಳು ಪೂರಕವಾಗಿ ಧ್ವನಿಸುತ್ತವೆ.

ಕುಂದರಗಿ : ಕುಂದರಗಿ ಎಂಬುದು ಪ್ರಸ್ತುತ ಗ್ರಾಮನಾಮ. ಇದರ ಅರ್ಥವು ದ್ವಂದ್ವವಾಗಿದೆ. ಜನಾಂಗ ವಾಚಿಯಾಗಿಯೂ, ಭೂವಾಚಕವಾಗಿಯೂ ಕಂಡುಬರುತ್ತದೆ. ಮೂಲತಃ ಇದರ ನಿಷ್ಪತ್ತಿ ಕುಂದರ + ಕೆಯ್ =ಕುಂದರಗಿ ಆಗಿದೆ. ಕುಂದರ ಅಂದರೆ ಬೆಟ್ಟಗಳ ನಡುವಿನ ಸಂದು ಎಂದಾಗುತ್ತದೆ. ಸದ್ಯ ಈ ಗ್ರಾಮವು ಗುಡ್ಡದ ಸಂದುಗಳಲ್ಲೆ ಬೆಳೆದು ನಿಂತಿದೆ.

ಹೀಗೆ ದೇಸಗತಿ ಮನೆತನಗಳ ಗ್ರಾಮಗಳು ಭೂವಾಚಕ, ಜಲವಾಚಕ, ವ್ಯಕ್ತಿವಾಚಕ. ಜಾತಿ ವಂಶವಾಚಕ ಸಂಖ್ಯಾವಾಚಕವಾಗಿ ಕಂಡುಬಂದಿದ್ದಾಗಿದೆ. ಇತ್ತೀಚಿಗೆ ಆಲಮಟ್ಟಿ ಹಿನ್ನೀರಿನಿಂದ ಮುಳಗಡೆ

ಯಾಗಿರುವುದರಿಂದ ದೇಸಗತಿ ಗ್ರಾಮಗಳೇ ಮುಳಗಡೆಯಾಗಿ ಪು. ಕೆ. ಹಚ್ಚಿಕೊಂಡು ಕರೆಸಿಕೊಳ್ಳುತ್ತವೆ. ಪು.ಕೆ ಅಂದರೆ ಪುನರ್ವಸತಿ ಕೇಂದ್ರವೆಂದು ಹೆಸರಿದೆ.

ಪುಕೆ ಸೊನ್ನಗ್ರಾಮ, ಪುಕೆ ಹೊನ್ಯಾಳ ಗ್ರಾಮ, ಪುಕೆ ಬಿದರಿಗ್ರಾಮ, ಪುಕೆ ಮನ್ನಿಕೇರಿ, ಪುಕೆ ಗಿರಿಸಾಗರ ಇತ್ಯಾದಿ. ಇದಲ್ಲದೆ ಇತರೆ ಗ್ರಾಮನಾಮಗಳು ತಮ್ಮದೇ ಆದ ಪ್ರಾಕೃತಿಕ ಭೌಗೋಳಿಕ ಪರಿಸರ ಉಳ್ಳ ಬೇರೆ ಬೇರೆ ಹೆಸರಿನ ಗ್ರಾಮಗಳು ಗಮನಸೆಳೆಯುತ್ತವೆ. ಈ ಕುರಿತು ಸಂಶೋಧಕ ವಿದ್ಯಾರ್ಥಿಗಳಿಗೆ ಇದೊಂದು ಮಾರ್ಗಸೂಚಿಯಾಗಬಲ್ಲದು ಎಂದು ನನ್ನ ಆಶಯವಾಗಿದೆ.

೬.೨. ಕುಲನಾಮಗಳು

ಸ್ಥಳನಾಮ, ಕುಲನಾಮ ಹಾಗೂ ವ್ಯಕ್ತಿನಾಮಗಳ ಅಧ್ಯಯನದ ಕಕ್ಷೆಯಲ್ಲಿ ಕುಲನಾಮ ಕುರಿತು ಅವುಗಳ ಪ್ರಯೋಜನಗಳನ್ನು ಕುರಿತು ಸ್ಥೂಲವಾಗಿರದಿದ್ದರೂ ಸಂಕ್ಷಿಪ್ತವಾಗಿ ವಿವೇಚಿಸುವುದು ಅಗತ್ಯವಾಗಿದೆ. ಇಲ್ಲಿ ದೇಸಗತಿಯವರ ಕುಲನಾಮವನ್ನಷ್ಟೇ ಅಧ್ಯಯನಕ್ಕೊಳಪಡಿಸಿಕೊಂಡು ನಿರೂಪಿಸಿಕೊಳ್ಳಲಾಗಿದೆ.

ಕುಲನಾಮವು ವ್ಯಕ್ತಿಗೆ ಸಂಬಂಧಿಸಿದ್ದು ಆಗಿದ್ದರೂ ಅದು ಇಡೀ ವರ್ಣವನ್ನು ಗುರ್ತಿಸುವಲ್ಲಿ ಪ್ರಮುಖವಾಗಿದೆ. ತಲೆಮಾರಿನಿಂದ ತಲೆಮಾರಿಗೆ ಹರಿದು ಬರುವುದರಿಂದ ಆ ಕುಲವನ್ನು, ವಂಶವನ್ನು ಗುರ್ತಿಸುವಲ್ಲಿ ಸಹಾಯಕವಾಗಿದೆ. ದೇಸಗತಿ ಮನೆತನದವರು ಬೇರೆ ಬೇರೆ ಮತಧರ್ಮಕ್ಕೆ ಸೇರಿದವರಾಗಿದ್ದಾರೆ. ಅವರಿಗೆ ಒಲಿದು ಬಂದ ಅಧಿಕಾರವು ಪ್ರಮುಖವಾಗಿರುವುದರಿಂದ ಅಧಿಕಾರ ಪಡೆದು ಮುಖಂಡತ್ವ ವಹಿಸಿದ ಪದವೇ ಕುಲನಾಮವಾಗಿ ನಿಲ್ಲುತ್ತದೆ. ಇದೇ ಅಧ್ಯಯನ ವಸ್ತುವಾಗಿಟ್ಟುಕೊಂಡು ಈ ಕುರಿತು ಅಧ್ಯಯನಿಸಲಾಗಿದೆ.

"ಕುಲನಾಮ ಅಥವಾ ಕುಟುಂಬನಾಮ ಇವೆರಡು ಒಂದೇ ಆಗಿರುತ್ತವೆ. ಮರಾಠಿಯಲ್ಲಿ ಅಡನಾಮ್, ತೆಲುಗಿನಲ್ಲಿ ಇಂಟಿಪೇರ್. ಇಂಗ್ಲೀಷ್ ನಲ್ಲಿ Surname ಕನ್ನಡದಲ್ಲಿ ಅಡ್ಡಹೆಸರು"[೬೨] ಎಂದು ಜನಪದಿಯಲ್ಲಿ ಕೇಳಿಬರುತ್ತದೆ. ಕುಲನಾಮವು ಆ ಕುಟುಂಬದ ಅಂತಸ್ತಿಕೆ, ವೃತ್ತಿ, ಗೌರವ, ಪ್ರತಿಷ್ಠೆಯ ಪ್ರತೀಕವಾಗಿ ತೋರುತ್ತದೆ. "ಸಮೂಹದಿಂದ ಒಬ್ಬ ವ್ಯಕ್ತಿಯನ್ನು ಸರಿಯಾಗಿ ಪ್ರತ್ಯೇಕಿಸಿಕೊಡಲು ಅವನ ಹೆಸರು ಅಸಮರ್ಥವಾದಲ್ಲಿ ಜೊತೆಗೆ ತಂದೆಯ ಹೆಸರು, ಅದೂ ಅಸಮರ್ಥವಾದಲ್ಲಿ ಹೆಚ್ಚಿನದಾಗಿ ಇನ್ನೊಂದು ಹೆಸರನ್ನು ಸೇರಿಸಿರುವುದು ಬಂದಿರಬೇಕೆಂಬುದು ವಿದ್ವಾಂಸರಾದ ಡಾ.ಎಂ.ಎಂ.ಕಲಬುರ್ಗಿಯವರು ಊಹಿಸಿದ್ದಾರೆ."[೬೩] ಈ ಊಹೆ ಸಮರ್ಪಕವಾದರೂ ಜನಸಂಖ್ಯೆ ವಿರಳವಿರುವಾಗ, ಆ ವ್ಯಕ್ತಿಯ ಅವಶ್ಯಕತೆ ಇಲ್ಲದಿರುವಾಗ ಇಂಥ ಸಮಸ್ಯೆ ಎದುರಾಗಿರಲಿಕ್ಕಿಲ್ಲ. ಪ್ರಗತಿಯತ್ತ ಮುನ್ನಡೆದಾಗ ಜನಸಂಖ್ಯೆ ಬೆಳೆದಾಗ ನಿರ್ದಿಷ್ಟವಾಗಿ ಗುರ್ತಿಸುವುದು ಕಠಿಣವಾದಂತೆ ತೋರುತ್ತದೆ. ವ್ಯಕ್ತಿಯ ಅವಶ್ಯಕತೆ ಬಿದ್ದಾಗ ಅದೊಂದು

ಸಮಸ್ಯೆಯಾಗಿ ಪರಿಣಮಿಸಿದಾಗ ಸಮೂಹದಿಂದ ಒಬ್ಬ ವ್ಯಕ್ತಿಯನ್ನಾಗಲಿ ಒಂದು ಮನೆತನವನ್ನಾಗಲಿ ಗುರ್ತಿಸಲು ಕುಟುಂಬನಾಮ ಬಳಕೆಗೆ ಬಂದಂತೆ ಕಾಣುತ್ತದೆ ಎಂಬುದು ಹಲವು ವಿದ್ವಾಂಸರ ಅಭಿಪ್ರಾಯವಾಗಿದೆ.

೬.೨.೧. ಕುಲನಾಮ ವರ್ಗೀಕರಣ

ಕುಲನಾಮ ವರ್ಗೀಕರಣ

- **ಜಾತಿವಾಚಿ**
- **ವೃತ್ತಿವಾಚಿ**
- **ಅಧಿಕಾರವಾಚಿ**[೩೩]

ಈ ಮೇಲಿನ ವರ್ಗೀಕರಣವನ್ನು ಮೂಲ ಕೋಷ್ಟಕದಿಂದ ಎತ್ತಿಕೊಂಡು ಕುಲನಾಮವನ್ನು ಅಧ್ಯಯನಿಸಲು ಬಳಸಿಕೊಂಡಿದೆ.

ದೇಸಗತಿ ಮನೆತನಗಳ ಕುಲನಾಮ

೧. ವೀರಶೈವ ಅಥವಾ ಲಿಂಗಾಯತ

೨. ಜೈನ

೩. ಬ್ರಾಹ್ಮಣ

೪. ಕ್ಷತ್ರೀಯ

ಕುಲನಾಮಗಳು ಒಳ ಪಂಗಡಗಳು

೧. ವೀರಶೈವ ಅಥವಾ ಲಿಂಗಾಯತ

- ಗಾಣಿಗ
- ರೆಡ್ಡಿ
- ಪಂಚಮಸಾಲಿ

ಕುಲನಾಮಗಳಲ್ಲಿ ಅಧಿಕಾರವಾಚಿ ಕುಲನಾಮ

೧. ಗಾಣಿಗ

ದೇಸಾಯಿ, ಇನಾಮದಾರ, ನಾಡಪಟ್ಟಣ ಶೆಟ್ಟಿ ಕಂಡುಬರುತ್ತದೆ.

ರೆಡ್ಡಿ

ದೇಸಾಯಿ, ದೇಸಮುಖ ನಾಯಕರೆಂದು ಕಂಡುಬರುತ್ತದೆ.

ಪಂಚಮಸಾಲಿ

ದೇಸಾಯಿ, ನಾಡಗೌಡರೆಂದು ಕಂಡುಬರುತ್ತದೆ.

೨. ಜೈನ

ದೇಸಾಯಿ, ದೇಸಮುಖ, ನಾಡಗೌಡರೆಂದು ಕಂಡುಬರುತ್ತದೆ.

೩. ಬ್ರಾಹ್ಮಣ

ದೇಸಾಯಿ, ಸರದೇಸಾಯಿ, ದೇಸಮುಖಿ

೪. ಕ್ಷತ್ರೀಯ

ದೇಸಾಯಿ, ಸರದೇಸಾಯಿ, ನಾಯಕ, ದೇಸಮುಖಿ

ಹಾಗೇ ಪಾಟೀಲ ಬಿ ಪಾಟೀಲರೆಂಬುದು ಕಂಡುಬರುತ್ತದೆ.

ಈ ಎಲ್ಲ ವಿವೇಚನೆಯಲ್ಲಿ ಕುಲನಾಮಗಳಲ್ಲಿ ಅಧಿಕಾರವಾಚಿ ಕುಲನಾಮ ಕುರಿತು ಸಂಕ್ಷೀಪ್ತವಾಗಿ ವಿವೇಚಿಸಲಾಗಿದೆ.

ವೀರಶೈವ ಅಥವಾ ಲಿಂಗಾಯತ ದೇಸಗತಿಗಳವರ ಒಳಪಂಗಡಗಳ ಮತಧರ್ಮದ ಹೆಸರು ರೆಡ್ಡಿ, ಗಾಣಿಗ, ಪಂಚಮಸಾಲಿ, ಇತರೆ ಇರುತ್ತವೆ. ಇಲ್ಲಿ ಇತರೆ ಜನರು ಕುಟುಂಬ ನಾಮವನ್ನು ಇದೇ ಹೆಸರಿನಿಂದ ಗುರ್ತಿಸಿದ್ದರೂ ದೇಸಗತಿಗಳವರ ಕುಲನಾಮಮಾತ್ರ ಅಧಿಕಾರ ಬಂದ ಮೇಲೆ ಇವರನ್ನು ನಾಯಕ, ದೇಸಾಯಿ, ದೇಸಮುಖಿ, ನಾಡಗೌಡ ಎಂದು ಕರೆಯುವುದು ರೂಢಿಯಾಗಿರುತ್ತದೆ. ಈ ಅಧಿಕಾರ ಸೂಚಕ ಪದಗಳೇ ಕುಟುಂಬ ನಾಮಗಳಾಗಿ ಕಂಡುಬರುತ್ತವೆ. ಪ್ರಸ್ತುತ ಕುಲನಾಮದಿಂದ ಕರೆಯುತ್ತಿಲ್ಲ. ಅಧಿಕಾರ ವಾಚಿಯಿಂದಲೇ ಕರೆಯುತ್ತಿದ್ದಾರೆ.

ಕ್ಷತ್ರೀಯ ಮನೆತನಗಳವರೂ ಸಹ ತಮ್ಮ ಒಳಪಂಗಡಗಳ ಮೂಲಕ ಕರೆಸಿಕೊಳ್ಳುತ್ತಾರೆ. ಒಡೆಯರ, ನಾಯಕರ, ನಾಯಕ ಎಂಬುದಾಗಿದೆ. ಇವರೂ ದೇಸಗತಿ ಆಧಿಕಾರ ಪಡೆದ ಮೇಲೆ ದೇಸಾಯಿ, ದೇಸಮುಖಿ ಎಂಬ ಅಡ್ಡನಾಮದಿಂದ ಕರೆಸಿಕೊಂಡಿದ್ದಾರೆ. ಹಾಗೆ ಬ್ರಾಹ್ಮಣರೂ ಕೂಡಾ ಹೊರತಾಗಿಲ್ಲ. "ನೌಕರಿ ಪದನಾಮಗಳಲ್ಲಿ ಕುಲನಾಮಗಳಾಗುತ್ತವೆ. ಮರಾಠರ ಆಳ್ವಿಕೆಯಲ್ಲಿ ಕರ್ನಾಟಕದ ಕೆಲವು ಭಾಗಗಳಲ್ಲಿ ಆಡಳಿತ ನಡೆಸಿದ ವ್ಯಕ್ತಿಗಳ ಪದನಾಮಗಳು ಬಳಕೆಯಲ್ಲಿದ್ದವು. ಉದಾ. ದೇಸಾಯಿ, ದೇಸಮುಖ್, ದೇಶಪಾಂಡೆ, ಇನಾಮದಾರ, ಜಹಾಗೀರದಾರ, ಕುಲಕರ್ಣಿ, ಪಾಟೀಲ ಇತ್ಯಾದಿ."[೬೪]

ಈ ಮೇಲಿನ ವಿವೇಚನೆಯು ಪ್ರಮುಖವಾಗಿ ಅಧಿಕಾರವಾಚಿಯನ್ನು ಪ್ರಮುಖವಾಗಿಟ್ಟುಕೊಂಡು ವಿವೇಚಿಸಿದ್ದಾಗಿದೆ. ಹೀಗಾಗಿ ಕುಲನಾಮ ಸ್ಥಳನಾಮವಾಗಿಯೂ ವ್ಯಕ್ತಿನಾಮವಾಗಿಯೂ ಅಧಿಕಾರವಾಚಿ ನಾಮವಾಗಿಯೂ ರೂಪಾಂತರಗೊಂಡುದ್ದು ಕಂಡುಬರುತ್ತದೆ.

ನಾಡಗೌಡ, ಬಿ.ಪಾಟೀಲ, ಪೊಲೀಸಪಾಟೀಲ, ಮುಲ್ಕಿ ಪಾಟೀಲ, ಶೆಟ್ಟಿ ಇವೂ ಕೂಡ ಅಧಿಕಾರವಾಚಕ ಕುಲನಾಮಗಳೇ ಆಗಿವೆ. ಇವರೆಲ್ಲರ ಅಧಿಕಾರಗಳು ಬೇರೆ ಬೇರೆಯಾಗಿದ್ದರೂ ತಮ್ಮ ತಮ್ಮ ವ್ಯಾಪ್ತಿಗನುಸರಿಸಿ, ಹುದ್ದೆಗನುಸರಿಸಿ ಕೆಲಸ ನಿರ್ವಹಿಸುವುದರಿಂದ ಕುಲನಾಮವಾಗಿದ್ದು ಕಂಡುಬರುತ್ತದೆ.

ಕೃಷಿ ಪದ್ಧತಿಯನ್ನು ಮೂಲವಾಗಿರಿಸಿಕೊಂಡ ಇವರು ಅಧಿಕಾರ ಗಿಟ್ಟಿಸಿಕೊಂಡು ಅಧಿಕಾರವಾಣಿಯಿಂದಲೇ ಮುಂದುವರೆದಿದ್ದು ಕಂಡುಬರುತ್ತದೆ.

೬.೨.೨. ದತ್ತಕ ಪ್ರಸಂಗದಲ್ಲಿ ಕುಲನಾಮ ಬದಲಾವಣೆ

ದೇಸಗತಿಯ ಮನೆತನದಲ್ಲಿ ದತ್ತಕ ಪ್ರಸಂಗ ಕಂಡುಬರುತ್ತದೆ. ದತ್ತಕ ಪಡೆಯುವವರು ಮಕ್ಕಳ ಭಾಗ್ಯವಿರದೇ ಇರುತ್ತಾರೆ. ಅಂಥ ಪ್ರಸಂಗದಲ್ಲಿ ದತ್ತಕ ಪಡೆಯುವ ಪ್ರಕ್ರಿಯೆ ನಡೆಯುತ್ತದೆ. ದತ್ತಕ ಪಡೆಯುವ ಯಾವುದೇ ಕುಟುಂಬವು ತಮ್ಮ ಸಂಬಂಧಿಕರನ್ನೆ ಪಡೆಯುತ್ತಾರೆ. ಆ ಮನೆತನದವರು ಗೌಡರು, ಇನಾಮುದಾರರು ಪಾಟೀಲರು ಆಗಿರುತ್ತಾರೆ. ದತ್ತಕ ನಡೆದಾಗ ಈ ಮನೆತನದ ಹುಡುಗ (ವ್ಯಕ್ತಿ) ದೇಸಾಯಿ, ದೇಸಮುಖ, ನಾಡಗೌಡ ಎಂದೇ ಕರೆಸಿಕೊಳ್ಳುತ್ತಾನೆ. ಆದರೆ ಆತನ ಹೆಸರಿನಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ.

ದತ್ತಕ ಬರುವ ವ್ಯಕ್ತಿ ಸುಮಾರು ೬ ವರ್ಷದಿಂದ ೭ ವರ್ಷದವನಿರುತ್ತಾನೆ. ಗಾದಿಮಾಲಿಕತ್ವ ಪಡೆದ ಮೇಲೆ ದೇಸಾಯಿ ಎಂಬ ಕುಲನಾಮದಿಂದಲೇ ಕರೆಸಿಕೊಳ್ಳುತ್ತಾನೆ. ಹೀಗೆ ದತ್ತಕ ಪ್ರಸಂಗದಲ್ಲಿ ಮೂಲ ಮನೆತನದ ಕುಲನಾಮ ಬದಲಾವಣೆ ಆಗಿ ದತ್ತಕ ಮನೆತನದ ಕುಲನಾಮದಿಂದ ಕರೆಯುತ್ತಿರುವುದು ತಿಳಿದುಬರುತ್ತದೆ.

ದೇಸಗತಿ ಕುಲನಾಮಗಳ ಸಂಬೋಧನೆಗಳು

೧. "ಸೊನ್ನದ ದೇಸಾಯಿ ಪರಗಣ ಬೀಳಗಿ"[೩೬]

೨. "ಯಡಹಳ್ಳಿ ದೇಸಾಯಿ ಪರಗಣ ಗಲಗಲಿ"[೩೭]

೩. "ಮನ್ನಿಕೇರಿ ದೇಸಾಯಿ ಪರಗಣ ಬಾಗಲಕೋಟೆ"[೩೮]

೪. "ಹೊನ್ಯಾಳ ಸರನಾಡಗೌಡ ಪರಗಣ ಬಾಗಲಕೋಟೆ"[೩೯]

೫. "ತೇರದಾಳ ನಾಡಗೌಡ ಪರಗಣ ತೇರದಾಳ"[೪೦]

೬. "ವಡವಡಗಿ ದೇಸಮುಖ ಸಮ್ಮತ ಪರ್ವತಿ ಪರಗಣ ಪರ್ವತಿ"[೪೧]

ಪೇಶ್ವೆಗಳು ಈ ರೀತಿ ಕರೆದುದಾಗಿದೆ.

೧. "ಬೀಳಗಿಕರ್ "[೪೨]

೨. "ಬಾಗಲಕೋಟಕರ್"[೪೩]

೩. "ತೇರದಾಳಕರ್"[೪೪]

೪. "ಕುಂಬರಗಿಕರ್"[೪೫]

೫. "ಮುಧೋಳಕರ್"[೪೬]

೬. "ಕೆರೂರಕರ್"[೪೭]

ಬ್ರಿಟೀಷರು ಈ ರೀತಿ ಕರೆದುದಾಗಿದೆ.

"Desai of sanna Petá Bilagi"[೪೮]

"Desai of Yadahalli peta Bilagi"[೪೯]

"Surdeseis of Bagalkot Tq Bagalkot"[೫೦]

"Nadagouda of Bagalkot Tq Bagalkot"[೫೧]

"Desai of mudhal state Mudhol"[೫೨]

"Desai of lokapur stete mudhal"[೫೩]

ಆದಿಲ್‌ಶಾಹಿಗಳು ಈ ರೀತಿ ಕರೆದುದಾಗಿದೆ.

"ದೇಸಾಖಾನ್ ಬಾಗರ್"[೫೪] (ಬಾಗಲಕೋಟ)

"ದೇಸಾಖಾನ್ ಬಾದಾಮಿ"[೫೫]

"ಜಕ್ಕಪ್ಪ ದೇಸಾಯಿ ತೇರದಾಳ"[೫೬]

ಹೀಗೆ ದೇಸಾಯಿಗಳನ್ನು ರಾಜರು ತಾವು ಗುರ್ತಿಸಿಕೊಂಡ ರೀತಿಯಲ್ಲಿ ಕರೆದುದು ಮೇಲಿನ ವಿವೇಚನೆಯಿಂದ ತಿಳಿದುಬರುತ್ತದೆ. ಇವೆಲ್ಲವೂ ದೇಸಾಯಿಗಳಿಗೆ ನೀಡಿದ ಸನದುಗಳಲ್ಲಿ ದಾಖಲಾಗಿವೆ.

೬.೩. ವ್ಯಕ್ತಿನಾಮಗಳು

ವ್ಯಕ್ತಿನಾಮಗಳು ಕುರಿತು ಇಲ್ಲಿ ವಿವೇಚಿಸಲಾಗಿದೆ. ಇಲ್ಲಿಯವರೆಗೆ ಇಂಥ ಅಧ್ಯಯನಗಳು ನಡೆದಿರುವುದು ಕಡಿಮೆ. ಅದರಲ್ಲೂ ಆಡಳಿತದ ಹೊಣೆಹೊತ್ತ ದೇಸಗತಿಯ ವ್ಯಕ್ತಿಗಳ ನಾಮ ಅಧ್ಯಯನವಾಗಿಲ್ಲ. ಮಾನವನು ಸಮಾಜದಲ್ಲಿ ಬದುಕುತ್ತಾನೆ. ಸಮಾಜದಲ್ಲಿ ಬಾಳುತ್ತಾನೆ. ಮಾನವ ಸಂಘಜೀವಿ, ಮಾನವ ಸಮಾಜಜೀವಿ (man is social animal) ಎಂದು ಸಮಾಜಶಾಸ್ತ್ರದಲ್ಲಿ ಕರೆಸಿಕೊಂಡಿದ್ದಾನೆ. ಹೀಗಾಗಿ ವ್ಯಕ್ತಿನಾಮಗಳ ಅಧ್ಯಯನ ಸಂಸ್ಕೃತಿಯನ್ನು ತಿಳಿಯಲು ಅವಶ್ಯ. ವ್ಯಕ್ತಿಯ ಜೊತೆಗೆ ಸಮಾಜದಲ್ಲಿ ಸಿಗುವ, ದೊರಕುವ ಪ್ರತಿಯೊಂದು ವಸ್ತುಗಳನ್ನು ಸಂಪರ್ಕವನ್ನು ಗುರ್ತಿಸಿಕೊಳ್ಳಬೇಕಾಗುತ್ತದೆ. ಆ ಗುರುತಿಸುವಿಕೆಗೆ ಪ್ರಮುಖವಾದುದೇ ಹೆಸರು.

"ಹೆಸರುಗಳ ಸ್ವರೂಪವನ್ನು ಮತ್ತು ಬಳಕೆಯ ಬಗೆಗಳನ್ನು ಅಭ್ಯಾಸ ಮಾಡಿದರೆ ಸಂಸ್ಕೃತಿಯ ಕೆಲವು ನೆಲೆಗಳ ಅರಿವು ಹೆಚ್ಚಾಗುತ್ತದೆ. ಮತ್ತೆ ಕೆಲವು ಸಂದರ್ಭದಲ್ಲಿ ನಮ್ಮ ತಿಳುವಳಿಕೆಯ ಸಮರ್ಥನೆಗೆ ಬೇಕಾದ ಮಾಹಿತಿಗಳು ದೊರಕುವುದು ಸಾಧ್ಯ"[೫೭] ಎಂದು ವಿದ್ವಾಂಸರಾದ ಕೆ.ವಿ.ನಾರಾಯಣರ

ಅಭಿಮತವಾಗಿದೆ. ಹೀಗೆ ವ್ಯಕ್ತಿನಾಮವು ಕುತೂಹಲಕಾರಿಯಾಗಿದೆ. ದೇಸಗತಿಯವರ ವ್ಯಕ್ತಿನಾಮಗಳು ಬಹಳಷ್ಟು ಅರ್ಥಪೂರ್ಣವಾಗಿರುವವು. "ಧರ್ಮಸೂತ್ರಗಳು ಹೇಳುವ ಹದಿನಾರು ಸಂಸ್ಕಾರಗಳಲ್ಲಿ ನಾಮಕರಣ ಒಂದು. ಜನ್ಮ ನಕ್ಷತ್ರಕ್ಕನುಗುಣವಾಗಿ ಪಂಚಾಂಗ, ರಾಶಿ ಮುಂತಾದವುಗಳನ್ನು ನೋಡುವುದು ಹಿಂದಿನಿಂದಲೂ ಮುಂದುವರಿದುಕೊಂಡು ಬಂದಿದೆ."[೫೮] ಮಗು ಹುಟ್ಟುವ ಮೊದಲುಗೊಂಡು ಹುಟ್ಟಿದ ಹದಿಮೂರು ದಿನಗಳವರೆಗೂ ಜಾತಕ, ರಾಶಿ, ಪಂಚಾಂಗ ನೋಡಿದ್ದೆ ನೋಡಿದ್ದು ಕೊನೆಗೆ ಐದು ದೇವರ ಹೆಸರು ಸೇರಿಸಿ ಹೆಸರನ್ನಿಡುತ್ತಾರೆ. ಅದರಲ್ಲಿ ತಮಗೆ ಪ್ರಿಯವಾದ ಹೆಸರನ್ನು ಕರೆಯುವುದು ಬಳಕೆಯಲ್ಲಿದೆ.

'ಗಂಡು ಹುಟ್ಟಿದರೆ ಗೌಡನ ಹೆಸರು; ಹೆಣ್ಣು ಹುಟ್ಟಿದರೆ ಹೆಗ್ಗಡತಿ ಹೆಸರು' ಎಂಬ ಗಾದೆ ಮಾತು ಕೂಡ ನಾಮ ಕುರಿತಾಗಿ ಧ್ವನಿಸುತ್ತದೆ. ಈ ಹಿನ್ನೆಲೆಯಲ್ಲಿ ವ್ಯಕ್ತಿನಾಮಕ್ಕೆ ಎಷ್ಟೊಂದು ಮಹತ್ವವಿದೆ ಎಂಬುದು ವಿಶೇಷವೆನಿಸುತ್ತದೆ.

ಅಂಕಿತನಾಮ

೧.ದೇವರ ಹೆಸರು | ೨.ಹಿರಿಯರ ಹೆಸರು | ೩.ಹಾರೈಕೆ ರೂಪದ ಹೆಸರು | ೪.ಜನ್ಮ, ನಕ್ಷತ್ರ, ರಾಶಿ ಹೆಸರು."[೫೯]

ಈ ಮೇಲಿನ ಕೋಷ್ಟಕವನ್ನು ನಾಮಾಧ್ಯಯನ ಕೊಷ್ಟಕದಿಂದ ಆಯ್ದುಕೊಂಡಿದೆ. ಅದರಲ್ಲಿ ಅಂಕಿತ ನಾಮ ಆಯ್ದುಕೊಂಡು ಅಂಕಿತ ನಾಮದಲ್ಲಿ ಮತ್ತೆ ವರ್ಗೀಕರಿಸಿಕೊಂಡು ಅಧ್ಯಯನಿಸಲಾಗಿದೆ.

ವ್ಯಕ್ತಿನಾಮಗಳ ಕುರಿತು ಅಧ್ಯಯನ ಕೈಗೊಂಡಾಗ ದೇಸಾಯಿಗಳ ನಾಮಗಳೇ ಆಕರಗಳಾಗುತ್ತವೆ. ಇವರಿಗೆ ಇಟ್ಟಂತಹ ಹೆಸರುಗಳೇ ಅಂಕಿತನಾಮಗಳಾಗುತ್ತವೆ. ಅದರ ಜೊತೆಗೆ ದೇವರ ಹೆಸರು, ಮನೆತನದ ಹಿರಿಯ ಹೆಸರು ಇಡುತ್ತ ಮುಂದುವರಿದು ಪ್ರಚಲಿತದಲ್ಲಿದೆ.

ಹಿರಿಯರ ವೈಯಕ್ತಿಕ ಬಯಕೆ, ಹಾರೈಕೆ ಅವುಗಳ ಒಡಲಲ್ಲಿ ಅಡಗಿರುತ್ತವೆ."[೬೦] ಇಂಥ ನಾಮಗಳು ಹಿಂದಿನಿಂದ ಬಂದ ಬಳುವಳಿಯಾಗಿವೆ. ದೇಸಗತಿಯವರಲ್ಲಿಯೂ ಇರುವುದರಿಂದ ಅಂಕಿತನಾಮದ ಜೊತೆಗೆ 'ಉರ್ಫ' ಹಚ್ಚಿಕೊಳ್ಳುತ್ತಾರೆ. 'ಉರ್ಫ' ಪದವಾಚಿಗಳ ಮುಸ್ಲಿಂ ಪದವಾಚಿಗಳಾಗಿವೆ.

೧. ಹೊನ್ನಿಹಾಳ ನಾಡಗೌಡರ ಮನೆತನದಲ್ಲಿ 'ಪಕೀರ'ಪ್ಪ ನಾಮವಿದೆ. "ಪಕೀರ + ಅಪ್ಪ"

೨. ರಕ್ಕಸಗಿ ದೇಸಾಯರ ಮನೆತನದಲ್ಲಿ "ಅಮೀನ, ಹುಸೇನ"[೬೧] ಎಂಬುದು ಸೇರಿಕೊಂಡಿದೆ. (ಹುಸೇನ ಸಾಬ, ಎಂದು ಆದರೆ ಮತ್ತೊಂದೆಡೆಗೆ ಅಮೀನ + ಅಪ್ಪ=ಅಮೀನಪ್ಪ) ಎಂಬುದಾಗಿದೆ.

೩. ಅಮರಾವತಿ ದೇಸಗತಿಯವರೂ ಕೂಡ ರಕ್ಕಸಗಿ ಮನೆತನದವರೇ ಆಗಿರುತ್ತಾರೆ.

೪. ಕೋಟೆಕಲ್ಲ ದೇಸಗತಿ ಮನೆತನದಲ್ಲಿ ಬಾಬಾಸಾಬ, ಅಣ್ಣಾಸಾಬ ಎಂಬುದಾಗಿದೆ.

೫. ಕೆಲೂರ ನಾಡಗೌಡರ ಮನೆತನದಲ್ಲಿ ಅಣ್ಣಾಸಾಬ. ಪಕೀರ ಉರ್ಪ ಸೇರಿಕೊಂಡಿದೆ.

ಹೀಗೆ ನಾಮಗಳು ಗೊತ್ತಿಲ್ಲದಂತೆ ಸೇರಿಕೊಂಡಿವೆ. ಇವು ಹಿಂದು ಧರ್ಮದ ಪ್ರಭಾವದ ಜೊತೆಗೆ ಮುಸ್ಲಿಂ ಧರ್ಮದ ನಂಬಿಕೆಯನ್ನು ಸಮನಾಗಿ ಉಳಿಸಿಕೊಂಡು ಬಂದುದರಿಂದ ಮುಸ್ಲಿಂ ಪದವಾಚಿಗಳು ಇವರ ಹೆಸರಿನ ಜೊತೆಗೆ ಸೇರಿಸಿದ್ದರಿಂದ ಕುತೂಹಲಕಾರಿಯಾಗಿ ಕಂಡುಬರುತ್ತದೆ. ಇದಕ್ಕೆ ಅವರವರ ಮನೋಧರ್ಮವೇ ಕಾರಣೀಭೂತವಾಗಿದೆ. ಹಸೇನ, ಹುಸೇನರ ಅಲ್ಲಂಗಳನ್ನು ಕೂಡ್ರಿಸುವುದರಿಂದ ಅವುಗಳ ಪ್ರಭಾವದಿಂದ ಮುಸ್ಲಿಂ ಪದವಾಚಿ ಸೇರಿರುವುದು ಹಾರೈಕೆ ರೂಪದಲ್ಲಿ ಕರೆದಿರುವುದು ಕಂಡುಬರುತ್ತದೆ.

೬.೩.೧. ಮರಾಠ, ಇಂಗ್ಲೀಶ್‌ರ ಪ್ರಭಾವ

ಮರಾಠರು ಹಾಗೂ ಇಂಗ್ಲಿಶ್‌ರು ಅಧಿಕಾರವನ್ನು ಪಡೆದುಕೊಂಡಾಗ ಅವರ ಅಧೀನತೆಯಲ್ಲಿ ಆಡಳಿತ ನಡೆಸಬೇಕಾದದ್ದು ದೇಸಗತಿಗೆ ಒದಗಿಬಂದಿತು. ಇವರು ಅವರವರ ನಿಯಮಗಳನ್ನು ಅನುಸರಿಸುತ್ತ ಅಷ್ಟೇ ವಿನಯದಿಂದ, ವಿಶ್ವಾಸಿಕರಾಗಿ ಅಧಿಕಾರ ನಡೆಸಿದರು. ಅಧಿಕಾರ ಮೆಚ್ಚುಗೆಗಳಿಸಿದ ದೇಸಾಯಿಗಳಿಗೆ ಸಾಹೇಬ, ಬಹುದ್ದೂರ, ರಾವ್, ರಾವಬಹದ್ದೂರ ಪದವಿ ನೀಡಿದರು. ಇದರಿಂದ ದೇಸಾಯಿಗಳು, ನಾಡಗೌಡರು ತಮ್ಮ ನಾಮಗಳ ಮುಂದೆ, ಆದೇ ರೀತಿ (ನಿರ್ದಿಷ್ಟವಾರ್ಗಿಕಗಳ ಮುಂದೆ ಅಥವಾ ಹಿಂದೆ) ಸೇರಿಸಿಕೊಂಡುದ್ದಾಗಿದೆ. ಬಹುತೇಕ ಇಂಥ ಪದವಿ ಪ್ರತಿಷ್ಠೆಗಳು ದೇಸಾಯಿಯನ್ನು ಉನ್ನತ ಮಟ್ಟಕ್ಕೆ ಒಯ್ಯುವಲ್ಲಿ ಕೂಡ ಸಹಾಯಕವಾಗಿವೆ. ಹಾಗೇ ಇಂಥ ಪದವಿ ಆ ದಿನಮಾನಗಳಲ್ಲಿ ಪದವಿಯಾಗಿರದೆ ದೇಸಗತಿ ಪ್ರತಿಷ್ಠೆಯಾಗಿ ಕಂಡುಬರುತ್ತಿತ್ತು. ಅದು ಕೆಳಗಿನಂತಿದೆ.

ಗೌರ್ನರ ಜನರಲ್ ನೀಡಿದ ಸನದು ಪತ್ರದ ಮಾಹಿತಿ.

Sannad

To

Shivasiddappa virappa Samaik Land holder Bijapur District Bombay presidency I hereby confer upon you the title of'Rao shaib' as per personal distinction

New Delhi **Viceroy and Governar General of India**

02-01-1928

2. Seal

Sannad.

To

Rao shaib shivasiddappa virappa sarnaik Land holder BiJapur District Bombay presideney.

I hereby confer upon you the title of'Rao Bhadur' as personal distinction.

New Delhi **Viceroy and Governar General of India**
01-01-1932

Seal

ಇಂಥ ಬಿರುದಾವಳಿಗಳನ್ನು ಹೊತ್ತುಕೊಂಡು ದೌಲತ್ತ ಮಾಡಿದರು. ಅವರ ಮುಂದಿನವರು ಅರಿತರು ಆದರೆ ಅವರಂತೆ ಆಗಲಿಲ್ಲ. ಮುಂದಿನ ಪೀಳಿಗೆಗೆ ಇಂಥಹ ಬಿರುದು ಸಲ್ಲಲಿಲ್ಲ.

ಹೀಗೆ ದೇಸಗತಿಗಳವರ ನಾಮಗಳನ್ನು ಹಲವು ನೆಲೆಗಳಲ್ಲಿ ಅಧ್ಯಯನ ಮಾಡಿದಾಗ್ಯೂ ಇನ್ನೂ ಅದರ ವ್ಯಾಪಕತೆ ಹಿಗ್ಗುತ್ತಾ ಹೋಗುತ್ತದೆ. ಅದರಲ್ಲಿ ವಿಶೇಷಣ ಎಂಬುದು ಸೇರಿಕೊಂಡು ನಾಮವನ್ನು ಹೊಗಳುವಂತೆ, ವರ್ಣನೆ ಮಾಡುವಂತೆ ತಿಳಿದುಬರುತ್ತದೆ. ಅವರ ವಂಶಾವಳಿಯನ್ನು ಅವಲೋಕಿಸಿದಾಗ ಒಂದೇ ಹೆಸರಿನವರು ಎರಡು ಮೂರು ಜನರು ಒಂದೇ ಸಾಲಿನಲ್ಲಿ ಕಂಡುಬರುತ್ತಾರೆ. ಅಂತವರಿಗೆ ನಾಮಧೇಯವಿದ್ದರೂ ಮೊಲದನೆಯವನಿಗೆ "ಹಿರೇ"[೬೩] ಎಂಬ ಪದ ಸಿಗುತ್ತದೆ. ಎರಡನೆಯವನಿಗೆ "ಚಿಕ್ಕ"[೬೪] ಎಂದು ಕಂಡುಬರುತ್ತದೆ. ಇವೆರಡರ ಮಧ್ಯದಲ್ಲಿ ಮತ್ತೊಂದು ಪದವು ವಿಶೇಷವಾಗಿ ಕಂಡುಬರುತ್ತದೆ. ಅದು "ಇಮ್ಮಡಿ"[೬೫] ಎಂದು. ಗಿರಿಯಪ್ಪ ಎಂಬುದು ಸಾಮಾನ್ಯವಾಗಿ ಕಂಡುಬಂದರೆ ಮತ್ತೊಬ್ಬನ ಹೆಸರಿನ ಮುಂದೆ ಮೇಲುಗಿರಿಯಪ್ಪ ಎಂಬುದಾಗಿ ತೋರುತ್ತದೆ.

ಈ ಎಲ್ಲ ವಿವೇಚನೆಯಿಂದ ದೇಸಗತಿ ಮನೆತನಗಳ ವ್ಯಕ್ತಿನಾಮಗಳು ಬಹಳಷ್ಟು ಕುತೂಹಲಕಾರಿಯಾಗಿವೆ. ಈ ಕುರಿತಾಗಿ ಪ್ರತ್ಯೇಕ ಅಧ್ಯಯನದ ಅಗತ್ಯವಿದೆ.

೬.೩.೨. ದೇಸಾಯಿಣಿಯರ ವ್ಯಕ್ತಿನಾಮಗಳ, ಅನನ್ಯತೆ

ಸಮಾಜ ರಚನೆಯ, ಸಮಾಜ ವ್ಯವಸ್ಥೆಯ ವಿವಿಧ ಆಯಾಮಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಇವರ ನಾಮಗಳು ಪರಿಕರಗಳಾಗಿವೆ. ದೇಸಾಯಿಣಿಯರೂ ಸಮಾಜ ಕೊಂಡಿಯಾಗಿ ಕೆಲಸ ಮಾಡಿದ್ದಾರೆ. ಸಾಂಸ್ಕೃತಿಕವಾಗಿ ಅವರು ಮಾಡಿದ ಕೆಲಸವು ಪ್ರಸ್ತುತವೂ ಉಳಿದುಕೊಂಡು ಬಂದಿದೆ.

ದೇಸಗತಿ ಮನೆತನದಲ್ಲಿ ದೇವರುಗಳ ಹೆಸರುಗಳನ್ನು ಅನುಕರಣೆ ಮಾಡಿ ಇಟ್ಟಿರುವ ಹೆಸರುಗಳು ಸಾವಿರಾರು ಸಿಗುತ್ತವೆ, ಅದು ಸ್ತ್ರೀ ಪುರುಷರಾದಿಯಾಗಿ ಪ್ರಮುಖವಾಗಿ ಸ್ತ್ರೀಯನ್ನೇ ಗಮನಿಸಿದಾಗ ದೈವ ಮೂಲದ ಅಥವಾ ತಮ್ಮ ದೊರೆತನಕ್ಕೆ ತಕ್ಕಂತೆ ಹೆಸರಿಟ್ಟಿದ್ದು ಕಂಡುಬರುತ್ತದೆ.

ಉದಾ:	ಲಕ್ಷ್ಮೀ	ಲಕ್ಷ್ಮೀದೇವಿ
	ಪಾರ್ವತಿ	ಪಾರ್ವತಿದೇವಿ
	ಪದ್ಮಾವತಿ	ಪದ್ಮಾವತಿದೇವಿ
	ಶಾಂತಮ್ಮ	ಶಾಂತಾಬಾಯಿ
	ಗೌರಮ್ಮ	ಗೌರಾಮ್ಮಬಾಯಿ

ಈ ಎಲ್ಲ ಹೆಸರುಗಳಲ್ಲಿ ಕಂಡುಬರುವ ವಾರ್ಗಿಕ ಪದವು ವಿಶೇಷವಾಗಿದೆ. ದೇವಿ ಮತ್ತು ಬಾಯಿ ಎಲ್ಲಿಂದ ಬಂದರೆಂದು ಗುರುತಿಸುವುದು ಮಹತ್ವದ್ದಾಗಿದೆ. ದೇವಿ ಎಂಬುದು ಮೂಲತಃ ಹಿಂದೂ ಮೂಲದಿಂದ, ಬಾಯಿ ಎಂಬುದು ಮರಾಠಿ ಮೂಲದಿಂದ ಬಂದಿದೆ. ೧೮೦೦ರ ಆಚೆಗೆ ಸ್ತ್ರೀಯರ ಹೆಸರಲ್ಲಿ 'ದೇವಿ' ನಂತರದಲ್ಲಿ 'ಬಾಯಿ' ಎಂದು ಕರೆಯುವುದು ಕಂಡುಬರುತ್ತದೆ. ೧೮೧೮ರಲ್ಲಿ ದೇಸಾಯಿಣಿಯ ಕೈಬರಹದ ಫೋಟೋ ತೆಗೆಸಿದ್ದಾರೆ. ಅದರಲ್ಲಿ ದೇವಿ ಎಂದು ಹೆಸರಿಸಿದ್ದು ಇರುತ್ತದೆ. ತದನಂತರದಲ್ಲಿ ಮತ್ತೊಬ್ಬ ದೇಸಾಯಿಣಿ ಫೋಟೋ ಕೂಡಾ ಅಲ್ಲಿದ್ದು ಅದರಲ್ಲಿ ಬಾಯಿ ಸೇರಿಕೊಂಡದ್ದು ವಿಧಿತವಾಗುತ್ತದೆ. ಬಯ್ಯಾ, ಬಾಯಿ ಈ ಪದಗಳನ್ನು ಹಚ್ಚಿ ವಾಸ್ತವದಲ್ಲಿ ಕರೆಯುತ್ತಾರೆ. ಇದು ಮರಾಠಿ ಪ್ರದೇಶಗಳಲ್ಲಿ ಸಂಬೋಧಕ ರೀತಿಯಲ್ಲಿ ಗೌರವಸೂಚಕವಾಗಿ ಅಲ್ಲಲ್ಲಿ ಕಂಡುಬರುತ್ತದೆ.

ದೇಸಾಯಿಣಿಯರ ಹೆಸರಿನ ನಿರ್ದಿಷ್ಟ ವಾಚಕದ ಜೊತೆಗೆ ಗೌರವ ಸೂಚಕವಾಗಿ, ಸಾಮಾಜಿಕ ಕಾರಣಗಳಿಗಾಗಿ ಜಾತಿ ಮತಗಳ ಜೊತೆಗೆ ಸಂಘಟನೆ ಸಂಬಂಧವಾಗಿ ಎಲ್ಲ ಜನರು ತಮ್ಮನ್ನು ಗುರುತಿಸಿಕೊಳ್ಳುವ ಇವರ ನಾಮಗಳು ವಾರ್ಗೀಕದಲ್ಲಿ ಬಾಯಿ ಮತ್ತು ದೇವಿ ಪ್ರಯತ್ನಗಳ ಬಳಕೆ ಕಂಡುಬರುತ್ತವೆ. ಈ ನಾಮಗಳು ಮೇಲಸ್ತರದ ದೈವ ಸ್ವರೂಪದ ಹೆಸರುಗಳಿದ್ದರೂ ಇತ್ತೀಚೆಗೆ ಕೆಳಮುಖ ಚಲನೆ ಹೊಂದಿದ್ದು ಕಂಡುಬರುತ್ತದೆ. ವರ್ತಮಾನದಲ್ಲಿ ಆಧುನೀಕರಣದ ಪ್ರಭಾವದಿಂದ ಸಾಮಾಜಿಕ ರೀತಿ ನೀತಿಗಳು ಅನೇಕ ಬಗೆಯ ತೀವ್ರ ತರಹದ ಬದಲಾವಣೆಗಳಿಗೆ ಒಳಗಾಗುತ್ತಿರುವುದರಿಂದ ಸ್ಥೂಲವಾದ ಚೌಕಟ್ಟಿನೊಳಗೆ ಮಾತ್ರ ಬದಲಾವಣೆಗಳಾಗುತ್ತವೆ.

ಉದಾ.ಹಿಂದೂ ಸಮಾಜದ ವ್ಯಕ್ತಿ ಪುರುಷರಾಗಲಿ, ಸ್ತ್ರೀಯರಾಗಲಿ ಅದರಲ್ಲೂ ಸ್ತ್ರೀಯರ ಹೆಸರುಗಳು ಬದಲಾವಣೆಯಾದರೂ ಧರ್ಮದೊಳಗಿನ ಉನ್ನತ ಹೆಸರುಗಳನ್ನೇ ಅನುಸರಿಸಿದ್ದಾರೆ. ಆದರೆ ಇಲ್ಲಿಯವರೆಗೆ ಅವಲೋಕಿಸಿದಾಗ ಸ್ತ್ರೀಯರು ಮುಸ್ಲಿಂ, ಕ್ರಿಶ್ಚಿಯನ್ನರ ಹೆಸರುಗಳನ್ನು ಇಟ್ಟುಕೊಂಡಿಲ್ಲ. ಇದರಿಂದ ಹಿಂದೂ ಸಾಂಸ್ಕೃತಿಕತೆ ಉಳಿದ್ದನ್ನು ಉದಾಹರಿಸಬಹುದಾಗಿದೆ.

ಮೇಲಸ್ತರದ ವ್ಯವಸ್ಥೆಯಿಂದ ಕುಸಿದುಕೊಂಡಿರುವುದು ಕಂಡುಬಂದರೂ ಅನ್ಯಭಾಷಾ ಸಂಸ್ಕೃತಿಗಳ ಪ್ರಭಾವ ಮತ್ತು ಮಾಧ್ಯಮಗಳು ಒಂದು ಹಂತದಲ್ಲಿ ಶೈಕ್ಷಣಿಕವಾಗಿ ಮೇಲೆರಿದಂತೆ ಸ್ಥಾನಮಾನಗಳು

ಬದಲಾದಂತೆ ನಿರ್ದಿಷ್ಟಗಳನ್ನು ಬಿಟ್ಟು ಸಾಂಸ್ಕೃತಿಕರಣಗೊಂಡ ಹೆಸರುಗಳನ್ನು ಬಳಸುವುದು ಪ್ರಸ್ತುತ ಕಂಡುಬರುತ್ತದೆ.

ಒಟ್ಟಾರೆಯಾಗಿ ಸ್ತ್ರೀಯರ ನಾಮಾಧ್ಯಯನವೂ ಸಹ ಬಹುನೆಲೆಯಲ್ಲಿ ಗುರುತಿಸಲು ಸಹಾಯಕವಾಗುತ್ತದೆ. ಈ ಕುರಿತಾದ ಅಧ್ಯಯನಕ್ಕೆ ಇವೂ ಕೂಡ ಜ್ಞಾನದ ಶಿಸ್ತಿಗೆ ಆಕರಗಳಾಗುತ್ತವೆ.

ಅಡಿಟಿಪ್ಪಣಿಗಳು

೧. ಡಾ.ಜೆ.ಎಂ.ನಾಗಯ್ಯ, ೧೯೯೯, **೬ನೇ ವಿಕ್ರಮಾದಿತ್ಯನ ಶಾಸನಗಳು,** ಪು.೧೩೪

೨. ಅದೇ,

೩. ಡಾ.ಎಂ.ಎಂ.ಕಲಬುರ್ಗಿ, **ಕನ್ನಡ ನಾಮ ವಿಜ್ಞಾನ,** ಪು.೩

೪. ಅದೇ, ಪು.೨೨

೫. ಡಾ.ವಿಶ್ವನಾಥ, ೧೯೯೬, **ಸಕಲೇಶಪುರ ಪರಿಸರದ ಸ್ಥಳನಾಮಗಳು,** ಪು.೧೫

೬. ಡಾ.ಕೆ.ವಿ.ನಾರಾಯಣ, ೧೯೯೯, **ಸ್ಥಳನಾಮಗಳು,** ಪು.೩೯

೭. ಅದೇ, ಪು.೭

೮. ಅದೇ, ಪು.೭

೯. ಡಾ.ಜೆ.ಎಂ.ನಾಗಯ್ಯ, ೧೯೯೯, **ಪೂರ್ವೋಕ್ತ,** ಪು.೧೦೪

೧೦. ಡಾ.ಎಂ.ಎಂ.ಕಲಬುರ್ಗಿ(ಸಂ), ೧೯೭೬, **ಬಿಜಾಪೂರ ಜಿಲ್ಲೆ ಶಾಸನ ಸೂಚಿ,** ಪು.೪೬

೧೧. ಡಾ.ಬಿ.ಆರ್.ಹಿರೇಮಠ, **ರನ್ನಗನ್ನಡಿ,** ೬೪ನೇ ಕನ್ನಡ ಸಾಹಿತ್ಯ ಸಮ್ಮೇಳನ, ಮುಧೋಳ ಮುಧೋಳ ಗ್ರಾಮನಾಮ ವಿವೇಚನೆ, ಪು.೩೮

೧೨. ಸಂದರ್ಶನ, ಬಾಲಪ್ಪ ರಕ್ಷಿ, ವಯಸ್ಸು ೬೦, ಮುದಕವಿ

೧೩. ಅದೇ,

೧೪. ಡಾ.ಜೆ.ಎಂ.ನಾಗಯ್ಯ, ೧೯೯೯, **ಪೂರ್ವೋಕ್ತ,** ಪು.೧೦೬

೧೫. ಅದೇ, ಪು.೧೦೯

೧೬. ವೆಂಕಟರಂಗೋ ಕಟ್ಟಿ, ೧೮೮೩, ಕನ್ನಡ ಅನುವಾದ ನಾಲ್ಕು ಜಿಲ್ಲೆಗಳು ಬಾಂಬೆ ಗೇಝೆಟಿಯರ್

೧೭. ಪರ್ಶಿಯನ್ ಸನದು ಕನ್ನಡಕ್ಕೆ ಅನುವಾದ ಡಾ.ಅಬ್ದುಲ್‌ಗಣಿ ಇಮಾರತವಾಲೆ, ಬಿಜಾಪೂರ

೧೮. ಸಂದರ್ಶನ, ಗಂಗಮ್ಮ ಸರನಾಡಗೌಡತಿ, ವಯಸ್ಸು ೭೮, ಸರನಾಡಗೌಡರ ವಾಡೆ, ಬಾಗಲಕೋಟೆ

೧೯. ಡಾ.ಬಿ.ಆರ್.ಹಿರೇಮಠ **ಪೂರ್ವೋಕ್ತ,** ಪು.೩೮

೨೦. ಸಂದರ್ಶನ ಬಿ.ಸಿ.ಪಾಟೀಲ, ವಯಸ್ಸು ೪೫, ಲೋಕಾಪೂರ

೨೧. ಡಾ.ಎಂ.ಎಂ.ಕಲಬುರ್ಗಿ, ೧೯೭೬, **ಪೂರ್ವೋಕ್ತ**, ಪು.೨೨

೨೨. ಡಾ.ಜೆ.ಎಂ.ನಾಗಯ್ಯ, ೧೯೯೯, **ಪೂರ್ವೋಕ್ತ**, ಪು.೧೩೪

೨೩. ಡಾ.ಎಂ.ಎಂ.ಕಲಬುರ್ಗಿ, ೧೯೭೬, **ಪೂರ್ವೋಕ್ತ**, ಪು.೨೧

೨೪. ಡಾ.ಶಿಲಾಕಾಂತ ಪತ್ತಾರ(ಪ್ರ.ಸಂ), ೨೦೦೦, **ಕೃಷ್ಣಪ್ರಭೆ**, ಪು.೩೦

೨೫. ಅದೇ,

೨೬. ಸಂದರ್ಶನ, ಎಸ್.ಅಂಗಡಿ, ವಯಸ್ಸು ೪೫, ಕೆರಕಲಮಟ್ಟಿ

೨೭. ಸಂದರ್ಶನ, ಶಂಕ್ರಪ್ಪ ನಾಡಗೌಡ, ವಯಸ್ಸು ೫೦, ಮನಹಳ್ಳಿ

೨೮. ವಂಶಾವಳಿ

೨೯. ಅದೇ,

೩೦. ವೆಂಕಟರಂಗೊ ಕಟ್ಟಿ, ಮುಂಬೈ ಗ್ಯಾಝಟೀಯರ್

೩೧. ಸಂದರ್ಶನ, ಸಂಗಪ್ಪ ಹೂಗಾರ, ಪತ್ರಕರ್ತರು, ಕೆಲೂರ

೩೨. ಡಾ.ಎಸ್.ಎಸ್.ಅಂಗಡಿ, **ಸ್ಥಳನಾಮಗಳು**, ಪು.೨೫

೩೩. ಡಾ.ಎಂ.ಎಂ.ಕಲಬುರ್ಗಿ, **ಕನ್ನಡ ನಾಮವಿಜ್ಞಾನ**, ಪು.೩

೩೪. ಅದೇ,

೩೫. ಡಾ.ಎಸ್.ಎಸ್.ಅಂಗಡಿ, **ವ್ಯಕ್ತಿನಾಮಗಳು**, ಪು.೩೮

೩೬ ರಿಂದ ೫೬ರವರೆಗೆ ಪತ್ರಿಸಿದ ಸನದುಗಳು

೫೭. ಕೆ.ವಿ.ನಾರಾಯಣ(ಸಂ), **ವ್ಯಕ್ತಿನಾಮಗಳು**, ಪು.೧

೫೮. ಡಾ.ಎಂ.ಎಂ.ಕಲಬುರ್ಗಿ, **ಕನ್ನಡ ನಾಮವಿಜ್ಞಾನ**, ಪು.೩

೫೯. ಅದೇ,

೬೦. ಡಾ.ಕೆ.ವಿ.ನಾರಾಯಣ, ೧೯೯೯, **ಸ್ಥಳನಾಮಗಳು**, ಪು.೩೯

೬೧. ವಂಶಾವಳಿ

೬೨. ವಂಶಾವಳಿ

೬೩. ಡಾ.ಕೆ.ವಿ.ನಾರಾಯಣ, ೧೯೯೯, **ಸ್ಥಳನಾಮಗಳು**, ಪು.೩೯

೬೪. ಅದೇ,

ಅಧ್ಯಾಯ ೭

ಸಮಕಾಲೀನ ಸ್ಥಿತಿ-ಗತಿ ಮತ್ತು ಸ್ಥಿತ್ಯಂತರಗಳು

೭

ಸಮಕಾಲೀನ ಸ್ಥಿತಿ-ಗತಿ ಮತ್ತು ಸ್ಥಿತ್ಯಂತರಗಳು

ನಮ್ಮ ಎದುರಿಗಿರುವುದು ದೇಸಾಯಿಗಳ ದರ್ಬಾರು ಮತ್ತು ದೌಲತ್ತಿನ ಇತಿಹಾಸ. ಆದರೆ ಇವತ್ತು ಅದು ಯಾವ ಸ್ಥಿತ್ಯಂತರವನ್ನು ಪಡೆದುಕೊಂಡಿದೆ ಎಂಬುದನ್ನು ನೋಡುವುದು ಮತ್ತು ಅದನ್ನು ಅಧ್ಯಯನಕ್ಕೊಳಪಡಿಸುವುದು ತೀರಾ ಮಹತ್ವದ್ದೆನಿಸುತ್ತದೆ.

ಕೆಲವು ದೇಸಗತಿ ಮನೆತನಗಳು ಆಧುನಿಕ ಶಿಕ್ಷಣದ ಪ್ರಭಾವದಿಂದ ಪ್ರಭಾವಿತಗೊಂಡು ಮೂಲದಿಂದ ಬದಲಾಗಿವೆ. ಹಾಗೆಯೇ ಮಾಧ್ಯಮಗಳಲ್ಲಿ ಪರಿಣತಿ ಸಾಧಿಸಿವೆ. ರಾಜಕೀಯ ಸ್ತರದ ವಿವಿಧ ಆಯಾಮಗಳಲ್ಲಿ ಅವರ ಪಾಲ್ಗೊಳ್ಳುವಿಕೆ ಪ್ರಾಮುಖ್ಯವೆನಿಸಿದೆ. ಪ್ರಸ್ತುತ ಗ್ರಾಮಪಂಚಾಯಿತಿ, ತಾಲೂಕಾ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಆಡಳಿತದಲ್ಲಿ ದೇಸಗತಿಯವರ ಪಾತ್ರ ಸಕ್ರೀಯವಾಗಿದೆ. ಅಧಿಕಾರ ಸೂತ್ರವನ್ನು ನಿಭಾಯಿಸಿಕೊಂಡಿರುವುದೇ ಅವರ ಉದ್ದೇಶ ಎಂಬುದರಲ್ಲಿ ಎರಡು ಮಾತಿಲ್ಲ. ತಮ್ಮ ಅಸ್ತಿತ್ವಕ್ಕೆ ಬೆಂಬಲಾಗಿರುವ ನಿಷ್ಠರನ್ನು ಅಧಿಕಾರ ವಿಕೇಂದ್ರಿಕೃತ ಪ್ರಭುತ್ವದಲ್ಲಿ ಕೇಂದ್ರಿಕರಿಸಿ ಅಪರೋಕ್ಷವಾಗಿ ಆಡಳಿತ ನಡೆಸುವುದನ್ನು ಅವರು ತಪ್ಪಿಸಿಕೊಳ್ಳುತ್ತಿಲ್ಲ. ಅಥವಾ ಅವರ ಮಾತುಗಳಿಗೆ ಗೌರವ, ಮನ್ನಣೆ ನೀಡಿ ಆರಾಧಿಸುವ ಜನ ಸಾಮಾನ್ಯರು, ಕಂಪ್ಯೂಟರ್ ಯುಗದಲ್ಲೂ ಇದ್ದಾರೆಂಬುದನ್ನು ಅಲ್ಲಗಳೆಯಲಾಗುತ್ತಿಲ್ಲ.

ದೇಸಗತಿಗಳ ಸಂಬಂಧ ಜನಸಾಮಾನ್ಯರೊಂದಿಗೆ ಅವಿನಾಭಾವ ಹೊಂದಿಕೊಂಡು ಬಂದದ್ದು ವಿಧಿತ. ಇಂದಿನ ಗ್ರಾಮೀಣ ಬದುಕು ಈ ಮನೆತನಗಳ ಋಣದೊಂದಿಗೆ ಈಗಲೂ ಗುರುತಿಸಿಕೊಳ್ಳುವುದನ್ನು ಕಾಣಬಹುದಾಗಿದೆ. ದೇಸಾಯಿಗಳು ಎಂದರೆ ತಮ್ಮನ್ನು ಆಳುವವರು, ತಮಗಿಂತ ಮೇಲುಸ್ತರದವರು ಎಂಬ ತಿಳುವಳಿಕೆಯನ್ನು ಗ್ರಾಮೀಣರು ಇನ್ನೂ ಜೀವಂತವಾಗಿರಿಸಿಕೊಂಡಿದ್ದಾರೆ. ಅವರಿಗೆ ತಗ್ಗಿ ಬಗ್ಗಿ ಗೌರವ ಸೂಚಿಸುತ್ತಾರೆ. ಅವರ ಮಾತಿಗೆ ಬೆಲೆ ಕೊಡುತ್ತಾರೆ. ಕೆಲವರಂತೂ ಅವರ ದರ್ಪಕ್ಕೆ ಹೆದರಿಕೊಂಡು ದೂರ ಸರಿದು ನಿಲ್ಲುತ್ತಾರೆ. ಅನುಭವಿಕ ಹಿರಿಯರಂತೂ ದೇಸಗತಿಗಳವರ ಶ್ರೇಯಸ್ಸನ್ನು ಈಗಲೂ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ದೇಸಾಯಿಗಳು ದರ್ಪದವರಷ್ಟೇ ಅಲ್ಲ. ಅದರಲ್ಲಿ ಮಾನವೀಯ ಕಾಳಜಿ ಉಳ್ಳವರೆಂದು ಹೇಳುವವರೂ ಇದ್ದಾರೆ. ಅಂಥವರ ಬಗ್ಗೆ ವೈವಿಧ್ಯಮಯವಾದ

ಹಾಡುಕಥೆ ಕಟ್ಟಿದವರೂ ಇದ್ದಾರೆ. ದೇಸಾಯಿಗಳ ದೊರೆತನವನ್ನು ವೈಭವೀಕರಿಸುವ ಜಾನಪದ ಸಾಹಿತ್ಯ ಈಗಲೂ ಹಳ್ಳಿಗರ ನಾಲಗೆಯ ಮೇಲೆ ನಲಿದಾಡುತ್ತಿದೆ. ಈ ಎಲ್ಲದರ ಹಿನ್ನೆಲೆಯಲ್ಲಿ ದೇಸಗತಿ ಮನೆತನಗಳ ವಿಶಿಷ್ಟ ಸ್ವರೂಪವನ್ನು ಅಧ್ಯಯನದ ಮೂಲಕ ಗುರುತಿಸಬಹುದಾಗಿದೆ.

೭.೧. ಸಮಕಾಲೀನ ಸ್ಥಿತಿ-ಗತಿ

ದೇಸಾಯಿಗಳ ಜನಸಂಸ್ಕೃತಿಯನ್ನು ತೌಲನಿಕವಾಗಿ ಗುರ್ತಿಸಿಕೊಂಡಾಗ ಗ್ರಾಮದ ಉಳಿದ ಮನೆತನಕ್ಕೂ ದೇಸಗತಿ ಮನೆತನಕ್ಕೂ ಭಿನ್ನತೆ ಕಂಡುಬರುತ್ತದೆ. ಅಂದರೆ ದೇಸಗತಿಗಳು ಗ್ರಾಮೀಣ ಶ್ರೀಮಂತ ಮನೆತನಗಳಾಗಿ ಉಳಿದಿವೆಯೇ ಹೊರತು ಪ್ರಭುತ್ವ ಸ್ಥಾಪಿಸುವ ಕೇಂದ್ರಗಳಾಗಿ ಇಂದು ಉಳಿದಿಲ್ಲ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ ದೇಸಗತಿಗಳು ಇಂದು ತಮ್ಮ ಆಡಳಿತಾತ್ಮಕ ಶಕ್ತಿ ಕಳೆದುಕೊಂಡು, ಕೇವಲ ಶ್ರೀಮಂತಿಕೆಯ ಶಕ್ತಿಗಳಾಗಿ ಪರಿವರ್ತನೆ ಹೊಂದಿವೆ.

ಸಮಕಾಲೀನ ವ್ಯವಸ್ಥೆಯಲ್ಲಿ ಅವರ ಜೀವನವನ್ನು ಹಾಗೂ ಸುತ್ತಮುತ್ತಲಿನ ಪರಿಸರವನ್ನು ಸಮ-ಸಮವಾಗಿ ಬೆಳೆಸಿಕೊಂಡು ಹೋಗಿದ್ದುದು ಕಂಡುಬರುತ್ತದೆ. ಒಂದೊಂದು ದೇಸಗತಿಯವರ ಜೀವನ ದೃಷ್ಟಿ ಬೇರೆ, ನೀತಿ ನಿಯಮ ಬೇರೆ ಆದರೂ ಒಟ್ಟಿಗೆ ಕ್ರೋಢೀಕರಿಸಿದಾಗ ಒಂದೇ ತಳಹದಿಯ ಮೇಲೆ ನಡೆದು ಬಂದಿರುವ ಈ ಮನೆತನಗಳ ಜೀವನ ದೃಷ್ಟಿ ಸಮ್ಮಿಳಿತವಾಗಿದ್ದುದು ಗೋಚರವಾಗುತ್ತದೆ. ದೇಸಗತಿಗಳು ಬ್ರಾಹ್ಮಣ, ಜೈನ, ಕ್ಷತ್ರೀಯ, ವೀರಶೈವ ಧರ್ಮದ ವಿಭಿನ್ನ ಸ್ತರಗಳಲ್ಲಿ ಉಳಿದ ಆಯಾ ಧಾರ್ಮಿಕ ಮನೋಧರ್ಮವನ್ನು ಅವು ಸೂಚಿಸುವವು. ಹೀಗೆ ಹಲವು ನೆಲೆಗಳಲ್ಲಿ ಸಾಮಾಜಿಕ ಸ್ಥಿತಿ-ಗತಿಗಳು ತಕ್ಕಮಟ್ಟಿಗಾದರೂ ನಡೆಸಿಕೊಂಡು ಬಂದಿವೆ. ಮತ ಸಂಪ್ರದಾಯದಂತೆ ತಮ್ಮ ತಮ್ಮ ಮನೆತನಕ್ಕೆ ಗುರುಗಳೂ ಇರುವುದರಿಂದ ಪರಂಪರಾಗತವಾಗಿ ಬಂದ ಪದ್ಧತಿಯನ್ನು ಅನುಸರಿಸುತ್ತ ಬಂದಿದ್ದಾರೆ. ಬಹುತೇಕ ಎಲ್ಲ ದೇಸಗತಿಗಳವರು ಅದರಲ್ಲಿ ಸ್ತ್ರೀಯರು ವೀರಶೈವ ಧರ್ಮದ ಸಾಂಪ್ರದಾಯಿಕ ವಿಧಿ ವಿಧಾನಗಳನ್ನು ಸಂಪೂರ್ಣವಾಗಿ ಸ್ವೀಕರಿಸಿದ್ದು ಕಂಡುಬರುತ್ತದೆ. ಲಿಂಗಪೂಜೆಯಲ್ಲಿ ತುಂಬಾ ನಿಷ್ಠೆಯುಳ್ಳವರಾಗಿದ್ದಾರೆ. ಇಂದು ದೇಸಗತಿ ತನ್ನ ಸ್ಥಿತಿಯನ್ನು ಬದಲಾಯಿಸಿಕೊಂಡಿದ್ದರೂ ಬಳುವಳಿಯಾಗಿ ಬಂದ ಸಂಪ್ರದಾಯವನ್ನು ಉಳಿಸಿ ಪಾಲಿಸಿಕೊಂಡು ಬರುತ್ತಿರುವುದು ವಿಶೇಷವೆನಿಸಿದೆ. ಸ್ತ್ರೀಯರ ಅನುಭಾವ ಜೀವನ ಸಂಸ್ಕಾರ ಅವರ ಕುಟುಂಬದವರೆಲ್ಲರ ಮೇಲೆ ಪರಿಣಾಮ ಬೀರುವುದು ಸ್ವಾಭಾವಿಕ. ಮತ್ತು ವಿಶೇಷ ಬಗೆಯದು.

ದೇಸಾಯಿಗಳು ದೇಸಾಯಿಣಿಯರು ಸಾಮಾಜಿಕ ಕಳಕಳಿಯುಳ್ಳವರು ಅವರ ಸಜ್ಜನಿಕೆ, ಸಹೃದಯತೆ, ಶ್ರದ್ಧಾಭಾವಗಳು ಅನನ್ಯವಾಗಿವೆ. ಆದರೆ ಇದಕ್ಕೆ ಅಪವಾದವೆನ್ನುವರು ಇದ್ದಾರೆ. ಸ್ವಾತಂತ್ರ್ಯ ಪೂರ್ವದಿಂದ ಹಿಡಿದು ಸ್ವಾತಂತ್ರ್ಯ ನಂತರದವರೆಗೂ ಅರ್ಧಶತಮಾನ ಅವಧಿಯಲ್ಲಿ ಇವರ ಜೀವನ ಹಲವು

ಏರಿಳಿತಗಳನ್ನು ಕಂಡಿದೆ. ದೇಸಗತಿ ಮನೆತನಗಳು ಅವಿಭಕ್ತ ಕುಟುಂಬದ ನೆಲೆಗಳಾಗಿದ್ದು, ಬರುಬರುತ್ತ ಅವು ವಿಭಕ್ತ ಸ್ವರೂಪ ಪಡೆದುಕೊಂಡು ಸ್ವತಂತ್ರವಾಗಿರುವುದನ್ನು ಕಾಣಬಹುದು. ಸದ್ಯ ದೊಡ್ಡ ದೊಡ್ಡ ವಾಡೆಗಳನ್ನು ಹೊಂದಿದ್ದರೂ ತೋರಿಕೆಗೆ ಮಾತ್ರ ಅವು ಚರಿತ್ರಾರ್ಹ ಕುರುಗಳಾಗಿ ಉಳಿದಿವೆ. ಎಷ್ಟೋ ವಾಡೆಗಳು ಅಸ್ತವ್ಯಸ್ತವಾಗಿದ್ದು ಅವುಗಳು ನಾದುರಸ್ತಿಯಾಗಿಯೇ ಉಳಿದಿವೆ. ರಾಜಸಂಸ್ಕೃತಿಯ ವೈಭವದಲ್ಲಿ ಮೆರೆದ ದೇಸಾಯಿ ಮತ್ತು ಅವರ ವಾಡೆಗಳು ಇಂದು ಸಾಮಾನ್ಯ ಸಂಗತಿಗಳಾಗಿವೆ.

ಮುಂಬೈ ವತನ ಕಾಯ್ದೆ ೧೮೭೪ ಜಾರಿಯಲ್ಲಿ ಬಂದ ತರುವಾಯ ದೇಸಗತಿಯ ಆಡಳಿತಾಧಿಕಾರಕ್ಕೆ ವ್ಯಾಪಕವಾದ ನಿಯಮಗಳು ರಚಿಸಲ್ಪಟ್ಟಿದ್ದರಿಂದ ದೇಸಾಯಿಯ ಅಧಿಕಾರಗಳ ಮೇಲೆ ಹೇರಲಾಯಿತು. ಇದರಿಂದ ದೇಸಾಯಿಗಳು ಜನಸಾಮಾನ್ಯರಿಗಿಂತ ಕನಿಷ್ಠರಾಗಿದ್ದು ಉಂಟು. ಉದಾಹರಿಸಬೇಕೆಂದರೆ ಜಮಖಂಡಿ ತಾಲೂಕಿನ ಬಿದರಿ ದೇಸಾಯಿಯ ಅಳಿದುಳಿದ ವಂಶಸ್ಥರು ದಿನಾಲು ಕಟ್ಟಿಗೆ ಒಡೆದು ಕೂಲಿ ತಂದು ಜೀವಿಸುವುದನ್ನು ಕ್ಷೇತ್ರಕಾರ್ಯದಲ್ಲಿ ಕಂಡಿದ್ದೇನೆ. "ಸ್ತ್ರೀಯರ ಮೇಲೆ ನಡೆದ ಶೋಷಣೆಗೆ ಅಬಲೆ ಸ್ತ್ರೀಯು ತನ್ನ ಆಸ್ತಿ ಕಳೆದುಕೊಂಡದ್ದು ಅವರ ಹೇಳಿಕೆಯಿಂದ ತಿಳಿದುಬರುತ್ತದೆ."' ಸದ್ಯ ಈ ದೇಸಗತಿಯವರು ಸಂಪೂರ್ಣ ದೇಸಗತಿ ವಾಡೇ ಮಾರಿ ರಾಮದುರ್ಗ ತಾಲೂಕಿನ ಅವರಾದಿ ಗ್ರಾಮದ ಜನತಾ ಪ್ಲಾಟ ಮನೆಗಳಲ್ಲಿದ್ದಾರೆ. ಇಂಥವರಿಗೆ ಯಾವುದೇ ಗೌರವ ಮಾನ್ಯತೆಗಳು ಸಿಗದೇ ಬದುಕುತ್ತಿದ್ದಾರೆ. ದೇಸಾಯಿ ಎಂಬ ನಾಮ ಮಾತ್ರ ಬಹುದೊಡ್ಡದಾಗಿ ಉಳಿದುಕೊಂಡು ಬಂದಿದೆ.

ಸ್ವಾತಂತ್ರ್ಯ ನಂತರದಲ್ಲಿ ಪ್ರಜಾಪ್ರಭುತ್ವವು ಜಾರಿಯಲ್ಲಿದೆ. (ಪ್ರೌಢ)ವಯಸ್ಕರ ಮತದಾನ ಪದ್ಧತಿ ಮುಖಾಂತರ ಆರಿಸಲ್ಪಟ್ಟ ಪ್ರತಿನಿಧಿಗಳಿಂದ ನಮ್ಮ ರಾಜ್ಯ ಸರಕಾರ ಶಾಸನಾಡಳಿತ ನಡೆಸುತ್ತಿದೆ. ಇಂಥ ವ್ಯವಸ್ಥೆಯಲ್ಲಿ ಅರಸರೆನ್ನುವಂಥವರು ಸಂಪೂರ್ಣ ತುಳಿತಕ್ಕೊಳಗಾದರು. ಆದರೆ ಗ್ರಾಮೀಣ ವ್ಯವಸ್ಥೆಯಲ್ಲಿ ಜನರನ್ನು ಹತ್ತಿರದಿಂದ ಕಂಡು ಅವರ ಯೋಗಕ್ಷೇಮಕ್ಕೆ ಸಹಕಾರಿಯಾಗಿದ್ದ ಗ್ರಾಮಾಧಿಕಾರಿಗಳಾದ ದೇಸಾಯಿ ನಾಡಗೌಡರು ಜನರಿಂದ ಆಧರಿಸಲ್ಪಟ್ಟು ಇಂದಿನ ಪ್ರಜಾಸರಕಾರದ ಆಡಳಿತದಲ್ಲಿ ಭಾಗಿಗಳಾಗಿದ್ದಾರೆ. ಸಚಿವರಾಗಿದ್ದಾರೆ. ಇಂದಿಗೂ ಸಹ ಗ್ರಾಮೀಣ ಭಾಗದಲ್ಲಿ ಪ್ರಮುಖ ನಾಯಕರು ಆಗಿರುವುದನ್ನು ಅಲ್ಲಗಳೆಯುವಂತಿಲ್ಲ. ಕೆಲವು ದೇಸಾಯಿಗಳ ಬಗ್ಗೆ ವಿರೋಧವೂ ಇದೆ. ತಿರಸ್ಕಾರವೂ ಇದೆ.

ಒಟ್ಟಾರೆ ಜನರಿಂದ ಆಧರಿಸಲ್ಪಟ್ಟ ದೇಸಾಯಿಗಳು ಸಾಮಾಜಿಕ ಸಾಂಸ್ಕೃತಿಕ ಕಾರ್ಯಗಳಲ್ಲಿ ಭಾಗವಹಿಸದೇ ಇದ್ದರೂ ಸಂಪ್ರದಾಯದಂತೆ ಬಾಬುಗಳು ಅಥವಾ ಜಾಜಗಳು ಸಲ್ಲುತ್ತಿವೆ. ಆಧುನಿಕ ಗ್ರಾಮಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದ ಮೇಲೆ ಪರಂಪರಾಗತವಾಗಿ ಬಂದ ತನ್ನ ಹಳೆ ಅಧಿಕಾರ ಮತ್ತು ಕರ್ತವ್ಯಗಳಿಂದ ದೂರ ಉಳಿದಿರುವುದನ್ನು ಕಾಣುತ್ತೇವೆ.

೭.೧.೧. ಅಧಿಕಾರ ಕಡಿತ

ಭಾರತವನ್ನಾಳುತ್ತಿದ್ದ ಬ್ರಿಟೀಷ್ ಸರಕಾರವು ತನ್ನ ಅನೇಕ ನೀತಿ ಸೂತ್ರಗಳನ್ನು ವಿಸ್ತರಿಸಿ, ಸರ್ವಾಧಿಕಾರತ್ವದ ಮೇಲೆ ರೂಪುಗೊಂಡಿತು. ಇಸ್ವಿಸನ್ ೧೮ ರಿಂದ ಅನೇಕ ಬದಲಾವಣೆ ರೂಪಿಸುತ್ತಾ ಬಂದಿತು. ಅರಸುಗಳಿಂದ ಹಿಡಿದು ಸಂಸ್ಥಾನೀಕರ ಮೇಲೆಯೇ ಸೂತ್ರರೂಪಿಸಿದ್ದರಿಂದ ಆಡಳಿತ ಕುಸಿಯಿತು. ಹಿಂದೆ ಇದ್ದ ಸರ್ವಾಧಿಕಾರತ್ವದ ಗೌಡಕಿ ರದ್ದಾಯಿತು. 'ದಳಪತಿ' ಎಂಬ ಅಧಿಕಾರ, ನೀತಿ ನಿಯಮ ಯೋಜನೆಗಳು ಜಾರಿಗೆ ಬಂದವು. ಸ್ಥಳೀಯ ಆಡಳಿತದ ಮೇಲೆಯೇ ಈ ಯೋಜನೆಗಳು ಚಾಲ್ತಿಯಾಗಿ ದೇಸಾಯಿಗಳಿಂದ ಹಿಡಿದು ಗೌಡಕಿಯವರೆಗೆ ಎಲ್ಲ ಬದಲಾವಣೆಗಳನ್ನು ಅನಿವಾರ್ಯವಾಗಿ ಸ್ವೀಕರಿಸಲೇ ಬೇಕಾಯಿತು. ಆದರೂ ಇವರು ಪ್ರತಿಯೊಂದು ಗ್ರಾಮದಲ್ಲಿ ವಿಶ್ವಾಸಗಳಿಸಿಕೊಂಡಿದ್ದಾರೆ. ಜೊತೆಗೆ ಕಳೆದುಕೊಂಡಿದ್ದಾರೆ. ರಾಜಕೀಯ ನಿಕಟ ಸಂಪರ್ಕವಿಟ್ಟುಕೊಂಡಿದ್ದರಿಂದ. ತನ್ನ ತನವನ್ನು ಗಳಿಸಿಕೊಳ್ಳುವುದಲ್ಲದೆ ಮಹತ್ವ ಸಂಪಾದಿಸುವುದೂ ಇವರಿಗೆ ಸುಲಭವಾಗಿತ್ತೆಂದು ತೋರುತ್ತದೆ. ಈ ಕಾರಣದಿಂದ ದೇಸಾಯಿಗಳು ರಾಜಕೀಯತೆಯಲ್ಲಿ ಉನ್ನತ ಹುದ್ದೆಯನ್ನು ದೊರಕಿಸಿಕೊಂಡಿದ್ದಾಗಿದೆ. ಕೆಲವು ಅನಕ್ಷರಸ್ಥರಾಗಿರುವುದರಿಂದ ಕುಡಿತ, ಜೂಜು, ಸ್ತ್ರೀ ವ್ಯಾಮೋಹಿಗಳಾಗಿ ವಿಲಾಸಿ ಜೀವನಕ್ಕೆ ಮಾರುಹೋಗಿ ರಾಜಕೀಯದಿಂದ ದೂರ ಉಳಿದಿದ್ದಾರೆ. ಬಹುದೊಡ್ಡ ದೇಸಗತಿಗಳೆಂದು ಕರೆಸಿಕೊಳ್ಳುವ ದೇಸಗತಿ ಮನೆತನಗಳು ಒಡೆದಿವೆ. ಆಸ್ತಿ ಪಾಸ್ತಿ ವಿಭಾಗವಾಗಿ ಸಾಮಾನ್ಯ ಮನೆತನಗಳಂತೆ ಕಂಡುಬರುತ್ತವೆ. ದೇಸಾಯಿಗಳು ಬಂದರೆ ದೂರ ಸರಿದು ನಿಲ್ಲುವ ಕಾಲವಿತ್ತು. ಈಗ ದೇಸಾಯಿಗಳು ಬಂದರೆ ಅವರನ್ನು ನೋಡುವ ರೀತಿಯೇ ಬೇರೆಯಾಗಿದೆ. ದೇಸಾಯಿಗಳು ಮಾನವೀಯತೆಯನ್ನು ಕಳೆದುಕೊಂಡಿದ್ದರಿಂದ ಜನ ಸಾಮಾನ್ಯರಲ್ಲಿ ಬೇರೂರಿದ್ದ ತಮ್ಮ ಸಾಮ್ರಾಜ್ಯದ ಅಸ್ತಿತ್ವ ಕಳೆದುಕೊಂಡು ನಿರ್ನಾಮವಾಗಿ ಕ್ಷೀಣರಾಗಿ ಹೋಗಿದ್ದಾರೆ. ಅಧಿಕಾರ ಮತ್ತೊಬ್ಬರ ಕೈಗೆ ಸೇರಿದೆ. ಹೀಗೆ ಕಾಲನ ತುಳಿತಕ್ಕೆ ಸಿಕ್ಕು ಇಂದಿನ ಸಾಮಾನ್ಯ ಸ್ಥಿತಿಗೆ ಇಳಿದುದು ಕಂಡುಬರುತ್ತದೆ.

ದೇಸಗತಿ ದೊರೆಗಳಾದ ದೇಸಾಯಿ, ದೇಸಮುಖ, ನಾಡಗೌಡರ ನಾಮಧೇಯಗಳು ಅನೇಕ. ಅದರಲ್ಲಿ ಇವರು ಸಮಷ್ಠಿ ಜೀವನದ ಬದುಕನ್ನು ರೂಪಿಸಿಕೊಂಡಿದ್ದಾರೆ. ಬಹುತೇಕ ಇದಕ್ಕೆ ಸಂಸ್ಕಾರದ ಗಟ್ಟಿಬೇರು ಹಿಡಿದುಕೊಂಡಿದ್ದಾಗಿದೆ. ಆ ಸಂಸ್ಕಾರ ಹುಲುಸಾಗಿ ರೂಪುಗೊಂಡಾಗ ಮಾತ್ರ ಸಾರ್ಥಕ ಬದುಕು ಸಾಧ್ಯ. ಅಂಥ ಉತ್ಕೃಷ್ಟ ಸಂಸ್ಕಾರ ಹೊಂದಿದ ಕೆಲವರೇ ಸಾರ್ಥಕ ಜೀವಿಗಳಾಗಿದ್ದಾರೆ. ದೇಸಾಯಿಗಳು ಸಾಮಾನ್ಯ ಆದರ್ಶವ್ಯಕ್ತಿಯಂತೆ ಬಾಳುತ್ತಿದ್ದಾರೆ. ಹಾಗೆಯೇ ಸಾಮಾಜಿಕ ರಾಜಕೀಯ ಶೈಕ್ಷಣಿಕ ಕ್ಷೇತ್ರದಲ್ಲಿಯೂ ತಮ್ಮ ಅಚ್ಚಳಿಯದ ಪ್ರಭಾವ ಬೀರುವ ಅಚ್ಚುಮೆಚ್ಚಿನ ವ್ಯಕ್ತಿಯಾಗಿದ್ದಾರೆ.

ದೇಸಾಯಿಗಳ ನಿತ್ಯ ಜೀವನದ ಮೂಲ ತತ್ವಗಳಿಂದ ಪ್ರೀತಿ, ವಿಶ್ವಾಸ, ಸ್ನೇಹ, ಸಹಾಯ, ಸಹಕಾರ ಎಂಬ ಪಂಚತತ್ವಗಳನ್ನು ಅಳವಡಿಸಿಕೊಂಡು ಅದೇ ಧಾಟಿಯಲ್ಲಿಯೇ ಬಾಳುತ್ತಿದ್ದಾರೆ. ಶೈಕ್ಷಣಿಕ

ರಂಗದಲ್ಲಿ ಮುಂದುವರಿದವರಾಗಿದ್ದರೂ ವೃತ್ತಿಯಿಂದ ಒಕ್ಕಲುತನದ ಪ್ರಗತಿಗಾಗಿ ಶ್ರಮಿಸುತ್ತಿರುವರು. ಹಾಗೇ ಪ್ರವೃತ್ತಿಯಿಂದ ಅಪ್ಪಟ ಸಮಾಜ ಸೇವಕರು ಆಗಿದ್ದಾರೆ.

ಬಹುತೇಕ ದೇಸಾಯಿಗಳು ಗಾಂಧೀ ಅನುಯಾಯಿಗಳು. ಖಾದಿಯನ್ನು ಧರಿಸುತ್ತಲೇ ಬಂದವರು. ಇಂದಿನ ರಾಜಕೀಯ ಪೈಪೋಟಿಯಲ್ಲಿ ಒಂದೇ ಪಕ್ಷವನ್ನು ಬೆಂಬಲಿಸಿಲ್ಲ. ಕಾಲ ಬದಲಾದಂತೆ ಅಲುಗಾಡಿದ್ದಾರೆ. ಬಹುಪಾಲು ನಾಯಕರೂ ಕಾಲಕ್ಕನುಸರಿಸಿ ಆಡಳಿತ ಪಕ್ಷವನ್ನು ಬೆಂಬತ್ತಿದ್ದಾರೆ. ಖಾದಿ ಧರಿಸಿ ವಿವಿಧ ಹುದ್ದೆಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ. ಉದಾರಣೆಗೆ ಅಖಿಲ ಭಾರತ ಸಕ್ಕರೆ ಕಾರ್ಖಿನೆ ಅಧ್ಯಕ್ಷರಾದ ಗಲಗಲಿ ಯಡಹಳ್ಳಿ ದೇಸಾಯರು ಹೇಳಿ ಮಾಡಿಸಿದವರಾಗಿದ್ದಾರೆ. ಅದಕ್ಕೆ ಅಪವಾದವೆನ್ನುವಂತೆ ಕೆಲವು ದೇಸಾಯಿಗಳು ಸ್ಥಳೀಯ ಪಂಚಾಯಿತಿ ಸ್ಥಾನಕ್ಕೂ ಅನರ್ಹತೆ ಹೊಂದಿದ್ದು ಕಂಡುಬರುತ್ತದೆ.

ಒಟ್ಟಿನಲ್ಲಿ ಅಧಿಕಾರ ಹಸ್ತಾಂತರವಾದರೂ ದೊರೆತನ ಕಳೆದರೂ ಸತ್ಯ ಅಹಿಂಸೆ ಪಾಲಿಸುವುದರೊಂದಿಗೆ ಗ್ರಾಮೀಣ ಭಾಗದಲ್ಲಿ ಮುಖ್ಯ ವಕ್ತಾರರಾಗಿದ್ದಾರೆ. ಹಲವು ಅಧಿಕಾರದ ಹುದ್ದೆಗಳು ತಾವಾಗಿಯೇ ಇವರಿಗೆ ಒಲಿದು ಬಂದುದನ್ನು ಕಾಣಬಹುದಾಗಿದೆ.

ಬ್ರಿಟೀಶರ ಆಗಮನದಿಂದ ದೇಸಗತಿ ಮನೆತನಗಳು ಏಳು-ಬೀಳು ಕಾಣುವಂತಾಯಿತು. ಇಂಥ ಸ್ಥಿತ್ಯಂತರಕ್ಕೆ ಕಾರಣವೆಂದರೆ ಬ್ರಿಟೀಶರೊಂದಿಗೆ ಈ ದೇಸಗತಿಯವರು ಮಾಡಿಕೊಂಡ ಒಪ್ಪಂದಗಳು ಮತ್ತು ಒಡಂಬಡಿಕೆಗಳು ಎನ್ನಬಹುದು. ೧೯ನೇ ಶತಮಾನದಲ್ಲಾದ ಈ ಕರಾರುಗಳನ್ನು ಅನೇಕ ದಾಖಲೆಗಳು ಸಾಮಗ್ರಿಗಳು ಸ್ಪಷ್ಟೀಕರಿಸುತ್ತವೆ. ಆದರೆ ದೇಸಗತಿಯವರು ಈ ಆಧಾರಗಳನ್ನು ಎಲ್ಲಿಯೂ ದಾಖಲಿಸಿಲ್ಲ. ಈ ಒಡಂಬಡಿಕೆ, ಒಪ್ಪಂದಗಳು ತಮ್ಮ ಪ್ರತಿಷ್ಠೆ ಗೌರವಗಳನ್ನು ಕಡಿಮೆ ಮಾಡುತ್ತವೆ ಎಂಬ ಕಾರಣದಿಂದ ಅವುಗಳ ಗೌಪ್ಯತೆಯನ್ನು ಅವರು ರಕ್ಷಿಸಿಕೊಂಡು ಬಂದದ್ದೆ ಆಗಿದೆ. ಈ ಒಪ್ಪಂದ ಒಡಂಬಡಿಕೆಗಳು ಬ್ರಿಟೀಶರು ದೇಸಗತಿಗಳಿಗೆ ನೀಡಿದ ಸನದುಗಳಲ್ಲಿ ನಮೂದಾಗಿರುವುದನ್ನು ಹೀಗೆ ಉಲ್ಲೇಖಿಸಬಹುದಾಗಿದೆ. ಈ ದಾಖಲೆಗಳು ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಾಗಲಿ, ದೇಸಗತಿಗಳ ಬಗೆಗಿನ ಚರ್ಚೆಗಳಲ್ಲಾಗಲಿ ದಾಖಲಾಗಿಲ್ಲವೆಂದು ತೋರುತ್ತದೆ.

೭.೧.೨. ಒಡಂಬಡಿಕೆ

೧. ಇಲ್ಲಿಯವರೆಗೆ ಇದ್ದ 'ಇನಾಂ' ರೂಪದ ಆಸ್ತಿಗಳು-ಅಧಿಕಾರಗಳು ಮಾತ್ರ ಮುಂದುವರಿಯುವುದು.

೨. ತಮಗೆ ಇನ್ನು ಮುಂದೆ ಅವುಗಳನ್ನು ಜಾಹಾಗೀರ ಎಂಬ ರೂಪದಲ್ಲಿ ಪರಿಷ್ಕರಿಸಿ ನೀಡಲಾಗುವುದು.

೩. ಸರಕಾರಕ್ಕೆ ನಿಷ್ಠರಾಗಿರಬೇಕು.

೪. ಕಾಲಕಾಲಕ್ಕೆ ನೀಡಿದ ಒಡಂಬಡಿಕೆಗಳನ್ನು ಒಪ್ಪಿಕೊಳ್ಳಬೇಕು.

೫. ಒಪ್ಪಿಕೊಳ್ಳದೇ ಇದ್ದಲ್ಲಿ ಜಹಾಗೀರನ್ನು ಪರತ ಪಡೆಯಲಾಗುವುದು.

೬. ನಾಡಗೌಡರು, ದೇಸಾಯಿ, ದೇಸಮುಖರು ದೇಶಪಾಂಡೆಗಳು ಯಾರಿಗೂ ಉಂಬಳಿ ವಗೈರೆ ಕೊಡಬಾರದು.

೭. ಉಂಬಳಿ ಕೊಡುವುದಿದ್ದಲ್ಲಿ ಸರಕಾರಕ್ಕೆ ಕಾರಣ ತಿಳಿಸಬೇಕು.

೮. ದೇಸಗತಿ ಮೊಹರನ್ನು ಸರಕಾರದ ಅಪ್ಪಣೆ ಇಲ್ಲದೆ ಬಳಸಲು ಅನುಮತಿ ಇರುವುದಿಲ್ಲ.

೯. ಮೊಹರನ್ನು ಯಾರಿಗೂ ವರ್ಗಾವಣೆ ಮಾಡಕೊಡದು.

೧೦. ಆಡಳಿತದಲ್ಲಿ ಹೊಸದಾಗಿ ದಾಖಲೆಗಳು ಹುಟ್ಟಿಕೊಳ್ಳುವಂತಿಲ್ಲ. ಅವುಗಳಿಗೆ ಮೊಹರು ಮಾಡುವ ಹಾಗಿಲ್ಲ.

೧೧. ದೇಸಾಯಿ ಅಜ್ಞಾನವಂತ ನಿರಕ್ಷರಿ ಆಗಿದ್ದಲ್ಲಿ ಆಪ್ತಗಿರಿ (ನಕ್ತನೆಮ್ನೋಕ). ಪಡೆಯಲು ಸೂಚಿಸಿದೆ.

೧೨. ದೇಸಾಯಿಗಳು ಹೆಚ್ಚಿಗೆ ವಾಡೆಗಳನ್ನು ಕಟ್ಟಿಕೊಳ್ಳಲು ಅನುಮತಿ ಪಡೆಯಬೇಕು.

೧೩. ಭೂಮಿಗೆ ಸಂಬಂಧಿಸಿದಂತೆ ಅದರ ಸುರಕ್ಷತೆಯ ಬಗ್ಗೆ ದಾಖಲೆ ಪತ್ರದ ಮೂಲಕ ದೃಢೀಕರಿಸಲೇಬೇಕು.

೧೪. ತಮ್ಮ ಮನೆಯಲ್ಲಿಯ ಸರಕು ಸಾಮಾನುಗಳ ಲೆಕ್ಕ, ಬೆಳ್ಳಿ, ಬಂಗಾರದ ಲೆಕ್ಕ ಇಡಬೇಕು.(ಕೊಡಬೇಕು)[5]

ಹೀಗೆ ಅನೇಕ ಒಡಂಬಡಿಕೆಗಳನ್ನು ದೇಸಗತಿ ಮೇಲೆ ಹೇರಿದ್ದರಿಂದ ಅವೆಲ್ಲವನ್ನು ತಪ್ಪದೇ ಪಾಲಿಸುವಂತೆ ಆದೇಶವಿದ್ದುದರಿಂದ ಆದೇಶಗಳಂತೆ ಪಾಲಿಸಿಕೊಂಡು ಬಂದಿದ್ದಾರೆ. ಒಡಂಬಡಿಕೆಗೆ ತಕ್ಕಂತೆ ಒಪ್ಪಂದಗಳನ್ನು ಮಾಡಿಕೊಂಡಿದ್ದಾರೆ. ಇವೆಲ್ಲ ಅಂಶಗಳು ಸಮಕಾಲೀನ ಸ್ಥಿತಿಗತಿ ನಿರೂಪಿಸಲು ಸಹಾಯಕವಾಗಿವೆ. ಅಂದರೆ ೧೮ನೇ ಶತಮಾನದಿಂದ ಹಿಡಿದು ಸ್ವಾತಂತ್ರ್ಯ ನಂತರದವರೆಗೂ ಕ್ಷೀಣಿಸುತ್ತ ಬಂದಿದ್ದರಿಂದ ಸಮಕಾಲೀನ ಸ್ಥಿತಿ-ಗತಿಯಲ್ಲಿ ಜನಸಾಮಾನ್ಯರಿಗಿಂತ ಸಾಮಾನ್ಯರಾಗಿದ್ದುದು ಕಂಡುಬರುತ್ತದೆ.

ಸಾರರೂಪದಲ್ಲಿ ಸಂಗ್ರಹಿಸುವುದಾದರೆ, ಬ್ರಿಟೀಶ ರಿಂದ ದತ್ತವಾದ ಶಕ್ತಿಯ ರೂಪದಲ್ಲಿ 'ದೇಸಗತಿ'ಗಳ ಸ್ವಾಯತ್ ಶಕ್ತಿಯು ಪರಿವರ್ತಗೊಂಡಿದ್ದರಿಂದ ಕ್ರಮೇಣ ಒಂದೊಂದೇ ಒಡಂಬಡಿಕೆಗಳ ನಿಯಂತ್ರಣಗಳಿಗೆ ಒಳಪಟ್ಟು ಅವು ತಮ್ಮ ಮೂಲರೂಪದ 'ಸ್ವಯಂಭೂ-ಪ್ರಭುತ್ವ'ವನ್ನು ಕಳೆದುಕೊಳ್ಳುತ್ತ ಬಂದವು.

೭.೨. ಸ್ಥಿತ್ಯಂತರಗಳು

ಇಂದಿನ ಸಾಮಾಜಿಕ ಬದಲಾವಣೆಯ ವ್ಯವಸ್ಥೆಯಲ್ಲಿ ಸ್ಥಿತ್ಯಂತರಗಳು ದೇಸಾಯಿ ಮನೆತನಕ್ಕೊಂದು ವಿಶೇಷ ತಿರುವುಗಳಾಗಿವೆ. ಇಂಥ ತಿರುವುಗಳು ಇಡೀ ಸಮಾಜದ ವ್ಯವಸ್ಥೆ ಮೇಲೆ ಗಾಢವಾಗಿ ಪರಿಣಾಮ ಬೀರಿವೆ. ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ರಾಜಕೀಯ ಬದಲಾವಣೆಗಳು ದೇಸಗತಿಯ ಏಳು ಬೀಳುಗಳು ಇಡೀ ವ್ಯವಸ್ಥೆಯನ್ನು ಛಿದ್ರಗೊಳಿಸುತ್ತ ಬಂದಿದ್ದು ಕಂಡುಬರುತ್ತದೆ.

ಬಹುದೊಡ್ಡ ಸಂಸ್ಥಾನಿಕರಾಗಿ ರಾಜಸಂಸ್ಕೃತಿಯಲ್ಲಿ ಕಟ್ಟಡ, ನಿಶಾನೆ ಪಲ್ಲಕ್ಕಿ ಪಡೆದುಕೊಂಡು, ಗೌರವಾನ್ವಿತರಾಗಿ ಮೆರೆದ ದೇಸಾಯಿಗಳ ಏಳು ಬೀಳುಗಳು ಪೂರ್ವದಿಂದ ಬಂದಿದ್ದರೂ ಸ್ವಾತಂತ್ರ್ಯನಂತರ ರಾಜಕೀಯದ ಸನ್ನಿವೇಶಗಳು ದೊಡ್ಡ ಪೆಟ್ಟನ್ನು ಕೊಟ್ಟಿವೆ. ಕೆಲವು ಅಂಶಗಳಿಂದ ಸಂಸ್ಥಾನ ಊರ್ಜಿತಾವಸ್ಥೆಯನ್ನು ಪಡೆದಿದ್ದರೆ ಮತ್ತೊಂದು ಅಂಶದಿಂದ ಸಂಪೂರ್ಣವಿನಾಶದ ಅಂಚಿನತ್ತ ಹೋಗುವುದನ್ನು ಕಾಣಬಹುದಾಗಿದೆ. ಇಂಥ ಏಳು ಬೀಳುಗಳ ಆಯಾ ಕಾಲದ ಪರಿಸ್ಥಿತಿಗೆ ಸಂವೇದನೆಯಾಗಿ ಕಾರ್ಯನಿರ್ವಹಿಸುತ್ತವೆ.

ಅದಿಲಾಶಾಹಿ, ಪೇಶ್ವೆಗಳಂತ ಅನೇಕ ರಾಜರು, ಬ್ರಿಟೀಷ್ ಗೌವರನರ್‌ಗಳು ಹಾಗೂ ಕಂಪನಿ ಸರಕಾರ, ಬ್ರಿಟೀಷ ರಾಣಿಯರ ವಿವಿಧ ಧೋರಣೆಗಳು ಸ್ಥಿತ್ಯಂತರಗಳಿಗೆ ಮೂಲವಾಗಿದ್ದು ಕಂಡುಬರುತ್ತದೆ. ಅವುಗಳನ್ನು ಈ ರೀತಿ ಗುರ್ತಿಸಲಾಗಿದೆ.

೧. ರಾಜಕೀಯ ಕಾರಣಗಳು

೨. ಸಾಂಸ್ಕೃತಿಕ ಕಾರಣಗಳು

೨.೧. ಸಾಮಾಜಿಕ ಕಾರಣಗಳು

೨.೨. ಆರ್ಥಿಕ ಕಾರಣಗಳು

೨.೩. ಚಾರಿತ್ರಿಕ ಕಾರಣಗಳು

೨.೪. ಇತರೆ ಕಾರಣಗಳುಗಳು

೭.೨.೧. ರಾಜಕೀಯ ಕಾರಣ

ಸ್ವಾತಂತ್ರ್ಯಪೂರ್ವದಿಂದ ಹಿಡಿದು ಸ್ವಾತಂತ್ರ್ಯ ನಂತರದವರೆಗೆ (ಸನ್ ೧೮೧೮ ರಿಂದ ೧೯೫೦ರವರೆಗೆ) ರಾಜಕೀಯದ ವಿವಿಧ ಧೋರಣೆಗಳು ದೇಸಗತಿಯ ಏಳು ಬೀಳುಗಳಿಗೆ ಪ್ರಮುಖ ಕಾರಣವಾಗಿವೆ. ಅಂಥವುಗಳೆಂದರೆ ಪೇಶ್ವೆಗಳಾದಿಯಾಗಿ ಬ್ರಿಟೀಷರ ಒಡೆದು ಆಳುವ ನೀತಿ ಪ್ರಮುಖವಾಗಿದೆ. ಹಾಗೆ ತಪ್ಪು ದಾಖಲೆಗಳ ಸೃಷ್ಟಿ, ಪುಣೆಸಾತಾರ ಸರಕಾರದ ವಿಳಂಬ ನೀತಿ ಹಾಗೂ ಸ್ವಾತಂತ್ರ್ಯ ನಂತರದವರೆಗೆ ಭಾರತ ಸರಕಾರದ ಅನೇಕ ಕಾಯ್ದೆ ಕಾನೂನುಗಳು ಸ್ಥಿತ್ಯಂತರಗಳಿಗೆ ಪ್ರಮುಖವಾಗಿವೆ. ಇವೆಲ್ಲವುಗಳನ್ನು ಸಂಕ್ಷಿಪ್ತವಾಗಿ ಸಾದ್ಯಂತವಾಗಿ ವಿವೇಚಿಸಲಾಗಿದೆ.

ಬ್ರಿಟೀಷರು ಭಾರತದ ಎಲ್ಲ ಕ್ಷೇತ್ರಗಳಲ್ಲಿ ತಮ್ಮ ಪ್ರಭಾವದ ಮುದ್ರೆ ಒತ್ತಿದರು. ಅವರ ವಿಚಾರಗಳೆಲ್ಲವೂ ತಮ್ಮ ಆಡಳಿತದ ಅನುಕೂಲಕ್ಕಾಗಿ ಮಾರ್ಪಾಡುಗಳನ್ನು ಮಾಡಿದರು. ಅವೆಲ್ಲವೂ ಪರೋಕ್ಷವಾಗಿ ಒಳತಿಗೇನಲ್ಲ. ಅಧಿಕಾರ ಸ್ಥಾಪಿಸಿದ ಮೇಲೆ ಅಧಿಕಾರ ಬ್ರಿಟೀಶ ರಾಣಿಗೆ ವರ್ಗಾಯಿಸಿದ ಮೇಲೂ ರಾಜಕೀಯ ವಲಯದಲ್ಲಿ ಮಹತ್ತರ ಬದಲಾವಣೆ ಸಂಭವಿಸಿತು. ಅದು ಚಕ್ರಾಧಿಪತ್ಯಗಳ ರಾಜಮಹಾರಾಜರ ಪಾಳೆಗಾರರ ಹಾಗೂ ದೇಸಗತಿಯವರ ಮೇಲೆ ಆಗಿ ಅವೆಲ್ಲವನ್ನು ಬಗ್ಗಿ ಬಡಿವ

ನಿಟ್ಟಿನಲ್ಲಿ ಮಹತ್ತರ ಬದಲಾವಣೆ ತಂದರು. ಅದು ಫಲಿಸುವಂತೆ ಆಧುನಿಕ ದೃಷ್ಟಿಯಲ್ಲಿ ಎಲ್ಲ ಆಡಳಿತವನ್ನು ಒಂದೇ ಧ್ವಜದಡಿಯಲ್ಲಿ ತಂದರು. ಆಗ ಏಕರೂಪ ಆಡಳಿತ ಪಡೆಯಿತು. ಅವರು ನೀಡಿದ ಸನದುಗಳೇ ಇವೆಲ್ಲ ವಿವೇಚನೆಗೆ ಆಧಾರವಾಗಿ ನಿಲ್ಲುತ್ತದೆ. ಅವರ ರಾಜಕೀಯ ಕೆಲ ಅಂಶಗಳನ್ನು ಇಲ್ಲಿ ಸೂಚಿಸಬಹುದಾಗಿದೆ.

೧. ಗವರ್ನರ್ ಆಡಳಿತ
೨. ದತ್ತು ಮಕ್ಕಳಿಗೆ ಹಕ್ಕಿಲ್ಲ.
೩. ರೈತವಾರಿ ಮಹಲವಾರಿ ಜಾಗೀರದಾರರ ನೇಮಕ
೪. ಶಸ್ತ್ರಾಸ್ತ್ರ ನಿಶ್ಯಸ್ತ್ರೀಕರಣ
೫. ೧೮೫೭ರ ಮಹಾರಾಣಿ ಆಡಳಿತ
೬. ಟೆನನ್ಸಿ ಆಕ್ಟ್
೭. ಸಕ್ತ ಸೇಮ್ನಾಕ
೮. ಇತರೆ ಅಧಿಕಾರಿಗಳ ನೇಮಕ
೯. ವತನ ರದ್ದತಿ ಕಾಯ್ದೆ ಬಾಂಬೆ(೧೯೭೪)
೧೦. ಇತರೆ

೧. ಬ್ರಿಟೀಷ್ ಸರಕಾರವು ಆಯಾ ವಿಭಾಗದ ಪ್ರಾಂತಾಧಿಕಾರಿಗಳನ್ನು ನೇಮಕ ಮಾಡಿ ಅವರ ಅಧೀನತೆಯಲ್ಲಿ ನಡೆಸುವ ಆಡಳಿತ ರೂಪಗೊಂಡಿತು. ಲಾರ್ಡ್ ವೆಲ್ಲಿಸ್ಲಿಯ ಕಾಲದಿಂದ ಆರಂಭವಾದ ಕೇಂದ್ರಿಕೃತ ಆಡಳಿತ ವ್ಯವಸ್ಥೆ ಲಾರ್ಡ್ ಲಿಟ್ಟನ್ನನ ಕಾಲದವರೆಗೆ ಪೂರ್ಣ ಪ್ರಮಾಣದ ಹಂತ ರೂಪಿತಗೊಂಡಿದ್ದಾಗಿದೆ. ಹೀಗೆ ಇಡೀ ದೇಶ ಪ್ರಾಂತ, ವಿಭಾಗ, ಜಿಲ್ಲೆ, ತಾಲೂಕು, ಹೋಬಳಿ, ಗ್ರಾಮಗಳನ್ನೊಳಗೊಂಡ ವಿವಿಧ ಹಂತಗಳು ಆಡಳಿತ ಘಟಕಗಳಲ್ಲಿ ವಿಭಜಿತಗೊಂಡವು. ಇದು ಸಣ್ಣಪುಟ್ಟ ಸಂಸ್ಥಾನಗಳಿಗೆ ಬಲವಾದ ಹೊಡೆತ ನೀಡಿ ಅದರ ದಾರಿಯನ್ನು ದುರ್ಗಮಗೊಳಿಸಿದ್ದು ಮೇಲಿನ ವಿವೇಚನೆಯಿಂದ ಸ್ಪಷ್ಟವಾಗುತ್ತದೆ. ಅಲ್ಲದೆ ಈ ಕೆಳಗಿನ ಕೆಲವು ಸಂಗತಿಗಳು ಅವರ ಅಸ್ತಿತ್ವಕ್ಕೆ ಹೇಗೆ ಕಂಟಕಪ್ರಾಯವಾದವು ಎಂಬುದನ್ನು ವಿಶ್ಲೇಷಿಸಬಹುದು.

೨. ದತ್ತು ಮಕ್ಕಳಿಗೆ ಹಕ್ಕಿಲ್ಲ ಈ ಅಂಶವು ಪ್ರಮುಖವಾದುದೇ ಆಗಿದೆ. ಸಂಸ್ಥಾನದ ಉತ್ತರಾಧಿಕಾರಿಯಾಗುವುದರಿಂದ ಸಂಸ್ಥಾನದ ಉಜ್ವಲ ಬೆಳವಣಿಗೆ ಕಾರಣೀಭೂತವಾಗುತ್ತದೆ. ಸಂಸ್ಥಾನ ಮತ್ತು ದೇಸಗತಿಗಳ ಸಂಬಂಧಿಸಿದ ಉಲ್ಲೇಖ ಸಂಸ್ಥಾನವನ್ನು ಕಿತ್ತುಕೊಳ್ಳುವ ಸದುದ್ದೇಶದಿಂದಲೇ ಹುಟ್ಟಿಕೊಂಡ ಈ ಅಂಶವು ಸ್ವಾತ್ಯಂತರಕ್ಕೆ ಪ್ರಮುಖವಾದುದೇ ಆಗಿದೆ. ಬ್ರಿಟೀಶ ಮಹಾರಾಣಿ ಆಡಳಿತದ ಅವಧಿಯಲ್ಲಿ ದತ್ತು ಮಕ್ಕಳಿಗೆ ಹಕ್ಕನ್ನು ನೀಡಿದರೂ ಅವಸಾನದ ಹಂತ ತಲುಪಿದ ದೇಸಗತಿಗಳು ಏಳಿಗೆಯಾಗಲೇ ಇಲ್ಲ. ಅಷ್ಟೊತ್ತಿಗಾಗಲೇ ತಮ್ಮ ಅಸ್ತಿತ್ವ ಕಳೆದುಕೊಂಡದ್ದು ಕಂಡುಬರುತ್ತದೆ.

೩. ರೈತವಾರಿ ಮಹಲವಾರಿ ಪದ್ಧತಿ ಜಹಾಗೀರದಾರರ ನೇಮಕ ಇವು ನೇರವಾಗಿ ದೇಸಗತಿ ಆಡಳಿತದ ಮೇಲೆಯ ಪ್ರಯೋಗಾತ್ಮಕ ನೀತಿ ಸೂತ್ರ ಬಳಸಿದ್ದರಿಂದ ಭಿನ್ನ ಭಿನ್ನವಾಗಿ ನಡೆದುಬಂದವು. ಒಡೆದು ಆಳುವ ನೀತಿ ಸೃಷ್ಟಿಯಾಯಿತು. ಅಧಿಕಾರ ಮೊಟಕುಗೊಂಡಿತು. ಗ್ರಾಮಾಡಳಿತ ಹಿಡಿತ ತಪ್ಪಿತು. ದೇಸಾಯಿಗಳಿಂದ ಒಂದೊಂದೇ ಕೊಂಡಿಗಳು ಕಳಚಿಕೊಂಡು ವ್ಯಾಪಕವಾಗಿ ಹಬ್ಬಿರುವುದರಿಂದ ಸವಾಲೆಸಗುವ ತರದಲ್ಲಿ ಹುಟ್ಟಿಕೊಂಡಿದ್ದು ವಿಧಿತವಾಗುತ್ತದೆ. "೧೮೨೫ರಲ್ಲಿ ಮದ್ರಾಸಿನ ಗೌರ್ನರ ಜನರಲ್ ಆಗಿ ಬಂದ ಥಾಮಸ್ ಮನ್ರೋ ಕೆಲವು ಅಧಿಕಾರಗಳನ್ನು ರದ್ದುಗೊಳಿಸಿದನು. ನ್ಯಾಯಾಧೀಕರಣ ಮತ್ತು ಶಸ್ತ್ರ ಪಡೆಗಳ ಮೇಲಿನ ಅಧಿಕಾರ ಹಾಗೆ ಪ್ರತಿಹಳ್ಳಿ ಭೂಹಿಡುವಳಿಗಳನ್ನು ಅವನು ಜಹಾಗೀರದಾರರಲ್ಲಿ ಹಂಚಿದನು."[೩] ಅಸಂಖ್ಯಾ ಭೂ ಒಡೆಯರ ನೇಮಕ, ದೇಸಗತಿ ಪರಗಣದಿಂದ ನಡೆಯುವ ಕಂದಾಯ ವಸೂಲಾತಿ ಕಡಿಮೆ ಆಗಿ ಸರಕಾರವೇ ನೇರ ತೆರಿಗೆ ವಸೂಲಿ ಮಾಡುವಂತಾಯಿತು. ಇಂಥ ಅನೇಕ ಬದಲಾವಣೆಗಳು ಬಳಕೆಗೆ ಬಂದಾಗ ವ್ಯವಸ್ಥಿತವಾದ ಆಡಳಿತವು ಮುರಿದು ಬಿದ್ದಿತು. "ಕ್ರಿ.ಶ.೧೮೨೦ರ ವೇಳೆಗೆನೆ 'ಊಳುವವನೇ ಭೂ ಒಡೆಯ' ಎಂಬ ತತ್ವ ಅನುಷ್ಠಾನಕ್ಕೆ ಬಂದಿತು."[೪] ಕೆಲವು ಕಾಯ್ದೆ ಕಾನೂನುಗಳು ದೇಸಗತಿ ಮೇಲೆ ಗಧಾಪ್ರಹಾರ ನಡೆದು ಸಣ್ಣ ಪುಟ್ಟ ಸಂಸ್ಥಾನೀಕರಾದ ದೇಸಗತಿಗಳಿಗೆ ದುಃಸ್ವಪ್ನವಾಯಿತು. ೧೯೫೭ರಲ್ಲಿ ಕಾಯ್ದೆ ಜಾರಿಗೆ ಬಂದು ವತನಕಾರರು ಭೂಮಿ ಸೀಮೆ ಕಳೆದುಕೊಂಡರು. ಅದು "ಟೆನನ್ಸಿಯಾಕ್ಟ್"[೫] ಆಗಿತ್ತು. ಕೆಲವು ರೈತರು ಮುಖತ್ಯಾರರು ದೇಸಗತಿ ಕುಲಕರ್ಣಿಗಳು ಕೂಡ ಸ್ವತಂತ್ರರಾಗಲು ಕಾಲ ಕೂಡಿ ಬಂದಂತಾಗಿತ್ತು. ಸಂಸ್ಥಾನೀಕರಣಕ್ಕೆ ಬರಬೇಕಾದ ತೆರಿಗೆ ಕಡಿಮೆ ಆಗಿ ಆರ್ಥಿಕ ಭದ್ರತೆ ಕುಸಿಯಿತು. ಕೆಲವು ಭೂಮಿಗಳೂ ಸರಕಾರದ ಪಾಲಾದವು.

೫. ಕ್ರಿ.ಶ.೧೮೫೭ರ ನಂತರ ಮಹಾರಾಣಿ ಆಡಳಿತವು ದೇಸಗತಿಗೆ ಬಲವನ್ನು ತಂದು ಕೊಡುವಲ್ಲಿ ಆಧಾರವಾಗಿ ನಿಲ್ಲುತ್ತದೆ. ಮಹಾರಾಣಿಯ ನೀತಿ ಸೂತ್ರವು ದೇಸಗತಿ ಏಳ್ಗೆಬಯಸಿದಳು ನೇರವಾಗಿ ದೇಶಿಯ ಎಲ್ಲ ಸಂಸ್ಥಾನೀಕರ ಸಂಬಂಧ ಅವಳ ಅಧೀನಕ್ಕೊಳಪಟ್ಟಿತು. ಅವರ ವಿಶ್ವಾಸ ಪಡೆದ ಆಡಳಿತ ನಡೆಸಿದ್ದು ಕಂಡುಬರುತ್ತದೆ. ಹೀಗೆ ಹತ್ತಾರು ಅಂಶಗಳು ಕೂಡ ಮಹತ್ವಪೂರ್ಣವಾಗಿವೆ.

ಒಟ್ಟಾರೆಯಾಗಿ ಸಮಕಾಲೀನತೆಯಲ್ಲಿ ಏಳು ಬೀಳುವಿಗೆ ಈ ಮೇಲಿನ ಅಂಶ ಕಾರಣವಾಗಿರುವುದನ್ನು ಇಲ್ಲಿ ಗುರುತಿಸಿಕೊಂಡಿದೆ.

೬.೨.೩. ಸಾಮಾಜಿಕ ಕಾರಣಗಳು

ದೇಸಗತಿ ಏಳು ಬೀಳುಗಳಿಗೆ ಸಾಮಾಜಿಕ ಕಾರಣವೂ ಕೂಡ ಒಂದಂಶವಾಗಿದೆ. ಅದರಲ್ಲಿ ವಂಶಾಭಿವೃದ್ಧಿ ಕೊರತೆ ಎದ್ದು ಕಾಣುತ್ತದೆ. ಮಕ್ಕಳ ಭಾಗ್ಯಸಿಗದೇ ಇರುವುದು ದೊರೆತನಕ್ಕೊಂದು ನೋವಿನ

ಸಂಗತಿಯೆನಿಸಿತ್ತು. ದತ್ತಕ ಪಡೆದುಕೊಂಡು ಸ್ತ್ರೀ ಆಡಳಿತ ನಡೆದುದರಿಂದ ಅತಂತ್ರವಾಗಿ ಸುಸಂಬಂಧವಲ್ಲದೆ ನಡೆಯುವುದರಿಂದ ಅನ್ಯರ ಕಾರಭಾರಗಳಿಂದ ಬದಲಾವಣೆ ಆಗುತ್ತಿತ್ತು. ದತ್ತಕ ಮಗನು ಪೂರ್ಣಾವಸ್ಥೆಗೆ ಬರುವವರೆಗೂ ದೇಸಾಯಣಿ ಆಡಳಿತ ನಡೆಸುತ್ತಿದ್ದಳು. ಇಂಥ ಅನೇಕ ಒಳ ಕಾರಣಗಳಿಂದ ದೇಸಗತಿ ಆಡಳಿತ ಅವಸಾನದತ್ತಸಾಗಿದ್ದು ಕಂಡುಬರುತ್ತದೆ.

೭.೨.೩. ಆರ್ಥಿಕ ಕಾರಣಗಳು

ದೇಸಗತಿಯ ಏಳುಬೀಳುಗಳಿಗೆ ಇದು ಒಂದು ಪ್ರಮುಖ ಅಂಶವಾಗಿದೆ. ದೇಸಗತಿಯ ಉಚ್ಛ್ರಾಯತೆಗೆ ಆರ್ಥಿಕ ಅಂಶವೇ ಪ್ರಮುಖವಾಗಿರುವುದರಿಂದ ಬರಬೇಕಾದ ಕಂದಾಯ ಬರದೇ ಇರುವುದು. ಉದಾರಿ ಅತೀ ಉದಾರಿ ಆಗಿರುವುದು. ಬರಗಾಲ ಇತ್ಯಾದಿ ಅಂಶಗಳು ಆರ್ಥಿಕ ಹಿನ್ನಡೆಗೆ ಕಾರಣಗಳಾಗಿವೆ. ಇವುಗಳ ಮುಖೇನ ಗಮನಿಸಿದಾಗ ಆರ್ಥಿಕ ಭದ್ರತೆ ಕುಸಿದು ದೇಸಗತಿ ತನ್ನ ಸ್ವರೂಪವನ್ನು ಬದಲಾಯಿಸಿಕೊಂಡುದು ಕಂಡುಬರುತ್ತದೆ.

೭.೨.೪. ಚಾರಿತ್ರಿಕ ಕಾರಣಗಳು

ಎಲ್ಲ ಕಾರಣಗಳಂತೆ ಈ ಕಾರಣವು ಕೂಡ ಮಹತ್ವಪೂರ್ಣ ಅಂಶವಾಗಿದೆ. ದೇಸಾಯಿಗಳಲ್ಲಿರುವ ಗುಣ ದೋಷಗಳು ಅಪಮೌಲ್ಯಗಳು ಇಡೀ ದೇಸಗತಿಗೆ ಒಂದು ಕಳಂಕ ಪ್ರಾಯವಾದ ಕಪ್ಪು ಚುಕ್ಕೆ ಇಟ್ಟಂತೆ. ವಿಲಾಸಿಗಳಾಗಿ, ಸ್ತ್ರೀ ವ್ಯಾಮೋಹಿಗಳಾಗಿ, ಹೆಂಡ, ಜೂಜು ಇತ್ಯಾದಿ ಅಂಶಗಳನ್ನು ತಲೆಯಿಂದ ತಲೆಗೆ ಬಳುವಳಿ ಬಂದ ಹಾಗೆ ಪಾಲಿಸಿಕೊಂಡು ಬಂದಿದ್ದಾರೆ. ಇವೆಲ್ಲ ಚಾರಿತ್ರಿಕ ಅಂಶಗಳು ದೇಸಗತಿ ಏಳು ಬೀಳಿಗೆ ಪ್ರಮುಖವಾಗಿ ಕಂಡುಬರುತ್ತವೆ. ಜಮಖಂಡಿ ತಾಲೂಕಿನ ಬಿದರಿ ದೇಸಗತಿಯ ಒಬ್ಬ ದೇಸಾಯಿಣಿಯಮನವ್ವ, ಒಂದು "ದಿನದ ೨೪ ಗಂಟೆಗಳ ಕಾಲ ಹೆಂಡ ಕುಡಿದು ಇಡೀ ಸಂಸ್ಥಾನವನ್ನೇ ಹಾಳು ಮಾಡಿದ್ದು ಆ ಮನೆತನದ ಹಿರಿಯ ತಲೆಮಾರಿನವರಿಂದ ತಿಳಿದುಬರುತ್ತದೆ".[೬] ಜಾಲಿಹಾಳ ದೇಸಗತಿಯೂ ಹಾಳಾದದ್ದು ಜನಮನದಲ್ಲಿ ಇನ್ನೂ ಹಸಿರಾಗಿಯೇ ಉಳಿದಿದೆ. ದೇಸಾಯಿಗಳ ಅಪವಿತ್ರ ನಡತೆಯಿಂದ ದೇಸಗತಿ ಅಧೋಗತಿಗೆ ಹೋಗಲು ಚಾರಿತ್ರಿಕ ಕಾರಣವು ಬಹುಪಾಲು ಎದ್ದುಕಾಣುತ್ತದೆ.

ಒಟ್ಟಿನಲ್ಲಿ ಹೇಳಬೇಕೆಂದರೆ ಮೌಲ್ಯ ಅಪಮೌಲ್ಯಗಳು ಒಂದು ಸಂಸ್ಥಾನದ ಸ್ಥಿತ್ಯಂತರಕ್ಕೆ ಕಾರಣೀಭೂತವಾಗಿದ್ದು ಅವುಗಳನ್ನು ಅರಿತು ನಡೆಯಬೇಕಾದುದು ಮಾನವನ ಲಕ್ಷಣವಾಗಿದೆ. ಮಾನವೀಯತೆಯನ್ನು ಮರೆಯುವ ಗುಣಸ್ವಭಾವವು ಹೆಂಡಕುಡಿದು ಮಾನಸೀಕ ಸ್ವಾಸ್ಥ್ಯಕಳೆದುಕೊಂಡು ಸದಾ ಅಮಲೇರಿಯೇ ದರ್ಪದ ತಳಹದಿಯ ಮೇಲೆ ನಿಂತಾಗ ಮಾನವೀಯತೆ ಮರೆತು ಹೋಗುವುದು ಅನಿವಾರ್ಯ ಹಾಗಾಗಿ ದೇಸಾಯಿಗಳೆಲ್ಲ ಚಾರಿತ್ರಾಹೀನರಾಗಿ ಮರೆತು ಹೋಗುವುದು ಸ್ವಾಭಾವಿಕ.

ದೇಸಾಯಿಗಳೆಲ್ಲ ಚಾರಿತ್ರಹೀನರಾಗಿ ಇಡೀ ಸಂಸ್ಥಾನವನ್ನೆ ಹಾಳುಮಾಡಿದ್ದು ಮೇಲಿನ ವಿವೇಚನೆಯಿಂದ ತಿಳಿದುಬರುತ್ತದೆ. ಇದಕ್ಕೊಂದು ಉದಾಹರಣೆಯಾಗಿ ಈ ಪದ್ಯವು ಜನಪದ ನುಡಿಯಲ್ಲಿ ಹಾಸುಹೊಕ್ಕಾಗಿದೆ.

"ಸಂತಿ ಸೊಳೇರ ಸಂಗ
ತರವಲ್ಲೊ ಮಂಗ
ದೇಶದ ದೇಸಾಯರೆಲ್ಲ ಆಗ್ಯಾರೋ ಹುಚಮಂಗ
ಸೂಳಿ ಸೊಬತಿ ಮಾಡಿ
ಸಿಂದಿ ಸರಾಯಿ ಕುಡಿದು
ಗಾಂಜಾ ತಂಬಾಕ ಸೇದಿ
ಆದೆಲ್ಲೊ ಮಂಗ ||ಪ|| ಸಂತಿ ಸೊಳೇರ ಸಂಗ.....

ಒಡ್ಡಿನ ಹೊಲ ಹೋಯ್ತು
ದೊಡ್ಡ ಮನೆ ಹೋಯ್ತು
ಮಡ್ಡಿ ಹೊಲ ನಿನಗ ಬಡ್ಯಾಗ ಉಳದೀತು(೨) ಸಂತಿ ಸೂಳೇರ ಸಂಗ || ಪ ||
ಕೂಳ ಕೂಳ ಏನನತೀದಿ
ಹೋಳಿಗೆ ಉಣತಾಳ ಸೂಳಿ
ಜೋಳಿಗೆ ಹಾಕೊಂಡು ನೀನು
ತಿರಗೋ ದಾಸಯ್ಯ (೩) ಸಂತಿ ಸೂಳೇರ ಸಂಗ..... || ಪ ||"[2]

ಇಂಥ ಜನಪದ ಹಾಡುಗಳು ಅಂದಿನ ಸ್ಥಿತಿಗತಿಯನ್ನು ಹೇಳುವಲ್ಲಿ, ಸೂಚಿಯಾಗಿ ನಿಲ್ಲುತ್ತವೆ. ಜನ ಸಂಸ್ಕೃತಿಯ ಆಧಾರವಾಗಿರುವ ದೇಸಾಯಿಗಳೇ ಚಾರಿತ್ರಹೀನರಾಗಿರುವಾಗ ಗೌರವ ಪ್ರತಿಷ್ಠೆಗಳು ಮೇಲು ನೋಟಕ್ಕೆ ಕಂಡುಬಂದರೂ ಒಳಗೊಳಗೆ ತಿರಸ್ಕಾರದ ಭಾವನೆ ಇರುತ್ತವೆ. ಇನ್ನೂ ಮುಂದುವರೆದಂತೆ.

"ಏಕಲಾಕ ಐದು ಒಂದೇ ಮಾತರಂ
ಲೋಕದಾಗ ನಡೀತು
ಕರ್ಮ ಹೆಚ್ಚಿ ಧರ್ಮ ಉಳಿದು
ಲೋಕ ನಡಿದು ಬಂತು.....
ಗೌಡ ಕುಲಕರ್ಣ್ಯಾರು ದೇಸಾಯಿ ದೇಸಪಾಂಡ್ಯಾರು
ಹಕ್ಕುಯಾವಲ್ಲೀ ಉಳೀತು!
ಗೌಡಕಿ ದರ್ಪ ನಡೆಸಬ್ಯಾಡ ಗೌಡಪ್ಪ
ಮುಂದೇ ಆಗತೀದಿ ಚೌಡಕಿ ಜೋಗಪ್ಪ"[೮]

ಹೀಗೆ ಜನಪದರು ಎಚ್ಚರಿಕೆ ಮಾತುಗಳನ್ನು ನೀಡಿದ್ದಾರೆ. ದೇಸಾಯಿಗಳ ಚಾರಿತ್ರಿಕ ಘಟನೆಗಳನ್ನು ಕಂಡರಿಯದಿದ್ದರೂ, ಮರೆಯಾಗಿದ್ದರೂ ಕೂಡ ಜನಪದರು ಅವುಗಳನ್ನು ನುಡಿಗಟ್ಟುಗಳಲ್ಲಿ

ಸಂಗ್ರಹಿಸಿಟ್ಟಿದ್ದಾರೆ. ಚರಿತ್ರೆಯನ್ನು ಕಟ್ಟುವಲ್ಲಿ ಇಂಥ ಆಕರಗಳ ಅಂಶಗಳು ಅಗತ್ಯವಾಗಿರುವುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. 'ಇಂಥಾ ಅಂಶಗಳನ್ನು ಅಲ್ಲಗಳೆಯಲು ಬರುವಂತಿಲ್ಲ.

ಒಟ್ಟಾರೆಯಾಗಿ ಚಾರಿತ್ರಿಕ ಅಂಶಗಳಾಗಲಿ, ರಾಜಕೀಯ ಅಂಶಗಳಾಗಲಿ ಸ್ಥಿತ್ಯಂತರಕ್ಕೆ ಮೆಟ್ಟಿಲುಗಳಾಗಿ ಹಂತಹಂತವಾಗಿ ಏಳು ಬೀಳುಗಳನ್ನು ಕಾಣುತ್ತ ಹೋಗುತ್ತವೆ. ಇದಕ್ಕೆ ಅಪವಾದವಿರುವ ದೇಸಾಯಿಗಳಿರುವುದರಿಂದ ಎಲ್ಲರನ್ನು ಒಂದೇ ಸಾಲಿನಲ್ಲಿ ನಿಲ್ಲಿಸಲಿಕ್ಕಾಗದು, ಎಲ್ಲರನ್ನೂ ಇಂಥ ಕಟಕಟೆಗೆ ಎಳೆಯಲಾಗದು. ವೈಭವಪೂರ್ಣ ಆಳ್ವಿಕೆ ಮಾಡಿ ದೊರೆತನಕ್ಕೆ ಹೇಳಿ ಮಾಡಿಸಿದಂತವರೂ ಇದ್ದಾರೆ ಮುಕುಟಪ್ರಾಯವಾಗಿ ಮೆರೆದ ದೇಸಗತಿಯವರೂ ಇಲ್ಲಿದ್ದಾರೆಂಬುದು ಹೆಮ್ಮೆಯ ವಿಷಯ. ಹಾಗಾಗಿ ಜನಸಂಸ್ಕೃತಿಯ ನೇತಾರರು ಅಧ್ಯಯನಕ್ಕೆ ಆಕರಗಳಾಗಿದ್ದಾರೆ. ಇಂಥವರನ್ನು ಜನ ಸಮುದಾಯವು ಹಾಡಿ ಹೊಗಳುತ್ತದೆ. ಗೌರವದಿಂದ ಕಾಣುತ್ತಾರೆ. ಬದಲಾದ ರಾಜಕೀಯ ದಳ್ಳುರಿಯಲ್ಲಿ ಮತ್ತೆ ದೇಸಾಯಿಗಳ ಒಳ್ಳೆ ಆಡಳಿತವನ್ನು ಜನಬಯಸಿದ್ದು ಕಂಡುಬರುತ್ತದೆ. ಅಂಥ ಅವಕಾಶವನ್ನು ಕಾಣಲು ಜಾತಕಪಕ್ಷಿಯಂತೆ ಕಾಯ್ದು ಕುಳಿತುಕೊಳ್ಳಬೇಕಾಗಿದೆ.

ಅಡಿಟಿಪ್ಪಣಿಗಳು

೧. ಸಂದರ್ಶನ ಶ್ರೀಮತಿ ಲಕ್ಷ್ಮಿಬಾಯಿ ದೇಸಾಯಿ ಬಿದರಿ, ವಯಸ್ಸು ೭೦, ಸಾಕೀನ ಅವರಾದಿ ಜಿಲ್ಲೆ ಬೆಳಗಾವಿ. ಈ ದೇಸಗತಿಯ ಬಾತುಬಂದರಲ್ಲಿ ಹಾಗೂ ಎರಡನೇ ಸಂಬಂಧದಲ್ಲಿ ಸಾಕುಮಕ್ಕಳಲ್ಲಿ ದೇಸಗತಿ ಹಂಚಿಹೋಗುತ್ತದೆ. ಶ್ರೀಮತಿ ಲಕ್ಷ್ಮೀಬಾಯಿಯು ತನಗೆ ಬಂದಂತಹ ಆಸ್ತಿ ಮಾರಿಕೊಂಡು ಅವರಾದಿಗೆ ಹೋಗುತ್ತಾಳೆ. ಅಳಿದುಳಿದ ಭಾಗದಲ್ಲಿ ಬುಡ್ಡರು ಮನೆ ಕಟ್ಟಿಕೊಂಡಿದ್ದಾರೆ ಎಂದು ಅವರ ಹೇಳಿಕೆಯಿಂದ ತಿಳಿದುಬರುತ್ತದೆ. ಹಾಗೇ ಕಣಬುರಲ್ಲಿ ಇದ್ದ ಆಸ್ತಿಯಲ್ಲಿ ಕೂಡ ಹಸ್ತಕ್ಷೇಪ ನಡೆದು ಚಪ್ಪರದ ಮನೆಯಲ್ಲಿ ವಾಸಿಸುವುದನ್ನು ಕ್ಷೇತ್ರಕಾರ್ಯದಲ್ಲಿ ಕಂಡಿದ್ದೇನೆ.

೨. ಮೋಡಿ ದಾಖಲೆ ಸನದು. ಕನ್ನಡಕ್ಕೆ ಅನುವಾದ ಲಕ್ಷ್ಮಪ್ಪ ಡಂಗಿ, ವಯಸ್ಸು ೬೦, ಮುಧೋಳ. ನಾಡಗೌಡರಿಗೆ, ದೇಸಾಯಿಗಳಿಗೆ ನೀಡಿದ ಸನದುಗಳಲ್ಲಿ ವಿವರಣೆ ಸಿಗುತ್ತದೆ. ಅವೆಲ್ಲವುಗಳನ್ನು ಕ್ರೂಢೀಕರಿಸಲಾಗಿದೆ. ಅಲ್ಲದೆ ಆದಿಲ್‌ಶಾಹಿಗಳ ಕೆಲವು ಸನದುಗಳಲ್ಲಿ ಕೆಲವೊಂದು ಅಂಶಗಳು ಕೂಡ ಇದರಲ್ಲಿ ಸೇರಿಕೊಂಡಿರುತ್ತವೆ.

೩. ಭಾರತ ಇತಿಹಾಸ, ೧೯೯೮, ಪು.೩೫೦

೪. ಅದೇ, ಪು.೩೫೧

೫. ಬಾಂಬೆ ಆಕ್ಟ್ xxxix ನಂ.೧೯೫೪ ದಿ ಬಾಂಬೆ ಮರ್ಜ ಟೇರಿಟರಿಜ್ ಆ್ಯಂಡ್ ಎರಿಯಾಸ್ ಜಹಾಗೀರ ಅಬಾಲಿಷನ್ ಆಕ್ಟ್ ೧೯೫೩, ಗೌರ್ನಮೆಂಟ್ ಆಫ್ ಮಹಾರಾಷ್ಟ್ರ ಗ್ಯಾಜೆಟಿಯರ್

೬. ಸಂದರ್ಶನ ಯಮನವ್ವದೇಸಾಯಿ, ಗುಳಬಾಳ, ವಯಸ್ಸು ೫೦, ಗುಳಬಾಳ

೭. ಸಂದರ್ಶನ, ಶಿವಣ್ಣಮಾಗಿ ವಯಸ್ಸು ೩೫. ಭಜನೆ ಕಲಾವಿದ ಹರದೊಳ್ಳಿ, ಗುಳೇದಗುಡ್ಡ

೮. ಅದೇ,

ಅಧ್ಯಾಯ ೮

ಅಧ್ಯಯನದ ಫಲಿತಗಳು

೮

ಅಧ್ಯಯನದ ಫಲಿತಗಳು

ಬಾಗಲಕೋಟೆ ಜಿಲ್ಲೆಯ ದೇಸಗತಿ ಮನೆತನಗಳ ಕುರಿತು ಈ ಪ್ರಬಂಧದಲ್ಲಿ ಅಭ್ಯಸಿಸಲಾಗಿದೆ. ಈ ಸಂದರ್ಭದಲ್ಲಿ ದೇಸಗತಿಯ ಉಗಮ, ವ್ಯಾಪ್ತಿ ಹಾಗೂ ಬಗೆಗಳ ವರ್ಗೀಕರಣವನ್ನು ಪ್ರಮುಖವಾಗಿರಿಸಿಕೊಂಡು ದೇಸಗತಿ ಮನೆತನಗಳು ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಸಾಹಿತ್ಯಕವಾಗಿ ನೀಡಿದ ಒಟ್ಟು ಕೊಡುಗೆಗಳನ್ನು ವಿಶೇಷವಾಗಿ ವಿಶ್ಲೇಷಣೆಗೆತ್ತಿಗೊಳ್ಳಲಾಗಿದೆ. ಇದರ ಜೊತೆಗೆ ಈ ಮನೆತನಗಳ ಆಡಳಿತ ಸ್ವರೂಪವನ್ನು ಅದರ ವಿವಿಧ ಆಯಾಮಗಳ ನೆಲೆಯಲ್ಲಿ ಪರಿಚಯಿಸಲಾಗಿದೆ. ಅಧಿಕಾರಿಗಳು, ಸೇತಸನದಿಗಳು, ತಳವಾರ, ವಾಲೀಕಾರ, ನಂತರದಲ್ಲಿ ಹುಟ್ಟಿಕೊಂಡು ಬಂದ ಪೋಲಿಸ್ ಪಾಟೀಲ ಮನೆತನಗಳ ವಂಶಪಾರಂಪರ್ಯವನ್ನು ಪರಿಚಯಿಸಲಾಗಿದೆ. ಉತ್ತರಾಧಿಕಾರಿ ನೇಮಕ ಅದರ ವಿಧಿ ವಿಧಾನ, ದೇಸಗತಿ ಲಾಂಛನ, ಮುದ್ರೆಗಳ ಕುರಿತು ವಿವರಿಸಲಾಗಿದೆ. ಹಾಗೆ ಈ ಮನೆತನಗಳಿಗೆ ಸಂಬಂಧಿಸಿದಂಥ ಐತಿಹ್ಯಗಳನ್ನು ಪರ್ಷಿಯನ್ ದಾಖಲೆಗಳನ್ನು ಮೋಡಿ ಲಿಪಿಯಲ್ಲಿ ಬರೆವ ದಾಖಲೆಗಳನ್ನು ಅನುವಾದಿಸಿಕೊಂಡು ಅವುಗಳಲ್ಲಿ ಅಡಗಿರುವ ಸತ್ಯಾಂಶವನ್ನು ಸೂಕ್ಷ್ಮ ಅಂಶಗಳೊಂದಿಗೆ ಬಳಸಿಕೊಳ್ಳಲಾಗಿದೆ. ಅವರ ನ್ಯಾಯಾಧೀಕರಣವನ್ನು ಪೋಲಿಸ್ ಕಾಯ್ದೆಯಂತಹ ಅಂಶಗಳನ್ನು ಕೂಡ ಇಲ್ಲಿ ಒತ್ತುಕೊಟ್ಟು ಹೇಳಲಾಗಿದೆ.

ರಾಜ ಮಹಾರಾಜರಂತೆ ಬದುಕಿ ಬಾಳಿದ ಇವರ ಕಟ್ಟಡ ಶೈಲಿ(ವಾಡೆ) ಇಲ್ಲಿಯವರೆಗೆ ಅಲಕ್ಷಿತವಾಗಿದೆ. ಇಂಥ ಕಟ್ಟಡ ಕುರಿತು ಹೆಚ್ಚಿನ ಒತ್ತುಕೊಟ್ಟು ಅದರ ಒಳ ಹೊರಗಿನ ಕಲಾತ್ಮಕ ಕುಸುರಿ ಕಲೆಯನ್ನು ಕೂಡ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಹಾಗೆ ಸ್ಥಳನಾಮ, ಕುಲನಾಮ ಹಾಗೂ ವ್ಯಕ್ತಿನಾಮಗಳೂ ಇಡೀ ದೇಸಗತಿಯ ಭೌಗೋಳಿ ಕ್ಷೇತ್ರದ ಮೇಲೆ ಹೆಚ್ಚು ಬೆಳಕು ಚೆಲ್ಲುತ್ತವೆ. ಇದುವರೆಗೆ ಇಂಥ ಪ್ರಯತ್ನ ನಡೆದಿರುವುದಿಲ್ಲ. ಇದು ಮೊದಲ ಪ್ರಯತ್ನವೆಂದು ಭಾವಿಸುತ್ತೇನೆ. ಕೊನೆಯಲ್ಲಿ ಈ ದೇಸಗತಿ ಮನೆತನಗಳ ಒಟ್ಟಾರೆಯಾದ ಸಮಕಾಲೀನ ಸ್ಥಿತಿ-ಗತಿಗಳನ್ನು ವರ್ತಮಾನದಲ್ಲಿ ನಿಂತು ಗಮನಿಸಿ ಅವುಗಳ ಸ್ಥಿತಿ-ಗತಿಯನ್ನು ಕಂಡುಕೊಳ್ಳಲಾಗಿದೆ. ಹೀಗೆ ಬಹುನೆಲೆಯನ್ನು ಕೈಕೊಂಡ ಈ ದೇಸಗತಿಗಳ ಅಧ್ಯನದ ಫಲಿತಗಳನ್ನು ಈ ಕೆಳಗಿನಂತೆ ದಾಖಲಿಸಬಹುದು.

ಅಧ್ಯಯನಕ್ಕೊಳಪಡಿಸಿದ ದೇಸಗತಿ ಮನೆತನಗಳು ಬೇರೆ ಬೇರೆ ಜಾತಿ ಮತ-ಧರ್ಮಗಳಿಗೆ ಒಳಪಟ್ಟಿರುತ್ತವೆ. ಮಾನವ ಕಲ್ಯಾಣಕ್ಕಾಗಿ ದುಡಿಯುವ ಸಾಮಾಜಿಕ ಅಭಿವೃದ್ಧಿಗೆ ತನ್ನ ನೀತಿ ಸೂತ್ರಗಳನ್ನು ಅಳವಡಿಸಿಕೊಂಡಿದ್ದರ ಆಶಯಗಳು ಗಾಢವಾಗಿ ಗೋಚರಿಸುತ್ತವೆ.

ದೇಸಗತಿ ಅಧ್ಯಯನದ ಒಟ್ಟು ಸ್ವರೂಪವು ಪರಂಪರೆಯ ನಿಷ್ಠೆ ಮತ್ತು ಪರಿವರ್ತನಾ ಶಕ್ತಿ ಇವೆರಡರಲ್ಲಿ ನಿಹಿತವಾಗಿವೆ. ದೇಸಗತಿಗಳು ಹೆಚ್ಚು ಪರಂಪರಾ ನಿಷ್ಠವಾದವುಗಳೇ ಆಗಿವೆ. ಈ ಪರಂಪರಾ ನಿಷ್ಠೆ ಅವುಗಳ ಅಸ್ತಿತ್ವದ ಅಗತ್ಯವೂ ಆಗಿದೆ.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ದೇಸಗತಿಗಳು ಒಂದು ವಿಶಿಷ್ಟ ಬಗೆಯ ಸಂಕಟವನ್ನು ಅನುಭವಿಸಿವೆ. ಎರಡು ಶತಮಾನಗಳ ಕಾಲ ಆಳಿದ ಬ್ರಿಟೀಶರು ತಮ್ಮ ಆಡಳಿತದ ಬೇರುಗಳನ್ನು ಭಾರತದ ಗ್ರಾಮಗಳಿಗೂ ಸಿಲುಕಿಸಿದಾಗ ಆ ಬ್ರಿಟೀಷರು ರೂಪಿಸಿದ ಒಂದು ವ್ಯವಸ್ಥೆಯಲ್ಲಿ ಒಂದು ಭಾಗವಾಗಿ ದೇಸಗತಿಗಳು ತಮ್ಮ ಪ್ರಭುತ್ವದ ಅಸ್ತಿತ್ವವನ್ನು ಪಡೆದಿದ್ದವು. ಹೀಗಾಗಿ ಮುಂದೆ ಭಾರತೀಯ ಜನಮಾನಸದಲ್ಲಿ ಅನೇಕ ಚಾರಿತ್ರಿಕ ಶೈಕ್ಷಣಿಕ ಕಾರಣಗಳಿಂದಾಗಿ ಹುಟ್ಟಿದ ಸ್ವಾತಂತ್ರ್ಯದ ಅಂದೋಲನದಲ್ಲಿ ದೇಸಗತಿಗಳು ನೇರವಾಗಿ ಬ್ರಿಟೀಶರ ವಿರುದ್ಧ ಹೋರಾಡುವುದು ಕಷ್ಟವೆ ಆಗಿತ್ತು. ಆದರೆ ಈ ಮೊದಲೇ ಹೇಳಿದಂತೆ ದೇಸಗತಿಗಳ ಧರ್ಮೋಸಾಂಸ್ಕೃತಿಕ ಹಿನ್ನೆಲೆಯಲ್ಲಿ ಪರಂಪರಾ ನಿಷ್ಠೆ ಪ್ರಭಲವಾದುದರಿಂದ ಅದರಲ್ಲಿಯೂ ಕೂಡ ತಮ್ಮ ದೇಶ, ತಮ್ಮ ಗತಿ, ತಮ್ಮ ಭಾಷೆ, ತಮ್ಮ ಜನ ಈ ಬಗೆಯ ಒಂದು ಭಾರತೀಯತೆಯ ಪರಿಕಲ್ಪನೆಯ ಗಾಢ ಎಚ್ಚರವನ್ನು ಕಾಣುತ್ತದೆ. ಅಂದಿನ ಅಂದರೆ ವಿಜಯನಗರ ಪತನದ ನಂತರ ಒಬ್ಬರ ಮೇಲೊಬ್ಬರು ಏರಿ ಬರುವಾಗಲೂ ಇಂತಹ ಪರಂಪರಾ ನಿಷ್ಠೆ ಇತ್ತು. ಇದಕ್ಕೆ ಸಾಕ್ಷಿಯಾಗಿ ತಮ್ಮ ಜನರ ರಕ್ಷಣೆಗಾಗಿ ಗಡಗಳನ್ನು ಕಟ್ಟಿಕೊಂಡದ್ದು ಇದೆ. ಬ್ರಿಟೀಶರ ಪರವಾಗಿ ಹೋರಾಡಿದರೆ ತಮ್ಮ ಸ್ವಂತದ ಅಸ್ತಿತ್ವವೇ ನಾಶ! ಹೋರಾಡದಿದ್ದರೆ ತಮ್ಮ ಪರಂಪರಾನಿಷ್ಠೆಗೆ ಪ್ರಚಂಡ ನೋವು ಈ ದ್ವಂದ್ವ ಸಂಕಟದಲ್ಲಿ ಕೊನೆಗೂ ದೇಸಗತಿಗಳು ಬಹುಪಾಲು ನಿಷ್ಠರಾಗಿ ಉಳಿದದ್ದು, ಅಸಲಿ ಭಾರತೀಯರಿಗೆ, ಈ ಅರ್ಥದಲ್ಲಿ ದೇಸಗತಿಗಳು ದೇಶಿವಾದದ ಪರಿಕಲ್ಪನೆಗೆ ಪೂರಕವಾಗಿ ಕೆಲಸ ಮಾಡಿದವರೆ ಆಗಿದ್ದಾರೆ.

ವರ್ತಮಾನದಲ್ಲಿ ದೇಸಗತಿಗಳು ತಮ್ಮ ಅಸ್ತಿತ್ವ ಕಳೆದುಕೊಂಡಿದ್ದರೂ ಶ್ರೀಮಂತ ಮತ್ತು ಪ್ರತಿಷ್ಠಿತ ಪರಂಪರೆಯ ದೃಷ್ಟಿಯಿಂದ ಎದ್ದು ಕಾಣಿಸುತ್ತಾರೆ. ಆಳಿಕೆಯ ಸಂದರ್ಭದಲ್ಲಿ ಅವರ ಅತಿಯಾದ ದುಂದುಗಾರಿಕೆ, ಕುಡಿತ, ಜೂಜು, ಪರಸ್ತ್ರೀಯರ ಸಂಗ ಮುಂತಾದವುಗಳು ದೇಸಗತಿ ಮನೆತನಕ್ಕೆ ಕಪ್ಪು ಚುಕ್ಕೆ ಇಟ್ಟದ್ದು ಈಗ ಇತಿಹಾಸ. ಈ ಎಲ್ಲ ಹವ್ಯಾಸಗಳು ಅವರ ದೊಡ್ಡಸ್ತನಕ್ಕೆ ಸಾಕ್ಷಿಯಂತಿದ್ದು ಅವು ಶ್ರೀಮಂತಿಕೆಯ ಕುರುಹು ಆಗಿದ್ದವು. ಆದರೆ ಕಾಲಾಂತರದಲ್ಲಿ ಇವೇ ಹವ್ಯಾಸಗಳು ಅವರ ಅಧಃ ಪತನಕ್ಕೆ ಕಾರಣಗಳು ಆದವು. ಅಪಾರ ಜನಪ್ರೀಯತೆಯಿಂದ ಬೀಗಿಕೊಂಡಂತಹ ದೇಸಗತಿ ಮನೆತನಗಳು

ಸಮಕಾಲೀನ ಸ್ಥಿತಿಯಲ್ಲಿ ಚಿಂತಾಜನಕವಾಗಿ ಬದುಕುತ್ತಿರುವುದು ಕಂಡುಬರುತ್ತದೆ. ಇನ್ನು ಕೆಲವು ಮನೆತನಗಳು ತಕ್ಕಮಟ್ಟಿಗೆ ಅದೇ ರೀತಿಯಲ್ಲಿ ತಮ್ಮ ಗೌರವಾನ್ವಿತ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿವೆ. ನ್ಯಾಯ ತಂಟೆ, ತಕರಾರು, ಇತರೆ ಹತ್ತಾರು ಅಂಶಗಳನ್ನು ಬಗೆಹರಿಸುವುದು ಗ್ರಾಮೀಣ ಪರಿಸರದಲ್ಲಿ ಕಂಡುಬಂದುದು ಕೂಡ ಅವರ ಉತ್ತಮ ಬಾಂಧವ್ಯಕ್ಕೆ ಮಾದರಿಯಾಗಿದೆ.

ದೇಸಗತಿ ಆಡಳಿತದ ಪರಗಣದಲ್ಲಿ ಬಹು ಸುವ್ಯವಸ್ಥಿತವಾದ ವ್ಯವಸ್ಥೆ ಕಂಡುಬರುತ್ತದೆ. ಸರಕಾರದಿಂದ ನೇಮಕವಾದ ಮಹಲದಾರ, ಕಾರಕೂನರು ದೇಸಗತಿಯ ಸಂಪೂರ್ಣ ಹೊಣೆಗಾರಿಕೆ ಹೊತ್ತಿದ್ದರು. ಅರಸನ ಜೊತೆಗೆ ವಹಿವಾಟ ಇಟ್ಟುಕೊಂಡಿದ್ದರು. ಒಪ್ಪಂದಗಳಾಗುತ್ತಿದ್ದವು. ಅದಕ್ಕೆ ಇವರು ಸಮ್ಮತಿಸಿದರೂ ದೇಸಾಯಿ ಪರವಾನಿಗೆ ಅವಶ್ಯವಾಗಿತ್ತು. ನಂತರದಲ್ಲಿ ನಾಡಕುಲಕರ್ಣಿ, ಕುಲಕರ್ಣಿ, ಸೈನಿಕ, ನಾಯಕರುಗಳಾದ ಕಿಲ್ಲೆದಾರ, ಶಿಲೇದಾರ, ಪಾಗನೀಸ, ಬಿಚ್ಚುಗತ್ತಿಯವರು, ಕಾಲ್ದಳದವರು ಹೀಗೆ ನೂರಾರು ಮನೆತನಗಳು ಇದ್ದವು. ಊರಿನ ಒಂದು ಕಡೆಗೆ ಸಾಲು ಮನೆಗಳಿಗೆ ಅದೆ ಹೆಸರಿನಿಂದ(ಕೆಲಸ ಮಾಡುವ)ಲೇ ಕರೆಯುತ್ತಾರೆ. ಅವು ವಿಶಾಲವಾಗಿದ್ದು ಹಜಾರ, ಪಡಸಾಲೆ, ಬೈಠಕ ಕೋಣೆ ಪ್ರತ್ಯೇಕವಾಗಿ ಕಂಡುಬರುತ್ತವೆ.

ಬ್ರಿಟೀಷರ ಕಾಲದಲ್ಲಿ ತಳವಾರ, ವಾಲೀಕಾರ, ಮುಖ್ತ್ಯಾರ ಮುಂತಾದ ರೀತಿಯ ಆಡಳಿತ ವ್ಯವಸ್ಥೆ ಕಂಡುಬರುತ್ತದೆ. ಆಡಳಿತ ವ್ಯವಸ್ಥೆ ವ್ಯಾಪಕವಾಗಿತ್ತಲ್ಲದೆ ಅಧಿಕಾರಿಗಳೂ ಅಷ್ಟೇ ಅಧಿಕ ಸಂಖ್ಯೆಯಲ್ಲಿದ್ದರು. ದೇಸಾಯಿ ಪರಗಣದ ಮುಖ್ಯಸ್ಥನಾಗಿದ್ದನು.

ಮೋಡಿ, ಪರ್ಶಿಯನ್ ಸನದುಗಳಲ್ಲಿ ಆಡಳಿತದ ಆಡಳಿತಗಾರರ ವಿಶೇಷ ಮಾಹಿತಿ ದೊರೆಯುತ್ತದೆ. ಕರಿಯಾತ, ಮೌಜೆ, ಸಮ್ಮತ್, ದೆಯ, ಜಹಾಗೀರ, ಸುಭೆ, ಸುಭೇದಾರ, ಮನಸಬ್, ನವಾಬ, ಕಿಲ್ಲೇದಾರ ಜಮಾದಾರ, ನಜರಾಣಿ, ಖಿರ್ದ್‌ಬತ್, ಬಿರೆದಾರಿ, ಗೌಡಕಿ, ಹೋಬಳಿ, ಕಂಪನಿ, ಸರಕಾರ, ಕಮವಿಸ್‌ದಾರ, ಕಾರಕೂನ, ದೇಶಕ್, ಇತ್ಯಾದಿ ಪದಗಳು ಅಂದಿನ ರಾಜರ ಹಾಗೂ ದೇಸಾಯರ ನಡುವೆ ಚಲಾವಣೆಯಲ್ಲಿರುವ ಪದಗಳಾಗಿವೆ.

ದೇಸಾಯರು ಮತ್ತು ಪ್ರಜಾಜನರ ನಡುವೆ ಇದ್ದಂತಹ ಅನನ್ಯತೆಯನ್ನು ಗುರ್ತಿಸಿದಾಗ ಕೆಲವು ಮಹತ್ವಪೂರ್ಣ ಅಂಶಗಳು ಕಂಡುಬರುತ್ತವೆ. ಪ್ರಭುತ್ವವನ್ನು ಒಪ್ಪಿಕೊಂಡ ಪ್ರಜಾಜನರು ಅವನ ಆಜ್ಞೆಯಂತೆ ನಡೆದುಕೊಂಡಿದ್ದು ಇದೆ. ಗೌರವ ಸೂಚಕವಾಗಿ ಹಾಕಿಕೊಂಡ ಒಂದು ಪದ್ಧತಿ ಸಂಪ್ರದಾಯವಾಗಿ ಪರಿವರ್ತನೆಯಾಗಿದ್ದು ಕಾಣುತ್ತದೆ. ಅದು ತಟಸ್ಥವಾಗದಂತೆ ಕೂಡ ಎಚ್ಚರವಹಿಸಿದ್ದು ಇದೆ. ಅಲ್ಲದೆ ಮುಂದೆ ಆಚರಣೆಗೆ ಬಂದ ಸಂಪ್ರದಾಯಗಳು ವಿಕಾರ ಸ್ವರೂಪ ಪಡೆದುಕೊಳ್ಳುವ ಮೂಲಕ ದೊರೆಯ ಉಪಭೋಗ ಪ್ರವೃತ್ತಿಯಾಗಿ ನೆಲೆನಿಂತಿತು. ಉದಾಹರಣೆಗೆ ಹೊಸದಾಗಿ ಮೊದಲಗಿತ್ತಿ ಊರಿಗೆ ಬಂದರೆ ದೇಸಾಯಿಯವರ ಮನೆಗೆ ಹೋಗಿ ದೇಸಾಯಿಗೆ(ಮುಂದೆ) ಸೆರಗು ಹಾಸುವುದು, ಆತ ಅದರ ಮೇಲೆ

ದರ್ಪದಿಂದ ಕಾಲಿಡುವ ಪದ್ಧತಿಗಳು, ಸ್ತ್ರೀಭೋಗದ, ಪ್ರಭುತ್ವ ದುರಹಂಕಾರ ಮತ್ತು ಗುಲಾಮಗಿರಿಯ ಸಂಕೇತಗಳೇ ಆಗಿವೆ. ಇದೂ ಅಲ್ಲದೆ ಋತುಮತಿಯಾದ(ಮೈನೆರೆದ) ಹೆಣ್ಣು ಮಗಳನ್ನು ದೇಸಾಯಿ ಮನೆಗೆ ಕಳಿಸುವುದು ಹೆರಿಗೆ ಸಮಯದಲ್ಲಿ ದೇಸಗತಿ ಮನೆಯಿಂದ ದೇಸಾಯರ ದೋತರದ ಚುಂಗಿನ ನೀರು, ಕಲ್ಲುಡೋಣಿ ನೀರು, ಹುಳ್ಳನ್ನುಚ್ಚು, ಕತ್ತಿ ಮೊನೆ ಅದ್ದಿದ ನೀರು, ತಂದು ಕುಡಿಸುವುದು. ಇವು ಕೂಡ ದರ್ಪದ ಸಂಕೇತಗಳಾಗಿವೆ. ಪ್ರಪಂಚ ತಿಳಿಯುವ ಮೊದಲೇ ಹುಟ್ಟುವ ಕೂಸು ದೇಸಾಯಿಯ ವಾರಸುದಾರಿಕೆಯನ್ನು ಅವನ ಅಧೀನ ಸ್ಥಿತಿಯನ್ನು ಒಪ್ಪಿಕೊಂಡೇ ಬರುವ ಸ್ಥಿತಿ ಇದಾಗಿದೆ. ಹಾಗೇ ಬೇಡ ಕುಲದ ಒಬ ವ್ಯಕ್ತಿ ಪರಂಪರಾನಿಷ್ಠೆಯಿಂದ ಒಂದು ಕುದುರೆ ಒಬ್ಬ ವ್ಯಕ್ತಿ ಈ ದೇಸಗತಿ ಉಳಿವಿಕೆಗಾಗಿ ತನ್ನ ಪ್ರಾಣವನ್ನು ಮುಡುಪಾಗಿಟ್ಟದ್ದು ವಿಶೇಷವಾಗಿ ಕಂಡುಬರುತ್ತದೆ.

ವರ್ಣವ್ಯವಸ್ಥೆಯ ವಿಕೃತ ರೂಪಗಳನ್ನು ತೀವ್ರವಾಗಿ ಅನುಭವಿಸುತ್ತಿರುವ ನಮ್ಮ ಇಂದಿನ ಸಮಾಜೋ ಧಾರ್ಮಿಕ ವಲಯದಲ್ಲಿ ದೇಸಗತಿಗಳನ್ನು ಅವಲೋಕಿಸಿದರೆ ಅವರೂ ಕೂಡ ವರ್ಣಾಶ್ರಮಗಳನ್ನು ಒಪ್ಪಿಕೊಂಡವರೆ ಆಗಿದ್ದರು. ದೇಸಗತಿಗಳು ಸುತ್ತಲೂ ಇದ್ದ ದಲಿತರು ಇತರರು ಒಂದರ್ಥದಲ್ಲಿ ದೇಸಗತಿಗಳು ಮೆರೆಯುವಿಕೆಗೆ ನೇಪಥ್ಯದ ದುಡಿಮೆಗಾರರೆ ಆಗಿದ್ದಾರೆ. ಅವರೆಂದು ದೇಸಾಯಿಗಳು ಒಪ್ಪಿದ ವರ್ಣಾಶ್ರಮದ ವ್ಯವಸ್ಥೆ ವಿರುದ್ಧ ಸಿಡಿದೆದ್ದ ಸಂದರ್ಭಗಳು ಸಿಗುವುದು ಕಡಿಮೆ. 'ಉಪ್ಪು ನೀರಿನ ನಡುವೆ ಬದುಕುವ ಮೀನಿಗೆ ನೀರಿನ ಉಪ್ಪುತನ ಅದಕ್ಕೆ ವಿಶೇಷ ಎನಿಸುವುದಿಲ್ಲ' ಹಾಗಾಗಿ ಋಣ ಬದ್ಧತೆಯು ಅವರನ್ನು ಕಟ್ಟಿ ಹಾಕಿತ್ತು. ಸಾಲ, ಸೂಲ ಮಾಡಿ ಅದನ್ನು ಮುಟ್ಟಿಸಲಾರದಷ್ಟು ಅಶಕ್ತರಾಗಿರುವುದರಿಂದ ದಿನದ ೨೪ ತಾಸು ದುಡಿದವರಾಗಿದ್ದುದು ಕುರಿತು ಇಲ್ಲಿ ಕಂಡುಬರುತ್ತದೆ. ಇದರಿಂದ ಏನೇ ಸಂಪ್ರದಾಯಗಳನ್ನು ಜಾರಿಗೆ ತಂದರೂ ಅವು ಸಹಜವಾಗಿರುವಂತೆ ಕಂಡುಬರುತ್ತವೆ. ಅದಕ್ಕೆ ಪ್ರತಿರೋದವು ಬಿಲ್‌ಕೂಲ್ ಇಲ್ಲ.

ದೇಸಾಯಿಗಳು ತಮ್ಮಷ್ಟಕ್ಕೆ ತಾವೆ ಒಂದು ಸ್ವಾಯತ್ತ ಕೇಂದ್ರಿತ ಘಟಕಗಳಾಗಿ ಉಳಿದಿದ್ದು ಕಾಣುತ್ತವೆ. ಆದರೆ ಈ ಪ್ರಭುತ್ವವೆನ್ನುವುದು ಒಂದೆಡೆ ತನಗಿಂತ ಬಲಿಷ್ಠವಾದ ಇನ್ನೊಂದು ಪ್ರಭುತ್ವ ಶಕ್ತಿಯಿಂದ ತನಗೆ ದತ್ತವಾದ ಶಕ್ತಿ ಎಂಬ ಅರಿವು ದೇಸಗತಿಗಳ ಹಿಂದೆ ಕೆಲಸ ಮಾಡುತ್ತಿತ್ತು. ಜೊತೆಗೆ ಅಸಂಖ್ಯಾತ ಅನಕ್ಷರಸ್ಥ ಜನಾಂಗಗಳ ಹೆಗಲ ಮೇಲೆಯೇ ತನ್ನ ಭಾರವನ್ನು ಇರಿಸಬೇಕಾದದ್ದು ಈ ದೇಸಗತಿಯದಾಗಿತ್ತು. ಪ್ರಭುತ್ವ ನೆಲೆಯಲ್ಲಿ ಅಸೀಮ ಕ್ರೂರರಾಗಿರುವುದು ಸಾಧ್ಯವಾಗಲಿಲ್ಲ. ಆದರೆ ಪ್ರಭುತ್ವದ ದರ್ಪ(ಅಹಂ) ಮನುಷ್ಯನಲ್ಲಿ ಸಹಜವಾಗಿ ಹುಟ್ಟುವ, ಹುಟ್ಟುಹಾಕುವ ದುಷ್ಟತನಗಳು, ವ್ಯಕ್ತಿಗತವಾಗಿ ಒಬ್ಬ ಮನುಷ್ಯನ ದೌರ್ಬಲ್ಯಗಳಾಗಿಯೇ ದೇಸಗತಿಯಲ್ಲಿ ವ್ಯಕ್ತವಾಗುತ್ತವೆ. ಇಂಥ ಅವಕಾಶದಲ್ಲಿ ಇನ್ನೊಬ್ಬರನ್ನು ಹಿಂಸಿಸುವುದಕ್ಕಿಂತ ಪ್ರಭುತ್ವದ ಮೂಲಕ ತನಗೆ ದಕ್ಕಿದ ವಿಲಾಸಿ ಬದುಕನ್ನು ಅರಾಜಕೀಯವಾಗಿ ಅನುಭವಿಸಿ ಪ್ರಭುತ್ವದ ಇನ್ನೊಂದು ಬಗೆಯ ಕ್ರೌರ್ಯಕ್ಕೆ ತಾವೇ ತುತ್ತಾದ ಸಂಕಥನಗಳು ದೇಸಗತಿಯಲ್ಲಿ

ನಿಬಿಡವಾಗಿ ತುಂಬಿದನ್ನು ಕಂಡುಕೊಳ್ಳಲಾಗಿದೆ. ದೇಸಗತಿಗಳು ಅನೇಕ ಕಾರಣಗಳಿಂದ ತಮ್ಮನ್ನು ತಾವೇ ಸುಟ್ಟುಕೊಂಡು ಏಳು ಬೀಳು ಹೊಂದಿದ್ದು, ಜನಸಾಮಾನ್ಯರಲ್ಲಿ ಜನಸಾಮಾನ್ಯರಾಗಿದ್ದುದು ಕಂಡುಬರುತ್ತದೆ. ಪ್ರಭುತ್ವವೆನ್ನುವುದು ದತ್ತವಾದಾಗ, ಅಧಿಕಾರವಾದಾಗ ಅದರ ಹಿಂಸಾತ್ಮಕ ರೂಪಗಳು ನಿಯಂತ್ರಣ ದಲ್ಲಿರುತ್ತವೆ. ದೇಸಗತಿಗಳೂ ಸಹ ಅವುಗಳ ಬಾಹ್ಯ ವೈಭವ ಎಷ್ಟೆ ಕಣ್ಣು ಕೊರೈಸುವಂತಿದ್ದರೂ ಅಂತರಂಗದಲ್ಲಿ ಅವು ಒಂದು ಬಗೆಯ ನಿಯಂತ್ರಣಕ್ಕೊಳಪಟ್ಟ ಪ್ರಭುತ್ವವನ್ನು ಆದರಿಸಿದ್ದವು ಎಂಬುದನ್ನು ಕಂಡುಕೊಳ್ಳಲಾಗಿದೆ.

ದೇಸಾಯಿ ಎಂಥ ದುಷ್ಟ ಎಂದು ಹೇಳುವುದರ ಜೊತೆಗೆ ಅವನ ಶೌರ್ಯ, ಸಾಹಸ, ಕಟ್ಟಿಸಿದ ದೇಗುಲ ಸ್ಥಾಪಿಸಿ ರಕ್ಷಿಸಿದ, ಸಾಮಾಜಿಕ ಕಳಕಳಿ, ಹಲವಾರು ಪ್ರಶಂಸೆಯ ಮಾತುಗಳು ಸಿಗುತ್ತವೆ. ಇದಕ್ಕೆ ಪ್ರತಿರೋಧವಾಗಿ ಪ್ರಭುತ್ವವನ್ನು ಧಿಕ್ಕರಿಸಿ 'ಊರ ದಾಟಿದ ಮ್ಯಾಗ ಹೊಯ್ಕೊಳ್ಳಾಕ ದೇಸಾಯಿ ಪರವಾನಿಗಿ ಯಾಕ' ಎಂದು ನುಡಿಗಟ್ಟು, ಜನಪದದಲ್ಲಿದೆ.

ದೇಸಾಯಿಯು ಸರ್ವಾಧಿಕಾರಿ ಮನೋಧರ್ಮದಿಂದ ಬೇಸತ್ತ ಜನಸಾಮಾನ್ಯರ ಮಾತು ಸಾಕಷ್ಟು ಕೇಳಿಬರುತ್ತವೆ. 'ಗೌಡರ ಕೋಣ ತಾನು ಹಾರುವುದಿಲ್ಲ, ಹಾರಾಕೂನು ಬಿಡುವುದಿಲ್ಲ'.

'ಗೌಡರ ಕೋಣ ಕೆರ್‍ಯಾಗ ಹರಗ್ಯಾಡತೈತಿ'

ದೇಸಾಯಿ ಇದ್ದ ಊರಾಗ! ನಾಯಿ ಬಾಳೆ ಮಾಡೂದಿಲ್ಲ.

'ಗೌಡರ ಸೂಳಿ ಊರಿಗೆ ನಾರಿ' ಹೀಗೆ ಸರ್ವಾಧಿಕಾರಿ ಆಡಳಿತ ಎಲ್ಲ ಜನಪದ ನುಡಿಗಟ್ಟು ಅವರ ಪದ್ಧತಿಗೆ ಹಿಡಿದ ಕನ್ನಡಿಗಳಾಗಿವೆ. ಇವೆಲ್ಲವನ್ನು ಗಮನಿಸಿದಾಗ ಎಂಥ ದೌರ್ಜನ್ಯ ದರ್ಪ ನಡೆದಿರಬೇಕೆಂದು ಅದರ ಮೂಲಕ ಮನಗಾಣಬಹುದಾಗಿದೆ.

ದಿನ ಬೆಳಗಾದರೆ ಧಣೇರು ಹೊಲ ಮನೆಗಳಲ್ಲಿ ದುಡಿದರೂ ಕೂಡ ಹೊಟ್ಟೆಗೆ ಅನ್ನ ಸಿಗದ ಹಸಿವಿನ ಸ್ಥಿತಿಯ ದಲಿತರ ಮೈ ಬೆವರು ಉಂಡು, ದಲಿತರನ್ನು ಹಸಿವಿನಿಂದ ಕೆಡಹುವ ಜಮಿನ್ದಾರಿಯ ಕ್ರೂರ ವರ್ತನೆಯು ಕಾಣಿಸುತ್ತದೆ. ಇಂಥ ಸ್ತ್ರೀಯರ ಸಂಗಡ ಸುಖಭೋಗ ಪಡೆದುದು ಇದೆ. ಮಾನವೀಯ ಉದಾರತಾ ನೆಲೆಯಲ್ಲಿ ಕೆಲವೊಮ್ಮೆ ಇಂಥ ವ್ಯಕ್ತಿಗಳಿಂದಲೆ ಕೈ ಹಿಡಿದು ನಡೆಸ ಹೊರಟಿದ್ದು, ಅವರ ಬದುಕ ಹಸನಗೊಳಿಸಿದ್ದು ಇದೆ.

ದೇಸಾಯಿಗಳ ಒಂದು ಮುಖ ಸುಕುಮಾರ ರೂಪದಲ್ಲಿ ಕಂಡರೆ ಇನ್ನೊಂದು ಮುಖ ಕ್ರೂರವಾಗಿ ಕರಾಳವಾಗಿತ್ತು. ಅಂದರೆ ಗೋಮುಖ ವ್ಯಾಘ್ರನಂತೆ. ಸಾಮಾಜಿಕ ವಲಯದಲ್ಲಿ ಕಲ್ಯಾಣ ಕಾರ್ಯಗಳನ್ನು ಮಾಡವುದು ಸುಕುಮಾರದಲ್ಲಿ ಎಂದು ಭಾವಿಸಿದರೆ ಅದರ ಹಿಂದೆ ಕೆಲಸ ಮಾಡುವ ಕ್ರಿಯಾಶಕ್ತಿ ಬೇರೆಯಾಗಿತ್ತು. ಸುಕುಮಾರ ಕೆಲಸಗಳಿಂದ ಸಮಾಜವನ್ನು ತನ್ನ ಹಕ್ಕಿನಲ್ಲಿಟ್ಟುಕೊಳ್ಳುವುದು ಒಂದಾದರೆ

ತಾನು ಮಾಡಿದ ಅಥವಾ ರೂಪಿಸಿದ ಕಾರ್ಯಕ್ಕೆ ತಲೆ ಎತ್ತದಂತೆ ನೋಡಿಕೊಳ್ಳುವುದು ಅದರ ಹಿಂದೆ ಅಡಗಿತ್ತೆಂದು ಊಹಿಸಬಹುದು. ಋಣ ಬದ್ಧತೆಯಿಂದ ತಂದೆ ಸತ್ತ ಮೇಲೆ ಮಕ್ಕಳು, ಮೊಮ್ಮಕ್ಕಳು ಸ್ತ್ರೀ ಪುರುಷರಾಧಿಯಾಗಿ ತಮ್ಮ ಜೀವವನ್ನೆ ಒತ್ತೆ ಇಟ್ಟು ದುಡಿಯುವುದು ವಂಶಪಾರಂಪರ್ಯವಾಗಿ ಕಂಡುಬರುತ್ತದೆ.

೧೯೪೭ರ ನಂತರದಲ್ಲಿ ದೇಸಗತಿಗಳ ಪೀಳಿಗೆ ಬದಲಾವಣೆಗೊಂಡಿದೆ. ಹಾಗೇ ವಿಜ್ಞಾನ, ಯಂತ್ರನಾಗರಿಕತೆ, ನಗರ ಜೀವನ, ಶೈಕ್ಷಣಿಕ ಮುಕ್ತತೆ, ಅವರಲ್ಲಿದ್ದ ನಿಷ್ಠೆಯಲ್ಲಿ ಬಿಟ್ಟ ಬಿರುಕುಗಳು ಸ್ಥಳೀಯ ರಾಜಕಾರಣಿಗಳು ಕರ್ನಾಟಕದ ಒಟ್ಟು ರಾಜಕೀಯದ ಅಸ್ಥಿರತೆ, ಮಾಧ್ಯಮಗಳು ಇತ್ಯಾದಿ ಅನೇಕ ದೈತ್ಯ ಶಕ್ತಿಗಳ ಪ್ರಭಾವದಿಂದ ದೇಸಗತಿಗಳು ಸಂಪೂರ್ಣ ವಿನಾಶದ ಅಂಚಿನಲ್ಲಿವೆ. ಒಂದರ್ಥದಲ್ಲಿ ಈ ದೇಸಗತಿಗಳ ವಾರಸುದಾರರಾಗಿ ಇಂದು ನಮ್ಮ ಕಣ್ಮುಂದೆ ಇರುವ ತರುಣ ಜನಾಂಗವನ್ನು ನೋಡಿದರೆ ಇದರ ಹಿಂದಿರುವ ದೇಸಗತಿಗಳ ಮೌಲ್ಯಪ್ರಪಂಚ ಜಾಗತೀಕರಣ, ಖಾಸಗೀಕರಣ ಮತ್ತು ವಾಣಿಜ್ಯೀಕರಣಗಳ ದೈತ್ಯ ದಬ್ಬಾಳಿಕೆಯಲ್ಲಿ ನುಚ್ಚು ನುಗ್ಗಾಗಿ ಹೋಗಿವೆ. ಒಂದರ್ಥದಲ್ಲಿ ಅನೇಕ ವರ್ಣರಂಜಿತ ಸಾಂಸ್ಕೃತಿಕ ಸಮುಚ್ಚಯಗಳು ಪಶ್ಚಿಮದ ಸಂಸರ್ಗದಿಂದ ಅನುಭವಿಸುತ್ತಿರುವ ಪರಂಗಿ ರೋಗದ ಯೌವ್ವನಮಯ ಆಕ್ರಂದನಗಳನ್ನೇ ಇಂದಿನ ದೇಸಗತಿಗಳ ಅಳಿದುಳಿದ ಅವಶೇಷಗಳ ವಾಡೇಗಳ, ಪ್ರತಿಕಲ್ಲಿನಲ್ಲೂ ಕಾಣುವುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಒಟ್ಟಾರೆಯಾಗಿ ರಾಜಪ್ರಭುತ್ವದ ಸಾಂದ್ರತೆಯಲ್ಲಿ ಕೆಳಸ್ತರದಲ್ಲಿ ಹಂಚಿಕೆಯಾದ ಆಡಳಿತವು ತೀರಾ ಉದಾಸೀನಕ್ಕೊಳಗಾದದ್ದು ಸ್ಪಷ್ಟವಾಗಿಯೇ ಗೋಚರಿಸುತ್ತದೆ. ನಮ್ಮ ಸಂಶೋಧಕರ ಅಲಕ್ಷಿತವೋ ಅಥವಾ ಈವರೆಗೆ ನಜರಿಗೆ ಬಾರದೆ ಇರುವುದೋ, ಆಳುವ ಅರಸರಿಗೆ ಔನತ್ಯದ ಕನಸು, ಇತಿಹಾಸ ನಿರ್ಮಿಸುವ ಪ್ರಭುದ್ಧ ಆಸೆ ಸಾಗರೋಪಾದಿ ಹೊಗಳಿಕೆಯಲ್ಲಿ ಅರಸರನ್ನು ತೇಲಾಡಿಸುವ, ವೈಭವೀಕರಿಸುವ ವ್ಯವಸ್ಥೆಯಲ್ಲಿ ಕೆಳಸ್ತರದ ಆಡಳಿತದ ಚಾಕಚಕ್ಯತೆ ಕಡೆಗೆ ದೃಷ್ಟಿ ಹರಿಯದೆ ಹೋದದ್ದು ಅಸಮಾಧಾನಕ್ಕೆಡೆ ಕೊಡುವ ಸಂಗತಿಯಾಗಿದೆ. ರಾಜಪ್ರಭುತ್ವದ ಕೆಳಹಂತದ ಆಡಳಿತದ ಪಾರದರ್ಶಕತೆಯನ್ನು ಕಡೆಗಣಿಸಿಕೊಂಡೆ ಬಂದಿದೆಯೆನಿಸಿದರೂ ಅದರ ಬೇರುಗಳಿಂದಲೆ ಅದು ಶ್ರೇಷ್ಠತೆಯನ್ನು ಬೀಗಿಕೊಂಡಿದೆ ಎಂಬುದನ್ನು ನಿರಾಕರಿಸಲಾಗದು.

ಆಯಾ ಭಾಗದ ಚರಿತಾರ್ಹ ಕುರುಹುಗಳಾಗಿ ಉಳಿದುಕೊಂಡು ಬಂದಿರುವ, ಉಳಿಸಿಕೊಂಡಿರುವ ಕೋಟೆಗಳು, ಕೋಟೆಗಡಗಳು, ಮಹಾದ್ವಾರಗಳು, ಅಲ್ಲಲ್ಲಿ ಉಳಿದಿರುವ ಮಂದಿರಗಳು, ಕಾಣಸಿಗುತ್ತವೆ. ಅವೆಲ್ಲವುಗಳು ತಲೆ ತಲಾಂತರದಿಂದ ಸಾಗಿಬಂದ ಕುರುಹುಗಳಾಗಿವೆ. ಅಲ್ಲದೇ ಆ ಊರಿನ ಇತಿಹಾಸವನ್ನು ತಿಳಿಸುತ್ತವೆ. ಅಲ್ಲಿನ ಜನ ಜೀವನ ಕಷ್ಟ ಸುಖದ ಪ್ರತಿರೂಪವಾಗಿರುವ ಬೇಚರಾಕ ಗ್ರಾಮವನ್ನು ಉಳಿಸಿಕೊಂಡಲ್ಲಿ, ರಕ್ಷಿಸಿದಲ್ಲಿ ಇದ್ದಷ್ಟು ಇತಿಹಾಸ ಉಳಿದು ಮುಂದಿನ ಪೀಳಿಗೆಗೆ ಸಹಾಯಕವಾಗುತ್ತದೆ.

ಸದ್ಯ ಇಂಥ ಬೇಚರಾಕ ಗ್ರಾಮಗಳನ್ನು ಕುರಿಗಾಯಿಗಳು, ದನಗಾಯಿಗಳು, ಹಾಳು ಮಾಡುತ್ತಿದ್ದಾರೆ. ಇಂಥ ಎರಡು ಮೂರು ಶತಮಾನಗಳ ಹಳೆಯದಾದ ದೇಸಗತಿ ಕೋಟೆ, ಕೋಟೆಗಡಗಳನ್ನು ರಕ್ಷಿಸಲು ಮುಂದಾಗುವುದು ಅವಶ್ಯವೆನಿಸುತ್ತದೆ.

